START

START

START

MICRO FILMED
By
KARNATAKA STATE ARCHIVES
File No.: AUM 6 APP 90.
CAMP:- DATE
MYSORE 10th July-1991

MICRO FILMED
By
KARNATAKA STATE ARCHIVES
File No.: AUM 6 APP 90.
CAMP:- DATE
MYSORE 10th July-1991

VIDYADAYINI
From 1894 to 1914

Continued from page 1 of
March 1909.

VIDYADAYINI
From 1894 to 1914

Continued from page 1 of
March 1909.

Annual Subscription Rs. 2—8—0

ಶ್ರೀ ಕರ್ಣಾಟಕ ಗ್ರಂಥಮಾಲಾ

(*A Monthly Journal.*)

ಸಂಪುಟ ೧೩.] ಮಾರ್ಚಿ—ಏಪ್ರಿಲ್—೧೯೦೯ [ಸಂಚಿಕೆ ೯, ೧೦.

ಕೊಳೆಯಿಲ್ಲದೆ ಬಿರುಸಿಲ್ಲದೆ
ಹುಳುಕಿಲ್ಲದೆ ಸೊಗಸುವದದು ಕಾಣಲುಂ ಕೇಳಲುಂ ॥
ಅಳವಾಗದೆ ರಾರಾಜಿಪ ।
ತಿಳಿವೆಂದೀಲನ್ನದೆಸಕಮೋವತಿಶಯಮೋ ॥

ವಿಷಯಸೂಚಿಕೆ.

೧	ಕೃಷ್ಣಕಾಂತನ ಉಯಿಲು	೧೯೩—೨೧೬
೨	ಸೋಮಸುಂದರ	೫೭—೭೨
೩.	ಚಂದ್ರಮತಿ	೧೩—೨೦
೪	ಪ್ರಬೋಧ ಚಂದ್ರೋದಯ ನಾಟಕಂ ...	೧—೧೨
೫	ತಾಮಸಪ್ರಭುಚರಿತಂ	೯—೧೨

PRINTED BY
J. M. MYSOREVALLA
AT THE G. T. A. PRESS, MYSORE.

1909

ಸುಲಭ!   ಅತಿಸುಲಭ!!   ಅತ್ಯಂತಸುಲಭ!!!

ಹುಳಿದಾಳಿಂಬೆಹಣ್ಣಿನ ಷರಬತ್ತು 3 oz. ಬಾಟಲಿಗೆ	0—4—0	ಸ್ಪ್ಲೀಟು ಪಿಲ್ಸ್ 1 ಟಿನ್	0—4—0
ಸೊಗದೇಬೇರಿನ ಷರಬತ್ತು	0—4—0	ತಾಂಬೂಲ ಮಾತ್ರೆ	0—4—0
ಜೆರಳೇಹಣ್ಣಿನ ಷರಬತ್ತು	0—4—0	ಟೂತ್ ಪೌಡರ್	0—2—0
ರೋಸ್ ಷರಬತ್ತು	0—4—0	ಲೆಮನೇಡ್ ಪೌಡರು	0—0—9
ಬ್ಯಾಲದಹಣ್ಣಿನ ಷರಬತ್ತು	0—4—0	ಸೋಡಾ	0—0—6
ನಿಂಬೇಹಣ್ಣಿನ ಷರಬತ್ತು	0—4—0	ಜಿಂಜರ್ ಪೌಡರು	0—0—9
ಹೇರಾಯಿಲ್	0—4—0	ಇರೇಸಿಂಗ್ ಪೌಡರು	0—1—0
ಜಲನೋವಿನ ಅಂಜನ ½ oz. ಬಾಟಲು	0—4—0	ಕಾಯಿಪುಡಿ	0—0—3
ಟೂಟು ಬ್ರಾಷ್ 1 ಬಾಟಲ್	0—4—0	ಸ್ತ್ರೀಯರಿಗಾರಿ ಮೂಲಿಂಗು 1 ಬಾ	0—4—0
		ನೆಗಡಿ ತಲೇನೋವಿಗೆ ಮಾತ್ರೆ 1 ಟಿನ್	0—4—0

ಇದಲ್ಲದೆ ಅನೇಕ ತರಹವಾದ ಅರಗು ಸೆಂಟ್ಸು ವಾಟರು ಕಲರ್ಸ್ ಇನ್ನೂ ಇತರ ಸಾಮಾನುಗಳು ಬಹಳ ಕಮ್ಮಿ ಕ್ರಯಕ್ಕೆ ದೊರೆಯುತ್ತವೆ. ಇಷ್ಟವುಳ್ಳವರು ಕಾಗದಗಳ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ದೊರೆಯುತ್ತದೆ. ವಿಳಾಸ:—

ಎಲ್. ಕೆ. ಮೂರ್ತಿ ಅಂಡ್ ಬ್ರದರ್ಸ್,

114. ಕೃಷ್ಣಮೂರ್ತಿ ಪುರಂ, ಮೈಸೂರು.

ದೇಶೀ ವನಸ್ಪತಿಯ ಪಂಬ್ಯಾಪಾಡ

೨೮ ರೋಗಗಳಿಗೆ ಒಂದೌಷಧಿ.

ಅಜೀರ್ಣ, ಆಮಶಂಕೆ, ಅತಿಸಾರ, ಜ್ವರ, ನೆಗಡಿ, ಕೆಮ್ಮು, ಕಾಲರ, ಉಳುಕು, ವಾತ, ಹಲ್ಲುಬೇನೆ, ಹೊಟ್ಟೆ ಉಬ್ಬರಿಕೆ, ಜುಲಾಬು, ಮೈನೋವು, ಬಾಲಗ್ರಹ, ಬಾಕ್ಷಯ, ಬಚ್ಚಿದಗಾಯ, ಶಸ್ತ್ರದಿಂದಾದ ಗಾಯ, ಬಿಸಿನೀರಿನಿಂದಾದ ಹೊಪ್ಪಳೆ, ತಲೇನೋವು, ಉಬ್ಬಸ, (ಚಿಕ್ಕ ಮಕ್ಕಳಿಗೆ ಥಂಡಿಯಿಂದಾಗುವ ಬೇನೆ) ಕ್ರಿಮಿವ್ಯಾಧಿ, ಹುರುಕು, ಖಜ್ಜೀ ಮೊದಲಾದ ಬೇನೆಗಳಿಗೆಲ್ಲ ಇದು ತಾತ್ಕಾಲಿಕ ಗುಣದಾಯಕವೆಂದು ಸರ್ವಾನುಮತದಿಂದ ಗೊತ್ತಾದ ಮಹೌಷಧಿಯು. ಮನುಷ್ಯ ಅಥವಾ ಇತರಪ್ರಾಣಿಗಳ ಯಾವ ಭಾಗದಲ್ಲಾದರೂ ಕಾರಣಾಂತರದಿಂದ ಗಾಯವಾಗಿ ಅದರಲ್ಲಿ ಕ್ರಿಮಿಗಳುಂಟಾದರೆ ಈ ದಿವ್ಯ ಔಷಧಿಯ ಕೆಲವು ಹನಿಗಳನ್ನು ಹಾಕಿ ಕಟ್ಟುವುದರಿಂದ ಕ್ರಿಮಿಗಳು ಸಮೂಲ ನಾಶವಾಗುವುವು. ಒಂದೇ ಕುಪ್ಪಿಯು ನೂರಾರು ಜನರ ಪ್ರಾಣರಕ್ಷಣೆಮಾಡುವ ಸಂಜೀವಿನಿಯು. ಸಂಸಾರಿಕರೆಲ್ಲರು ಅವಶ್ಯವಾಗಿ ಸಂಗ್ರಹಿಸಬೇಕಾದ ವಸ್ತು!! ೨॥ ತೊಲೆ ಕುಪ್ಪಿಗೆ ೮ ಆಣೆ. ೧। ತೊಲೆಯ ಅರ್ಧ ಕುಪ್ಪಿಗೆ ೪ ಆಣೆ. ಟಪಾಲುಖರ್ಚು ಬೇರೆ, ಅನುಪಾನಪತ್ರಿಕೆ ಕುಪ್ಪಿಯು ಸಂಗಡ. ವಿಳಾಸ:—

ಜಿ. ಎಸ್. ಕಾರೀಬಾಗಿಲ ಮತ್ತು ಕಂಪನಿ,

ಪೋಸ್ಟ್ ಹೊನ್ನಾವರ, ಜಿಲ್ಲಾ ಕಾನಡಾ.

6501

ವಿದ್ಯಾದಾಯಿನಿ

೧೨ ನೆಯ ಭಾಗ.

೧೯೧೯.

ಮೈಸೂರು.

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

1063

ವಿಷಯಗಳನ್ನು ಬರೆದವರ ಹೆಸರು.

ಮ॥ ರಾ॥ ರಾ॥ ಶ್ರೀ॥

1 ಎಡಿಟರ್.

2 ಎಸ್. ವೆಂಕೋಬರಾವ್ ಬಿ ಎ. ಯವರು.

3 ಎಂ. ವೆಂಕಟಸುಬ್ಬೈಯ್ಯ ಬಿ. ಎ. ಎಲ್. ಟಿ. ಯವರು.

4 ಆರ್. ಆಳ್ವಾರ್ ಅಯ್ಯಂಗಾರ್ ಬಿ. ಎ ಯವರು.

5 ಎಂ.ಎ. ರಾಮಾನುಜೈಯ್ಯಂಗಾರ್ ರವರು.

6 ಶ್ರೀನಿವಾಸರಾಘವಾಚಾರ್ ರವರು.

7 ಕೆ. ರಾಮಸ್ವಾಮೈಯ್ಯಂಗಾರ್ ರವರು.

8 ಬಿ. ಅನಂತಾಚಾರ್ ರವರು.

9 ವೀಣಾ. ಬಿಷ್ಟಪ್ಪನವರು.

10 ಎಂ. ಕೃಷ್ಣಪ್ಪನವರು.

11 ಬಿ. ಬ. ಶೇಷಾಚಾರ್ ರವರು.

12 ಪಿ. ವಿಶ್ವೇಶ್ವರಯ್ಯನವರು.

13 ಬಿ. ಯಸ್. ರಾಘವೇಂದ್ರರಾವ್ ರವರು.

14 ಜೆ. ಕೃಷ್ಣಶಾಸ್ತ್ರೀ ಯವರು.

15 ಎಂ. ಯಸ್. ಶ್ರೀನಿವಾಸಯ್ಯಂಗಾರ್ಯ ರವರು.

16 ಟಿ. ಶ್ರೀನಿವಾಸರಂಗಾಚಾರ್ಯ ರವರು.

17 ಎಸ್. ನರಸಿಂಹಯ್ಯನವರು.

18 ಎಂ. ಹಿರಿಯಣ್ಣಪ್ಪನವರು.

ಇವರೇ ಮೊದಲಾದವರು.

ವಿದ್ಯಾದಾಯಿನಿಯ ೧೨ ನೆಯ ಭಾಗ.

1909 ನೇ ಇಸವಿಯ ವಿಷಯಗಳು.

I. ಶಾಸ್ತ್ರೀಯ ವಿಷಯಗಳು.

1 ವಿದ್ಯುಚ್ಛಕ್ತಿ ... ... 7.
2 ಸರೋವರಗಳು ... ... 36.
3 ಲೋವರ್ ಸೆಕೆಂಡರಿಯ ಅಂಕಗಣಿತ .. 87.
4 ಸಕ್ಕರೆ ಮಾಡುವ ವಿಧಾನ.. ... 118.
5 ಕ್ಷೇತ್ರಗಣಿತ ... ... 136—281.
6 ಗಣಿತ ... 138,154,199,238,254,278.
7 ರಕ್ತಚಲನೆ ... ... 201.

II. ಕಿಂಡರ್‌ಗಾರ್ಟನ್ನಿನ ವಿಷಯಗಳು.

1 ಮರಳು ಕೆಲಸ ... ... 40.
2 ಆಕಾರ, ವರ್ಣ, ಸಂಖ್ಯೆ... ... 97.
3 ಕಿಂಡರ್‌ಗಾರ್ಟನ್ ಕೈಕೆಲಸಗಳು ... 265.

III. ಪ್ರಕೃತಿವಿಮರ್ಶೆ.

1 ಜಪಾನ್‌ದೇಶ ... ... 13.
2 ಅಳಿಲನ್ನು ಕುರಿತು ವಸ್ತುಪಾಠ ... 17.
3 ಪ್ರಕೃತಿವಿಮರ್ಶೆ ... ... 57.
4 ಕಿಂಡರ್‌ಗಾರ್ಟನ್ ಕಥೆಗಳು ... 103.
5 ಪ್ರಕೃತಿವಿಮರ್ಶೆ—ಪಾರಿವಾಳದ ಹಕ್ಕಿಯ ವಿಷಯ ... 169.
6 ಕೋತಿಯನ್ನು ಕುರಿತು ಪಾಠ ... 246.

IV. ಬಾಲಬೋಧನಾಕ್ರಮ

1 ಸಿಂಹಳದ್ವೀಪ ... ... 53.
2 ಆಲೂಗೆಡ್ಡೆ (ವಸ್ತುಪಾಠ) ... 212.
3 ಭೂಗೋಳ ಪಾಠವನ್ನು ಕಲಿಸಲಿಕ್ಕೆ ಉಪಕರಣಗಳು ... 208.
4 ಭಾಷೆಯ ಪಾಠಗಳು ... ... 218.
5 ಅಕ್ಷರಾಭ್ಯಾಸ ... ... 223.
6 ನೀತಿಕಥೆ ... ... 235.

V. ಉಪನ್ಯಾಸ.

1 ಪಾಠಶಾಲೆಯ ಆರೋಗ್ಯ ... ... 25.
2 ಕಿಂಡರ್‌ಗಾರ್ಟನ್ 49
3 ಚರಿತ್ರೆ ಮತ್ತು ಭೂಗೋಳ ... 73.
4 ಮತಬೋಧನೆ ... ... 82.
5 ಶೈಶವಕ್ಕೆ ತಕ್ಕ ಶಿಕ್ಷಕ ... ... 84.
6 ಪಾಠಶಾಲೆಯ ಪ್ರದರ್ಶನಶಾಲೆಗಳು ... 116.

ವಿಷಯಗಳನ್ನು ಬರೆದವರ ಹೆಸರು.

ರಾ|| ರಾ|| ರಾ|| ಶ್ರೀ||

1 ಎಡಿಟರ್.

2 ಎಸ್. ವೆಂಕೋಬರಾವ್ ಬಿ.ಎ. ಯವರು.

3 ಎಂ. ವೆಂಕಟಸುಬ್ಬೈಯ್ಯ ಬಿ. ಎ. ಎಲ್. ಟಿ. ಯವರು.

4 ಆರ್. ಆಳ್ವಾರ್ ಅಯ್ಯಂಗಾರ್ ಬಿ. ಎ ಯವರು.

5 ಎಂ.ಎ. ರಾಮಾನುಜೈಯ್ಯಂಗಾರ್ ರವರು.

6 ಶ್ರೀನಿವಾಸರಾಘವಾಚಾರ್ ರವರು.

7 ಕೆ. ರಾಮಸ್ವಾಮ್ಯೈಯ್ಯಂಗಾರ್ ರವರು.

8 ಬಿ. ಅನಂತಾಚಾರ್ ರವರು.

9 ವೀಣಾ. ಬಿಷ್ಟಪ್ಪನವರು.

10 ಎಂ. ಕೃಷ್ಣಪ್ಪನವರು.

11 ಬಿ. ಬ. ಶೇಷಾಚಾರ್ ರವರು.

12 ಪಿ. ವಿಶ್ವೇಶ್ವರಯ್ಯನವರು.

13 ಬಿ. ಯಸ್. ರಾಘವೇಂದ್ರರಾವ್ ರವರು.

14 ಜಿ. ಕೃಷ್ಣಶಾಸ್ತ್ರೀ ಯವರು.

15 ಎಂ. ಯಸ್. ಶ್ರೀನಿವಾಸಯ್ಯಂಗಾರ್ಯ ರವರು.

16 ಟಿ. ಶ್ರೀನಿವಾಸರಂಗಾಚಾರ್ಯ ರವರು.

17 ಎಸ್. ನರಸಿಂಹಯ್ಯನವರು.

18 ಎಂ. ಹಿರಿಯಣ್ಣಪ್ಪನವರು.

ಇವರೇ ಮೊದಲಾದವರು.

ವಿದ್ಯಾದಾಯಿನಿಯ ೧೭ ನೆಯ ಭಾಗ.

1909 ನೇ ಇಸವಿಯ ವಿಷಯುಗಳು.

I. ಶಾಸ್ತ್ರೀಯ ವಿಷಯಗಳು.

1 ವಿದ್ಯುಚ್ಛಕ್ತಿ ... ... 7.
2 ಸರೋವರಗಳು ... ... 36.
3 ಲೋವರ್ ಸೆಕೆಂಡರಿಯ ಅಂಕಗಣಿತ ... 87.
4 ಸಕ್ಕರೆ ಮಾಡುವ ವಿಧಾನ.. ... 118.
5 ಕ್ಷೇತ್ರಗಣಿತ ... ... 136—281.
6 ಗಣಿತ ... 138,154,199,238.254,278.
7 ರಕ್ತಚಲನೆ ... ... 201.

II. ಕಿಂಡರ್‌ಗಾರ್ಟೆನ್ನಿನ ವಿಷಯುಗಳು.

1 ಮರಳು ಕೆಲಸ ... ... 40.
2 ಆಕಾರ, ವರ್ಣ, ಸಂಖ್ಯೆ... ... 97.
3 ಕಿಂಡರ್‌ಗಾರ್ಟೆನ್ ಕೈಕೆಲಸಗಳು ... 265.

III. ಪ್ರಕೃತಿವಿಮರ್ಶೆ.

1 ಜವಾನ್‌ಗೇಶ ... ... 13.
2 ಅಳಿಲನ್ನು ಕುರಿತು ವಸ್ತುಪಾಠ ... 17.
3 ಪ್ರಕೃತಿವಿಮರ್ಶೆ ... ... 57.
4 ಕಿಂಡರ್‌ಗಾರ್ಟೆನ್ ಕಥೆಗಳು ... 103.
5 ಪ್ರಕೃತಿವಿಮರ್ಶೆ—ಪಾರಿವಾಳದ ಹಕ್ಕಿಯ ವಿಷಯ ... 169.
6 ಕೋತಿಯನ್ನು ಕುರಿತು ಪಾಠ ... 246.

IV. ಬಾಲಬೋಧನಾಕ್ರಮ

1 ಸಿಂಹಳದ್ವೀಪ ... ... 53.
2 ಆಲೂಗೆಡ್ಡೆ (ವಸ್ತುಪಾಠ) ... 212.
3 ಭೂಗೋಳ ಪಾಠವನ್ನು ಕಲಿಸಲಿಕ್ಕೆ ಉಪಕರಣಗಳು ... 208.
4 ಭಾಷೆಯ ಪಾಠಗಳು ... ... 218.
5 ಅಕ್ಷರಾಭ್ಯಾಸ ... ... 223.
6 ನೀತಿಕಥೆ ... ... 235.

V. ಉಪನ್ಯಾಸ.

1 ಪಾಠಶಾಲೆಯ ಆರೋಗ್ಯ ... ... 25.
2 ಕಿಂಡರ್‌ಗಾರ್ಟೆನ್ 49
3 ಚರಿತ್ರೆ ಮತ್ತು ಭೂಗೋಳ ... 73.
4 ಮತಬೋಧನೆ ... ... 82.
5 ಶೈಶವಕ್ಕೆ ತಕ್ಕ ಶಿಕ್ಷಕ ... ... 84.
6 ಪಾಠಶಾಲೆಯ ಪ್ರದರ್ಶನಶಾಲೆಗಳು ... 116.

1063

ವಿಷಯಗಳನ್ನು ಬರೆದವರ ಹೆಸರು.

ಮ॥ ರಾ॥ ರಾ॥ ಶ್ರೀ॥

1 ಎಡಿಟರ್.

2 ಎಸ್. ವೆಂಕೋಬರಾವ್ ಬಿ ಎ. ಯವರು.

3 ಎಂ. ವೆಂಕಟಸುಬ್ಬೈಯ್ಯ ಬಿ. ಎ. ಎಲ್. ಟಿ. ಯವರು.

4 ಆರ್. ಆಳ್ವಾರ್ ಅಯ್ಯಂಗಾರ್ ಬಿ. ಎ ಯವರು.

5 ಎಂ.ಎ. ರಾಮಾನುಜೈಯ್ಯಂಗಾರ್ ರವರು.

6 ಶ್ರೀನಿವಾಸರಾಘವಾಚಾರ್ ರವರು.

7 ಕೆ. ರಾಮಸ್ವಾಮ್ಯೈಯ್ಯಂಗಾರ್ ರವರು.

8 ಬಿ. ಅನಂತಾಚಾರ್ ರವರು.

9 ವೀಣಾ. ಬಿಷ್ಟಪ್ಪನವರು.

10 ಎಂ. ಕೃಷ್ಣಪ್ಪನವರು.

11 ಬಿ. ಬಿ. ಶೇಷಾಚಾರ್ ರವರು.

12 ಪಿ. ವಿಶ್ವೇಶ್ವರಯ್ಯನವರು.

13 ಬಿ. ಯಸ್. ರಾಘವೇಂದ್ರರಾವ್ ರವರು.

14 ಜಿ. ಕೃಷ್ಣಶಾಸ್ತ್ರೀ ಯವರು.

15 ಎಂ. ಯಸ್. ಶ್ರೀನಿವಾಸಯ್ಯಂಗಾರ್ಯ ರವರು.

16 ಟಿ. ಶ್ರೀನಿವಾಸರಂಗಾಚಾರ್ಯ ರವರು.

17 ಎಸ್. ನರಸಿಂಹಯ್ಯನವರು.

18 ಎಂ. ಹಿರಿಯಣ್ಣಪ್ಪನವರು.

ಇವರೇ ಮೊದಲಾದವರು.

ವಿದ್ಯಾದಾಯಿನಿಯ ೧೭ ನೆಯ ಭಾಗ.

1909 ನೇ ಇಸವಿಯ ವಿಷಯಗಳು.

I. ಶಾಸ್ತ್ರೀಯ ವಿಷಯಗಳು.

1 ವಿದ್ಯುಚ್ಛಕ್ತಿ ... ... 7.
2 ಸರೋವರಗಳು ... ... 36.
3 ಲೋವರ್ ಸೆಕೆಂಡರಿಯ ಅಂಕಗಣಿತ .. 87.
4 ಸಕ್ಕರೆ ಮಾಡುವ ವಿಧಾನ.. ... 118.
5 ಕ್ಷೇತ್ರಗಣಿತ ... ... 136—281.
6 ಗಣಿತ ... 138,154,199,238,254,278.
7 ರಕ್ತಾಚಲನೆ ... ... 201.

II. ಕಿಂಡರ್‌ಗಾರ್ಟನ್ನಿನ ವಿಷಯಗಳು.

1 ಮರಳು ಕೆಲಸ ... ... 40.
2 ಆಕಾರ, ವರ್ಣ, ಸಂಖ್ಯೆ... ... 97
3 ಕಿಂಡರ್‌ಗಾರ್ಟನ್ ಕೈಕೆಲಸಗಳು ... 265.

III. ಪ್ರಕೃತಿವಿಮರ್ಶೆ.

1 ಜಪಾನ್‌ದೇಶ ... ... 13.
2 ಅಳಿಲನ್ನು ಕುರಿತು ವಸ್ತುಪಾಠ ... 17.
3 ಪ್ರಕೃತಿವಿಮರ್ಶೆ ... ... 57.
4 ಕಿಂಡರ್‌ಗಾರ್ಟನ್ ಕಥೆಗಳು ... 103.
5 ಪ್ರಕೃತಿವಿಮರ್ಶೆ—ಪಾರಿವಾಳದ ಹಕ್ಕಿಯ ವಿಷಯ ... 169.
6 ಕೋತಿಯನ್ನು ಕುರಿತು ಪಾಠ ... 246.

IV. ಬಾಲಬೋಧನಾಕ್ರಮ

1 ಸಿಂಹಳದ್ವೀಪ ... ... 53.
2 ಆಲೂಗೆಡ್ಡೆ (ವಸ್ತುಪಾಠ) ... 212.
3 ಭೂಗೋಳ ಪಾಠವನ್ನು ಕಲಿಸಲಿಕ್ಕೆ ಉಪಕರಣಗಳು ... 208.
4 ಭಾಷೆಯ ಪಾಠಗಳು ... ... 218.
5 ಅಕ್ಷರಾಭ್ಯಾಸ ... ... 223.
6 ನೀತಿಕಥೆ ... ... 235.

V. ಉಪನ್ಯಾಸ.

1 ಪಾಠಶಾಲೆಯ ಆರೋಗ್ಯ ... ... 25.
2 ಕಿಂಡರ್‌ಗಾರ್ಟನ್ 49
3 ಚರಿತ್ರೆ ಮತ್ತು ಭೂಗೋಳ ... 73.
4 ಮತಬೋಧನೆ ... ... 82.
5 ಶೈಶವಕ್ಕೆ ತಕ್ಕ ಶಿಕ್ಷಕ ... ... 84.
6 ಪಾಠಶಾಲೆಯ ಪ್ರದರ್ಶನಶಾಲೆಗಳು ... 116.

7 ಎಲಿಮೆಂಟರಿ ಪಾಠಶಾಲೆಗಳ ಸಂವಿಧಾನ ... 121.
8 ನಾಥಮುನಿ ... ... 132,150, 184.
9 ಪಾಠಶಾಲೆಯ ಉಪಕರಣಗಳು ... 145.
10 ಮತವಿಚಾರ ಬೋಧೆಯು ಮಕ್ಕಳಿಗೆ ಮೊದಲಿಂದಲೂ ಆವಶ್ಯಕ 167,198.
11 ಮಕ್ಕಳ ವಿದ್ಯಾಭ್ಯಾಸ ... ... 193.
12 ಜಪಾನೀಯರ ವ್ಯಾಯಾಮ ವಿದ್ಯೆ ... 259—284.

VI. ಹಿತೋಪದೇಶ.

1 ಒಳ್ಳೆಯ ನಡತೆ ... ... 1—250.
2 ನಮ್ಮ ಪುಟ್ಟಪ್ರಭು ... ... 23— 95.
3 ಶಿಡಬು ... ... 89.
4 ವಿದ್ಯಾರ್ಥಿಗಳ ನಡೆನುಡಿಗಳು ... 92.
5 ಕೋಪ ... ... 249.
6 ಗುರುಭಕ್ತಿ ... ... 274.

VII. ಸರ್ಕಾರೀ ವಿಷಯಗಳು.

1 ಮೈಸೂರು ದೇಶೀಯ ಪರೀಕ್ಷೆ ... 161.
2 ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಸರ್ಕ್ಯೂಲರ್ ... 187.
3 ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಸೂಚನೆಗಳು ಸಮಾಚಾರಗಳು192.
4 ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರ್ ದಿವಾನರವರು ಮಾಡಿದ ಉಪನ್ಯಾಸ ... ... 241.

VIII. ಗ್ರಂಥವಿಮರ್ಶೆ.

1 ಗ್ರಂಥವಿಮರ್ಶೆ (ಚಂಡಕೌಶಿಕ.) ... 88.
2 ಪ್ರಬಂಧಮಂಜರಿ ... ... 191.
3 ನಮ್ಮ ಪುಸ್ತಕ ಭಾಂಡಾರವು. ... 288.

IX. ಉಪಯುಕ್ತಾಂಶಗಳು.

1 ಪ್ರೈಮರೀಗ್ರೇಡ್ ಶಿಕ್ಷಣ (ಪ್ರಶ್ನಪತ್ರಿಕೆ) ... 21.
2 ನಾರ್ಮಲ್ ಸ್ಕೂಲ್ ಪ್ರಶ್ನಪತ್ರಿಕೆ ... 139.
3 ಭೂಗೋಳ ... ... 160.

X. ಪದ್ಯಗ್ರಂಥಗಳು.

1 ವಿದ್ಯೆ ... ... 142.
2 ಸ್ತೋತ್ರಪಾಠದ ಹಾಡು ... 144.
3 ನೀತಿ ವಚನಮಾಲೆ ... ... 157,204,230,251.
4 ದೇವರ ಪ್ರಾರ್ಥನೆ ... ... 214.
5 ಬೇಸಗೆಯ ಕಾಲ ... ... 270.

XI. ವಿವಿಧವಿಷಯಗಳು.

1 ಪುಲಿಯುಕೂಟ ... ... 263.
2 ಮತ ... ... 286.

❁ ವಿದ್ಯಾದಾಯಿನಿ. ❁

(A MONTHLY JOURNAL)

ಭಾಗ ೧೨] ಜನವರಿ—೧೯೦೯. [ಸಂಚಿಕೆ ೧

ಒಳ್ಳೆಯ ಸಹತಿ.

ಸ್ವಸ್ತಿ. ಎಂದಿದ್ದರೂ ಮನುಷ್ಯನು ಮನುಷ್ಯನೇ. ಅವನು ತನಗೆ ಸಹಜವಾದ ಸ್ವಭಾವವನ್ನು ಎಂದಿಗೂ ಬಿಡಲಾರನು. ಒಂದು ಮಾವಿನ ಮರವಿದೆ, ಅದರ ಬೀಜವನ್ನು ಎಲ್ಲೆಲ್ಲಿ ನೆಟ್ಟರೂ ಅದರ ಎಲೆಯೂ ಪುಷ್ಪವೂ ಮಾದರಿಯೂ ಒಂದೇ ಆಗಿರುತ್ತದೆ. ಮೈಸೂರಿನಲ್ಲಿರುವ ಮಾವಿನ ಎಲೆಯೂ ಪುಷ್ಪವೂ ಕಾಯಿಯೂ ಚಿತ್ತೂರಿನಲ್ಲಿ ಬೆಳೆದ ಮಾವಿನ ಎಲೆಯೂ, ಪುಷ್ಪವೂ, ಕಾಯಿಯೂ ಸಹ ಒಂದೇ ಬಗೆಯಾಗಿರುತ್ತದೆ. ಬೀಜಕ್ಕೆ ಸ್ವಭಾವವು ಒಂದೇ ಆಗಿದ್ದರೂ ಅದರ ಬೆಳೆಯುವಿಕೆಗೆ ಅನುಕೂಲವಾದ ವಿರೋಧವಲ್ಲದ ಕೆಲವು ಸ್ಥಿತಿಗಳು ಬೇಕು. ಬೀಜವನ್ನು ಒಳ್ಳೆಯ ಸಾರವಾದ ಮಣ್ಣಿನಲ್ಲಿ ನೆಟ್ಟರೆ ಮೊಳಕೆ ಹುಟ್ಟಿ ಅದು ಬೆಳೆಯುತ್ತದೆ. ಅದೇ ಬೀಜವನ್ನು ಒಂದು ಕಲ್ಲಿನ ಮೇಲೆ ನೆಟ್ಟರೆ ಬೇರು ಹುಟ್ಟಿ ಮೊಳಕೆ ಬಿಡುತ್ತದೆಯೇ? ಅದೇ ಬಿತ್ತವನ್ನು ಊಷರಭೂಮಿಯಲ್ಲಿ ನೆಟ್ಟರೆ ಬೆಳೆಯುವುದನ್ನು ನೋಡಿರುತ್ತೀವೆಯೆ? ಅದೇ ಬಿತ್ತವನ್ನು ಛಳಿಸೀಮೆಯಾದ ವಿಲಾಯತಿಯಲ್ಲಿ ಒಳ್ಳೆಭೂಮಿಯಲ್ಲಿ ನೆಟ್ಟು ಅದರ ವೃದ್ಧಿಗೆ ಆಹಾರವಾದ ಗೊಬ್ಬರ ನೀರು ಕೊಟ್ಟರೂ ಇಲ್ಲವೆ ಅದೇ ಬೀಜವನ್ನು ನಮ್ಮ ದೇಶಕ್ಕೆ ಸಮವಾದ ಹವಾ ಉಳ್ಳ ಭೂಮಿಯಲ್ಲಿ ನೆಟ್ಟು ಬಿಸಿ ನೀರು ಬಿಟ್ಟರೂ ಅದು ಬೆಳೆಯುತ್ತದೆಯೆ? ಅದೇ ಬೀಜವನ್ನು ಬೆಂಕಿಯಲ್ಲಿ ಹಾಕಿದರೆ ಮೊಳಕೆ ಬಿಡುವ ಸಂಭವವುಂಟೊ? ಆ ಬೀಜವು ಒಂದುಕಡೆ ಮೊಳಕೆ ಬಿಡುವುದಕ್ಕೂ ಒಂದುಕಡೆ ಮೊಳಕೆ ಬಿಡದೆ ಬಾಗಿ ಹೋಗುವುದಕ್ಕೂ, ಒಂದುಕಡೆ

ಸುಟ್ಟುಹೋಗಿ ನಿರ್ನಾಮವಾಗುವುದಕ್ಕೂ ಕಾರಣವೇನು? ಆ ಬೀಜಕ್ಕೆ ಅನುಕೂಲ ವಾಗಿಯೂ ಅದರ ಅಭಿವೃದ್ಧಿಗೆ ಸಹಾಯಮಾಡುವುದಾಗಿಯೂ ಇರುವ ಹೊರಗಣ ಅಥವಾ ಅಂತರ ಸನ್ನಿವೇಶಗಳು ಇದ್ದರೆ ಅದು ಬೆಳೆಯುವುದು; ವಿರುದ್ಧವಾದ ಸನ್ನಿವೇಶಗಳು ಉಂಟಾದಾಗ ಅದರ ಸಹಜಸ್ವಭಾವವನ್ನು ಕಳೆದುಕೊಳ್ಳುವುದು. ಈ ನಿಯಮವು ಸಸ್ಯಾದಿಗಳಲ್ಲಿ ಮಾತ್ರವೇ ಅಲ್ಲ: ಪ್ರಾಣಿಸಾಮಾನ್ಯದಲ್ಲಿಯೂ ನಿಯತ ವಾಗಿ ಕಂಡುಬರುವುದು. ಪ್ರಾಣಿವರ್ಗಕ್ಕೆ ಸೇರಿರುವುದರಿಂದ ಮನುಷ್ಯಜಾತಿಯ ಲ್ಲಿಯೂ ಇರಬೇಕು.

ಮನುಷ್ಯನು ಒಬ್ಬನೇ ಅಭಿವೃದ್ಧಿಗೆ ಬರಲಾರನು. ಅವನು ಒಂಟಿಯಾಗಿರ ಬೇಕೆಂದು ಯತ್ನಪಟ್ಟರೂ ಅದು ಆಗದು. ಅದು ಅವನ ಸ್ವಭಾವಕ್ಕೆ ತಕ್ಕುದಲ್ಲ. ಅವನು ತನ್ನಂತಿರುವ ಪ್ರಾಣಿಗಳ ಮಧ್ಯದಲ್ಲಿಯೇ ಇರಬೇಕು. ಅವರಿಂದಲೇ ಹುಟ್ಟಬೇಕು, ಅವರ ಜೊತೆಯಲ್ಲಿಯೇ ಬೆಳೆಯಬೇಕು, ಅವರ ಮಧ್ಯದಲ್ಲಿಯೇ ಬಾಳಬೇಕು, ಪುಷ್ಪದಂತೆ ವಿಕಾಸವನ್ನೈದಬೇಕು, ಹಣ್ಣು ಬಿಡುವನಾಗಿ ಆಗಬೇಕು. ಮನುಷ್ಯನಿಂದ ಸುತ್ತಲ್ಪಟ್ಟು ಬೆರಸಲ್ಪಟ್ಟು ಇಲ್ಲದಿದ್ದರೆ ಅವನು ಹೇಗೆ ಬದುಕಿ ಬಾಳುವನು? ಹೇಗೆಹೇಗೆ ನೋಡಿದರೂ ಮನುಷ್ಯನಿಗೆ ಮನುಷ್ಯನ ಸಂಬಂಧವೇ ಬೇಕು. ಸಸ್ಯಕ್ಕೆ ಗೊಬ್ಬರ ನೀರು ಇವುಗಳಂತೆ ಇವನಿಗೆ ಆಹಾರಾದಿಗಳು; ಭೂಮಿ, ಔಷ್ಣ್ಯ ಮುಂತಾದ ಅನುಕೂಲ ಪ್ರತಿಕೂಲ ಸಾಮಗ್ರಿಗಳು ಇವನಿಗೆ ಜನಸಹವಾಸವೇ ಆಗಿರುವುದು. ಇವುಗಳಲ್ಲಿ ವಿರುದ್ಧವಾಗ ಯಾವುದು ಇದ್ದರೂ ಅನುಕೂಲವಾದ ಯಾವುದು ಇಲ್ಲದಿದ್ದರೂ ತನ್ನ ಸ್ವಭಾವವನ್ನು ಕಳೆದುಕೊಳ್ಳುವನು. ಹೀಗೆ ಮನುಷ್ಯಮನುಷ್ಯನಿಗೆ ಇರುವ ಒಂದುವಿಧವಾದ ಸಂಬಂಧವು ಒಡೆದುಹೋ ದರೆ ಮನುಷ್ಯನು ತನ್ನ ಮನುಷ್ಯತ್ವವನ್ನು ಕಳೆದುಕೊಂಡಾನು. ಮನುಷ್ಯಮನು ಷ್ಯನಿಗೆ ಇರುವ ಸಂಬಂಧವು ನಿತ್ಯವಾದುದು. ಆ ಸಂಬಂಧವು ಒಡೆದುಹೋಗುವ ಸಂದರ್ಭದಲ್ಲಿ ನೀರಿನಿಂದ ಈಚೆಗೆ ತೆಗೆದ ಮೀನಿನಂತಾಗುವನು; ಕ್ಷಣಕಾಲ ಬದುಕಿ ದರೂ ಕೂಡಲೇ ಮೃತಿಯನ್ನೈದುವನು.

ಈ ಸಂಬಂಧವನ್ನು ಕಾಪಾಡಿಕೊಳ್ಳುವುದಕ್ಕೆ ಅನುಸರಿಸಬೇಕಾದ ಕೆಲವು ನಿಯಮಗಳು ಉಂಟು. ಆ ನಿಯಮಗಳು ಕ್ರಮವಾಗಿ ಪಾಲಿಸಲ್ಪಟ್ಟರೇನೆ ಮನುಷ್ಯ ಜಾತಿಯೂ ಸಂಸಾರವೂ ಜನಾಂಗವೂ ದೇಶವೂ ರಾಷ್ಟ್ರವೂ ಚರಾಚರಗಳ ಸದ್ಭಾ ವವೂ ನಿಲ್ಲುವುವು. ಆ ನಿಯಮಕ್ಕೆ ವಿಘಾತವೇ ಬರುವುದಿಲ್ಲ. ಹಾಗೆ ಒಂದುವೇಳೆ

ಬಂದರೆ ಜಗತ್ತಿನ ಸತ್ತ್ವವೇ ನಾಶವಾಗುವುದು. ಈ ಸಂಬಂಧವು ಅಷ್ಟು ಪ್ರಬಲವಾದರೂ "ಕೊಳ್ಳಬೇಕು, ಕೊಡಬೇಕು" ಎಂಬ ಮಾತುಗಳು ಅದನ್ನು ನಿರೂಪಿಸಬಲ್ಲವು.

ಮನುಷ್ಯನಲ್ಲಿ ಎರಡು ವಿಧವಾದ ಸಹಜ ಗುಣಗಳು ಉಂಟು. ಶಾಸ್ತ್ರಕಾರರು ಅವನ್ನು ಪ್ರವೃತ್ತಿಯೆಂದೂ ನಿವೃತ್ತಿಯೆಂದೂ ಕರೆಯುವರು. ಪ್ರವೃತ್ತಿಯೆಂದರೆ ತನಗೆ ಇಷ್ಟವಾದ ವಿಷಯದಲ್ಲಿ ಅಭಿಮುಖ್ಯವುಂಟಾಗಿ ಅದರ ಕಡೆಗೆ ಹೋಗುವುದು. ನಿವೃತ್ತಿಯೆಂದರೆ ತನಗೆ ಅನಿಷ್ಟವಾದ ಎಂದರೆ ತನ್ನ ಮನಸ್ಸಿಗೆ ಒತ್ತಿಬಾರದ ವಿಷಯದಲ್ಲಿ ದ್ವೇಷವುಂಟಾಗಿ ಅದರ ಕಡೆಗೆ ಹೋಗದೆ ಹಿಂಜರಿಯುವುದು. ಇವು ಇಷ್ಟಾನಿಷ್ಟಗಳನ್ನೇ ಆಶ್ರಯಿಸಿರುವುವು. ಪ್ರವೃತ್ತಿಗೆ ತನ್ನ ಇಷ್ಟವೇ ಪ್ರಥಮಕಾರಣವು; ನಿವೃತ್ತಿಗೆ ದ್ವೇಷವೇ ಕಾರಣವು ಇಷ್ಟಾನಿಷ್ಟಗಳಿಗೆ ಕಾರಣವು ವಸ್ತುಗಳಲ್ಲಿ ಇರುವ ಸಹಜಗುಣವೇ ಆಗಿದೆ. ತನ್ನಲ್ಲಿರುವ ನೈಜಗುಣಕ್ಕೂ ಇತರಕಡೆ ಇರುವ ಗುಣಕ್ಕೂ ಯಾವುದೋ ಒಂದು ಅನುಕೂಲ್ಯವು ಇದ್ದಲ್ಲಿ ಪ್ರವೃತ್ತಿಯುಂಟಾಗುವುದು. ತನ್ನಲ್ಲಿರುವ ಗುಣಕ್ಕೂ ಇತರಕಡೆ ಇರುವ ಗುಣಕ್ಕೂ ಯಾವುದಾದರೂ ಒಂದು ವಿಧವಾದ ಶತ್ರುಗುಣವು ಇದ್ದರೆ ಅಲ್ಲಿ ನಿವೃತ್ತಿಯು ಸಿದ್ಧವಾಗಿ ಉಂಟಾಗುವುದು. ಎಂದರೆ ಅನುಕೂಲವಾಗಿರುವುದು ವಿರೋಧವಾಗಿರುವದು ಎಂಬ ಇವೆರಡೇ ಚರಾಚರಾತ್ಮಕವಾದ ಪ್ರಪಂಚದ ಸ್ಥಿತಿಗೆ ಮುಖ್ಯವಾದ ನಿಯಮವು. ಈ ನಿಯಮವು ನಡೆಯುತ್ತಿದ್ದರೆ ಎಲ್ಲವೂ ನೀರಕ್ಷೀರಗಳಂತೆ ಪರಿಪುಷ್ಟಗಳಾಗಿ ವೃದ್ಧಿಯನ್ನೈದುತ್ತಬರುವುವು. ಈ ನಿಯಮಕ್ಕೆ ಭಂಗವುಂಟಾದರೆ ಬೆಂಕಿನೀರುಗಳಂತೆ ಎಣ್ಣೆಸೀಗೆಕಾಯಿಗಳಂತೆ ಎಲ್ಲವೂ ನಾಶವಾಗುವುವು. ಈ ನಿಯಮವೇ ಕೊಳ್ಳಬೇಕು ಕೊಡಬೇಕು ಎಂಬುವು.

ಈ ನಿಯಮದ ಸ್ವರೂಪವನ್ನು ಇನ್ನೂ ಸ್ವಲ್ಪ ವಿಚಾರಿಸಿ ನೋಡೋಣ. ಒಂದು ಬೀಜವಿದೆ. ಅದನ್ನು ಒಂದುಕಡೆ ನೆಡುತ್ತೇವೆ. ಅದು ಬೆಳೆಯದೆ ಒಣಗಿಹೋಯಿತೆಂದು ಇಟ್ಟುಕೊಳ್ಳೋಣ. ಹಾಗೆ ಒಣಗಿಹೋಗುವುದಕ್ಕೆ ಕಾರಣವೇನು? ಎಂದು ಕೇಳಿದರೆ ಆ ನೆಲವು ಅದಕ್ಕೆ ಸರಿಯಾದ ನೆಲವಲ್ಲವೆಂದು ಹೇಳುತ್ತೇವೆ. ಹಾಗೆಂದರೆ ಆ ನೆಲದಲ್ಲಿ ಇದರ ಬೆಳೆಯುವಿಕೆಗೆ ತಡೆಯಾದ ಗುಣಗಳಿರಬೇಕು. ಬೀಜವು ಹಿಗ್ಗಿ ಈಚೆಗೆ ಕಾಣಿಸಿಕೊಳ್ಳಬೇಕೆಂಬ ಅದರ ಇಷ್ಟಕ್ಕೆ ವಿರೋಧವಾದ ನಿವೃತ್ತಿರೂಪವಾದ ಗುಣವು ನೆಲದಲ್ಲಿರಬೇಕು. ಸೊಗಸಾದ ಒಂದು ಗಿಡದಲ್ಲಿ ಪುಷ್ಟವಾಸನ ಗುಲಾಬಿಹೂವನ್ನು ಕಾಣುತ್ತೇವೆ. ಆಗ ನಮಗೇನು ತೋರು

ಯೂ ಪ್ರತಿಕೂಲವಾಗಿರುವ ಕಡೆ ನಿವೃತ್ತಿಯೂ ಪ್ರಪಂಚದ ಸ್ಥಿತಿಸತ್ತೆಗೆ ಕಾರಣವೆಂದು ತಿಳಿದುಬರುತ್ತದೆ. ಈ ನಿಯಮವು ಸರ್ವತ್ರ ಕಾಣುತ್ತಿರುವುದು.

ಈ ನಿಯಮವು ಪ್ರತಿಯೊಂದುಕಡೆಯಲ್ಲೂ ಸ್ವಪ್ರಯೋಜನಕ್ಕಾಗಿಯೇ ಉಂಟಾಯಿತೆಂಬ ಭ್ರಮೆಯು ಹುಟ್ಟಬಹುದು. ಜಾಡರಹುಳವು ಗೂಡುಕಟ್ಟಿದ್ದು ತನ್ನ ಆಹಾರಕ್ಕಾಗಿಯೇ ಅಲ್ಲವೆ? ಗುಲಾಬೀಹೂವನ್ನು ಮನುಷ್ಯನು ಚೆನ್ನಾಗಿ ಬೆಳೆಸಿದ್ದು ಅವನ ಸ್ವಪ್ರಯೋಜನಕ್ಕಲ್ಲವೆ? ಎಂದು ತೋರಬಹುದು. ಆದರೂ ಎಲ್ಲಾಕಡೆಯಲ್ಲಿಯೂ ಸ್ವಪ್ರಯೋಜನಕ್ಕೋಸ್ಕರವೇ ಎಂದು ಹೇಳುವದಕ್ಕಾಗುವುದಿಲ್ಲ. ದಾಳಿಂಬೇ ಗಿಡದಲ್ಲಿ ಹಣ್ಣು ಬಿಡುತ್ತದೆ. ಆಗಿಡವು ಭೂಮಿಯಲ್ಲಿರುವ ತನಗೆ ಬೇಕಾದ ಸಾರವನ್ನು ಹೀರಿ ಎಲೆ ಹೂವುಗಳನ್ನು ಬಿಟ್ಟು ಕಾಯನ್ನು ಬಿಡುತ್ತದೆ. ಕಾಯಿ ಬೆಳೆದು ಹಣ್ಣಾಗುತ್ತದೆ. ಹೇಗೆ ಹಣ್ಣಾಗುತ್ತದೆ? ಹೂವು ಮೊದಲು ಸಣ್ಣಗಿತ್ತು, ಅದು ದಪ್ಪನಾಗುವುದಕ್ಕೆ ತನ್ನ ಕೊಂಬೆಯಲ್ಲಿರುವ ನಾಳದ ಮೂಲಕ ರಸವನ್ನು ಹೂವಿನೊಳಕ್ಕೆ ತಳ್ಳುತ್ತಾಬಂದಿತು. ಅದರಿಂದ ಕ್ರಮೇಣ ಹೂವು ಕಾಯಾಯಿತು. ಕ್ರಮೇಣ ಅದು ದಪ್ಪನಾಯಿತು: ಬಲಿಯಿತು; ಪಕ್ವವಾಯಿತು. ಆಮೇಲೆ ಏನು ಆಯಿತು? ಆ ಹಣ್ಣನ್ನು ಅದು ತಿಂದಿತೆ? ನಾವು ಆಫಲವನ್ನು ತಿನ್ನುತ್ತೇವೆ. ಆದಾಳಿಂಬೀಗಿಡದ ಶ್ರಮವು ಸ್ವಾರ್ಥವಾಯಿತೋ ಪರಾರ್ಥವಾಯಿತೊ? ಹುಲ್ಲು ನೆಲದಲ್ಲಿ ಬೆಳೆಯುತ್ತದೆ; ನೆಲದ ಸಾರವೆಲ್ಲಾ ಕಾಳಾಗುತ್ತದೆ. ಈ ಕಾಳನ್ನು ಮಾಡಿದ್ದು ಯಾವುದು? ಹುಲ್ಲೇ ಅಲ್ಲವೆ. ಹುಲ್ಲು ನೆಲದ ಸಾರವನನ್ನು ಎಳೆದು ತನ್ನಲ್ಲಿ ನಿಲ್ಲಿಸದಿದ್ದರೆ ಕಾಳು ಹೇಗೆ ಹುಟ್ಟುತ್ತಿತ್ತು? ಆ ಹುಲ್ಲಿಗೆ ಆ ಸಾಮರ್ಥ್ಯವು ಸಹಜವು. ಅದು ಆ ಕಾಳಿನ ಅಭಿವೃದ್ಧಿಗೆ ಅನುಕೂಲಪ್ರವೃತ್ತಿಯು, ಹುಲ್ಲಿಗೆ ಸ್ವಾರ್ಥವಾದ ಪ್ರವೃತ್ತಿಯಲ್ಲ. ಕಾಳಿಗೂ ತಾನು ಬೆಳೆದು ಪಕ್ವವಾಗಬೇಕೆಂಬ ಪ್ರವೃತ್ತಿಯು ಸ್ವಾರ್ಥವಲ್ಲ; ಕಾಳನ್ನು ಪ್ರಾಣಿಗಳು ತಿಂದು ಜೀವಿಸುತ್ತವೆ.

ಹೀಗಿರುವುದರಿಂದ ಅನುಕೂಲಪ್ರವೃತ್ತಿಯೂ ಪ್ರತಿಕೂಲನಿವೃತ್ತಿಯೂ ಸ್ವಾರ್ಥಕ್ಕೇ ಎಂದು ಹೇಳಲಾಗುವುದಿಲ್ಲ; ಪರಾರ್ಥಕ್ಕೇ ಎಂದೂ ಹೇಳಲಾಗವುದಿಲ್ಲ. ಕೆಲವುವೇಳೆ ಸ್ವಾರ್ಥಪರಾರ್ಥಗಳೆರಡಕ್ಕೂ ಆಗುವುವು. ತಂದೆತಾಯಿಗಳು ಮಕ್ಕಳನ್ನು ಮುಂದಕ್ಕೆ ತರುವುದು ಸ್ವಾರ್ಥ ಪರಾರ್ಥಗಳೆರಡಕ್ಕೂ ಆಗಿದೆಯೆಂದು ತಿಳಿದು ಬರುವುದು. ಈ ರೀತಿಯಾಗಿ ಸರ್ವಸಾಮಾನ್ಯವಾದ ಎಂದಿಗೂ ತಡೆಬಾರದ ಒಂದು ವಿಧವಾದ ನಿಯಮವು ಎಲ್ಲಾಕಡೆಗಳಲ್ಲಿಯೂ ಮೆರೆಯುತ್ತಿರುವುದು. ಆದರಿಂದಲೇ ಜಗತ್ತು ನಿಂತಿರುವುದು. (ಸಶೇಷ)

M. A. R.

ವಿದ್ಯುಚ್ಛಕ್ತಿ.

ನಮ್ಮದೇಶದ ಅಭಿವೃದ್ಧಿಯಲ್ಲಿ ವಿದ್ಯುಚ್ಛಕ್ತಿಯು ಬಹು ಮುಖ್ಯವಾದ ಭಾಗ ವನ್ನು ವಹಿಸಿರುವುದರಿಂದ ಇದು ನಮಗೆ ಮಾಡುತಲಿರುವ ಉಪಕಾರವೇನು ? ಈ ಉಪಕಾರವನ್ನು ಹೇಗೆ ಮಾಡುತಲಿರುವುದು? ಎಂಬ ಅಂಶಗಳನ್ನು ತಿಳಿಯುವುದು ಅವಶ್ಯಕವಲ್ಲವೇ. ಇದೇ ವಿಷಯದಲ್ಲಿ ಕಳೆದ ನವರಾತ್ರಿಯ ಮಹೋತ್ಸವಕ್ಕೆ ಸಂಬಂಧಪಟ್ಟ ವಿದ್ಯಾಭ್ಯಾಸವಿಷಯಕವಾದ ವಸ್ತುಪ್ರದರ್ಶನಕಾಲದಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜ್ ಅಸಿಸ್ಟೆಂಟ್ ಮಾಸ್ಟರಾದ ಮ॥ ರಾ॥ ವಿಜಯರಾಘವಾ ಚಾರ್ಯರವರು ಒಂದು ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸವು ಬಹು ಶ್ಲಾಘ್ಯವಾಗಿದ್ದಿತು. ಈ ಸಂಚಿಕೆಯಲ್ಲಿ ನಾವು ನಮಗೆ ಪ್ರತಿನಿತ್ಯವೂ ಸಹಾಯ ಮಾಡುತ್ತಿರುವ ವಿದ್ಯುಚ್ಛಕ್ತಿಯು ತನ್ನ ಕೆಲಸಗಳನ್ನು ಹೇಗೆ ನಿರ್ವಹಿಸುವುದು ಎಂಬ ಅಂಶವನ್ನು ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ವಿವರಿಸಲು ಯತ್ನಪಡು ವೆವು.

ನಮ್ಮದೇಶದಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿಗೆ ಶಿವನಸಮುದ್ರದಲ್ಲಿ ರುವ ಕಾವೇರಿಯ ಜಲಪಾತವೇ ಕಾರಣವೆಂದು ಎಲ್ಲರಿಗೂ ತಿಳಿದೇ ಇರುವುದಷ್ಟೆ. ಈ ಜಲಪಾತದಿಂದ ವಿದ್ಯುಚ್ಛಕ್ತಿಯು ಹೇಗೆ ಉತ್ಪತ್ತಿಯಾಗುವುದು ಎಂಬುದನು ಸ್ವಲ್ಪಮಟ್ಟಿಗೆ ತಿಳಿಯುವುದು ಅವಶ್ಯಕವು. ಕಾವೇರೀನದಿಯಿಂದ ಶಿವನಸಮುದ್ರದ ಬಳಿಯಲ್ಲಿ ಗಂಗನಚುಕ್ಕಿ ಬರಚುಕ್ಕಿಗಳೆಂಬ ಎರಡು ಜಲಪಾತಗಳು ಉಂಟಾಗಿರು ವುವಷ್ಟೆ. ಈ ಜಲಪಾತಗಳಿರುವ ಸ್ಥಳಗಳಲ್ಲಿ ಸರ್ಕಾರದವರು ಯಂತ್ರಗಳನ್ನಿಟ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತಿಲ್ಲ. ಈ ಕೆಲಸಕ್ಕಾಗಿ ಅವರು ಬೇರೇ ಸ್ಥಳವನ್ನು ಏರ್ಪಡಿಸಿಕೊಂಡಿರುವರು. ಶಿವನಸಮುದ್ರದಲ್ಲಿ ಕಾವೇರೀ ನದಿಗೆ ಒಂದು ವಿಚಿತ್ರವಾದ ಸೇತುವೆಯನ್ನು ಕಟ್ಟಿರುವರು. ಈ ಸೇತುವೆಯು ಡೊಂಕು ಡೊಂಕಾಗಿ ಹಾವಿನಂತೆ ಪ್ರಸರಿಸಿಕೊಂಡಿರವುದು. ಈ ಸೇತುವೆಯ ಕೆಳಭಾಗದಲ್ಲಿ ಕಾವೇರೀ ನದಿಗೆ ಒಂದು ಅಣೆಕಟ್ಟೆಯನ್ನು ಕಟ್ಟಿರುವರು. ಈ ಕಟ್ಟೆಯಬಳಿಯಲ್ಲಿ ನಾಲ್ಕಡಿ ನೀರು ನಿಲ್ಲುವುದು. ನದಿಯಲ್ಲಿ ಇದಕ್ಕಿಂತಲೂ ಹೆಚ್ಚು ನೀರು ಇದ್ದರೆ ಆ ನೀರು ಅಣೆಕಟ್ಟೆಯಮೇಲೆ ಹರಿದು ಮೇಲೆಹೇಳಿದ ಸ್ವಾಭಾವಿಕವಾದ ಜಲಪಾತ ಗಳಿಗೆ ಹೋಗುವದು. ನಾಲ್ಕಡಿ ಪ್ರಮಾಣಕ್ಕಿರುವ ನೀರೆಲ್ಲಾ ಒಂದು ಕಾಲುವೆಯು

ಮಾರ್ಗವಾಗಿ ಸರ್ಕಾರದವರು ಏರ್ಪಡಿಸಿರುವ ಬ್ಲಫ್ ಎಂಬಸ್ಥಳಕ್ಕೆ ಬರುವುದು. ಈ ಕಾಲುವೆಯಲ್ಲಿ ಬರುವ ನೀರನ್ನು ಬೇಕಾದಾಗ ಕಾವೇರಿಗೆ ಬಿಟ್ಟುಬಿಡುವಂತೆ ಒಂದು ಬಿಡುಗಂಡಿಯು ಇರುವುದು. ಬ್ಲಫ್ ನ ಬಳಿಗೆ ಬಂದ ಜಲವು ಒಂದು ಕೊಳದಲ್ಲಿ ನಿಲ್ಲುವುದು. ಆ ಕೊಳದಿಂದ ಅನೇಕವಾದ ಕಬ್ಬಿಣದ ಕೊಳವೆಗಳು ಹೊರಟಿರುವುವು. ಈ ಕೊಳವೆಗಳೊಳಕ್ಕೆ ನೀರನ್ನು ನಮಗೆ ಬೇಕಾದಾಗ ಬಿಡಬಹುದು. ಇವುಗಳಮಾರ್ಗವಾಗಿ ನೀರು ನಾನೂರು ಮೂವತ್ತು ಅಡಿ ಕೆಳಕ್ಕೆ ಬಹು ರಭಸದಿಂದ ಇಳಿಯುವುದು. ಅಲ್ಲಿ ಈ ನೀರು ಒಂದು ವಿಜಾತೀಯವಾದ ಚಕ್ರದಮೇಲೆ ಬೀಳುವುದು. ಈ ಚಕ್ರಕ್ಕೆ ಟರ್ಬೈನ್ ಎಂದು ಹೆಸರು. ಇದು ನೀರಿನ ವೇಗದಿಂದ ತಿರುಗುವ ಚಕ್ರವು. ಹೀಗೆ ತಿರುಗುವುದಕ್ಕಾಗಿ ಈ ಚಕ್ರದ ಸುತ್ತಲೂ ಒಂದುವಿಧವಾದ ಬಟ್ಟಲುಗಳು ಇರುವುವು. ಒಂದು ಬಟ್ಟಲಿನಮೇಲೆ ನೀರು ಬಿದ್ದಾಗ ಅದು ಭಾರವಾಗಿ ಕೆಳಕ್ಕೆ ಹೋಗುವುದು. ಆ ಬಟ್ಟಲಿದ್ದ ಸ್ಥಳಕ್ಕೆ ಮತ್ತೊಂದು ಬಟ್ಟಲು ಬರುವುದು. ಅದರಲ್ಲಿ ನೀರು ತುಂಬಿದಮೇಲೆ ಅದು ಕೆಳಕ್ಕೆ ಹೋಗಿ ಇನ್ನೊಂದು ಆಸ್ಥಾನಕ್ಕೆ ಬರುವುದು. ಹೀಗೆ ಬೇರೆಬೇರೆ ಬಟ್ಟಲುಗಳು ನೀರುಬೀಳುವ ಸ್ಥಳಕ್ಕೆ ಬರುತ್ತಿರುವುದರಿಂದಚಕ್ರವು ತಿರುಗುವುದು.

ಮೇಲೆಹೇಳಿದ ಚಕ್ರವು ತಿರುಗುವುದರಿಂದ ವಿದ್ಯುಚ್ಛಕ್ತಿಯು ಹೇಗೆ ಉಂಟಾಗುವುದೆಂದು ಯೋಚಿಸಬಹುದಲ್ಲವೆ. ಈ ಅಂಶವನ್ನು ಸ್ವಲ್ಪಮಟ್ಟಿಗೆ ವಿವರಿಸುವುದು ಅವಶ್ಯಕವಾಗಿರುವುದು. ನಮ್ಮ ಅಂಗಡಿಗಳಲ್ಲಿ ಮಾರುವ ಕುದುರೆಯ ಲಾಳದ ಆಕಾರಕ್ಕಿರುವ ಉತ್ತರಮುಖಿಯನ್ನು ಎಲ್ಲರೂ ನೋಡಿರುವರಷ್ಟೆ. ಈ ಉತ್ತರಮುಖಿಯು ಕಬ್ಬಿಣದ ಮೊಳೆ ಬೀಗದಕೈ ಮೊದಲಾದ ವಸ್ತುಗಳನ್ನು ಆಕರ್ಷಿಸುವುದು ನಮ್ಮೆಲ್ಲರಿಗೂ ಬಳಕೆಯಾದ ಅಂಶವು. ಇಂತಹ ಉತ್ತರಮುಖಿಯನ್ನು ಅದರ ತುದಿಗಳು ಕೆಳಕ್ಕಿರುವಂತೆ ನೇತುಹಾಗಿ ಅದರ ಎರಡು ತುದಿಗಳ ಮಧ್ಯದಲ್ಲಿ ಒಂದು ತಾಮ್ರದತಂತಿಯ ಚಕ್ರವನ್ನು ಬಹು ವೇಗದಿಂದ ತಿರುಗಿಸಿದರೆ ಈ ತಂತಿಯ ಚಕ್ರದಲ್ಲಿ ಆ ಉತ್ತರಮುಖಿಯಲ್ಲಿರುವ ಶಕ್ತಿಯ ಸಹಾಯದಿಂದ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದು. ಇಲ್ಲಿ ಶಕ್ತಿಯ ಸೃಷ್ಟಿಯೇನೂ ಇಲ್ಲ. ನಾವು ತಂತಿಯ ಚಕ್ರವನ್ನು ತಿರುಗಿಸಲು ಉಪಯೋಗಿಸಿದ ಶಕ್ತಿಯೇ ವಿದ್ಯುಚ್ಛಕ್ತಿಯಾಗಿ ಪರಿಣಮಿಸುವುದು. ಶಿವನಸಮುದ್ರದಲ್ಲಿ ಕೆಳಗಡೆಯಲ್ಲಿರುವ ಪವರ್ ಹೌಸ್ ಎಂಬ ಮನೆಯಲ್ಲಿ ಬಹು ದೊಡ್ಡದೊಡ್ಡ ಉತ್ತರಮುಖಿಗಳ ತುದಿಗಳ ಮಧ್ಯದಲ್ಲಿ ತಾಮ್ರದ

ತಂತಿಯಿಂದ ಮಾಡಲ್ಪಟ್ಟಿರುವ ಚಕ್ರಗಳು ಬಹು ವೇಗದಿಂದ ತಿರುಗುತ್ತಿರುವುವು. ನೀರಿನ ಶಕ್ತಿಯಿಂದ ತಿರುಗುತ್ತಿರುವ ಟರ್ಬೈನ್ ಚಕ್ರಗಳೇ ಈ ತಂತಿಯ ಚಕ್ರಗಳನ್ನು ತಿರುಗಿಸುತ್ತಿರುವುವು. ಈ ತಂತಿಯ ಚಕ್ರಗಳು ಉತ್ತರಮುಖಿಯ ತುದಿಗಳ ಮಧ್ಯದಲ್ಲಿ ತಿರುಗುವುದರಿಂದ ಜಲಪಾತದ ಶಕ್ತಿಯು ವಿದ್ಯುಚ್ಛಕ್ತಿ ಯೆಂಬ ರೂಪಾಂತರವನ್ನೈದುತ್ತಿರುವುದು. ಹೀಗೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುತ್ತಿರುವ ಉತ್ತರಮುಖಿ, ತಂತಿಯ ಚಕ್ರ, ಇವುಗಳ ಸಮುದಾಯವನ್ನು ವಿದ್ಯುದುತ್ಪಾದಕ ಯಂತ್ರಗಳೆಂದು (ಜನರೇಟರ್) ಕರೆಯಬಹುದು. ಇಂತಹ ಅನೇಕ ಯಂತ್ರಗಳು ಬ್ಲಫ್‌ನ ಕೆಳಭಾಗದಲ್ಲಿ ಕಟ್ಟಿರುವ “ ಪವರ್‌ಹೌಸ್ ” ಎಂಬ ಮನೆಯಲ್ಲಿರುವುವು.

ಈ ಯಂತ್ರಗಳಿಂದ ಹೊರಡುವ ವಿದ್ಯುಚ್ಛಕ್ತಿಯು ದಪ್ಪ ತಾಮ್ರದತಂತಿಗಳ ಮಾರ್ಗವಾಗಿ ಬ್ಲಫ ನ ಮೇಲ್ಭಾಗದಲ್ಲಿ ಕಟ್ಟಿರುವ ಮತ್ತೊಂದು ಮನೆಗೆ ಬರುವುದು. ಈ ಮನೆಯಲ್ಲಿ ನಡೆಯುವ ಕೆಲಸವನ್ನು ತಿಳಿಸಲು ಒಂದು ಸನ್ನಿದರ್ಶನವನ್ನು ಕೊಡುವೆವು ಒಂದು ದೊಡ್ಡದಾದ ನದಿಯು ಒಂದು ಮೈದಾನದಲ್ಲಿ ಹರಿಯುತ್ತಿದೆ, ಎಂದು ಭಾವಿಸೋಣ ಈ ನದಿಯಲ್ಲಿ ವಿಶೇಷನೀರು ಇರುವುದರಿಂದ ಇದಕ್ಕೆ ಬಲು ದೊಡ್ಡಪಾತ್ರವು ಬೇಕಾಗುವುದು. ಇದು ನಿಧಾನವಾಗಿ ಮೈದಾನದಲ್ಲಿ ಹರಿಯುತ್ತಿರುವಾಗ ಅಲ್ಲಲ್ಲಿ ಸಿಕ್ಕುವ ಅಡ್ಡಿಗಳನ್ನು ತಳ್ಳಿಕೊಂಡುಹೋಗುವುದಕ್ಕೆ ಇದಕ್ಕೆ ಶಕ್ತಿ ಇರುವುದಿಲ್ಲ. ಈ ಅಡ್ಡಿಗಳನ್ನು ಬಳಸಿಕೊಂಡುಹೋಗುವುದು. ಹೀಗೆ ನೀರು ನಿಧಾನವಾಗಿ ಹರಿಯುವಾಗ ಅದರ ಹೆಚ್ಚಾದಭಾಗವು ನೆಲದೊಳಕ್ಕೆ ಇಂಗಿ ಹೋಗುವುದು. ಇದೇನೀರಿನ ಹತ್ತುಭಾಗದಲ್ಲಿ ಒಂದು ಭಾಗ ನೀರು ಒಂದು ಎತ್ತರವಾದ ಪರ್ವತದ ಮೇಲಿರುವುದೆಂದು ಭಾವಿಸೋಣ. ಈ ನೀರು ಪರ್ವತದಿಂದ ಕೆಳಕ್ಕೆ ಇಳಿಯುವಾಗ ಮೈದಾನದಲ್ಲಿ ಹರಿಯುತ್ತಿದ್ದ ನದಿಗೆ ಬೇಕಾದಷ್ಟು ವಿಸ್ತಾರವಾದ ಪಾತ್ರವು ಇದಕ್ಕೆ ಬೇಕಿಲ್ಲ. ಇದು ಬಲುವೇಗದಿಂದ ಕೆಳಕ್ಕಿಳಿಯುವಾಗ ತನ್ನೆದುರಿಗೆ ಸಿಕ್ಕುವ ಅಡ್ಡಿಗಳನ್ನೆಲ್ಲಾ ಕೊಚ್ಚಿಕೊಂಡುಬರುವುದು. ಇಂತಹ ನೀರಿನಿಂದ ವಿಶೇಷವಾದ ಕೆಲಸವೂ ನಡೆಯುವುದು. ಮತ್ತು ನೀರು ಕೆಳಗೆ ಇಳಿಯುವಾಗ ನೆಲದೊಳಕ್ಕೆ ವಿಶೇಷವಾಗಿ ಇಂಗುವುದೂ ಇಲ್ಲ. ಬ್ಲಫ್‌ನ ಮೇಲ್ಭಾಗದಲ್ಲಿ ಕಟ್ಟಿರುವ ಮನೆಯಲ್ಲಿ ಕೆಳಗಿನಿಂದ ಬರುವ ವಿದ್ಯುಚ್ಛಕ್ತಿಯು ಪರ್ವತದ ಮೇಲಿರುವ ನೀರನ್ನು ಹೋಲುವಂತೆ ರೂಪಾಂತರವನ್ನೈದುವುದು. ಅಂದರೆ ಆ ಮನೆಯಲ್ಲಿ ಶಕ್ತಿಯವೇಗವು ಬಹು ಹೆಚ್ಚಾಗುವುದು. ಪ್ರಮಾಣವು ಕಡಮೆಯಾಗುವುದು. ಇದು ಮುಂದೆ ಹೋಗುವುದಕ್ಕೆ ಅಷ್ಟು ದಪ್ಪನಾದ ತಾಮ್ರದತಂತಿಯು ಬೇಕಿಲ್ಲ. ಈ ರೂಪದಲ್ಲಿ

ರುವ ಶಕ್ತಿಯು ತಂತಿಯಮೇಲೆ ಹೋಗುವಾಗ ಗಾಳಿಯಲ್ಲಿ ವಿಶೇಷವಾಗಿ ಇಂಗಿ ಹೋಗುವುದೂ ಇಲ್ಲ. ಮೇಲೆ ಕಟ್ಟಿರುವ ಮನೆಯಲ್ಲಿ ಕೆಳಗಿನಿಂದ ಬರುವ ವಿದ್ಯುಚ್ಛಕ್ತಿಯ ವಿಷಯದಲ್ಲಿ ಈವಿಧವಾದ ವ್ಯತ್ಯಾಸಗಳುಂಟಾಗುವುವು. ಈ ಮನೆಗೆ "ಟ್ರಾನ್ಸ್‌ಫಾರ್ಮರ್‌ಹೌಸ್" ಅಥವ ರೂಪಾಂತರವನ್ನೈದಿಸುವ ಮನೆ ಎಂದು ಹೆಸರಿಟ್ಟಿರುವರು.

ಆ ಮನೆಯಿಂದ ಶಕ್ತಿಯು ಹೊರಟು ತಂತಿಗಳ ಮೇಲೆ ಸಂಚರಿಸುತ ಕೋಲಾರ, ಬೆಂಗಳೂರು, ಮೈಸೂರು, ಈ ಸ್ಥಳಗಳಿಗೆ ಹೋಗುವುದು. ಆವೂರುಗಳಲ್ಲಿ ಈ ಶಕ್ತಿಯಿಂದ ನಡೆಯುವ ಕೆಲಸವನ್ನು ಸ್ವಲ್ಪಮಟ್ಟಿಗೆ ತಿಳಿಯುವುದು ಆವಶ್ಯಕವು. ಮೊದಲು ಕೋಲಾರದಲ್ಲಿ ಈ ಶಕ್ತಿಯಿಂದ ನಡೆಯುವ ಕೆಲಸವನ್ನು ಸ್ವಲ್ಪಮಟ್ಟಿಗೆ ತಿಳಿಯೋಣ. ತಂತಿಯ ಮಾರ್ಗವಾಗಿ ಈ ಶಕ್ತಿಯು ಚಿನ್ನದ ಗಣಿಗಳಿಗೆ ಹೋದೊಡನೆಯೇ ಅದರ ವೇಗವನ್ನಿಳಿಸಿ ಅದರ ಪ್ರಮಾಣವನ್ನು ಹೆಚ್ಚಿಸಿ ಅದನ್ನು ಪೂರ್ವಸ್ಥಿತಿಗೆ ತರಬೇಕಾಗುವುದು. ಇದಕ್ಕಾಗಿಯೇ ಅಲ್ಲಿಯೂ ಒಂದು ಟ್ರಾನ್ಸ್‌ಫಾರ್ಮರ್‌ಹೌಸನ್ನು ಕಟ್ಟಿರುವರು. ಅಲ್ಲಿ ಈ ಶಕ್ತಿಯ ವಿಪರೀತವಾದ ವೇಗವು ಕಡಮೆಯಾಗುವುದು. ಹೀಗೆ ವೇಗವನ್ನು ಕಡಮೆ ಮಾಡುವುದು ಅತ್ಯಾವಶ್ಯಕವು. ಇಲ್ಲದಿದ್ದರೆ ಈ ಶಕ್ತಿಯಿಂದ ಗಣಿಗಳಲ್ಲಿ ಕೆಲಸ ಮಾಡಿಸಲಾಗುವುದಿಲ್ಲ. ಹೀಗೆ ವೇಗವು ಕಡಮೆಯಾದ ಶಕ್ತಿಯು ಗಣಿಗಳಿಗೆ ಹೋಗುವುದು. ಅಲ್ಲಿ ಮೋಟಾರ್ ಎಂಬ ಯಂತ್ರಗಳನ್ನು ಇಟ್ಟಿರುವರು. ಈ ಯಂತ್ರಗಳೂ ಬ್ಲಫ್‌ನಲ್ಲಿ ಪವರ್‌ಹೌಸ್‌ನಲ್ಲಿ ಇಟ್ಟಿರುವ ಜನರೇಟರ್‌ಗಳಂತೆಯೇ ಇರುವುವು. ಇಲ್ಲಿಯೂ ಒಂದು ದೊಡ್ಡ ಉತ್ತರಮುಖಿಯಿರುವುದು. ಈ ಉತ್ತರಮುಖಿಯ ಅಗ್ರಗಳ ನಡುವೆ ಒಂದು ತಾಮ್ರದ ತಂತಿಯ ಚಕ್ರವೂ ಇರುವುದು. ಶಿವನಸಮುದ್ರದಲ್ಲಿ ನೀರಿನಶಕ್ತಿಯಿಂದ ಈ ತಂತಿಯ ಚಕ್ರವು ತಿರುಗಿ ವಿದ್ಯುಚ್ಛಕ್ತಿಯು ಉತ್ಪತ್ತಿಯಾಯಿತಷ್ಟೇ. ಈ ಶಕ್ತಿಯನ್ನು ಇಲ್ಲಿಗೆ ತಂದು ಮೊಟಾರ್‌ನಲ್ಲಿರುವ ತಾಮ್ರದತಂತಿಯ ಚಕ್ರದೊಳಕ್ಕೆ ಬಿಟ್ಟಿರುವರು. ಹೀಗೆ ಬಿಟ್ಟಿರುವುದರಿಂದ ಅದು ಉತ್ತರಮುಖಿಯ ಅಂತಗಳ ನಡುವೆ ತಾನೇ ತಿರುಗುವುದು. ಮಕ್ಕಳು ಆಡಿಸುವ ಚಕ್ರಬಾಣವು ಹೇಗೆ ಎರಡು ಕಡೆಯಲ್ಲೂ ಉರಿಯುತಿರುವ ಮದ್ದಿನ ಸಹಾಯದಿಂದ ತಿರುಗುವುದೋ ಹಾಗೆ ಪರಸ್ಪರ ವಿರುದ್ಧವಾದ ಎರಡು ಶಕ್ತಿಗಳ ದೆಸೆಯಿಂದ ಈ ಚಕ್ರವು ವೇಗವಾಗಿ ತಿರುಗುವುದಕ್ಕೆ ಪ್ರಾರಂಭಿಸುವುದು. ಈ ಒಂದು ಚಕ್ರವು ತಿರುಗುವುದರಿಂದ ಅನೇಕ ಕೆಲಸಗಳು ನಡೆಯುವುವು. ಚಕ್ರದ ತಿರುಗುವಿಕೆಯಿಂದ ಫಾಳಿಯನ್ನು ಒತ್ತಿ ಬಹು

ವೇಗದಿಂದ ಕೊಳವೆಗಳ ಮೂಲಕ ಗಣಿಗಳೊಳಕ್ಕೆ ಕಳುಹಿಸಿ ಅಲ್ಲಿ ಬಂಡೆಯನ್ನು ಕೊರೆಯುವರು. ಅಥವ ಇದೇ ಚಕ್ರದ ತಿರುಗುವಿಕೆಯಿಂದ ಗಣಿಯಿಂದ ಮೇಲಕ್ಕೆ ಬಂದ ಚಿನ್ನದಕಲ್ಲು ಕಬ್ಬಿಣದ ವನಕೆಗಳಿಂದ ನುಣ್ಣಗೆ ಪುಡಿಮಾಡಲ್ಪಡುವುದು. ಈ ರೀತಿಯಲ್ಲಿ ವಿದ್ಯುಚ್ಛಕ್ತಿಯು ನಾನಾವಿಧವಾದ ಕೆಲಸಗಳನ್ನು ಗಣಿಯವರಿಗೆ ಮಾಡಿಕೊಡುವುದು.

ವಿದ್ಯುಚ್ಛಕ್ತಿಯಿಂದ ಕೋಲಾರದಲ್ಲಿ ಆಗುವ ಪ್ರಯೋಜನವು ಇಷ್ಟೇ ಅಲ್ಲ. ಇದೇಶಕ್ತಿಯು ರಾತ್ರಿಯಲ್ಲಿ ಗಣಿಗಳಿರುವ ಉರಿಗವೆಂಬ ಸ್ಥಳಕ್ಕೆಲ್ಲಾ ಬೆಳಕನ್ನೂ ಕೊಡುವುದು. ವಿದ್ಯುಚ್ಛಕ್ತಿಯಿಂದ ಈ ಬೆಳಕು ಹೇಗೆ ಉಂಟಾಗುವುದು ಎಂಬುದನ್ನು ಸ್ವಲ್ಪಮಟ್ಟಿಗೆ ತಿಳಿಸುವೆವು. ಒಲೆಯಲ್ಲಿ ಸೌಟನ್ನು ಹಾಕಿದರೆ ಸ್ವಲ್ಪಹೊತ್ತಿನಲ್ಲೇ ಸೌಟಿನ ಕಾವು ಹಿಡಿದುಕೊಳ್ಳುವದಕ್ಕಾಗದಷ್ಟು ಬಿಸಿಯಾಗುವದಷ್ಟೆ. ಸೌದೆಯು ಒಲೆಯಲ್ಲಿ ಎಷ್ಟುಹೊತ್ತಿನವರೆಗೆ ಉರಿಯುತಿದ್ದರೂ ಅದರ ಮತ್ತೊಂದು ತುದಿಯನ್ನು ಕೈಯಲ್ಲಿ ಸುಲಭವಾಗಿ ಹಿಡಿದುಕೊಳ್ಳಬಹುದಲ್ಲವೆ? ಸೌಟು ಮುಂತಾದ ಲೋಹವಸ್ತುಗಳಲ್ಲಿ ಉಷ್ಣವು ಬೇಗ ಪ್ರಸರಿಸುವುದೂ ಸೌದೆ ಮುಂತಾದ ಕೆಲವು ವಸ್ತುಗಳಲ್ಲಿ ಬೇಗ ಪ್ರಸರಿಸದೆ ಇರುವುದೂ ಮೇಲಿನ ಅಂಶಗಳಿಗೆ ಕಾರಣವಾಗಿ ಇರುವುವು ವಿದ್ಯುಚ್ಛಕ್ತಿಯೂ ಹೀಗೆಯೇ ತಾಮ್ರ, ಬೆಳ್ಳಿ, ಮೊದಲಾದ ಕೆಲವು ವಸ್ತುಗಳಲ್ಲಿ ಬಲುಬೇಗ ಪ್ರಸರಿಸುವುದು, ಪ್ಲಾಟಿನಂ, ಇದ್ದಲು, ಗಾಜು, ಗಂಧಕ, ರಬ್ಬರ್, ಮೊದಲಾದ ಕೆಲವು ವಸ್ತುಗಳಲ್ಲಿ ಬಲುನಿಧಾನವಾಗಿ ಪ್ರಸರಿಸುವುದು, ಆದುದರಿಂದ ವಿದ್ಯುಚ್ಛಕ್ತಿಯು ಒಂದು ತಾಮ್ರದ ತಂತಿಯಮೇಲೆ ಹೋಗುತಿರುವಾಗ ಆ ತಂತಿಯನ್ನು ಮಧ್ಯದಲ್ಲಿ ಕತ್ತರಿಸಿ ಈ ಎರಡು ಕೊನೆಗಳ ಮಧ್ಯದಲ್ಲಿ ಒಂದು ಪ್ಲಾಟಿನಂ ತಂತಿಯನ್ನು ಅಥವಾ ಒಂದು ಇದ್ದಲಿನ ಚೂರನ್ನು ಕಟ್ಟಿದರೆ ಶಕ್ತಿಯಪ್ರಸರಣಿಗೆ ತಡೆಯುಂಟಾಗಿ ಈ ಪ್ಲಾಟಿನಂ ತಂತಿಯಲ್ಲಿ ಅಥವ ಇದ್ದಲಿನ ಚೂರಿನಲ್ಲಿ ಉಷ್ಣವುಂಟಾಗುವುದು. ಅಗಸಾಲೆಯು ಚಿನ್ನದ ತುಂಡನ್ನು ಅಡಿಗಲ್ಲಿನ ಮೇಲಿಟ್ಟು ಹೊಡೆಯುತಿರುವಾಗ ಸ್ವಲ್ಪಹೊತ್ತಿನಲ್ಲೇ ಆ ತುಂಡು ಬಲುಬಿಸಿಯಾಗುವುದು. ಇವನು ಕೈಯಿಂದ ಉಪಯೋಗಿಸುತ್ತಿರುವ ಶಕ್ತಿಗೆ ತಡೆಯುಂಟಾದುದೇ ಈ ಉಷ್ಣಕೆ ಕಾರಣವು. ಇದೇರೀತಿಯಲ್ಲಿ ವಿದ್ಯುಚ್ಛಕ್ತಿಯು ಪ್ರಸರಣಕ್ಕೆ ತಡೆಯುಂಟಾಗುವುದರಿಂದ ಪ್ಲಾಟಿನಂ ಅಥವ ಇದ್ದಲು ಕಾಯುವುದು. ಎರಡು ತಾಮ್ರದತಂತಿಗಳ ನಡುವೆ ಒಂದು ಪ್ಲಾಟಿನಂ ತಂತಿಯನ್ನು ಕಟ್ಟಿ ವಿದ್ಯುಚ್ಛಕ್ತಿಯನ್ನು ಬಿಟ್ಟರೆ ಆ

ತಂತಿಯು ಬಿಳಿಯ ಕಾವು ಬರುವವರೆಗೂ ಕಾದು ಬಲುಪ್ರಕಾಶವಾಗಿ ಕಾಣಿಸುವುದು. ಪ್ಲಾಟಿನಂ ತಂತಿಗೆ ಬದಲಾಗಿ ಒಂದು ಇದ್ದಲಿನ ಚೂರನ್ನು ಈ ಎರಡು ಕೊನೆಗಳ ಮಧ್ಯಕ್ಕೆ ತಗಲಿಸಿದರೆ ಅದು ಬಿಳಿಯಕಾವು ಬರುವವರೆಗೆ ಕಾಯುವುದು. ಆದರೆ ಗಾಳಿಗೆ ಸೋಕುವುದರಿಂದ ತಕ್ಷಣ ಉರಿದೇ ಹೋಗುವುದು. ಇಂತಹ ಇದ್ದಲಿನ ಚೂರನ್ನು ಗಾಳಿಯಿಲ್ಲದ ಗಾಜಿನ ಬುಡ್ಡಿಯಲ್ಲಿಟ್ಟು ಅದರ ಮಾರ್ಗವಾಗಿ ವಿದ್ಯುಚ್ಛಕ್ತಿಯನ್ನು ಬಿಟ್ಟರೆ ಆಗ ಅದು ಬಿಳಿಯಕಾವೇರಿ ಬಲುಪ್ರಕಾಶವಾಗಿ ಕಾಣಿಸುವುದು ಮತ್ತು ಬುಡ್ಡಿಯಲ್ಲಿ ಗಾಳಿಯಿಲ್ಲವಾದುದರಿಂದ ಉರಿಯುವುದಿಲ್ಲ. ಇಂತಹ ಬುಡ್ಡಿಗಳೇ ಉರಿಗ, ಬೆಂಗಳೂರು, ಮೈಸೂರು, ಈ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯು ದೀಪಕ್ಕಾಗಿ ಉಪಯೋಗಿಸಲ್ಪಟ್ಟಿರುವುವು.

ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿಯು ಮುಖ್ಯವಾಗಿ ದೀಪಗಳನ್ನುರಿಸುವುದಕ್ಕಾಗಿ ಉಪಯೋಗಿಸಲ್ಪಟ್ಟಿರುವುದು. ಆದರೆ ಹಗಲುಹೊತ್ತು ಇದೇ ಶಕ್ತಿಯನ್ನು ಬೆಂಗಳೂರಿನಲ್ಲಿರುವ ಹತ್ತಿಯಕಾರ್ಖಾನೆಗಳ ಯಂತ್ರಗಳನ್ನು ನಡೆಸುವುದಕ್ಕೂ ಉಪಯೋಗಿಸುವರು. ಪ್ರತಿಯೊಂದುಕಾರ್ಖಾನೆಯಲ್ಲೂ ಒಂದೊಂದು ಮೋಟಾರ್ ಇರುವುದು. ಈ ಮೋಟಾರಿನ ತಾಮ್ರದ ತಂತಿಯ ಚಕ್ರವು ತಿರುಗುವುದರಿಂದ ಕಾರ್ಖಾನೆಯ ಚಕ್ರಗಳೆಲ್ಲಾ ತಿರುಗಿ ಕೆಲಸವು ನಡೆಯುವುದು.

ಮೈಸೂರಿನಲ್ಲಿ ಈ ಶಕ್ತಿಯನ್ನು ದೀಪವನ್ನುರಿಸುವುದಕ್ಕೆ ಮಾತ್ರ, ಉಪಯೋಗಿಸುತ್ತಿರುವರು. ಮುಂದೆ ಈ ಶಕ್ತಿಯನ್ನು ಬಳಗೊಳದಲ್ಲಿ ನೀರೆತ್ತುವದಕ್ಕೂ ಉಪಯೋಗಿಸಿ ಇದರ ಸಹಾಯದಿಂದ ಮೈಸೂರಿಗೆ ಕಾವೇರಿಯ ನೀರನ್ನು ಒದಗಿಸಿ ಕೊಡುವರು.

ಈ ರೀತಿಯಲ್ಲಿ ವಿದ್ಯುಚ ಕ್ತಿಯೊಂದರಿಂದ ನಮ್ಮ ದೇಶಕ್ಕೆ ಆಗಿರುವ ಉಪಕಾರವು ಅಷ್ಟಿಷ್ಟಲ್ಲ. ಈ ಶಕ್ತಿಯ ಸ್ವರೂಪವನ್ನು ತಿಳಿಸುವ ಶಕ್ತಿಶಾಸ್ತ್ರವನ್ನು ನಮ್ಮ ದೇಶದ ಬಾಲಕರೆಲ್ಲರೂ ಅಭ್ಯಾಸಮಾಡುವುದು ಅವಶ್ಯಕವಲ್ಲವೆ? ಪ್ರಾಕೃತಿಕಶಾಸ್ತ್ರಗಳ ವಿಶೇಷವಾದ ಅಭ್ಯಾಸಕ್ಕಾಗಿ ಬೆಂಗಳೂರಿನಲ್ಲಿ ಒಂದು ಸಕಲವಿದ್ಯಾನಿಲಯವು ಏರ್ಪಡುತ್ತಿರುವುದು, ಈ ನಿಲಯದಲ್ಲೂ ಇನ್ನೂ ಇತರ ಸ್ಥಳಗಳಲ್ಲೂ ನಮ್ಮ ದೇಶದವರು ಪ್ರಾಕೃತಿಕಶಾಸ್ತ್ರಾಭ್ಯಾಸವನ್ನು ಮಾಡಿ ನಮ್ಮ ದೇಶದಲ್ಲಿ ಉತ್ಪತ್ತಿಯಾಗುತಿರುವ ಶಕ್ತಿಯನ್ನು ತಾವೇ ಉಪಯೋಗಿಸುವಸಾಮರ್ಥ್ಯವನ್ನು ಹೊಂದುವುದರಿಂದ ದೇಶೋನ್ನತಿಗೆ ವಿಶೇಷ ಅನುಕೂಲವಾಗುವುದಿಲ್ಲವೇ? ಇಂತಹ ಸ್ಥಿತಿಯನ್ನು ನಮ್ಮ ದೇಶಕೆ ಕೊಡಬೇಕೆಂದು ಭಗವಂತನನ್ನು ನಾವು ಪ್ರಾರ್ಥಿಸುವೆವು.

ಜಪಾನ್.

ಪ್ರಾರಂಭ:—

ಜಪಾನ್ ರಾಜ್ಯವು ಸರಪಣಿಯಂತೆ ಒಂದಕ್ಕೊಂದು ಅಂಟಿಕೊಂಡಿರುವ ನಡು ಗಡ್ಡೆಗಳಿಂದ ತುಂಬಿದೆ. (ಪಠವನ್ನು ತೋರಿ) ನಮಗೆ ಪೂರ್ವಭಾಗದಲ್ಲಿದೆ. ಸೂರ್ಯನು ಹುಟ್ಟುವ ದಿಕ್ಕಿನಲ್ಲಿರುವುದರಿಂದ ಇದನ್ನು "ಬಾಲಸೂರ್ಯಭೂಮಿ" ಎಂದು ಕರೆಯುವರು.

ಜಪಾನಿಯರ ರೂಪು ಮತ್ತು ಉಡುಪು:—

ಜಪಾನಿಯರು ಕುಳ್ಳರು. ಅರಸಿನ ಬಣ್ಣದವರು. ನೀಳವಾದ ಕರಿಯ ಕೂದಲುಳ್ಳವರು, ಇವರ ಕಣ್ಣುಗಳು ಕಪ್ಪಗೆ ಸಣ್ಣವಾಗಿ ಕಾಂತಿಯುಳ್ಳವುಗಳಾಗಿರುವುವು. ಗಂಡಸರೂ ಹೆಂಗಸರೂ ಸಹ "ಕಿಮೋನೋ" ಎಂಬ ಉಡುಪನ್ನು ಧರಿಸುವರು. ಇದು ಉದ್ದವಾಗಿಯೂ ಸಡಿಲವಾಗಿಯೂ ಇರುವ ಅಂಗಿಯಂತಿರುವುದು. ಈ ಉಡುಪು ಕಾಲಿನಿಂದ ತಲೆಯತನಕ ಮುಚ್ಚಿರುವುದು. ಕೈಗಳಮೇಲೆ ವಸ್ತ್ರವು ಜೋಲಾಡುತ್ತಿರುವುದು. ಪಕ್ಕಗಳಲ್ಲಿ ಜೇಬುಗಳಿರುವುವು. ಸೊಂಟದಲ್ಲಿ ಈ ಉಡುಪನ್ನು ಬಟ್ಟೆಯ ತುಂಡಿನಿಂದ ಬಿಗಿಸಿರುವರು. ಇಂತಹ ಸೊಂಟಪಟ್ಟಿಯು ಗಂಡಸರಿಗೆ ಸಣ್ಣವಾಗಿರುವುದು; ಹೆಂಗಸರಿಗೆ ಸ್ವಲ್ಪ ಅಗಲವಾಗಿರುವುದಲ್ಲದೆ ಬೆನ್ನಿನಮೇಲುಗಡೆಗೂ ಸೇರಿಸಲ್ಪಟ್ಟಿರುವುದು. ಈ "ಕಿಮೋನೋ" ಎಂಬ ಡ್ರೆಸ್ಸಿಗೆ ಒಳಭಾಗದಲ್ಲಿ ಇಂತವೇ ಎರಡುಮೂರು ಉಡುಪುಗಳಿರುವುವು. ಈ ಉಡುಪಿನಮೇಲೆ ಸಾಧಾರಣವಾಗಿ ಒಂದು ವಸ್ತ್ರವನ್ನೂ ಹೊದೆಯುವರು.

ಗಂಡಸರು ಬಗೆಬಗೆಯ ಟೋಪಿಗಳನ್ನಿಡುವರು. ಹೆಂಗಸರು ಸಾಮಾನ್ಯವಾಗಿ ನಮ್ಮ ಹೆಂಗಸರಂತೆಯೇ ಬರಿಯತಲೆಯುಳ್ಳಿರುವರು. ಇವರು ಬಹು ಶೀತವಾಗಿರುವಾಗ ಮಾತ್ರ ಒಂದು ಬಗೆಯ ಕರಿಯ ಟೋಪಿಯನ್ನು ಧರಿಸುವರು.

ಸಣ್ಣಮಕ್ಕಳೂ ದೊಡವರಂತೆಯೇ ಉಡುಪುಗಳನ್ನು ಧರಿಸುವರು. ಎಲ್ಲರೂ ಕಾಲುಗಳಿಗೆ ಮೇಜೋಡುಗಳನ್ನು ತೊಡುವರು. ಮರದ ಹಾವುಗೆಗಳಂತಹ ಕೆರಗಳನು ಮೆಟ್ಟುವರು.

ಮನೆಗಳಲ್ಲಿರುವಾಗ ಹುಲ್ಲಿನ ಜೋಡುಗಳನ್ನು ಮೆಟ್ಟುವರು. ಮಳೆಗಾಲದಲ್ಲಿ ಎತ್ತರವಾದ ಕೆಸರು ಕೊರಡುಗಳನ್ನು ಹಾಕಿಕೊಂಡು ತಿರುಗುವರು.

ಜಪಾನಿಯರ ಮನೆಗಳು:—

ಜಪಾನಿಯರು ಮರದ ಮನೆಗಳಲ್ಲಿ ವಾಸಮಾಡುವರು. ಹುಲ್ಲಿನ ಮೇಲು ಹೊದಿಕೆ ಇರುವುದು. ಎಲ್ಲ ಕಡೆಗಳಲ್ಲಿಯೂ ತಕ್ಕಷ್ಟು ದಾರಿಗಳಿರುವುದರಿಂದ ಪ್ರತ್ಯೇಕವಾಗಿ ಬಾಗಿಲುಗಳಾಗಲಿ ಕಿಟಕಿಗಳಾಗಲಿ ಇರವು. ಕೊಠಡಿಗೆ ಗಾಳಿ ಬರುವ ಕಡೆಗಳಲ್ಲಿ ಜಿಡ್ಡಾದ ಕಾಗದಗಳು ಅಂಟಿಸಲ್ಪಟ್ಟಿರುವುದರಿಂದ ಬೆಳಕು ಧಾರಾಳವಾಗಿ ಬೀಳುತ್ತಿರುವುದು. ಗಾಳಿ ಬರಲು ಅವಕಾಶವಿಲ್ಲ. ಬಾಗಿಲುಗಳೆಲ್ಲವೂ ಪೊಳೆಗಳಮೇಲೆ ಬೇಕಾದಕಡೆಗೆ ತಿರುಗಿಸಲಿಕ್ಕೆ ಬರುವುದು. ಚಳಿಗಾಲದಲ್ಲಿಯೂ ಮಳೆಗಾಲದಲ್ಲಿಯೂ ಪಕ್ಕಗಳಲ್ಲಿರುವ ಮರದ ಹಲಗೆಗಳು ಕಿಟಕಿಗಳಂತೆ ಮುಚ್ಚಲ್ಪಡುವುವು. ಮರದ ಹಲಗೆಗಳೆಲ್ಲಕ್ಕೂ ಕಾಗದಗಳು ಹತ್ತಿಸಲ್ಪಟ್ಟಿರುವುವು ; ಅವುಗಳ ಮೇಲೆ ಬಗೆಬಗೆಯ ಚಿತ್ರಗಳೂ ಪಟಗಳೂ ಬರೆಯಲ್ಪಟ್ಟಿರುವುವು.

ಮನೆಗಳೊಳಕ್ಕೆ ಹೋದಕೂಡಲೆ ಜಪಾನಿಯರು ತಮ್ಮ ಪಾದರಕ್ಷೆಗಳನ್ನು ತೆಗೆದುಬಿಡುವರು. ನೆಲದ ಮೇಲೆ ಉತ್ತಮವಾದ ಚಾಪೆಗಳೂ, ತಿವಾಸಿಗಳೂ ಹಾಸಲ್ಪಟ್ಟಿರುವುದರಿಂದ ಅವುಗಳನ್ನು ಕೊಳೆ ಮಾಡಲು ಅವರು ಒಪ್ಪುವುದಿಲ್ಲ. ಸಾಮಾನ್ಯವಾಗಿ ಕುರ್ಚಿಗಳಿರುವುದಿಲ್ಲ. ಬೆಲೆ ಬಾಳುವ ಚಾಪೆಗಳನ್ನೇ ಹಾಸಿರುವರು. ಹಲಗೆಗಳಿದ್ದರೂ ಬಹಳ ತಗ್ಗಿನಲ್ಲಿರುವುದರಿಂದ ಅವರು ಕೆಳಗೆ ಕುಳಿತಿದ್ದರೂ ಕೆಲಸ ಮಾಡಲಿಕ್ಕೆ ಅನುಕೂಲವಾಗಿರುವುದು.

ಇಂಗ್ಲೆಂಡು ಮೊದಲಾದ ಶೀತದೇಶದ ಮನೆಗಳಲ್ಲಿ ಪ್ರತ್ಯೇಕವಾಗಿ ಒಂದು ಕಡೆ ಬೆಂಕಿಯ ಕುಂಡವಿರುವಂತೆ ಅಲ್ಲಿ ಇರುವುದಿಲ್ಲವಾದರೂ ನಮ್ಮದೇಶದ ಕುಂಪಟಿಗಳಂತ ಪೆಟ್ಟಿಗೆಗಳಲ್ಲಿ ಬೆಂಕಿಯನ್ನು ಹಾಕಿರುವರು. ಇವುಗಳನ್ನು ಬೇಕಾದಕಡೆಗೆ ಒಯ್ದು ಶಾಖವನ್ನುಂಟುಮಾಡಿಕೊಳ್ಳುವರು.

ಎರಡು ಅಂತಸ್ತಿನ ಚಿಕ್ಕಹಲಗೆಯ ಪೆಟ್ಟಿಗೆಯೊಂದಿರುವುದು. ಅಗ್ನಿಭಯವುಂಟಾದಾಗ ಇದನ್ನು ಸುಲಭವಾಗಿ ಬೇಕಾದ ಕಡೆಗೆ ತೆಗೆದುಕೊಂಡು ಹೋಗುವರು. ಅನ್ನವನ್ನು ಬೇಯಿಸುವುದಕ್ಕೆ ಒಂದು ತಾಮ್ರದ ಪಾತ್ರೆಯೂ ಒಂದು ಮುಚ್ಚಳವೂ ಮಾತ್ರವಲ್ಲದೆ ಮತ್ತೇನೂ ಇರವು. ಕೆಲವರಲ್ಲಿ ಪುಸ್ತಕಗಳ ಪೆಟ್ಟಿಗೆಗಳೊಂದೆರಡು ಇರುವುವು.

ನೆಲದಮೇಲೆ ದಪ್ಪವಾದ ರಜಾಯಿಗಳನ್ನು ಹಾಸಿ, ತಲೆದಿಂಬುಗಳನ್ನು ಇಟ್ಟುಕೊಂಡು ಮಲಗುವರು.

ಜಪಾನಿಯರ ಆಹಾರ.—

ಅಕ್ಕಿಯ ಅನ್ನವೇ ಇವರ ಮುಖ್ಯಾಹಾರ. ಮೀನುಗಳನ್ನು ಬಹಳವಾಗಿ ಅಪೇಕ್ಷಿಸುವರು. ಟೀಸೊಪ್ಪಿನ ಕಷಾಯವನ್ನು ಎಲ್ಲರೂ ಕುಡಿಯುವರು. ನೈದಿಲೆ ರೇಕುಗಳನ್ನು ಸಕ್ಕರೆಯೊಂದಿಗೆ ಬೇಯಿಸಿಯೂ, ಬಿದಿರಬೇರುಗಳನ್ನೂ, ಸಮುದ್ರ ತೀರದ ಗಿಡಗಳ ಬೇರುಗಳನ್ನೂ ಬೇಯಿಸಿಯೂ ಕೆಲವು ಆಹಾರ ಪದಾರ್ಥಗಳನ್ನು ಮಾಡಿಕೊಳ್ಳುವರು. ಕೆಲವು ಹಣ್ಣುಗಳನ್ನೂ, ಹಲವು ಬಗೆಯ ಕಾಯಿಗಳನ್ನೂ ಉಪ್ಪಿನಕಾಯಿ ಹಾಕಿಕೊಳ್ಳುವರು. ಚಪ್ಪರದವರೆಯ ಕಾಳುಗಳ ಹಿಟ್ಟಿನಿಂದ ರೊಟ್ಟಿ ಸುಟ್ಟು ತಿನ್ನುವರು. ಆಹಾರಪದಾರ್ಥಗಳನ್ನು ಬಟ್ಟಲುಗಳಲ್ಲಿ ಇಟ್ಟುಕೊಂಡು ಮರದ ಸೌಟಿನಿಂದ ತೆಗೆದು ತಿನ್ನುವರು.

ಜಪಾನಿಯರ ಹುಡುಗರು.—

ಇವರ ಹುಡುಗರು ಬಹಳ ಯೋಗ್ಯರಾಗಿಯೂ ಸಂತೋಷವುಳ್ಳವರಾಗಿಯೂ ಇರುವರು. ಅವರ ತಂದೆತಾಯಿಗಳು ಹುಡುಗರ ವಿಷಯದಲ್ಲಿ ತೆಗೆದುಕೊಳ್ಳುವ ಶ್ರದ್ಧೆಯೇ ಇದಕ್ಕೆ ಕಾರಣ. ತಾಯಿತಂದೆಗಳು ತಮ್ಮ ಮಕ್ಕಳನ್ನು ಸನ್ಮಾರ್ಗದಲ್ಲಿ ತರಲು ಬಹಳ ಎಚ್ಚರಪಡುವರು. ದೊಡ್ಡ ಹುಡುಗರು ತಮ್ಮ ಸಹೋದರಿಯರನ್ನೂ, ತಮ್ಮಂದಿರನ್ನೂ, ಬೆನ್ನಿನಮೇಲೆ ಹೊತ್ತು ನೂರಾರು ಆಟವಾಡುತ್ತಿರುವರು. ಹುಡುಗರ ಉಡುಪುಗಳಿಗೆ ಸಣ್ಣ ಸಣ್ಣ ಬೆಂಡುಗಳನ್ನೂ, ಗಂಟೆಗಳನ್ನೂ ಕಟ್ಟಿರುವರು. ಅದರಿಂದ ಆ ಮಕ್ಕಳು ಆಡುತ್ತಿರುವರು. ಆ ಧ್ವನಿಹಿಡಿದು, ಅವರ ತಾಯಿ ಮೊದಲಾದವರು ಮಕ್ಕಳಿರುವ ಸ್ಥಳಗಳನ್ನು ನಿಮಿಷದಲ್ಲಿಯೇ ಕಂಡುಹಿಡಿಯುವರು. ಜಪಾನಿಯರು ತಮ್ಮ ಗಂಡುಮಕ್ಕಳ ವಿಷಯದಲ್ಲಿ ತುಂಬ ಶ್ರದ್ಧೆ ವಹಿಸುವರು. ಪುತ್ರರು ಹುಟ್ಟಿದಾಗ ಇವರ ಮನೆಗಳಲ್ಲಿ ದೊಡ್ಡ ಉತ್ಸವ ಜರುಗುವುದು. ಮನೆಯ ಮುಂದುಗಡೆ ಬಾವುಟಗಳನ್ನು ತಗಲಹಾಕುವರು. ಗಂಡುಹುಡುಗರು ವಯಸ್ಸು ಒಂದಕೂಡಲೆ ಪಾಠಶಾಲೆಗೆ ಹೋಗಿ ನೆಲದಮೇಲೆ ಕುಳಿತು, ಗಟ್ಟಿಯಾಗಿ ಅರಚುತ್ತ, ಪಾಠಗಳನ್ನು ಕಲಿಯುತ್ತಿರುವರು. ಹೆಣ್ಣುಮಕ್ಕಳಿಗೆ ಅಗತ್ಯವಾದ ವಿಷ್ಯಗಳನ್ನು ಕಲಿಸುವರು. ಅವರಿಗೆ ಮುಖ್ಯವಾಗಿ ಚಿತ್ರಗಳನ್ನು ಬರೆಯುವುದು,

ಸಂಗೀತ, ಹೊಲಿಗೆ, ಅಡಿಗೆಯ ಕೆಲಸ ಮುಂತಾದ ವಿದ್ಯೆಗಳನ್ನು ಕಲಿಸುವರು. ಗಂಡುಹುಡುಗರು ಕುಸ್ತಿ ಮಾಡುವರು. ಈ ಕೆಲಸದಲ್ಲಿ ಇವರು ಬಹಳ ಚತುರರು. ಹೆಣ್ಣುಮಕ್ಕಳು ಹಲವುಬಗೆಯ ಚಂಡಿನ ಆಟಗಳನ್ನಾಡುವರು. ಬಾಲಿಕೆಯರು ಮಾರ್ಚಿತಿಂಗಳಲ್ಲಿ ಒಂದುದಿನ ದೊಡ್ಡ ಹಬ್ಬ ಮಾಡುವರು. ಆದಿನ ಅವರ ಆಟದ ಬೊಂಬೆಗಳನ್ನೆಲ್ಲ ಅಂದವಾಗಿ ಅಲಂಕರಿಸುವರು. ಹಬ್ಬ ಮುಗಿದಮೇಲೆ ಅವುಗಳನ್ನೆಲ್ಲ ಪೆಟ್ಟಿಗೆಗಳಲ್ಲಿಟ್ಟು ಜೋಪಾನಮಾಡುವರು. ಈ ವಸ್ತುಗಳಲ್ಲಿ ಕೆಲವು ಹೆಚ್ಚುಬೆಲೆ ಬಾಳತಕ್ಕವುಗಳಾದುದರಿಂದ ಜಪಾನಿಯರು ಇವುಗಳನ್ನು ಭದ್ರವಾಗಿ ಮನೆಗಳಲ್ಲಿ ಕಾಪಾಡುವರು. ಮೇ ತಿಂಗಳಲ್ಲಿ ಗಂಡುಹುಡುಗರ ಹಬ್ಬ ಬರುವುದು. ಅದರ ಹೆಸರು ಬಾವುಟಗಳ ಹಬ್ಬ. ಈ ದಿನಗಳಲ್ಲಿ ಯುದ್ಧಸಂಬಂಧವಾದ ಮತ್ತು ಯುದ್ಧಕಾರ್ಯನಿದರ್ಶನಗಳಾದ ಆಟದ ಬೊಂಬೆಗಳು ಇವರಿಗೆ ಕೊಡಲ್ಪಡುವುವು. ಅನೇಕ ಬಾವುಟಗಳನ್ನು ಮಾಡಿಕೊಂಡು ಹುಡುಗರು ಬೀದಿಗಳಲ್ಲಿ ಮೆರಸುತ್ತ ಸಂತೋಷದಿಂದ ಉತ್ಸವವನ್ನು ನಡಿಸುವರು. ಹಬ್ಬ ಮುಗಿದಮೇಲೆ ಬಾವುಟಗಳೆಲ್ಲವನ್ನೂ ಜೋಪಾನವಾಗಿ ಇಡುವರು.

ಜಪಾನಿಯರ ವೃತ್ತಿಗಳು.—

ಸುಮಾರು ಅರೆವಾಸಿ ಜನಗಳು ವ್ಯವಸಾಯದಲ್ಲಿ, (ಟೀ ಸೊಪ್ಪನ್ನು ಬೆಳಸುವುದರಲ್ಲಿ) ಕಾಲವನ್ನು ಕಳೆಯುವರು. ಉಳಿದವರು ನೂಲುಬಟ್ಟೆಗಳನ್ನೂ ರೇಷಿಮೇ ವಸ್ತ್ರಗಳನ್ನೂ, ಇತರ ವಿವಿಧವಸ್ತುಗಳನ್ನೂ ಮಾಡುವರು. ಅನೇಕರು ಯಂತ್ರದ ಕೆಲಸದಲ್ಲಿ ಚತುರರಾಗಿ ಕೆಲಸಮಾಡುತ್ತಿರುವರು. ಹೂದೋಟಗಳನ್ನು ಬೆಳಸುವುದರಲ್ಲಿ ಅವರೆಲ್ಲರಿಗೂ ಕುತೂಹಲವುಂಟು. ಸೇವಂತಿಗೆ ಹೂವು ಅವರಿಗೆ ಬಲು ಇಷ್ಟವಾದುದು.

ಈ ಪಾಠವನ್ನು ಕುರಿತ ಕೈಕೆಲಸಗಳು.—

1 ಬಣ್ಣದಬರಹ.—ಬಣ್ಣಗಳನ್ನು ಪಯೋಗಿಸಿ ಸೇವಂತಿಗೆ ಹೂವನ್ನು ಬ್ರಷಿನಿಂದ ಹುಡುಗರ ಕೈಯಲ್ಲಿ ಬರೆಯಿಸುವುದು.

2 ಮಣ್ಣಿನಕೆಲಸ—ಜಪಾನಿಯರು ಟೀ ಸೊಪ್ಪಿನ ಕಷಾಯವನ್ನು ಕುಡಿಯಲು ಬಳಸುವ ಪಾತ್ರೆಗಳನ್ನು ಮಣ್ಣಿನಿಂದ ಮಾಡಿಸುವುದು.

4 ಕರಿಯ ಹಲಗೆಯ ಕೆಲಸ—ಜಪಾನಿಯರ ಕೊಡೆಗಳನ್ನು ಹಲಗೆಯ ಮೇಲೆ ಬರೆಯಿಸುವುದು.

ಹಾಡು. ರಾಗ.

ಮೂಡಲೊಳು ಜಪಾನವೆಂಬನಾಡು ತೋರ್ಪುದು ।
ರೂಢಿಯನಡುಗಡ್ಡೆಯಲ್ಲಿ ಜೋಡಿಯಿಲ್ಲದೆ ॥ ೧ ॥
ಹಳದಿಬಣ್ಣ ನಿಡಿದುಕರಿಯ ಕೂದಲಿರ್ಪುದು ।
ಥೊಳೆವಕಣ್ಣು ಕಾಂತಿಯಿಂದ ತೊಳಗುತಿರ್ಪುದು ॥ ೨ ॥
ಸಡಿಲದುಡುಗೆ, ಮೇಲೆ ವಸ್ತ್ರಸೊಂಟಪಟ್ಟೆಯು ।
ಮಡದಿಯರ್ಗೆ ಬರಿಯತಲೆಯು, ಮರದಹಾವುಗೆ ॥ ೩ ॥
ಮರದಮನೆಗೆ ಪುಲ್ಲಹೊದಿಕೆ, ತೆರೆದಬಾಗಿಲು ।
ಧರೆಯಮೇಲೆ ಚಾಪೆಹಾಸಿ ಕುಳಿತುಕೊಂಬರು ॥ ೪ ॥
ಅನ್ನವನ್ನೆತಿಂಬರು ಟೀನೀರ ಕುಡಿವರು ।
ಹಣ್ಣುಕಾಯ್ಗಳವರೆ ರೊಟ್ಟಿಯವರಿಗಿಷ್ಟವು ॥ ೫ ॥
ಮಕ್ಕಳಿಂದವೊಳ್ಳೆನಡತೆ ಕಲಿಯುತಿರ್ಪರು ।
ಚಿಕ್ಕಬೊಂಬೆ, ಬಾವುಟಗಳ ಹಬ್ಬಮಾಳ್ಪರು ॥ ೬ ॥

K. R.

ಅಳಿಲನ್ನು ಕುರಿತು ವಸ್ತುಪಾಠ.

(ಸಿದ್ಧಪಡಿಸಬೇಕಾದುವು— ಬೆಳಸಿದ ಅಳಿಲು ಅಥವಾ ಅದರ ಚಿತ್ರಪಠ— ಉಡುತೆಗಳು ಸಾಧಾರಣವಾಗಿ ತಿನ್ನುವ ಹಣ್ಣುಗಳು, ಕಾಳುಗಳು, ಹೂವುಗಳು).

ಪ್ರಾರಂಭ—ಗಿಡಗಳ ಮೇಲೆ ತಿರುಗಾಡುವ ಅಳಿಲುಗಳನ್ನು ನಿತ್ಯವೂ ನಾವು ನೋಡುತ್ತಿರುವೆವು. ತೋಟಗಳಲ್ಲಿಯೂ, ತೋಪುಗಳಲ್ಲಿಯೂ, ರಸ್ತೆಯ ಪಕ್ಕದ ಗಿಡಗಳ ಮೇಲೆಯೂ ಇವು ವಾಸಮಾಡಿಕೊಂಡಿರುವುವು. ಇವು ಕೆಲವು ವೇಳೆ ಗಳಲ್ಲಿ ಹುಲ್ಲುಮನೆಗಳ ಸೂರುಗಳಲ್ಲಿಯೂ ವಾಸಮಾಡುತ್ತಿರುವುವು. ಕಚ್ಚಿ ತಿನ್ನುವ ಜಂತುಗಳಲ್ಲಿ ವಿನೋದಕರವಾದುವು.

ಅಳಿಲುಗಳ ಸ್ವರೂಪ—ಅಳಿಲುಗಳು ಕುಂದಿಲಿಯನ್ನು ಹೋಲುವುವು. ಇವು ಗಳ ಮೈ ಮೃದುವಾಗಿರುವ ರೋಮಿಯಂತೆ ಕೂದಲಿಂದ ತುಂಬಿರುವುದು. ಇವು

ಗೋಡುವೆಯು ಬಣ್ಣವಾಗಿರುವುವು. ಬಾಲದ ಕೊನೆಯೂ, ಎದೆಯು ತಳಭಾಗವೂ ಸ್ವಲ್ಪ ಬೆಳ್ಳಗಿರುವುದು. ಇವುಗಳ ಬಾಲಗಳು ಕೂದಲಿಂದ ತುಂಬಿ, ಕೂತುಕೊಂಡು ಹಣ್ಣುಗಳನ್ನು ತಿನ್ನುವಾಗ ಅವು ಕುಚ್ಚುಗಳಂತೆ ಹಿಂಭಾಗದಲ್ಲಿ ತಲೆಯುತನಕ ಮೇಲಕ್ಕೆದ್ದು ನೋಟಕ್ಕೆ ರಮ್ಯವಾಗಿರುವುವು. ಈ ಬಾಲವೇ ಅದಕ್ಕೆ ಮರದಮೇಲೆ ಒಂದು ಕಡೆಯಿಂದ ಮತ್ತೊಂದುಕಡೆಗೆ ಧುಮುಕಲು ಅನುಕೂಲವಾಗಿರುವುದು. ಉಡುತೆಗಳು ದುಮುಕುವಾಗ ಜಾರಿ ಕೆಳಕ್ಕೆ ಬೀಳುವುದೇ ಇಲ್ಲ. ಒಂದಾನೊಂದು ವೇಳೆ ಅಂತಹ ಪ್ರಮಾದಬಂದರೆ ಅವು ತಮ್ಮ ಕಾಲುಗಳನ್ನೂ ಬಾಲವನ್ನೂ ಚಾಚಿ, ಮೆಲ್ಲಗೆ ನೆಲಕ್ಕೆ ಜಾರುವುವು. ಇದರಿಂದ ಸ್ವಲ್ಪವೂ ಅಪಾಯವಿಲ್ಲ. ಇದರ ಬಾಲ 9 ಅಂಗುಲವೃದ್ಧವಾಗಿರುವುದು. ಮರಗಳ ಮೇಲೆ ಚುರುಕಾಗಿಯೂ ಸುಲಭವಾಗಿಯೂ ಧುಮುಕುವುದರಲ್ಲಿ ಇದಕ್ಕೆ ಮೀರಿದ ಜಂತುಗಳು ಯಾವುವೂ ಇಲ್ಲ.

ಅಂಗನಿರ್ಮಾಣ— ಇವುಗಳ ತಲೆ ಚಿಕ್ಕದಾಗಿ ಕೋಳಿಯು ಮೊಟ್ಟೆಯಹಾಗಿರುವುದು ; ಕಿವಿ ನಿಡಿದಾಗಿರುವುದು ; ಈ ಕಾರಣದಿಂದ ಎಷ್ಟು ಮೆತ್ತನೆಯ ಸದ್ದನ್ನಾದರೂ ಸುಲಭವಾಗಿ ಗ್ರಹಿಸಬಲ್ಲದು. ಅಂತಹ ಧ್ವನಿಯನ್ನು ಕೇಳಿದಾಗ ಇದು ಬಹುಬೇಗ ಮರದಮೇಲಕ್ಕೆ ಹತ್ತಿ, ರೆಂಬೆಗಳಲ್ಲಡಗಿ ದಿಕ್ಕುದಿಕ್ಕುಗಳನ್ನೂ ನೋಡುತ್ತ ಕುಳಿತಿರುವುದು. ಇದರ ತುಟಿಗಳು ತೆಳುವಾಗಿರುವುವು. ಮೇಲಿನ ತುಟಿ ಎರಡಾಗಿ ಸೀಳಿರುವುದರಿಂದ ಒಳಗಿನ ಹಲ್ಲುಗಳು ಮುಂದಕ್ಕೆ ಬಂದಿರುವಂತೆ ಕಾಣುವುದು. ಇದರಿಂದ ತಮ್ಮ ಆಹಾರವನ್ನು ತಿನ್ನಲು ಅನುಕೂಲವಾಗಿರುವುದು. ಹಾಗೆ ತಿನ್ನುವಾಗ ಬಾಯಿಗೆ ಯಾವ ಅಪಾಯವೂ ಇಲ್ಲ. ಹಲ್ಲುಗಳು ತುಂಡಾಗಿರುವುವು. ಮುಂದಿನ ಹಲ್ಲುಗಳು ಕತ್ತರಿಯಂತೆ ಇರುವುವು. ಹಿಂದಿನ ಹಲ್ಲುಗಳು ಅಗಿಯುವುದಕ್ಕೆ ಅನುಕೂಲವಾಗಿರುವುವು. ಮುಂದಿನ ಹಲ್ಲುಗಳಿಗೂ ಹಿಂದಿನ ಹಲ್ಲುಗಳಿಗೂ ನಡುವೆ ಸ್ವಲ್ಪ ಸ್ಥಳ ಬಿಟ್ಟಿರುವುದು. ಪ್ರತಿ ದವಡೆಗೂ ಎರಡೆರಡು ಕತ್ತರಿ ಹಲ್ಲುಗಳಿರುವುವು. ಇವುಗಳಿಗೆ ಯಾವಾಗಲೂ ಕೆಲಸವಿದ್ದರೂ ಸವೆಯುವಹಾಗಿಲ್ಲ. ನಮ್ಮ ಬೆರಳಿನ ಉಗುರುಗಳಂತೆ ಇವು ಯಾವಾಗಲೂ ಬೆಳೆಯುತ್ತಿರುವುವು. ಆ ಹಲ್ಲುಗಳಿಗೆ ಕೆಲಸವಿಲ್ಲದೆ ಇದ್ದಾಗ ಅವು ಬಹು ಉದ್ದವಾಗಿ ಬೆಳೆಯುವುವು. ಹಿಂದಿನ ಹಲ್ಲುಗಳು ತುಂಬ ಗಟ್ಟಿಯಾಗಿರುವುವು. ಅವುಗಳ ಮೇಲುಭಾಗವು ಚದರವಾಗಿ ಸ್ವಲ್ಪ ಮೋಟಾಗಿರುವುದರಿಂದ ಎಂತ ಆಹಾರವನ್ನಾದರೂ ಇವು ಕ್ಷಣದಲ್ಲಿ ತುಂಡು ಮಾಡಿ, ಅಗಿಯಲಿಕ್ಕೆ ಅನುಕೂಲವಾಗಿರುವುವು.

ಉಡುತೆಗಳಿಗೆ ನಾಲ್ಕು ಕಾಲುಗಳಿರುವುವು. ಒಂದೊಂದು ಕಾಲಿಗೂ ಗಿಳಿಯ ಮೂತಿಯಂತೆ ಬಾಗಿದ ಉಗುರುಗಳು ಐದೈದಿರುವುವು. ಇವುಗಳ ಮೊನೆಗಳು ಸೂಕ್ಷ್ಮವಾಗಿಯೂ ತೀಕ್ಷ್ಣವಾಗಿಯೂ ಇರುವುದರಿಂದ ಬಹು ಸೂಕ್ಷ್ಮವಾದ ರಂಧ್ರಗಳಲ್ಲಿಯಾದರೂ ಅವುಗಳನ್ನು ಇಟ್ಟು ತೆಗೆಯಲು ಅನುಕೂಲವಾಗಿರುವುದು. ಮುಂಗಾಲುಗಳು ಹಿಂಗಾಲುಗಗಿಂತ ತುಂಡಾಗಿರುವುವು. ಇದರಿಂದ ಉಡುತೆಗಳು ಅತಿ ಸೂಕ್ಷ್ಮವಾಗಿ ಎಷ್ಟು ದೂರಕ್ಕಾದರೂ ದುಮುಕಬಲ್ಲವು. ಮುಂದಿನ ಕಾಲುಗಳನ್ನು ನಾವು ಕೈಗಳನ್ನು ಉಪಯೋಗಿಸುವಂತೆಯೇ ಉಪಯೋಗಿಸಿ, ಹಣ್ಣು ಮುಂತಾದುವುಗಳನ್ನು ಅವುಗಳಲ್ಲಿ ಹಿಡಿದುಕೊಂಡು ತಿನ್ನುತ್ತಿರುವುವು.

ಆಳಿಲುಗಳ ಉಡುತೆಗಳ ಭೇದಗಳು—ನಮ್ಮ ದೇಶದ ಉಡುತೆಗಳ ಬೆನ್ನಿನಮೇಲೆ ಬೆರಳುಗಳಿಂದ ಗೀಚಿದಹಾಗೆ ಮೂರು ಗೆರೆಗಳು ಕಾಣಬರುವುವು. ಇದನ್ನು ಕುರಿತು ರಾಮಾಯಣದ ಕಥೆಯನ್ನು ನೀವೆಲ್ಲರೂ ಕೇಳಿರಬಹುದು (ಇಲ್ಲದಿದ್ದರೆ ಈ ಕಥೆಯನ್ನು ಹೇಳಿರಿ) ಸೀಮೆಯ ಉಡುತೆ ಇಲ್ಲಿನದಕ್ಕಿಂತಲೂ ದೊಡ್ಡದು. ನಮ್ಮ ದೇಶದವುಗಳಲ್ಲಿಯೂ ಹಲವು ಭೇದಗಳುಂಟು. ಒಂದು ಜಾತಿಯ ಉಡುತೆ ಗುಬ್ಬಚ್ಚಿಯಂತೆ ರೆಕ್ಕೆಗಳಿಂದ ಕೂಡಿ ಗಿಡದಿಂದ ಗಿಡಕ್ಕೆ ಹಾರುವುದು. ಇದು ಮಲಬಾರು ದೇಶದಲ್ಲಿ ಹೆಚ್ಚಾಗಿರುವುದು. ನಮ್ಮ ದೇಶದ ಉಡುತೆಗಳಿಗೆ ರೆಕ್ಕೆಗಳಿಲ್ಲ. ಇಲ್ಲಿನ ಉಡುತೆಗಳಲ್ಲಿ ತುಂಬ ದೊಡ್ಡ ಜಾತಿಯವು ಕೆಲವು ಉಂಟು. ಅವುಗಳನ್ನು ಬೆಟ್ಟದುಡುತೆಯೆಂಬುವದು. ಅವುಗಳ ಬೆನ್ನಿನ ಮೇಲೆ ಗೆರೆಗಳಿಲ್ಲ. ಇವುಗಳ ಮೈಬಣ್ಣವೂ ಬೇರೆಯಾಗಿರುವುದು.

ಉಡುತೆಗಳ ಆಹಾರ—ಬಗೆಬಗೆಯ ಕಸುಗಾಯಿಗಳು, ಹಣ್ಣುಗಳು, ಕಾಳುಗಳು, ಹೂವುಗಳು ಇವುಗಳಿಗೆ ಮುಖ್ಯಾಹಾರವಾಗಿರುವುವು. ಕೆಲವು ಗಿಡಗಳ ಚಿಗುರುಗಳನ್ನೂ ತಿನ್ನುವುವು. ಕೆಲವು ಜಾತಿಯ ನೊಳಕೆಗಳನ್ನೂ ತಿನ್ನುವುವು. ಶೀತದೇಶದಲ್ಲಿರುವುವೂ ನಮ್ಮ ದೇಶದವುಗಳಲ್ಲಿ ಕೆಲವೂ ಸಣ್ಣ ಸಣ್ಣ ಹಕ್ಕಿಗಳನ್ನೂ, ಗುಡ್ಡುಗಳನ್ನೂ, ಸಣ್ಣ ಹುಳುಗಳನ್ನೂ ತಿನ್ನುವುವು. ಉಡುತೆಗಳು ತಮ್ಮ ಮುಂಗಾಲುಗಳಿಂದ ಹಣ್ಣುಗಳನ್ನು ಹಿಡಿದು, ಕಚ್ಚಿಕೊಂಡು ತಿನ್ನುವುದನ್ನು ನೋಡಲು ಮನೋಹರವಾಗಿರುವುದು.

ವಾಸಸ್ಥಾನ—ಉಡುತೆಗಳು ಎಲೆಗಳಿಂದಲೂ, ಕಡ್ಡಿಗಳಿಂದಲೂ ಗೂಡುಗಳನ್ನು ಕಟ್ಟಿಕೊಳ್ಳುವುವು. ಇವು ಮರಗಳ ಪೊಟ್ಟರೆಗಳಲ್ಲಿಯೂ, ಅಡವಿಗಳಲ್ಲಿ

ಯೂ, ಮನೆಗಳಲ್ಲಿಯೂ ಗೂಡುಗಳನ್ನು ಕಟ್ಟಿಕೊಂಡು ವಾಸಮಾಡುವುವು. ಇವು ಗೂಡುಗಳನ್ನು ಚಮತ್ಕಾರವಾಗಿ ಕಟ್ಟುವುವು. ಇವುಗಳಿಗೆ ಮಳೆಯ ದೆಸೆಯಿಂದ ಸ್ವಲ್ಪವೂ ಭಯವಿಲ್ಲ. ಶೀತರಾಜ್ಯಗಳಲ್ಲಿ ಅವು ಹಲವುಕಡೆಗಳಲ್ಲಿ ಗೂಡು ಕಟ್ಟಿ, ಅವುಗಳಲ್ಲಿ ತಾವು ಸಂಪಾದಿಸಿದ ಆಹಾರಪದಾರ್ಥಗಳನ್ನು ರಕ್ಷಿಸುವುವು. ಬೇಸಗೆ ಕಾಲದಲ್ಲಿ ಕಷ್ಟಪಟ್ಟು ಸಂಪಾದಿಸಿ, ಭದ್ರಪಡಿಸಿ, ಚಳಿಗಾಲದಲ್ಲಿ ಅವುಗಳನ್ನುಪಯೋಗಿಸಿಕೊಳ್ಳುವುವು. ನಮ್ಮ ದೇಶದಲ್ಲಿ ಯಾವಾಗಲೂ ಹಣ್ಣು ಮುಂತಾದುವು ಸಿಕ್ಕುವುದರಿಂದ ಇಲ್ಲಿ ಅಂತಹ ಅಗತ್ಯವಿಲ್ಲ. ಉಡುತೆ ಒಂದು ಸಲಕ್ಕೆ ನಾಲ್ಕು ಮರಿಗಳನ್ನು ಹಾಕುವುದು. ಇದು ತನ್ನ ಮರಿಗಳನ್ನು ಬಹು ಎಚ್ಚರದಿಂದ ಸಾಕುತ್ತಿರುವುದು.

ಇದರ ಪ್ರಯೋಜನಗಳು—ಉಡುತೆಯ ಕೂದಲು ಬಹಳ ಪ್ರಯೋಜನಕರವಾದ್ದು. ಕೆಲವರು ವರ್ತಕರು ಈ ಉಣ್ಣೆಗಾಗಿಯೇ ಸಾವಿರಾರು ಉಡುತೆಗಳನ್ನು ಕೊಂದು ಅವುಗಳ ಉಣ್ಣೆಯನ್ನು ಸಂಪಾದಿಸಿ, ಮಾರಿ ಹಣ ಸಂಪಾದಿಸುವರು. ನಮ್ಮ ದೇಶದಲ್ಲಿ ಈ ವ್ಯಾಪಾರ ಹೆಚ್ಚಾಗಿಲ್ಲವಾದರೂ ಶೀತರಾಜ್ಯಗಳಲ್ಲಿ ಇವುಗಳ ವ್ಯಾಪಾರ ಬಲವಾಗಿ ನಡೆಯುವುದು. ಈ ಉಣ್ಣೆಯಿಂದ ಬಗೆಬಗೆಯ ಉಡುಪುಗಳು ತಯಾರಾಗುವುವು. ಕೆಲವರು ಟೋಪಿಗಳನ್ನು ಮಾಡುವರು. ಉಡುತೆಯ ಕೂದಲಿಂದ ಬಗೆಬಗೆಯ ಕುಂಚ (ಬ್ರಷ್) ಗಳು ಮಾಡಲ್ಪಡುವುವು. ಚಿತ್ರ ಬರೆಯಲಿಕ್ಕೆ ಇವೇ ಮುಖ್ಯಾಧಾರಗಳು. ಈ ಬಗೆಯ ವ್ಯಾಪಾರ ಹೆಚ್ಚಾಗಿ ನಡೆಯುವುದು.

ಈ ಪಾಠಕ್ಕೆ ಸಂಬಂಧಿಸಿದ ಕೈಕೆಲಸಗಳು.

ಕುಂಚದಿಂದ ಬರೆವುದು—ಉಡುತೆಗಳು ಸಾಧಾರಣವಾಗಿ ತಿನ್ನುವ ಹಣ್ಣುಗಳನ್ನಾಗಲಿ, ಕಾಯಿಗಳನ್ನಾಗಲಿ ಕುಂಚದಿಂದ ಆಯಾಬಣ್ಣಗಳಲ್ಲಿ ಹುಡುಗರಿಂದ ಬರೆಯಿಸುವುದು.

ಕರಿಯ ಹಲಗೆಯ ಮೇಲೆ ಚಿತ್ರ ಬರಿಸುವುದು—ಉಡುತೆಯ ಸ್ವರೂಪವನ್ನು ಬೋರ್ಡಿನಮೇಲೆ ಬರೆಯಿಸುವುದು.

ಜೇಡುಮಣ್ಣಿನ ಕೆಲಸ—ಉಡುತೆಗಳು ತಿನ್ನತಕ್ಕ ಹಣ್ಣುಗಳಲ್ಲಿ ಯಾವುದಾದರೂ ಒಂದರ ರೂಪವನ್ನು ಜೇಡಿಮಣ್ಣಿನಿಂದ ಮಾಡಿಸುವುದು.

ಕಾಗದದ ಕೆಲಸ—ಉಡುತೆಗಳು ದುಮುಕಿಯಾಡುವ ಗಿಡಗಳ ಎಲೆಗಳಲ್ಲಿ ಕೆಲವನ್ನು ಹುಡುಗರು ಕಾಗದಗಳನ್ನು ಮಡಿಸಿ ನಿರ್ಮಿಸುವಂತೆ ಮಾಡಿಸುವುದು.

K. R.

ಪ್ರಶ್ನ ಪತ್ರಿಕೆ.

ಪ್ರೈಮರಿಗ್ರೇಡ್—ಶಿಕ್ಷಣ.

ಕಾಲ 2 ಘಂಟೆ.

I ಪಾಠಕಾಲದಲ್ಲಿ ಪ್ರಶ್ನೆ ಕೇಳುವದರಿಂದಾಗುವ ಪ್ರಯೋಜನಗಳು ಯಾವುವು? 'ಈ ಕಥೆಯಲ್ಲಿ ಏನು ಹೇಳಿದೆ?' 'ಮಳೇಹನಿ ಯೇನಾಗುವದು?'— ಈ ಪ್ರಶ್ನೆಗಳಲ್ಲಿ ತಪ್ಪೇನು?

II ತಪ್ಪು ಉತ್ತರಗಳನ್ನು ಮಕ್ಕಳಿಂದಲೇ ತಿದ್ದಿಸುವದರ ಬೆಲೆಯೇನು? ತಿದ್ದಿಸುವ ಬಗೆ ಹೇಗೆ? ಮಗ್ಗಿಯಲ್ಲಿ ಐದು ಏಳಲು ಎಷ್ಟೆನ್ನು ಕೇಳಿದಾಗ 25 ಎಂದು ತಪ್ಪು ಉತ್ತರ ಬಂದರೆ ಅದನ್ನು ನೀವು ತಿದ್ದುವ ಕ್ರಮವೇನು?

III (a) ಅನುಕರಣ ಗೀತ ಎಂದರೇನು? ಇದನ್ನು ಹೇಳಿಕೊಡುವದರಿಂದ ಮಕ್ಕಳಿಗೆ ಏನುಪ್ರಯೋಜನ?

(b) ಪಕ್ಷಿ, ಅಡಕೆಮರ, ಸುಣ್ಣ—ಇವುಗಳಲ್ಲಿ ಯಾವುದಾದರೊಂದನ್ನು ಕುರಿತು 1 ನೇ ತರಗತಿಗೆ ವಸ್ತುಪಾಠ ಹೇಳುವದಕ್ಕೆ ಅನುಕೂಲಿಸುವಂತ ಟಿಪ್ಪಣಿಯನ್ನು ಕ್ರಮವಾಗಿ ಬರೆಯಿರಿ.

IV ಮಕ್ಕಳಿಗೆ ನೀವು ಅಕ್ಷರಾಭ್ಯಾಸ ಮಾಡಿಸುವ ಕ್ರಮವನ್ನು ವಿಶದವಾಗಿ ತಿಳಿಸಿ. ಇದುವರೆಗೆ ವಾಡಿಕೆಯಾಗಿದ್ದ ಪದ್ಧತಿಯಲ್ಲಿ ದೋಷಗಳೇನು?

V ಕುರುಡುಪಾಠವೆಂದರೇನು? ವ್ಯವಕಲನವನ್ನು ದೃಷ್ಟಾಂತವಾಗಿ ತೆಗೆದುಕೊಂಡು ಕುರುಡುಪಾಠಕ್ಕೂ ಸರಿಯಾದ ಪಾಠಕ್ಕೂ ಇರುವ ವ್ಯತ್ಯಾಸವನ್ನು ವಿವರವಾಗಿ ತಿಳಿಸಿ.

VI ಪಾಠಶಾಲೆಯ ನಕ್ಷೆಯನ್ನು ಬರೆದು ಅದರಮೂಲಕ ಭೂಪಠದ ಅಭಿಪ್ರಾಯವನ್ನು ಮಕ್ಕಳಿಗೆ ತಿಳಿಸಬೇಕೆಂದಿದೆ—ಇದನ್ನು ಹೇಗೆ ನಡೆಯಿಸುವುದೆಂಬುದನ್ನು ಸಂಗ್ರಹವಾಗಿ ಬರೆಯಿರಿ.

ಸಂವಿಧಾನ ಮತ್ತು ತಿದ್ದುವಿಕೆ.

2 ಘಂಟೆ ಕಾಲ.

I (1) 'ಪಾಠಶಾಲಾ ಸಂವಿಧಾನ', 'ತಿದ್ದುವಿಕೆ' ಎಂದರೇನು? ಇವುಗಳಲ್ಲಿ ಸೇರುವ ವಿಷಯಗಳನ್ನೆಲ್ಲಾ ತಿಳಿಸಿ.

(2) ಶಿಕ್ಷಣ, ತಿದ್ದುವಿಕೆ, ಸಂವಿಧಾನ ಇವುಗಳಿಗಿರುವ ಪರಸ್ಪರ ಸಂಬಂಧವೇನು?

II (1) ಕಪ್ಪು ಹಲಿಗೆಯ ಪ್ರಯೋಜನಗಳೇನು!

(2) ಲೋವರ್‌ಪ್ರೈಮರಿ ಪಾಠಶಾಲೆಗಳಲ್ಲಿ ಗಣಿತವನ್ನು ಬೋಧಿಸುವದಕ್ಕೆ ಪಾಠಸಾಮಗ್ರಿಗಳು ಅಥವಾ ಉಪಕರಣಗಳಾವವು? ನೀವು ಹೇಳುವ

ಪ್ರತಿಯೊಂದು ಸಾಮಗ್ರಿಯ ಉಪಯೋಗವನ್ನು ಒಂದೆರಡು ಮಾತುಗಳಲ್ಲಿಯೇ ತಿಳಿಸಿ.

III (1) ವೇಳಾಪತ್ರಿಕೆಯಿಲ್ಲದೆ ಪಾಠಗಳನ್ನು ನಡೆಸುವ ಪಾಠಶಾಲೆಗಳಲ್ಲಿ ಯಾವ ಕೊರತೆಗಳುಂಟಾಗಬಹುದು?

(2) ಒಂದನೆಯ ತರಗತಿಗೆ ಇಟ್ಟಿರುವ ಪಾಠ ವಿಷಯಗಳನ್ನು ತಿಳಿಸಿ, ಅವುಗಳಲ್ಲಿ ವಾಚನಿಕಬೋಧನೆಯರೀತ್ಯಾ ಬೋಧಿಸತಕ್ಕವುಗಳಾವವು ಎಂಬುದನ್ನು ಸೂಚಿಸಿರಿ.

IV (1) ಲೋವರ್ ಪ್ರೈಮರಿ ಪಾಠಶಾಲೆಗಳಲ್ಲಿ ಇಡಬೇಕಾದ ರಿಜಿಸ್ಟರುಗಳಾವವು? ಇವುಗಳನ್ನಿಡುವದರ ಉದ್ದೇಶಗಳೇನು?

(2) “ಸರಾಸರಿ” ಎಂದರೇನು? ಒಂದು ತಿಂಗಳಾದ ಮೇಲೆ ಆ ತಿಂಗಳಲ್ಲಿ ಪ್ರತಿಯೊಬ್ಬ ಬಾಲಕನು ಸರಾಸರಿ ಎಷ್ಟು ದಿನಗಳು ಹಾಜರಾಗಿದ್ದನೆಂಬ ಸಂಖ್ಯೆಯನ್ನು ಹೇಗೆ ಕಂಡುಹಿಡಿಯುವಿರಿ?

(3) ಹಾಜರ್ ಗೈರ್‌ಹಾಜರ್ ರಿಜಿಸ್ಟರಿನ ಕೆಳಭಾಗದಲ್ಲಿ ತಿಂಗಳ ಕೊನೆಯಲ್ಲಿ ಲೆಕ್ಕಮಾಡಿ ಹಾಕತಕ್ಕ ಬಾಬುಗಳಾವವು? ಅವುಗಳನ್ನು ಕಂಡುಹಿಡಿಯುವದು ಹೇಗೆ?

V (1) ಒಂದು ಪಾಠಶಾಲೆಯ ಅಧ್ಯಕ್ಷನು ಬೇರೊಂದು ಪಾಠಶಾಲೆಯಿಂದ ತನ್ನ ಪಾಠಶಾಲೆಗೆ ಸೇರುವದಕ್ಕೆ ಬಂದ ಬಾಲಕನ ವಿಷಯದಲ್ಲಿ ನಡೆಸಬೇಕಾದ ಕ್ರಮವನ್ನು ತಿಳಿಸಿ.

(2) ಒಬ್ಬ ಬಾಲಕನು ಪಾಠಶಾಲೆಯನ್ನು ಬಿಟ್ಟುಹೋಗುವವನಾಗಿ ಅಪ್ಪಣೆ ಚೀಟಿಯನ್ನು ಕೇಳಿದರೆ ಆ ಪಾಠಶಾಲೆಯ ಅಧ್ಯಕ್ಷನು ಈ ಬಾಲಕನಿಗೆ ಬರೆದು ಕೊಡಬೇಕಾದ ಚೀಟಿಯ ನಕಲನ್ನು ಬರೆಯಿರಿ.

ಈ ಚೀಟಿಯನ್ನು ಬರೆದು ಕೊಡುವದಕ್ಕೆ ಮುಂಚೆ ಯಾವ ಯಾವ ರಿಜಿಸ್ಟರುಗಳನ್ನು ನೋಡಬೇಕಾಗುವದು? ಸಕಾರಣವಾಗಿ ತಿಳಿಸಿ.

VI (1) ಬಾಲಕರು ಪಾಠಶಾಲೆಗೆ (*a*) ತಪ್ಪಿಸಿಕೊಳ್ಳದಂತೆಯೂ (*b*) ನಿಯಮಿತ ಕಾಲಕ್ಕೆ ಸರಿಯಾಗಿ ಬರುವಂತೆಯೂ ಮಾಡುವದಕ್ಕೆ ಉಪಾಧ್ಯಾಯರು ನಡೆಸಬೇಕಾದ ಕಾರ್ಯಗಳೇನು?

(2) ದೇಹದಂಡನೆಯ ರಿಜಿಸ್ಟರನ್ನು ಇಡುವದರ ಉದ್ದೇಶವೇನು? ಬಾಲಕರಿಗೆ ಅವರಲ್ಲಿ ಕಂಡುಬರುವ ಯಾವ ಅಪರಾಧಗಳಿಗಾಗಿ ದೇಹದಂಡನೆಯನ್ನು ವಿಧಿಸಬಹುದು?

ನಮ್ಮ ಪುಟ್ಟ ಪ್ರಭು.

(The Little Duke.)

ಯೂರೋಪ್ ಖಂಡದಲ್ಲಿ ಫ್ರಾನ್ಸ್ (France) ಎಂಬುದು ಒಂದು ಸಂಸ್ಥಾನ. ಈ ರಾಜ್ಯವು ಈಗ್ಗೆ ಸುಮಾರು 950 ವರುಷಗಳ ಕೆಳಗೆ ಅನೇಕ ಸಣ್ಣ ಸಣ್ಣ ರಾಜ್ಯಗಳಾಗಿ ಒಡೆದುಹೋಗಿತ್ತು. ಈ ರಾಜರುಗಳು ಒಬ್ಬರಿಗೊಬ್ಬರು ಜಗಳವಾಡುತ್ತಿದ್ದರು. ಹೀಗಿರಲು ನಾರ್ಮಂಡೀ (Normandy) ದೇಶಕ್ಕೆ ಪ್ರಭುವಾದ ವಿಲಿಯಂ ಎಂಬುವನು, ಇನ್ನು ಇಬ್ಬರು ರಾಜರುಗಳ ಜಗಳವನ್ನು ತೀರಿಸಲು ಹೊರಡಬೇಕಾಗಿ ಬಂತು. ಅವನು ಅಲ್ಲಿಗೆ ಹೋಗುವುದಕ್ಕೆ ಮುಂಚೆ ತನ್ನ ಒಬ್ಬನೇ ಮಗನಾದ ರಿಚ್ಚರ್ಡ್ನ ವಿದ್ಯಾಸ್ಥಾನವಾದ ಬೇಯೋವಿಗೆ ತೆರಳಿದನು. ಅಲ್ಲಿ ವಾಸವಾಗಿದ್ದ ಎರಿಕ್ ಅವನ ತಾಯಿಯೂ, ಅವನ ಮಗನಾದ ಅಸ್ಮಂಡ್ (Osmond) ಇವರುಗಳ ವಶದಲ್ಲಿ ವಿಲಿಯಂನು ಅವನಮಗನನ್ನು ಬಿಟ್ಟಿದ್ದನು.

ಈ ಧೊರೆಯು ಬೇಯೋ ಕಟ್ಟಡದಲ್ಲಿ ಒಂದೇ ದಿವಸ ಇದ್ದನು. ಆ ದಿವಸ ತನ್ನ ಮಗನ ಜೊತೆಗೆ ಮಾತಾಡುವಲ್ಲಿ ತನ್ನ ಮಗನೂ ಕ್ಷಮೆಯನ್ನೆ ಅರಿತವನಲ್ಲವೆಂದು ತಿಳಿದು ಅವನಿಗೆ ತಪ್ಪುಮಾಡುವವರನ್ನು ಕ್ಷಮಿಸಬೇಕೆಂದು ಹೇಳಿ, ಆ ಸಂದರ್ಭದಲ್ಲಿಯೇ ಅವನ ಮಗನಿಗೆ ಹೇಳಿದ್ದೇನಂದರೆ " ಈ ಜಗಳಗಳಲ್ಲಿ ನನ್ನನ್ನು ಯಾರಾದರೂ ಕೊಂದರೆ ಅವರನ್ನು ನೀನು ಮನಃಪೂರ್ವಕವಾಗಿ ಕ್ಷಮಿಸು. " ಎಂದನು.

ವಿಲಿಯಂನು ಮಾರನೆಯ ದಿವಸವೆ ತೆರಳಿದನು. ಹದಿನೈದು ದಿವಸವಾದ ಮೇಲೆ ಅವನ ಹಿಂಬಾಲಕರು ಬಂದು, ಶೋಚನೀಯವಾದ, ಧೊರೆಯ ಮರಣ ವೃತ್ತಾಂತವನ್ನು ಬೇಯೋ ನಿವಾಸಿಗಳಿಗೆ ತಿಳಿಸಿದರು. ಮಾರನೆಯ ದಿವಸವೇ ರಿಚ್ಚರ್ಡ್ನನ್ನು ರೂನ್ ನಗರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಮೊದಲು ರಿಚ್ಚರ್ಡ್ನನ್ನು ಆ ಪಟ್ಟಣದ ದೇವಾಲಯಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅವನ ತಂದೆಯ ಶವವನ್ನು ತೋರಿಸಿ, ಅವನಿಗೆ ರಾಜ್ಯಾಭಿಷೇಕವನ್ನು ಮಾಡಿದರು. ಅಲ್ಲಿ ಸೇರಿದ್ದ ಮಹಾಜನಗಳಲ್ಲಿ, ರಿಚ್ಚರ್ಡ್ನು ತನಗೆ ಸಮವಯಸ್ಕನಾದ ಒಬ್ಬ ಹುಡುಗನನ್ನು ನೋಡಿ ಅವನು ತನ್ನ ಊರಿಗೆ ಹೋಗುವಾಗ ಅವನನ್ನು ಕರೆಯಿಸಿ ತನ

ಜೊತೆಗೆ ಆಟವಾಡುವುದಕ್ಕೆ ಬಾ ಎಂದು ಕೇಳಿದನು. ಅವನು ತನ್ನ ಊರಿಗೆ ಹೋಗಿ ತನ್ನ ತಾಯಿಯನ್ನು ಕೇಳಿಕೊಂಡು, ಅರಮನೆಗೆ ಬಂದನು.

ಹೀಗಿರಲು ಒಂದಾನೊಂದು ದಿನ, ಫ್ರಾನ್ಸ್‌ದೇಶದ ಧೊರೆಯಾದ ಲೂಯಿಸ್ (Louis) ಎಂಬುವನು ರಿಚರ್ಡ್ಡನನ್ನು ತಾನು ಕರೆದುಕೊಂಡು ಹೋಗಿ, ಅವನನ್ನು ತನ್ನ ಮಕ್ಕಳುಗಳ ಜೊತೆಗೆ ತಯಾರಮಾಡುವವನೆಂದು ಹೇಳಿ, ಅಸಹಾಯನಾದ ಅವನನ್ನು ಕರೆದುಕೊಂಡುಹೋದನು. ರಿಚ್ಚರ್ಡ್ಡ ಜೊತೆಗೆ ಆಸ್ಮಂಡ್ ಹೊರಟನು. ಇವರು ಲಯೋನ್ (Laon) ಪಟ್ಟಣಕ್ಕೆ ಬಂದರು. ಅಲ್ಲಿ ದೊರೆಯ ಮಕ್ಕಳುಗಳ ಜೊತೆಗೆ ರಿಚ್ಚರ್ಡ್ಡನು ಇದ್ದನು. ಆ ಧೊರೆಗೆ ಇಬ್ಬರು ಮಕ್ಕಳು. ದೊಡ್ಡವನು ಅಹಂಕಾರಿ ಸ್ವಕಾರ್ಯದುರಂಧರ. ಚಿಕ್ಕವನು ಕೈಲಾಗದವನು. ರಿಚ್ಚರ್ಡ್ಡನಿಗೂ, ದೊಡ್ಡ ಮಗನಾದ ಲೊಥೇರ್ (Lothaire) ಗೂ ನೋಡುತ್ತಲೇ ಆಗಲಿಲ್ಲ. ಒಬ್ಬರಿಗೊಬ್ಬರಿಗೆ ಜಗಳವಾಗುತ್ತಿತ್ತು. ಒಂದು ದಿವಸ ರಿಚ್ಚರ್ಡ್ಡನು ಆ ಲೊಥೇರ್ ನನ್ನು ಕೆಡವಿಬಿಟ್ಟನು. ಆದರೆ ಚಿಕ್ಕವನಿಗೆ ರಿಚ್ಚರ್ಡ್ಡನು ಬಹಳ ದಯಾಳುವಾಗಿದ್ದನು. ಹೀಗಿರಲು ಒಂದಾನೊಂದು ದಿನ ವಿಲಿಯಂನ ಕೊಲೆಪಾತಕನಾದ ಫ್ಲಾಂಡರ್ಸ್ ಧೊರೆಯು(Duke of Flanders)ಲೂಯಿಯ ಅರಮನೆಗೆ ಬಂದನು. ಆ ದಿವಸ ರಿಚರ್ಡ್ಡನ ಇಬ್ಬರು ಹಿಂಬಾಲಕರು ಕೊಂದುಹಾಕಲ್ಪಟ್ಟರು. ಇದರಿಂದ ಲೂಯಿಯುರಿಚ್ಚರ್ಡ್ಡನ ಹಿಂಬಾಲಕರನ್ನು ಕೊಂದುಹಾಕಿ ರಿಚ್ಚರ್ಡ್ಡನನ್ನು ವಶಮಾಡಿಕೊಳ್ಳಬೇಕೆಂದು ಇದ್ದುದು ವ್ಯಕ್ತವಾಯಿತು.

ಹೀಗಿರಲು ರಿಚ್ಚರ್ಡ್ಡನು ಬಹಳ ಕಾಯಿಲೆ ಬಿದ್ದನು. ಇವನಿಗೆ ವಿಷವನ್ನು ಕೊಟ್ಟರೆಂದು ಆಸ್ಮಂಡನು ತಿಳಿದುಕೊಂಡನು. ಆದರೆ ಸ್ವಲ್ಪ ದಿವಸದಲ್ಲಿಯೇ ರಿಚ್ಚರ್ಡ್ಡನು ಸುವಾರಾಗಿ ಸ್ವಸ್ಥವಾದನು. ಆಸ್ಮಂಡನು ಇನ್ನು ಈ ಅರಮನೆಯಲ್ಲಿ ಇರುವುದು ಸರಿಯಲ್ಲವೆಂದು ತಿಳಿದು ರಿಚ್ಚರ್ಡ್ಡನನ್ನು ಹುಲ್ಲಿನಲ್ಲಿ ಮಲಗಿಸಿಕೊಂಡು ಆ ಹುಲ್ಲುಹೊರೆಯನ್ನು ತನ್ನ ಕುದುರೆಯಮೇಲೆ ಇಟ್ಟುಕೊಂಡು ನಾರ್ಮಂಡಿ ಕಡೆಗೆ ಓಡಿಸಿದನು. ಅರ್ಧ ದಾರಿಯಲ್ಲಿ ರಿಚ್ಚರ್ಡ್ಡನನ್ನು ಕುದುರೆಯಿಂದ ಇಳಿಸಿ, ಹುಲ್ಲನ್ನು ಬಿಚ್ಚಿ ಆಸ್ಮಂಡನು ತಿರುಗ ಕುದುರೆಯನ್ನು ಹತ್ತಿದನು. ಕುದುರೆಯು ಊರಿಗೆ ಹೋಗುವುದಕ್ಕೆ ಮುಂಚೆ ಸೋತುಹೋಯಿತು. ಏನುಮಾಡಬೇಕು? ದೈವಾದೃಷ್ಟ! ಎದುರಿಗೆ ಒಂದು ವರ್ತಕರ ಗುಂಪು ಬರುತ್ತಿತ್ತು. ಆಸ್ಮಂಡನು ತನ್ನ ಕುದುರೆಯನ್ನು ಬದಲಾಯಿಸಿಕೊಂಡು ಹೊರಟನು. (ಸಶೇಷ).

ವಿದ್ಯಾದಾಯಿನಿ.

(A MONTHLY JOURNAL)

ಭಾಗ ೧೨] ಫಿಬ್ರುವರಿ—೧೯೦೯ [ಸಂಚಿಕೆ—೨

ಪಾಠಶಾಲೆಯ ಆರೋಗ್ಯ.

ಪಾಠಶಾಲೆಯ ಮಕ್ಕಳ ಆರೋಗ್ಯವಿಚಾರದಲ್ಲಿ ಮದ್ರಾಸು ವಿದ್ಯಾಭ್ಯಾಸವಿಷಯಕವಾದ ಪ್ರದರ್ಶನಕಾಲದಲ್ಲಿ ಮ। ರಾ॥ ಪಿ. ಎಸ್. ಚಂದ್ರಶೇಖರ್, ಎಂ. ಡಿ ಯವರು ಬಹು ಶ್ಲಾಘ್ಯವಾದ ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸವನ್ನು ಎಲ್ಲಾ ಉಪಾಧ್ಯಾಯರೂ ಓದಬೇಕಾದುದು ಆವಶ್ಯಕವಾದುದರಿಂದ ಅದರ ಸಾರಾಂಶವನ್ನು ಇಲ್ಲಿ ಬರೆಯುವೆವು.

"ಲೋಕಯಾತ್ರೆಯಲ್ಲಿ ಜಯಕ್ಕೆ ಆರೋಗ್ಯವೇ ಮುಖ್ಯಕಾರಣವು ವಿಶೇಷ ಆರೋಗ್ಯವುಳ್ಳ ಜನಸಮುದಾಯವೇ ವಿಶೇಷ ಅಭಿವೃದ್ಧಿಯನ್ನು ಹೊಂದುವುದು. ಅತ್ಯುತ್ತಮವಾದ ಮನುಷ್ಯನಾಗುವಂತೆ ಪ್ರಯತ್ನಿಸುವುದೇ ಪಾಠಶಾಲೆಯ ಪರಮೋದ್ದೇಶವು ದೈಹಿಕ ಮಾನಸಿಕ ಶಕ್ತಿಗಳನ್ನು ವೃದ್ಧಿಗೊಳಿಸುವುದೇ ಪಾಠಶಾಲೆಯ ಮುಖ್ಯ ಕೆಲಸವು. ಪಾಠಶಾಲೆಯಲ್ಲಿ ಜ್ಞಾನಾರ್ಜನೆಯು ಆರೋಗ್ಯಕ್ಕೆ ಎರಡನೆಯಸ್ಥಳದಲ್ಲಿರಬೇಕು. ಆರೋಗ್ಯದೃಢಕಾಯನಲ್ಲದ ಮನುಷ್ಯನ ಜ್ಞಾನದಿಂದ ವಿಶೇಷಪ್ರಯೋಜನವಾಗಲಾರದು. ಊಹೆಗೆ ಮುಖ್ಯವಾದ ಅಂಗವು ಮಿದುಳು. ಈ ಮಿದುಳಿನ ಪೋಷಣೆಗೆ ಶುದ್ಧವಾದ ರಕ್ತವು ವಿಶೇಷ ಅವಶ್ಯಕವು. ಆರೋಗ್ಯಸ್ಥಿತಿಯಲ್ಲಿಯೇ ಇಂತಹ ರಕ್ತವು ದೇಹದಲ್ಲಿ ಇರುವುದು. ಮಕ್ಕಳು ಪಾಠಶಾಲೆಯಲ್ಲಿ ಓದುವಕಾಲವೇ (5 ರಿಂದ 16 ವರ್ಷ ವಯಸ್ಸು) ಅವರು ವಿಶೇಷವಾಗಿ ಬೆಳೆಯುವ ಕಾಲವಾಗಿರುವುದು. ಈಕಾಲದಲ್ಲಿ ಅವಯವಗಳ ಬೆಳವಣಿಗೆಯೂ,

ಕಾರ್ಯದಕ್ಷತೆಯೂ ಹೆಚ್ಚುತಿರುವುದು. ಅನೇಕ ಅವಯವಗಳು ಇನ್ನೂ ಎಳಸಾಗಿರುವುದರಿಂದ ಅಕ್ರಮವಾದ ಉಪಯೋಗದಿಂದ ಕೆಡುವುವು. ನೇತ್ರಪಾಟವವು ಕಡಮೆಯಾಗಬಹುದು. ಶರೀರದ ಕ್ರಮವಾದ ಬೆಳೆವಳಿಕೆಗೆ ಅಡ್ಡಿಯುಂಟಾಗಬಹುದು. ಎಲುಬುಗಳು ವಿಕಾರವಾಗಬಹುದು ಅಥವಾ ಬಾಗಬಹುದು. ಅಂಟು ಜಾಡ್ಯಗಳು ಸದಾ ನಿಲ್ಲುವ ಕುಂದನ್ನುಂಟುಮಾಡಬಹುದು. ಹೃದಯಜಾಡ್ಯ ಮೊದಲಾದ ಜಾಡ್ಯಗಳುಂಟಾಗಬಹುದು. ಕ್ಷಯ, ಮೊದಲಾದ ಕ್ರೂರಜಾಡ್ಯಗಳ ಅಂಕುರವು ಇಲ್ಲಿ ಉದ್ಭವಿಸಬಹುದು. ವಂಶಪಾರಂಪರ್ಯವಾಗಿ (ಬರುವ) ಜಾಡ್ಯಗಳ ಬೆಳೆವಳಿಕೆಗೆ ಕಾರಣವು ಉಂಟಾಗಬಹುದು.

ಆದುದರಿಂದ ಬಾಲ್ಯದಿಂದಲೂ ಆರೋಗ್ಯವನ್ನು ಹೆಚ್ಚಿಸಿಕೊಳ್ಳುವ ಸ್ವಭಾವವನ್ನು ಮಕ್ಕಳಲ್ಲಿ ಉಂಟುಮಾಡಬೇಕು. ಉಪಾಧ್ಯಾಯರಿಗೆ ಮನಶ್ಶಾಸ್ತ್ರ, ಶಾರೀರಕಶಾಸ್ತ್ರ, ಆರೋಗ್ಯಶಾಸ್ತ್ರಗಳ ತತ್ವಗಳು ತಿಳಿದಿರಬೇಕು. ಟ್ರೇನಿಂಗ್ ಕಾಲೇಜುಗಳಲ್ಲಿ ಇತರಪಾಠಗಳ ಜತೆಗೆ ಆರೋಗ್ಯಶಾಸ್ತ್ರದವಿಷಯದಲ್ಲೂ, ಶಾರೀರಕಶಾಸ್ತ್ರದ ವಿಷಯದಲ್ಲೂ, ಉಪನ್ಯಾಸಗಳು ನಡೆಯುವುದು ಆವಶ್ಯಕವೆಂದು ತೋರುವುದು.

ಪಾಠಶಾಲೆಯ ಆರೋಗ್ಯವಿಚಾರದಲ್ಲಿ ಮುಂದಿನ ಒಂಭತ್ತು ಅಂಶಗಳನ್ನು ಉಪಾಧ್ಯಾಯರು ಗಮನಿಸಬೇಕಾಗುವುದು.

(1) ಪಾಠಶಾಲೆಯ ಕಟ್ಟಡವನ್ನು ಕ್ರಮವಾದ ರೀತಿಯಲ್ಲಿ ಏರ್ಪಡಿಸುವುದು, ಒಳ್ಳೇಗಾಳಿ, ಸಾಕಾದಷ್ಟು ಬೆಳಕು ಇವುಗಳನ್ನು ಒದಗಿಸಿಕೊಡುವುದು, ಪಾಠಶಾಲೆಯ ನೈರ್ಮಲ್ಯಕ್ಕೆ ಗಮನಕೊಡುವುದು.

(2) ಅನುಕೂಲವಾದ ಬೆಂಚು, ಡೆಸ್ಕುಗಳನ್ನೇರ್ಪಡಿಸುವುದು.

(3) ಕ್ರಮವಾದ ವೇಳಾಪತ್ರಿಕೆಯನ್ನು ರಚಿಸುವುದು.

(4) ವಿಶೇಷ ಹೆಚ್ಚಾದ ಅಥವಾ ಅಕ್ರಮವಾಗಿ ನಡೆಯುವ ಕೆಲಸದಿಂದ ಆಗುವ ಕೇಡನ್ನು ತಿಳಿಯುವುದು.

(5) ಅಂಗಸಾಧನೆಯ ಬೆಲೆಯನ್ನು ಅರಿಯುವುದು.

(6) ವಿಶ್ರಾಂತಿಯ ಆವಶ್ಯಕತೆಗೆ ಗಮನಕೊಡುವುದು.

(7) ಸರಿಯಾದ ಆಟ್ಟಿಕೆಯಿರುವಂತೆ ನೋಡಿಕೊಳ್ಳುವುದು.

(8) ಪಾಠಶಾಲೆಯ ಬಾಲಕರನ್ನು ಆಗಾಗ್ಗೆ ವೈದ್ಯರು ಪರೀಕ್ಷಿಸುವಂತೆ ಮಾಡುವುದು.

(9) ಅಂಟುಜಾಡ್ಯಗಳು ಹರಡದಂತೆ ನೋಡಿಕೊಳ್ಳುವುದು.

ಇವುಗಳಲ್ಲದೆ ಬೋರ್ಡಿಂಗ್ ಸ್ಕೂಲುಗಳಲ್ಲಿ ಮಕ್ಕಳವಾಸ, ಊಟ, ಉಡುಪು, ರೋಗಕಾಲದಲ್ಲಿ ಉಪಚಾರ, ಇವುಗಳ ವಿಷಯದಲ್ಲಿಯೂ ಗಮನಕೊಡಬೇಕಾಗುವುದು.

ಪಾಠಶಾಲೆಯು ಇರುವ ಸ್ಥಳವು ತಕ್ಕಷ್ಟು ವಿಶಾಲವಾಗಿ ಇರಬೇಕು, ಆರೋಗ್ಯಕರವಾದುದಾಗಿ ಇರಬೇಕು. ವಿಶೇಷ ಸಾವಯುವ ವಸ್ತುಗಳಿಂದಕೂಡಿದ ನೀರೋಟವಿಲ್ಲದ ತೇವವಾದ ನೆಲವು ಅನುಕೂಲವಾದುದಲ್ಲ. ಈಸ್ಥಳದಲ್ಲಿ ಇರುವ ಪಾಠಶಾಲೆಯಿಂದ ಮಕ್ಕಳಿಗೆ ಕೆಮ್ಮಲು ಮೊದಲಾದ ಶ್ವಾಸಕೋಶಜಾಡ್ಯಗಳುಂಟಾಗುವುವು. ತಿಕ್ಕಿದ ವಸ್ತುಗಳಿಂದ ತುಂಬಿದ ಹಳ್ಳಗಳಮೇಲೆ ಪಾಠಶಾಲೆಯನ್ನು ಕಟ್ಟುವುದು ಸರಿಯಲ್ಲ. ರೈಲ್ವೇಸ್ಟೇಷನ್, ಜನಗಳ ಮತ್ತು ಗಾಡಿಗಳ ವಿಶೇಷ ತಿರುಗಾಟವುಳ್ಳ ರಸ್ತೆಗಳು, ಕಾರ್ಖಾನೆಗಳು ಇವುಗಳ ಸಮೀಪದಲ್ಲಿ ಪಾಠಶಾಲೆಯನ್ನು ಕಟ್ಟುವುದರಿಂದ ಪಾಠಶಾಲೆಯ ಕೆಲಸಕ್ಕೆ ತೊಂದರೆಯಾಗುವುದಲ್ಲದೆ ಮಕ್ಕಳ ನರಗಳಿಗೂ ಕೆಲಸವು ಹೆಚ್ಚುವುದು. ಮೇಲಾಗಿ ರಸ್ತೆಗಳ ಸಮೀಪದಲ್ಲಿರುವ ಪಾಠಶಾಲೆಯೊಳಕ್ಕೆ ವಿಶೇಷಧೂಳನ್ನೊಳಗೊಂಡಿರುವ ಗಾಳಿಯು ಬಂದು ಮಕ್ಕಳ ಆರೋಗ್ಯವನ್ನು ಕೆಡಿಸಬಹುದು. ಬೆಳಕಿಗೂ ತೊಂದರೆಯಾಗಬಹುದು. ಸುತ್ತಲೂ ಮೈದಾನವಿರುವ ಸ್ಥಳದಲ್ಲಿ ಪಾಠಶಾಲೆಯನ್ನು ಕಟ್ಟುವುದು ಅನುಕೂಲವು. ಕಟ್ಟಡದ ಸುತ್ತಲೂ 60 ಅಡಿಯ ದೂರದಲ್ಲಿ ಮರಗಳಿರಬಾರದು. ಇವುಗಳಿಂದ ಬೆಳಕಿಗೆ ತೊಂದರೆಯುಂಟಾಗಬಹುದು. 250 ಹುಡುಗರಿಗೆ ಕನಿಷ್ಟಪಕ್ಷ ಕಾಲುಎಕರೆ ಸ್ಥಳವು ಬೇಕಾಗುವುದು, ಆಟದ ಮೈದಾನದಲ್ಲಿ ಹುಲ್ಲು ಬೆಳಸಿರಬೇಕು. ನೀರೋಟವು ಸರಿಯಾಗಿರಬೇಕು. ಈ ಮೈದಾನದಮೇಲಿರುವ ವಾಯುವೇ ಪಾಠಶಾಲೆಯೊಳಕ್ಕೆ ಬರುವುದರಿಂದ ಇಲ್ಲಿನ ವಾಯುವು ಪರಿಶುದ್ಧವಾಗಿರುವುದು ಅವಶ್ಯಕವು. ಕಟ್ಟಡವನ್ನು ಕಟ್ಟುವಾಗ ಬಲವಾದ ತಳಹದಿ, ನೀರನ್ನು ಹೀರದಗೋಡೆ, ಸೋರದ ಮೇಲಾವಣಿ, ಬೇಗ ಒಡೆದುಹೋಗದ ನೆಲ ಇವು ಅವಶ್ಯಕವು. ಯಾವುದೋ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ ಪಾಠಶಾಲೆಯನ್ನು ನಡೆಸುವುದು ಅನೇಕವೇಳೆ ಪ್ರಯೋಜನಕರವಲ್ಲ. ಇಂತಹ ಮನೆಯನ್ನು ಪಾಠಶಾಲೆಗೆ ಅನುಕೂಲಿಸುವಂತೆ ಮೊದಲು ಸರಿಪಡಿಸಿಕೊಳ್ಳಬೇಕು. ಮುಖ್ಯವಾಗಿ ಬೆಳಕು, ಗಾಳಿ, ಇವುಗಳವಿಷಯದಲ್ಲಿ ಸರಿಯಾದ ಅನುಕೂಲ್ಯವನ್ನು ಕಲ್ಪಿಸಿಕೊಳ್ಳಬೇಕಾಗುವುದು.

ತಿಳಿಯು ಶುಭ್ರವಾಗಿಯೇ ಇರಬೇಕು. ಅದರಲ್ಲೇನಾದರೂ ಬಣ್ಣದಲ್ಲಿ ಸ್ವಲ್ಪ ವ್ಯತ್ಯಾಸವುಂಟಾದರೆ ಕೊಠಡಿಯ ಗಾಳಿಯು ನಿಶ್ವಾಸಕ್ಕೆ ಅರ್ಹವಲ್ಲವೆಂದು ಊಹಿಸ ಬೇಕಾಗುವುದು. ಕೊಠಡಿಗೆ ಎದರುಬದುರಾದ ಕಿಟಕಿಗಳನ್ನೂ ಬಾಗಿಲುಗಳನ್ನೂ ಇಡುವುದರಿಂದ ವಾಯುಸಂಚಾರವು ತೃಪ್ತಿಕರವಾಗಿರುವುದು. ಛಾವಣಿಯು ಕನಿಷ್ಠ ಪಕ್ಷ 12 ಅಡಿ ಎತ್ತರದಲ್ಲಿರಬೇಕು. ಇದರ ಪಕ್ಕದಲ್ಲಿ ಕೆಟ್ಟ ಗಾಳಿಯು ಹೋಗು ವುದಕ್ಕನುಕೂಲವಾಗಿ ವೆಂಟಿಲೇಟರುಗಳು ಇರಬೇಕು.

ಪಾಠಶಾಲೆಯಲ್ಲಿ ಪರಿಶುದ್ಧವಾದ ಕುಡಿಯುವ ನೀರು ದೊರೆಯುವಂತೆ ಇರ ಬೇಕು. ಒಂದು ಸಣ್ಣ ಕೊಠಡಿಯನ್ನು ನೀರಿಗೋಸ್ಕರವಾಗಿಯೇ ಇಟ್ಟುಕೊಂಡು ಅದರಲ್ಲಿ ಒಂದು ಫಿಲ್ಟರನ್ನು ಇಟ್ಟು ಅದಕ್ಕೆ ಪ್ರತಿನಿತ್ಯವೂ ಕುದಿಸಿದ ನೀರನ್ನು ಹಾ ಕುವಂತೆ ಮಾಡಬೇಕು. ಈ ಫಿಲ್ಟರನ್ನು ಆಗಾಗ್ಗೆ ಶುದ್ಧಿಮಾಡುತಿರಬೇಕು.

ಕಕ್ಕಸ್, ಪಾಠಶಾಲೆಗೆ ಕನಿಷ್ಠಪಕ್ಷ 20 ಗಜ ದೂರದಲ್ಲಿರಬೇಕು. ಜಲಬಾ ಧೆಗೆ ಬೇರೆ, ಮಲಬಾಧೆಗೆ ಬೇರೆ ಸ್ಥಳವನ್ನು ಏರ್ಪಡಿಸಬಹುದು. ಇವನ್ನು ಪ್ರತಿ ದಿನವೂ ಎರಡಾವೃತ್ತಿ ಶುಚಿ ಮಾಡಿಸಬೇಕು. ಮೇಲೆ ತಲೆಗೆ ಆಸರೆಯಿರುವಷ್ಟು ಛಾವಣಿ ಇರಬೇಕು.

ಪಾಠಶಾಲೆಯ ನೆಲವನ್ನು ಪ್ರತಿದಿವಸವೂ ಗುಡಿಸಬೇಕು. ಸಾಮಾನುಗಳನ್ನು ಪ್ರತಿ ದಿವಸವೂ ಧೂಳೊರೆಸಬೇಕು. ಕರಿಹಲಗೆಯು ಅದರಮೇಲೆ ಬರೆದ ಅಂಶವು ಮಕ್ಕಳಿಗೆ ಸುಲಭವಾಗಿ ಕಾಣಿಸುವಷ್ಟು ದೂರದಲ್ಲಿರಬೇಕು. ಮಿಂಚುವಂತಿರಬಾ ರದು. ನೆಲಮಟ್ಟದಿಂದ ನಾಲ್ಕು ಅಡಿ ಎತ್ತರದಲ್ಲಿ ಇರಬೇಕು. ಇದರ ಕೆಳಗೆ ಬೀಳುವ ಸುಣ್ಣದ ಪುಡಿಯನ್ನು ಆತುಕೊಳ್ಳುವಂತೆ ಏನಾದರೂ ಏರ್ಪಾಡಿರಬೇಕು. ಈ ಹಲಗೆಯು ಅನುಕೂಲವಾದ ಸ್ಥಳದಲ್ಲಿಲ್ಲದಿರುವುದರಿಂದ ಮಕ್ಕಳಿಗೆ ದೃಷ್ಟಿ ಮಾಂದ್ಯವುಂಟಾಗುವುದು.

ಓದುವುದು, ಬರೆವಣಿಗೆ, ಚಿತ್ರ, ಮುಂತಾದ ಕೆಲಸಗಳಿಗೆಲ್ಲಾ ಅನುಕೂಲ ವಾದ ಡೆಸ್ಕು ಇದ್ದೇ ಇರಬೇಕು. ಬೆಂಚುಗಳೂ ಡೆಸ್ಕುಗಳೂ ಒಟ್ಟಾಗಿರುವುದೇ ಅನುಕೂಲವೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುವರು. ನಾಲ್ಕೈದು ಮಕ್ಕಳು ಕುಳಿತುಕೊಳ್ಳುವಂತೆ ಬೆಂಚುಗಳನ್ನೂ ಡೆಸ್ಕುಗಳನ್ನೂ ಏರ್ಪಡಿಸುವುದು ಸರಿಯಲ್ಲವೆಂದು ಕಾಣುವುದು. ಇದರಿಂದ ಮಕ್ಕಳು ಕಾಪಿ ಮಾಡುವುದಕ್ಕೂ ಅಂಟುಜಾಡ್ಯಗಳು ಒಬ್ಬರಿಂದೊಬ್ಬರಿಗೆ ಹರಡುವುದಕ್ಕೂ ಕಾರಣವಾಗುವುದು.

ಇಬ್ಬರು ಅಥವಾ ಒಬ್ಬನು ಕುಳಿತುಕೊಳ್ಳುವಂತೆ ಬೆಂಚುಗಳನ್ನೂ ಡೆಸ್ಕುಗಳನ್ನೂ ಏರ್ಪಡಿಸುವುದೇ ಸರಿಯೆಂದು ಕಾಣುವುದು. ಇದಕ್ಕೆ ಹೆಚ್ಚು ಸ್ಥಳವು ಬೇಕೆಂದು ತೋರಬಹುದು. ಆದರೆ ಸ್ಥಳಹೆಚ್ಚಾಗಿದ್ದಷ್ಟೂ ಆರೋಗ್ಯದ ವಿಷಯದಲ್ಲಿ ಅನು ಕೂಲವೆಂತಲೇ ಹೇಳಬಹುದು. ಬೆಂಚಿನಮೇಲೆ ಕುಳಿತುಕೊಂಡು ಪುಸ್ತಕವನ್ನು ಡೆಸ್ಕಿನಮೇಲೆ ಇಟ್ಟುಕೊಂಡು ಮಗುವು ಬರೆಯುವಾಗ ಮುಂದಕ್ಕೆ ಬಾಗುವಂತಿರ ಬಾರದು. ಕುಳಿತುಕೊಳ್ಳುವ ಬೆಂಚಿನಲ್ಲಿ ಸ್ವಲ್ಪ ಬಾಗುವಿಕೆಯಿರಬೇಕು. ಇದರಿಂದ ಕುಳಿತುಕೊಂಡಾಗ ಬೆಂಚಿನಮೇಲಿರುವ ದೇಹದ ಭಾಗಗಳಿಗೆ ಸರಿಯಾದ ಆಶ್ರಯು ವು ದೊರಕುವುದು. ಮಗುವು ಬೆಂಚಿನಮೇಲೆ ಕುಳಿತಾಗ ಅದರ ಕಾಲು ನೆಲದ ಮೇಲೆ ವಿಶ್ರಮಿಸಿಕೊಂಡಿರಬೇಕು. ಬೆಂಚಿನ ಅಗಲವು ಸುಮಾರು ಒಂದಡಿ ಇರಬ ಹುದು ಬೆಂಚಿಗೆ ಹಿಂಭಾಗದಲ್ಲಿ ಬೆನ್ನಿರಬೇಕು. ಈ ಬೆನ್ನು ಮಕ್ಕಳ ಬೆನ್ನಿಗೆ ಆಶ್ರಯು ಕೊಡುವಂತೆ ಅದರ ತಳಭಾಗವು ಸ್ವಲ್ಪ ಮುಂದಕ್ಕೆ ಬಾಗಿರಬೇಕು.

ಬೆಂಚಿಗೂ ಡೆಸ್ಕಿಗೂ ಮಧ್ಯೆ ವಿಶೇಷ ಅಂತರವಿರುವುದರಿಂದ ತಿರುಗಾಡುವುದು ಸುಲಭವಾಗುವುದು. ಆದರೆ ಬರೆಯುವಾಗ ಮುಂದಕ್ಕೆ ಬಾಗಬೇಕಾಗುವುದು. ಇದು ಸರಿಯಲ್ಲ ಬೆಂಚಿನ ತುದಿಯು ಡೆಸ್ಕಿನ ತುದಿಯು ಒಂದೇ ಲಂಬರೇಖೆಯಲ್ಲಿ ಇರುವುದ ರಿಂದ ಈ ಕೊರತೆಯು ತಪ್ಪುವುದು. ಆದರೆ ಹೀಗಿರುವಾಗ ಏಳುವುದು ಕಷ್ಟವಾಗು ವುದು. ಎದ್ದರೆ ಬೆಂಚಿನ ಹಲಗೆಯು ಮೇಲಕ್ಕೆ ಎದ್ದು ಲಂಬವಾಗಿ ನಿಲ್ಲುವಂತಾದರೆ ತಿರುಗಲು ಅವಕಾಶವು ದೊರಕುವುದು ಬೆಂಚಿನಿಂದ ಡೆಸ್ಕಿನ ತುದಿಯುವರೆಗೆ ಅಂತರವು ಸುಮಾರು 6 ಅಥವಾ 9 ಅಂಗುಲವಿರಬೇಕಾಗುವುದು. ಡೆಸ್ಕಿನ ಅಗಲವು ಸುಮಾರು ಇಪ್ಪತ್ತು ಅಂಗುಲವಿರಬೇಕು. ಎತ್ತರವು ಮಕ್ಕಳವಯಸ್ಸಿಗೆ ತಕ್ಕಂತೆ ಇರಬೇಕು. ಇಳಿಜಾರು ಸುಮಾರು 15 ಡಿಗ್ರಿ ಇರಬೇಕು. ಬೆಂಚುಗಳನ್ನೂ ಡೆಸ್ಕುಗಳನ್ನೂ ಪ್ರತಿಯೊಬ್ಬನಿಗೂ ಅವನವನಿಗೆ ಸರಿಹೋಗುವಂತೆ ಏರ್ಪಡಿಸಲು ಅನುಕೂಲಗಳಿರ ಬೇಕು. ವರ್ಷಕ್ಕೊಂದಾವೃತ್ತಿ ಹೊಸ ಮಕ್ಕಳು ಬಂದಾಗ ಈ ಎತ್ತರವನ್ನು ಪುನಃ ಸರಿಪಡಿಸಬೇಕಾಗುವುದು. ಸಣ್ಣ ಮಕ್ಕಳು ಉಪಯೋಗಿಸುವ ಪುಸ್ತಕಗಳಲ್ಲಿ ದೊಡ್ಡ ಅಕ್ಷರಗಳು ಇರಬೇಕು. ದೊಡ್ಡವರು ಉಪಯೋಗಿಸುವ ಪುಸ್ತಕಗಳಲ್ಲೂ ಪೈಕಾ ಅಕ್ಷರಕ್ಕಿಂತಲೂ ಸಣ್ಣ ಅಕ್ಷರಗಳಿರಬಾರದು ಹಲಗೆಯಮೇಲೆ ಬರೆದಅಕ್ಷರಗಳ ಎತ್ತರವು 1½ ಅಂಗುಲಕ್ಕಿಂತ ಕಡಮೆಯಾಗಿರಬಾರದು. ಮಗುವು ಓದುವಾಗ ಅಥವಾ ಬರೆಯುವಾಗ ನೆಟ್ಟಗೆ ಕುಳಿತುಕೊಳ್ಳುವ ಅಭ್ಯಾಸವನ್ನೇ ಮಾಡಿಸಬೇಕು.

ಮನುಷ್ಯನಲ್ಲಿರುವ ಮನಃಕಾಯ ಶಕ್ತಿಗಳೆರಡನ್ನೂ ಕ್ರಮವಾಗಿ ವೃದ್ಧಿಗೊಳಿಸುವುದೇ ವಿದ್ಯಾಭ್ಯಾಸದ ಉದ್ದೇಶವೆಂದು ಮೇಲೆ ಹೇಳಲ್ಪಟ್ಟಿರುವುವಷ್ಟೆ. ಮನಸ್ಸಿನ ಬೆಳವಳಿಕೆಗೆ ವಿಶೇಷ ಗಮನಕೊಟ್ಟು ಮಕ್ಕಳಿಂದ ಆಯಾಸವಾಗುವಷ್ಟು ಕೆಲಸಮಾಡಿಸಿದರೆ ಅವರ ದೇಹಾರೋಗ್ಯವು ಕೆಟ್ಟುಹೋಗಿ ಮನಸ್ಸಿನ ಬೆಳವಳಿಕೆಗೂ ಕುಂದಕವುಂಟಾಗುವುದು. ತಲೆನೋವು, ನಿದ್ರೆಬಾರದಿರುವುದು, ಬಹುಬೇಗ ಕೋಪಕ್ಕೊಳಗಾಗುವುದು, ಮುಂತಾದುವು ಕಾಣಿಸಿಕೊಳ್ಳುವುವು. ಬಲುಹೊತ್ತು ಮಕ್ಕಳನ್ನು ಪುಸ್ತಕದಮುಂದೆಯೇ ಕೂರಿಸಿರುವುದರಿಂದ ವ್ಯಾಯಾಮ, ನಿದ್ರೆ, ಆಟ, ಮೊದಲಾದವುಗಳಿಗೆ ಕಾಲವು ಸಾಲದೇ ಹೋಗುವುದು. ಮಕ್ಕಳ ಶರೀರದ ತೂಕವು ಕ್ರಮಾಕ್ರಮವಾಗಿ ಕಡಮೆಯಾಗುತ ಬರುವುದು. 5 ವಯಸ್ಸಿನಿಂದ 7 ವಯಸ್ಸಿನೊಳಗಿನ ಮಕ್ಕಳು ಒಂದು ಪಾಠಕ್ಕೆ 15 ನಿಮಿಷಕ್ಕಿಂತಲೂ ಹೆಚ್ಚಾಗಿ ಗಮನಕೊಡಲಾರರೆಂತಲೂ, 7 ರಿಂದ 10 ರವರೆಗೆ 20 ನಿಮಿಷಕ್ಕಿಂತ ಹೆಚ್ಚುಕಾಲ ಗಮನಕೊಡಲಾರರೆಂತಲೂ 10 ರಿಂದ 12 ರವರೆಗೆ 25 ನಿಮಿಷದಮೇಲೆ ಪಾಠದಲ್ಲಿ ಅವಧಾನವು ಕಡಮೆಯಾಗುವುದೆಂತಲೂ, 12 ರಿಂದ 18 ರವರೆಗೆ 30 ನಿಮಿಷಕ್ಕೆ ಹೆಚ್ಚಾಗಿ ಒಂದು ಪಾಠದಲ್ಲಿ ಅವಧಾನವಿರಲಾರದೆಂತಲೂ ವಿದ್ವಾಂಸರು ಪರೀಕ್ಷೆಯಿಂದ ಸ್ಥಿರಪಡಿಸಿರುವರು. ಒಂದು ಕಷ್ಟವಾದ ಕೆಲಸವಾದಮೇಲೆ ಸುಲಭವಾದ ಕೆಲಸವನ್ನು ಏರ್ಪಡಿಸಿದರೆ ಆಯಾಸವು ಕಡಮೆಯಾಗುವುದು. ಗಣಿತಪಾಠದಿಂದ ಮನಸ್ಸಿಗೆ ವಿಶೇಷ ಆಯಾಸವಾಗುವುದೆಂತಲೂ ಚರಿತ್ರೆ, ಭೂಗೋಳ ಪ್ರಕೃತಿವಿಮರ್ಶೆ ಇವುಗಳಿಂದ ಆಯಾಸವು ಬಹುಮಟ್ಟಿಗೆ ಕಡಮೆಯಾಗಿರುವುದೆಂತಲೂ, ಭಾಷೆಯ ಪಾಠದಿಂದ ಆಯಾಸವು ಸಾಮಾನ್ಯವಾಗಿರುವುದೆಂತಲೂ, ನಿರ್ಣಯಿಸಲ್ಪಟ್ಟಿರುವುದು. ಪ್ರತಿಯೊಂದು ಪಾಠದ ಕೊನೆಯಲ್ಲೂ 5 ನಿಮಿಷ ವಿಶ್ರಾಂತಿಯನ್ನು ಕೊಡುವುದರಿಂದ ಮಕ್ಕಳಿಗೂ ಉಪಾಧ್ಯಾಯರಿಗೂ ಅನುಕೂಲವಾಗುವುದೆಂದು ತೋರುವುದು. ಪಾಠದಪಟ್ಟಿಯಲ್ಲಿ ಪ್ರಾತಃಕಾಲ ಗಣಿತ, ಚರಿತ್ರೆ, ಭೂಗೋಳ, ದೇಶಭಾಷೆ, ಇವನ್ನು ಇಲ್ಲಿ ಬರೆದಿರುವ ಕ್ರಮದಲ್ಲೂ, ಮಧ್ಯಾಹ್ನದಮೇಲೆ ಇಂಗ್ಲೀಷ್, ಪರಿವರ್ತನೆ, ವ್ಯಾಕರಣ, ಉಕ್ತಲೇಖನ, ಬರೆವಣಿಗೆ, ಚಿತ್ರ, ಪ್ರಕೃತಿವಿಮರ್ಶೆ, ಈ ಪಾಠಗಳನ್ನು ಇಲ್ಲಿ ಬರೆದಿರುವ ಕ್ರಮದಲ್ಲೂ ಇಟ್ಟುಕೊಳ್ಳಬಹುದೆಂದು ತೋರುವುದು.

ಚೆನ್ನಾಗಿ ಓದುವುದು ಪಾಠಶಾಲೆಯ ಕೆಲಸದಲ್ಲಿ ಒಂದು ಮುಖ್ಯಕೆಲಸವು. ಇದರಿಂದ ಮಕ್ಕಳಿಗೆ ಓದುವುದು ಬರುವುದಲ್ಲದೆ ಶ್ವಾಸಕೋಶಕ್ಕೆ ಕ್ರಮವಾಗಿ

ಕೆಲಸ ದೊರೆಯುವುದು. ಓದುವಾಗ ಉಸಿರನ್ನು ಹೆಚ್ಚಾಗಿ ಎಳೆದು ಬಿಡಬೇಕಾಗು ವುದು. ನೆಟ್ಟಗೆ ನಿಂತು ಅಥವ ಕುಳಿತು ಓದುವುದು ಬಲು ಮುಖ್ಯವು. ಬಾಲಕನು ಯಾವಾಗಲೂ ಪುಸ್ತಕದ ಮೇಲೆ ಬಾಗಬಾರದು ಮತ್ತು ಪುಸ್ತಕವನ್ನು ಕಣ್ಣಿನಿಂದ 10 ಅಂಗುಲದ ದೂರಕ್ಕೆ ಕಡಮೆಯಿಲ್ಲದೆ ಇಟ್ಟುಕೊಳ್ಳಬೇಕು.

ಮಕ್ಕಳಿಗೆ ಕೈಕೆಲಸವನ್ನು ಏರ್ಪಡಿಸುವುದರಿಂದ ಮಿದುಳಿನ ಚಾಲಕತಂತು ಗಳಿಗೂ, ಕೇಂದ್ರಗಳಿಗೂ ಕೆಲಸ ದೊರೆತು, ಅವರ ಅವಯವಗಳ ಶಕ್ತಿಯು ಹೆಚ್ಚುವುದು.

ಪ್ರಕೃತಿವಿಮರ್ಶೆಯು ಮಕ್ಕಳ ಆರೋಗ್ಯಕ್ಕೆ ಬಲು ಮುಖ್ಯವಾದ ಪಾಠವು. ಸೈನ್ಸ್ ಪಾಠಕ್ಕೆ ಮೊದಲಾಗುವ 4 ನೇ ಫಾರಂ ವರಿಗೂ ಪ್ರಕೃತಿವಿಮರ್ಶೆಯು ಪ್ರತಿಯೊಂದು ತರಗತಿಯಲ್ಲೂ ಒಂದು ಮುಖ್ಯ ಪಾಠವಾಗಿರಬೇಕೆಂದು ತೋರು ವುದು.

ಮಕ್ಕಳಲ್ಲಿ ಕಷ್ಟಪಟ್ಟು ಕೆಲಸಮಾಡುವ ಸ್ವಭಾವವನ್ನುಂಟುಮಾಡಲು ಮನೆಗೆ ಕೆಲಸಕೊಡುವುದು ಆವಶ್ಯಕವಾಗುವುದು. ಈ ಕೆಲಸದಿಂದ ಅವರ ಆಟಪಾಟಗ ಳಿಗೆ ಕಾಲವು ಕಡಮೆಯಾಗಿ ದೇಹಾರೋಗ್ಯಕ್ಕೆ ಕುಂದಕವುಂಟಾಗಬಾರದು.

ಕೆಲವು ಪಾಠಶಾಲೆಗಳಲ್ಲಿರುವ ಶಿಕ್ಷಣದ ಲೋಪದಿಂದ ಮನೆಯಲ್ಲಿ ಮಕ್ಕಳಿಗೆ ಉಪಾಧ್ಯಾಯರನ್ನಿಡಬೇಕಾಗುವುದು. ಇವರಿಂದ ಮಕ್ಕಳ ಆಟದ ಕಾಲವು ಕಡ ಮೆಯಾಗುವಂತಿರಬಾರದು.

ಮಕ್ಕಳ ಆರೋಗ್ಯವನ್ನು ಕಾಪಾಡಲು ಇವರಿಗೆ ಬಹು ದೀರ್ಘಕಾಲದ ವಿಶ್ರಾಂತಿಯು ಅನಾವಶ್ಯಕವೆಂದು ತೋರುವುದು. ಪ್ರಕೃತಿಯಲ್ಲಿ ದೀರ್ಘಕಾಲದ ವಿಶ್ರಾಂತಿಯೇ ಇಲ್ಲ. ಸ್ವಲ್ಪಕಾಲ ವಿಶ್ರಾಂತಿ, ಸ್ವಲ್ಪಕಾಲ ಬೆಳವಳಿಕೆ ಇದೇ ಪ್ರಕೃತಿಯಲ್ಲಿ ಕಾಣುವ ಮುಖ್ಯ ಲಕ್ಷಣಗಳು ಆದುದರಿಂದ ದೀರ್ಘಕಾಲ ವಿಶ್ರಾಂ ತಿಯು ಉಪಾಧ್ಯಾಯರಿಗೆ ಆವಶ್ಯಕವೇ ಹೊರತು ಬಾಲಕರಿಗೆ ಆವಶ್ಯಕವಲ್ಲವೆಂದು ತೋರುವುದು. ಆದುದರಿಂದ ರಜಾಕಾಲಗಳಲ್ಲಿ ಮಕ್ಕಳು ತಮಗೆ ಇಷ್ಟವಾದ ಯಾವುದಾದರೂ ಒಂದು ಕೆಲಸದಲ್ಲಿ ನಿರತರಾಗಿರುವಂತೆ ಏರ್ಪಡಿಸುವುದು ಆವಶ್ಯ ಕವು. ಪ್ರಕೃತಿಯಿಂದ ಬರೆದ ಉತ್ಕೃಷ್ಟವಾದ ಚಿತ್ರ, ಮಕ್ಕಳ ಮನೆಯ ಸುತ್ತಲೂ ಇರುವ ಪ್ರದೇಶದ ನಕ್ಷೆ, ಅತ್ಯುತ್ತಮವಾದ ವಾಕ್ಯರಚನೆ, ಯಾವುದಾದರೂ ಒಂದು ಪ್ರಕೃತಿಯ ವಸ್ತುವಿನ ನಿಷ್ಕೃಷ್ಟವಾದ ವಿಮರ್ಶೆ, ಉತ್ತಮವಾದ ಮಣ್ಣಿನಕೆಲಸ

ಅಥವಾ ಮರದಕೆಲಸ ಇವಕ್ಕೆ ಬಹುಮಾನವು ದೊರಕುವುದೆಂದು ಹೇಳಿದರೆ ಮಕ್ಕಳು ರಜಾಕಾಲದಲ್ಲಿ ವ್ಯರ್ಥವಾಗಿ ಕಾಲಕಳೆಯದೆ ಇರಲು ಅನುಕೂಲವಾಗುವುದು.

ಪಾಠಶಾಲೆಯು ಅಭಿವೃದ್ಧಿಗೂ, ಮಕ್ಕಳ ಆರೋಗ್ಯಕ್ಕೂ ವಿಶೇಷ ಸಂಬಂಧವಿರುವುದು. ಮಕ್ಕಳ ಆರೋಗ್ಯವನ್ನು ಕೆಡಿಸುವ ದಂಡನೆಯು ಪಾಠಶಾಲೆಗೆ ಅನುಕೂಲವಾದುದಲ್ಲ. ಬಿಸಲಿನಲ್ಲಿ ನಿಲ್ಲಿಸುವುದು, ಊಟಕ್ಕೆ ಬಿಡದಂತೆ ಪಾಠಶಾಲೆಯಲ್ಲಿ ನಿಲ್ಲಿಸುವುದು, ಸಿಕ್ಕಿದಕಡೆ ಹೊಡೆಯುವುದು, ಮಕ್ಕಳ ಶಕ್ತಿಯನ್ನು ನೋಡದೆ ಬಹು ಕಠಿಣವಾದ ದಂಡನೆಯನ್ನು ವಿಧಿಸುವುದು ಇವೆಲ್ಲವೂ ಮಕ್ಕಳ ಆರೋಗ್ಯಕ್ಕೆ ಕುಂದನ್ನುಂಟುಮಾಡುವುವು. ಯಾವ ಮಗುವಿಗೆ ದಂಡನೆಯನ್ನು ವಿಧಿಸುವಾಗಲೂ, ಆ ಮಗುವಿನ ಆರೋಗ್ಯಸ್ಥಿತಿಯನ್ನು ಉಪಾಧ್ಯಾಯರು ಮನಸ್ಸಿನಲ್ಲಿಡಬೇಕು.

ಅಂಗಸಾಧನೆಯು ಮಕ್ಕಳ ಆರೋಗ್ಯಕ್ಕೆ ಅತ್ಯಾವಶ್ಯಕವಾದುದು. ಇದಕ್ಕೆ ತಕ್ಕ ಏರ್ಪಾಡಿಲ್ಲದ ಸ್ಕೂಲನ್ನು ಸರಕಾರದವರು ಪ್ರೋತ್ಸಾಹಿಸಕೂಡದು. ಮಕ್ಕಳ ಆಟಕ್ಕನುಕೂಲವಾಗಿ ಪಾಠಶಾಲೆಯ ಸುತ್ತಲೂ ವಿಶಾಲವಾದ ಮೈದಾನವು ಇರಬೇಕು. ಬಹಳ ಆಯಾಸಕರವಾದ ಆಟವನ್ನು ಆಡಲು ಶಕ್ತಿಯಿಲ್ಲದ ಮಕ್ಕಳು ಡ್ರಿಲ ಡಂಬೆಲ್, ತೋಟಮಾಡುವುದು, ಮೊದಲಾದ ಕೆಲಸಗಳಲ್ಲಿ ನಿರತರಾಗಬಹುದು. ಫುಟ್‌ಬಾಲ್, ಕ್ರಿಕೆಟ್ ಮೊದಲಾದ ಆಟಗಳೂ, ಕುಸ್ತಿ ಮಾಡುವುದೂ, ಈಜುವುದೂ, ಮೊದಲಾದ ಸಾಧನೆಗಳೂ, ನಮ್ಮ ಪಾಠಶಾಲೆಗಳಿಗೆ ಅನುಕೂಲವಾದ ವ್ಯಾಯಾಮಗಳು. ಈಜುಕಲಿಸುವುದಕ್ಕೆ ಅವಕಾಶವಿದ್ದರೆ ಪಾಠಶಾಲೆಯಲ್ಲಿ ಅದನ್ನು ಕಲಿಸಲು ಪ್ರಯತ್ನಪಡಬೇಕು. ಇದರಿಂದ ಮಕ್ಕಳ ಆರೋಗ್ಯವು ವೃದ್ಧಿಯಾಗುವುದಲ್ಲದೆ ಆಪತ್ಕಾಲದಲ್ಲಿ ಅವರಿಗೆ ಸಹಾಯವೂ ಆಗುವುದು.

ಮಗುವು ಪಾಠಶಾಲೆಗೆ ಬಂದಾಗ ಅವನ ಆರೋಗ್ಯಸ್ಥಿತಿಯನ್ನು ಪರೀಕ್ಷಿಸಿ ಈ ಪರೀಕ್ಷೆಯ ಫಲವನ್ನು ಒಂದು ಪುಸ್ತಕದಲ್ಲಿ ಬರೆದಿಡಬೇಕು. ಇಂತಹ ಪರೀಕ್ಷೆಯಿಂದ ಮಗುವು ಪಾಠಶಾಲೆಯಲ್ಲಿ ಯಾವಯಾವ ಆಟಗಳಿಗೆ ಸೇರಬಹುದು. ಯಾವುದಕ್ಕೆ ಸೇರುವುದು ಸರಿಯಲ್ಲ, ಪಾಠಶಾಲೆಗೆ ಸೇರುವಾಗ ಅವನ ಆರೋಗ್ಯಸ್ಥಿತಿಯು ಏನು ? ಎಂಬೀ ಅಂಶಗಳು ತಿಳಿಯುವುವು. ಬಾಲಕನ ಪೋಷಕನು ಆ ಮಗುವಿಗೆ ಹಿಂದೆ ಯಾವಯಾವ ಜಾಡ್ಯಗಳು ಬಂದಿದ್ದುವು ಎಂಬ ಅಂಶಕ್ಕೂ

ಉಪಾಧ್ಯಾಯರಿಗೆ ಒಂದು ಕಾಗದವನ್ನು ಬರೆದು ಕಳುಹಿಸಬೇಕು. ಆಗಾಗ್ಗೆ ಪಾಠಶಾಲೆಗೆ ಒಬ್ಬ ವೈದ್ಯನು ಬಂದು ಬಾಲಕರ ಆರೋಗ್ಯಸ್ಥಿತಿಯನ್ನು ಪರೀಕ್ಷಿಸುವುದು ಆವಶ್ಯಕವು. ಇದರಿಂದ ಪಾಠಶಾಲೆಯಲ್ಲಿ ಬಾಲಕರ ಆರೋಗ್ಯಾಭಿವೃದ್ಧಿಯು ತಿಳಿಯುವುದು.

ಮಕ್ಕಳಿಗೆ ಅವರು ತಿನ್ನುವ ಪದಾರ್ಥದ ವಿಷಯದಲ್ಲೂ ಕುಡಿಯುವ ನೀರಿನ ವಿಷಯದಲ್ಲೂ ಎಚ್ಚರಿಕೆಯಿಂದಿರಬೇಕೆಂಬುದನ್ನು ಆಗಾಗ್ಗೆ ತಿಳಿಸುತಿರಬೇಕು. ತಿನ್ನುವುದಕ್ಕೆ ಆರೋಗ್ಯಕರವಾದ ಪದಾರ್ಥಗಳು ಯಾವುವು, ಯಾವುವು ಅಲ್ಲ, ಎಂಬ ವಿಷಯದಲ್ಲೂ ಮಕ್ಕಳಿಗೆ ತಿಳಿವಳಿಕೆಯನ್ನುಂಟುಮಾಡಬೇಕು.

ಊರಿನಲ್ಲಿ ಅಂಟು ಜಾಡ್ಯವಿರುವಾಗ ಪಾಠಶಾಲೆಯ ಮಕ್ಕಳನ್ನು ಬಲು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಯಾವನಲ್ಲಾದರೂ ಅಂಟು ಜಾಡ್ಯದ ಚಿಹ್ನೆಯು ಸ್ವಲ್ಪ ಕಾಣಿಸಿಕೊಂಡರೆ ಅವನನ್ನು ಇತರರಿಂದ ಪ್ರತ್ಯೇಕಿಸಿ ಒಡನೆಯೇ ಮನೆಗೆ ಕಳುಹಿಸಿ ಬಿಡಬೇಕು.

ಪಾಠಶಾಲೆಯಲ್ಲಿ ಸಂಭವಿಸಬಹುದಾದ ಅಪಾಯಗಳ ವಿಷಯದಲ್ಲಿ ವೈದ್ಯರನ್ನು ಕರೆಸುವುದಕ್ಕೆ ಮೊದಲು ಏನು ಮಾಡಬೇಕೆಂಬುದನ್ನು ಉಪಾಧ್ಯಾಯರು ಅರಿತಿರಬೇಕು. ಒಬ್ಬನು ಬಿದ್ದು ಘಾಯವಾದರೆ ಅಥವ ಬೋರೆಯಾದರೆ ತಣ್ಣೀರಿನ ಬಟ್ಟೆಯನ್ನು ಆ ಸ್ಥಳಕ್ಕೆ ಕಟ್ಟಬೇಕಾಗುವುದು. ಸುಟ್ಟುಕೊಂಡರೆ ನೋವಾದಲ್ಲಿ ನೆನೆಸಿದ ಬಟ್ಟೆಯನ್ನು ಆ ಸ್ಥಳದಲ್ಲಿ ಇಡಬೇಕಾಗುವುದು. ನಾಯಿ ಕಚ್ಚಿದರೆ ಕಚ್ಚಿದ ಸ್ಥಳವನ್ನು ನೈಟ್ರಿಕ್ ಆಸಿಡ್ ನಿಂದ ಸುಡಬೇಕಾಗುವುದು. ಕೆಮ್ಮಿ ರಕ್ತಕಾರಿದರೆ ಮಂಜನ್ನು ತಿನ್ನಿಸಬೇಕಾಗುವುದು. ಆಕಸ್ಮಾತ್ ಮೂರ್ಛೆ ಹೋದರೆ ಕೋಟನ್ನು ಬಿಚ್ಚಿ ಮುಖಕ್ಕೆ ನೀರೆರಚಿ ಅಮೋನಿಯಾ ಮೂಸಿ ನೋಡಿಸಬೇಕಾಗುವುದು. ಮೂರ್ಛೆ ಜಾಡ್ಯದಲ್ಲಿ ನಾಲಗೆಯನ್ನು ಕಚ್ಚಿಕೊಳ್ಳದಂತೆ ಹಲ್ಲುಗಳ ಮಧ್ಯ ಒಂದು ಬೆಣೆಯನ್ನು ಇಡಬೇಕಾಗುವುದು. ಮೂಗಿನಿಂದ ರಕ್ತ ಸುರಿದರೆ ಪಟಿಕದ ನೀರನ್ನು ಸೇದಿಸಬೇಕಾಗುವುದು. ಚೇಳು ಅಥವಾ ಹಾವು ಕಚ್ಚಿದರೆ ಕಚ್ಚಿದ ಭಾಗದಿಂದ ಮೇಲಕ್ಕೆ ಬೇಗ ದಾರವನ್ನು ಕಟ್ಟಿ ಕಚ್ಚಿದ ಸ್ಥಳಕ್ಕೆ ಅಮೋನಿಯ ಅಥವಾ ಪರ್ಮ್ಯಾಂಗನೇಟ್ ಆಫ್ ಪೊಟಾಷ್ ಹಾಕಬೇಕಾಗುವುದು. ಹೀಗೆಯೇ ಉಳುಕಿದರೆ, ಕಣ್ಣಿಗೇನಾದರೂ ಬಿದ್ದರೆ, ಮೂಗಿನೊಳಕ್ಕೆ ಅಥವಾ ಕಿವಿಯೊಳಕ್ಕೇನಾದರೂ ಹೋದರೆ, ಮೂಳೆಯು ಸ್ಥಳವನ್ನು ಬಿಟ್ಟರೆ ಅಥವಾ ಮುರಿದು ಹೋದರೆ, ಏನಾದರೂ ತಿಂದು ಆಕಸ್ಮಿಕವಾಗಿ ಉಸಿರು

ಸಿಕ್ಕಿಕೊಂಡರೆ, ಅಥವಾ ನೀರಿನಲ್ಲಿ ಮುಳುಗಿದರೆ ವೈದ್ಯರನ್ನು ಕರೆಸುವುದಕ್ಕೆ ಮೊದಲು ಒಡನೆಯೇ ಏನುಮಾಡಬೇಕೆಂಬುದನ್ನು ಉಪಾಧ್ಯಾಯರು ಅರಿತಿರಬೇಕು.

ಪಾಠಶಾಲೆಯ ಉಪಾಧ್ಯಾಯರೂ ಮತ್ತು ಪಾಠಶಾಲೆಯ ಮೇಲ್ವಿಚಾರಣೆಯನ್ನು ಮಾಡುವ ಅಧಿಕಾರಿಗಳೂ ಮಕ್ಕಳು ಪಾಠಶಾಲೆಯಲ್ಲಿ ಕಳೆಯುವ ಕಾಲವು ಆರೋಗ್ಯಕರವಾಗಿಯೂ ಸಂತೋಷಕರವಾಗಿಯೂ ಇರುವಂತೆ ನೋಡಿಕೊಳ್ಳಬೇಕು. ಮಕ್ಕಳು ಪಾಠಶಾಲೆಯನ್ನು ಬಿಡುವಾಗ ಅಲ್ಲಿ ಕಳೆದ ಕಾಲದವಿಷಯದಲ್ಲಿ ಸಂತೋಷಕರವಾದ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಹೋಗುವಂತೆ ಮಾಡಬೇಕು. ಈ ಕೆಲಸವು ಮಕ್ಕಳಲ್ಲಿ ಪ್ರೀತಿಯುಳ್ಳ ಉತ್ತಮರಾದ ಉಪಾಧ್ಯಾಯರಿಗೆ ಮಾತ್ರ ಸಾಧ್ಯವೆಂದು ತೋರುವುದು. ಆದುದರಿಂದ ನಮ್ಮ ಪಾಠಶಾಲೆಯ (ಉಪಾಧ್ಯಾಯರು ಅತ್ಯುತ್ತಮರಾದ) ಉಪಾಧ್ಯಾಯರಲ್ಲಿರಬೇಕಾದ ಲಕ್ಷಣಗಳು ತಮ್ಮಲ್ಲೂ ಇರುವಂತೆ ಪ್ರಯತ್ನಪಡಬೇಕೆಂದು ನಾನು ಅಪೇಕ್ಷಿಸುವೆನು.''

ಸರೋವರಗಳು.

ಭೂಪೃಷ್ಠದ ಮೇಲೆ ವಿಸ್ತಾರವಾದ ತಗ್ಗುಗಳಿದ್ದು ಸುತ್ತುಮುತ್ತಲೂ ನೀರು ಹರಿದುಬಂದು ಒಟ್ಟುಗೂಡಿತೆಂದರೆ ಅದಕ್ಕೆ ಸರೋವರವೆನ್ನುವರು. ಇಂತಹ ಸರೋವರಗಳು ಅಂಚಿನವರಗೆ ತುಂಬುವುದಕ್ಕೆ ಮೊದಲು ನೀರಿಗೆ ಎಲ್ಲಿಯಾದರೂ ಮಾರ್ಗದೊರೆತರೆ ಸರೋವರದಿಂದ ನದಿಯು ಹುಟ್ಟಬಹುದು. ಕೆಲವು ಸರೋವರಗಳು ಪೂರಾ ತುಂಬಿದರೆ ಅವುಗಳ ಪಾತ್ರವು ಬಹಳ ವಿಸ್ತಾರವಾಗುವುದರಿಂದ ನೀರು ಅಧಿಕಪ್ರಮಾಣದಿಂದ ಉಗಿಯಾಗಲಾರಂಭಿಸುವುದು. ಹೀಗೆ ಉಗಿಯಾಗುವ ನೀರಿನಷ್ಟೇ ಅಥವಾ ಅದಕ್ಕಿಂತ ಕಮ್ಮಿಯಾಗಿ ಹೊರಗಿನಿಂದ ನೀರು ಬರುವಂತಿದ್ದರೆ ಅಂತಹ ಸರೋವರಗಳಿಂದ ಪ್ರವಾಹ ಹೊರಡುವುದಿಲ್ಲ. ಈ ತೆರದ ಸರೋವರಗಳನ್ನು ಒಣಸೆಲದ ದೇಶಗಳಲ್ಲಿ ಮಾತ್ರ ಕಾಣಬಹುದು ; ಏಕೆಂದರೆ ಅಲ್ಲಿ ಮಳೆಯು ಕಡಮೆಯಾಗಿ ಹುಯ್ಯುತ್ತಿದ್ದು ಬಿಸಿಹವೆಯ ಮೂಲಕವಾಗಿ ನೀರು ಅತಿಯಾಗಿ ಉಗಿಯಾಗುತ್ತಿರುವುದು. ಹೀಗೆ ಉಗಿಯಾಗಿ ಹೋಗುವುದು ಶುದ್ಧವಾದ ನೀರುಮಾತ್ರವಾದುದರಿಂದ ನೀರಿನಲ್ಲಿ ಮಿಶ್ರಿತವಾಗಿದ್ದ ಲವಣಗಳು ಹಾಗೆಯೇ ಇದ್ದು (ದಿನದಿನಕ್ಕೂ। ಅವುಗಳ ಪ್ರಮಾಣವು ಹೆಚ್ಚಿ ಆ ನೀರು ಬಹಳ

ಉಪ್ಪಾಗಿಯೂ, ಭಾರವಾಗಿಯೂ ಆಗುವುದು; ಇದಲ್ಲದೆ ಇಂತಹ ಸರೋವರಗಳು ಹೊರಗಣಪ್ರವಾಹದಿಂದ ಬಂದು ಸೇರುತ್ತಿರುವ ಮಣ್ಣುಮೆಕ್ಕಲುಗಳಿಂದ ತುಂಬುತ್ತ ಬರುತ್ತಿರುವುವು. ಈ ಬಗೆಯ ಸರೋವರಗಳು ಏಷ್ಯದ ಮಧ್ಯಭಾಗದಲ್ಲಿ ಬಹಳವಾಗಿವೆ. ಟಿಬೆಟ್ ದೇಶದಲ್ಲಿ "ರ್ಪೆಗಂಗಾ" ಎಂಬ ಈ ಬಗೆಯ ಸರೋವರವೊಂದುಂಟು. ಮೊದಲು ಇದು ಸೀನೀರಿನದಾಗಿತ್ತೆಂದು ಕಂಡುಬರುತ್ತದೆ. ಆಗ ಇದರಿಂದ ಒಂದು ಪ್ರವಾಹವು ಹೊರಟು ಸಿಂಧುನದಿಯ ಒಂದಾನೊಂದು ಶಾಖೆಗೆ ಬಂದುಸೇರುತ್ತಿತ್ತು. ಆದರೆ ಈ ದೇಶದಲ್ಲಿ ಕ್ರಮಕ್ರಮವಾಗಿ ಯಾವುದೋ ಕಾರಣದಿಂದ ಸೆಕೆ ಹೆಚ್ಚುತ ಬಂದು, ನೀರು ಬಹಳವಾಗಿ ಬಹುಮಟ್ಟಿಗೆ ಕಮ್ಮಿಯಾಗಿ ಪ್ರವಾಹವು ಕುಂದಿಹೋಯಿತು; ಮತ್ತು ಸರೋವರವೂ ಸಣ್ಣದಾಯಿತು. ಈ ಸರೋವರದ ತಳದಲ್ಲಿ ಅಚ್ಚ ಉಪ್ಪುನೀರು ಇರುತ್ತದೆ. ಆದರೆ ಇದರ ಮೇಲ್ಭಾಗವು ಅಷ್ಟು ಕ್ಷಾರವಾದುದಲ್ಲ; ಸಾಮಾನ್ಯವಾಗಿ ನದಿಗಳು ಹೆಚ್ಚಾಗಿ ಸೇರಿದರೆ ನೀರು ಅಷ್ಟು ಉಪ್ಪಾಗಿರದು. ಮತ್ತು ಶೀತವಲಯದ ಸರೋವರಗಳೂ ನೀರು ಹೆಚ್ಚಾಗಿ ಉಗಿಯಾಗಿಹೋಗದಿರುವುದರಿಂದ ಅಷ್ಟು ಉಪ್ಪಾಗಿರವು. ಕ್ಯಾಸ್ಪಿಯನ್ ಸಮುದ್ರ, ಏರಲ್ ಸರೋವರ ಇವೆರಡೂ ಭೂಮಧ್ಯಸರೋವರಗಳಾಗಿವೆ. ಇವಕ್ಕೂ ಸಾಗರಕ್ಕೂ ಏನೂ ಸಂಬಂಧವಿಲ್ಲ. ಇವನ್ನು ಸಮುದ್ರಗಳೆಂದರೂ ಎನ್ನಬಹುದು. ಪಾಲಸ್ಟೈನ್ ಪ್ರಾಂತ್ಯದಲ್ಲಿರುವ "ಮೃತಸಮುದ್ರವೂ" ಇದೇ ಗುಂಪಿನದು. ಜಾರ್ಡನ್ ಎಂಬ ನದಿಯು ಇದಕ್ಕೆ ಬಂದುಸೇರುತ್ತದೆ. ಆದರೆ ಒಂದಾನೊಂದು ಕಾಲದಲ್ಲಿ ಈ ನದಿಯು ಕೆಲವು ಸಮುದ್ರದಿಂದ ಹೊರಡುವ "ಅಕಬಾ" ಎಂಬ ಸಮುದ್ರಧುನಿಗೆ ಕೂಡುತಿದ್ದಿತೆಂದು ಊಹಿತವಾಗಿದೆ. ಆದರೆ ಆ ಸಮುದ್ರಧುನಿಯ ಬಳಿಯಲ್ಲಿನ ಭೂಮಿಯು ಕಾಲಕ್ರಮವಾಗಿ ಎತ್ತರವಾಗಿ "ಪೇಟ್ರಿಯ" ಎಂಬ ಮಳಲ ಬೈಲು ಹುಟ್ಟಿದಂದಿನಿಂದ ಹೊಳೆಯ ಪ್ರವಾಹವು ಮೃತಸಮುದ್ರದಲ್ಲಿ ಬೀಳಹತ್ತಿತೆಂದು ತೋರುತ್ತದೆ. ಈ ಸಮುದ್ರದಲ್ಲಿ ಉಪ್ಪು ಆಧಿಕಾಂಶದಿಂದ ತುಂಬಿರುವುದು. ಇನ್ನು ಮುಂದೆ ಹೆಚ್ಚು ಉಪ್ಪು ಇದರ ನೀರಿನಲ್ಲಿ ಸೇರಲವಕಾಶವಿಲ್ಲ. ಆದರೂ ಜಾರ್ಡನ್ ಹೊಳೆ ಬೀಳುವ ಪ್ರದೇಶದಲ್ಲಿ ಮಾತ್ರ ಸ್ವಲ್ಪ ಹೆಚ್ಚು ಉಪ್ಪು ಕರಗಬಹುದು. ಈ ಸಮುದ್ರದ ನೀರು ಅತಿಶಯ ಘನವಾದುದರಿಂದ ಮೀನು ಮುಂತಾದ ಜಂತುಗಳು ಇದರಲ್ಲಿ ಬದುಕುವುದಿಲ್ಲ. ಈ ಕಾರಣದಿಂದಲೇ ಇದಕ್ಕೆ "ಮೃತಸಮುದ್ರ (ಡೆಡ್‌ಸೀ)" ಎಂಬ ಹೆಸರುಬಂ

ದಿದೆ. ಈ ಸರೋವರದ ಮೇಲ್ಮೈ ಸಮುದ್ರಮಟ್ಟಕ್ಕಿಂತ 1312 ಅಡಿ ಕೆಳಗಿಳಿದಿದೆ.

ರಾಜಪುತ್ರಸ್ಥಾನದಲ್ಲಿ “ಬಿಕನೀರ್” ಪ್ರಾಂತದಲ್ಲಿ ಕೆಲವು ಉಪ್ಪುನೀರಿನ ಸಣ್ಣ ಸರೋವರಗಳಿವೆ. ಅವುಗಳಲ್ಲಿ “ಸಾಂಬರ್” ಎಂಬ ಸರೋವರವು ದೊಡ್ಡದಾದುದು. ಇದು ಬಹಳ ಆಳವಾದುದಲ್ಲ. ಮಳೆಗಾಲದ ನೀರು ಮಾತ್ರ ಇದಕ್ಕೆ ಬಂದುಸೇರುತ್ತದೆ. ಆದರೆ ಇದರ ಸುತ್ತಮುತ್ತಲೂ 20 ಅಂಗುಲಕ್ಕಿಂತಲೂ ಹೆಚ್ಚು ಮಳೆ ಬೀಳುವುದಿಲ್ಲ; ಆದುದರಿಂದ ಮಳೆಗಾಲದಲ್ಲಿ ಈ ಸರೋವರವು ಸ್ವಲ್ಪ ಮಟ್ಟಿಗೆ ತುಂಬಿ ಮುಂದೆ ಏಳೆಂಟುತಿಂಗಳು ಆಟ್ಟಿಸುತ್ತ ಹೋಗುವುದು. ಈ ಸರೋವರದಲ್ಲಿ ಹುಟ್ಟುವ ಉಪ್ಪಿನ ವ್ಯಾಪಾರವು ಬಹಳವಾಗಿ ನಡೆಯುತ್ತದೆ. ಇದರಂತೆ ವರಾಡಪ್ರಾಂತದ “ಲೂನಾರ್” ಎಂಬ ಸರೋವರದಲ್ಲಿಯೂ ಉಪ್ಪು ದೊರೆಯುತ್ತದೆ. ಈ ಸರೋವರದ ಆಕಾರವು ಜ್ವಾಲಾಮುಖಿಯ ಬಾಯಂತೆ ಇರುವುದರಿಂದ ಮೊದಲು ಇಲ್ಲಿ ಜ್ವಾಲಾಮುಖಿ ಇತ್ತೆಂದು ಕೆಲವರು ಊಹಿಸುತ್ತಾರೆ.

ಯಾವ ಸರೋವರದಿಂದ ನೀರು ಹರಿಯುವುದೋ ಅದು ಸೀನೀರಿನ ಸರೋವರವಾಗಿರುವುದು. ಆದರೆ “ಚಿಲ್ಕಾ” ಸರೋವರದಂದದ ಕೆಲವು ಸರೋವರಗಳಿಂದ ನೀರು ಹೊರಗೆ ಹರಿದುಹೋಗುತಿದ್ದರೂ ಸಮುದ್ರದ ನೀರು ಅದಕ್ಕೆ ಸೇರಲು ಮಾರ್ಗವಿರುವುದರಿಂದ ಅದರ ನೀರು ಉಪ್ಪಾಗಿರುವುದು. ಹಿಂದೂಸ್ಥಾನದಲ್ಲಿ ಸ್ವಾಭಾವಿಕವಾದ ಸೀನೀರಿನ ಸರೋವರಗಳು ಬಹು ವಿರಳ. ಅವುಗಳು ಪರ್ವತದ ನೆರೆಯಲ್ಲಿರುತ್ತವೆ. “ನೈನಿಟಾಲ್” ಎಂಬ ಸರೋವರವು, ಸಿಕ್ಕಿಂ ಪ್ರಾಂತದ ಕೆಲವು ಸರೋವರಗಳು ಈ ವರ್ಗಕ್ಕೆ ಸೇರಿದುವು. ಹಿಮಾಲಯಪರ್ವತದ ಹೊರಪಕ್ಕದಲ್ಲಿ “ಮಾನಸ” ವೆಂಬ ಉತ್ತರದ ದೊಡ್ಡ ಸರೋವರವೊಂದುಂಟು. ಇದು ಸಮುದ್ರಮಟ್ಟಕ್ಕಿಂತ 15250 ಅಡಿ ಎತ್ತರದಲ್ಲಿ ಶತದ್ರುನದಿಯ ಮೂಲಸ್ಥಾನದಲ್ಲಿದೆ.

ಅಮೇರಿಕದ ಕೆನಡ ಪ್ರಾಂತದಲ್ಲಿಯೂ, ಅಫ್ರಿಕದ ನೈಲ್ ನದಿಯ ಉಗಮದಹತ್ತಿರದಲ್ಲಿಯೂ ಇರುವ “ತಾಂಗನಿಕ” ಮುಂತಾದ ಸರೋವರಗಳು ಬೇರೆ ವರ್ಗಕ್ಕೆ ಸೇರಿದುವು. ಇವುಗಳ ಸುತ್ತಣಭೂಮಿಯು ಎತ್ತರವಾಗುತ್ತ ಬಂದು ನೆಲದೊಳಗೆ ದೊಡ್ಡದೊಡ್ಡ ಪೊಳ್ಳು ಪ್ರದೇಶಗಳುಳಿದು ಈ ಸರೋವರಗಳುಂಟಾಗಿರುವುವೆಂದು ಊಹಿತವಾಗಿದೆ. ಫಿನ್‌ಲೆಂಡಿನಲ್ಲಿಯೂ, ರಷ್ಯಾದ ವಾಯುವ್ಯದಲ್ಲಿಯೂ

ಇರುವ ಸರೋವರಗಳು ಮತ್ತೊಂದುಗುಂಪಿನವು. ಒಂದಾನೊಂದುಕಾಲದಲ್ಲಿ ಆ ಪ್ರದೇಶಗಳಲ್ಲಿ ಸಮುದ್ರವಿದ್ದು ಮುಂದೆ ಕಾಲಾಂತರದಲ್ಲಿ ಆ ಸಮುದ್ರದಬುಡವು ಮೇಲಕ್ಕೇರಿಬರಲು ಆ ಬುಡದಲ್ಲಿದ್ದ ತಗ್ಗುಗಳೇ ಈ ಸರೋವರಗಳಾದುವೆಂದು ತಿಳಿಯಬರುತ್ತದೆ. ಆದರೆ "ಫಿನ್‌ಲೆಂಡ್, ಕೆನಡ, ಆಲ್ಪ್ಸ್ ಪರ್ವತ, ಸ್ಕಾಟ್ಲೆಂಡ್, ಐರ್ಲೆಂಡ್, ಕಂಬರ್ಲೆಂಡ್ ಮೊದಲಾದ ಪ್ರದೇಶಗಳಲ್ಲಿರುವ ಸರೋವರಗಳೆಲ್ಲ ಹಿಮಶಿಲಾಯುಗದಲ್ಲಿ (ಐಸ್) ಹಿಮಶಿಲೆಗಳ ವ್ಯಾಪಾರದಿಂದ. ಎಂದರೆ ಈ ನೀರ್ಗಡ್ಡೆಗಳ ಬಂಡೆಗಳ ಕೆಳಗೆ ಸೇರಿದ ಶಿಲೆಗಳ ಘರ್ಷಣದಿಂದ ನೆಲದೊಳಗಿನ ಶಿಲೆಗಳು ಸವೆಯುತ್ತ ಸವೆಯುತ್ತ ದೊಡ್ಡ ಪೊಳ್ಳುಪ್ರದೇಶಗಳಾಗಿ ಅವು ಈಗ ಸರೋವರದ ರೂಪವನ್ನು ಹೊಂದಿರುತ್ತವೆ" ಎಂದು ಪ್ರೊಫೆಸರ್ "ರಾಮ್ಸೆ" ಎಂಬುವರು ಅಭಿಪ್ರಾಯಪಟ್ಟಿರುವರು.

ಚಿಕ್ಕದಾದ ಕೊಳಚೆ ನೀರಿನ ಸರೋವರಗಳು ಕೆಲವು. ಹೊಳೆಗಳ ತ್ರಿಕೋಣದಲ್ಲಿರುತ್ತವೆ. ಈ ಜಾತಿಯ ಸರೋವರವೊಂದು ಕಲ್ಕತ್ತಾ ಪಟ್ಟಣದ ಪೂರ್ವದಲ್ಲಿದೆ. ಇವುಗಳಿಗೆ "ಲಗೂನ" ಎಂಬ ಹೆಸರುಂಟು. ಸಮುದ್ರತೀರದಲ್ಲಿರುವ ಉಪ್ಪುನೀರಿನ ಅಥವಾ ಚೌಳುನೀರಿನ ಸರೋವರಗಳನ್ನು ಇದೇ ಹೆಸರಿನಿಂದ ಕರೆಯುವ ವಾಡಿಕೆಯುಂಟು. ಚಿಲ್ಕಾಸರೋವರವೂ, ಪುಲಿಕಾಟ್ ಸರೋವರವೂ ಈ ಗುಂಪಿಗೆ ಸೇರಿದುವು. ಈ ಎರಡುವರ್ಗದವುಗಳಲ್ಲಿ ಮೊದಲನೆಯ ಗುಂಪಿನವು ಹೊಳೆಗಳ ಎರಡುಶಾಖೆಗಳ ನಡುವೆ ಹುಟ್ಟಿರುತ್ತವೆ. ಹೊಳೆಯಬಂಡಿನಿಂದ ಅವು ತುಂಬುತ್ತಾ ಬರುತ್ತವೆ. ಸಮುದ್ರವು ಉಕ್ಕಿದಾಗ ಸಮುದ್ರದ ನೀರು ಇವುಗಳಲ್ಲಿ ಬೀಳುವುದರಿಂದ ಇವುಗಳ ನೀರು ಚೌಳಾಗುವುದು. ಚಿಲ್ಕಾ, ಪುಲಿಕಾಟ್ ಸರೋವರಗಳು ಹುಟ್ಟಿದ ರೀತಿ ಬೇರೆ. ಸಮುದ್ರಪ್ರವಾಹದಿಂದ ಹರಿದುಬಂದ ಮರಳು ಕರೆಯಹತ್ತಿರ ಬಿದ್ದು ದೊಡ್ಡ ರಾಶಿಯಾದುದರಿಂದ ಈ ಸರೋವರಗಳು ಹುಟ್ಟಿರುತ್ತವೆ. ಈ ಮಳಲದಿಣ್ಣೆಗಳೇ ಸರೋವರಕ್ಕೂ ಸಮುದ್ರಕ್ಕೂ ನಡುವೆ ಮೇರೆಯಾಗಿರುತ್ತದೆ.

ಆದರೆ ಈ ಲಗೂನಗಳೆಂಬ ಸರೋವರಗಳಿಗೂ ಸಮುದ್ರಕ್ಕೂ ನಡುವೆ ದಾರಿ ಇರುತ್ತದೆ. ಆ ಮಾರ್ಗದಿಂದ ಸಮುದ್ರದ ನೀರು ಸರೋವರದೊಳಗೆ ಬರುವುದು ; ಮತ್ತು ಸರೋವರದಲ್ಲಿ ಹೊಳೆಗಳು ತುಂಬಿದಾಗ ಬಂದ ಹೆಚ್ಚುನೀರು ಸಮುದ್ರಕ್ಕೆ ಹೋಗುವುದು. ಆದುದರಿಂದ ಮಳೆಗಾಲದಲ್ಲಿ ಈ ಲಗೂನಗಳ ನೀರು

ಬಹುಶಃ ಸೀಯಾಗಿರುತ್ತದೆ. ಉಳಿದಕಾಲದಲ್ಲಿ ಸಮುದ್ರದ ನೀರಿನ ಸಂಪರ್ಕದಿಂದ ಉಪ್ಪಾಗಿರುವುದು. ಈ ಸರೋವರಗಳು ಹೊಳೆಗಳ ಬಂಡಿನ ಭರತಿಯಿಂದ ಕಾಲ ಕ್ರಮದಿಂದ ಕಿರಿದಾಗುತ್ತಾ ಬರುವುವು. ಮುಂದು ಕಾಲಾಂತರಕ್ಕೆ ಇವೆಲ್ಲ ಒಣ ನೆಲವಾಗತಕ್ಕವೆಂಬುದು ಸ್ಪಷ್ಟವಾಗುತ್ತದೆ. ಪಾಂಡುಚೆರಿಯ ಉತ್ತರದಲ್ಲಿ "ಮರ್ಕಾಣಂ" ಎಂಬ ಗ್ರಾಮದ ಹತ್ತಿರ ಇಂತಹ ಒಂದು ಲಗೂನವು ಪೂರ್ತಿಯಾಗಿ ತುಂಬಿ ಒಣನೆಲವಾಗುತ್ತಾ ಬಂದಿದೆ. ಪೂರ್ವಸಮುದ್ರದ ಕರೆಯಲ್ಲಿ ಸಮುದ್ರಕ್ಕೆ ಹೊಂದಿಕೊಂಡಿರುವ ಬೈಲುಗಳೆಲ್ಲ ಬಹುಶಃ ಇದೇಬಗೆಯಾಗಿ ಹುಟ್ಟಿದುವುಗಳಾಗಿವೆ.

B. O. S.

ಮೂರಳು ಕೆಲಸ—(ಪರ್ವತ).

ಉಪಕರಣಗಳು:—ಪರ್ವತ, ಮಣ್ಣಿನಮಾದರಿ ಬೆಟ್ಟ, ಹೂ ಗಿಡಗಳು ಮತ್ತು ಮೃಗಪಕ್ಷಿಗಳು (ಮಾದರಿಗಳು).

ವಿಷಯ	ಬೋಧನಕ್ರಮ.
ಅವತಾರಿಕೆ:—	ಬಾಲಕರನ್ನು ಸ್ಕೂಲಿನ ಮಾಳಿಗೆಯಮೇಲೆ ಕರೆದುಕೊಂಡು ಹೋಗಿ ಕೆಳಗಡೆ ಸುತ್ತಲೂ ನೋಟಕ್ಕೆ ಅಂದವಾಗಿ ಕಾಣುತ್ತಿರುವ ಮನೆಗಳನ್ನೂ ಮರಗಳ ಗುಂಪನ್ನೂ ತೋರಿಸಿ, ಈ ವಿಧದ ನೋಟಕ್ಕೆ ಎತ್ತರವಾದ ಸ್ಥಳವೇ ಅನುಕೂಲವೆಂದು ಹೇಳಿಸುವುದರಮೂಲಕ ಇನ್ನೂ ಎತ್ತರದ ಸ್ಥಳ ಸಿಕ್ಕಿದಷ್ಟೂ ಹೆಚ್ಚು ಅಂದವು ಕಾಣುವುದೆಂದೂ, ಇಡೀಪಟ್ಟಣವನ್ನೇ ನೋಡಬಹುದಾದ್ದರಿಂದ ಬಹು ತಮಾಷೆಯಾಗಿರುವುದೆಂದೂ ಹೇಳಿಸಿ ಅಂತಹ ಸ್ಥಳ ಒಂದನ್ನು ನೋಡಿ ಹೇಳಿರೆಂದು ಕೇಳುವುದರಮೂಲಕ ಬೆಟ್ಟವನ್ನು ಅವರಿಗೆ ವಿಷಯ ಮಾಡಿಸುವುದು.

ವಿಷಯ.	ಬೋಧನಕ್ರಮ.
I. ಪರ್ವತದಸ್ವರೂಪ:— ಸುತ್ತುಮುತ್ತಲೂ ಇರುವ ಭೂಮಿಗಿಂತ ತುಂಬಾ ಎತ್ತರವಾಗಿ ಕಲ್ಲುಗಳಿಂದಲೂಮಣ್ಣಿನಿಂದಲೂಕೂಡಿರುವಭೂಮಿ.	ಪರ್ವತವನ್ನು ತೋರಿಸಿ— ಇದು ಸುತ್ತುಮುತ್ತಲಿರುವಭೂಮಿಗಿಂತ ತುಂಬಾ ಎತ್ತರವಾಗಿದೆ ; ಕಲ್ಲುಗುಂಡುಗಳಿಂದ ಕೂಡಿದೆ ; ಅಲ್ಲಲ್ಲಿ ಮಣ್ಣೂ ಉಂಟು ಮತ್ತು ಮರಗಳೂ ಇವೆ ಎಂಬುದನ್ನು ಅವರು ನೋಡಿ ಹೇಳುವಂತೆ ಮಾಡಿ ಈ ವಿಷಯವನ್ನು ದೃಢಪಡಿಸುವುದು.
(a) ಮಧ್ಯ, ಎಡ, ಬಲ ಇಳಿಜಾರು ಇವುಗಳ ವಿವರ. (b) ಮಧ್ಯೆಎತ್ತರ, ಎಡಕ್ಕೂ ಬಲಕ್ಕೂ ತಗ್ಗಾಗುತ್ತ ಬಂದಿದೆ. ಮುಂಭಾಗ ಇಳಿಜಾರಾಗಿದೆ.	ಇದನ್ನೂ ಅವರೇ ನೋಡಿ ಹೇಳುವಂತೆ ಮಾಡಿ ಎಡಬಲಗಳನ್ನು ಮಾತ್ರ ಸ್ಪಷ್ಟಪಡಿಸುವುದು. ಮಣ್ಣಿನ ಮಾದಿರಿ ಬೆಟ್ಟವನ್ನು ತೋರಿಸಿ ಇದು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಆಕಾರದಲ್ಲಿ ಆ ಪರ್ವತದಂತೆಯೇ ಇದೆ ಎಂಬುದನ್ನು ಸ್ಪಷ್ಟಪಡಿಸುವುದು. (ಇವೆರಡಕ್ಕೂ ಇರುವ ಹೋಲಿಕೆಗಳ ಮೂಲಕ.) ಬಳಿಕ— ಈದಿನ ಮರಳಿನ ಬೆಟ್ಟಗಳನ್ನು ಮಾಡಿ ಬೆಟ್ಟದ ಆಟವನ್ನಾಡೋಣವೆಂದು ಹೇಳಿ ಬಾಲಕರನ್ನು ತರಗತಿಯ ಸ್ಥಳಕ್ಕೆ ಕರೆತರುವುದು.
II. ಆಕಾರರಚನೆ.—	ಮೇಲಿನ ವಿಷಯಗಳನ್ನು ಪುನರಾವರ್ತನೆ ಮಾಡಿಸಿ, ಆಕಾರಜ್ಞಾನವನ್ನು ಜ್ಞಾಪಿಸುತ್ತಲೂ, ಮಾದಿರಿಯ ಬೆಟ್ಟವನ್ನು ನಿದರ್ಶಿಸುತ್ತಲೂ ಮಾಡಿಸುವುದು.
III. ಉಪಯೋಗಗಳು.— (1) ದೇಶಕ್ಕೆ ತಕ್ಕಮಟ್ಟಿಗೆ ಬಂದೋಬಸ್ತು. (2) ಮಳೆ ಮೋಡಗಳನ್ನು ಎಳೆದುಕೊಂಡು ನದಿಗಳ ಮೂಲಕ ದೇಶಕ್ಕೆ ಸಂಪತ್ತನ್ನುಂಟುಮಾಡುವುದು.	ಆಟದ ಜೊತೆಗೆ ಹಾಡಾಗಲೀ ಕಥೆಯಾಗಲೀ ಇದ್ದರೆ ತಮಾಷೆಯಾಗಿರುವುದೆಂಬುದನ್ನು ಹೇಳಿಸಿ, ಹಾಗಾದರೆ ನಾನೊಂದು ಕಥೆಯನ್ನು ಹೇಳುತ್ತೇನೆಂದು ಪ್ರಾರಂಭಿಸುವುದು. ಕಥೆ:— ಒಂದಾನೊಂದು ದೇಶವಿತ್ತು. ಅದಕ್ಕೊಬ್ಬ ದೊರೆ ಇದ್ದನು. ಅವನ ಹೆಸರು ಪರ್ವತರಾಜ. ಭೂಮಿಯಲ್ಲೆಲ್ಲಾ ಹುಡುಕಿದರೂ ಇವನಿಗೆ ಸಮನಾದ ಗಟ್ಟಿಗರೂ ಇಲ್ಲ. ದೊಡ್ಡವರೂ ಇಲ್ಲ. ಅದ್ದರಿಂದ

ವಿಷಯ.	ಬೋಧನಕ್ರಮ.
(3) ನೋಟಕ್ಕೆ ಅಂದವಾಗಿರುವುದು. (ಈ ಅಭಿಪ್ರಾಯಗಳನ್ನೊಳಗೊಂಡಿರುವ ಕಥೆಯನ್ನು ಹೇಳುವೆನು. N. B.-(ಕಥೆಯು ವಿಷಯದಲ್ಲಿ ಬರೆಯಲ್ಪಡಬೇಕು.)	ಇತರ ದೊರೆಗಳೆಲ್ಲಾ ಇವನಲ್ಲಿ ಸ್ನೇಹಮಾಡಿ ಈತನ ಸಹಾಯದಿಂದ ಯಾವ ಹೆದರಿಕೆಯೂ ಇಲ್ಲದೆ ಸುಖವಾಗಿದ್ದರು. ಈ ಪರ್ವತರಾಜನಿಗೆ ಅನೇಕ ಮಂದಿ ಮಕ್ಕಳಿದ್ದರು (ನದಿಗಳು). ಈ ರಾಜನಿಗೆ ತನ್ನ ಸ್ನೇಹಿತರಲ್ಲಿ ಬಹು ಪ್ರೇಮವಿದ್ದುದರಿಂದ ಈ ಮಕ್ಕಳನ್ನು ಜೊತೆಗಾರರ ದೇಶಗಳಿಗೆಲ್ಲಾ ಕಳುಹಿಸಿ ಅವರಿಗೆಲ್ಲ ಸಹಾಯಮಾಡುತಿದ್ದನು. ಇವರಂತೂ ತಂದೆಗಿಂತಲೂ ಬಲು ಒಳ್ಳೆಯವರು. ಇವರಿಗೆ ಜನಗಳನ್ನು ಕಂಡರೆ ಬಲು ಪ್ರೀತಿ. ಯಾವಾಗಲೂ ಜನರಿಗೆ ಸಹಾಯ ಮಾಡುತ್ತಿರಬೇಕೆಂಬುದೇ ಇವರಿಗೆ ಆಶೆ. ಇವರು ತಮ್ಮ ಜೀವವನ್ನಾದರೂ ಜನರಿಗೆ ಕೊಟ್ಟುಬಿಡುತಿದ್ದರು. ಇಂಥ ಒಳ್ಳೇ ಮಕ್ಕಳನ್ನು ಪಡೆದ ಪರ್ವತರಾಜನು ಎಷ್ಟು ಪುಣ್ಯವಂತನೋ ಎಂದು ಜನರೆಲ್ಲ ಸಂತೋಷದಿಂದ ಅವನನ್ನು ಹೊಗಳುತಿದ್ದರು. ಇಂಥ ಮಕ್ಕಳನ್ನು ಕಂಡರೆ ಅವರ ತಾಯಿ ತಂದೆಗಳಿಗೆ ಎಷ್ಟು ಸಂತೋಷ. ಆದ್ದರಿಂದಲೇ ತನ್ನ ಮಕ್ಕಳನ್ನು ಬಹು ಪ್ರೀತಿಯಿಂದ ಸಾಕುತ್ತಾ ಇದ್ದನು. ಇನ್ನೊಂದು ದೇಶದಲ್ಲಿ ದೇವೇಂದ್ರನೆಂಬ ಒಬ್ಬಾನೊಬ್ಬ ರಾಜನು ಇದ್ದನು. ಅವನಿಗೆ ಸೂರ್ಯನೆಂಬ ಒಬ್ಬ ಜೊತೆಗಾರನಿದ್ದನು. ಈ ದೇವೇಂದ್ರನಿಗೆ ಪರ್ವತರಾಜನಲ್ಲಿ ಬಹು ಹಗೆತನವಿತ್ತು. ಆದ್ದರಿಂದ ಪರ್ವತರಾಜನಿಗೆ ಕಾಣದಂತೆ ತನ್ನ ಸ್ನೇಹಿತನಮೂಲಕ ಅವನ ಮಕ್ಕಳನ್ನೆಲ್ಲ ಹಿಂಸಿಸಿ ಹಿಂಸಿಸಿ ಗೋಳಿಡಿಸುತ್ತಿದ್ದನು. ಈ ಸಮಾಚಾರವು ಮೆಲ್ಲಗೆ ಪರ್ವತರಾಜನ ಕಿವಿಗೆ ಬಿತ್ತು. ಅವನು ಬಹಳ ಕೋಪಗೊಂಡು ಈ ದೇವೇಂದ್ರನ ಸಂಪತ್ತನ್ನೆಲ್ಲ ಬಾಚಿಹಾಕಿಕೊಳ್ಳಬೇಕೆಂದು ಯೋಚಿಸಿದನು. ಈ ಇಂದ್ರನ ಸೈನಿಕರೆಲ್ಲ ಸೂರ್ಯನ ಮಕ್ಕಳೇ (ಮೋಡಗಳು.) ಇದನ್ನು ತಿಳಿದು ಇವರನ್ನೆಲ್ಲ ಹಿಡಿಗುಹಾಕುತ್ತಾ ಬಂದರೆ ಈ ಇಬ್ಬರ ಸೊಕ್ಕು ಮುರಿಯುವುದೆಂದು

ತಿಳಿದು ಅಂದಿನಿಂದ ಇವರನ್ನೆಲ್ಲ ಹಿಡಿದು ಹಿಡಿದು ತನ್ನಲ್ಲಿ ಸರೆ ಇಡುತ್ತಾ ಬಂದನು. ಈ ಸೂರ್ಯನ ಮಕ್ಕಳು ಬಹಳ ಒಳ್ಳೆಯವರೆಂದು ತಿಳಿದು ಬರುತ್ತಲೂ ತನ್ನ ಮಕ್ಕಳ ಜೊತೆಗಾರರಾಗಿರುವಂತೆ ಕಟ್ಟುಮಾಡಿದನು. ಈ ಸೂರ್ಯನ ಮಕ್ಕಳಿಗೂ ಪರ್ವತ ರಾಜನ ಮಕ್ಕಳಿಗೂ ತುಂಬಾ ಸ್ನೇಹಬಿದ್ದು ಇಬ್ಬರೂ ಜನಸಹಾಯಕ್ಕಾಗಿಯೇ ನಿಂತರು. ಎಲ್ಲೆಲ್ಲಿ ನೋಡಿದರೂ ಇವರ ಓಡಾಟವೇ. ಯಾವ ತೋಟಗಳಲ್ಲಿಯೂ ಗದ್ದೆಗಳಲ್ಲಿಯೂ ಇವರೇ. ಯಾವ ಕೆರೆ ಬಾವಿಗಳಲ್ಲೂ ಇವರೇ. ಇವರಿರುವ ಕಡೆಯಲ್ಲಿ ಯಾವುದಕ್ಕೂ ಕೊರತೆಯಿಲ್ಲ. ಎಲ್ಲೆಲ್ಲೂ ಮಳೆ ಬೆಳೆಗಳಿಂದ ಕೂಡಿ ರಾಜ್ಯವೆಲ್ಲಾ ಒಂದು ಶೃಂಗಾರತೋಟದಂತಿದ್ದಿತು. ಎಲ್ಲೆಲ್ಲಿ ನೋಡಿದರೂ ಅಂದವಾದ ಹೂಗಳೂ, ಹಸಿದಾದ ಗಿಡಗಳೂ, ಸೊಗಸಾದ ಬಳ್ಳಿಗಳೂ ಕಂಗೊಳಿಸುತ್ತಿದ್ದುವು. ಈ ತೋಟದ ಮಧ್ಯದಲ್ಲಿ ಒಂದೊಂದು ಕಡೆ ಮೃಗಶಾಲೆಯನ್ನಿಡಿಸಿದ್ದನು. ಅಲ್ಲಲ್ಲೆ ಹುಲಿಗಳು, ಸಿಂಹಗಳು, ಆನೆಗಳು ; ಗಿಳಿ, ನವಿಲು ಮುಂತಾದ ಬಗೆಬಗೆಯ ಹಕ್ಕಿಗಳು, ಇವುಗಳನ್ನೆಲ್ಲ ನೋಡುತಿದ್ದರೆ ಅಲ್ಲಿಂದ ಹಿಂದಿರುಗಿ ಬರುವುದಕ್ಕೇ ಆಗುತಿರಲಿಲ್ಲ. ಇದಕ್ಕಾಗಿಯೇ ಅನೇಕರು ಈ ತೋಟವನ್ನು ನೋಡುವುದಕ್ಕಾಗಿ ಬಂದು ಹೋಗುತ್ತಿರುವರು.

ಕಥೆಯು ಮುಂದಟ್ಟಾಗುವುದಕ್ಕಾಗಿ ಮಧ್ಯೆ ಮಧ್ಯೆ ಹುಡುಗರನ್ನು ಪ್ರಶ್ನಿಸುತ್ತಾ ಪುನರಾವರ್ತನೆ ಮಾಡಿಸುತ್ತಲೇ ಕಥೆಯನ್ನು ಬೆಳೆಯಿಸುತ್ತಾ ಹೋಗುವೆನು.

ಷರಾ:—ಮೈಸೂರು ಪಟ್ಟಣದಲ್ಲಿರುವ ವಿದ್ಯಾರ್ಥಿಗಳಿಗೆ ಈ ಟಿಪ್ಪಣಿಯು ಕ್ರಮವೆಲ್ಲ ತಕ್ಕುದಾಗಿದೆ. ಇತರ ಪರ್ವತಪ್ರಾಂತದವರಿಗೂ ಬಹುಶಃ ಹೊಂದುತ್ತದೆ. ಬೆಟ್ಟಗಳಿಲ್ಲದಕಡೆಯವರು ಸಣ್ಣ ದೊಡ್ಡ ಕಲ್ಲುಗಳಿಂದಲೂ, ಮಣ್ಣಿನಿಂದಲೂ ತಕ್ಕಷ್ಟು ದೊಡ್ಡದಾಗಿ ಪರ್ವತಗಳನ್ನು ಮಾದಿರಿಯಾಗಿ ಮಾಡಿ ತೋರಿಸಿ ವಿಷಯಗಳನ್ನು ಸ್ಪಷ್ಟಪಡಿಸುವುದಲ್ಲದೆ, ಪ್ರಕೃತಿ ವಿಮರ್ಶೆಯ ಪಾಠದ ಒಂದು ಭಾಗವಾದ 'ನೇಚರ್‌ರ್‍ಯಾಂಬಲ್ಸ್' (ಪ್ರಕೃತಿ ಸಂಚಾರ) ಪಾಠನಡೆಸುವಾಗ ಗ್ರಾಮದ ಸುತ್ತುಮುತ್ತಣ ಪ್ರದೇಶದಲ್ಲಿರುವ ಗುಡ್ಡಗಳನ್ನೋ ಸಾಧ್ಯವಾದರೆ ಸಣ್ಣ ಬೆಟ್ಟಗಳನ್ನೋ ತೋರಿಸಿ ಸ್ಪಷ್ಟಪಡಿಸಬಹುದು. ಮಕ್ಕಳಿಗೆ ಕಥೆಯನ್ನು ಹೇಳುವಾಗ ಮಾತಾಡುವ ರೀತಿಯಲ್ಲಿ ಇನ್ನೂ ಸುಲಭವಾದ ಭಾಷೆಯಲ್ಲಿ ಹೇಳಬಹುದು. ಈತೆರದ ಕಲ್ಪನೆಯ ಕಥೆಗಳಿಂದ ಮುಂದಿನ ತರಗತಿಗೆ ಅನುಕೂಲಿಸುವಂತೆ ಚರಿತ್ರೆ, ಭೂವಿವರಣೆಯ ಪಾಠಗಳಿಗೆ ಸಂಬಂಧಿಸಿಕೊಳ್ಳುವದಲ್ಲದೆ ಪ್ರಕೃತಿಗೆ ಪ್ರತಿ ಪಾಠವನ್ನೂ ಸಂಬಂಧಿಸಿಕೊಂಡು, ಪ್ರಕೃತಿ ವಸ್ತುಗಳ ಸ್ವಭಾವವನ್ನು ನಿರೂಪಿಸುವುದರ ಮೂಲಕ ದೇವರಲ್ಲಿ ಅಪಾರವಾದ ಭಕ್ತಿಯನ್ನುಂಟುಮಾಡಿ ಮಕ್ಕಳಲ್ಲಿ ಅವುಗಳ ನಿದರ್ಶನೆಯಿಂದ ಪರೋಪಕಾರ, ಮಾತಾ ಪಿತೃಭಕ್ತಿ ಮುಂತಾದ ಸದ್ಗುಣಗಳನ್ನೂ ಉಂಟುಮಾಡಿ ಮಕ್ಕಳನ್ನು ನಡತೆವಂತರನ್ನಾಗಿಯೂ ಮಾಡಬೇಕು.

B. O. S.

❀ ವಿದ್ಯಾದಾಯಿನಿ. ❀

(A MONTHLY JOURNAL)

ಭಾಗ ೧೨] ಮಾರ್ಚಿ—೧೯೧೯ [ಸಂಚಿಕೆ ೩

ಕಿಂಡರ್‌ಗಾರ್ಟನ್.

"ಬಳ್ಳಿಯಾಗಿ ಬಗ್ಗುವುದಲ್ಲದೆ ಮರವಾಗಿ ಬಗ್ಗದು" ಎಂಬ ಗಾದೆಯು ವನಸ್ಪತಿವರ್ಗಕ್ಕೆ ಹೇಗೆ ಸಹಜವೋ ಮನುಷ್ಯವರ್ಗಕ್ಕೂ ಹಾಗೆ ಸಹಜವೆಂದರಿತು ಬಾಲಶಿಕ್ಷಣವನ್ನು ಕ್ರಮಪಡಿಸಲು ಈ ಅಪೂರ್ವಪದ್ಧತಿಯನ್ನು ಆಚರಣೆಗೆ ತಂದವನು ಫ್ರೆಡರಿಕ್ ಫ್ರೋಬೆಲ್ ಎಂಬುವನು ಮನುಷ್ಯರಾದವರಲ್ಲಿ ಇರತಕ್ಕ ಅಜ್ಞಾನಕ್ಕೂ, ದುಷ್ಟಾಚರಣೆಗೂ, ದೌರ್ಬಲ್ಯಕ್ಕೂ ಅವರ ಬಾಲ್ಯದಲ್ಲಿ ವಿದ್ಯಾಭ್ಯಾಸಕ್ಕೆ ಉಂಟಾದ ಅನಾದರಣೆಯೂ, ಔದಾಸೀನ್ಯವೂ ಕಾರಣವೆಂದು ನಿಶ್ಚಯಿಸಿದನು. ಮಕ್ಕಳು ಸಸಿಗಳನ್ನು ವಿಶೇಷವಾಗಿ ಹೋಲುವುವೆಂದು ಹೇಳುತ್ತಿದ್ದನು. ಸಸಿಯನ್ನು ಪೋಷಿಸಿ ಫಲವತ್ತನ್ನಾಗಿ ಮಾಡುವುದಕ್ಕೆ ತೋಟಗಾರನು ಎಷ್ಟು ಅನುಕೂಲಗಳನ್ನು ಕಲ್ಪಿಸಿಕೊಂಡು ಕಂಟಕಗಳನ್ನು ಮುರಿದು ಅದರ ಏಳಿಗೆಯನ್ನು ಆತುರದಿಂದ ಕಾಯುವನೋ ಹಾಗೆಯೇ ಬಾಲಕರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಟ್ಟು ತೊಂದರೆಗಳನ್ನು ತಪ್ಪಿಸಿ ಅವರ ಏಳಿಗೆಯನ್ನು ಕಾಯುವುದು ಅವಶ್ಯಕವು. ಸಸಿಯ ಏಳಿಗೆಗೆ ಅವಶ್ಯಕವಾದವು, ಉತ್ಕೃಷ್ಟವಾದ ಭೂಮಿ, ಸಾಕಾದಷ್ಟು ಸೂರ್ಯರಶ್ಮಿ, ಬೇಕಾದಷ್ಟು ನೀರು ಇವುಗಳು. ಸಸಿಯು ದಿನೇದಿನೇ ದೊಡ್ಡದಾಗಿ ಸೊಂಪಾಗಿ ಬೆಳೆದು ಪುಷ್ಪಫಲಭರಿತವಾಗಿ ತೋಟಗಾರನಿಗೆ ಮಾತ್ರವಲ್ಲದೆ ಅದನ್ನು ನೋಡಿದ ಎಲ್ಲರಿಗೂ ಆಹ್ಲಾದವನ್ನುಂಟುಮಾಡುವುದು. ಬಾಲಕ

ನೆಂಬ ಸಸಿಯನ್ನು ವೃದ್ಧಿಗೊಳಿಸುವ ಉಪಾಧ್ಯಾಯನೆಂಬ ತೋಟಗಾರನಿಗೆ ವಿದ್ಯಾರಂಗವೇ ಉತ್ಕೃಷ್ಟ ಭೂಮಿ, ವಿಹಾರಸ್ಥಾನವೇ ಸೂರ್ಯರಶ್ಮಿ, ಆಹಾರವೇ ಬೇಕಾದಷ್ಟು ನೀರು. ಈ ನಡುವೆ ಬೆಳೆಯುವ ಬಾಲಸಸಿಯ ಏಳಿಗೆಗೆ ಕುಂದಕತರುವ ಕ್ರಿಮಿಕೀಟಾದಿಗಳೇ ದುಸ್ಸಂಗ. ಈ ದುಸ್ಸಹವಾಸವು ವೃದ್ಧಿಯಾಗದಂತೆ ಕಾದು ತಪ್ಪಿಸತಕ್ಕದ್ದೇ, ಚತುರನಾದ ಉಪಾಧ್ಯಾಯನ ಧರ್ಮ. ಸಸಿಯಲ್ಲಿರುವಂತೆ ಮಕ್ಕಳಲ್ಲಿಯೂ ಕೆಲವು ಸಹಜಗುಣಗಳಿರುವುವು. ಬಾಲಬೋಧಕನಾದ ಉಪಾಧ್ಯಾಯನು ಮಕ್ಕಳ ಸ್ವಭಾವವನ್ನು ಚೆನ್ನಾಗಿ ಅರಿತವನಾಗಿರಬೇಕು. ಚಟುವಟಿಕೆಯು ಆರೋಗ್ಯವಾದ ಮಗುವಿಗೆ ಸಹಜಗುಣವು. ಬಾಲ್ಯಸ್ವಭಾವಕ್ಕೆ ಲಕ್ಷಣವು ಯಾವುದೆಂದು ಕೇಳಿದಲ್ಲಿ “ಆಟ” ವೆಂದು ನಿಸ್ಸಂದೇಹವಾಗಿ ಹೇಳಬಹುದು. ಆಟವಾಡದಿರುವ ಮಗುವು ಅದು ಮಗುವೇ ಅಲ್ಲವು. ಆರೋಗ್ಯಸ್ಥಿತಿಯಲ್ಲಿರುವ ಪ್ರತಿಯೊಂದು ಶಿಶುವೂ ಬಹಳ ಚಟುವಟಿಕೆಯಾಗಿರುವುದೆಂಬುದು ಸಕಲರಿಗೂ ಗೊತ್ತೇ ಇರುವುದು. ನಿರ್ಲಕ್ಷ್ಯವಾಗಿ ನೋಡಿದಲ್ಲಿ ಈ ಚಟುವಟಿಕೆಯು ಉದ್ದೇಶರಹಿತವೆಂದು ಅನೇಕರು ತಿಳಿಯುವರು.

ಆದರೆ ವಿಮರ್ಶಿಸಿದಲ್ಲಿ ಈ ಚಟುವಟಿಕೆಯು, ಶಾರೀರಕ, ಮಾನಸಿಕ, ಅಭಿವೃದ್ಧಿಗೆ ಅವಶ್ಯವಾದುಗೆಂದು ವ್ಯಕ್ತವಾಗುವುದು. ಸಸ್ಯಾದಿಗಳು ಮತ್ತು ಜೀವಜಂತುಗಳ ಅಭಿವೃದ್ಧಿಯೂ “ಚಟುವಟಿಕೆಯೇ ಅಭಿವೃದ್ಧಿಗೆ ಕಾರಣ” ವೆಂಬ ನಿಯಮವನ್ನೇ ಅನುಸರಿಸಿರುವುದು.

ಮನಶ್ಶಕ್ತಿಗಳೂ ಈ ನಿಯಮವನ್ನೇ ಅನುಸರಿಸಿರುವುವು. ಯಾವ ಮನೋವ್ಯಾಪಾರವೂ ಮೊದಳಿನಲ್ಲಿ ಚಲನೆಯುಂಟಾಗದಿದ್ದಲ್ಲಿ ನಡೆಯುವುದೇ ಇಲ್ಲವು. ಆದಕಾರಣ ನಿರಾತಂಕವಾದ ಚಟುವಟಿಕೆಯು ಮಕ್ಕಳ ಅಭಿವೃದ್ಧಿಗೆ ಅತ್ಯವಶ್ಯಕವಾದುದು. ಈ ಕಾರಣದಿಂದಲೇ ಮಕ್ಕಳ ಆಟವನ್ನು ವೃದ್ಧಿಪಡಿಸಬೇಕೆಂಬುದು. ಕಿಂಡರ್‌ಗಾರ್ಟನ್ ಬೋಧನೆಯ ಪ್ರಾಮುಖ್ಯತೆಯೂ ಇದರಿಂದಲೇ.

ಮಕ್ಕಳ ಆಟದ ತತ್ವವನ್ನು ಫ್ರೊಬೆಲ್ಲನು ತಿಳಿದುಕೊಂಡದ್ದಲ್ಲದೆ, ಈ ಆಟದಲ್ಲಿ ಜನಗಳ ಅಭಿವೃದ್ಧಿಯನ್ನೂ, ನಾಗರಿಕತೆಯನ್ನೂ ಸೂಚಿಸುವ ಸ್ವಾಭಾವಿಕ ಚಿಹ್ನೆಗಳು ವ್ಯಕ್ತವಾಗುವುವೆಂದು ಹೇಳುತಿದ್ದನು. ಅಂದರೆ ಹುಟ್ಟುತ ಮನುಷ್ಯನಲ್ಲಿ ಅಬೋಧಕವಾದ ಜ್ಞಾನವಿರುವುದೆಂತಲೂ, ಈ ಜ್ಞಾನವೇ ಮುಂದಣ ಅಭಿವೃದ್ಧಿಗೂ, ನಾಗರಿಕತೆಗೂ ಕಾರಣವೆಂತಲೂ ಹೇಳುತಿದ್ದನು. ಹೇಗೆಂದರೆ ಪಕ್ಷಿಗಳು ತಮ್ಮ ಗೂಡುಗಳನ್ನು ಕಟ್ಟುವ ಶಕ್ತಿಯನ್ನು ಸ್ವಭಾವಸಿದ್ಧವಾಗಿ ಹೊಂದಿರುವುವು. ಆದರೆ ಈ ಶಕ್ತಿಯು ವ್ಯತ್ಯಾಸವನ್ನು ಹೊಂದದೆ ಕೊನೆಯವರೆಗೂ ಏಕ

ರೀತಿಯಾಗಿರುವುದು. ಮನುಷ್ಯನಲ್ಲಾದರೋ ಈ ನೈಸರ್ಗಿಕ ಜ್ಞಾನವು ವಿದ್ಯಾಭ್ಯಾಸದಿಂದ ವ್ಯತ್ಯಾಸವನ್ನು ಹೊಂದುವುದು. ಮನುಷ್ಯನಿಗೂ ಇತರ ಜೀವ ಜಂತುಗಳಿಗೂ ಇದೇ ವ್ಯತ್ಯಾಸವು.

ಭೂಮಿಯಲ್ಲಿ ನಟ್ಟ ಬೀಜವು ಭೂಮಿಯೊಳಗಿನ ಕತ್ತಲನ್ನು ತಪ್ಪಿಸಿಕೊಂಡು ಸೂರ್ಯನ ಬೆಳಕಿಗೆ ಬರುವುದಕ್ಕೆ ಹೇಗೆ ಪ್ರಯತ್ನಿಸುವುದೋ, ಅದೇ ರೀತಿಯಲ್ಲಿ ಬಾಲ್ಯಾವಸ್ಥೆಗೆ ಸ್ವಾಭಾವಿಕವಾದ ಗುಣಗಳನ್ನು ಬಿಟ್ಟು ಶಿಶುವು ಕ್ರಮವಾಗಿ ಅಭಿವೃದ್ಧಿಹೊಂದುವುದು. ಸಸ್ಯಾದಿಗಳ ಭ್ರೂಣವು ಅಂಕುರಿಸಿ, ಬೆಳೆದು, ಪುಷ್ಪಫಲಗಳನ್ನು ಬಿಡಬೇಕಾದರೆ, ಎಡಬಿಡದೆ ಪೋಷಣೆಯು ಹೇಗೆ ಅವಶ್ಯಕವೋ, ಅದೇ ರೀತಿ ಮಕ್ಕಳು ದೊಡ್ಡವರಾಗಿ ಅಭಿವೃದ್ಧಿಯನ್ನು ಹೊಂದಿ ತಮ್ಮ ಶಕ್ತಿಗಳೆಲ್ಲವನ್ನೂ, ಸಂಪೂರ್ಣತೆಯಿಂದುಪಯೋಗಿಸಿಕೊಳ್ಳಬೇಕಾದರೆ ಕ್ರಮವಾದ ವಿದ್ಯಾಭ್ಯಾಸವು ಅವಶ್ಯಕವಾಗಿರುವುದು.

ಇದರಿಂದ ಕಿಂಡರ್‌ಗಾರ್ಟನ್ ಎಂಬುದರ ಅರ್ಥವು ಸ್ವಲ್ಪಮಟ್ಟಿಗೆ ವಿಶದವಾಯಿತೆಂದು ಹೇಳಬಹುದು.

ಬೇರೆಬೇರೆ ದೇಶದ ಜನಗಳು ಒಬ್ಬರನ್ನೊಬ್ಬರು ನಾಗರಿಕತೆಯಲ್ಲಿ ಮೀರಿಸಿದ್ದರೂ ನೈಸರ್ಗಿಕ ಜ್ಞಾನವು ಸರ್ವಸಾಮಾನ್ಯವಾಗಿರುವುದು. ಆದಕಾರಣ ಶಿಕ್ಷಕರು ಬಾಲಕರ ಈ ಜ್ಞಾನವನ್ನು ಚೆನ್ನಾಗಿ ಪರೀಕ್ಷಿಸಬೇಕು.

ಬಾಲ್ಯಸ್ವಭಾವವನ್ನು ತಿಳಿಯದವನು ಹೇಗೆತಾನೆ ಸತ್ಶಿಕ್ಷಕನಾದಾನು ? ಎಂದಿಗೂ ಆಗಲಾರನು. ಬಾಲಕರ ಸಹಜಜ್ಞಾನವನ್ನು ಅವರ ಆಟಗಳಲ್ಲಿಯೇ ಗೊತ್ತು ಮಾಡಬಹುದು.

ಫ್ರೊಬೆಲ್ಲನು ಕಿಂಡರ್‌ಗಾರ್ಟನ್ ಎಂಬ ಪದ್ಧತಿಯನ್ನು ಸ್ಥಾಪಿಸಿದನೆಂದು ತಿಳಿಸಿತಷ್ಟೆ. ಆದರೆ ಕಳೆದ ನಲವತ್ತುವರ್ಷಗಳಿಂದೀಚೆಗೆ ಮಾತ್ರ ಯೂರೋಪ್ ಖಂಡದಲ್ಲಿಯೂ, ಅಮೆರಿಕದಲ್ಲಿಯೂ, ಬಾಲಶಿಕ್ಷಕರು ಈ ಪದ್ಧತಿಯನ್ನನುಸರಿಸಿರುವರು. ನಮ್ಮದೇಶದಲ್ಲಿಯೂ ಈ ಕ್ರಮವು ಈಗೀಗ ಅಂಕುರಿಸುತಲಿರುವುದು.

ಹೀಗೆ ಬೋಧಿಸುತಿದ್ದರೂ ಕಿಂಡರ್ ಗಾರ್ಟನ್ ಪದ್ಧತಿಯ ಉದ್ದೇಶವನ್ನೂ ಅದರ ತತ್ವವನ್ನೂ, ತಿಳಿದ ಶಿಕ್ಷಕರು ಬಹಳ ಕಡಮೆ. ಕಿಂಡರ್‌ಗಾರ್ಟನ್ ಪಾಠಶಾಲೆಗಳಲ್ಲಿ ಎರಡುವರುಷಗಳಿಂದ ಏಳುವರ್ಷದ ವರೆಗಿನ ಬಾಲಕರಿಗೆ ಪದಾರ್ಥಜ್ಞಾನವನ್ನು ವಸ್ತುಗಳ ಮೂಲಕದಿಂದಲೇ ಉಂಟುಮಾಡಬೇಕು. ಇಂದ್ರಿಯಶಕ್ತಿಗಳ ಅಭಿವೃದ್ಧಿಯೇ ಕಿಂಡರ್‌ಗಾರ್ಟನ್ ಪದ್ಧತಿಯ ಮುಖ್ಯೋದ್ದೇಶವು. ಈ ಪದ್ಧತಿಯನ್ನನುಸರಿಸಿ ಬೋಧಿಸುತಿರುವಾಗ ಶಿಕ್ಷಕನು ಮಕ್ಕಳ ಸ್ವಭಾವಕ್ಕೆ ವ್ಯತಿ

ರಿಕ್ತವಾಗಿ ನಡೆಯದೆ ಅವರ ಆಟಪಾಟಗಳಿಗೆ ಗಮನಕೊಟ್ಟು ತಿದ್ದಿ ಕ್ರಮಪಡಿಸು ವುದಕ್ಕಿಂತಅತಿಶಯವಾದ ಕೆಲಸವು ಬೇರೆ ಇಲ್ಲವೆಂದು ತಿಳಿದಿರಬೇಕು.

ಆಟದಲ್ಲಿ ಪ್ರೀತಿಇರುವಂತೆ ಬಾಲಕರಿಗೆ. ವ್ಯವಸಾಯದಲ್ಲಿಯೂ ಪ್ರೀತಿ ಇರುವುದು. ಆಟಕ್ಕೆ ಸಾಧನೆಯನ್ನೊದಗಿಸಿಕೊಡದಿರುವುದರಿಂದಲೇ, ಬಾಲಕರು ಬೀದಿಯ ಧೂಳನ್ನು ಎರಚಿಕೊಂಡು ಆಡುವುದರಲ್ಲಿಯಾದರೂ ಸಂತೋಷಪಡು ವರು. ಭೂಮಿಯನ್ನು ಅಗೆಯುವುದು, ಮರಳನ್ನು ತೋಡುವುದು, ಪ್ರಾರಂಭ ದಲ್ಲಿ ಅಲ್ಪಕೆಲಸಗಳೆಂದು ತೋರಿದರೂ ಅವುಗಳ ಫಲಿತಾಂಶವು ಮುಖ್ಯವಾದುದು. ಬೀಜಗಳನ್ನು ಬಿತ್ತುವುದರಲ್ಲಿಯೂ, ಸಸಿಗಳನ್ನು ನೆಡುವುದರಲ್ಲಿಯೂ ಮಕ್ಕಳಿಗೆ ಅತ್ಯಂತ ಸಂತೋಷವುಂಟಾಗುವುದು. ಈ ಅಭಿಲಾಷೆಗೆ ಪ್ರೋತ್ಸಾಹಕೊಡದಿದ್ದ ರಾಗಲೀ. ಅಥವ ಅದನ್ನು ನಾಶಪಡಿಸಿದರಾಗಲೀ, ಉಂಟಾಗುತಿದ್ದ ಪ್ರಯೋಜನವು ದೊರೆಯದಿರುವುದು ಮಾತ್ರವಲ್ಲದೆ, ಮಕ್ಕಳು ಕೇವಲ ಸೋಮಾರಿಗಳಾಗುವರು. ಇದನ್ನು ತಿಳಿದ ಶಿಕ್ಷಕನು ಮಕ್ಕಳಿಗೆ ತಕ್ಕ ಸಾಮಗ್ರಿಗಳನ್ನೊದಗಿಸಿಕೊಟ್ಟಲ್ಲಿ, ಅವರು ಭೂಮಿಯನ್ನು ಅಗೆದು, ಬೀಜಗಳನ್ನು ಹುಟ್ಟಿಹಾಕಿ, ಸಸಿಗಳಿಗೆ ನೀರೆರೆದು, ಪುಷ್ಪ, ಫಲಗಳು ಬಿಡುವ ಕಾಲಗಳನ್ನು, ಅತ್ಯಾತುರದಿಂದ ನಿರೀಕ್ಷಿಸಿಕೊಂಡಿರು ವರು. ಅಲ್ಲದೆ ಆಯಾಕಾಲದಲ್ಲಿ ಭ್ರೂಣವು ಅಂಕುರಿಸುವುದು. ಪುಷ್ಪಿಸುವುದು, ಫಲಿಸುವುದು, ಇವುಗಳನ್ನು ನೋಡುತಿರುವುದರಿಂದಲೂ, ಕೋಕಿಲೆ, ಗಿಣಿ ಮುಂ ತಾದ ಪಕ್ಷಿಗಳು ಗೂಡು ಕಟ್ಟುವುದನ್ನೂ, ದುಂಬಿ, ಚಿಟ್ಟೆ ಮುಂತಾದವುಗಳು ಮಕ ರಂದ ಪಾನಕ್ಕೆ ಬರುವುದನ್ನು ನೋಡುವುದರಿಂದಲೂ, ಮಕ್ಕಳು ಪಾಠಶಾಲೆಗಳಲ್ಲಿ ಪುಸ್ತಕಗಳನ್ನೋದಿ ಕಲಿಯುವ ಜ್ಞಾನಕ್ಕಿಂತಲೂ ಅತಿಶಯವಾದ ಜ್ಞಾನವನ್ನು ಸಂಪಾದಿಸುವರು.

ಆದರೆ ಮಕ್ಕಳ ಇಂದ್ರಿಯಗಳ ಸಂತೋಷಮಾತ್ರವೇ ಅವರ ಜ್ಞಾನಾಭಿ ವೃದ್ಧಿಗೆ ಮುಖ್ಯಕಾರಣವೆಂದು ತಿಳಿಯಕೂಡದು. ಸಸಿ, ಮೃಗಾದಿಗಳನ್ನು ಪೋಷಿಸು ವುದರಿಂದ ಬಾಲ್ಯಕ್ಕೆ ಸ್ವಾಭಾವಿಕವಾದ ಸ್ವಾಭಿಲಾಷೆಯು ಕ್ರಮೇಣ ನಾಶಹೊಂದಿ, ಪರೋಪಕಾರಬುದ್ಧಿಯು ಅಂಕುರಿಸುವುದು. ಆದರೆ ಬಲಾತ್ಕಾರದಿಂದ ಯಾವ ಕೆಲ ಸವನ್ನೂ ಮಾಡಿಸಕೂಡದು. ಸುಲಭವಾದ ಮಾರ್ಗಗಳನ್ನು ತೋರಿಸಿದಲ್ಲಿ, ಅನಂ ತರ ಅಸಹಾಯರಾಗಿ ತಾವೇ ಕೆಲಸಮಾಡಬೇಕೆಂಬ ಅಪೇಕ್ಷೆಯು ಬಾಲಕರಲ್ಲಿ ಉಂಟಾಗುವುದು.

ಸಸಿ, ಮೃಗಾದಿಗಳನ್ನು ಪೋಷಿಸಬೇಕೆಂಬ ಅಪೇಕ್ಷೆಯು ಮಕ್ಕಳಲ್ಲಿ ಅತಿ ಶಯವಾಗಿರುವುದರಿಂದಲೇ ಪ್ರೊಬೆಲ್ಲನು ಈ ಪದ್ಧತಿಗೆ “ಕಿಂಡರ್‌ಗಾರ್ಟನ್” ಎಂದು ಹೆಸರಿಟ್ಟನು. ಹಿಂದೆ ಸೂಚಿಸಿರುವುದರಿಂದಲೂ, ಈಗ ವಿವರಿಸಿದ ಅರ್ಥ ದಿಂದಲೂ ಈ ಪದಕ್ಕೆ ಸಂಪೂರ್ಣಸಾರ್ಥಕ್ಯವನ್ನು ಕೊಟ್ಟಂತಾಯಿತು. P. V.

ಭೂ ವಿ ವ ರ ಣೆ .

(ಸಿಂಹಳದ್ವೀಪ)

ಉದ್ದೇಶ:—ವಾಚಸಿಕ ಬೋಧನೆಯ ಪ್ರಕಾರ ಸಿಂಹಳದ್ವೀಪವನ್ನು ವಿವರಿಸುವುದು.

ಸಾಧನಗಳು:—ಇಂಡಿಯಾ ದೇಶದ ಪಠ, ಸಿಂಹಳದ್ವೀಪದ ಅಕ್ಷರವಿಲ್ಲದ ನಕ್ಷೆ, ಪೂರ್ವಾರ್ಧಗೋಳ.

ವಿಷಯಗಳು	ಬೋಧನಾಕ್ರಮ
I. ಪೀಠಿಕೆ:—ಸಿಂಹಳದ್ವೀಪವು ಇಂಡಿಯಾ ದೇಶಕ್ಕೆ ದಕ್ಷಿಣದಲ್ಲಿದೆ.	ಪಠದ ಸಹಾಯದಿಂದ ಬಾಲಕರೇ ಉತ್ತರವನ್ನು ಹೇಳುವಂತೆ ಪ್ರಶ್ನೆಮಾಡಿ. ಅದಿರುವ ದಿಕ್ಕನ್ನೂ, ಆ ದ್ವೀಪವನ್ನೂ ಸಹಾ ಅವರೇ ತೋರಿಸುವಂತೆ ಮಾಡುವುದು.
II. (1) ಸ್ಥಾನ—ಮೇರೆ. ಹಿಂದೂಸಾಗರದಲ್ಲಿರುವ ದ್ವೀಪವು ಇದೇ ರಾಮಾಯಣದಲ್ಲಿ ಹೇಳಿರುವ ಲಂಕಾಪಟ್ಟಣವು.	ದ್ವೀಪದ ಲಕ್ಷಣವನ್ನು ಬಾಲಕರಿಂದ ಹೇಳಿಸಿ, ಇದರ ಮೇರೆಗಳನ್ನು ಅವರೇ ಊಹಿಸುವಹಾಗೆ ಪ್ರಶ್ನೆಮಾಡುವುದು. ತರುವಾಯ ಹಿಂದೆ ಇಲ್ಲಿಗೆ ಕಪಿಸೈನ್ಯದೊಡನೆ ದಂಡೆತ್ತಿ ಬಂದಿದ್ದವನಾರೆಂದು ಪ್ರಶ್ನೆಮಾಡಿ, ಇದು ರಾಮಾಯಣದಲ್ಲಿ ಪ್ರಸಿದ್ಧವಾಗಿರುವ ಲಂಕಾಪಟ್ಟಣವೆಂದು ತಿಳಿಸಿ ಹಲಗೆಯ ಮೇಲೆ ಬರೆವುದು.
(2) ದೇಶದ ಲಕ್ಷಣ:— ಮಧ್ಯಭಾಗದಲ್ಲಿ ಪೀಠಭೂಮಿ ತಲೆಗಲ್ಲು ಬೆಟ್ಟವಿದೆ. ಇದರಲ್ಲಿ ಹುಟ್ಟುವ ನದಿಗಳು ನಾನಾಕಡೆಗೂ ಹೋಗುವುವು. ಇವುಗಳಲ್ಲಿ ಮಹಾ	ನದಿಗಳು ಹರಿಯುವ ರೀತಿಯನ್ನು ಪ್ರಶ್ನೆಮಾಡಿ ದೇಶದ ಎತ್ತರ ತಗ್ಗುಗಳನ್ನು ತಿಳಿಸಿ, ಕಾವೇರೀ ನದಿಯ ಪಕ್ಕದಲ್ಲಿ ಫಲವತ್ತಾದ ಭೂಮಿಗಳಿರುವಂತೆ ಇಲ್ಲಿಯೂ ಫಲವತ್ತಾದ ಭೂಮಿಗಳಿವೆ ಎಂಬುತ್ತರವನ್ನು ಬಾಲಕರೇ

ವಿಷಯಗಳು.	ಬೋಧನಕ್ರಮ.
ವಿಲಗಂಗಾ, ದೊಡ್ಡದು. ನೆಲವೆಲ್ಲಾ ಫಲವತ್ತಾಗಿದೆ.	ಹೇಳುವಂತೆ ಮಾಡಿ, ಮರುಭೂಮಿ ಇಲ್ಲ. ಎಲ್ಲವೂ ಫಲವತ್ತಾಗಿವೆ. ಎಂಬಂಶವನ್ನು ಸ್ಪಷ್ಟಗೊಳಿಸಿ ಹಲಿಗೆಯಮೇಲೆ ಒರೆವುದು.
III. ಬೆಳೆಗಳು—ದಕ್ಷಿಣ ಇಂಡಿಯಾದ ಬೆಳೆಗಳೆಲ್ಲವೂ ಬೆಳೆಯುವುವು. ಟೀ, ಕಾಫಿ, ಸಿಂಕೋನ, ಹತ್ತಿ, ಕಬ್ಬು, ಹೊಗೆಯಸೊಪ್ಪು, ಮೆಣಸು, ಏಲಕ್ಕಿ, ತೆಂಗು ಅಡಿಕೆ,	ಉಷ್ಣವಲಯದ ಬೆಳೆಗಳನ್ನು ಬಾಲಕರಿಂದ ಹೇಳಿಸಿ ಇಲ್ಲಿಯ ಬೆಳೆಯನ್ನು ಬರೆದು 2—3 ಬಾಲಕರಿಂದ ಆವೃತ್ತಿಮಾಡಿಸುವುದು.
IV (1) ಜನರ ಉದ್ಯೋಗ—ಕೃಷಿ ಮತ್ತು ವ್ಯಾಪಾರ, ಟೀ, ಕಾಫಿ, ಕೊಬ್ಬರೀಯಣ್ಣೆ, ದಾಲ್ಚಿನ್ನಿ ಅಡಿಕೆ, ಚೌಬಿನಿಯ ಮರ, ಉಪ್ಪು ಹಗ್ಗ ಇವು ರಪ್ತಾಗುವುವು. ವ್ಯಾಪಾರವು ಹೆಚ್ಚಿದೆ.	ಮಧ್ಯಭಾಗದ ನದಿಗಳು, ನಾನಾ ದಿಕ್ಕುಗಳಿಗೂ ಹರಿಯುವುದರಿಂದ ಅಲ್ಲಿಯ ಭೂಮಿಯು ತುಂಬಾ ಫಲವತ್ತಾಗಿದೆ. ಆ ಪ್ರದೇಶದ ಜನರು ವ್ಯವಸಾಯಮಾಡುತ್ತಾರೆ. ಅಲ್ಲಿ ಬೆಳೆಯುವ ಪದಾರ್ಥಗಳಿಂದ ಆ ಆವಸ್ತುಗಳ ವ್ಯಾರಾಟವು ಹೆಚ್ಚು, ಎಂಬುದನ್ನು ಬಾಲಕರಿಂದಲೇ ಹೇಳಿಸಬೇಕು. ಕೊಲಂಬೋ, ಗಾಲೆ, ತ್ರಿಂಕೋಮಾಲಿ, ಗಳೆಂಬ ಬಂದರುಗಳಿರುವುದನ್ನು ತೋರಿಸಿ, ಇದರ ಮೂಲಕ ಈ ದೇಶವ್ಯಾಪಾರವೂ ಹೆಚ್ಚಿರುವುದು ಎಂದು ಹೇಳಿ, ಬೊಂಬಾಯಿನ ದೃಷ್ಟಾಂತದ ಮೂಲಕ ಬಾಲಕರಿಗೆ ತಿಳಿಯುವ ಹಾಗೆ ಪ್ರಶ್ನೆಮಾಡಬೇಕು. ಬಂದರಿನ ಲಕ್ಷಣವನ್ನೂ ಹೇಳಿಸಬೇಕು.
(2) ಜನರು ಮತ್ತು ನಡತೆ—ಸಿಂಗಾಳಿಗಳೂ, ಹಿಂದೂಗಳೂ, ಮುಸಲ್ಮಾನರೂ ಇರುವರು. ವ್ಯಾಪಾರವು ಹೆಚ್ಚಿದೆ.	ಮಧ್ಯಭಾಗದವರು ನದಿಯ ಆಸರೆಯಿಂದ ವಿಶೇಷ ವ್ಯವಸಾಯದಲ್ಲಿ ಕೈಹಾಕಿರುವರು. ತೀರಪ್ರದೇಶದವರು ವಿಶೇಷವಾಗಿ ವ್ಯಾಪಾರವನ್ನು ಮಾಡತೊಡಗಿರುವರು. ಇದರಿಂದ ಇಲ್ಲಿನ ಜನಗಳು ಧನಿಕರಾಗಿಯೂ ಚಟುವಟಿಕೆಯುಳ್ಳವರಾಗಿಯೂ ಇರುವರು. ಸೋಮಾರಿಗಳಲ್ಲವೆಂದು ಹೇಳಿಸಿ ಆ ವೃತ್ತಿ ಮಾಡಿಸುವುದು.

ವಿಷಯಗಳು.	ಬೋಧನಕ್ರಮ.
V ಮುಖ್ಯಪಟ್ಟಣಗಳು— (1) ಕೊಲಂಬೋ—ರಾಜಧಾನಿ, ಒಳ್ಳೆಯ ಬಂದರು.	ರಾಜಧಾನಿಯ ಅರ್ಥವನ್ನು ಬಾಲಕರಿಂದ ಸ್ಪಷ್ಟಪಡಿಸಿ, ಆ ಗುರುತನ್ನೂ ಪಟ್ಟಣವನ್ನೂ ಅವರೇ ತೋರಿಸುವಂತೆ ಮಾಡಿ, ಬರೆದಿರುವ ನಕ್ಷೆಯಲ್ಲಿ ಯಾವಕಡೆ ಬರೆಯಬೇಕೆಂಬಂಶವನ್ನು ಅವರಿಂದಲೇ ಹೊರಡಿಸಿ ಬರೆಯಬೇಕು.
(2) ಕಾಂಡಿ—ಹಿಂದಿನ ರಾಜಧಾನಿ, ಇದರಹತ್ತಿರ ನೆವರಎಲಿಯವೆಂಬ ಆರೋಗ್ಯಸ್ಥಳವಿದೆ.	ಮೈಸೂರು ದೇಶದ ಆರೋಗ್ಯಸ್ಥಳವನ್ನು ಕೇಳಿ ಅದರ ಉಪಯೋಗವನ್ನು ತಿಳಿಸಬೇಕು. ನಕ್ಷೆಯಲ್ಲಿ ಎಲ್ಲಿ ಗುರುತುಮಾಡಬೇಕೋ ಅದನ್ನು ಅವರಿಂದಲೇ ಹೇಳಿಸಿ ಗುರುತುಮಾಡುವುದು.
(3) ತ್ರಿಂಕೋಮಾಲಿ ಬಂದರು	ಇದಿರುವ ಸ್ಥಾನವನ್ನು ಮ್ಯಾಪಿನಲ್ಲಿ ತೋರಿಸುವಂತೆ ಮಾಡಿ, ಬರೆದ ನಕ್ಷೆಯಲ್ಲಿ ಗುರುತಮಾಡುವ ಸ್ಥಳವನ್ನವರಿಂದಲೇ ಹೊರಡಿಸಿ ಗುರುತುಮಾಡುವುದು.
(4) ಜಾಫ್ನ— ಉತ್ತರದಲ್ಲಿದೆ ವ್ಯಾಪಾರಸ್ಥಳ.	ಪಟದಲ್ಲಿ ತೋರಿಸಿ ಅದನ್ನು ಎಲ್ಲಿ ಗುರುತುಮಾಡಬೇಕೋ ಅವರಿಂದ ತಿಳಿದು, ಗುರುತುಮಾಡುವುದು.
(5) ಗಾಲೆ-ಯೂರೋಪು ಇಂಡಿಯಾ ಚೀಣಾ ಹಡಗುಗಳಿಲ್ಲಿ ನಿಲ್ಲುವುವು.	ಇದನ್ನು ತಿಳಿಸಿ 2—3 ಬಾಲಕರಿಂದ ಆವೃತ್ತಿಮಾಡಿಸಿ ಸ್ಥಳಗಳನ್ನು ನಕ್ಷೆಯಲ್ಲಿ ಬರೆಯಬೇಕು.
VI ವಾಯುಗುಣ—ಸುತ್ತಲೂ ದೇಶದೊಳಕ್ಕೆ ಸಮುದ್ರದ ಗಾಳಿ ಬೀಸುವುದರಿಂದ ಹಿತಕರವಾಗಿದೆ.	ಮದ್ರಾಸು ಪಟ್ಟಣದ ವಾಯುಗುಣವನ್ನು ಪ್ರಶ್ನೆಮಾಡಿ, ಪಕ್ಕದಲ್ಲಿ ಸಮುದ್ರವಿದ್ದರೆ ಅದರಮೇಲಿಂದ ಬೀಸುವ ಗಾಳಿಯು ಹಿತಕರವಾಗಿರುವುದೆಂದು ಹಲಿಗೆಯಮೇಲೆ ಬರೆದು ಹೇಳಿಸಬೇಕು.

ವಿಷಯಗಳು.	ಬೋಧನಾಕ್ರಮ.
VII (1) ಇಂಡಿಯಾ ಗೌರ್ನಮೆಂಟಿಗೆ ಸೇರಿಲ್ಲ. ಇಲ್ಲಿಗೆ ಬೇರೇ ಗೌರ್ನರು ಇದ್ದಾನೆ.	ಇಂಡಿಯಾಕ್ಕೆಲ್ಲಾ ಯಾರು ಮುಖ್ಯಸ್ಥರು? ಎಂದು, ಪ್ರಶ್ನೆಮಾಡಿ, ಈ ದ್ವೀಪವು ಇಂಡಿಯಾಕ್ಕೆ ಸೇರಿದ್ದರೂ ಇಲ್ಲಿಗೆ ಪ್ರತ್ಯೇಕವಾಗಿ ಒಬ್ಬ ಗೌರ್ನರ್ ಇರುವನು ಎಂದು ಹಲಿಗೆಯ ಮೇಲೆ ಬರೆದು ಬಾಲಕರಿಂದ ಆ ವೃತ್ತಿ ಮಾಡಿಸಬೇಕು.
(2) ವಿಸ್ತೀರ್ಣ ಮುಂತಾದುವು ವಿಸ್ತೀರ್ಣ 25 ಸಾವಿರ ಚ-ಮೈ ಜನಸಂಖ್ಯೆ 30 ಲಕ್ಷ ಹುಟ್ಟುವಳಿ 15 ಲಕ್ಷ ಪೌಂ	ಇವುಗಳನ್ನು ಮೈಸೂರು ದೇಶದ ನಿದರ್ಶನದ ಮೂಲಕ ಗೊತ್ತುಮಾಡಿ ವ್ಯತ್ಯಾಸಗಳನ್ನು ತಿಳಿಸಿ, ಹಲಗೆಯಮೇಲೆ ಬರೆದು 2—3 ಬಾಲಕರಿಂದ ಹೇಳಿಸಬೇಕು. ಬಳಿಕ ಒಟ್ಟು ಪುನರಾವರ್ತನೆಯನ್ನು ಬರೆದಿರುವ ನಕ್ಷೆಯ ಮೂಲಕ ಮಾಡಬೇಕು.

ಈ ನಿದರ್ಶನವು ಸರ್ಜಾಪುರದ ಉಪಾಧ್ಯಾಯರ ಸಂಘದ ೩ ನೆಯ ಮೀಟಿಂಗಿನಲ್ಲಿ ನಡೆದಿರುವುದು.

V. S.

ಪ್ರಕೃತಿವಿಮರ್ಶೆ.

ಹಿಂದಿನ ಸಂಚಿಕೆಯೊಂದರಲ್ಲಿ ಮೈಸೂರು ನಾರ್ಮಲ್ ಸ್ಕೂಲಿಗೆ ಸಂಬಂಧಪಟ್ಟ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿ ರೇಷ್ಮೇ ಹುಳುವಿನ ವಿಮರ್ಶೆಯು ನಡೆದ ರೀತಿಯನ್ನು ತಿಳಿಸಿದೆವು. ಆದಗೆ ಪ್ರಕೃತಿಯಲ್ಲಿ ಇರುವುದು ಪ್ರಾಣಿವರ್ಗ ಒಂದೇ ಅಲ್ಲ. ಪ್ರಾಣಿಗಳ ಬೆಳವಳಿಕೆಗೆ ಆಧಾರವಾದ ಸಸ್ಯಗಳು, ಇವುಗಳ ಬೆಳವಳಿಕೆಗೆ ಆಧಾರವಾದ ಮಳೆ, ಗಾಳಿ, ಬಿಸಿಲು, ಇವೆಲ್ಲವೂ ಪ್ರಕೃತಿಗೆ ಸೇರಿದ ಅಂಶಗಳೇ ಆಗಿರುವುವು. ಪ್ರಪಂಚದಲ್ಲಿರುವ ಪ್ರಾಣಿ ಸಸ್ಯವರ್ಗಗಳ ಬೆಳವಳಿಕೆಗೆ ಸೂರ್ಯನೇ ಆಧಾರವು. ಸೂರ್ಯನಷ್ಟು ಪ್ರಪಂಚಕ್ಕೆ ಉಪಕಾರ ಮಾಡುವ ವಸ್ತುವು ಪ್ರಕೃತಿಯಲ್ಲಿ ಮತ್ತಾವುದೂ ಇಲ್ಲ. ಈ ಸೂರ್ಯನ ವಿಷಯಕವಾದ ವಿಮರ್ಶೆಯು ಅದೇ ಸ್ಕೂಲಿನಲ್ಲಿ 1908 ನೇ ಇಸ್ವಿ ಮಾರ್ಚಿ, ಏಪ್ರಿಲ್, ಜೂನ್ ತಿಂಗಳುಗಳಲ್ಲಿ ನಡೆಯಿತು. ಈ ವಿಮರ್ಶೆಯು ಅಲ್ಲಿ ನಡೆದ ರೀತಿಯನ್ನು ಮುಂದೆ ವಿವರಿಸುವೆವು. ಪ್ರಕೃತಿ ವಿಮರ್ಶೆಯು ಪ್ರಾಕೃತಿಕ ಶಾಸ್ತ್ರಾಭ್ಯಾಸಕ್ಕೆ ಮೊದಲನೆಯ ಸೋಪಾನವೆಂಬುದು ಅಲ್ಲಿ ಈ ವಿಮರ್ಶೆಯು ನಡೆದ ರೀತಿಯಿಂದ ತಿಳಿಯುವುದು. ಈ ವಿಮರ್ಶೆಯನ್ನು ನಡೆಸುವ ರೀತಿಯು ಆ ಸ್ಕೂಲಿನಲ್ಲಿ ಇಟ್ಟಿದ್ದ ಮುಂದಿನ ಪಟ್ಟಿಯಿಂದ ಕಾಣುತ್ತಿತ್ತು.

I. ಸಿದ್ಧಪಡಿಸುವುದು:— ಉಪಾಧ್ಯಾಯರು ಖಗೋಳಶಾಸ್ತ್ರದ ಪುಸ್ತಕವನ್ನೂ, ಸಸ್ಯಶಾಸ್ತ್ರದ ಪುಸ್ತಕಗಳನ್ನೂ, ಪ್ರಸಿದ್ಧರಾದ ಕವಿಗಳು ರಚಿಸಿದ ಕಾವ್ಯಗಳನ್ನು ಓದಿ ಪಾಠಕ್ಕೆ ಸಿದ್ಧಪಡಿಸಿಕೊಳ್ಳಬೇಕು. ತಾವು ಸಿದ್ಧಪಡಿಸಿದ ಅಂಶಗಳನ್ನು ಕ್ರಮವಾಗಿ ಬರೆದಿಡಬೇಕು.

II. ಮಕ್ಕಳಿಗೆ ಈ ಪಾಠವನ್ನು ನಡೆಸುವುದರ ಉದ್ದೇಶ:— ಈ ತಿಂಗಳುಗಳಲ್ಲಿ ಬಿಸಿಲು ವಿಶೇಷವಾಗಿರುವುದು. ಪ್ರಪಂಚದ ಅಭಿವೃದ್ಧಿಗೆ ಬಿಸಿಲು ಅವಶ್ಯಕವೆಂಬುದನ್ನು ಈ ವಿಮರ್ಶೆಯಿಂದ ತೋರಿಸಬಹುದು. ಈ ಬಿಸಿಲು ಪ್ರಪಂಚಕ್ಕೆ ಬೆಳಕನ್ನೂ ಶಾಖವನ್ನೂ ಕೊಡುವುದು. ಸಸ್ಯರಾಶಿಯನ್ನುಂಟುಮಾಡಿ ಭೂಮಿಗೆ ಸೌಂದರ್ಯವನ್ನು ಕೊಟ್ಟು ಪ್ರಾಣಿಗಳ ಮತ್ತು ಮನುಷ್ಯರ ಜೀವನಕ್ಕೆ ಆಧಾರವನ್ನು ಕಲ್ಪಿಸುವುದು. ಮನುಷ್ಯನೂ ಸೂರ್ಯನಿಂದ ಬಂದ ಶಕ್ತಿಯನ್ನು ಕಾರ್ಯದಲ್ಲು ಪಯೋಗಿಸುವ ಯಂತ್ರವೇ ಆಗಿರುವನು.

ಸೂರ್ಯನ ವಿಷಯವಾಕದ ಪಾಠವನ್ನು ನಡೆಸುವುದರಲ್ಲಿ ಮತ್ತೊಂದು ಗೊಡ ಉದ್ದೇಶವಿರುವುದು—ಜಗತ್ಕರ್ತನಾದ ದೇವರ ಅಪಾರವಾದ ಶಕ್ತಿಯನ್ನು ತಿಳಿಯು ವುದಕ್ಕೆ ಸೂರ್ಯನೇ ಒಂದು ಪ್ರತ್ಯಕ್ಷವಾದ ಚಿಹ್ನೆಯು. ನಮ್ಮ ಜೀವನಕ್ಕೆಲ್ಲಾ ಆಧಾರವಾದ ಇಂತಹ ವಸ್ತುವನ್ನು ಸೃಷ್ಟಿಸಿದವನು ಯಾರು ಎಂದು ಪ್ರಶ್ನೆಮಾಡಿ ಮಕ್ಕಳಿಗೆ ದೇವರ ವಿಷಯವನ್ನು ತಿಳಿಸಬಹುದು. ಸೂರ್ಯನಿಂದ ನಮಗೆ ಪ್ರತಿನಿತ್ಯ ವೂ ಉಪಕಾರವಾಗುತ್ತಿದ್ದರೂ ನಮ್ಮನ್ನು ಎಚ್ಚರಿಕೆಯಿಂದ ಕಾಪಾಡುವ ದೇವ ರನ್ನು ಮರೆಯುವೆವು. ಸೂರ್ಯನಿಂದ ಒಂದು ಕಾಲದಲ್ಲಿ ಬರುವ ವಿಪರೀತವಾದ ಉಷ್ಣವೂ, ಈ ಉಷ್ಣವಿಲ್ಲದಿರುವುದರಿಂದ ಮತ್ತೊಂದು ಕಾಲದಲ್ಲುಂಟಾಗುವ ವಿಪರೀತವಾದ ಚಳಿಯೂ, ಬೇರೊಂದು ಕಾಲದಲ್ಲಿ ಇದೇ ಸೂರ್ಯನಿಂದುಂಟಾಗುವ ಸಾಂದ್ರವಾದ ಮೋಡಗಳೂ ಆಯಾಯ ಕಾಲದಲ್ಲಿ ನಮಗೆ ಪ್ರತಿಕೂಲವಾಗಿ ತೋರಿದರೂ ನಮ್ಮ ಏಳಿಗೆಗೆ ಅವಶ್ಯಕವೆಂಬುದನ್ನು ತೋರ್ಪಡಿಸಬೇಕು. ಹೀಗೆ ಯೇ ದೇವರು ನಮಗೆ ಒಂದೊಂದು ಕಾಲದಲ್ಲಿ ಕಷ್ಟವನ್ನು ಕೊಟ್ಟರೂ ಕೊನೆಗೆ ಇವೆಲ್ಲಾ ಸುಖಕ್ಕಾಗಿಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ಮೇಲಾಗಿ ಸೂರ್ಯ ನು ನಮಗೆ ಅವಶ್ಯಕವಾದ ಬೆಳಕನ್ನೂ ಶಾಖವನ್ನೂ ಕೊಡುವುದಲ್ಲದೆ ತನ್ನ ಶಕ್ತಿ ಯಿಂದ ನಮ್ಮ ಪ್ರಪಂಚವನ್ನು ತನ್ನ ಸಮೀಪದಲ್ಲಿಟ್ಟುಕೊಂಡಿರುವನು ಎಂಬುದನ್ನು ತಿಳಿಸಬೇಕು.

III. ವಿಮರ್ಶೆಯನ್ನು ನಡೆಸುವಕ್ರಮ:—(1) ಈ ದಿವಸ ಎಷ್ಟು ಪ್ರಕಾ ಶವಾಗಿದೆ. ಎಲ್ಲರ ಹೃದಯದಲ್ಲೂ ಸಂತೋಷವು ತುಂಬಿದೆ. ಇದಕ್ಕೆ ಕಾರಣ ವೇನು? ಈ ಬೆಳಿಗ್ಗೆ ಸೂರ್ಯನನ್ನು ನೋಡಿದವರು ಯಾರು? ಅವನು ಹೇಗಿದ್ದನು! ಹೀಗೆ ಪ್ರಶ್ನೆಮಾಡಿ ಮಕ್ಕಳನ್ನು ಹೊರಗೆ ಕರೆದುಕೊಂಡುಹೋಗಿ ಅವರ ಕೈಗೆ ಹೊಗೆ ಮುಚ್ಚಿರುವ ಒಂದು ಗಾಜನ್ನು ಕೊಟ್ಟು ಅದರ ಮೂಲಕ ಸೂರ್ಯನ ಆ ಕಾರ, ಪ್ರಕಾಶ, ಮುಂತಾದುವನ್ನು ನೋಡುವಂತೆ ಮಾಡಬೇಕು. ಒಂದನೇ ತರ ಗತಿಯವರು ಪ್ರತಿನಿತ್ಯವೂ ಒಂದು ಗೊತ್ತಾದ ಕಾಲದಲ್ಲಿ (ಮಹಡಿಯಮೇಲೆ ಮಾಡಿರುವ ಒಂದು ವೃತ್ತದಮೇಲೆ ಸೂರ್ಯನ ಸ್ಥಾನಕ್ಕೆ ತಕ್ಕಂತೆ) ಒಂದು ಗೆರೆ ಯನ್ನು ಎಳೆಯುತ ಹೋಗಬೇಕು.

(2) ಸೂರ್ಯನ ಕಿರಣಗಳು:—ಸೂರ್ಯನ ಬೆಳಕು ನಮಗೆ ಸಣ್ಣ ಕಿರಣ ಗಳ ರೂಪದಲ್ಲಿ ಬರುವುದು. ಈ ಕಿರಣಗಳೇ ನಮಗೆ ಬೆಳಕನ್ನೂ, ಪ್ರಕಾಶವನ್ನೂ

ಕೊಡುವುವು. ಹೂಗಳನ್ನು ಅರಳಿಸುವುವು. ಪಶುಪಕ್ಷಿಗಳನ್ನು ಸಂತೋಷಗೊಳಿಸುವುವು. ಮಕ್ಕಳು ಒಂದು ಕೈಯನ್ನು ಬಿಸಿಲಿಗೆ ಹಿಡಿದು ಅದು ಮತ್ತೊಂದು ಕೈಗಿಂತ ಶಾಖವಾಗುವುದನ್ನು ಪರೀಕ್ಷಿಸಬೇಕು. ಹೀಗೆಯೇ ಬಿಸಿಲು ಬಿದ್ದಿರುವ ಬಾಗಿಲು ಕಿಟಕಿಗಳನ್ನು ಮುಟ್ಟಿನೋಡಿ ಪರೀಕ್ಷಿಸಬೇಕು. ತೋಟಕ್ಕೆ ಹೋಗಿ ಯಾವಯಾವ ಹೂಗಳು ಬಿಸಿಲು ಬಂದೊಡನೆಯೇ ಅರಳಿವೆ; ಇವು ತಮ್ಮ ಬಟ್ಟಲನ್ನು ಹೇಗೆ ಸೂರ್ಯನ ಬಿಸಿಲನ್ನು ಸ್ವೀಕರಿಸುವಂತೆ ಮಾಡಿಕೊಂಡಿವೆ; ಎಂಬುದನ್ನು ಮಕ್ಕಳು ನೋಡಬೇಕು.

(3) ಸೂರ್ಯರಶ್ಮಿಗಳ ಮಾರ್ಗ:—ಸೂರ್ಯರಶ್ಮಿಗಳು ನಮಗೆ ಅತ್ಯಂತ ಸಮೀಪವಾದ ಮಾರ್ಗದಿಂದ ಅಂದರೆ ನೇರವಾದ ದಾರಿಯಿಂದ ಬರುವುವು. ದಾರಿಯಲ್ಲಿ ಗೋಡೆ ಬಾಗಿಲು ಇದ್ದರೆ ಬರಲಾರವು. ಆದರೆ ಬಾಗಿಲಿಗೆ ಮತ್ತೇನು ಹಾಕಿದ್ದರೆ ಬರುವುವು? ಹೀಗೆಯೇ ರಶ್ಮಿಗಳು ಬರಬಹುದಾದ ಇತರ ಪದಾರ್ಥಗಳನ್ನು ಹೇಳಿರಿ? ಇವುಗಳ ಜೊತೆಯಲ್ಲಿ ಮತ್ತೇನು ಬರುವಂತೆ ಕಾಣುವುದು. ಈ ವಸ್ತುಗಳು ಸದಾ ರಶ್ಮಿಗಳಲ್ಲೇನುಮಾಡುತಿರುವುವು; ಇವುಗಳಲ್ಲಿ ಯಾವಯಾವ ಬಣ್ಣವು ಕಾಣುತಿರುವುದು. ಈ ಬಣ್ಣವು ಆಕಾಶದಲ್ಲಿ ನಮಗೆ ಕಾಣುವುದು ಯಾವಾಗ; ಹೀಗೆ ಕಾಣಲು ಕಾರಣವೇನು? ಮುಂತಾದ ಅಂಶಗಳನ್ನು ತಿಳಿಸಬೇಕು. ಒಂದು ಕೊಠಡಿಯ ಕಿಟಕಿ, ಬಾಗಿಲುಗಳನ್ನು ಹಾಕಿ ಸಣ್ಣ ರಂಧ್ರದಿಂದ ಸೂರ್ಯರಶ್ಮಿಯು ಒಳಗೆ ಬರುವಂತೆ ಮಾಡಿ ಆ ರಶ್ಮಿಯು ಬರುವ ದಾರಿಯನ್ನು, ಅದರಲ್ಲಿ ತೇಲಾಡುವ ಧೂಳುಗಳನ್ನೂ, ಆ ರಶ್ಮಿಯ ದಾರಿಯಲ್ಲಿ ಗಾಜು, ಮರದ ಹಲಗೆ, ನೀರಿರುವ ಗಾಜಿನಪಾತ್ರೆ, ಮೊದಲಾದುವನ್ನಿಡುವುದರಿಂದ ಆಗುವ ವ್ಯತ್ಯಾಸಗಳನ್ನು ತೋರಿಸಬೇಕು. ಹೊರಗೆ ತಿರುಗಾಡುವ ಮಕ್ಕಳ ಮತ್ತು ಹೊರಗಿನ ಮರಗಳ ನೆರಳು ಒಳಗೆ ಬೀಳುವ ರೀತಿಯನ್ನು ತೋರಿಸಬೇಕು.

(4) ರಶ್ಮಿಗಳನ್ನು ಹಿಡಿಯುವುದು:—ರಶ್ಮಿಯು ಒಂದು ಕನ್ನಡಿಯನ್ನು ಓರೆಯಾಗಿ ಸಂಧಿಸಿದರೆ ಮತ್ತೊಂದು ಸ್ಥಳದಲ್ಲಿ ಸೂರ್ಯನ ಒಂದು ಚಿತ್ರವನ್ನು ಮಾಡುವುದನ್ನು ತೋರಿಸಬೇಕು. ಮೇಲಿನ ಕೊಠಡಿಯನ್ನೇ ಈ ಕೆಲಸಕ್ಕೂ ಉಪಯೋಗಿಸಬಹುದು. ಈ ರಶ್ಮಿಗಳ ಮಾರ್ಗದಲ್ಲಿ ಬರೀ ಗಾಜನ್ನು ಹಿಡಿಯುವುದಕ್ಕೂ, ಕನ್ನಡಿಯನ್ನು ಹಿಡಿಯುವುದಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಬೇಕು. ಒಂದು ಫೋಟೋ ಚೌಕಟ್ಟಿನಲ್ಲಿ ಒಂದು ಎಲೆಯನ್ನಿಟ್ಟು ಆ ಎಲೆಯ ಕೆಳಗೆ ಒಂದು ಫೋ

ಟೋ ಕಾಗದವನ್ನಿಟ್ಟು ಸೂರ್ಯನಿಂದ ಚಿತ್ರವಾಗುವುದನ್ನು ತೋರಿಸಬೇಕು. ಒಂದ ನೇ ತರಗತಿಯ ಮಕ್ಕಳು ಕ್ಯಾಮಿರಾ ಉಪಯೋಗಿಸಿ ಫೋಟೋ ತೆಗೆಯಬೇಕು.

(5) ಪ್ರಿಸಂ:—ಮೇಲಿನ ಕೊಠಡಿಯಲ್ಲಿ ಸೂರ್ಯರಶ್ಮಿಯು ಬರುವ ದಾರಿಯಲ್ಲಿ ಒಂದು ಪ್ರಿಸಂ ಇಟ್ಟು ಅದರ ಮಾರ್ಗವಾಗಿ ಹೋಗುವ ರಶ್ಮಿಗಳು ಒಂದು ಫರದೆಯ ಮೇಲೆ ಬೀಳುವಂತೆ ಮಾಡಿ ಬಿಳಿಯ ರಶ್ಮಿಗಳಲ್ಲಿರುವ ಏಳು ಬಣ್ಣಗಳನ್ನೂ ಸ್ಪಷ್ಟ ಗೊಳಿಸಬೇಕು. ಕಾಮನಬಿಲ್ಲು ಅಂದರೇನು? ಅದರ ಆಕಾರವೇನು? ಅದು ಯಾವ ಹೊತ್ತಿನಲ್ಲಿ ವಿಶೇಷವಾಗಿ ಕಾಣಿಸುವುದು? ಕಾಣುವಾಗ ಆಕಾಶವು ಹೇ ಗಿರಬೇಕು? ಎಂಬ ಅಂಶಗಳನ್ನು ಮಕ್ಕಳು ಪ್ರಕೃತಿಯಿಂದ ತಿಳಿಯಬೇಕು. ಸಣ್ಣ ಮಕ್ಕಳು ಸಾಬೂನಿನ ಗುಳ್ಳೆಯನ್ನು ಊದಿ ಅದರಲ್ಲಾಗುವ ಬಣ್ಣಗಳನ್ನು ನೋಡ ಬೇಕು. ಹಿಂದೆ ನಡೆದ ಪರೀಕ್ಷೆಯಲ್ಲಿ ಧೂಳಿನ ಕಣಗಳಲ್ಲಿ ಕಂಡ ಬಣ್ಣಗಳಿಗೆ ಕಾರಣವನ್ನು ಕೇಳಬೇಕು.

(6) ಸೂರ್ಯನು ಆರೋಗ್ಯಕ್ಕೆ ಕಾರಣ:—ಕೆಲವು ಹೂವಿನ ಬೀಜಗಳನ್ನು ಎರಡು ಕುಂಡಗಳಲ್ಲಿ ಹಾಕಿಸಿ ಒಂದು ಕುಂಡವನ್ನು ಸ್ಕೂಲಿನೊಳಗೂ, ಮತ್ತೊಂ ದನ್ನು ತೋಟದಲ್ಲೂ ಇಟ್ಟು ಈ ಕುಂಡಗಳಲ್ಲಿ ಹುಟ್ಟುವ ಗಿಡಗಳಲ್ಲಾಗುವ ವ್ಯತ್ಯಾ ಸಗಳನ್ನು ತೋರಿಸಬೇಕು. ನೆರಳಿನಲ್ಲಿ ಬೆಳೆಯುವ ಗಿಡಗಳು ಬಿಸಿಲನ್ನೇ ಹುಡು ಕುತ್ತ ಹೋಗುವುದನ್ನು ತೋಟದಲ್ಲಿ ಪರೀಕ್ಷಿಸಬೇಕು. ಸೂರ್ಯಕಾಂತಿ ಹೂವು ತನ್ನ ಮುಖವನ್ನು ಸೂರ್ಯನ ಕಡೆಗೆ ತಿರುಗಿಸುವುದನ್ನು ನೋಡಬೇಕು.

(7) ಸೂರ್ಯನು ಮಾಡುವ ಚಿತ್ರಗಾರನ ಕೆಲಸ:—ಸೂರ್ಯನು ಎಲೆಗಳಿಗೆ ಕೊಡುವ ಹಸುರುಬಣ್ಣವನ್ನೂ, ಹೂಗಳಿಗೆ ಕೊಡುವ ನಾನಾವಿಧವಾದ ಬಣ್ಣಗ ಳನ್ನೂ, ಇದೇ ಗಿಡಗಳು ನೆರಳಿನಲ್ಲಿ ಬೆಳೆಯುವಾಗ ಉಂಟಾಗುವ ಬಣ್ಣದೊಡನೆ ಹೋಲಿಸಬೇಕು. ಸೂರ್ಯನು ಪದಾರ್ಥಗಳಿಂದ ಬಣ್ಣ ತೆಗೆಯುವುದನ್ನು ತೋರಿಸ ಬೇಕು. ಮಕ್ಕಳ ಸೊಗಸಾದ ಬಣ್ಣದ ಅಂಗಿಯು ಕೆಲವು ದಿವಸದಮೇಲೆ ಏನಾ ಗುವುದು? ಗೋಡೆಯಲ್ಲಿ ಪಠ ತಗಲಿಹಾಕಿರುವ ಸ್ಥಳಕ್ಕೂ ಉಳಿದ ಸ್ಥಳಗಳಿಗೂ ಏನು ವ್ಯತ್ಯಾಸ? ಇಂತಹ ನಿದರ್ಶನಗಳಿಂದ ಈ ವಿಷಯವನ್ನು ತಿಳಿಸಬೇಕು.

(8) ಸೂರ್ಯನ ಸುಡುವ ಮತ್ತು ಒಣಗಿಸುವ ಸ್ವಭಾವ:—ಬೇಸಿಗೆಯಲ್ಲಿ ನೆಲದಮೇಲಿರುವ ಹುಲ್ಲು ಒಣಗಿಹೋಗುವುದನ್ನೂ, ಬಿಸಿಲಿನಲ್ಲಿ ತಿರುಗುವ ಜನರ ಮುಖವು ಕಪ್ಪಾಗುವುದನ್ನೂ ಮಕ್ಕಳಿಂದ ಹೇಳಿಸಬೇಕು. ಭೂತಕನ್ನಡಿಯಿಂದ

ಸೂರ್ಯನಲ್ಲಿರುವ ಸುಡುವ ಶಕ್ತಿಯನ್ನು ತೋರಿಸಬೇಕು. ಎರಡು ಪಾತ್ರೆಗಳಲ್ಲಿ ನೀರನ್ನು ತೆಗೆದುಕೊಂಡು ಒಂದನ್ನು ಬಿಸಿಲಿನಲ್ಲೂ, ಮತ್ತೊಂದನ್ನು ಸ್ಕೂಲಿನೊಳಗೂ ಇಟ್ಟು ಇವೆರಡರಲ್ಲೂ ನೀರು ಬತ್ತಿಹೋಗುವಕಾಲದ ವ್ಯತ್ಯಾಸವನ್ನು ಮಕ್ಕಳು ಗೊತ್ತುಮಾಡಬೇಕು.

(9) ಸೂರ್ಯನು ಮಳೆಗೆ ಕಾರಣ:—ಬಿಸಿಲಿನಲ್ಲಿಟ್ಟ ನೀರು ಏನಾಯಿತೆಂದು ಕೇಳಿ ಒಂದು ಪಾತ್ರೆಯಲ್ಲಿ ನೀರನ್ನು ಕಾಯಿಸಿ ಆವಿಯಾಗುವುದನ್ನೂ ಪ್ರತ್ಯಕ್ಷವಾಗಿ ತೋರಿಸಿ, ಮತ್ತೊಂದು ಪಾತ್ರೆಯಲ್ಲಿ ಮಂಜಿನ ಗೆಡ್ಡೆಯನ್ನಿಟ್ಟು ಆ ಪಾತ್ರೆಯಮೇಲೆ ನೀರಿನ ಕಣಗಳುಂಟಾಗುವುದನ್ನು ತೋರಿಸಿ ಮಳೆಗೆ ಕಾರಣವನ್ನು ವಿಶದಪಡಿಸಬೇಕು.

10. ಸಂಚಿತವಾದ ಸೂರ್ಯರಶ್ಮಿಗಳು:—ಗಿಡಗಳ ಬೆಳವಳಿಕೆಗೆ ಸೂರ್ಯರಶ್ಮಿಯು ಆವಶ್ಯಕವೆಂಬುದನ್ನು ಜ್ಞಾಪಿಸಿ ಈ ಗಿಡಗಳ ನೆಲದಲ್ಲಿ ಹೂತುಹೋಗುವುದರಿಂದ ಕಲ್ಲಿದ್ದಲಾಗುವುವು ಎಂಬುದನ್ನು ಕಲ್ಲಿದ್ದಲಿನ ಚೂರನ್ನು ಒಡದು ತೋರಿಸುವುದರಿಂದ ಸ್ಪಷ್ಟಗೊಳಿಸಬೇಕು. ಈ ಕಲ್ಲಿದ್ದಲಲ್ಲಿ ಸೂರ್ಯರಶ್ಮಿಗಳ ಶಕ್ತಿಯು ಸಂಚಿತವಾಗಿರುವುದನ್ನು ತಿಳಿಸಬೇಕು.

11. ಸೂರ್ಯನಿಂದ ದಾರಿಗರಿಗೆ ಸಹಾಯ:—ಸೂರ್ಯನು ಉದಯಿಸುವುದು ಮತ್ತು ಅಸ್ತವಾಗುವುದು ಇಂತಹ ಕಡೆಗಳೆಂದು ತಿಳಿಯುವುದರಿಂದ ದಾರಿಗರಿಗೆ ಆಗುವ ಸಹಾಯವೇನು? ಸೂರ್ಯನಿಲ್ಲದಿದ್ದಾಗ ಕಡೆಗಳನ್ನು ಗೊತ್ತುಮಾಡುವುದು ಹೇಗೆ? ಆಮೇಲೆ ಕಾಂಪಸ್ಸಿನ ಉಪಯೋಗವನ್ನು ತಿಳಿಸಬೇಕು.

(12) ಛಾಯೆ:—ಸೂರ್ಯರಶ್ಮಿಗಳ ದಾರಿಯಲ್ಲಿ ಒಂದು ಕುಂಡವನ್ನಿಟ್ಟು ಆ ಕುಂಡದ ನೆರಳು ಯಾವಕಡೆಯಲ್ಲುಂಟಾಗುವುದು, ಏತಕ್ಕೆ ಉಂಟಾಗುವುದು? ಯಾವಾಗ ಎಷ್ಟುದ್ದಕ್ಕೆ ಉಂಟಾಗುವುದು? ಎಂಬುದನ್ನು ಪರೀಕ್ಷಿಸಬೇಕು. ಒಂದು ಕತ್ತಲೆಯಾದ ಕೊಠಡಿಯಲ್ಲಿ ಒಂದು ಮಗುವು ಒಂದು ಚೆಂಡನ್ನು ಹಿಡಿದುಕೊಂಡು ಮತ್ತೊಂದು ಮಗುವು ಆ ಚೆಂಡಿನನಾಲ್ಕುಕಡೆಗಳಲ್ಲೂ ದೀಪವನ್ನು ಹಿಡಿದು ಯಾವ ಸ್ಥಳದಲ್ಲಿ ದೀಪವಿದ್ದಾಗ ನೆರಳು ವಿಶೇಷ ದೊಡ್ಡದಾಗಿ ಕಾಣುವುದು; ಎಂಬುದನ್ನು ನೋಡಬೇಕು. ದೀಪವನ್ನು ಚೆಂಡಿನ ಸುತ್ತಲೂ ಒಂದೇಸಮನಾದ ದೂರದಲ್ಲಿ ಸುತ್ತಿಸಿ ನೆರಳು ಹೇಗಿರುವುದೆಂಬುದನ್ನು ತೋರಿಸಬೇಕು. ಈ ಪರೀಕ್ಷೆಗಳಿಂದ ಉಂಟಾಗುವ ಅನುಭವವನ್ನು ಆಮೇಲೆ ಸೂರ್ಯನ ವಿಷಯದಲ್ಲಿ ಉಪಯೋಗಿಸಬೇಕು.

ಒಂದು ನೆಟ್ಟಗಿರುವ ಕಡ್ಡಿಯನ್ನು ಸ್ಕೂಲಿನ ಹೊರಗಡೆ ನೆಟ್ಟು ಅದರ ನೆರಳಿನ ಉದ್ದಗಳನ್ನು ದಿವಸದ ಬೇರೆಬೇರೆ ಕಾಲಗಳಲ್ಲಿ ನೋಡಬೇಕು. ಮಕ್ಕಳು ಸ್ಕೂಲಿಗೆ ಬರುವಾಗಲೂ, ಸ್ಕೂಲಿನಿಂದ ಹೋಗುವಾಗಲೂ, ತಮ್ಮ ನೆರಳಿನ ಉದ್ದವನ್ನು, ದಾರಿಯಲ್ಲಿರುವ ಪದಾರ್ಥಗಳ ನೆರಳಿನ ಉದ್ದವನ್ನು ನೋಡುತಿರಬೇಕು.

(13) ಕಾಲ:—ಸೂರ್ಯನ ಕಿರಣವು ನಮ್ಮ ಕೊಠಡಿಯೊಳಕ್ಕೆ ಬಂದು ನಮ್ಮನ್ನು ಎಬ್ಬಿಸುವುದು. ಇದೇ ಪ್ರಾತಃಕಾಲ. ಈ ಹೊತ್ತಿನಲ್ಲಿ ಎಲ್ಲರೂ ಕೆಲಸಮಾಡಬೇಕು. ಪಕ್ಷಿಗಳು, ಜೇನುಹುಳುಗಳು, ಹೂಗಳು, ಮಕ್ಕಳು, ದೊಡ್ಡವರು, ಎಲ್ಲರೂ ಈ ಕಾಲದಲ್ಲಿ ಕೆಲಸಮಾಡುವರು. ಆಮೇಲೆ ಸೂರ್ಯನು ಕಾಣಿಸದೆ ಕತ್ತಲೆಯಾಗುವುದು. ಇದೇ ರಾತ್ರಿ ಅಥವಾ ವಿಶ್ರಾಂತಿಕಾಲ. ಈ ಕಾಲದಲ್ಲಿ ಕೆಲವು ಗಿಡಗಳೂ ಮಲಗುವುವು. ಮಕ್ಕಳನ್ನು ತೋಟಕ್ಕೆ ಕರೆದುಕೊಂಡುಹೋಗಿ ಯಾವ ಹೂಗಳು ಬೆಳಿಗ್ಗೆ ಅರಳಿವೆ, ಯಾವುವು ಅರಳುತ್ತಿವೆ; ಯಾವುವು ರಾತ್ರಿಯೊಳಗಾಗಿ ಪಾತ್ರವನ್ನು ಮುಚ್ಚಿಕೊಳ್ಳುತ್ತವೆ; ಎಂಬುದನ್ನು ನೋಡಬೇಕು. ಮಕ್ಕಳು ಕತ್ತಲೆಯಾಗಿರುವ ಕೊಠಡಿಗೆ ಹೋಗಿ ಅಲ್ಲಿ ದೀಪವನ್ನು ಹತ್ತಿಸಿ ಅದರ ಮುಂದೆ ಕಿತ್ತಲೇಹಣ್ಣನ್ನು ಹಿಡಿದು ಅದರ ಯಾವಭಾಗಕ್ಕೆ ಬೆಳಕಾಗಿದೆ. ಯಾವ ಭಾಗಕ್ಕೆ ಬೆಳಕಿಲ್ಲ, ಎಂಬುದನ್ನು ನೋಡಿ ಈ ಅನುಭವಗಳನ್ನು ಹಗಲು ರಾತ್ರಿಗಳ ವಿಷಯದಲ್ಲಿ ಅನ್ವಯಿಸಬೇಕು.

(14) ಸೂರ್ಯನ ಗಡಿಯಾರ:—ಪೂರ್ವದಲ್ಲಿ ಈಗಿನಂತೆ ಗಡಿಯಾರಗಳು ಇರಲಿಲ್ಲ. ಆಗ ಕಾಲವನ್ನು ತಿಳಿಯಲು ಏನುಮಾಡುತಿದ್ದರು ಬಲ್ಲಿರಾ; ಅವರು ಸೂರ್ಯನನ್ನೂ, ವಸ್ತುಗಳ ನೆರಳನ್ನೂ ನೋಡಿ ಕಾಲವನ್ನು ಗೊತ್ತುಮಾಡುತಿದ್ದರು. ಆಮೇಲೆ ಗಡಿಯಾರದ ಮುಂಭಾಗದಂತೆ ಒಂದು ಹಲಗೆಯನ್ನು ಮಾಡಿ ಅದರಮೇಲೆ ಕಡ್ಡಿಯನ್ನು ನೆಟ್ಟು ಅದರ ನೆರಳು ಉದ್ದವಾಗುವುದರಿಂದಲೂ, ಚಿಕ್ಕದಾಗುವುದರಿಂದಲೂ, ಕಾಲವನ್ನು ಗೊತ್ತುಮಾಡುತಿದ್ದರು. ಆದರೆ ರಾತ್ರಿಯಕಾಲದಲ್ಲೂ, ಮೋಡ ಮುಚ್ಚಿರುವ ದಿವಸಗಳಲ್ಲೂ, ಈ ಸೂರ್ಯನ ಗಡಿಯಾರವು ಪ್ರಯೋಜನಕ್ಕೆ ಬರಲಿಲ್ಲ. ಆದುದರಿಂದ ಕಾಲವನ್ನು ಗೊತ್ತುಮಾಡುವುದಕ್ಕೆ ಮರಳಿನ ಅಥವಾ ನೀರಿನ ಗಡಿಯಾರಗಳನ್ನು ಉಪಯೋಗಿಸುತಿದ್ದರು. ಆದರೆ ಇವೂ ಅಷ್ಟು ಅನುಕೂಲವಾಗಿರಲಿಲ್ಲ. ಆದುದರಿಂದ ಈಗ ನಾವು ಉಪಯೋಗಿಸುವ ದೊಡ್ಡ ಗಡಿಯಾರಗಳನ್ನೂ, ಸಣ್ಣಗಡಿಯಾರಗಳನ್ನೂ ಆಮೇಲೆ ಕಂಡುಹಿಡಿ

ದರು. ಮಕ್ಕಳಿಂದ ಕಾಗದದಮೇಲೆ ಒಂದು ವೃತ್ತವನ್ನು ಬರೆಸಿ ಅದರಮೇಲೆ ಒಂದು ಮರವನ್ನಿಟ್ಟು ಅವರಿಂದಲೇ ಕಾಗದದಮೇಲೆ ಘಂಟೆಘಂಟೆಗೂ ರೂಲುಹಾಕಿಸಿ ಒಂದು ಸೂರ್ಯನ ಗಡಿಯಾರವನ್ನು ಮಾಡಿಸಬೇಕು.

(15) ತೋಟದ ಕೆಲಸ:—ವಸಂತಋತುವಿನಲ್ಲಿ ನೆಡಬೇಕಾದ ಗಿಡಗಳನ್ನು ನೆಡುವುದು, ಬ್ರಾಡ್‌ಬೀನ್ಸ್ (ಬಟಾಣಿ) ಗಿಡಗಳಿಗೆ ಆಶ್ರಯಕ್ಕಾಗಿ ಕಡ್ಡಿಗಳನ್ನು ನೆಡುವುದು. ಪಕ್ಷಿಗಳನ್ನು ಓಡಿಸುವ ಬೊಂಬೆಗಳನ್ನು ತೋಟದಲ್ಲಿ ಕಟ್ಟುವುದು, ನಾಲ್‌ಕೋಲ್, ನೀರುಳ್ಳಿ, ಮುಂತಾದ ಸಸ್ಯಗಳನ್ನು ಕುಂಡಗಳಿಂದ ತೆಗೆದು ಪಾತಿಗಳಲ್ಲಿ ನೆಡುವುದು, ಸೂರ್ಯಕಾಂತಿ ಗಿಡಗಳು ಮುರಿಯದಂತೆ ಕೋಲು ನೆಡುವುದು, ಪಾತಿಗಳಲ್ಲಿರುವ ಕಳೆಗಳನ್ನು ತೆಗೆದು ದಾರಿಗಳನ್ನು ಸರಿಮಾಡುವುದು—

ಈ ವಿಮರ್ಶೆಯಕಾಲದಲ್ಲಿ ಮಕ್ಕಳು ನೋಡಿದ ಅಂಶಗಳನ್ನು ಭಾಷೆಯಲ್ಲೂ, ಚಿತ್ರದಲ್ಲೂ ಮುಂದೆ ಕಾಣುವ ರೀತಿಯಲ್ಲಿ ತೋರ್ಪಡಿಸಿದರು.

ತಾ॥ 20—3—08. ಮಸೀ ಮುಚ್ಚಿರುವ ಗಾಜಿನ ಸಹಾಯದಿಂದ ಸೂರ್ಯನನ್ನು ನೋಡಿದೆವು. ಗುಂಡಗಿತ್ತು. ಕಿತ್ತಲೇಹಣ್ಣಿನ ಬಣ್ಣಕ್ಕಿತ್ತು. ಬರೀ ಕಣ್ಣಿನಿಂದ ನೋಡಲು ಕಣ್ಣು ಚುಚ್ಚಿತು.

21—3—08. ಒಂದು ಬೋರ್ಡಿನಮೇಲೆ ಒಂದು ವೃತ್ತವನ್ನು ಬರೆದು ಅದರ ಮಧ್ಯದಲ್ಲಿ ಒಂದು ಕಡ್ಡಿಯನ್ನು ನೆಟ್ಟು ಬಿಸಿಲುಮಹಡಿಯಮೇಲೆ ಇಟ್ಟೆವು. ಕಡ್ಡಿಯ ನೆರಳನ್ನು ಎಂಟೂವರೆಘಂಟೆಯ ಹೊತ್ತಿನಲ್ಲಿ ಗುರ್ತುಮಾಡಿದೆವು. ಹೀಗೆಯೇ ಪ್ರತಿನಿತ್ಯವೂ ಗುರ್ತುಮಾಡುವೆವು.

23—3—08. ಈ ದಿವಸ ಸೂರ್ಯನನ್ನು ಮೋಡವು ಮುಚ್ಚಿಕೊಂಡಿತ್ತು. ಬರೀ ಕಣ್ಣಿನಲ್ಲಿ ನೋಡಬಹುದಾಗಿತ್ತು. ಬಿಳುಪಾಗಿಯೂ, ದುಂಡಾಗಿಯೂ ಕಾಣಿಸಿದನು.

24—3—08. ಕಂಬದ ಬಿಸಿಲುಬಿದ್ದಿರುವ ಭಾಗವನ್ನು ಮುಟ್ಟಿದೆವು, ಬೆಚ್ಚಗಿತ್ತು. ನೆರಳಿನಲ್ಲಿರುವ ಭಾಗವನ್ನು ಮುಟ್ಟಿದೆವು. ತಣ್ಣಗಿತ್ತು, ತೋಟಕ್ಕೆ ಹೋದೆವು. ಸೂರ್ಯಕಾಂತಿ ಹೂವು ಸೂರ್ಯನಕಡೆಗೆ ಅರಳಿತ್ತು. ಇದರಮೇಲೆ ತುಂಬಿಗಳು ಕುಳಿತಿದ್ದುವು.

25—3—08. ಭೂತಕನ್ನಡಿಯನ್ನು ಸೂರ್ಯನ ಕಡೆಗೆ ಹಿಡಿದು ಅದರಿಂದುಂಟಾಗುವ ಪ್ರಕಾಶವಾದ ಚುಕ್ಕಿಯು ಕೈಮೇಲೆ ಬೀಳುವಂತೆ ಮಾಡಿಕೊಂ

ಡೆವು. ಕೈ ಸುಟ್ಟಿತು, ಚಿರಣಿಯಮೇಲೆ ಬೀಳುವಂತೆ ಮಾಡಿದೆವು. ಅದು ಹತ್ತಿಕೊಂಡಿತು.

26—3—08. ಈದಿವಸ ಎರಡು ಕುಂಡಗಳಲ್ಲಿ ಹಸರುಕಾಳುಗಳನ್ನು ನೆಟ್ಟು' ಒಂದನ್ನು ತೋಟದಲ್ಲೂ, ಮತ್ತೊಂದನ್ನು ಕತ್ತಲೆಯಮನೆಯಲ್ಲೂ ಇಟ್ಟೆವು.

27—3—08. ತೋಟದಲ್ಲಿದ್ದ ಸೂರ್ಯನ ಗಡಿಯಾರವನ್ನು ನೋಡಿದೆವು. ಅದ ರಲ್ಲಿ ಕಾಣುತಿದ್ದ ಹೊತ್ತು ಸ್ಕೂಲ್ ಗಡಿಯಾರಕ್ಕೆ ಸರಿಯಾಗಿತ್ತು.

31—3—08. ಕತ್ತಲೆಯಾದ ಕೊಠಡಿಯ ಕಿಟಕಿಯಿಂದ ಬರುತಿದ್ದ ಬಿಸಲಿನ ಕೋಲನ್ನು ನೋಡಿದೆವು. ಆ ಕೋಲಿನಲ್ಲಿ ಓಡಾಡುತ್ತಿದ್ದ ಧೂಳು ಗಳು ನಾನಾಬಣ್ಣಕ್ಕಿದ್ದುವು. ಈ ಕೋಲಿಗೆ ಮರದ ಹಲಿಗೆಯನ್ನು ಹಿಡಿದೆವು, ಅದು ಬಿಸಿಲನ್ನು ತಡೆಯಿತು. ಗಾಜನ್ನೂ ಕಾಗೇಬಂಗಾ ರವನ್ನೂ ಹಿಡಿದೆವು, ತಡೆಯಲಿಲ್ಲ. ನೀರುತುಂಬಿದ ಗಾಜಿನ ಪಾತ್ರೆ ಯನ್ನು ಹಿಡಿದೆವು, ತಡಿಯಲಿಲ್ಲ. ಪಾತ್ರೆಯ ಸುತ್ತಲೂ ನಾನಾ ಬಣ್ಣದ ವೃತ್ತಗಳಂತಾದುವು.

7—4—08. ಕಿಟಕಿಯ ಕಂಡಿಯಿಂದ ಬಂದ ಬಿಸಿಲಿನಕೋಲಿಗೆ ಕನ್ನಡಿಯನ್ನು ಹಿಡಿದೆವು, ಬಿಸಿಲನ್ನು ತಡೆಯಿತು. ತಡೆದ ಬಿಸಿಲು ಛಾವಣಿಯ ಮೇಲೆ ಬಿತ್ತು, ಅದನ್ನು ನಾನಾಕಡೆಗೆ ಓಡಿಸಿದೆವು.

9—4—08. ಫೋಟೋ ಚೌಕಟ್ಟಿನಲ್ಲಿ ಒಂದುತರಹದ ಕಾಗದವನ್ನಿಟ್ಟು ಅದರ ಮೇಲೆ ನಮ್ಮ ತೋಟದ ಜಾತಿಯ ಹೂವನ್ನೂ,ಎಲೆಯನ್ನೂ ಇಟ್ಟು, ಹತ್ತುನಿಮಿಷ ಬಿಸಿಲಿಗೆ ಹಿಡಿದೆವು, ನೆರಳಿಗೆ ತಂದು ನೀರಿಗೆ ಹಾಕಿದೆವು, ಕಾಗದದಮೇಲೆ ಹೂವಿನ ಮತ್ತು ಎಲೆಯ ಚಿತ್ರವಾಗಿತ್ತು.

14—4—08. ಕಿಟಕಿಯಿಂದ ಬಂದ ಬಿಸಿಲುಕೋಲಿಗೆ ಪ್ರಿಸಂ ಗಾಜನ್ನು ಹಿಡಿ ದೆವು. ಬಿಸಲು ಒಡೆದು ಕೆಂಪು, ಕಿತ್ತಳೆ, ಹಳದಿ, ಹಸುರು, ನೀಲಿ, ಅಚ್ಚನೀಲಿ ಊದಾಬಣ್ಣಗಳ ಪಟ್ಟೆಯಾಯಿತು. ಇದನ್ನು ಒಂದು ಫರದೆಯಮೇಲೆ ಬೀಳಿಸಿದೆವು.

16—4—08. ಕತ್ತಲೆ ಮನೆಯಲ್ಲಿಟ್ಟಿದ್ದ ಕುಂಡದ ಗಿಡಗಳನ್ನು ನೋಡಿದೆವು. ಗಿಡಗಳು ಬೆಳ್ಳಗೆ ಉದ್ದವಾಗಿ ಬೆಳೆದು ಮಲಗಿಕೊಂಡಿದ್ದುವು. ಬಿಸಿಲಿ

ನಲ್ಲಿದ್ದ ಕುಂಡದ ಗಿಡಗಳನ್ನು ನೋಡಿದೆವು. ವಿಶೇಷ ಎತ್ತರವಿಲ್ಲ. ಹಸರುಬಣ್ಣಕ್ಕಿವೆ. ನೆಟ್ಟಗೆ ನಿಂತಿವೆ.

21—4—08. ಫೋಟೋ ಕ್ಯಾಮಿರಾವಿನ ಎದುರಿಗೆ ಒಂದು ಗಿಡವಿರುವ ಕುಂಡವನ್ನಿಟ್ಟು ಕ್ಯಾಮರಾದಲ್ಲಿ ನೋಡಿದೆವು. ಕುಂಡದ ಆಕೃತಿಯು ಗಾಜಿನಮೇಲೆ ಚಿಕ್ಕದಾಗಿ ತಲೆಕೆಳಕಾಗಿ ಬಿದ್ದಿತ್ತು.

23—4—08. ಕ್ಯಾಮಿರಾದಿಂದ ಸ್ಕೂಲ್ ಕಟ್ಟಡದ ಫೋಟೋ ತೆಗೆದೆವು.

2—6—08. ಹೊಸಟೋಪಿಯನ್ನೂ, ಹಳೇಟೋಪಿಯನ್ನೂ ನೋಡಿದೆವು. ಹಳೆಯ ಟೋಪಿಯಲ್ಲಿ ಬಣ್ಣವು ಹೋಗಿತ್ತು. ಬಿಸಲಿನಲ್ಲಿ ತಿರುಗುವುದರಿಂದ ಹೀಗಾಯಿತು.

ಎರಡು ತಟ್ಟೆಗಳಲ್ಲಿ ನೀರನ್ನು ಒಂದೇ ಪ್ರಮಾಣಕ್ಕೆ ಹಾಕಿ ಒಂದನ್ನು ನೆರಳಿನಲ್ಲೂ, ಇನ್ನೊಂದನ್ನು ಬಿಸಲಿನಲ್ಲೂ ಇಟ್ಟೆವು.

6—6—08. ಬಿಸಲಿನಲ್ಲಿರುವ ತಟ್ಟೆಯ ನೀರು ವಿಶೇಷ ಕಡಿಮೆಯಾಗಿತ್ತು. ನೆರಳಿನ ತಟ್ಟೆಯ ನೀರು ಸ್ವಲ್ಪ ಕಡಿಮೆಯಾಗಿತ್ತು.

16—6—08. ಗಾಜಿನ ಬಟ್ಟಲಿನಲ್ಲಿ ಮಂಜಿನಗೆಡ್ಡೆಯನ್ನಿಟ್ಟೆವು. ಆ ಬಟ್ಟಲಿನ ಹೊರಭಾಗದಲ್ಲಿ ನೀರಿನ ಬಟ್ಟುಗಳು ನಿಂತಿದ್ದುವು. ಇವು ಗಾಳಿಯಿಂದ ಬಂದಿರಬೇಕು.

ಒಂದು ತಟ್ಟೆಯಲ್ಲಿ ಸ್ವಲ್ಪ ನೀರನ್ನು ಹಾಕಿ ದೀಪದಲ್ಲಿ ಕಾಯಿಸಿದೆವು. ನೀರು ಆವಿಯಾಗಿ ಮೇಲಕ್ಕೆ ಹೋಯಿತು. ಹೀಗೆ ಸೂರ್ಯನು ಸಮುದ್ರ, ಕೆರೆ, ಕೊಳ ಇವುಗಳ ನೀರನ್ನು ಕಾಯಿಸಿ ಆವಿಯಾಗಿ ಮೇಲಕ್ಕೆ ಕಳುಹಿಸುವನು. ಅಲ್ಲಿ ಆವಿಯು ತಣ್ಣಗಾಗಿ ಮೋಡಕಟ್ಟಿ ಮಳೆ ಬರುವುದು

21—6—08. ಸೌದೆಯು ಇದ್ದಲು ಹಗುರವಾಗಿರುವುದು. ಹೊಳಪು ಕಡಮೆ; ಬೇಗ ಹತ್ತಿಕೊಳ್ಳುವುದು; ಶಾಖವು ಕಡಿಮೆ; ಕಲ್ಲಿದ್ದಲು ಭಾರವಾಗಿದೆ; ಹೊಳಪು ಹೆಚ್ಚು; ಪದರಪದರವಾಗಿದೆ. ದೀಪದಲ್ಲಿ ಹಿಡಿದೆವು; ಬೇಗ ಹತ್ತಲಿಲ್ಲ. ಶಾಖವು ಹೆಚ್ಚಾಗಿತ್ತು, ಕೆಂಡವಾಗುವಾಗ ಒಂದು ವಿಧವಾದ ವಾಸನೆಯುಳ್ಳ ಹೊಗೆಯು ಬಂತು.

25—6—08. ಸೂರ್ಯನ ಎದುರಿಗೆ ನಿಂತುಕೊಂಡೆವು. ಇದು ಪೂರ್ವದಿಕ್ಕೆಂದು ಹೇಳಿಕೊಟ್ಟರು; ನಮ್ಮ ಬಲಗಡೆ ದಕ್ಷಿಣ; ಎಡಗಡೆ ಉತ್ತರ; ಹಿಂದುಗಡೆ ಪಶ್ಚಿಮವೆಂತಲೂ, ಹೇಳಿಕೊಟ್ಟರು. ಉತ್ತರಮುಖಿಯನ್ನು ನೋಡಿದೆವು; ಇದರ ಒಂದು ಕೊನೆಯು ಉತ್ತರವನ್ನೂ, ಇನ್ನೊಂದು ಕೊನೆಯು ದಕ್ಷಿಣವನ್ನೂ ತೋರಿಸುತ್ತಿತ್ತು.

8—7—08. ಕತ್ತಲೆಯ ಕೊಠಡಿಯಲ್ಲಿ ಗೋಳವನ್ನಿಟ್ಟು ದೀಪವನ್ನು ಹಚ್ಚಿದೆವು, ಗೋಳದ ನೆರಳು ಗೋಡೆಯಮೇಲೆ ಗುಂಡಾಗಿ ಬಿದ್ದಿತ್ತು.

ದೀಪವನ್ನು ದೂರಕ್ಕೆ ಹಿಡಿಯಲು ನೆರಳು ಚಿಕ್ಕದಾಯಿತು. ಹತ್ತಿರಕ್ಕೆ ತರಲು ದೊಡದಾಯಿತು. ಗೋಳದ ಅರ್ಧಭಾಗವು ಬೆಳಕಿನಲ್ಲಿತ್ತು; ಉಳಿದ ಅರ್ಧಭಾಗವು ಕತ್ತಲೆಯಲ್ಲಿತ್ತು. ಸೂರ್ಯನಿಂದಲೂ ಹೀಗೆಯೇ ಆಗುವುದರಿಂದ ಹಗಲು ರಾತ್ರಿಗಳು ಉಂಟಾಗುವುದು ಎಂದು ತಿಳಿದೆವು.

9—7—08. ಬೆಳಿಗ್ಗೆ ಎಂಟು ಘಂಟೆ ಹತ್ತು ನಿಮಿಷಕ್ಕೆ ನಮ್ಮ ಇಬ್ಬರು ಸ್ನೇಹಿತರ ನೆರಳನ್ನು ಗುರ್ತುಮಾಡಿದೆವು. ಪುನಃ ಒಂಭತ್ತು ಘಂಟೆ ಇಪ್ಪತ್ತು ನಿಮಿಷಕ್ಕೆ ಗುರ್ತುಮಾಡಿದೆವು. ಈಗ ನೆರಳು ಚಿಕ್ಕದಾಗಿತ್ತು.

14—7—08. ತೋಟದಲ್ಲಿದ್ದ ಸೂರ್ಯನ ಗಡಿಯಾರದಿಂದ ಹೊತ್ತನ್ನು ಗೊತ್ತು ಮಾಡುವ ರೀತಿಯನ್ನು ತಿಳಿದುಕೊಂಡೆವು.

ಈ ವಿಮರ್ಶೆಯಕಾಲದಲ್ಲಿ ಸೂರ್ಯನ ವಿಷಯಕವಾದ ಅನೇಕ ಕಥೆಗಳು ಹೇಳಲ್ಪಟ್ಟವು. ಅವುಗಳಲ್ಲೊಂದನ್ನು ಇಲ್ಲಿ ಬರೆಯುವೆವು.

ಹಂಸಕನ್ಯೆಯರು,

ಬಹು ದಿವಸಗಳ ಹಿಂದೆ ಪೂರ್ವದಿಕ್ಕಿನಲ್ಲಿ ಒಬ್ಬ ರಾಜನು ಇದ್ದನು. ಈ ರಾಜನು ಪ್ರತಿದಿನವೂ ಚಿನ್ನದ ರಥದಲ್ಲಿ ಕುಳಿತು ಹೊರಕ್ಕೆ ಬಂದು ತನ್ನ ಜನರಿಗೆ ಬೆಳಕನ್ನೂ ಶಾಖವನ್ನೂ ಕೊಟ್ಟು ಸಂತೋಷವನ್ನುಂಟುಮಾಡುತಿದ್ದನು. ಹೀಗೆ ಪ್ರತಿದಿನವೂ ಪೂರ್ವದಿಕ್ಕಿನಲ್ಲಿದ್ದ ತನ್ನ ಅರಮನೆಯಿಂದ ಪಶ್ಚಿಮದಲ್ಲಿದ್ದ ತನ್ನ ಸಿಂಹಾಸನಕ್ಕೆ ಹೋಗುತಿದ್ದನು. ಎಲ್ಲರೂ ಸುಖವಾಗಿರಬೇಕೆಂಬ ಆಸೆಯು ಇವನಿಗಿದ್ದುದರಿಂದ ಇವನು ಒಂದು ದಿನವೂ ತಪ್ಪದೆ ಸಂಚಾರ ಹೊರಡುತಿದ್ದನು. ಜನರ ಸಂತೋಷಕಾಗಿ ಪಕ್ಷಿಗಳು ಹಾಡುವಂತೆಯೂ, ಹೂಗಳು ಅರಳುವಂತೆಯೂ ಮಾಡುತಿದ್ದನು. ಇವರು ನೋಡುವುದಕ್ಕೆ ಅನುಕೂಲಿಸುವಂತೆ ಸುಂದರವಾದ ಪಟಗಳನ್ನು ನೇತುಹಾಕಿ ಇವನ್ನು ಕ್ಷಣೇಕ್ಷಣೇ ಬದಲಾಯಿಸುತಿದ್ದನು. ಈ ರಾಜನಿಗೆ ಸುಂದರಿಯರಾದ ಅನೇಕ ಮಂದಿ ಹೆಣ್ಣುಮಕ್ಕಳಿದ್ದರು. ಇವರು ಆಗಾಗ್ಗೆ ಚೆಲುವಾದ ಬಿಳಿಯ ಹಂಸೆಗಳಮೇಲೆ ಕುಳಿತು ಸಂಚರಿಸುತಿದ್ದುದರಿಂದ ಇವರಿಗೆ ಹಂಸಕನ್ಯೆಯರೆಂಬ ಹೆಸರು ರೂಢಿಯಾಯಿತು. ಈ ಕನ್ಯೆಯರು ತಮ್ಮ ತಂದೆಯ ಬಳಿಯಲ್ಲಿದ್ದಾಗ ಬಿಳುಪು ಅಥವಾ, ಬೂದುಬಣ್ಣದ ಉಡುಪುಗಳನ್ನು ತೊಟ್ಟುಕೊಳ್ಳುತಿದ್ದರು. ತಮ್ಮ ತಂದೆಯನ್ನು ಇವರು ಬಲುಪ್ರೀತಿಸುತಿದ್ದರು. ಅವನಿಗೋಸ್ಕರ ಸಂತೋಷದಿಂದ ಕೆಲಸ ಮಾಡುತಿದ್ದರು. ಇವರು ಕೆಲಸ ಮಾಡದೆ ಸೋಮಾರಿಗಳಾಗಿ ಎಂದೂ ಕುಳಿತುಕೊಳ್ಳುತಿರಲಿಲ್ಲ. ಧರೆಯು ಹುಲ್ಲು ಒಣಗಿರುವುದನ್ನು ಅಥವ ಗಿಡದಲ್ಲಿ ಮೊಗ್ಗುಗಳು ಬಿಡದಿರುವುದನ್ನು ನೋಡಿದಾಗ ನಿಮ್ಮಲ್ಲಿ ಯಾರು ಕೆಲಸಕ್ಕೆ ಹೋಗುವಿರಿ ಎಂದು ಕೇಳುತಿದ್ದನು. ಅವನ ಪ್ರಶ್ನೆಯು ಮುಗಿಯುವುದರೊಳಗೆ ಎಲ್ಲರೂ ನಾನು ತಾನು ಎಂದು ಓಡಿಬರುತಿದ್ದರು. ಇವರು ಹೊರಗೆ ಹೊರಡುತಿದ್ದಾಗ ತಮ್ಮ ಬಿಳಿಯ ಉಡುಪನ್ನು ತೆಗೆದುಹಾಕಿ, ಕರಿಯ ಉಡುಪನ್ನು ಹಾಕಿಕೊಳ್ಳುತಿದ್ದರು. ಹುಲ್ಲುಗಳಮೇಲೂ, ಮೊಗ್ಗುಗಳಮೇಲೂ ಕೆಲಸ

ಮಾಡುವುದಕ್ಕವಕಾಶ ದೊರೆಯದಿದ್ದವರು ಕಲ್ಲುಗಳ ಸಂಗಡ ಆಡುತಿದ್ದರು. ಇವರಲ್ಲಿ ಅತ್ಯುತ್ತಮರಾದ ಕನ್ಯೆಯರು ನೆಲದೊಳಗೂ ಹೋಗಿ ಅಲ್ಲಿರುವ ಬೇರುಗಳನ್ನೂ, ಕ್ರಿಮಿಗಳನ್ನೂ, ಪೋಷಿಸುತಿದ್ದರು. ತಮ್ಮ ಕೆಲಸವು ಮುಗಿದಮೇಲೆ ಪುನಃ ರಾಜನ ಬಳಿಗೆ ಹೋಗುತಿದ್ದರು. ಇವರು ಹಿಂದಿರುಗಿ ಹೋಗುವುದನ್ನು ನೋಡುವುದು ಬಲುಕಷ್ಟ. ಎಚ್ಚರಿಕೆಯುಳ್ಳ ಮಕ್ಕಳೇ ಇವರನ್ನು ಕಾಣುವರು.

ಈ ವಿಮರ್ಶೆಯ ಕಾಲದಲ್ಲಿ ಮುಂದೆ ಬರೆದಿರುವ ಸೂರ್ಯನ ವಿಷಯಕವಾದ ನಾಲ್ಕು ಪದ್ಯಗಳನ್ನು ಮಕ್ಕಳು ಬಾಯಿಪಾಠ ಮಾಡಿದರು.

(1) ಜಗಕೆ ನೀನೊಂದು ಕಣ್ಣಾಗಿರ್ಪೆ ಮೇಣೆರಡು ।
ಬಗೆಯ ಪಥದೊಳ್ ನಡೆವೆ ತಿಳಿಯಲ್ಕೆ ಮೂರುಮೂ ॥
ರ್ತಿಗಳನೊಳಗೊಂಡಿರ್ಪೆ ಸಲೆ ಸಂದ ನಾಲ್ಕು ವೇದಂಗಳೊಡಲಾಗಿ [ತೋಪಸ ॥
ಆಗಲದೈದಂಗದೊಳ್ ಕಾಣಿಸುವೆ ಪರಿಪರಿಯೊ ।
ಳೊಗೆದಾರು ಋತುಗಳೊಳ್ ವರ್ತಿಸುವೆ ಸಂತತಂ ।
ಗಗನಕೇಳಶ್ವಮಂ ಕೊಂಡೇಳ್ವೆ ದೇವ ಬಿಲ್ಗೊಟ್ಟು ಳುಹಬೇಕೆಂದನು ॥

(2) ಪತ್ತುದೆಸೆಯುಂ ಬೆಳಗಿಸುವೆ ಪನ್ನೆರಡು ರಾಶಿ ।
ಗೊತ್ತಾಸೆಯಾಗಿರ್ಪೆ ಶತಪತ್ರಮಿತ್ರನ ಹೆ ।
ಮೃತ್ತು ಸಾಸಿರ ಕಿರಣದಿಂದೆಸೆವೆ ಲಕ್ಷಯೋಜನದಳತೆಯೊಳ್ ತೊಳಗುವೆ ॥
ಬಿತ್ತರದನಂತರದೊಳ್ ಸಂಚರಿಸುವೆ ದೇವನಿ ।
ನ್ನುತ್ತಮಗುಣಾವಳಿಯನೆಣಿಸಲೆನ್ನಳವೆ ಬಿ ।
ಟ್ಟಿತ್ತು ಳುಹಬೇಕೆಂದು ದಿನಮಣಿಯನಾಲವಂ ನುತಿಸಿದಂ ಭಕ್ತಿಯಿಂದ ॥

(3) ಬಳಿಕ ದಿನದಿನಕೊಂದು ಪರಿಯಾಗಿ ದೋಷಮಂ ।
ತಳೆದು ಸಲೆ ಪೆರ್ಚಿದಕರಂಗಳಿಂ ಸಿರಿಯಿರ್ದ ।
ನಿಳೆಯುಂಗಳಂ ಬಾಧಿಸುವ ರಾಜನೈಶ್ವರ್ಯಮಿರ್ದಪುದೆ ಕೇಳೆನಲ್ಕೆ ॥
ತೊಳಗಿದುವು ಬೆಳ್ದಿಂಗಳಾದಿತ್ಯನೋಳ್ಸರೆಯ ।
ಲೆಳಸಿ ಕುಂಕುಮದಿಂದ ಪೂರ್ವದಿಗ್ವನಿತೆಮಂ ।
ಗಳ ಮಜ್ಜನಂಗೈದಳೆಂಬಂತೆ ರಂಜಿಸಿತು ಮೂಡದೆಸೆ ಕೆಂಪಡರ್ದು ॥೩॥

(4) ಗಾಲಿಯೊಂದೇ ರಥಕೆ ಜೋಡಾಗಿ ಪೂಡುವರೆ ।
ಸಾಲದೇಳೇ ಹಯಂ ನಡೆಸುವರೆ ಸಾರಥಿಗೆ ।
ಕಾಲಿಲ್ಲ ಲೋಕಯಾತ್ರೆಯ ನೊಲ್ಲೆನೆಂದೊಡಾಗದೆ ತನಗೆ ತಿರುಗಲೇಕೆ ॥
ಕಾಲಗತಿಯಂ ಪಿರಾರಬಾರದಿಂತೆಂಬುದಂ ।
ಮೂಲೋಕವೆತ್ತರಿಸುವಂತೆ ಪೂರ್ವಾಚಲದ । ಗೆಲು ॥೪॥
ಮೇಲೆ ಮೂಡಿಗನೆಂಬ ಸವೋಬಬ ಬಿಂಘಂ ಸಯುಸಂಘ ಕಿಗಡ

ಈ ವಿಮರ್ಶೆಗೆ ಮುಂದಿನ ಪಟ್ಟಿಯಲ್ಲಿ ಕಾಣುವಂತೆ ಕೈ ಕೆಲಸಗಳೂ ಆಟಗಳೂ, ಪಾಠಗಳೂ ಸಂಬಂಧಿಸಲ್ಪಟ್ಟವು.

ಸಂ	ಕೆಲಸಗಳು	I ನೆಯ ತರಗತಿ	ಮಕ್ಕಳ ಬಿ ತರಗತಿ B	ಮಕ್ಕಳ ಎ ತರಗತಿ A
I	ಚಿತ್ರ	ತರಗತಿಯೊಳಗೆ ಅಥವ ಹಾಲಿನೊಳಗೆ ಬಿಸಿಲು ಬೀಳುವ ಕಿಟಿಕಿ, ಈಕಾಲದಲ್ಲಿ ತೋಟದಲ್ಲಿ ಅರಳಿರುವ ಹೂಗಳು, ಚಿಗುರಿರುವ ಮರಗಳು, ಸೂರ್ಯನ ಕಿರಣವು ನೀರಿನ ಪಾತ್ರೆಯ ಮೂಲಕ ಹೋಗುವ ಚಿತ್ರ. ಸೂರ್ಯನ ಕಿರಣವು ಪ್ರಿಸಂನ ಮೇಲೆ ಹೋಗುವುದರ ಮತ್ತು ಇದರಿಂದುಂಟಾಗುವ ಏಳು ಬಣ್ಣಗಳ ಚಿತ್ರ. ತೋಟದಲ್ಲಿ ಬಿಸಿಲು ಬಿದ್ದಿರುವ ಮರದ ಚಿತ್ರ, ಸೂರ್ಯ ಮತ್ತು, ಕಾಮನಬಿಲ್ಲು, ಸ್ಕೂಲ್ ಸುತ್ತಲೂ ಇರುವ ಹುಲ್ಲು ಮೈದಾನ ತೋಟದಲ್ಲಿ ಕಾಣುವ ಚಿಟ್ಟೆಗಳು ಭೂತಕನ್ನಡಿ. ಸೂರ್ಯನ ಗಡಿಯಾರ, ಮರಳುಗಡಿಯಾರ.	ತರಗತಿಯೊಳಗೆ ಅಥವ ಹಾಲಿನೊಳಗೆ ಬಿಸಿಲು ಬೀಳುವ ಕಿಟಿಕಿ, ಈ ಕಾಲದಲ್ಲಿ ತೋಟದಲ್ಲಿ ಅರಳಿರುವ ಹೂಗಳು, ಚಿಗುರಿರುವ ಮರಗಳು, ತೋಟದಲ್ಲಿ ಬಿಸಿಲು ಬಿದ್ದಿರುವ ಮರದ ಚಿತ್ರ ಸೂರ್ಯ ಮತ್ತು ಕಾಮನಬಿಲ್ಲು, ಸ್ಕೂಲ್ ಸುತ್ತಲೂ ಇರುವ ಹುಲ್ಲುಮೈದಾನ, ತೋಟದಲ್ಲಿ ಕಾಣುವ ಚಿಟ್ಟೆಗಳು, ಭೂತಕನ್ನಡಿ, ಮರಳು ಗಡಿಯಾರ.	ತರಗತಿಯೊಳಗೆ ಅಥವಾ ಹಾಲಿನೊಳಗೆ ಬಿಸಿಲು ಬೀಳುವ ಕಿಟಿಕಿ, ಚಿಗುರಿರುವ ಮರಗಳು ತೋಟದಲ್ಲಿ ಬಿಸಿಲು ಬಿದ್ದಿರುವ ಮರದ ಚಿತ್ರ, ಸೂರ್ಯ ಮತ್ತು ಕಾಮನಬಿಲ್ಲು, ಸ್ಕೂಲ್ ಸುತ್ತಲೂ ಇರುವ ಹುಲ್ಲುಮೈದಾನ, ಭೂತಕನ್ನಡಿ, ಮರಳುಗಡಿಯಾರ.

ನಂ	ಕೆಲಸಗಳು	1 ನೆಯ ತರಗತಿ	ಇನ್‌ಫೆಂಟ್ B ತರಗತಿ	ಇನ್‌ಫೆಂಟ್ A ತರಗತಿ
2	ಬ್ರಷ್‌ವರ್ಕ್	ಲಿಲ್ಲೀ ಹೂವು, ಕಾಮನಬಿಲ್ಲು, ಸೂರ್ಯ, ಚೆಂಡು, ಅದರ ನೆರಳು, ಸೂರ್ಯಕಾಂತಿ ಗಿಡವು.		
3	ಕ್ಲೇಮಾಡಲಿಂಗ್.	ನೀರಿನ ಬಟ್ಟಲು, ಪ್ರಿಸಂ ಸೂರ್ಯನ ಗಡಿಯಾರ, ಹೂವಿನ ಕುಂಡ,(ಹೂವಿನ ಕುಂಡ) ಹೂಗಳನ್ನಿಡುವ ಬಟ್ಟಲು, ಸೂರ್ಯಕಾಂತಿಹೂ, ಕ್ಯಾಮಿರಾ, ಫೋಟೋ ತೆಗೆಯುವ ಚೌಕಟ್ಟು, ತೋಟಕ್ಕೆ ನೀರು ಹಾಕುವ ಪಾತ್ರೆ.	ನೀರಿನ ಬಟ್ಟಲು, ಪ್ರಿಸಂಮ್, ಸೂರ್ಯನ ಗಡಿಯಾರ, ಹೂವಿನಕುಂಡ, ಹೂಗಳನ್ನಿಡುವ ಒಟ್ಟಲು, ಫೋಟೋ ತೆಗೆಯುವ ಚೌಕಟ್ಟು,	ನೀರಿನ ಬಟ್ಟಲು, ಪ್ರಿಸಂ, ಸೂರ್ಯನ ಗಡಿಯಾರ, ಹೂವಿನ ಕುಂಡ, ಹೂಗಳನ್ನಿಡುವ ಬಟ್ಟಲು,
4	ಕಾಗದ ಮಡಿಸುವುದು	ಕನ್ನಡಿ, ಡೇರೆ, ಛತ್ರಿ, ದುರ್ಬೀನು ಮೇಜಿನಮೇಲೆ ಹಾಸುವ ಬಟ್ಟೆ, ಬೀಜಗಳನ್ನಿಡುವ ಗೂಡೆಗಳು, ಚೀಲಗಳು, ನಾನಾವಿಧವಾದ ಬೀಸಣಿಗೆಗಳು. ಷರಾ:—ಚೌಕವಾದ ಮತ್ತು ಅ	ಕನ್ನಡಿ, ಡೇರೆ, ಛತ್ರಿ, ದುರ್ಬೀನು, ಮೇಜಿನಮೇಲೆ ಹಾಸುವ ಬಟ್ಟೆ, ಬೀಜಗಳನ್ನಿಡುವ ಗೂಡೆಗಳು, ಚೀಲಗಳು, ನಾನಾವಿಧವಾದ ಬೀಸಣಿಗೆಗಳು. ಕೃತಿಯುಳ್ಳ ಕಾಗದಗಳನ್ನು	ಡೇರೆ, ಛತ್ರಿ, ದುರ್ಬೀನು, ಮೇಜಿನ ಮೇಲೆ ಹಾಸುವ ಬಟ್ಟೆ, ಬೀಜಗಳನ್ನಿಡುವ ಗೂಡೆಗಳು, ಚೀಲಗಳು, ನಾನಾವಿಧವಾದ ಬೀಸಣಿಗೆಗಳು. ಉಪಯೋಗಿಸುವುದು.

5	III ನೆಯ ಕರಣ	... ...	... ...	ಕಿಟಕಿ, ಪಾಠಶಾಲೆಯ ಆಟದ ಮೈದಾನ, ತೋಟ, ಎಂಟು ಹತ್ತು ಮಕ್ಕಳು ತಮ್ಮತಮ್ಮ ಕರಣಗಳನ್ನೊಟ್ಟಾಗಿ ಸೇರಿಸಿ ತೋಟದ ಪಾತಿಗಳನ್ನು ಮಾಡುವುದು, ಮೆಟ್ಟಲು, ಸ್ಕೂಲಿನ ಮುಂಭಾಗ, ಅದರ ಮುಂದೆ ಕಾಗದದ ಸೂರ್ಯನ ಗಡಿಯಾರ.
6	IV ನೆಯ ಕರಣ	... ...	ಗಣಿಯ ಹಳ್ಳ, ಕೊಳಗಳು, ಭಾವಿಗಳು, ಗೋಪುರಗಳು, ತೋಟ, ಮನೆ.	
7	V ನೆಯ ಕರಣ	ಸೋಫಾ, ಅದರಮೇಲೆ ಕಾಗದದ ಬೊಂಬೆ, ಬೆಂಚು, ಕುರ್ಚಿ, ಗೋಪುರ, ಕಾಗದದ ಮೆಟ್ಟಲು, ಪ್ರಿಸಂ, ಒಟ್ಟಲು,	... ...	... ...
8	VI ನೆಯ ಕರಣ	ಗೋಪುರ, ಆಕಾಶವನ್ನು ನೋಡಲು ಎತ್ತರವಾದ ಕಂಭ, ನಾನಾವಿಧವಾದ ಮಂಟಪಗಳು, ಮನೆಗಳು, ಕೋಟೆ ಮತ್ತು ಅದರ ಮಧ್ಯದಲ್ಲಿ ಮನೆ, ನೀರಿಟ್ಟುಕೊಳ್ಳುವ ತಟ್ಟೆ.	... ...	... ...

ಸಂ	ಕೆಲಸಗಳು	I ನೆಯ ತರಗತಿ	ಇನ್ಫೆಂಟ್ B ತರಗತಿ	ಇನ್ಫೆಂಟ್ A ತರಗತಿ
9	ಒಳೆ ಕಡ್ಡಿಗಳು	... ...	ಸೂರ್ಯ, ಕಿಟಕಿ, ನೀರಿನಪಾತ್ರೆ, ಹೂವಿಡುವ ಪಾತ್ರೆ, ಸಾಬೂನು ಗುಳ್ಳೆಯನ್ನೂದುವ ಕೊಳವೆ, ಸಾಬೂನು ಗುಳ್ಳೆ, ಗುಡಿ, ಸೂರ್ಯನ ಗಡಿಯಾರ, ಮರಳುಗಡಿಯಾರ, ಒಲೆ, ಪಿಕಾಸಿ, ಗುದ್ದಲಿ, ಪ್ರಿಸಂ, ಟೋಪಿ, ಬೀಸಣಿಗೆ, ಕನ್ನಡಿ.	ಸೂರ್ಯ, ಕಿಟಕಿ, ನೀರಿನಪಾತ್ರೆ, ಹೂವಿಡುವ ಪಾತ್ರೆ, ಸಾಬೂನು ಗುಳ್ಳೆಯನ್ನೂದುವ ಕೊಳವೆ, ಸಾಬೂನುಗುಳ್ಳೆ, ಗುಡಿ, ಸೂರ್ಯನ ಗಡಿಯಾರ, ಮರಳು ಗಡಿಯಾರ, ಒಲೆ, ಪಿಕಾಸಿ, ಗುದ್ದಲಿ, ಪ್ರಿಸಂ, ಟೋಪಿ, ಬೀಸಣಿಗೆ, ಕನ್ನಡಿ.
10	ದಬ್ಬೆಗಳು	ಕಿಟಕಿ, ಬೀಸಣಿಗೆ, ಗೋಪುರ, ಛತ್ರಿ, ಮನೆ.	ಕಿಟಕಿ, ಬೀಸಣಿಗೆ, ಗೋಪುರ, ಛತ್ರಿ, ಮನೆ.	... ...
11	I ನೆಯ ಕರಣ	... ...	ನಾನಾವಿಧವಾದ ಚೆಂಡಿನ ಆಟಗಳು ಮತ್ತು ಬಣ್ಣದ ಗಾನ.	ನಾನಾವಿಧವಾದ ಚೆಂಡಿನ ಆಟಗಳು ಮತ್ತು ಬಣ್ಣದ ಗಾನ.
12	ಮರಳಿನ ಕೆಲಸ	... ...	... ...	ತೋಟ ಮತ್ತು ಭಾವಿ, ಗುಡ್ಡ, ಆಟದ ಮೈದಾನ, ಸ್ಕೂಲ್ ಸುತ್ತಲೂ ಇರುವ ಹುಲ್ಲುಮೈದಾನ.
13	ನೂಲಿಡುವುದು	... ...	... ...	ಕಿಟಕಿ, ಪಾತ್ರೆ, ಕೊಳವೆ, ಸಾಬೂನುಗುಳ್ಳೆ, ಹೂವು.
14	ಆಟಗಳು	ಸೂರ್ಯನಿಗೆ ಸಂಬಂಧಪಟ್ಟ ಮಾರ್ಚಿಂ (3) ಏಳೇಳ್ ಪ್ರಾತಃಕಾಲದೋಳ್.	ಗ್ ಆಟಗಳು. (1) ದಾಳಗೂಡಿ ಶೋ	ಭಿಸುತ್ತಿ. (2) ಭಾನು ಮೇಲೇರಲ್

ನಂ	ಕೆಲಸಗಳು	I ನೆಯ ತರಗತಿ	ಇರ್ಫೆಟ್ B ತರಗತಿ	ಇರ್ಫೆಟ್ A ತರಗತಿ
15	ಕಥೆಗಳು.	(1) ಹಂಸಕನ್ಯೆಯರು, (2) ಬಿಳಿಯಪೋಡ, (3) ಮಿತ್ರನ ಅರಮನೆ, (4) ಅರುಣನ ಮಗ, (5) ಕಾಮನ ಬಿಲ್ಲು, (6) ಗಾಳಿ ಮತ್ತು ಸೂರ್ಯ (7) ಸೂರ್ಯನ ಕಿರಣಗಳು, (8) ಒಂದು ಬೀಜದ ಕಥೆ, (9) ಸಣ್ಣ ಹುಳು, (10) ಸೂರ್ಯನ ಸಹೋದರಿಯರು, (11) ನೀರಿನ ತೊಟ್ಟುಗಳು. (12) ಬೀರನೆಂಬ ರೈತನ ಕಥೆ.		
16	ಪದ್ಯಗಳು	ಸೂರ್ಯನ ವಿಷಯಿಕವಾದ ನಾಲ್ಕು ಪದ್ಯಗಳು		ಒಂದುಪದ್ಯಮಾತ್ರ.
17	ರಟ್ಟುಗಳು	ಸೂರ್ಯ, ಕಾಮನಬಿಲ್ಲು, ನೀರಿನ ಪಾತ್ರೆ, ಸೂರ್ಯನ ಗಡಿಯಾರ, ತೋಟದ ಪಾತಿಗಳು, ಮತ್ತು ಕರಣದಿಂದ ಕಟ್ಟಿದ ಆಕೃತಿಗಳ ಮೇಲ್ಕಟ್ಟು.		
18	ಕಾಗದ ಕತ್ತರಿಸುವುದು	ತೋಟದ ಆಯುಧಗಳು, ಸೂರ್ಯ ಮತ್ತು ಕಾಮನ ಬಿಲ್ಲು, ಭೂತ ಕನ್ನಡಿ, ಸೂರ್ಯನ ಗಡಿಯಾರ, ಮರಳುಗಡಿಯಾರ, ಉತ್ತರಮುಖಿ, ನೀರಿಡುವ ಪಾತ್ರೆ, ಚೌಕಟ್ಟು.		

ವಿದ್ಯಾದಾಯಿನಿ.

(A MONTHLY JOURNAL)

ಭಾಗ ೧೨] ಏಪ್ರಿಲ್—೧೯೦೯ [ಸಂಚಿಕೆ ೪.

ಚರಿತ್ರೆ, ಮತ್ತು ಭೂಗೋಳ.

ಕಳೆದ ನವೆಂಬರ್, ಮತ್ತು ಡಿಸೆಂಬರ್ ತಿಂಗಳುಗಳ ಸಂಚಿಕೆಗಳಲ್ಲಿ ಪ್ರಕಟಿಸಿರುವ ಕಿಂಡರ್‌ಗಾರ್ಟೆನ್ ವಿಷಯಕವಾದ ಉಪನ್ಯಾಸದಿಂದ ಫ್ರೊಬೆಲ್ಲನಿಗೆ ಸಣ್ಣಮಕ್ಕಳವಿದ್ಯಾಭ್ಯಾಸದಲ್ಲಿದ್ದ ಮೂರು ಉದ್ದೇಶಗಳು ಯಾವುವು ಎಂಬುದು ತಿಳಿದಿರಬಹುದು. ಮಗುವು ಜನಸಮುದಾಯದಲ್ಲಿ ವಾಸಿಸುವುದಕ್ಕೆ ಅರ್ಹನಾಗುವಂತೆ ಮಾಡುವುದು, ಅದಕ್ಕೆ ಪ್ರಕೃತಿಸಂಸರ್ಗವನ್ನುಂಟುಮಾಡಿ ಪ್ರಕೃತಿಗೂ ಮಗುವಿಗೂ ಇರುವ ಸಂಬಂಧವನ್ನು ಸ್ಪಷ್ಟಪಡಿಸುವುದು, ಮನುಷ್ಯನಿಗೂ ದೇವರಿಗೂ ಇರುವ ಸಂಬಂಧದ ತಿಳಿವಳಿಕೆಯನ್ನುಂಟುಮಾಡುವುದು; ಇವೇ ಫ್ರೊಬೆಲ್ಲನಿಗೆ ಸಣ್ಣಮಕ್ಕಳ ವಿದ್ಯಾಭ್ಯಾಸದಲ್ಲಿದ್ದ ಮೂರು ಉದ್ದೇಶಗಳು. ಚರಿತ್ರೆ ಮತ್ತು ಭೂಗೋಳ ಪಾಠಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದರಿಂದ ಫ್ರೊಬೆಲ್ಲನ ಈ ಉದ್ದೇಶಗಳು ನೆರವೇರಲು ವಿಶೇಷ ಸಹಾಯವಾಗುವುದು. ಆದುದರಿಂದಲೇ ಈ ಪಾಠಗಳನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಏರ್ಪಡಿಸುವ ಪಾಠಗಳ ಪಟ್ಟಿಯಲ್ಲಿ ಸೇರಿಸುವುದು ಅವಶ್ಯಕವು. ಆದರೆ ಇವನ್ನು ಈಗ ನಮ್ಮಲ್ಲಿ ನಡೆಸುತಿರುವ ಮಾರ್ಗವು ಫ್ರೊಬೆಲ್ಲನ ಕ್ರಮಕ್ಕೆ ಅನುಸಾರವಾಗಿಲ್ಲ. ಅವನ ಕ್ರಮಕ್ಕೆ ಅನುಸಾರವಾಗಿ ನಡೆಸಬೇಕಾದರೆ ಈಪಾಠಗಳನ್ನು ಆಟದರೂಪದಲ್ಲಿ ನಡೆಸಬೇಕು. ಹೀಗೆ ನಡೆಸುವರೀತಿಯನ್ನು ಇಲ್ಲಿ ಸ್ವಲ್ಪಮಟ್ಟಿಗೆ ವಿವರಿಸುವೆವು.

ಫ್ರೊಬೆಲ್ಲನಿಗೆ ಮಕ್ಕಳ ವಿದ್ಯಾಭ್ಯಾಸದಲ್ಲಿರುವ ಮೂರು ಉದ್ದೇಶಗಳನ್ನೂ ನೆರವೇರಿಸಲು ಭೂಗೋಳಪಾಠದಲ್ಲಿ ವಿಶೇಷ ಅವಕಾಶಗಳಿರುವುವು. ಆದರೆ ಈಗ ನಮ್ಮ ಪಾಠಶಾಲೆಗಳಲ್ಲಿ ನಡೆಯುತಿರುವ ಭೂಗೋಳಪಾಠದಿಂದ ಮನುಷ್ಯನು ಪ್ರಪಂಚದಲ್ಲಿ ತನ್ನ ಉಪಯೋಗಕ್ಕಾಗಿ ಮಾಡಿಕೊಂಡಿರುವ ಅಂಶಗಳು ಮಾತ್ರ ವಿಶೇಷವಾಗಿ ತಿಳಿಯುತಿರುವುವು. ಮನುಷ್ಯನು ಅಲ್ಲಲ್ಲಿ ಕಟ್ಟಿಕೊಂಡಿರುವ ಊರುಗಳು ಮುಂತಾದ ಕೆಲವು ಅಂಶಗಳನ್ನು ಮಾತ್ರ ತಿಳಿಸಿದರೆ ತಮ್ಮ ಕರ್ತವ್ಯವು ಮುಗಿಯಿತೆಂದು ಅನೇಕ-ಉಪಾಧ್ಯಾಯರು ಭಾವಿಸುತ್ತಿರುವರು. ವಸ್ತುತಃ ಭೂಗೋಳಪಾಠದ ಉದ್ದೇಶವು ಇದಕ್ಕಿಂತಲೂ ವಿಶೇಷ ಅಧಿಕವಾಗಿರುವುದು. ಪ್ರಕೃತಿವಿಮರ್ಶೆಯು ಪಾಠದಿಂದ ಮಕ್ಕಳಿಗೆ ಅವರ ಸಮೀಪದಲ್ಲಿರುವ ಪ್ರಕೃತಿಸಂಬಂಧವಾದ ಅಂಶಗಳು ಬಳಿಕೆಯಾಗುತ ಬರುವುವು. ಇವುಗಳ ಸಹಾಯದಿಂದ ಮಕ್ಕಳಿಗೆ ಬಹು ದೂರದಲ್ಲಿರುವ ಪ್ರಕೃತಿಸಂಬಂಧವಾದ ಅಂಶಗಳೂ ಬಳಿಕೆಯಾಗುವಂತೆ ಮಾಡುವುದೇ ಭೂಗೋಳ ಪಾಠದ ಒಂದು ಮುಖ್ಯೋದ್ದೇಶವು. ಪ್ರಪಂಚದಲ್ಲಿ ಋತುಧರ್ಮವು ಯಾವಯಾವಕಡೆಗಳಲ್ಲಿ ಹೇಗೆಹೇಗೆ ಇರುವುದು, ಮಕ್ಕಳ ಸುತ್ತಲೂ ಕಾಣುವ ಋತುಧರ್ಮಕ್ಕೂ, ಅನ್ಯರಾಜ್ಯಗಳಲ್ಲಿ ಕಾಣುವ ಋತುಧರ್ಮಕ್ಕೂ, ವ್ಯತ್ಯಾಸಗಳೇನು ? ಪ್ರಾಣಿಸಸ್ಯಗಳಲ್ಲಿ ತಾವು ನೋಡದೇ ಇರುವ ಯಾವ ವಿಚಿತ್ರವಾದ ಅಂಶಗಳು ಇತರರಾಜ್ಯಗಳಲ್ಲಿರುವುವು ? ತಮ್ಮ ದೇಶದ ನದಿ, ಬೆಟ್ಟ, ಇವುಗಳಿಗಿಂತಲೂ ಬಲು ದೊಡ್ಡವಾದ ಪರ್ವತಗಳು ನದಿಗಳು ಮತ್ತೆಲ್ಲಿರುವುವು ? ಈ ವಿಧವಾದ ಅಂಶಗಳು ಮಕ್ಕಳಿಗೆ ಭೂಗೋಳಪಾಠದಿಂದ ತಿಳಿಯಬೇಕು. ಈ ತಿಳುವಳಿಕೆಯಿಂದ ಇವರಿಗೆ ಪ್ರಕೃತಿವಿಷಯಕವಾದ ಜ್ಞಾನವು ಹೆಚ್ಚುವುದು. ಅಲ್ಲದೆ ಪ್ರಪಂಚದಲ್ಲಿ ನಮ್ಮಂತಿರುವ ಮನುಷ್ಯರು ಎಲ್ಲೆಲ್ಲಿಇರುವರು, ಇವರಿಗೂ ನಮಗೂ ಯಾವಯಾವವಿಷಯಗಳಲ್ಲಿ ಹೋಲಿಕೆಗಳಿರುವುವು, ಯಾವಯಾವವಿಷಯಗಳಲ್ಲಿ ವ್ಯತ್ಯಾಸಗಳಿರುವುವು, ಅವರಿಂದ ನಾವು ಕಲಿಯಬೇಕಾದುದೇನು, ಅವರು ನಮಗೆ ಮಾಡುತಿರುವ ಉಪಕಾರವೇನು, ನಾವು ಅವರಿಗೆ ಏನು ಪ್ರತ್ಯುಪಕಾರವನ್ನು ಮಾಡಬೇಕು, ಇಂತಹ ಅಂಶಗಳೂ ಭೂಗೋಳಪಾಠದಿಂದ ಮಕ್ಕಳಿಗೆ ತಿಳಿಯಬೇಕು. ಈ ತಿಳಿವಳಿಕೆಯಿಂದ ಮಗುವಿಗೂ ಇತರ ಮನುಷ್ಯರಿಗೂ ಇರುವ ಸಂಬಂಧವು ವ್ಯಕ್ತವಾಗುತ ಬರುವುದು.

ತಮ್ಮ ಸುತ್ತಲೂ ತಮಗೆ ಕಾಣುವುದೇ ಒಟ್ಟು ಪ್ರಪಂಚವೆಂಬ ಭಾವನೆಯು ಮಕ್ಕಳಲ್ಲಿ ಸಾಮಾನ್ಯವಾಗಿ ಕಾಣುವುದು. ಈ ಭಾವನೆಯನ್ನು ನಾಶಪಡಿಸಿ ಪ್ರಪಂ

ಚವು ತಾವು ಭಾವಿಸಿರುವುದಕ್ಕಿಂತಲೂ ಬಲು ದೊಡ್ಡದು, ಅಪರಿಮಿತವಾದುದು, ತಾವು ಅದರಲ್ಲಿ ಅತಿ ಸೂಕ್ಷ್ಮನಾದ ಏಕದೇಶವಾಗಿರುವರು, ಎಂಬ ಜ್ಞಾನವನ್ನು ಭೂಗೋಳಪಾಠದಿಂದ ಮಕ್ಕಳಿಗುಂಟುಮಾಡಬಹುದು. ಇಂತಹ ಜ್ಞಾನದಿಂದ ಅನಂತವಾದ ಪ್ರಪಂಚಕ್ಕೆಲ್ಲಾ ಕರ್ತನಾದ ದೇವರ ಅಪಾರವಾದ ಮಹಿಮೆಯು ತಾನಾಗಿಯೇ ಅವರಮನಸ್ಸಿಗೆ ಹೊಳೆಯುತ ಬರುವುದು. ಆದುದರಿಂದ ಮಕ್ಕಳ ವಿದ್ಯಾಭ್ಯಾಸದಲ್ಲಿ ಭೂಗೋಳಪಾಠವು ಬಹು ಮುಖ್ಯಭಾಗವಾಗಿರುವುದು.

ಈ ಪಾಠವನ್ನು ಸಣ್ಣಮಕ್ಕಳಿಗೆ ನಡೆಸುವಾಗ ಮೇಲೆ ಸೂಚಿಸಿರುವಂತೆ ಆಟಗಳ ರೂಪದಲ್ಲೇ ನಡೆಸಬೇಕಾಗುವುದು. ಈ ಕ್ರಮದಲ್ಲಿ ಭೂಗೋಳಪಾಠವನ್ನು ನಡೆಸುವುದಾದರೆ ಇದನ್ನು ಪ್ರಾರಂಭಿಸುವುದಕ್ಕೆ ಈಗ ಯಾವ ವಯಸ್ಸಿನವರೆಗೆ ಕಾಯುತಿರುವೆವೋ ಅಲ್ಲಿಯವರೆಗೆ ಕಾಯಬೇಕಾದುದಿಲ್ಲ. ಈಗ ಭೂಗೋಳಪಾಠವನ್ನು ವಾಡಿಕೆಯಾಗಿ ಏಳೆಂಟು ವಯಸ್ಸಿನ ವರೆಗೆ ಪ್ರಾರಂಭಿಸುವುದಿಲ್ಲ. ಮಕ್ಕಳಿಗೆ ಓದುಬರಹಗಳು ಅಭ್ಯಸ್ತವಾಗಿ ಪುಸ್ತಕಗಳನ್ನೋದುವ ಶಕ್ತಿಯು ಬರುವವರೆಗೂ ಭೂಗೋಳಪಾಠವನ್ನು ಸಾಮಾನ್ಯವಾಗಿ ಪ್ರಾರಂಭಿಸುವುದಿಲ್ಲ, ಈ ಶಕ್ತಿಯು ಬಂದೊಡನೆಯೇ ಭೂವಿವರಣೆಯ ಪುಸ್ತಕವನ್ನು ಅವರಕೈಗೆ ಕೊಟ್ಟು ಅದರಲ್ಲಿರುವ ಅಂಶಗಳನ್ನು ಬಾಯಿಪಾಠಮಾಡಿಸುವರು. ಈ ಪಾಠವನ್ನು ನಡೆಸುವ ಮಾರ್ಗವು ಇದಲ್ಲವೇ ಅಲ್ಲ. ಹೀಗೆ ನಡೆಸಿದರೆ ಭೂಗೋಳಪಾಠದಿಂದ ಮಕ್ಕಳಿಗೆ ಪ್ರಕೃತಿವಿಷಯಕವಾಗಿ ಉಂಟಾಗಬೇಕಾದ ಸಾಕ್ಷಾತ್ತಾದ ಜ್ಞಾನಕ್ಕೆ ಅವಕಾಶವೇ ಇಲ್ಲ. ಆದುದರಿಂದ ಭೂಗೋಳಪಾಠಕ್ಕೆ ಸಂಬಂಧಪಟ್ಟಂತೆ ಮಕ್ಕಳು ಪುಸ್ತಕಗಳನ್ನೋದುವುದು ಈ ಪಾಠದಲ್ಲಿ ಕೊನೆಯ ಸೋಪಾನವಾಗಿರಬೇಕು. ಈ ಪುಸ್ತಕಗಳನ್ನು ಓದುವ ಉದ್ದೇಶವು ಮಕ್ಕಳು ಪ್ರಕೃತಿವಿಷಯಕವಾಗಿ ಸಾಕ್ಷಾತ್ತಾಗಿ ಸಂಪಾದಿಸಿದ ಜ್ಞಾನವನ್ನು ಅಭಿವೃದ್ಧಿಪಡಿಸುವುದಾಗಿ ಇರಬೇಕು. ಈ ಉದ್ದೇಶಕ್ಕನುಗುಣವಾಗಿ ಭೂಗೋಳಪಾಠವನ್ನು ನಡೆಸುವಾಗ ಈಗ ವಾಡಿಕೆಯಾಗಿರುವಂತೆ ಮಕ್ಕಳಿಗೆ ಏಳೆಂಟು ವಯಸ್ಸಾಗುವವರೆಗೆ ನಾವು ಕಾಯಬೇಕಾದುದಿಲ್ಲ. ಮೂರುನಾಲ್ಕು ವರ್ಷದ ಸಣ್ಣಮಕ್ಕಳಿಗೆ ಈ ಪಾಠವನ್ನು ಪ್ರಾರಂಭಿಸಬಹುದು.

ಮಕ್ಕಳನ್ನು ಹೊರಗೆ ಸಂಚಾರಕ್ಕೆ ಕರೆದುಕೊಂಡು ಹೋದಾಗ ಕೆರೆ, ಭಾವಿ, ಕೊಳ, ತೋಟ, ಹೊಲ, ಗದ್ದೆ, ಬೆಟ್ಟ, ಗುಡ್ಡ, ಮೊದಲಾದುವು ಅವರಕಣ್ಣಿಗೆ ಬೀಳುವುವಷ್ಟೆ. ಇವುಗಳನ್ನು ನೋಡುವುದರಿಂದ ಅವರ ಮನಸ್ಸಿಗುಂಟಾದ ಅಭಿಪ್ರಾಯವನ್ನು

ಪಾಠಶಾಲೆಯಲ್ಲಿ ಅವರು ನಾನಾವಿಧವಾದ ಆಟಗಳಲ್ಲೂ, ಕೈಕೆಲಸಗಳಲ್ಲಿ ತೋರ್ಪಡಿಸಬಹುದು. ಹೀಗೆ ತಮ್ಮ ಅಭಿಪ್ರಾಯಗಳನ್ನು ತೋರ್ಪಡಿಸಲು ಮರಳು, ಮಣ್ಣು ಇವೇ ಅತ್ಯನುಕೂಲವಾದ ಉಪಕರಣಗಳು. ಮೇಲೆಬರೆದಿರುವ ಕೆರೆ, ಬೆಟ್ಟ, ಮುಂತಾದುವುಗಳ ಅಭಿಪ್ರಾಯವನ್ನು ಮರಳು ಅಥವಾ ಮಣ್ಣಿನಿಂದ ಮಕ್ಕಳು ಬಹುಸುಲಭವಾಗಿ ತೋರ್ಪಡಿಸಬಹುದು. ಈ ಕೈಕೆಲಸಗಳನ್ನು ಮಾಡುವಾಗ ಇವರು ಅನೇಕ ಉಪಯುಕ್ತವಾದ ಅಂಶಗಳನ್ನು ತಿಳಿಯುತಿದ್ದರೂ ಈ ಕೆಲಸಗಳು ಇವರಿಗೆ ಆಟಗಳಂತೆಯೇ ಕಾಣುವುವು. ಮೊದಲು ಮೊದಲು ತಾವುನೋಡುವ ಅಂಶಗಳನ್ನು ಬಹುಸ್ಥೂಲವಾದ ರೀತಿಯಲ್ಲಿ ತೋರ್ಪಡಿಸುವರು. ಬರು ಬರುತ ಅವರು ಮಾಡುವ ಕೆಲಸವು ಸೂಕ್ಷ್ಮವಾಗುತಬಂದು ಅವರುರಚಿಸುವ ಆಕೃತಿಯು ಪ್ರಕೃತಿಯನ್ನು ವಿಶೇಷವಾಗಿ ಹೋಲುವುದು. ಹೀಗೆ ತಮ್ಮ ಸುತ್ತಲೂ ಇರುವ ಅಂಶಗಳ ಅಭಿಪ್ರಾಯವನ್ನು ಈ ಕೆಲಸಗಳಿಂದ ತೋರ್ಪಡಿಸುವುದು ಅಭ್ಯಸ್ತವಾದಮೇಲೆ ಕಲ್ಪನೆಯನ್ನು ಸ್ವಲ್ಪ ಮಟ್ಟಿಗೆ ಉಪಯೋಗಿಸಿ ಇದೇಕೆಲಸಗಳಿಂದ ದೂರದಲ್ಲಿರುವ ಅಂಶಗಳ ಅಭಿಪ್ರಾಯವೂ ಆಗುವಂತೆ ಮಾಡಬಹುದು. ನಿದರ್ಶನವಾಗಿ ಮರಳು ಅಥವಾ ಮಣ್ಣಿನ ಆಟದಿಂದ ಹತ್ತಿರದಲ್ಲಿರುವ ಗುಡ್ಡದ ಆಕೃತಿಯನ್ನು ಮಾಡಿಸಿದಮೇಲೆ ಈ ಆಟದ ಗುಡ್ಡದ ತುದಿಯಲ್ಲಿ ಹೊಗೆಮಾಡುವ ಒಂದು ಬೆರಣಿಯ ಚೂರನ್ನಿಡಿಸುವುದರಿಂದ ಅಗ್ನಿಪರ್ವತದ ಅಭಿಪ್ರಾಯವನ್ನು ಉಂಟುಮಾಡಬಹುದು. ಹೀಗೆಯೇ ಊಟಿಗಳು, ನದಿಮುಖಜಭೂಮಿ, ಮುಂತಾದಶಬ್ದಗಳಿಗೆ ತಕ್ಕ ಅಭಿಪ್ರಾಯಗಳು ಮಕ್ಕಳ ಮನಸ್ಸಿಗೆ ಬರುವಂತೆ ನಾನಾ ಆಟಗಳನ್ನು ಆಡಿಸಬಹುದು. ಈ ಕೆಲಸಗಳಜೊತೆಗೆ ಚಿತ್ರಬರೆವುದನ್ನೂ ಸಂಬಂಧಿಸುವುದರಿಂದ ಮಕ್ಕಳ ಮನಸ್ಸಿನ ಅಭಿಪ್ರಾಯಗಳು ಇನ್ನೂ ನಿಷ್ಕೃಷ್ಟವಾಗುತಬರುವುವು. ಹೀಗೆ ಕೈಕೆಲಸವನ್ನು ಮಾಡಿಸಿದಮೇಲೆ ಇದರಲ್ಲಿ ತಿಳಿದ ಅಭಿಪ್ರಾಯದೊಡನೆ ಹೊಂದುವ ಒಂದು ಕಥೆಯನ್ನು ಹೇಳುವುದರಿಂದ ಮಕ್ಕಳಿಗೆ ಈ ಆಟದಲ್ಲಿ ಇನ್ನೂ ಹೆಚ್ಚು ಆದರವು ಉಂಟಾಗುವುದು. ನಿದರ್ಶನವಾಗಿ ಅಗ್ನಿಪರ್ವತದ ಆಟವನ್ನು ಆಡಿಸಿದಮೇಲೆ ವಿಸೂವಿಯಸ್ ಪರ್ವತದ ಕಥೆಯನ್ನು ಹೇಳಿ ಆ ಪರ್ವತದಿಂದ, ಬೂದಿ, ಕೆಂಡ, ಇವು ಮೇಲಕ್ಕೆ ಹಾರಿದುದರಿಂದಲೂ ಅದರ ಬಾಯಿಯಿಂದ ಕರಗಿರುವ ಕಲ್ಲು ಉಕ್ಕಿ ಸುತ್ತಮುತ್ತಲಿದ್ದ ಊರುಗಳಮೇಲೆ ಹರಿದುದರಿಂದಲೂ, ಜನರಿಗುಂಟಾದ ನಷ್ಟವನ್ನು ವರ್ಣಿಸಬಹುದು. ಈ ಕಷ್ಟಕಾಲದಲ್ಲಿ ಆ ಜನರಿಗೆ ಇಟಲೀದೇಶದ ಜನರೂ ಇತರರಾಜ್ಯಗಳ ಜನರೂ

ಮಾಡಿದ ಉಪಕಾರವನ್ನು ತಿಳಿಸಿ ಹೀಗೆ ಕಷ್ಟಕಾಲದಲ್ಲಿ ಮನುಷ್ಯರು ಪರಸ್ಪರ ಸಹಾಯ ಮಾಡಬೇಕೆಂಬುದನ್ನು ತಿಳಿಸಬಹುದು.

ಇನ್ನು ಸ್ವಲ್ಪ ವಯಸ್ಸಾದಮೇಲೆ ಮಕ್ಕಳಿಗೆ ಭೂಗೋಳಪಾಠವನ್ನು ಬೋಧಿಸಲು ಭೂಪಟದ ಸಹಾಯವು ವಿಶೇಷ ಬೇಕಾಗುವುದು. ಈ ಭೂಪಟದ ಅಭಿಪ್ರಾಯವು ಮಕ್ಕಳಿಗೆ ಸರಿಯಾಗಿ ತಿಳಿಯುವುದಕ್ಕೆ ಮೊದಲು ಅದನ್ನು ಅವರ ಮುಂದಿಟ್ಟರೆ ಅದರಿಂದ ವಿಶೇಷ ಪ್ರಯೋಜನವಾಗಲಾರದು. ಆದುದರಿಂದ ಭೂಪಟದ ಅಭಿಪ್ರಾಯವು ಮಕ್ಕಳಿಗಾಗುವಂತೆ ಪಾಠವನ್ನು ಕ್ರಮವಾಗಿ ಬೆಳಸುತ ಹೋಗಬೇಕು. ಮೊದಲು ಮಕ್ಕಳು ಕುಳಿತಿರುವ ಕೊಠಡಿಯ ಆಕೃತಿಯನ್ನು ಅವರು ಮಣ್ಣಿನಲ್ಲಿ ಸೂಲವಾಗಿ ಮಾಡಬೇಕು. ಆಮೇಲೆ ಇದೇ ಕೊಠಡಿಯ ಚಿತ್ರವನ್ನು ಮರಳಿನ ಮೇಲೆ ಕಡ್ಡಿಯಿಂದ ಬರಯಬೇಕು. ಆಮೇಲೆ ಸುಣ್ಣದಿಂದ ಬೋರ್ಡಿನಮೇಲೆ ಈ ಚಿತ್ರವನ್ನು ಬರೆಯಬೇಕು. ಇದುವರೆಗೂ ಅವರು ಕೊಠಡಿಯ ನಕ್ಷೆಯನ್ನು ಒಂದು ಗೊತ್ತಾದ ಪ್ರಮಾಣಕ್ಕೆ ಅನುಸಾರವಾಗಿ ಬರೆದಿಲ್ಲ. ಈಗ ಈ ವಿಷಯಕ್ಕೂ ಗಮನವನ್ನು ಕೊಡಬೇಕು—ಕೆಲವು ಮಕ್ಕಳಿಂದ ಕೊಠಡಿಯ ಉದ್ದ ಅಗಲಗಳನ್ನು ಅಳತೆ ಮಾಡಿಸಿ ಈ ಅಳತೆಯನ್ನು ಹಲಗೆಯಮೇಲೆ ಬರೆಯಬೇಕು. ಆಮೇಲೆ ಅವರ ಸ್ಲೇಟನ್ನು ಅಳತೆಮಾಡಿಸಿ ಆ ಸ್ಲೇಟು ಬಲು ಚಿಕ್ಕದಾಗಿರುವುದರಿಂದ ಕೊಠಡಿಯ ಚಿತ್ರವನ್ನು ಅದರ ನಿಜವಾದ ಅಳತೆಗೆ ತಕ್ಕಂತೆ ಬರೆಯುವುದು ಸಾಧ್ಯವಲ್ಲವೆಂಬುದನ್ನು ವ್ಯಕ್ತಪಡಿಸಬೇಕು ಇದರಿಂದ ಆ ಚಿತ್ರವನ್ನು ಸ್ಲೇಟಿನಮೇಲೆ ಬರೆಯಬೇಕಾದರೆ ಚಿಕ್ಕದಾಗಿ ಬರೆಯಬೇಕೆಂಬುದು ಸ್ಪಷ್ಟವಾಗುವುದು. ಆದರೆ ಸ್ಲೇಟಿನಮೇಲೆ ಬರೆದ ಚಿತ್ರದ ಸಹಾಯದಿಂದ ಕೊಠಡಿಯ ನಿಜವಾದ ಉದ್ದ ಅಗಲಗಳು ನಮಗೆ ಗೊತ್ತಾಗಬೇಕು, ಇದಕ್ಕೇನುಮಾಡುವುದು? ಎಂದುಕೇಳಿ ಕೊಠಡಿಯ ಉದ್ದವು ಹತ್ತುಅಡಿಯಿದ್ದರೆ ಇಲ್ಲಿ ಹತ್ತು ಅಂಗುಲವನ್ನು ಇಟ್ಟುಕೊಳ್ಳಬಹುದು, ಹೀಗೆ ಒಂದುಗೊತ್ತಾದ ಪ್ರಮಾಣಕ್ಕೆ ಚಿತ್ರಬರೆಯುವುದರಿಂದ ಚಿತ್ರವನ್ನು, ನೋಡಿದೊಡನೆಯೆ ವಸ್ತುವಿನ ನಿಜವಾದವಿಸ್ತೀರ್ಣವನ್ನು ಊಹಿಸಿಕೊಳ್ಳಬಹುದು ಎಂಬುದನ್ನು ತಿಳಿಸಬೇಕು. ಅಮೇಲೆ ಮಕ್ಕಳನ್ನು ಹೊರಗೆ ಕರೆದುಕೊಂಡುಹೋಗಿ ಅವರು ತೋಟದಲ್ಲಿನೋಡುವ ತೆಂಗಿನಮರ, ಮಾವಿನಮರ ಮೊದಲಾದ ಮರಗಳ ಚಿತ್ರವನ್ನು ಬರೆಸಿ ಚಿತ್ರದ ಅಳತೆಗಳಿಗೂ ವಸ್ತುವಿನ ಅಳತೆಗಳಿಗೂ ಇರತಕ್ಕ ಪ್ರಮಾಣವನ್ನು ಸ್ಪಷ್ಟಪಡಿಸಬೇಕು. ಆಮೇಲೆ ಮಕ್ಕಳಿಂದ ಒಟ್ಟು ಪಾಠಶಾಲೆಯ

ನೆಲದ ನಕ್ಷೆಯನ್ನು ಬರೆಸಿ ವಸ್ತುವು ದೊಡ್ಡದಾಗುತಹೋದಹಾಗೆಲ್ಲ ಚಿತ್ರವು ಸಣ್ಣದಾಗುತಬಡುವುದೆಂಬುದನ್ನು ತೋರಿಸಿ ದೊಡ್ಡಭಾಗಗಳ ಚಿತ್ರವನ್ನು ಬರೆಯಬೇಕಾದರೆ ಸಣ್ಣಪ್ರಮಾಣವನ್ನು ಇಟ್ಟುಕೊಳ್ಳಬೇಕೆಂಬುದನ್ನು ತಿಳಿಸಬೇಕು. ಆಮೇಲೆ ಮಕ್ಕಳನ್ನು ಹೊರಗೆ ಕರೆದುಕೊಂಡುಹೋಗಿ ಪಾಠಶಾಲೆಯ ಸಮೀಪದಲ್ಲಿರುವ ಸ್ವಲ್ಪ ಪ್ರದೇಶವನ್ನು ಅವರು ಎಚ್ಚರಿಕೆಯಿಂದ ನೋಡುವಂತೆ ಮಾಡಬೇಕು. ನೋಡಿದಮೇಲೆ ಅವರು ಅದರ ಚಿತ್ರವನ್ನು ಬರೆಯಬೇಕು. ಮೊದಲು ಪ್ರಮಾಣದ ನಿರ್ಬಂಧವಿಲ್ಲದೆ ಬರೆಯಬಹುದು. ಆಮೇಲೆ ಆ ಪ್ರದೇಶದ ಉದ್ದ ಅಗಲಗಳನ್ನು ಅವರಿಂದ ಅಳೆಸಿ ಆ ಅಳತೆಯನ್ನು ಬರೆದುಕೊಳ್ಳುವಂತೆ ಮಾಡಿ ಈ ಭಾಗದ ಚಿತ್ರವನ್ನು ತಮ್ಮ ಸ್ಲೇಟಿನಲ್ಲಿ ಬರೆಯುವುದಕ್ಕೆ ಅನುಕೂಲವಾದ ಪ್ರಮಾಣವು ಯಾವುದೆಂಬುದನ್ನು ಅವರಿಂದಲೇ ಹೇಳಿಸಿ ಆ ಪ್ರಮಾಣಕ್ಕನುಸಾರವಾಗಿ ಚಿತ್ರ ಬರೆಸಬೇಕು. ಆ ಚಿತ್ರದಲ್ಲಿ ಅವರು ತಾವುನೋಡಿರುವ ಪ್ರದೇಶದಲ್ಲಿರುವ ಮರ, ಮನೆ ಮುಂತಾದ ಅಂಶಗಳನ್ನು ಗುರ್ತು ಮಾಡಬೇಕು. ಆ ಪ್ರದೇಶದಲ್ಲಿ ಎಲ್ಲೆಲ್ಲಿ ಮನೆಗಳಿವೆ; ಎಲ್ಲೆಲ್ಲಿ ಯಾವ ಯಾವ ಮರಗಳಿವೆ, ಎಲ್ಲಿ ಚರಂಡಿಗಳಿವೆ, ಎಲ್ಲಿ ಹಳ್ಳ ದಿಣ್ಣೆಗಳಿವೆ ಇವೇ ಮೊದಲಾದ ಅಂಶಗಳನ್ನು ಅವರು ಚಿತ್ರದಲ್ಲಿ ಗುರ್ತಿಸಬೇಕು. ಈ ಚಿತ್ರವನ್ನು ಸ್ಕೂಲಿಗೆ ತೆಗೆದುಕೊಂಡುಬಂದು ಅದರ ಸಹಾಯದಿಂದ ತಾವು ನೋಡಿರುವ ಪ್ರದೇಶದ ಮಾದರಿಯನ್ನು ಮಣ್ಣಿನಲ್ಲಿ ಅಥವ ಮರಳಿನಲ್ಲಿ ರಚಿಸಬೇಕು. ಈ ಮಾದರಿಯನ್ನು ತಾವು ನೋಡಿರುವ ಪ್ರದೇಶದೊಡನೆ ಹೋಲಿಸಿ ಅದರಲ್ಲಿ ತಪ್ಪುಗಳಿದ್ದರೆ ತಿದ್ದಿಕೊಳ್ಳಬೇಕು; ಆಮೇಲೆ ಆ ಪ್ರದೇಶದ ಸುತ್ತಮುತ್ತಲೂ ಏನೇನಿವೆ, ಎಂಬ ವಿಷಯದಲ್ಲಿ ಪ್ರಶ್ನೆಗಳನ್ನು ಕೇಳಿ ಅದರ ಮೇರೆಗಳನ್ನು ತಿಳಿಸಬೇಕು. ಈ ಮೇರೆಗಳನ್ನು ಮಕ್ಕಳು ತಮ್ಮ ಚಿತ್ರದಲ್ಲೂ ಬರೆಯಬೇಕು. ಆಮೇಲೆ ಆ ಚಿತ್ರವನ್ನು ಪಾಠಶಾಲೆಯ ಉತ್ತರದ ಗೋಡೆಗೆ ನೇತುಹಾಕಿ ತಾವು ಗುರ್ತುಮಾಡಿದ್ದ ಮೇರೆಗಳು ಯಾವ ಯಾವ ಕಡೆಯಲ್ಲಿ ಈಗ ಇವೆ ಎಂಬುದನ್ನು ಕೇಳಬೇಕು. ಹೀಗೆ ನಕ್ಷೆಯಲ್ಲಿ ನಾವು ಇಟ್ಟುಕೊಂಡಿರುವ ದಿಕ್ಕುಗಳ ಸಂಕೇತಕ್ಕು ಪ್ರಕೃತಿಯಲ್ಲಿ ನಾವು ಇಟ್ಟುಕೊಂಡಿರುವ ದಿಕ್ಕುಗಳ ಸಂಕೇತಕ್ಕು ಸಂಬಂಧವನ್ನು ತೋರ್ಪಡಿಸಬೇಕು. ಇಷ್ಟಾದಮೇಲೆ ಅಚ್ಚುಹಾಕಿರುವ ಆ ಭಾಗದ ನಕ್ಷೆಯಿದ್ದರೆ ಅದನ್ನು ಮಕ್ಕಳ ಕೈಗೆಕೊಟ್ಟು ಆ ನಕ್ಷೆಯನ್ನು ತಮ್ಮ ಚಿತ್ರದೊಡನೆ ಹೋಲಿಸುವಂತೆ ಮಾಡಬೇಕು. ತಮ್ಮ ಚಿತ್ರದಲ್ಲಿ ಮನೆ, ಮರ, ಇವುಗಳ ಚಿತ್ರಗಳು ಬರೆದಿರುವುದನ್ನೂ ನಕ್ಷೆಯಲ್ಲಿ ಇವುಗಳಿಗೆ ಬದಲಾಗಿ ಸಂಕೇ

ತಗಳು ಉಪಯೋಗಿಸಲ್ಪಟ್ಟಿರುವುದನ್ನೂ ತಿಳಿಸಬೇಕು. ಆಮೇಲೆ ಪ್ರಪಂಚದವಿಸ್ತೀರ್ಣದ ವಿಷಯದಲ್ಲಿ ಒಂದು ಕಥೆಯನ್ನು ಹೇಳಿ ಇಷ್ಟು ದೊಡ್ಡ ವಿಸ್ತೀರ್ಣವುಳ್ಳ ಪ್ರದೇಶವನ್ನು ತಾವೇ ಅಳೆದುಅದರ ನಕ್ಷೆಯನ್ನು ತಯಾರುಮಾಡಿಕೊಳ್ಳುವುದು ಅಸಾಧ್ಯವೆಂಬುದನ್ನು ತೋರಿಸಿ ಇತರರು ಮಾಡಿರುವ ನಕ್ಷೆಗಳನ್ನು ಉಪಯೋಗಿಸುವುದರ ಆವಶ್ಯಕತೆಯನ್ನು ತಿಳಿಸಬೇಕು. ಈನಕ್ಷೆಗಳಿಗೆ ಭೂಪಟಗಳೆಂಬ ಹೆಸರು ಎಂಬುದನ್ನು ಹೇಳಿಕೊಡಬೇಕು. ಆಮೇಲೆ ಸ್ವದೇಶದ ಭೂಪಟವನ್ನು ಬಾಲಕರಮುಂದಿಟ್ಟು ಅದರಲ್ಲಿರುವ ಪ್ರಮಾಣವನ್ನು ಓದಿಸಿ ದೇಶದ ವಿಸ್ತೀರ್ಣ ಮುಂತಾದ ಅಂಶಗಳನ್ನು ಬಾಲಕರಿಂದಲೇ ಹೇಳಿಸಬಹುದು. ಆಮೇಲೆ ಆ ಭೂಪಟದಲ್ಲಿ ಇರುವ ಸಂಕೇತಗಳ ಅರ್ಥವನ್ನು ತಿಳಿಸಿ ದೇಶದಲ್ಲಿ ಪರ್ವತಗಳು ಎಲ್ಲಿವೆ, ಆ ಪರ್ವತಗಳಲ್ಲಿ ಯಾವಯಾವ ನದಿಗಳು ಹುಟ್ಟುತ್ತವೆ. ದೇಶದ ವಾಯುಗುಣವೇನು, ದೇಶದಲ್ಲಿ ಯಾವಯಾವ ಸಸ್ಯಗಳುಬೆಳೆಯುತ್ತವೆ, ಯಾವಯಾವ ಪ್ರಾಣಿಗಳಿವೆ, ಯಾವಯಾವ ಖನಿಜಗಳು ಸಿಕ್ಕುತ್ತವೆ, ಜನರ ಉದ್ಯೋಗವೇನು ಮುಂತಾದ ಅಂಶಗಳನ್ನೆಲ್ಲಾ ಹೇಳಿಕೊಡಬಹುದು ಕೊನೆಗೆ ಜನರು ವಾಸಕ್ಕಾಗಿ ಮಾಡಿಕೊಂಡಿರುವ ಕೆಲವು ಮುಖ್ಯಪಟ್ಟಣಗಳು, ಈ ಜನರ ನಡತೆ, ಮತ, ದೇಶದ ರಾಜ್ಯಭಾರಕ್ರಮ, ಮೊದಲಾದ ಅಂಶಗಳನ್ನು ತಿಳಿಸಬಹುದು.

ಈ ಕಾಲದಲ್ಲಿ ಆಗಾಗ್ಗೆ ಪಾಠದಲ್ಲಿ ಬರುವ ವಿಶೇಷಾಂಶಗಳವಿಷಯದಲ್ಲಿ ಸಲ್ಲಾಪೋಪದೇಶಗಳನ್ನು ನಡೆಸಬಹುದು. ನಿದರ್ಶನವಾಗಿ ಊಟೆಗಳು, ತೀರಪ್ರದೇಶ, ಮರುಭೂಮಿ ಈ ವಿಧವಾದ ವಿಷಯಗಳನ್ನು ಒಂದೊಂದು ಸಲ್ಲಾಪಕ್ಕೆ ಆಧಾರವಾಗಿ ಇಟ್ಟುಕೊಳ್ಳಬಹುದು. ಈ ಸಲ್ಲಾಪಕಾಲದಲ್ಲಿ ವಸ್ತುಗಳು ಅಥವಾ ಅವುಗಳ ಮಾದರಿಗಳು, ಅಥವಾ ಚಿತ್ರಗಳು ಇವೇ ಮೊದಲಾದ ಉಪಕರಣಗಳನ್ನು ಉಪಯೋಗಿಸಬೇಕಾಗಬಹುದು. ಮಕ್ಕಳು ದೇಶದ ವಿಷಯವನ್ನು ಕಲಿಯುವಾಗ ತಮ್ಮ ಅಭಿಪ್ರಾಯಗಳನ್ನು ತೋರ್ಪಡಿಸಲು, ಕೈಕೆಲಸಗಳನ್ನು ಮಾಡುವುದು ಆವಶ್ಯಕವು. ನಿದರ್ಶನವಾಗಿ ದೇಶದ ಆಕಾರ, ಅಲ್ಲಿರುವ ನದಿಗಳು, ಬೆಟ್ಟಗಳು, ಅಲ್ಲಿರುವ ಸಸ್ಯಗಳು, ಪ್ರಾಣಿಗಳು ಇವುಗಳವಿಷಯದಲ್ಲಿ ತಮಗಿರುವ ಅಭಿಪ್ರಾಯವನ್ನು ಮಕ್ಕಳು ಚಿತ್ರರೂಪದಲ್ಲಿ ತೋರ್ಪಡಿಸಬಹುದು. ದೇಶದ ಎತ್ತರ, ತಗ್ಗು, ಇಳಿಜಾರು ಮುಂತಾದವುಗಳ ವಿಷಯದಲ್ಲಿ ತಮ್ಮ ತಿಳಿವಳಿಕೆಯನ್ನು ಇವರು ಮಣ್ಣು ಮರಳು ಇವುಗಳಿಂದ ವ್ಯಕ್ತಪಡಿಸಬಹುದು. ಹೀಗೆ ಭೂವಿವರಣೆಯ ಪಾಠದೊಡನೆ ಕೈಕೆಲಸಗಳನ್ನು ಸಂಬಂಧಿಸಿಕೊಳ್ಳುವುದು ಅತ್ಯಾವಶ್ಯಕವು.

ಸ್ವದೇಶದ ವಿಷಯವನ್ನು ಮಕ್ಕಳಿಗೆ ತಿಳಿಸಿದಮೇಲೆ ಒಟ್ಟು ಭೂಗೋಳದ ವಿಷಯದಲ್ಲಿ ಸಾಮಾನ್ಯವಾದ ಜ್ಞಾನವನ್ನುಂಟುಮಾಡುವುದು ಆವಶ್ಯಕವಾಗುವುದು. ಇದಕ್ಕಾಗಿ ಒಂದು ಗೋಳವನ್ನು ಉಪಯೋಗಿಸುವುದು ಅನುಕೂಲವು. ಈ ಗೋಳದ ಸಹಾಯದಿಂದ ಭೂಮಿಯ ಆಕೃತಿ, ಅಹೋರಾತ್ರಿಗಳಿಗೆ ಕಾರಣಗಳು, ಗ್ರಹಣಗಳು, ವಲಯಗಳು, ಇವೇ ಮುಂತಾದ ಅಂಶಗಳನ್ನು ಸುಲಭವಾಗಿ ತಿಳಿಸಬಹುದು. ಈ ಗೋಳದ ಚಿತ್ರವನ್ನು ಬರೆಯುವಾಗ ಮಂದವನ್ನು ತೋರಿಸುವುದಕ್ಕಾಗುವುದಿಲ್ಲವೆಂಬುದನ್ನು ತಿಳಿಸಿ ಮಕ್ಕಳು ವಾಡಿಕೆಯಾಗಿ ಉಪಯೋಗಿಸುವ ಪೂರ್ವಾರ್ಧ ಪಶ್ಚಿಮಾರ್ಧ ಗೋಳಗಳ ಆಕೃತಿಯನ್ನು ತೋರಿಸುವ ಭೂಪಟದ ಅರ್ಥವನ್ನು ತಿಳಿಸಬಹುದು.

ಒಟ್ಟು ಪ್ರಪಂಚದ ವಿಷಯವು ಮಕ್ಕಳಿಗೆ ಸಾಮಾನ್ಯವಾಗಿ ತಿಳಿದಮೇಲೆ ಅದರಲ್ಲಿರುವ ನಾನಾದೇಶಗಳ ವಿಷಯವನ್ನು ಸ್ವಲ್ಪ ವಿಶೇಷವಾಗಿ ತಿಳಿಸಬೇಕಾಗುವುದು. ಈ ಕಾಲದಲ್ಲಿ ಮಕ್ಕಳು ಭೂವಿವರಣೆಯ ಪುಸ್ತಕಗಳನ್ನು ಉಪಯೋಗಿಸಬೇಕು. ಆದರೆ ಭೂವಿವರಣೆಯ ಪುಸ್ತಕವೊಂದನ್ನು ಮಾತ್ರ ಬೋಧಿಸುವುದರಿಂದ ಪಾಠವು ಮುಗಿಯಿತೆಂದು ಉಪಾಧ್ಯಾಯರು ಭಾವಿಸಬಾರದು. ಈ ಪುಸ್ತಕದಲ್ಲಿರುವ ವಿಶೇಷಾಂಶಗಳನ್ನು ಸರಿಯಾಗಿ ಬೋಧಿಸಲು ಆಗಾಗ್ಗೆ ಸಲ್ಲಾಪೋದ್ದೇಶಗಳನ್ನು ನಡೆಸಬೇಕಾಗುವುದು. ಭೂವಿವರಣೆಯ ಪುಸ್ತಕದ ಜೊತೆಗೆ ಮಕ್ಕಳು ಈ ಪಾಠಕ್ಕೆ ಸಂಬಂಧಪಟ್ಟ ದೇಶಸಂಚಾರ, ಮೊದಲಾದ ಅಂಶಗಳಮೇಲೆ ಬರೆದಿರುವ ಪುಸ್ತಕಗಳನ್ನು ಓದುವಂತೆ ಪ್ರೋತ್ಸಾಹಿಸಬೇಕು. ಹೀಗೆ ಓದುವುದರಿಂದ ಪ್ರಪಂಚದ ವಿಷಯದಲ್ಲಿ ಅವರಿಗೆ ಸರಿಯಾದ ತಿಳಿವಳಿಕೆಯುಂಟಾಗಲು ಅವಕಾಶವಾಗುವುದು.

ಮಕ್ಕಳ ವಿದ್ಯಾಭ್ಯಾಸದಲ್ಲಿ ಎಲ್ಲಾ ಭಾಗಗಳಿಗೂ ಪರಸ್ಪರ ಸಂಬಂಧವಿರಬೇಬೇಕೆಂದು ಹಿಂದೆ ತಿಳಿಸಿರುವುದಷ್ಟೆ, ಆದುದರಿಂದ ಭೂವಿವರಣೆಯ ಪಾಠವನ್ನು ಪಾಠಶಾಲೆಯಲ್ಲಿ ನಡೆವ ಕೈಕೆಲಸಗಳೊಡನೆಯೂ, ಚರಿತ್ರೆ, ಕ್ಷೇತ್ರಗಣಿತ ರೇಖಾ, ಗಣಿತ, ಪ್ರಕೃತಿವಿಮರ್ಶೆ ಮುಂತಾದ ಇತರ ಪಾಠಗಳೊಡನೆಯೂ, ಸಂಬಂಧಿಸುವುದು ಅತ್ಯಾವಶ್ಯಕವು. ಹೀಗೆ ಪರಸ್ಪರ ಸಂಬಂಧವಿರುವಂತೆ ಉಂಟುಮಾಡಿದ ಜ್ಞಾನವೇ ಮಕ್ಕಳಿಗೆ ವಿಶೇಷ ಪ್ರಯೋಜನಕರವಾದುದು.

ಮಗುವಿಗೂ ಇತರ ಮನುಷ್ಯರಿಗೂ ಇರುವ ಸಂಬಂಧವನ್ನೂ, ಮಗುವಿಗೂ, ದೇವರಿಗೂ ಇರುವ ಸಂಬಂಧವನ್ನೂ ತಿಳಿಸಲು ಚರಿತ್ರೆಯು ವಿಶೇಷ ಅನುಕೂಲ

ವಾದ ಪಾಠವು ಇದನ್ನು ಬೋಧಿಸುವುದಕ್ಕೂ ನಾವು ಎಂಟು ಒಂಭತ್ತು ವಯಸ್ಸಿನ ವರೆಗೆ ಕಾಯಬೇಕಾದುದಿಲ್ಲ. ಸಣ್ಣ ಮಕ್ಕಳ ವಿದ್ಯಾಭ್ಯಾಸದಲ್ಲಿ ಕಥೆ ಹೇಳುವುದು, ಒಂದು ಮುಖ್ಯಭಾಗವಾಗಿರುವುದಷ್ಟೆ. ಈ ಕಥೆಗಳೇ ಚರಿತ್ರೆಯ ಪಾಠಕ್ಕೂ ಆದಿಯಾಗಿರುವುವು. ಮಕ್ಕಳಿಗೆ ಸ್ವಲ್ಪ ವಯಸ್ಸಾಗಿ ಮೋಹಿನಿಯ ಕಥೆಗಳಲ್ಲೂ ಕಾಗೆ, ನರಿ, ಮುಂತಾದುವುಗಳ ಕಥೆಗಳಲ್ಲೂ, ಆದರವು ಕಡಮೆಯಾದೊಡನೆಯೇ ಪ್ರಪಂಚದಲ್ಲಿ ವಾಸ್ತವವಾಗಿ ನಡೆದಿರುವ ಅಥವಾ ನಡೆಯಬಹುದಾದ ಕಥೆಗಳನ್ನು ಹೇಳಬೇಕಾಗುವುದಷ್ಟೆ. ಚರಿತ್ರೆಯ ಕಥೆಗಳು ಇಂತಹ ವಾಸ್ತವವಾದ ಕಥೆಗಳೇ ಆಗಿರುವುವು. ಚರಿತ್ರೆಯಲ್ಲಿ ಬರುವ ಪ್ರಸಿದ್ಧ ಪುರುಷರ ವಿಷಯಗಳನ್ನು ಮಕ್ಕಳಿಗೆ ಆದರ ಹುಟ್ಟುವ ಕಥೆಗಳ ರೂಪದಲ್ಲಿ ಸುಲಭವಾಗಿ ಬೋಧಿಸಬಹುದು. ಈ ಕಥೆಗಳಿಗೆ ತಕ್ಕ ಚಿತ್ರಗಳನ್ನು ಬರೆಸುವುದರಿಂದ ಪಾಠದಲ್ಲಿ ಆದರವು ಹೆಚ್ಚುವುದಲ್ಲದೆ ಪಾಠದಿಂದ ತಿಳಿದ ಜ್ಞಾನವು ನಿಷ್ಕೃಷ್ಟವಾಗುವುದು. ಕಥೆಯಲ್ಲಿ ಬಂದಿರುವ ಕಾರ್ಯಕ್ಕೆ ತಕ್ಕ ಆಟಗಳನ್ನು ಕಲ್ಪಿಸುವುದರಿಂದ ಪಾಠದಲ್ಲಿ ಆದರವು ಇನ್ನೂ ಹೆಚ್ಚುವುದು. ಮತ್ತು ವಿಷಯವು ಬಲುಚೆನ್ನಾಗಿ ಮುಂದಟ್ಟಾಗುವುದು. ನಿದರ್ಶನವಾಗಿ ಅರ್ಕಾಟಿನ ಮುತ್ತಿಗೆಯ ವಿಷಯವಾಗಿ ಕಥೆ ಹೇಳಿದಮೇಲೆ ಕೆಲವರು ಕೋಟೆಯಾಗಿ ಒಂದು ವೃತ್ತದ ಆಕೃತಿಯಲ್ಲಿ ನಿಂತುಕೊಳ್ಳುವುದು ಇನ್ನು ಕೆಲವರು ಒಳಗೆ ನಿಂತು ಕೋಟೆಯನ್ನು ಕಾಪಾಡುವಂತೆ ನಟಿಸುವುದು; ಇತರರು ಹೊರಗಿನಿಂದ ಕೋಟೆಯನ್ನು ಮುತ್ತುವಂತೆ ನಟಿಸುವುದು, ಕೊನೆಗೆ ಹೊರಗಿನವರು ಕೋಟೆಯನ್ನು ಗೆಲ್ಲುವುದಕ್ಕಾಗದೆ ಸೋತುಹೋಗುವುದು; ಹೀಗೆ ಆಡುವುದರಿಂದ ಅರ್ಕಾಟಿನ ಮುತ್ತಿಗೆಯ ವಿಷಯವು ಬಲುಚೆನ್ನಾಗಿ ಮುಂದಟ್ಟಾಗುವುದು. ಮತ್ತು ಮಕ್ಕಳಿಗೆ ಪಾಠವು ಆಟದ ರೂಪದಲ್ಲಿ ನಡೆವುದರಿಂದ ಆದರಲ್ಲಿ ವಿಶೇಷ ಆದರವು ಇರುವುದು. ಕಥೆಗಳಲ್ಲಿ ಬರುವ ಊರುಗಳು, ಕೋಟೆಗಳು, ಆಯುಧಗಳು, ನಾಣ್ಯಗಳು, ಜನರು, ರಾಜರು, ಈ ಅಂಶಗಳಿಗೆ ತಕ್ಕ ಮಾದರಿಗಳನ್ನು ಅಥವಾ ಚಿತ್ರಗಳನ್ನು ಉಪಾಧ್ಯಾಯ ಆವಶ್ಯಕವಾಗಿ ಉಪಯೋಗಿಸಬೇಕು. ಇಂತಹ ಉಪಕರಣಗಳು ಪಾಠಕ್ಕೆ ಜೀವವನ್ನು ಕೊಡುವುವು.

ಪುಸ್ತಕಗಳನ್ನೋದುವ ವಯಸ್ಸು ಮಕ್ಕಳಿಗೆ ಬಂದಮೇಲೆ ಅವರಿಂದ ನಾವು ಚರಿತ್ರೆಯ ಪುಸ್ತಕಗಳನ್ನು ಓದಿಸಬಹುದು. ಈ ಕಾಲದಲ್ಲೂ ವಿಶೇಷಾಂಶಗಳನ್ನು ಬೋಧಿಸಲು ಅನುಕೂಲವಾದ ಸಲ್ಲಾಪೋಪದೇಶಗಳನ್ನು ಆಗಾಗ್ಗೆ ಇಟ್ಟುಕೊ

ಳ್ಳಲೇಬೇಕು. ಈಗಲೂ ಈ ಪಾಠದೊಡನೆ ಚಿತ್ರ ಬರೆವುದು, ಮೊದಲಾದ ಕೈಕೆಲಸಗಳನ್ನು ಸಂಬಂಧಿಸಬೇಕು. ಚರಿತ್ರೆಯಲ್ಲಿ ಬರುವ ಮಹಾತ್ಮರ ನಡತೆಯನ್ನೂ ಕೆಟ್ಟವರ ನಡತೆಯನ್ನೂ ಈ ನಡತೆಗಳಿಂದ ಅವರಿಗೆ ಆದ ಫಲಗಳನ್ನೂ, ಮಕ್ಕಳು ತಿಳಿಯುವುದರಿಂದ ಇವರಿಗೆ ಧರ್ಮಾಧರ್ಮಗಳನ್ನು ವಿವೇಚಿಸುವ ಶಕ್ತಿಯು ಉಂಟಾಗುವುದು. ಮಕ್ಕಳು ಓದುವ ಮಹಾತ್ಮರ ಚರಿತ್ರೆಯ ಸಹಾಯದಿಂದ ಅವರಿಗೆ ದೇವರ ವಿಷಯಕವಾದ ಜ್ಞಾನವನ್ನು ಸುಲಭವಾಗಿ ಉಂಟುಮಾಡಬಹುದು. ಈ ಪಾಠಕ್ಕೆ ಸಂಬಂಧಪಟ್ಟಂತೆ ಒಬ್ಬೊಬ್ಬನ ಜೀವಮಾನದ ವಿಷಯದಲ್ಲಿ ಬರೆದಿರುವ ಕಥೆಗಳನ್ನು ಮಕ್ಕಳು, ಆಗಾಗ್ಗೆ ಓದುತಿರಬೇಕು. ಈ ಪಾಠವನ್ನು ಪಾಠಶಾಲೆಯಲ್ಲಿ ನಡೆಯುವ ಕೈಕೆಲಸಗಳು, ಭೂಗೋಳಪಾಠ, ಸಲ್ಲಾಪೋಪದೇಶ ಮುಂತಾದುವುಗಳೊಡನೆ ಸಂಬಂಧಿಸಿಕೊಂಡೇ ನಡೆಸಬೇಕು.

ಮತಬೋಧನೆ.

ಸ್ಕೂಲುಗಳಲ್ಲಿಯೂ, ಕಾಲೇಜುಗಳಲ್ಲಿಯೂ ಬಾಲಕರಿಗೆ ಮತವನ್ನು ಬೋಧಿಸಬೇಕೆಂದು ನಮ್ಮ ಸರಕಾರದವರು ಈಗ ವಿಧಿಸಿರುತ್ತಾರಷ್ಟೆ. ದೇಶದಲ್ಲೆಲ್ಲಾ ಒಟ್ಟಿನಲ್ಲಿ ಈ ಮತಬೋಧನೆಯ ಕೆಲಸವು ಹೇಗೆ ನಡೆಸಿದರೆ ಸುಪಥವಾಗಿಯೂ ಸಾಂಗವಾಗಿಯೂ ನೆರವೇರಬಹುದೋ ಎಂದು ಪ್ರಾಜ್ಞರಾದವರನೇಕರ ಚಿತ್ತದಲ್ಲಿ ಆಲೋಚನೆಗೆ ಹತ್ತಿರುವುದು. ಆದುದರಿಂದ ನಮ್ಮ ವಿದ್ಯಾಭ್ಯಾಸದ ಇಲಾಖೆಯಲ್ಲಿ ಸರಕಾರ ನೌಕರರಾಗಿ ವಿದ್ವಾಂಸರಾದ ಅನೇಕ ಲೌಕಿಕ ವೈದಿಕ ಮಹಾಶಯರು ಬೆಂಗಳೂರಲ್ಲಿ ಒಂದು ಸಭೆ ಸೇರಿ, ಮತಬೋಧನ ಕ್ರಮದ ವಿಷಯದಲ್ಲಿ ಬಹಳಮಟ್ಟಿಗೆ ಚರ್ಚಿಸಿ, ಕಡೆಗೆ ಒಂದು ವಿಧವಾಗಿ ನಿರ್ಣಯಿಸಿರುವರು. ಆ ನಿರ್ಣಯವು ಕ್ಷಿಪ್ರದಲ್ಲಿಯೇ ಎಲ್ಲರಿಗೂ ಗೋಚರವಾಗಿ, ಸರ್ವತ್ರ ಆಚರಣೆಗೆ ತರುವುದಕ್ಕಾಗಿ ಸರಕಾರದಿಂದಲೇ ಪ್ರಕಟಪಡಿಸಲ್ಪಡುವುದು.

ಆದರೆ ‘ ಮತಬೋಧನೆ ’ ಎಂದರೇನು ? ಎಂಬುದನ್ನು ಇಲ್ಲಿ ನಾವು ಸ್ವಲ್ಪ ವಿಚಾರಮಾಡುತ್ತೇವೆ. ಮತ ಶಬ್ದವು ತಿಳಿ ಎಂಬರ್ಥವುಳ್ಳ ಮನ್ ಧಾತುವಿನ ಮೇಲೆ ಕ್ತ ಪ್ರತ್ಯಯ ಸೇರಿ ನಿಷ್ಪನ್ನವಾಗಿದೆ. ತಿಳಿಯಲ್ಪಟ್ಟದ್ದು ಎಂದು ಅದರ

ಅರ್ಥವು. ಆದರೆ ತಿಳಿಯಲ್ಪಟ್ಟದ್ದು ಪ್ರಪಂಚವೆಲ್ಲಾ ಆಗಬಹುದು. ಅದು ಮತವೆ? ಅಲ್ಲ. ಕರ್ಮಾರ್ಥದಲ್ಲಿ ತ ಪ್ರತ್ಯಯವನ್ನು ಮಾಡಿದರೆ ತಿಳಿಯಲ್ಪಟ್ಟದ್ದು ಎಂದರ್ಥವಾಗುವುದು. ಅದನ್ನು ಭಾವಾರ್ಥದಲ್ಲಿ ಮಾಡುವ ಪಕ್ಷಕ್ಕೆ ಮತ ಶಬ್ದದಿಂದ ತಿಳಿವಳಿಕೆ ಎಂದರ್ಥವಾಗುವುದು. ಈ ಪಕ್ಷದಲ್ಲಿಯೂ ಪ್ರಪಂಚಜ್ಞಾನವೆಲ್ಲವೂ ಇಲ್ಲಿ ನಮಗೆ ಬೇಕಾಗಿರುವ ಮತವೆನಿಸಲಾರದು. ನದಿ, ಬೆಟ್ಟ, ಪ್ರಾಣಿಗಳು, ಮನುಷ್ಯರು, ಕಟ್ಟಡ, ರಾಜ್ಯಭಾರ ಇಂಥಾ ಯಾವ ವಿಷಯಗಳ ಜ್ಞಾನವೂ ಮತವೆನ್ನಿಸಿಕೊಳ್ಳುವುದಿಲ್ಲ. ಹಾಗಾದರೆ ಮತವೆಂದರೇನು ! ಮತವೆಂದರೆ ಯದ್ಯಪಿ ಸಾಮಾನ್ಯವಾಗಿ ಜ್ಞಾನವೆಂದರ್ಥವು. ಆದರೂ ಇಲ್ಲಿ ಜ್ಞಾನವಿಶೇಷವೆಂದು ಹೇಳಬೇಕು. ಆ ವಿಶೇಷ ಜ್ಞಾನವೇ ಬ್ರಹ್ಮಜ್ಞಾನವೆಂದು ಅಂಗೀಕರಿಸಬೇಕು. ಆದ್ದರಿಂದ ಮತವೆಂದರೆ ದೇವರ ವಿಷಯವಾದ ಜ್ಞಾನವು. ಬ್ರಹ್ಮಜ್ಞಾನ ಅಂದರೆ ದೇವರ ವಿಷಯವಾದ ಜ್ಞಾನವನ್ನು ಇತರರಿಗೆ ತಿಳಿಯಪಡಿಸುವುದು ಮತಬೋಧನೆಯೆನಿಸುವುದು, ಈಗ ಸ್ಕೂಲುಗಳಲ್ಲಿ ಬಾಲಕರಿಗೆ ಉಪದೇಶಿಸಬೇಕೆಂದು ನಮ್ಮ ಸರಕಾರದವರು ವಿಧಿಸುವ ಮತಬೋಧನೆಯೆಂಬುದು ಇದೇ. ಬ್ರಹ್ಮಜ್ಞಾನವನ್ನು ಇತರರಿಗೆ ತಿಳಿಯಪಡಿಸುವುದು ಎಂದರೆ ದೇವರ ವಿಷಯವಾದ ಜ್ಞಾನವನ್ನು ಇತರರಿಗೆ ಉಂಟುಮಾಡುವುದು—ಅಂದರೆ ಅವರು ದೇವರ ವಿಷಯವನ್ನು ತಿಳಿದುಕೊಳ್ಳುವಂತೆ ಮಾಡುವಿಕೆಯು. ಆದರೆ ಈ ಕಾರ್ಯವು ಪ್ರಪಂಚದ ಇತರ ಕಾರ್ಯಗಳಂತೆ ಸಾಧಾರಣವಾದುದಲ್ಲ. ಮಿಕ್ಕ ವಿಷಯಗಳನ್ನು ಪ್ರತ್ಯಕ್ಷವಾಗಿ ತಿಳಿಯಪಡಿಸಬಹುದು. ದೇವರು ಪರೋಕ್ಷ ಎಂದರೆ ನಮ್ಮ ಕಣ್ಣು ಮೊದಲಾದಿಂದ್ರಿಯಗಳಿಗೆ ಅಗೋಚರನಾದುದರಿಂದ ಆತನ ವಿಷಯವನ್ನು ಬೋಧಿಸುವುದೂ, ತಿಳಿದುಕೊಳ್ಳುವುದೂ ಸಾಮಾನ್ಯವಲ್ಲ. ಈ ಮತಬೋಧನೆಯಿಂದ ಮೋಕ್ಷವಾಗುವುದು ಎಲ್ಲರಿಗೂ ಪರಮ ಪ್ರಯೋಜನವಾದರೂ, ಪ್ರಕೃತ ಸರಕಾರದವರ ಉದ್ದೇಶವನ್ನು ವಿಚಾರಮಾಡಿ ನೋಡಿದಲ್ಲಿ, ದೇವಭಕ್ತಿ, ಪುಣ್ಯಪಾಪ ಭೀತಿ, ಉಪಶಾಂತಿ ಇವು ಬಾಲ್ಯದಿಂದಲೂ ಜನಗಳಲ್ಲಿ ನೆಲಸಬೇಕೆನ್ನುವುದೇ ಸರಕಾರದ ಪರಮೋದ್ದೇಶವೆಂದು ತೋರುವುದು. ಮತಬೋಧನೆಯು ಪೂರ್ವಕಾಲದಲ್ಲಿ ಬಾಲಕರಿಗೆ ತಾಯಿತಂದೆಗಳಲ್ಲಿಯೂ, ಗುರುಕುಲದಲ್ಲಿಯೂ ನಡೆಯುತ್ತಿತ್ತು. ಈಗ ಮನೆಗಳಲ್ಲಿ ಮಕ್ಕಳಿಗೆ ಸದುಪದೇಶಕ್ಕೆ ಮಾರ್ಗವೇ ಇಲ್ಲ. ಮಕ್ಕಳಿಗೆ ಅನ್ನವಸ್ತ್ರಗಳನ್ನು ಸಂಪಾದಿಸುವುದರಲ್ಲಿಯೇ ತಾಯಿತಂದೆಗಳಿಗೆ ಕಾಲವೆಲ್ಲಾ ಕಳೆಯುವುದು.

ಪ್ರಾಯೇಣ ತಾಯಿತಂದೆಗಳು ವಿದ್ಯಾಭ್ಯಾಸವೇ ಮಾಡಿರುವುದಿಲ್ಲ. ಅದರಲ್ಲಿಯೂ ತಾಯಿಗಳಂತೂ ಸುತರಾಂ ಮೌಢ್ಯದಿಂದ ಕೂಡಿರುವರು. ಇನ್ನು ಈಗಿನ ಗುರುಕುಲವೆಂದರೆ ಮಠಗಳು ಜನಗಳ ವಿದ್ಯಾಬುದ್ಧಿಗಳಿಗೆ ವಿಶೇಷ ಸಹಕಾರಿಗಳಾಗಿಲ್ಲ. ಆದುದರಿಂದ ಜನಗಳಿಗೆ ವಿದ್ಯಾವಿವೇಕಗಳನ್ನು ಕಲಿಸುವುದರಲ್ಲಿ ಸರಕಾರದವರೇ ಪ್ರವೇಶಿಸಬೇಕಾಗಿ ಬಂದಿದೆ. ಇದರಿಂದ ಈಗ ಸ್ಕೂಲುಗಳೂ, ಕಾಲೇಜುಗಳೂ ಇವುಗಳೇ ಬಾಲಕರಿಗೆ ಗುರುಕುಲವಾಗಿದೆ. ಆದರೆ ಸ್ಕೂಲುಗಳಲ್ಲಿಯೂ, ಕಾಲೇಜುಗಳಲ್ಲಿಯೂ ತಂಡತಂಡವಾಗಿ ಸೇರಿರುವ ಈಗಿನ ವಿದ್ಯಾರ್ಥಿಗಳಿಗೆ ಮತಬೋಧನೆಯನ್ನು ಸಾಂಗವಾಗಿ ನೆರವೇರಿಸುವುದಕ್ಕೆ ಕೆಲವು ಅಡಚಣೆಗಳುಂಟು. ಹಿಂದೂ ಜನಗಳಲ್ಲಿ ಶೈವ, ವೈಷ್ಣವಾದಿ ಮತಗಳನೇಕವಿವೆ. ಸ್ಕೂಲು ವಿದ್ಯಾರ್ಥಿಗಳಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಜೈನ, ಮುಸಲ್ಮಾನ ಮುಂತಾಗಿ ಹಲವು ಮತದವರು ಸೇರಿರುವುದರಿಂದ ಸರ್ವಸಮನಾಗಿಯಾಗಲಿ, ಆಯಾ ಪಂಗಡದವರಿಗೆ ಪ್ರತ್ಯೇಕ ಪ್ರತ್ಯೇಕವಾಗಿಯಾಗಲಿ ಬೋಧಿಸುವುದು ಸುಲಭವಲ್ಲವು. ಆದಾಗ್ಯೂ ಸರ್ವಸಮ್ಮತವಾಗಿರುವಂತೆ ಸ್ತೋತ್ರಗಳನ್ನೂ, ಸನಾತನಧರ್ಮಗಳನ್ನೂ ಬೋಧಿಸಲು ತಕ್ಕ ಏರ್ಪಾಡು ಮಾಡಿರುವುದನ್ನು ತಿಳಿಸಲು ಬಹಳ ಸಂತೋಷಿಸುತ್ತೇವೆ.

ಶೈಶವಕ್ಕೆ ತಕ್ಕ ಶಿಕ್ಷಕ.

ಯೂರೋಪ್ ಖಂಡದಲ್ಲಿ ಅನೇಕಕಡೆ ಬಾಲವಿದ್ಯಾಭ್ಯಾಸಮಾಡಿಸತಕ್ಕವರು ಹೆಂಗಸರೆ ಎಂಬುದು ನಮ್ಮ ಉಪಾಧ್ಯಾಯರಲ್ಲಿ ಅನೇಕರಿಗೆ ತಿಳಿಯದ ಅಂಶವಲ್ಲ. ಯೂರೋಪ್ ದೇಶದಲ್ಲಿ ಅನೇಕ ಕಾಲದಿಂದಲೂ ವಾಡಿಕೆಯಾಗಿರುವ ಈ ಪದ್ಧತಿಯು ಎಷ್ಟು ಒಳ್ಳೆಯದೆಂಬುದು ಸ್ವಲ್ಪಮಟ್ಟಿಗೆ ಯೋಚಿಸಿದರೂ ಚೆನ್ನಾಗಿ ಗೊತ್ತಾಗುವುದು. ಚಿಕ್ಕ ಮಕ್ಕಳಿಗೆ ವಿದ್ಯಾಭ್ಯಾಸಮಾಡಿಸುವುದಕ್ಕೆ ಹೆಂಗಸರು ಇರುವುದೇ ಆವಶ್ಯಕವೆಂದು ಹೇಳಬಹುದು. ಸ್ವಾಭಾವಿಕವಾಗಿ ಮೊದಲಲ್ಲಿ ಮನುಷ್ಯನಿಗೆ ತಾಯಿಯೇ ಉಪಾಧ್ಯಾಯಿನಿಯಾಗಿರುವಳು. ಹುಟ್ಟುತಲೂ ತಾಯಿಯಿಂದಲೇ ಮಗುವು ಭಾಷೆಯನ್ನೂ, ನಡತೆಯನ್ನೂ, ಮಿಕ್ಕೆಲ್ಲವನ್ನೂ ಸಹ ಕಲಿಯಬೇಕು. ಆದುದರಿಂದ ಹೆಂಗಸರಿಗೆ ಸ್ವಾಭಾವಿಕವಾಗಿಯೇ ಚಿಕ್ಕವರ ವಿದ್ಯಾಭ್ಯಾಸಕ್ಕೆ ಆವಶ್ಯ

ಕವಾದ ಗುಣಗಳಿರುವವು. ತಾಳ್ಮೆ ಮುಂತಾದ ಈ ಗುಣಗಳು ಅವರಲ್ಲಿ ಹೆಚ್ಚಾಗಿರುವುದು ಎಂಬುದು ಎಲ್ಲರಿಗೂ ತಿಳಿದೇ ಇರುವುದು. ಆದುದರಿಂದ ಚಿಕ್ಕವಯಸ್ಸಿನಲ್ಲಿ ಹೆಂಗಸರು ವಿದ್ಯಾಭ್ಯಾಸಮಾಡಿಸುವುದು ಒಳ್ಳೇದು.

ಇಷ್ಟೇ ಅಲ್ಲ. ಗಂಡಸರಿಗೆ ಈವಿಧವಾದ ಬಾಲವಿದ್ಯಾಭ್ಯಾಸವನ್ನು ಮಾಡಿಸುವುದು ತಪ್ಪಿದರೆ ಅವರು ತಮ್ಮ ಗುರುತರವಾದ ಶಕ್ತಿಯನ್ನು ಬೇರೆಯಾಗಿ ಉಪಯೋಗಿಸಿ ವಿಶೇಷ ಕೆಲಸವನ್ನು ಮಾಡುವುದಕ್ಕೆ ಅವಕಾಶ ದೊರೆವುದು. ಪ್ರೌಢ ವಿದ್ಯಾಭ್ಯಾಸಕ್ಕೇನೊ ಪಂಡಿತರಾಗಿರುವ ಗಂಡಸರೇ ಉಪಾಧ್ಯಾಯರಾಗಬೇಕು. ಆದರೆ ಬಾಲವಿದ್ಯಾಭ್ಯಾಸಕ್ಕೂ ಇವರನ್ನೇ ಅಪೇಕ್ಷಿಸಬೇಕಾದುದಿಲ್ಲ. ಈ ಕೆಲಸಕ್ಕೆ ಹೆಂಗಸರು ಇನ್ನೂ ಉತ್ತಮ. ಮತ್ತು ಆಕೆಲಸಮಾಡುವ ಗಂಡಸರಲ್ಲಿ ಇನ್ನೂ ಕಷ್ಟವಾದ ಮತ್ತು ತಮ್ಮ ಸ್ವರೂಪಕ್ಕೆ ಸರಿಯಾದ ಬೇರೆ ಕೆಲಸಗಳಲ್ಲಿ ಉದ್ಯುಕ್ತರಾಗಬಹುದು.

ಈ ಸಂದರ್ಭದಲ್ಲಿ ಗರ್ಲ್ಸ್‌ಸ್ಕೂಲುಗಳಿಂದಾಗಬೇಕಾದ ಒಂದು ಮುಖ್ಯಪ್ರಯೋಜನವನ್ನು ತಿಳಿಯಬಹುದು. ಹೆಣ್ಣುಮಕ್ಕಳಿಗೆಲ್ಲ ಸಮಾನವಾಗಿ ವಿದ್ಯಾಭ್ಯಾಸ ಮಾಡಿಸಿ, ಅವರಲ್ಲಿ ಉಪಾಧ್ಯಾಯತೆಗೆ ವಿಶೇಷವಾದ ಯೋಗ್ಯತೆಯನ್ನು ಅದರವನ್ನು, ತೋರಿಸುವವರನ್ನು ಬಾಲವಿದ್ಯಾಸಭ್ಯಾಸಮಾಡಿಸುವುದಕ್ಕೆ ಸಿದ್ಧರನ್ನಾಗಿ ಮಾಡಬೇಕು. ಅನುಕೂಲವಾದ ಕಡೆಗಳಲ್ಲಿ ಇಂಥವರನ್ನು ಉಪಾಧ್ಯಾಯತೆಗೆ ಅರ್ಹರನ್ನಾಗಿ ಮಾಡುತಬಂದರೆ ನಮ್ಮ ದೇಶದಲ್ಲಿ ಬಾಲವಿದ್ಯಾಭ್ಯಾಸಕ್ರಮವು ಬಹಳ ಶೀಘ್ರವಾಗಿಯೇತುಂಬಾ ಅಭಿವೃದ್ಧಿಯಾಗುವುದೆಂಬುದರಲ್ಲಿ ಸಂಶಯವಿಲ್ಲ.

ನಮ್ಮ ದೇಶದಲ್ಲಿ ವಿತಂತುಗಳ ಸಂಖ್ಯೆಯು ಬಹಳ ಹೆಚ್ಚಾಗಿರುವುದರಿಂದಲೂ ನಮ್ಮ ಸಂಪ್ರದಾಯಾನುಸಾರವಾಗಿ ಅಂಥವರಿಗೆ ಪುನರ್ವಿವಾಹವು ಇಲ್ಲವಾದುದರಿಂದಲೂ, ಅಂಥವರು ಉಪಾಧ್ಯಾಯತೆಗೆ ಸಿದ್ಧರಾಗುವುದು ಬಹಳ ಉತ್ತಮವೆಂದು ತೋರುವುದು. ಆದರಿಂದ ಅವರಿಗೆ ಇಹಪರಗಳೆರಡರಲ್ಲೂ ಫಲವುಂಟಾಗುವುದು.

ಬಾಲವಿದ್ಯಾಭ್ಯಾಸಮಾಡಿಸುವವರೆಲ್ಲ ಹೆಂಗಸರೇ ಆಗಿರಬೇಕೆಂದು ಇದರಿಂದ ತಿಳಿಯಕೂಡದು. ಸಾಧ್ಯವಾದಮಟ್ಟಿಗೂ ಇವರನ್ನು ಆಕೆಲಸಕ್ಕೆ ನಿಯಮಿಸಿದರೆ ಸಾಕು. ಕೆಲವುಕಡೆಮಾತ್ರ ಹೆಂಗಸರೇ ಉಪಾಧ್ಯಾಯರಾಗಬೇಕಾದುದು ಆವಶ್ಯಕ. ಇದಕ್ಕೆ ಕಿಂಡರ್‌ಗಾರ್ಟನ್ ಸ್ಕೂಲುಗಳನ್ನು ದೃಷ್ಟಾಂತವಾಗಿ ಹೇಳಬಹುದು. ಇಲ್ಲಿ ಮಕ್ಕಳ ವಯಸ್ಸು ಬಹಳ ಚಿಕ್ಕದಾದುದರಿಂದ ಅಲ್ಲಿಗೆ ಹೆಂಗಸರೇ

ಉಪಾಧ್ಯಾಯಿನಿಯರಾಗಿರುವುದು ಒಳ್ಳೇದು. ಕಿಂಡರ್‌ಗಾರ್ಟನ್ ಕ್ರಮವನ್ನು ಏರ್ಪಡಿಸಿದ ಫ್ರೋಬೆಲ್ಲನು ಈ ವಿದ್ಯಾಭ್ಯಾಸಕ್ಕೆ ಹೆಂಗಸರೇ ಸರಿಯಾದ ಬೋಧಕರೆಂದು ಅಭಿಪ್ರಾಯಪಟ್ಟಿರುವನು. ಆದರಂತೆ ಯೂರೋಪ್ ದೇಶಗಳಲ್ಲಿ ಅನೇಕಕಡೆ ಹೆಂಗಸರೇ ಕಿಂಡರ್‌ಗಾರ್ಟನ್ ಪಾಠಶಾಲೆಗಳಲ್ಲಿ ಉಪಾಧ್ಯಾಯಿನಿಯರಾಗಿರುವರು.

ಯೂರೋಪ್‌ಖಂಡಕ್ಕೆ ಸೇರಿದ ಜರ್ಮನಿ, ಸ್ವಿಡ್ಜರ್ಲೆಂಡ್ ದೇಶೀಯರು ಮುಖ್ಯವಾಗಿ ಸ್ತ್ರೀವಿದ್ಯಾಭ್ಯಾಸವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಬಹಳ ಆಸಕ್ತಿಯುಳ್ಳವರಾಗಿರುವರು. ಸ್ತ್ರೀಯರು ವಿದ್ಯಾವತಿಯರಾಗಿರುವುದರಿಂದ ತಮ್ಮ ತಮ್ಮ ಮಕ್ಕಳ ಜ್ಞಾನೇಂದ್ರಿಯದ ಅಭಿವೃದ್ಧಿಯಲ್ಲಿಯೇ ಆಸಕ್ತರಾಗಿ ಏಳೆಂಟು ವರ್ಷ ವಯಸ್ಕರಾಗುವುದಕ್ಕೆ ಮುಂದಾಗಿಯೇ ಅನೇಕ ವಿಷಯಗಳನ್ನು ಮಕ್ಕಳಿಗೆ ಚೆನ್ನಾಗಿ ಮತ್ತು ಸರಿಯಾಗಿ ತಿಳಿಯಪಡಿಸಿರುವರು. ನಮ್ಮ ಹೆಣ್ಣುಮಕ್ಕಳಿಗೆ ಉತ್ಸಾಹದಿಂದ ವಿದ್ಯೆಯನ್ನು ಕಲಿಸಿದ್ದೇ ಆದರೆ ಅವರು ತಮ್ಮ ಮಕ್ಕಳನ್ನು ಬಾಲ್ಯ ವಯಸ್ಸಿನಲ್ಲಿಯೇ ಚೆನ್ನಾಗಿ ಅರಿತವರನ್ನಾಗಿ ಮಾಡುವರೆಂದು ಖಂಡಿತವಾಗಿ ಹೇಳಬಹುದು. ಹೆಣ್ಣುಮಕ್ಕಳು ಬಹಳ ಆತುರದಿಂದಲೂ, ಉತ್ಸಾಹದಿಂದಲೂ ಸುಲಭವಾಗಿ ವಿದ್ಯೆಯನ್ನು ಕಲಿಯುವರು. ಅವರಿಗೆ ಅಭಿರುಚಿಯುಳ್ಳ ಅನೇಕ ವಿಷಯಗಳನ್ನು ತಿಳಿಸಬಹುದು. ಸ್ವಲ್ಪ ದಿವಸಗಳ ಹಿಂದೆ ಇಂಥ ಸುಲಭೋಪಾಯಗಳಿಂದ ಮಕ್ಕಳಿಗೆ ಆಟಪಾಟಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿಸುತಲಿದ್ದ ಪಾಠಶಾಲೆಗಳೇ ಇರಲಿಲ್ಲವು. ಆಗಿನಕಾಲದ ಮಠಗಳಲ್ಲಿ ವಿದ್ಯಾಭ್ಯಾಸ ಮಾಡಿಸಲು ಬಹು ಕ್ರೂರಮಾರ್ಗಗಳನ್ನಾಚರಿಸುತಿದ್ದರು. ಮಕ್ಕಳ ಪುಣ್ಯವಶಾತ್ ಈಗ ಅಂಥ ಮಠಗಳೂ ಇಲ್ಲ. ಹೆಸರು ಹೇಳಿದ ಮಾತ್ರಕ್ಕೆ ಕಣ್ಣಿನಲ್ಲಿ ನೀರು ಸುರಿಯುತಲಿದ್ದ ಆ ಕ್ರೂರ ಉಪಾಧ್ಯಾಯರುಗಳೂ ಇಲ್ಲ. ಇದು ಎಂಥಾ ಪುಣ್ಯ.

ಮಕ್ಕಳಿಗೆ ಬೇಸರವುಂಟಾಗದಂತೆ ಆಟಪಾಟಗಳಲ್ಲಿಯೇ ಇಂದ್ರಿಯಪಟುತ್ವ, ಜ್ಞಾನಾಭಿವೃದ್ಧಿಯನ್ನು ಮಾಡುವುದು ಸಾಧ್ಯವೆಂತಲೂ, ಸುಲಭವೆಂತಲೂ, ಪ್ರಯೋಜನಕಾರಿಯೆಂತಲೂ, ತಿಳಿದು ಆ ತತ್ವವನ್ನು ಪ್ರಕಟಗೊಳಿಸಿದ ಪೆಸ್ಟಲಾಟ್ಸಿ, ಫ್ರೋಬೆಲ್ ಇವರುಗಳ ಶ್ಲಾಘ್ಯವಾದ ಪದ್ಧತಿಯನ್ನು ಬಾಲಶಿಕ್ಷೆಯಲ್ಲಿ ಅನುಸರಿಸುವುದು ಅತ್ಯವಶ್ಯವು.

ಆದುದರಿಂದ ಬಾಲ್ಯದ ಸ್ವಭಾವವನ್ನರಿತ ಸ್ತ್ರೀಯರೇ ಶೈಶವಕ್ಕೆ ಸರಿಯಾದ ಶಿಕ್ಷಕರೆಂದು ಹೇಳುವುದರಲ್ಲೇನೂ ಸಂದೇಹವಿಲ್ಲವೆಂದು ತೋರುವುದು.

P. V.

ಲೋವರ್‌ಸೆಕೆಂಡರಿ ಅಂಕಗಣಿತ.

ಅಧ್ಯಾಯ 1.

ಅಂಕಕರಣ ಮತ್ತು ಸಂಖ್ಯಾಪಠನ.

ಅಂಕಕರಣ :—ಮಾತುಗಳಲ್ಲಿ ಕೊಡಲ್ಪಟ್ಟ ಸಂಖ್ಯೆಯನ್ನು ಅಂಕೆಗಳಲ್ಲಿ ಬರಿಯುವ ವಿಧಾನಕ್ಕೆ ಅಂಕಕರಣವೆಂದು ಹೆಸರು. ಉದಾ. ಮುನ್ನೂರಮೂವತ್ತೈದು ಎಂಬದನ್ನು 335 ಎಂದು ಬರೆಯುವದು.

ಅಭ್ಯಾ. ಉದ.

1. ಅಂಕೆಗಳಲ್ಲಿ ಬರೆ.

1. ಏಳುಲಕ್ಷವೂ ಎಪ್ಪತ್ತೈದುಸಾವಿರದ ಏಳು.
2. ಇಪ್ಪತ್ತುಲಕ್ಷದ ಇನ್ನೂರ ಎರಡು.
3. ಒಂದುಕೋಟಿಯೂ ಒಂದುಲಕ್ಷದ ಒಂದುಸಾವಿರದ ಒಂದು.

2. ಆರು ಅಂಕೆಗಳಿಂದಲೂ—ಮೂರು ಅಂಕೆಗಳಿಂದಲೂ—ಆಗುವ ಅತ್ಯಂತ ದೊಡ್ಡಸಂಖ್ಯೆಗಳನ್ನೂ—ಚಿಕ್ಕ ಸಂಖ್ಯೆಗಳನ್ನೂ ಬರೆಯಿರಿ?

ಸಂಖ್ಯಾಪಠನ:—ಅಂಕೆಗಳಲ್ಲಿ ಕೊಡಲ್ಪಟ್ಟ ಸಂಖ್ಯೆಗಳನ್ನು ಅವುಗಳ ಬೆಲೆ ವ್ಯತ್ಯಾಸವಾಗದ ಹಾಗೆ ಓದುವ ಅಥವ ಬರೆಯುವ ವಿಧಾನಕ್ಕೆ ಸಂಖ್ಯಾ. 1 ಸಂಖ್ಯೆಗಳಲ್ಲಿ ಎರಡುವಿಧ. ಶುದ್ಧಸಂಖ್ಯೆ 3, 5, 6......ಮತ್ತು ವಸ್ತು ಪ್ರದರ್ಶನಸಂಖ್ಯೆ—4 ರೂ. 3 ಗಜ ಮುಂತಾದುವು ಪಠನವೆಂದು ಹೆಸರು. ಉದಾ. 402 ಎಂಬದನ್ನು ನಾಲ್ಕು ಸೊನ್ನೆ ಎರಡು ಎಂದು ಓದುವದಾಗಲಿ ಬರೆಯುವದಾಗಲಿ ಅಲ್ಲ. ನಾನೂರ ಎರಡು ಎಂದು ಓದಬೇಕು.

ಅಭ್ಯಾ. ಉದ.

3. ಮಾತುಗಳಲ್ಲಿ ಬರೆ:—(1) 408004. (2) 1002011. (3) 255567. (4) 500005005.

4. 3, 4, 0, 7, ಇವುಗಳಿಂದಾಗಬಹುದಾದ ಸಂಖ್ಯೆಗಳನ್ನೆಲ್ಲಾ ಬರೆ.

ಉತ್ತರ=3407, 4307, 3470, 4370, 7340, 7430, 7403. 7304, 3704, 4703, 4730, 3740, 3074, 3047, 4037, 4073, 7043, 7034.

ಟಿ. ಇವುಗಳಲ್ಲಿ 7430 ಅತ್ಯಂತ ದೊಡ್ಡದು (ಏಳುಸಾವಿರದ ನಾನೂರ ಮುವ್ವತ್ತು).

3047 ಅತ್ಯಂತ ಚಿಕ್ಕದು (ಮೂರುಸಾವಿರದನಲವತ್ತೇಳು),

ಉಪಾಧ್ಯಾಯರಾಗಿರುವುದು ಒಳ್ಳೇದು. ಕಿಂಡರ್‌ಗಾರ್ಟರ್ನ ಕ್ರಮವನ್ನು ಏರ್ಪಡಿಸಿದ ಫ್ರೋಬೆಲ್ಲನು ಈ ವಿದ್ಯಾಭ್ಯಾಸಕ್ಕೆ ಹೆಂಗಸರೇ ಸರಿಯಾದ ಬೋಧಕರೆಂದು ಅಭಿಪ್ರಾಯಪಟ್ಟಿರುವನು. ಅದರಂತೆ ಯೂರೋಪ್ ದೇಶಗಳಲ್ಲಿ ಅನೇಕಕಡೆ ಹೆಂಗಸರೇ ಕಿಂಡರ್‌ಗಾರ್ಟರ್ನ ಪಾಠಶಾಲೆಗಳಲ್ಲಿ ಉಪಾಧ್ಯಾಯಿನಿಯರಾಗಿರುವರು.

ಯೂರೋಪ್‌ಖಂಡಕ್ಕೆ ಸೇರಿದ ಜರ್ಮನಿ, ಸ್ವಿಜ್ಜರ್ಲೆಂಡ್ ದೇಶೀಯರು ಮುಖ್ಯವಾಗಿ ಸ್ತ್ರೀವಿದ್ಯಾಭ್ಯಾಸವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಬಹಳ ಆಸಕ್ತಿಯುಳ್ಳವರಾಗಿರುವರು. ಸ್ತ್ರೀಯರು ವಿದ್ಯಾವತಿಯರಾಗಿರುವುದರಿಂದ ತಮ್ಮ ತಮ್ಮ ಮಕ್ಕಳ ಜ್ಞಾನೇಂದ್ರಿಯದ ಅಭಿವೃದ್ಧಿಯಲ್ಲಿಯೇ ಆಸಕ್ತರಾಗಿ ಏಳೆಂಟು ವರ್ಷ ವಯಸ್ಕರಾಗುವುದಕ್ಕೆ ಮುಂದಾಗಿಯೇ ಅನೇಕ ವಿಷಯಗಳನ್ನು ಮಕ್ಕಳಿಗೆ ಚೆನ್ನಾಗಿ ಮತ್ತು ಸರಿಯಾಗಿ ತಿಳಿಯಪಡಿಸಿರುವರು. ನಮ್ಮ ಹೆಣ್ಣುಮಕ್ಕಳಿಗೆ ಉತ್ಸಾಹದಿಂದ ವಿದ್ಯೆಯನ್ನು ಕಲಿಸಿದ್ದೇ ಆದರೆ ಅವರು ತಮ್ಮ ಮಕ್ಕಳನ್ನು ಬಾಲ್ಯವಯಸ್ಸಿನಲ್ಲಿಯೇ ಚೆನ್ನಾಗಿ ಅರಿತವರನ್ನಾಗಿ ಮಾಡುವರೆಂದು ಖಂಡಿತವಾಗಿ ಹೇಳಬಹುದು. ಹೆಣ್ಣುಮಕ್ಕಳು ಬಹಳ ಆತುರದಿಂದಲೂ, ಉತ್ಸಾಹದಿಂದಲೂ ಸುಲಭವಾಗಿ ವಿದ್ಯೆಯನ್ನು ಕಲಿಯುವರು. ಅವರಿಗೆ ಅಭಿರುಚಿಯುಳ್ಳ ಅನೇಕ ವಿಷಯಗಳನ್ನು ತಿಳಿಸಬಹುದು. ಸ್ವಲ್ಪ ದಿವಸಗಳ ಹಿಂದೆ ಇಂಥ ಸುಲಭೋಪಾಯಗಳಿಂದ ಮಕ್ಕಳಿಗೆ ಆಟಪಾಟಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿಸುತಲಿದ್ದ ಪಾಠಶಾಲೆಗಳೇ ಇರಲಿಲ್ಲವು. ಆಗಿನಕಾಲದ ಮಠಗಳಲ್ಲಿ ವಿದ್ಯಾಭ್ಯಾಸ ಮಾಡಿಸಲು ಬಹುಕ್ರೂರಮಾರ್ಗಗಳನ್ನಾಚರಿಸುತಿದ್ದರು. ಮಕ್ಕಳ ಪುಣ್ಯವಶಾತ್ ಈಗ ಅಂಥ ಮಠಗಳೂ ಇಲ್ಲ. ಹೆಸರು ಹೇಳಿದ ಮಾತ್ರಕ್ಕೆ ಕಣ್ಣಿನಲ್ಲಿ ನೀರು ಸುರಿಯುತಲಿದ್ದ ಆ ಕ್ರೂರ ಉಪಾಧ್ಯಾಯರುಗಳೂ ಇಲ್ಲ. ಇದು ಎಂಥಾ ಪುಣ್ಯ.

ಮಕ್ಕಳಿಗೆ ಬೇಸರವುಂಟಾಗದಂತೆ ಆಟಪಾಟಗಳಲ್ಲಿಯೇ ಇಂದ್ರಿಯಪಟುತ್ವ, ಜ್ಞಾನಾಭಿವೃದ್ಧಿಯನ್ನು ಮಾಡುವುದು ಸಾಧ್ಯವೆಂತಲೂ, ಸುಲಭವೆಂತಲೂ, ಪ್ರಯೋಜನಕಾರಿಯೆಂತಲೂ, ತಿಳಿದು ಆ ತತ್ವವನ್ನು ಪ್ರಕಟಗೊಳಿಸಿದ ಪೆಸ್ಟಲಾಟ್ಸಿ, ಫ್ರೋಬೆಲ್ ಇವರುಗಳ ಶ್ಲಾಘ್ಯವಾದ ಪದ್ಧತಿಯನ್ನು ಬಾಲಶಿಕ್ಷೆಯಲ್ಲಿ ಅನುಸರಿಸುವುದು ಅತ್ಯವಶ್ಯವು.

ಆದುದರಿಂದ ಬಾಲ್ಯದ ಸ್ವಭಾವವನ್ನರಿತ ಸ್ತ್ರೀಯರೇ ಶೈಶವಕ್ಕೆ ಸರಿಯಾದ ಶಿಕ್ಷಕರೆಂದು ಹೇಳುವುದರಲ್ಲೇನೂ ಸಂದೇಹವಿಲ್ಲವೆಂದು ತೋರುವುದು.

P. V.

ಲೋವರ್‌ಸೆಕೆಂಡರಿ ಅಂಕಗಣಿತ.

ಅಧ್ಯಾಯ 1.

ಅಂಕಕರಣ ಮತ್ತು ಸಂಖ್ಯಾಪಠನ.

ಅಂಕಕರಣ :—ಮಾತುಗಳಲ್ಲಿ ಕೊಡಲ್ಪಟ್ಟ ಸಂಖ್ಯೆಯನ್ನು ಅಂಕೆಗಳಲ್ಲಿ ಬರೆಯುವ ವಿಧಾನಕ್ಕೆ ಅಂಕಕರಣವೆಂದು ಹೆಸರು. ಉದಾ. ಮುನ್ನೂರಮೂವತ್ತೈದು ಎಂಬದನ್ನು 335 ಎಂದು ಬರೆಯುವುದು.

ಅಭ್ಯ. ಉದ.

1. ಅಂಕೆಗಳಲ್ಲಿ ಬರೆ.

1. ಏಳುಲಕ್ಷವೂ ಎಪ್ಪತ್ತೈದುಸಾವಿರದ ಏಳು.
2. ಇಪ್ಪತ್ತುಲಕ್ಷದ ಇನ್ನೂರ ಎರಡು.
3. ಒಂದುಕೋಟಿಯೂ ಒಂದುಲಕ್ಷದ ಒಂದುಸಾವಿರದ ಒಂದು.

2. ಆರು ಅಂಕೆಗಳಿಂದಲೂ—ಮೂರು ಅಂಕೆಗಳಿಂದಲೂ—ಆಗುವ ಅತ್ಯಂತ ದೊಡ್ಡಸಂಖ್ಯೆಗಳನ್ನೂ—ಚಿಕ್ಕ ಸಂಖ್ಯೆಗಳನ್ನೂ ಬರೆಯಿರಿ?

ಸಂಖ್ಯಾಪಠನ:—ಅಂಕೆಗಳಲ್ಲಿ ಕೊಡಲ್ಪಟ್ಟ ಸಂಖ್ಯೆಗಳನ್ನು ಅವುಗಳ ಬೆಲೆ ವ್ಯತ್ಯಾಸವಾಗದ ಹಾಗೆ ಓದುವ ಅಥವ ಬರೆಯುವ ವಿಧಾನಕ್ಕೆ ಸಂಖ್ಯಾ. 1 ಸಂಖ್ಯೆಗಳಲ್ಲಿ ಎರಡುವಿಧ. ಶುದ್ಧಸಂಖ್ಯೆ 3, 5, 6...... ಮತ್ತು ವಸ್ತು ಪ್ರದರ್ಶನಸಂಖ್ಯೆ—4 ರೂ. 3 ಗಜ ಮುಂತಾದುವು ಪಠನವೆಂದು ಹೆಸರು. ಉದಾ. 402 ಎಂಬದನ್ನು ನಾಲ್ಕು ಸೊನ್ನೆ ಎರಡು ಎಂದು ಓದುವದಾಗಲಿ ಬರೆಯುವದಾಗಲಿ ಅಲ್ಲ. ನಾನೂರ ಎರಡು ಎಂದು ಓದಬೇಕು.

ಅಭ್ಯ. ಉದ.

3. ಮಾತುಗಳಲ್ಲಿ ಬರೆ:—(1) 408004. (2) 1002011. (3) 255567. (4) 500005005.

4. 3, 4, 0, 7, ಇವುಗಳಿಂದಾಗಬಹುದಾದ ಸಂಖ್ಯೆಗಳನ್ನೆಲ್ಲಾ ಬರೆ.

ಉತ್ತರ=3407, 4307, 3470, 4370, 7340, 7430, 7403, 7304, 3704, 4703, 4730, 3740, 3074, 3047, 4037, 4073, 7043, 7034.

ಟಿ. ಇವುಗಳಲ್ಲಿ 7430 ಅತ್ಯಂತ ದೊಡ್ಡದು (ಏಳುಸಾವಿರದ ನಾನೂರ ಮುವ್ವತ್ತು).

3047 ಅತ್ಯಂತ ಚಿಕ್ಕದು (ಮೂರುಸಾವಿರದನಲವತ್ತೇಳು),

ಇದರಿಂದ ಗೊತ್ತಾಗುವದೇನಂದರೆ—ಕ್ರಮವಾಗಿ ದೊಡ್ಡ ಅಂಕೆಗಳನ್ನು ಜೋಡಿಸುವುದರಿಂದ ಅತ್ಯಂತ ದೊಡ್ಡಸಂಖ್ಯೆಯೂ—ಚಿಕ್ಕ ಅಂಕೆಗಳನ್ನು ಕ್ರಮವಾಗಿಡುವುದರಿಂದ ಅತ್ಯಂತ ಚಿಕ್ಕಸಂಖ್ಯೆಯೂ ಗೊತ್ತಾಗುವುವು.

5. 5, 3, 2, 1 ಇವುಗಳಿಂದ ಆಗಬಹುದಾದ ಅತ್ಯಂತ ಚಿಕ್ಕಸಂಖ್ಯೆಯಾವುದು?

6. 1, 0, 9, 5, 7 ಇವುಗಳಿಂದಾಗತಕ್ಕ ಅತ್ಯಂತ ದೊಡ್ಡ ಸಂಖ್ಯೆ ಯಾವುದು?

7. 3747 ಇದರಲ್ಲಿರುವ ಎರಡು ಏಳುಗಳ ಸ್ಥಾನ ಬೆಲೆಯುಲ್ಲಿರುವ ವ್ಯತ್ಯಾಸವೇನು?

ಗ್ರಂಥವಿಮರ್ಶೆ.

ಮ|| ರಾ|| ರಾ|| ಸಿ. ರಾಮಚಂದ್ರರಾಯರವರು ವಿಶ್ವಾಸಪೂರ್ವಕವಾಗಿ ಕಳುಹಿಸಿಕೊಟ್ಟ "ಕರ್ಣಾಟಕ ಚಂಡಕೌಶಿಕ" ವೆಂಬ ನಾಟಕವನ್ನು ಪರಮಾದರದಿಂದ ಸ್ವೀಕರಿಸಿ ಆದ್ಯಂತವಾಗಿ ನೋಡಲಾಯಿತು. ಆರ್ಯಕ್ಷೇಮೀಶ್ವರನೆಂಬ ಕವಿಯು ಸಂಸ್ಕೃತದಲ್ಲಿ ಬರೆದಿದ್ದ ಈ ನಾಟಕದಲ್ಲಿ ನಾಲ್ಕಂಕಗಳನ್ನು ಮಾತ್ರ ಪ್ರಸಿದ್ಧರಾಗಿದ್ದ ಬಸವಪ್ಪಶಾಸ್ತ್ರಿಗಳೆಂಬವರು ಕನ್ನಡಿಸಿ ದೈವಾಧೀನರಾಗಲು ಈಗ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕರ್ಣಾಟಕಪಂಡಿತರಾಗಿರುವ, ಶ್ರೀ. ಉ. ಆಳಸಿಂಗರಾಚಾರ್ಯರೆಂಬವರು ಮುಂದಿನ ಪಂಚಮಾಂಕವನ್ನು ಕನ್ನಡಿಸಿರುವರು. ಸಂಸ್ಕೃತಭಾಷೆಯಲ್ಲಿರುವ ಚಂಡಕೌಶಿಕನಾಟಕವನ್ನು ಕನ್ನಡಿಸಿರುವುದರಿಂದ ಸಂವಿಧಾನಾದಿಗಳೆಲ್ಲವೂ ಮೂಲಗ್ರಂಥಾನುಸಾರವಾಗಿರುವುದು. ಮತ್ತು ಭಾಷಾಂತರಕ್ಕೆ ತಂದಿದ್ದರೂ ಕರ್ನಾಟಕವಾಗಿ ಮೊದಲಿಂದಲೂ ಇರುವುದೆಂದು ತೋರುವಂತೆ ಕರ್ನಾಟಕಭಾಷಾಶೈಲಿಯು ಕೆಡದಹಾಗೆ ಭಾಷಾಂತರ ಮಾಡಲ್ಪಟ್ಟಿರುವುದು. ಆದರೆ ಈ ಗ್ರಂಥವನ್ನು ಹಳಗನ್ನಡದಲ್ಲಿ ಭಾಷಾಂತರ ಮಾಡಿದ್ದರೂ ಜನಗಳ ಸುಖಬೋಧೆಗಾಗಿ ಶುದ್ಧಾಂಗವಾಗಿ ಹಳಗನ್ನಡವನ್ನೇ ಹಿಡಿಯದೆ ಹಳಗನ್ನಡವನ್ನೂ ಹೊಸಗನ್ನಡವನ್ನೂ ಮಿಶ್ರಮಾಡಿ ಬರೆದಿರುವುದು. ಈ ಗ್ರಂಥವು ಎರಡನೆಯಾವರ್ತಿ ಮುದ್ರಿತವಾಗಿರುವುದನ್ನು ನೋಡಿದರೆ ಜನಗಳಿಗೆ ಈ ಗ್ರಂಥವು ಉಪಾದೇಯವಾಗಿರುವದೆಂಬಂಶದಲ್ಲಿ ಪ್ರಮಾಣಾನ್ತರವನ್ನು ನೋಡಬೇಕಾಗಿಲ್ಲ. ಪ್ರಥಮ ಮುದ್ರಣಕ್ಕಿಂತಲೂ ಈ ದ್ವಿತೀಯ ಮುದ್ರಣವು ತಪ್ಪಿಲ್ಲದೆ ಶುದ್ಧವಾಗಿರುವುದು. ಈ ಗ್ರಂಥವು ಕರ್ನಾಟಭಾಷಾಭ್ಯಾಸಿಗಳಿಗೂ ಅರ್ಹವಾಗಿರುವುದರಿಂದ ಯೂನಿವರ್ಸಿಟಿಯವರೇ ಮುಂತಾದವರು ಟೆಕ್ಸ್ಟನ್ನಾಗಿ ಆಗಾಗ್ಯೆ ಏರ್ಪಡಿಸುತ್ತಿರುವರು. ಇಂಥಾ ಗ್ರಂಥವು ಎರಡನೆಯಾವರ್ತಿ ಮುದ್ರಿತವಾಗಿರುವುದಕ್ಕಾಗಿ ವಿಶೇಷವಾಗಿ ಆನಂದಿಸುವುದಲ್ಲದೆ ಶೀಘ್ರದಲ್ಲಿಯೇ ತೃತೀಯ ಮುದ್ರಣಕ್ಕೂ ಸಿದ್ಧವಾಗಲೆಂದು ಆದರಪೂರ್ವಕವಾಗಿ ನಾವು ಹಾರೈಸುವೆವು.

ಸಿಡುಬು.

ಇದು ಅಂಟುರೋಗ. ಇದು ಬರುವಾಗ್ಗೆ ಜ್ವರವು ಬರುವುದು. 7 ದಿವಸದಮೇಲೆ ಹುಣ್ಣು ಏಳುವುದಕ್ಕೆ ಉಪಕ್ರಮವಾಗುವುದು. ಹೀಗೆ ಉಪಕ್ರಮವಾದಾಗ ಮುಖದಮೇಲೂ, ಶರೀರದಲ್ಲೂ ಕೆಂಪು ಚುಕ್ಕೆಗಳು ಕಾಣುವುವು. ಮೂರು ದಿವಸಗಳ ತರುವಾಯ ಗುಳ್ಳೆಗಳಂತಾಗಿ ಕೀವು ಸೇರುವುದಕ್ಕುಪಕ್ರಮವಾಗುವುದು. ಹನ್ನೊಂದನೇ ದಿವಸಕ್ಕೆ ಒಣಗುವುದಕ್ಕುಪಕ್ರಮವಾಗುವುದು. ಸಾಮಾನ್ಯವಾಗಿ ಈ ರೋಗವು ಒಂದಾವರ್ತಿ ಬಂದರೆ ತಿರಿಗಿ ಬರುವುದಿಲ್ಲ. ಕೆಲವರಿಗೆ ಈ ರೋಗ ಬರುವುದೇ ಇಲ್ಲ. ಹದಿಮೂರನೇ ಶತಮಾನದಲ್ಲಿ ಈ ರೋಗವು ಪಾಶ್ಚಾತ್ಯ ದೇಶಗಳಲ್ಲಿ ಅತ್ಯಂತ ಉಲ್ಬಣಾವಸ್ಥೆಯಲ್ಲಿತ್ತು. ಬಹು ಜನಗಳು ಇದರಿಂದ ಮೃತಪಡುತ್ತಿದ್ದರು. ಅನೇಕರಿಗೆ ಕೈ, ಕಾಲು, ಕಣ್ಣು ಮೊದಲಾದವುಗಳು ಹೋಗುತ್ತಿದ್ದವು. ಅನೇಕ ಗ್ರಾಮಗಳೇ ಈ ರೋಗದಿಂದ ನಿರ್ಮಾನುಷ್ಯವಾಗುತ್ತಿದ್ದವು. ಈ ರೋಗದ ನಿದಾನವನ್ನು ಡಾ॥ ಜನ್ನರ್‌ರವರು ಪರೀಕ್ಷಿಸಿ, ಪ್ರಥಮತಃ ಇನಾಕ್ಯುಲೇಷನನ್ನು ಮಾಡುತ್ತಿದ್ದರು. ಅಂದರೆ ಮಾರಿಹುಣ್ಣಿನ ರಸವನ್ನು ತೆಗೆದು ಈ ಹುಣ್ಣು ಏಳದೇ ಇರತಕ್ಕವರ ತೋಳಿನಲ್ಲಿ ಸ್ವಲ್ಪ ಗಾಯವನ್ನು ಮಾಡಿ ಅದಕ್ಕೆ ಈ ರಸವನ್ನು ಹುಯ್ಯುತ್ತಿದ್ದರು. ಅಂಥಾವರಿಗೆ ಈ ಹುಣ್ಣು ಎದ್ದು ವಾಸಿಯಾಗುತ್ತಿತ್ತು. ಪುನಃ ಅಂಥಾವರಿಗೆ ಈ ಹುಣ್ಣು ಏಳುವುದಿಲ್ಲವೆಂದು ಅನುಭವದಿಂದ ಗೊತ್ತಾಯಿತು.

ಅನಂತರದಲ್ಲಿ ಡಾ॥ ಜನ್ನರ್‌ರವರು ಹಸುವಿನ ಹಾಲನ್ನು ಕರೆಯುತಕ್ಕ ಜನಗಳಿಗೆ ಈ ಹುಣ್ಣು ಏಳದೇ ಇರುವದೆಂದು ತಿಳಿಯಬಂದದ್ದರಿಂದ ಹಸುಗಳ ಕೆಚ್ಚಲಿನಲ್ಲಿ ಈ ರೋಗಕ್ಕೆ ಪರಿಹಾರಕರವಾದ ಪದಾರ್ಥವೇನೋ ಇರಬೇಕೆಂದು ಊಹೆಯನು ಮಾಡಿಕೊಂಡು ಅನೇಕ ಪರೀಕ್ಷೆಗಳನ್ನು ಮಾಡಿದರು. ಕಡಸುಗಳ ಕೆಚ್ಚಲಿನ ಸಮೀಪದಲ್ಲಿನ ಹುಣ್ಣುಗಳ ರಸವನ್ನು ತೆಗೆದು ಸಿಡಬು ಹಾಕುವುದಕ್ಕೆ ಉಪಕ್ರಮಿಸಿದರು. ಹೀಗೆ ಸಿಡಬು ಹಾಕಿದವರಿಗೆ ಪುನಹಾ ಸಿಡಬು ಏಳುವುದಿಲ್ಲವೆಂದು ಗೊತ್ತಾಯಿತು. ಈಗ ಈ ರಸವನ್ನು ವಿಶೇಷವಾಗಿ ತಯಾರ್ಮಾಡಿ ತನ್ಮೂಲಕ ಸಿಡಬನ್ನು ಹಾಕುವರು. ಪೂರ್ವದಲ್ಲಿ ಸಿಡಬಿನ ರಸವನ್ನು ತೆಗೆದು ಇನಾಕ್ಯುಲೇಷ ಮಾಡುತ್ತಿದ್ದಾಗ ಯಾವ ಮಕ್ಕಳ ಹುಣ್ಣಿನಿಂದ ರಸವನ್ನು ತೆಗೆಯುವರೋ ಆ ಮಕ್ಕಳಿಗೆ

ಏನಾದರೂ ರೋಗಾದಿಗಳಿದ್ದರೆ ಆ ರಸದಿಂದ ಇನಾಕ್ಯುಲೇಷನ್ ಮಾಡಿಸಿಕೊಂಡ ವರಿಗೆ ಆ ರೋಗ ಬರುತ್ತಿತ್ತು. ಈಗ ಸಿಡಬು ಹಾಕತಕ್ಕ ರಸವನ್ನು ಆರೋಗ್ಯವಾಗಿರತಕ್ಕ ಕಡಸುಗಳಿಂದ ತೆಗೆಯುತ್ತಾರೆ. ಇದರಿಂದ ಯಾವ ರೋಗವೂ ಬರುವುದಿಲ್ಲ. ಸಿಡಬು ಏಳುವುದುಕೂಡಾ ನಿಂತುಹೋಗುವುದು. ಸಿಡಬು ಪ್ಲೇಗ್‌ರೋಗಕ್ಕಿಂತಲೂ ಸ್ವಲ್ಪವೂಕಡಮೆಯಾದದ್ದಲ್ಲ. ಪ್ಲೇಗ್ ರೋಗದಹಾಗೆಯೇ ಇದು ಇವರು ದೊಡ್ಡವರು ಚಿಕ್ಕವರು ಎಂದು ನೋಡುವುದಿಲ್ಲ. ಅನ್ನವಸ್ತ್ರಗಳಿಗೆ ನೆಮ್ಮದಿಯಾಗಿಯೂ, ಬಿಸಿಲು ಮತ್ತು ವಾಯು ಸಂಚಾರಕ್ಕೆ ಸಂಪೂರ್ಣವಾದ ಅವಕಾಶವುಳ್ಳ ಮನೆಗಳಲ್ಲಿ ವಾಸಮಾಡತಕ್ಕವರಿಗೆ ಪ್ಲೇಗ್‌ರೋಗವು ಬರುವುದಪೂರ್ವ. ಆದರೆ ಸಿಡಬು ಅಂಥಾವರನ್ನೂ ಬಿಡುವುದಿಲ್ಲ. ಪ್ಲೇಗ್ ರೋಗದಲ್ಲಿ ಜ್ವರವೂ ಗೆಡ್ಡೆಗಳು ಬರುವುವು. ಸಿಡಬಿನಲ್ಲಿ ಶರೀರದ ಹೊರಗೂ ಒಳಗೂ ಹುಣ್ಣುಗಳೆದ್ದು ಪಕ್ವವಾಗಿ ಕೀವು ತುಂಬಿ ದುರ್ಗಂಧಹುಟ್ಟಿ ಸಮೀಪದಲ್ಲಿರತಕ್ಕವರಿಗೆ ಉಪಕಾರಮಾಡತಕ್ಕ ಕೆಲಸವೂಕೂಡಾ ದುಸ್ಸಹವಾಗುವುದು. ಸಿಡಬಿನಿಂದ ಪೀಡಿತರಾದವರಿಗೆ ಜ್ವರದ ತಾಪವು ಹೆಚ್ಚಾಗಿ ಹುಚ್ಚರಂತೆ ಕೂಗಿಕೊಳ್ಳುವುದು, ಪ್ರಜ್ಞೆಯಿಲ್ಲದೆ ಅರಚುವುದು ಇವುಗಳೆಲ್ಲಾ ಸಹಜವಾಗಿರುವುವು. ಬಹಳ ಸುಂದರವಾಗಿದ್ದ ಜನಗಳು ಈ ರೋಗದ ಹಾವಳಿಯಿಂದ ಒಂದುವೇಳೆ ಬದುಕಿದಾಗ್ಗೂ ಕುರೂಪಿಗಳಾಗಿಯೂ, ಅಂಗಹೀನರಾಗಿಯೂ, ಆಗುವರು.

ಪಾಶ್ಚಾತ್ಯರಲ್ಲಿ ಈ ರೋಗಭಯವು ಅತ್ಯಂತವಾಗಿರುವುದು. ಇದರಿಂದಲೇ ಸಿಡಬು ಹಾಕಿಸಿಕೊಳ್ಳದೇ ಇರತಕ್ಕವರನ್ನು ಸರಕಾರದ ಉದ್ಯೋಗಗಳಿಗೆ ಸೇರಿಸಕೂಡದೆಂದು ವಿಧಾಯಕಮಾಡಿಕೊಂಡಿರುವರು. ಮಕ್ಕಳಿಗೆ ಎರಡು ತಿಂಗಳಾದಕೂಡಲೇ ಸಿಡಬನ್ನು ಹಾಕಿಸಬೇಕೆಂಬದಾಗಿಯೂ, ಈ ವಿಷಯದಲ್ಲಿ ಉಪೇಕ್ಷೆ ಮಾಡಿದರೆ ತಂದೆತಾಯಿಗಳು ಅಥವಾ ಪೋಷಕರು ಮಕ್ಕಳ ವಿಷಯದಲ್ಲಿ ಬಹಳ ಅಪಕಾರ ಮಾಡಿದಂತಾಗುವದೆಂಬದಾಗಿಯೂ, ಈ ಅಪಕಾರವನ್ನೆ ಅಪರಾಧವೆಂದು ಎಣಿಸಬಹುದೆಂಬದಾಗಿಯೂ, ಡಾ॥ ಬ್ರೋರ್‌ರವರು ಅಪ್ಪಣೆಕೊಡಿಸಿರುವರು. ಅನೇಕ ಡಾಕ್ಟರುಗಳು ಇವರ ಅಭಿಪ್ರಾಯವನ್ನೇ ಅನುಮೋದಿಸಿರುವರು. ಒಂದಾವರ್ತಿ ಸಿಡಬು ಹಾಕಿದವರಿಗೆ ಆ ಸಿಡಬಿನ ವ್ಯಾಪನೆಯು7 ವರುಷಗಳ ವರೆಗೆ ದೇಹದಲ್ಲಿರುವದೆಂಬದಾಗಿಯೂ, ತರುವಾಯ ಸಿಡಬು ಏಳತಕ್ಕ ಸಂಭವವು ಬರಬಹುದೆಂಬದಾಗಿಯೂ, ಇಂಥಾ ಪ್ರಮಾದವನ್ನು ತಪ್ಪಿಸಿಕೊಳುವ್ವ

ದಕ್ಕೋಸ್ಕರ ಪ್ರಥಮತಃ ಸಿಡಬು ಹಾಕಿಸಿಕೊಂಡ 7 ವರುಷಗಳಿಗೆ ಮತ್ತೊಂದಾವರ್ತಿ ಸಿಡಬು ಹಾಕಿಸಿಕೊಳ್ಳುವುದು ಅವಶ್ಯಕವೆಂಬದಾಗಿಯೂ, ಈ ರೋಗದ ಕಾರಣವನ್ನು ತಿಳಿದ ಡಾಕ್ಟರುಗಳು ಗೊತ್ತುಮಾಡಿ ಇರುತ್ತಾರೆ. ಪಾಶ್ಚಾತ್ಯರಲ್ಲಿ ಎರಡನೇಆವರ್ತಿ ಸಿಡಬು ಹಾಕುವುದು ರೂಢಿಗೆ ಬರುತ್ತಲಿದೆ. ನಮ್ಮ ಜನಗಳು ಇದನ್ನೂಕೂಡಾ ಆಚರಣೆಗೆತರುವುದು ಕ್ಷೇಮಕರವಾದದ್ದು. ಸಿಡಬನ್ನು ಪೂರ್ವದಲ್ಲಿ ಒಂದೊಂದು ತೋಳಿನಲ್ಲಿ ಒಂದೊಂದುಕಡೆ ಹಾಕುತ್ತಿದ್ದರು. ಅಂಥಾವರಿಗೆ ಪುನಃ ಸಿಡಬು ಏಳುತ್ತಿತ್ತು. ಆನಂತರ ತೋಳಿಗೆ ಎರಡುಕಡೆ ಹಾಕುವುದಕ್ಕೂ ತರುವಾಯ 3 ಕಡೆ ಹಾಕುವುದಕ್ಕೂ ಉಪಕ್ರಮವಾಯಿತು. 3 ಕಡೆ ಹಾಕಿಸಿಕೊಂಡವರಿಗೆ ಪುನಃ ಸಿಡಬು ಏಳುವುದೆ ಅಪೂರ್ವವೆಂದು ಗೊತ್ತಾಯಿತು. ಆದುದರಿಂದ ಕನಿಷ್ಠಪಕ್ಷ 2 ಕಡೆಯಾದರೂ ಸಿಡಬನ್ನು ಹಾಕುತ್ತಾರೆ. 3 ಕಡೆ ಹಾಕುವುದೇ ಸಹಜವಾಗುತ್ತಲಿದೆ. ಗ್ರಾಮಗಳಲ್ಲಿ ಎಲ್ಲಿಯಾದರೂ ಸಿಡಬು ಏಳುವುದಕ್ಕೆ ಉಪಕ್ರಮವಾದರೆ ಕೂಡಲೇ ಸಿಡಬು ಹಾಕದೇ ಇರತಕ್ಕ ಮಕ್ಕಳಿಗೂ ದೊಡ್ಡವರಿಗೂ ಸಿಡಬನ್ನು ಹಾಕಿಸಬೇಕು. ಆರು ವಾರದ ಮಕ್ಕಳಿಗೂ ಸಿಡಬು ಹಾಕುವುದುಂಟು. ವಿಲಾಯತಿಯಲ್ಲಿ ಒಂದು ಗ್ರಾಮದಲ್ಲಿ ಸಿಡಬು ಏಳುವುದಕ್ಕೆ ಪ್ರಾರಂಭವಾಯಿತು. ಒಂದು ಮಗುವಿಗೆ ಜ್ವರವುಬಂದು ಸಿಡಬಿನ ಚಿಹ್ನೆಗಳು ತೋರುತ್ತಲೂ ಅದರ ಸಮೀಪದಲ್ಲಿದ್ದು ಜ್ವರವನ್ನೇಹೊಂದಿದ ಮತ್ತೊಂದು 6 ವಾರದ ಮಗುವಿಗೆ ಡಾ॥ ಮೂಸರ್‌ರವರು ಸಿಡಬನ್ನು ಹಾಕಿದರು. ಇವರು ಹಾಕುವುದಕ್ಕೆ ಮುಂಚೆಯೇ ಸಿಡಬಿನ ಸೋಂಕು ಆ ಮಗುವಿಗೆ ಉಂಟಾಗಿತ್ತು. ಆದರೆ ಇವರು ಸಿಡಬು ಹಾಕಿದ್ದರಿಂದ ಹುಣ್ಣುಗಳು ಬಹು ಸ್ವಲ್ಪವಾಗಿ ಎದ್ದು ಆ ಮಗುವಿಗೆ ಲಘುವಾಯಿತು. ಆದುದರಿಂದ ಸಿಡಬಿನ ರೋಗವು ಉಪಕ್ರಮವಾದಮೇಲೆ ಸಿಡಬನ್ನು ಹಾಕಿಸಿಕೊಳ್ಳುವುದುಕೂಡಾ ಬಾಧಕವಾದದ್ದಲ್ಲವೆಂದು ಗೊತ್ತಾಯಿತು. ವಿಲಾಯತಿಯಲ್ಲಿ ಎರಡನೇಆವರ್ತಿ ಸಿಡಬು ಹಾಕುವುದನ್ನೂಕೂಡಾ ಬಲಾತ್ಕಾರವಾಗಿಮಾಡಿ ಇರುತ್ತಾರೆ. ಪ್ರಷ್ಯಾದೇಶದಲ್ಲಿ ಎರಡನೇಆವರ್ತಿ ಸಿಡಬು ಹಾಕಿಸಿಕೊಳ್ಳದೇಇರತಕ್ಕವರನ್ನು ಸೈನ್ಯಕ್ಕೆ ಸೇರಿಸುವದಿಲ್ಲ. ಬಾಲ್ಯದಲ್ಲಿ ಸಿಡಬು ಹಾಕಿಸುವುದು ಪ್ರಯೋಜನವಾದಾಗ್ಯೂ ಎರಡನೇಆವರ್ತಿ ಸಿಡಬು ಹಾಕಿಸಿಕೊಳ್ಳದೇ ಇರತಕ್ಕವರಲ್ಲನೇಕರಿಗೆ ಸಿಡಬು ಏಳತಕ್ಕ ಸಂಭವವು ಇದ್ದೇಯಿರುವುದೆಂದು ಪ್ರಿವಿ ಕೌನ್ಸಿಲ್ ಸೀನಿಯರ್ ಮೆಡಿಕಲ್ ಇನ್ಸ್ಪೆಕ್ಟರಾದ ಡಾ॥ ಸೀಟರ್‌ರವರು ಅಪ್ಪಣೆಕೊಡಿಸಿ

ರ್ವುವರು. ನಮ್ಮ ಇಂಡಿಯಾದೇಶದ ಡಾಕ್ಟರು ಮತ್ತು ವೈದ್ಯರೂಕೂಡಾ ಶಿಡಬು ಹಾಕುವುದು ಅತ್ಯಾವಶ್ಯಕವೆಂದು ಒಪ್ಪಿಕೊಳ್ಳುವರು. ನಮ್ಮ ಗವರ್ನ್ಮೆಂಟಿನವರು ಇದನ್ನೆಲ್ಲಾ ನೋಡಿ ಶಿಡಬು ಹಾಕಿಸಿಕೊಳ್ಳುವುದನ್ನು ಬಲಾತ್ಕಾರವಾಗಿರುವಂತೆ ಮಾಡಿರುವರು. ಅಂದರೆ ಶಿಡಬು ಹಾಕಿಸಿಕೊಳ್ಳದೇ ಇರತಕ್ಕವರಿಗೆ ಪ್ರಾಸಿಕ್ಯೂಷನ್ ವಗೈರೆಗಳಿಗೆ ಏರ್ಪಾಡು ಮಾಡಿರುವರು. ಮಕ್ಕಳ ರಕ್ಷಣೆಯು ತಂದೆತಾಯಿಗಳಿಗೆ ಹೇಗೋಹಾಗೆ ಪ್ರಜೆಗಳು ನಿವಾರಣೀಯವಾದ ಅಕಾಲಮೃತ್ಯುವಿಗೆ ಗುರಿಯಾಗಕೂಡದೆಂದು ನಮ್ಮ ಗವರ್ನಮೆಂಟಿನವರು ಮಾಡಿರತಕ್ಕ ಈ ಏರ್ಪಾಡಿಗಾಗಿ ಪ್ರಜೆಗಳಾದ ನಾವೆಲ್ಲರೂ ಶ್ರೀಮನ್ಮಹಾರಾಜರವರಿಗೆ ಕೃತಜ್ಞರಾಗಿರಬೇಕು. ಗವರ್ನಮೆಂಟಿನವರು ಮಾಡಿರತಕ್ಕ ರೂಲುಗಳಪ್ರಕಾರ ಶಿಡಬು ಹಾಕಿಸಿಕೊಳ್ಳದೇ ಇರತಕ್ಕವರು ಶಿಡಬನ್ನು ಹಾಕಿಸಿಕೊಳ್ಳುವುದರಿಂದಲೂ ಒಂದಾವರ್ತಿ ಶಿಡಬು ಹಾಕಿಸಿಕೊಂಡವರು 2 ನೇ ಆವರ್ತಿ ಶಿಡಬು ಹಾಕಿಸಿಕೊಳ್ಳುವುದರಿಂದಲೂ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವುದಲ್ಲದೆ ತಮ್ಮ ಕೃತಜ್ಞತೆಯನ್ನು ತೋರಿಸುವರೆಂದು ನಾವು ನಂಬಿದವರಾಗಿದ್ದೇವೆ.

ವಿದ್ಯಾರ್ಥಿಗಳ ನಡೆನುಡಿಗಳು.

ವಿದ್ಯಾರ್ಥಿಗಳ ನಡೆನುಡಿಗಳ ವಿಷಯದಲ್ಲಿ ಬೊಂಬಾಯಿ ಗವರ್ನಮೆಂಟಿನವರು ಕೆಲವು ರೂಲುಗಳನ್ನು ಏರ್ಪಡಿಸಿರುವರು. ಈ ರೂಲುಗಳು ಅತ್ಯಂತ ಸಾಧುವಾಗಿವೆ. ಅನೇಕ ವಿದ್ಯಾರ್ಥಿಗಳು ಅವಿಧೇಯರಾಗಿರುವುದುಂಟು. ಬಾಲ್ಯದಲ್ಲಿ ಬಂದ ಅವಿಧೇಯತೆಯು ದಿನೇ ದಿನೇ ವೃದ್ಧಿಯಾಗಿ ಕೊನೆಗೆ ಈರೀತಿಯಲ್ಲಿ ಬೆಳದ ಹುಡುಗರು ಸರ್ವವಿಧದಲ್ಲಿಯೂ ಕೆಟ್ಟುಹೋಗುವರು. ಮನೆಯಲ್ಲಿ ತಂದೆತಾಯಿಗಳಿಗೂ ಪಾಠಶಾಲೆಗಳಲ್ಲಿ ಗುರುಗಳಿಗೂ ರಾಜ್ಯದಲ್ಲಿ ಪ್ರಭುಗಳಿಗೂ ವಿಧೇಯರಾಗಿ ಇರದೇ ಇದ್ದರೆ ಅಂಥಾ ಅವಿಧೇಯನಾದ ಮನುಷ್ಯನು ಕೆಟ್ಟುಹೋಗುವುದೇನಾಶ್ಚರ್ಯವಲ್ಲ! ಮಾತಾಪಿತೃಗಳನ್ನೂ ದೇವರಂತೆ ಕಾಣಬೇಕೆಂಬದಾಗಿಯೂ, ಗುರುವನ್ನು ಸಾಕ್ಷಾತ್ ಪರಬ್ರಹ್ಮನೆಂದು ಕಾಣಬೇಕೆಂಬದಾಗಿಯೂ, ಪ್ರಭುವನ್ನು ಶ್ರೀ ಮಹಾವಿಷ್ಣುವನ್ನು ಹೇಗೊ ಹಾಗೆ ಕಾಣಬೇಕೆಂಬದಾಗಿಯೂ ನಮ್ಮ ಹಿರಿಯರು ಹೇಳುವರು. ತಂದೆತಾಯಿಗಳು, ಗುರುಗಳು ಮತ್ತು

ಪ್ರಭುಗಳು ಯುಕ್ತಾಯುಕ್ತವಿಹೀನರಾಗಿ ನಡೆದುಕೊಂಡರೆ ಅವರ ವಿಷಯದಲ್ಲೂ ಹಾಗೆ ಇರಬೇಕೇ ಎಂಬದಾಗಿ ಈಕಾಲದ ವಿದ್ಯಾರ್ಥಿಗಳು ಪ್ರಶ್ನೆಮಾಡುವುದುಂಟು. ಅವರವಿಷಯದಲ್ಲಿಯೂ ಇದೇರೀತಿಯಲ್ಲಿ ನಡೆದುಕೊಳ್ಳುವುದು ವಿದ್ಯಾರ್ಥಿಗಳ ಧರ್ಮ. ಅವರ ಕರ್ತವ್ಯವನ್ನು ಅವರು ತಿಳಿದುಕೊಳ್ಳದೇ ಇದ್ದರೆ ಅದಕ್ಕೆ ತಕ್ಕ ಶಿಕ್ಷೆಯು ಅವರಿಗೆ ತಪ್ಪುವುದಿಲ್ಲಾ. 'ಮಾಡಿದ್ದುಣ್ಣೋ ಮಹಾರಾಯ' ಎಂಬ ಗಾದೆಗನುಸಾರವಾಗಿ ಅವರು ತಮ್ಮ ಪಾಪಪುಣ್ಯಫಲವನ್ನು ಅನುಭವಿಸಿಯೇ ಅನುಭವಿಸಬೇಕಾಗುವುದು. ಅವರು ತಮ್ಮ ಕರ್ತವ್ಯಗಳನ್ನು ತಿಳಿದುಕೊಳ್ಳಲಿಲ್ಲವೆಂದು ವಿದ್ಯಾರ್ಥಿಗಳು ತಮ್ಮ ಕರ್ತವ್ಯವನ್ನು ತಿಳಿದುಕೊಂಡು ಅನುಷ್ಠಾನಕ್ಕೆ ತಂದುಕೊಳ್ಳದೇಹೋದರೆ ತಮ್ಮ ಪಾಪಪುಣ್ಯಗಳ ಫಲವನ್ನು ವಿದ್ಯಾರ್ಥಿಗಳಲ್ಲದೆ ಯಾರು ಅನುಭವಿಸಬೇಕಾಗುವುದು? ಈರೀತಿಯಲ್ಲಿ ಪ್ರಶ್ನೆಮಾಡತಕ್ಕ ವಿದ್ಯಾರ್ಥಿಗಳು ಈ ಅಂಶವನ್ನು ಪರ್ಯಾಲೋಚಿಸಬೇಕು. ನಮ್ಮ ನಡತೆಯು ಸಮೀಚೀನವಾಗಿರಬೇಕೆಂದು ನಾವು ಪ್ರಯತ್ನ ಮಾಡಬೇಕೇ ಹೊರತು ಇತರರು ದುರ್ಮಾರ್ಗಪ್ರವರ್ತಕರಾಗಿಧ್ದಾರೆಂದು ನಾವು ದುರ್ಮಾರ್ಗಪ್ರವರ್ತಕರಾಗಬಹುದೇ? ಬಾಲ್ಯದಲ್ಲಿ ಅಶಿಕ್ಷಿತರಾಗಿಯೂ, ಇಂದ್ರಿಯಪರಾವಶರಾಗಿಯೂ ಇರತಕ್ಕವರು ದೊಡ್ಡವರಾದಮೇಲೆ ಆ ಅಶಿಕ್ಷಿತೆಯಿಂದಲೂ ಇಂದ್ರಿಯಪರವಶದಿಂದಲೂ ಮಾಡಬಾರದ ಕೆಲಸಗಳನ್ನು ಮಾಡಿ ಅನುಭವಿಸುವುದಕ್ಕೆ ಅಸಾಧ್ಯವಾದ ಕ್ಲೇಶಗಳಿಗೆ ಗುರಿಯಾಗುವರು. ಅಂಥಾವುಗಳನ್ನು ತಪ್ಪಿಸಿಕೊಳ್ಳುವುದು ನಮಗೆ ಕರ್ತವ್ಯವಲ್ಲವೇ? ಉನ್ಮತ್ತರು ಸಮೀಚೀನವಾದ ಮಾರ್ಗವನ್ನು ಬಿಟ್ಟು ನಡೆಯುತ್ತಿರುವುದನ್ನೂ ನೋಡಿ ನಾವೂ ಉನ್ಮತ್ತರಾಗಬಹುದೆಂದು ಪ್ರಯತ್ನ ಮಾಡಬಹುದೇ? ತಂದೆತಾಯಿಗಳಾಗಲೀ ಗುರುಹಿರಿಯರಾಗಲೀ ಪ್ರಭುಗಳಾಗಲೀ ಅಥವಾ ಯಾರೇ ಆಗಲಿ ಧರ್ಮವಾಗಿಯೂ ಯುಕ್ತಾಯುಕ್ತರಾಗಿಯೂ ಇರತಕ್ಕ ಮಾತುಗಳನ್ನು ಹೇಳಿದರೆ ಅದನ್ನು ನೆರವೇರಿಸುವುದರಲ್ಲಿ ಅವಿಧೇಯತೆಯನ್ನು ತೋರಿಸಬಾರದು. ಯಾರು ವಿಧೇಯತೆಯನ್ನು ಕಲಿತುಕೊಳ್ಳುವರೋ ಅವರು ಸಕಲ ಇಷ್ಟಾರ್ಥಗಳನ್ನು ಹೊಂದುವರು.

ಬದುಕುವುದಕ್ಕೆ ವಿಧೇಯತೆ ಒಂದೇ ಸಾಲದು. ಬಾಲ್ಯದಲ್ಲಿಮರ್ಯಾದೆಯುಳ್ಳವರಾಗಿಯೂ, ಸಹನವುಳ್ಳವರಾಗಿಯೂ, ಇರಬೇಕು. ಜಪಾನ್ ದೇಶದಲ್ಲಿ ಮಕ್ಕಳಿಗೆ ಮಾತು ಬರುವುದಕ್ಕೆ ಮುಂಚೆಯೇ ಗುರುಹಿರಿಯರಲ್ಲಿ ಭಕ್ತಿಯನ್ನು ತೋರಿಸುವುದಕ್ಕೆ ಕಲಿಸುತಾ್ತರ. ಮತದ್ವೇಷ ಜಾತಿದ್ವೇಷಗಳಿಗೆ ಅವಕಾಶ

ವಿಲ್ಲದಂತೆ ಮಾಡುತ್ತಾರೆ. ಇಂದ್ರಿಯನಿಗ್ರಹದ ಮಹಿಮೆಯನ್ನು ಅನುಷ್ಠಾನಕ್ಕೆ ಬರುವಂತೆ ಮಾಡುತ್ತಾರೆ. ಪರೋಪಕಾರದ ಪ್ರಯೋಜನಗಳನ್ನು ತಿಳಿಸುತ್ತಾರೆ. ಇವುಗಳನ್ನೆಲ್ಲಾ ನಮ್ಮ ದೇಶದವಿದ್ಯಾರ್ಥಿಗಳ ಅನುಷ್ಠಾನಕ್ಕೆ ಬರುವಂತೆ ಸರಕಾರದವರು ತಂದೆತಾಯಿಗಳು ಮತ್ತು ಪಾಠಕರು ಮಾಡುವುದರಲ್ಲಿ ಶ್ರದ್ಧೆಯಿಂದ ಕೆಲಸಮಾಡಬೇಕು. ಈ ಉದ್ದೇಶವನ್ನು ಬೊಂಬಾಯಿ ಗವರ್ನಮೆಂಟಿನವರು ಪರ್ಯಾಲೋಚಿಸಿ ಕೆಲವು ರೂಲುಗಳನ್ನು ಏರ್ಪಡಿಸಿರುವರು. ಆ ರೂಲುಗಳು ಅನುಷ್ಠಾನಕ್ಕೆ ಬರುವಂತೆ ಪಾಠಕರು ಪಾಠಶಾಲೆಯ ಮ್ಯಾನೇಜರುಗಳು ತಂದೆತಾಯಿಗಳು ಎಲ್ಲರೂ ಸೇರಿ ಪ್ರಯತ್ನಮಾಡಿದರೆ ವಿದ್ಯಾರ್ಥಿಗಳು ವಿದ್ಯೆಯ ಜೊತೆಗೆ ವಿನಯಾದಿ ಸದ್ಗುಣಗಳನ್ನು ಸಂಪಾದಿಸಿಕೊಳ್ಳುವರು. ಈ ರೂಲುಗಳು ಯಾವುವೆಂದರೆ :—

(1) ವಿದ್ಯಾರ್ಥಿಗಳು ಪಾಠಶಾಲೆಗೆ ಕ್ರಮವಾಗಿ ಬರಬೇಕು. ಪಾಠಕರ ಆಜ್ಞೆಗೆ ಪ್ರತಿಯನ್ನು ಹೇಳದೆ ಅವರು ಹೇಳಿದಂತೆ ನಡೆಯಬೇಕು. (2) ವಿದ್ಯಾರ್ಥಿಗಳು ಪಾಠಶಾಲೆಯ ಹೊರಗೆ ಮಾಡಬಾರದ ಕೆಲಸಗಳನ್ನು ಮಾಡಿದಾಗ್ಗೂ ಆಡಬಾರದ ಮಾತುಗಳನ್ನು ಆಡಿದಾಗ್ಗೂ ಅದನ್ನು ಪಾಠಕರು ವಿಚಾರಿಸಿ ತಪ್ಪು ರುಜುವಾದರೆ ಅಂಥಾ ಹುಡುಗರಿಗೆ ಅವರು ಮಾಡಿದ ತಪ್ಪುಗಳಿಗೆ ಅನುರೂಪವಾದ ಶಿಕ್ಷೆಯನ್ನು ವಿಧಿಸಬೇಕು. (3) ಪಾಠಶಾಲೆಯ ಪಾಠಕರು ಮತ್ತು ಮ್ಯಾನೇಜರುಗಳು ವಿದ್ಯಾರ್ಥಿಗಳ ನಡೆನುಡಿಗಳ ವಿಷಯದಲ್ಲಿ ಮಾಡತಕ್ಕ ಏರ್ಪಾಡುಗಳಿಗೆ ಒಳಪಡಬೇಕು. ಹಾಗೆ ಒಳಪಡದೆ ಇರತಕ್ಕ ಮಕ್ಕಳನ್ನು ಪಾಠಕರು ಮತ್ತು ಮ್ಯಾನೇಜರುಗಳು ಪಾಠಶಾಲೆಯಿಂದ ವಜಾಮಾಡುವುದಕ್ಕೆ ಸ್ವತಂತ್ರರಾಗಿರತಕ್ಕದ್ದು. (4) ಕಶ್ಮಲವಾಗಿ ಇರತಕ್ಕ ಉಡಿಗೆಗಳನ್ನು ಹಾಕಿಕೊಂಡು ಬರತಕ್ಕ ವಿದ್ಯಾರ್ಥಿಗಳನ್ನು ಪಾಠಶಾಲೆಗೆ ಸೇರಿಸಕೂಡದು. ಅತ್ಯಂತ ಅಗ್ಗವಾದ ಬಟ್ಟೆಗಳನ್ನೂ ಕೂಡ ನಿರ್ಮಲವಾಗಿ ಇಟ್ಟುಕೊಳ್ಳುವುದು ಕಷ್ಟವಲ್ಲ. (5) ಮರ್ಯಾದೆಯಾಗಿರುವುದನ್ನೂ ಗುರುಹಿರಿಯರಿಗೆ ನಮಸ್ಕಾರ ಮಾಡುವುದನ್ನೂ ಪಾಠಕರು ಬಂದಕೂಡಲೇ ಎದ್ದು ನಿಂತುಕೊಂಡು ನಮಸ್ಕಾರ ಮಾಡುವುದನ್ನೂ ವಿದ್ಯಾರ್ಥಿಗಳು ಕಲಿಯಬೇಕು. ಈ ವಿಷಯದಲ್ಲಿ ನ್ಯೂನತೆಗೆ ಅವಕಾಶವನ್ನು ಕೊಡಕೂಡದು. (6) ಸಮೀಚೀನವಾದ ವರ್ತಮಾನ ಪತ್ರಿಕೆಗಳನ್ನು ಮಾತ್ರ ಪಾಠಶಾಲೆಗಳ ವಾಚಕಶಾಲೆಗಳಿಗೂ ವಿದ್ಯಾರ್ಥಿ ನಿಲಯಗಳ ವಾಚಕಶಾಲೆಗಳಿಗೂ ತರಿಸಬೇಕು. (7) ರಾಜಕೀಯ

ವಿಷಯವನ್ನು ಚರ್ಚಿಸತಕ್ಕ ಮೀಟಿಂಗುಗಳಿಗೆ ವಿದ್ಯಾರ್ಥಿಗಳು ಹೋಗದಂತೆ ಮಾಡಬೇಕು. ವಿದ್ಯಾರ್ಥಿಗಳ ಅನುಷ್ಠಾನಕ್ಕೋಸ್ಕರ ಬೊಂಬಾಯಿ ಗವರ್ನಮೆಂಟಿನವರು ವಿಧಿಸಿರತಕ್ಕ ಕಟ್ಟಲೆಗಳು ಈ ಏಳೂ ಆಗಿರುವುವು. ಈ ಏಳನೇ ರೂಲು ವಿದ್ಯಾರ್ಥಿಗಳು ತಮ್ಮ ಜ್ಞಾನಾಭಿವೃದ್ಧಿಗೋಸ್ಕರ ಮೀಟಿಂಗುಗಳನ್ನು ಮಾಡಿಕೊಂಡು ಚರಿತ್ರೆಗಳಲ್ಲಿ ಅಂತರ್ಗತವಾಗಿರತಕ್ಕ ವಿಷಯಗಳನ್ನು ಚರ್ಚಿಸಕೂಡದೆಂದು ಅರ್ಥವಲ್ಲ. ಈಗ ರಾಜ್ಯಭಾರ ಮಾಡತಕ್ಕವರ ನ್ಯೂನಾತಿರಿಕ್ತಗಳನ್ನೂ ಉದ್ಘಾಟಿಸಿ ಅವರ ವಿಷಯದಲ್ಲಿ ಅಸಮಾಧಾನವನ್ನು ಉಂಟುಮಾಡುವ ಮೀಟಿಂಗುಗಳಿಗೆ ಹೋಗಕೂಡದೆಂಬುವುದೇ ಇದರ ಅರ್ಥವು. ಈ ರೀತಿಯಲ್ಲಿ ಏರ್ಪಡುವುದು ಉತ್ತಮ. ವಿದ್ಯಾರ್ಥಿಗಳಿಗೆ ರಾಜ್ಯಭಾರದ ಮರ್ಮಗಳು ಸಮಗ್ರವಾಗಿ ತಿಳಿದಿರುವುದಿಲ್ಲ. ದೋಷೋದ್ಘಾಟನೆಗಳನ್ನು ಮಾತ್ರ ಕೇಳಿ ಗುಣಾಂಶಗಳು ತಿಳಿದುಕೊಳ್ಳದೇ ಇರಲು ಸರಕಾರದವರ ವಿಷಯದಲ್ಲಿ ಅನ್ಯಾಯವಾದ ಅಪ್ರೀತಿಯು ಹುಟ್ಟುವುದು. ಈರೀತಿಯಲ್ಲಿ ಪರಿಣಮಿಸುವುದು, ಕೆಟ್ಟದ್ದು. ಉಭಯಪಕ್ಷಗಳ ಗುಣದೋಷಗಳು ಗೊತ್ತಾದ ಹೊರತು ಯಾವ ನಿಷ್ಕರ್ಷೆಯನ್ನೂ ಧರ್ಮವಾಗಿಮಾಡುವುದಕ್ಕೆ ಆಗುವದಿಲ್ಲ. ಆದುದರಿಂದ ವಿದ್ಯಾರ್ಥಿದೆಶೆಯು ಪೂರೈಸಿ ಸರಕಾರದವರ ವಿದ್ಯಮಾನಗಳೆಲ್ಲಾ ಗೊತ್ತಾಗುವವರೆಗೂ ವಿದ್ಯಾರ್ಥಿಗಳು ರಾಜಕೀಯವಾದ ವಿಷಯಗಳಲ್ಲಿ ಸಾಮಾನ್ಯವಾದವು ತಿಳಿದುಕೊಳ್ಳಲೆಂದು ಬೊಂಬಾಯಿ ಗವರ್ನಮೆಂಟಿನವರು ಈ ರೀತಿಯಲ್ಲಿ ಏರ್ಪಾಡು ಮಾಡಿರುವರು. ಇದು ಸರ್ವರಿಗೂ ಉಪಾದೇಯವಾದದ್ದು. ಈ ವಿಧಿಗಳು ಅನುಷ್ಠಾನಕ್ಕೆ ಬರುವಂತೆ ಎಲ್ಲಾ ಪಾಠಕರು ಮಾಡಿ ನಮ್ಮ ವಿದ್ಯಾರ್ಥಿಗಳ ನಡೆನುಡಿಗಳು ನಿರಾಕ್ಷೇಪಣೀಯವಾಗಿ ಇರುವಂತೆ ಮಾಡಬೇಕು.

ನಮ್ಮ ಪುಟ್ಟ ಪ್ರಭು.

(The Little Duke.)

೭೪ನೆಯ ಪುಟದ ಶೇಷ.

ಸಾಯಂಕಾಲ ಪಕ್ಷಿಗಳು ಕೂಗುತ್ತಿದ್ದವು. ಎಂತಹ ಕಾಯಿಲೆ ಉಳ್ಳವನಾದರೂ ಅವನನ್ನು ಸ್ವಸ್ಥಮಾಡುವ ಗಾಳಿ ಬೀಸುತಿತ್ತು. ಆದರೆ ಏನುಫಲ? ರಿಚ್ಚರ್ಡನು ಸೊರಗಿ ಹೋಗಿದ್ದನು. ಪಾಪ! ತಲೆಯನ್ನು ಕೂಡ ಎತ್ತಲಾರ. ಕಾಯಿಲೆ ಬಿಟ್ಟು ಇನ್ನೂ ಸರಿಯಾಗಿ ಬಂದುವಾರವಾಗಿರಲಿಲ್ಲ. ಅಸ್ಮಂಡನಿಗೆ ಬಹಳ

ಕೊರತೆಯುಂಟಾಯಿತು. ಅಯ್ಯೋ ಒಂದು ಮೃತ್ಯುವಿನ ಬಾಯಿಯಿಂದ ತಪ್ಪಿಸಿ ಅನ್ಯಾಯವಾಗಿ ನಾನೇ ರಿಚ್ಚರ್ಡಿನ ಮರಣವನ್ನು ಉಂಟುಮಾಡುವೆನೋ, ಏನೊ! ಎಂದು ಯೋಚಿಸುತ್ತಿರುವಲ್ಲಿ ನಾರ್ಮಂಡಿಯು ಕಾಣಬಂತು. ನಾರ್ಮಂಡಿಗೂ ಫ್ರಾನ್ಸಿಗೂ ಮಧ್ಯದಲ್ಲಿ ಹರಿಯುತ್ತಿದ್ದ ಎಫ್ಟ್‌ನದಿಯು (Epte) ಕಾಣಬಂತು. ಅಸ್ಮಂಡನು ಬೇಗ ಆ ನದಿಯನ್ನು ದಾಟಿ ಅಲ್ಬರಿಕ್ (Alberic) ನ ಅರಮನೆಗೆ ಹೋಗಿ ಅಲ್ಲಿ ರಿಚ್ಚರ್ಡನನ್ನು ಮಲಗಿಸಿದನು.

ರಿಚ್ಚರ್ಡನು ಮಲಗಲೊಲ್ಲಾರ ಏಳಲೊಲ್ಲಾರ. ಕಡೆಗೆ ರಿಚ್ಚರ್ಡನು ಮಲಗಿಕೊಂಡನು. ಅಸ್ಮಂಡನು ಮಲಗಿಕೊಂಡನು. ಒಂದುದಿವಸವೆಲ್ಲಾ ಮಲಗಿದ್ದರು. ಆದಿವಸ ದೇವರ ಪ್ರಾರ್ಥನೆಗಾಗಿ ಹೋಗಿದ್ದ ಅಲ್ಬರಿಕ್‌ನು ರಿಚ್ಚರ್ಡ್ ಬಂದಿದ್ದನ್ನು ಕೇಳಿ ಸಂತೋಷದಿಂದ ಬಂದನು. ಮಾರನೆಯ ದಿವಸ ರಿಚ್ಚರ್ಡ್ ಎದ್ದನು. ನಾರ್ಮಂಡಿದೇಶದ ಜನಗಳೆಲ್ಲಾ ತಮ್ಮ ಧೊರೆಯನ್ನು ನೋಡಲು ಬಂದಿದ್ದರು. ಸ್ವಲ್ಪದಿವಸವಾದಮೇಲೆ ರೂನ್ ನಗರವು ಫ್ರೆಂಚರ ವಶವಾಯಿತೆಂದು ವರ್ತಮಾನಬಂದಿತು. ಆದರೆ ಸ್ವಲ್ಪದಿವಸದಮೇಲೆ ಫ್ರೆಂಚರು ಒಂದು ಯುದ್ಧದಲ್ಲಿ ಸೋತುಹೋದರು. ಲೂಯಿಯು ಸೆರೆ ಸಿಕ್ಕಿದನು.

ಒಂದು ವರುಷ ಸೆರೆಯಿದ್ದಮೇಲೆ ಲೂಯಿಯು ಬಹಳ ದುಡ್ಡನ್ನು ಕೊಟ್ಟು ಬಿಡಿಸಿಕೊಂಡು ಆದುಡ್ಡು ಕೊಡುವತನಕ ತನ್ನ ಇಬ್ಬರು ಮಕ್ಕಳನ್ನು ಅಡವಿಟ್ಟನು. ಸ್ವಲ್ಪದಿವಸದಲ್ಲಿಯೇ ಕಾರ್ಲೋಮಾನನು ಸತ್ತುಹೋದನು. ರಿಚ್ಚರ್ಡನು ಲೊಥೈರನನ್ನು ಬಿಡಿಸಿಬಿಟ್ಟನು.

ಬಹಳ ವರ್ಷವಾಯಿತು. ಲೂಯಿ ಮತ್ತು ಲೊಥೈರ್ ಇಬ್ಬರೂ ಮಾತಿಗೆ ತಪ್ಪಿದರು. ಸ್ವಲ್ಪದಲ್ಲಿಯೇ ಸತ್ತುಹೋದರು. ರಿಚರ್ಡನಿಗೆ 50 ವರ್ಷವಾಯಿತು. ಪೂರ್ವದಹಾಗೆಯೇ ಅವನು ಬಹು ಒಳ್ಳೇಯವನಾಗಿದ್ದನು. ಹೀಗಿರುವಾಗ ವಿಲಿಯಮ್ಮಿನ ಕೊಲೆಪಾತಕನು ಬಂದು ರಿಚ್ಚರ್ಡ್ನನ ಕ್ಷಮೆಯನ್ನು ಕೇಳಿದನು. ರಿಚ್ಚರ್ಡನು ಮನಃಪೂರ್ವಕವಾಗಿ ಕ್ಷಮಿಸಿ ತಾನು ಹುಟ್ಟಿದ್ದು ಸಾರ್ಥಕವಾಯಿತೆಂದು ತಿಳಿದುಕೊಂಡನು.

ಅಯ್ಯಾ ಮಗುವೇ, ಈ ಸಣ್ಣಕಥೆಯನ್ನು ಓದು. ರಿಚ್ಚರ್ಡಿನ ಹಾಗೆ ತಪ್ಪು ಮಾಡಿದವರನ್ನು ಕ್ಷಮಿಸು. ಅವನ ಹಾಗೆಯೇ ದಯಾಳುವಾಗಿರು. ಇಲ್ಲದೇ ಹೋದರೆ ಈ ಕಥೆಯನ್ನು ಓದಿ ಪ್ರಯೋಜನವೇನು?

B. S. R.

ವಿದ್ಯಾದಾಯಿನಿ.

(A MONTHLY JOURNAL)

ಭಾಗ ೧೨] ಮೇ—೧೯೦೯ [ಸಂಚಿಕೆ ೫.

ಆಕಾರ, ವರ್ಣ, ಸಂಖ್ಯೆ.

—:o:—

ಸಣ್ಣಮಕ್ಕಳಿಗೆ ಆಕಾರ ವರ್ಣ ಸಂಖ್ಯೆ ಇವುಗಳ ವಿಷಯದಲ್ಲಿ ಪಾಠಹೇಳುವುದು ಬಲುಕಷ್ಟವು. ಇವು ಸ್ಥೂಲವಸ್ತುಗಳಲ್ಲವಾದುದರಿಂದ ಈ ಸಣ್ಣ ವಯಸ್ಸಿನಲ್ಲಿ ಮಕ್ಕಳು ಇವನ್ನು ಸುಲಭವಾಗಿ ಗ್ರಹಿಸಲಾರರು. ಆದುದರಿಂದ ಈಯಂಶಗಳನ್ನು ಮಕ್ಕಳಿಗೆ ತಿಳಿಸುವ ಮಾರ್ಗಗಳನ್ನು ಉಪಾಧ್ಯಾಯರು ಬಲು ಎಚ್ಚರಿಕೆಯಿಂದ ಹುಡುಕಬೇಕಾಗಿರುವುದು. ಉಪಾಧ್ಯಾಯರಿಗೆ ಈ ಕಷ್ಟವಾದ ಕೆಲಸದಲ್ಲಿ ಸಹಾಯಮಾಡಲು ಫ್ರೋಬೆಲ್ಲನು ತನ್ನ ಕಿಂಡರ್‌ಗಾರ್ಟನ್ನಿನಲ್ಲಿ ಅತ್ಯುತ್ತಮವಾದ ಮಾರ್ಗಗಳನ್ನು ತೋರಿಸಿರುವನು.

ಆಕಾರದ ವಿಷಯದಲ್ಲಿ ಪಾಠವನ್ನು ಹೇಳಲು ಫ್ರೋಬೆಲ್ಲನು ನಮಗೆ ಎಷ್ಟರಮಟ್ಟಿಗೆ ಸಹಾಯಮಾಡಿರುವನೋ ನೋಡೋಣ. ಮೊದಲನೆಯ ಕರಣದಲ್ಲಿ ಫ್ರೋಬೆಲ್ಲನು ಆಕಾರಗಳಲ್ಲೆಲ್ಲ ಬಹು ಸುಲಭವಾದ ಚೆಂಡು ಅಥವಾ ಗೋಳದ ವಿಷಯವನ್ನು ಪ್ರಾರಂಭಿಸಿರುವನು. ಮಗುವು ಚೆಂಡನ್ನು ಪ್ರತಿದಿವಸವೂ ಆಟದಲ್ಲಿ ಉಪಯೋಗಿಸುವುದರಿಂದ ಈ ಆಕಾರವು ಅದಕ್ಕೆ ಬಹು ಬಳಿಕೆಯಾಗಿರುವುದು. ಮುಂದಿನಕರಣದಲ್ಲಿ ಅವನು ಗೋಳ, ಘನ, ಸಿಲಿಂದರ ಈಯಾಕಾರಗಳನ್ನು ತೆಗೆದುಕೊಂಡು ಇವುಗಳಲ್ಲಿ ಒಂದು ಮತ್ತೊಂದರಿಂದ ಉಂಟಾಗುವ ರೀತಿಯನ್ನು ತೋರ್ಪಡಿಸಿರುವನು. ಈಯಾಕಾರಗಳಲ್ಲಿ ಘನದಿಂದ ಸಿಲಿಂದರವೂ, ಸಿಲಿಂದರದಿಂದ ಗೋಳವೂ ಉಂಟಾಗುವುದನ್ನು ತೋರಿಸುವುದಕ್ಕಾಗಿ ಇವುಗಳಿಗೆ ದಾರವನ್ನು ಕಟ್ಟಿ ಸುತ್ತಿಸುವ ಉಪಾಯವನ್ನು ಹುಡುಕಿರುವನು. ಮೂರನೆಯ ಕರಣದಲ್ಲಿ ಫ್ರೋಬೆ

ಲ್ಲನು ಪದಾರ್ಥಗಳು ಗಾತ್ರದಲ್ಲಿವ್ಯತ್ಯಸ್ತವಾಗಿದ್ದರೂ ಆಕಾರದಲ್ಲಿ ಒಂದೇ ಆಗಿರಬಹುದು ಎಂಬ ಅಂಶವನ್ನು ಸ್ಪಷ್ಟಪಡಿಸಿರುವನು. ನಾಲ್ಕನೆಯ ಕರಣದಲ್ಲಿ ಲಯವೆಂಬ ಹೊಸ ಆಕೃತಿಯನ್ನು ಉಪಯೋಗಿಸಿರುವನು. ಐದನೆಯ ಕರಣದಲ್ಲಿ ಮಗುವು ತ್ರಿಭುಜ, ಪಿರಮಿಡ್, ಪ್ರಿಸಂಮುಂತಾದ ಹೊಸ ಆಕೃತಿಗಳನ್ನು ಕಲಿವುದು. ಆರನೆಯ ಕರಣದಲ್ಲಿ ಲಯದಿಂದಚೌಕಗಳೂ ಕಂಬಗಳೂ ಆಗುವರೀತಿಯು ಗೊತ್ತಾಗುವುದು. ಏಳನೆಯ ಕರಣದಲ್ಲಿ ನಾನಾವಿಧವಾದ ತ್ರಿಭುಜಗಳ ಲಕ್ಷಣಗಳು ಮಕ್ಕಳಿಗೆ ತಿಳಿಯುವುವು. ಉಳಿದಕರಣಗಳಲ್ಲೂ ಆಕಾರಗಳ ವಿಷಯವನ್ನು ತಿಳಿಸುವುದು ಒಂದು ಮುಖ್ಯೋದ್ದೇಶವಾಗಿರುವುದು. ಚಿತ್ರಬರೆವುದು, ಮಣ್ಣಿನ ಕೆಲಸ ಇವು ಆಕಾರದ ವಿಷಯವನ್ನು ತಿಳಿಸಲು ಬಲು ಅನುಕೂಲವಾದ ಕೈಕೆಲಸಗಳಾಗಿರುವುವು. ಮಕ್ಕಳು ತೋಟದಲ್ಲಿ ಕೆಲಸಮಾಡುವಾಗ ಅದರಲ್ಲಿರುವ ಎಲೆಗಳು, ಹೂವುಗಳು, ಹಣ್ಣುಗಳು, ಇವುಗಳಸಹಾಯದಿಂದ ಆಕಾರದ ವಿಷಯದಲ್ಲಿ ವಿಶೇಷವಾಗಿ ಜ್ಞಾನವನ್ನು ಸಂಪಾದಿಸುವರು.

ಮಕ್ಕಳಿಗೆ ಬಣ್ಣಗಳ (ವರ್ಣಗಳ) ಜ್ಞಾನವನ್ನುಂಟುಮಾಡುವುದಕ್ಕೆ ಕಿಂಡರ್‌ಗಾರ್ಟ್ನ್ ಕ್ರಮದಲ್ಲಿ ಯಾವ ಅನುಕೂಲಗಳಿರುವುವೋ ನೋಡೋಣ. ವರ್ಣವು ಕೇವಲ ಸಣ್ಣವಯಸ್ಸಿನಿಂದ ಮಗುವನ್ನು ಆಕರ್ಷಿಸುವುದರಿಂದ ಫ್ರೋಬೆಲ್ಲನು ಮೊದಲನೆಯ ಕರಣದಲ್ಲೇ ಈ ವಿಷಯವನ್ನು ತೆಗದುಕೊಂಡಿರುವನು. ಈ ಕರಣದಲ್ಲಿ ಮೂರು ಶುದ್ಧ ಬಣ್ಣಗಳೂ ಮೂರು ಮಿಶ್ರವರ್ಣಗಳೂ ಇರುವುವು. ಕೇವಲ ಸಣ್ಣಮಕ್ಕಳಿಗೆ ಶುದ್ಧ ಬಣ್ಣಗಳಿಗೂ ಮಿಶ್ರವರ್ಣಗಳಿಗೂ ಇರುವ ವ್ಯತ್ಯಾಸವನ್ನು ತಿಳಿಸಬೇಕಾದುದಿಲ್ಲ. ಅವರು ಈ ಬಣ್ಣಗಳ ಹೆಸರುಗಳನ್ನು ತಿಳಿದುಕೊಂಡು ಈ ಬಣ್ಣಗಳುಳ್ಳ ತಮಗೆ ಬಳಕೆಯಾದ ವಸ್ತುಗಳ ಹೆಸರನ್ನು ಹೇಳಿದರೆ ಸಾಕಾಗಿರುವುದು. ಇನ್ನು ಸ್ವಲ್ಪ ವಯಸ್ಸಾದಮೇಲೆಶುದ್ಧ ಬಣ್ಣಗಳಿಂದ ಮಿಶ್ರವರ್ಣಗಳು ಬರುವಂತೆ ಬಣ್ಣಗಳನ್ನು ಸೇರಿಸುವನಿಯಮಗಳನ್ನು ತಿಳಿಸಬಹುದು. ಈ ನಿಯಮಗಳನ್ನು ಮಕ್ಕಳೆದುರಿಗೆ ಕ್ರಮವಾದ ಪರೀಕ್ಷೆಗಳನ್ನು ನಡೆಸಿ ತೋರಿಸಬೇಕು. ನಿದರ್ಶನವಾಗಿ ಹಳದಿಯ ಬಣ್ಣವನ್ನೂನೀಲಿಯಬಣ್ಣವನ್ನೂ ನೀರಿನಲ್ಲಿ ಕರಗಿಸಿ ಈ ಎರಡು ನೀರುಗಳನ್ನೂ ಮಿಶ್ರಮಾಡುವುದರಿಂದ ಹಸುರುಬಣ್ಣವಾಗುವುದನ್ನು ತೋರಿಸಬಹುದು. ಹೀಗೆಯೇ ಇತರ ಮಿಶ್ರವರ್ಣಗಳಾಗುವುದನ್ನು ತೋರಿಸಬೇಕು. ಮಕ್ಕಳು ಶುದ್ಧ ಬಣ್ಣದ ಒಂದು ವೃತ್ತವನ್ನು ಬರೆದು ಅದರಮೇಲೆ ಮತ್ತೊಂದು ಶುದ

ಬಣ್ಣವನ್ನು ಹಾಕುವುದರಿಂದಯಾವ ಮಿಶ್ರವರ್ಣವಾಗುವುದು ಎಂಬುದನ್ನು ಪರೀಕ್ಷಿಸಬೇಕು.

ಕಾಗದದಿಂದ ಹೆಣೆಯುವುದು, ಮಣಿಪೋಣಿಸುವುದು, ಬಟ್ಟೆಯಿಂದ ನೂಲು ತೆಗೆವುದು, ಬಣ್ಣದ ಸುಣ್ಣಗಳಿಂದ ಚಿತ್ರ ಬರೆಯುವುದು, ಬ್ರಷ್‌ವರ್ಕ್— ಈ ಕೆಲಸಗಳಿಂದ ಮಕ್ಕಳಿಗೆ ಬಣ್ಣಗಳ ಹೊಂದಿಕೆಯನ್ನು ತಿಳಿಸುವುದಕ್ಕೆ ವಿಶೇಷ ಅನುಕೂಲಗಳಿರುವುವು. ಆದರೆ ಮಕ್ಕಳಿಗೆ ಬಣ್ಣಗಳ ವಿಷಯವನ್ನು ತಿಳಿಸಲು ಪಾಠಶಾಲೆಯ ತೋಟದಷ್ಟು ಉತ್ತಮವಾದ ಸಹಾಯವು ಮತ್ತಾವುದೂ ಇಲ್ಲ. ತೋಟದಲ್ಲಿರುವ ಹೂವುಗಳಲ್ಲಿ ಕಾಣುವ ಬಣ್ಣಗಳ ಪಾರಿಶುದ್ಧ್ಯವು ನಾವು ಉಪಯೋಗಿಸುವ ಬಣ್ಣಗಳಿಗೆ ಎಂದಿಗೂ ಬರಲಾರದು. ಮತ್ತು ಪ್ರಕೃತಿಯಲ್ಲಿ ಇರುವ ವರ್ಣಗಳ ಹೊಂದಿಕೆಯು ಮತ್ತೆಲ್ಲೂ ಇರುವುದಿಲ್ಲ. ತೋಟಕ್ಕೆ ಮಕ್ಕಳನ್ನು ಕರೆದುಕೊಂಡು ಹೋದಾಗ ಬಿಳೀಸೇವಂತಿಗೇ ಹೂವಿನ ಮಧ್ಯದಲ್ಲಿ ಹಳದಿಯ ಕುಸುಮವು ಹೇಗೆ ಹೊಂದಿಕೊಂಡಿರುವುದು, ನೀಲೀ ಕಾಸ್ಮಾಸ್ ಹೂವಿನ ಮಧ್ಯದಲ್ಲಿ ಹಳದಿಯ ಕುಸುಮವು, ಅಂದವಾಗಿ ಕಾಣಿಸುವುದು. ಈ ವಿಧವಾದ ಅಂಶಗಳಿಗೆ ಮಕ್ಕಳ ಗಮನವನ್ನು ಎಳೆಯಬೇಕು. ವರ್ಣದ ವಿಷಯವನ್ನು ತಿಳಿಸುವಾಗ ನಾನಾವರ್ಣಗಳಪಠಗಳು, ಗಾಜುಗಳು, ನೂಲುಗಳು, ಇವೇ ಮೊದಲಾದ ನಿದರ್ಶನಗಳನ್ನು ಉಪಯೋಗಿಸಬೇಕು. ಮಕ್ಕಳು ತಮ್ಮ ಬೊಂಬೆಗಳನ್ನು ಅಲಂಕರಿಸಿರುವಾಗ ವರ್ಣದ ಹೊಂದಿಕೆಯನ್ನು ಅವರೇ ನಿರ್ಣಯಿಸುವಂತೆ ಪ್ರೋತ್ಸಾಹಿಸಬೇಕು. ನಾನಾವಿಧವಾದ ವರ್ಣಗಳುಳ್ಳ ವಸ್ತುಗಳನ್ನು ಮೇಜಿನಮೇಲಿಟ್ಟು ಇವುಗಳಲ್ಲಿ ನಾವು ಕೇಳುವ ವರ್ಣಕ್ಕಿರುವ ವಸ್ತುವನ್ನು ಮಕ್ಕಳು ಆರಿಸುವಂತೆ ಮಾಡಬೇಕು.

ಆಕಾರವರ್ಣ ಇವುಗಳ ವಿಷಯವಾಗಿ ಪಾಠನಡೆಯುವಾಗ ಇವೆರಡರನ್ನೂ ಸೇರಿಸಿ ಮುಂದೆ ಬರೆದಿರುವಂತೆ ಕಥೆಗಳನ್ನೂ ಹೇಳಬಹುದು:—ರಾಮಯ್ಯನೆಂಬುವನಿಗೆ ಒಂದು ತೋಟವಿತ್ತು. ಆ ತೋಟದಲ್ಲಿ ಅವನು ಭೀಮ, ಸೋಮ, ಶಂಕರಎಂಬ ತನ್ನ ಮೂರು ಮಕ್ಕಳಿಗೂ ಗಿಡಗಳನ್ನು ನಡುವುದಕ್ಕೆ ಸ್ವಲ್ಪಸ್ಥಳವನ್ನು ಕೊಟ್ಟನು. ಭೀಮನು ಒಂದು ದುಂಡಾದ ಪಾತಿಯನ್ನು ಮಾಡಿ ಅದರಲ್ಲಿ ಕೆಂಪು ಹೂಬಿಡುವ ಗುಲಾಬೀಗಿಡವನ್ನು ನಟ್ಟನು. ಸೋಮನು ಚೌಕವಾದ ಪಾತಿಯನ್ನು ಮಾಡಿ ಅದರಲ್ಲಿ ಹಳದೀ ಹೂ ಬಿಡುವ ಸೂರ್ಯಕಾಂತಿ ಗಿಡವನ್ನು ಸಾಲುಸಾಲಾಗಿ ನಟ್ಟನು. ಶಂಕರನು ಅಂಡಾಕೃತಿಯುಳ್ಳ ಪಾತಿಯನ್ನು ಮಾಡಿ ಆ ಉದ್ದವಾದ

ಪಾತಿಯ ಸುತ್ತಲೂ ಹಳದೀ ಹೂಬಿಡುವ ಸೇವಂತಿಗೆ ಗಿಡವನ್ನು ನಟ್ಟು ಮಧ್ಯದಲ್ಲಿ ನೀಲೀ ಹೂಬಿಡುವ ತುಂಬೇಗಿಡವನ್ನು ನಟ್ಟನು. ಈ ಮೂರು ಹುಡುಗರಿಗೆ ಕಾವೇರಿ, ಭಾಗೀರಥಿ, ಎಂಬ ಇಬ್ಬರು ತಂಗಿಯರಿದ್ದರು. ಅವರೂ ತೋಟ ಮಾಡಬೇಕೆಂದು ಅಪೇಕ್ಷಿಸಿದ್ದರಿಂದ ರಾಮಯ್ಯನು ಅವರಿಗೂ ಸ್ಥಳವನ್ನು ಕೊಟ್ಟನು. ಕಾವೇರಿಯು ಅರ್ಧವೃತ್ತಾಕಾರವಾದ ಪಾತಿಯನ್ನು ಮಾಡಿ ಅದರಲ್ಲಿ ಕಿತ್ತಲೇ ಬಣ್ಣದ ಹೂಬಿಡುವ ಚೆಂಡುಮಲ್ಲಿಗೆ ಗಿಡವನ್ನು ನಟ್ಟಳು. ಭಾಗೀರಥಿಯು ಬಿದಿಗೇ ಚಂದ್ರನ ಆಕಾರದಲ್ಲಿರುವ ಪಾತಿಯನ್ನು ಮಾಡಿ ಅದರಲ್ಲಿ ಕೆಂಪು, ಊದಾ, ಬಿಳುಪು ಮಿಶ್ರವಾದ ಹೂಬಿಡುವ ಕರ್ನಕುಂಡಲದ ಗಿಡಗಳನ್ನು ನಟ್ಟಳು. ಈ ಗಿಡಗಳೆಲ್ಲಾ ಬೆಳೆದು ಹೂ ಬಿಟ್ಟಮೇಲೆ ತೋಟವು ನೋಡುವುದಕ್ಕೆ ಬಲು ಅಂದವಾಗಿ ಕಾಣುತ್ತಿತ್ತು. ಈ ವಿಧವಾದ ತೋಟವನ್ನು ಮಾಡಲು ನಿಮಗೆ ಆಶೆಯಿಲ್ಲವೆ? ಹೀಗೆ ಕಥೆಯನ್ನು ಹೇಳಿ ಈ ಕಥೆಯಲ್ಲಿ ಬರುವ ಆಕೃತಿಗಳಿಗೆ ತಕ್ಕ ಚಿತ್ರಗಳನ್ನು ಮಕ್ಕಳಿಂದ ಕಾಗದದಲ್ಲಿ ಬರೆಸಿ ಆ ಚಿತ್ರಗಳ ಮಧ್ಯದಲ್ಲಿ ಕಾಗದದಲ್ಲಿ ಕತ್ತರಿಸಿದ ಮೇಲೆ ಹೇಳಿರುವ ಹೂಗಳನ್ನು ಅಂಟಿಸುವಂತೆ ಮಾಡಬಹುದು.

ಸಂಖ್ಯೆ.

ಕಿಂಡರ್‌ಗಾರ್ಟರ್ ಉಪಕರಣಗಳಲ್ಲಿ ಸೇರಿರುವ ಇಟ್ಟಿಗೆಗಳು, ಬಳೆಕಡ್ಡಿಗಳು, ರೆಟ್ಟುಗಳು, ಮಣಿಗಳು ಮುಂತಾದ ವಸ್ತುಗಳನ್ನು ಮಕ್ಕಳಿಗೆ ಸಂಖ್ಯೆಗಳ ವಿಷಯವಾಗಿ ಪಾಠ ಹೇಳುವುದಕ್ಕೂ ಉಪಯೋಗಿಸಿಕೊಳ್ಳಬಹುದು. ಇವುಗಳಲ್ಲಿ ಕೆಲವು ಸಾಮಗ್ರಿಗಳಿಂದ ಮಕ್ಕಳಿಗೆ ಭಿನ್ನರಾಶಿಯ ಜ್ಞಾನವನ್ನೂ ಉಂಟುಮಾಡಬಹುದು. ಇವುಗಳ ಜತೆಗೆ ಚುಕ್ಕೆಗಳ ಪಠ, ಗುಂಡಿನ ಚೌಕಟ್ಟು, ಬಿಡಿಗೋಲಿಗಳು, ಗೋಲಿಗಳ ಚೀಲ, ಬಿಡಿ ಕಡ್ಡಿಗಳು, ಕಡ್ಡಿಗಳ ಕಂತೆ, ಇವನ್ನೂ ಉಪಯೋಗಿಸಿಕೊಂಡರೆ ಮಕ್ಕಳಿಗೆ ಸಂಖ್ಯೆಗಳ ವಿಷಯದಲ್ಲಿ ಜ್ಞಾನವನ್ನುಂಟುಮಾಡಲು ವಿಶೇಷ ಅನುಕೂಲವಾಗುವುದು. ಹೀಗೆ ಕಿಂಡರ್‌ಗಾರ್ಟರ್ ಕ್ರಮದಲ್ಲಿ ಗಣಿತಪಾಠವನ್ನು ನಡೆಸುವುದರಿಂದ ಮಕ್ಕಳಿಗೆ ಸಂಖ್ಯೆಗಳನ್ನು ಕಲಿಯುವಾಗ ಬೇಸರವುಂಟಾಗುವುದಿಲ್ಲ. ಅಂಕಗಣಿತವನ್ನು ಕಲಿಸುವುದಕ್ಕೆ ಸ್ಥೂಲ ಪದಾರ್ಥವನ್ನು ಉಪಯೋಗಿಸಬೇಕೆಂಬುದನ್ನು ಅನೇಕ ಉಪಾಧ್ಯಾಯರು ತಿಳಿದಿರುವರು. ಆದರೆ ಸ್ಥೂಲಪದಾರ್ಥದ ಉಪಯೋಗವು ಅನೇಕವೇಳೆ ಗುಂಡಿನ ಚೌಕಟ್ಟು,

ಒಂದರಲ್ಲಿಮಾತ್ರ ಮುಗಿಯುವುದು. ಹೀಗೆ ಕೆಲವು ದಿವಸಗಳು ನಡೆದಮೇಲೆ ಗುಂಡಿನ ಚೌಕಟ್ಟನ್ನು ನೋಡಿದರೆ ಮಕ್ಕಳಿಗೆ ಬೇಸರವುಂಟಾಗುವುದು. ನಾನಾವಿಧವಾದ ಸ್ಥೂಲ ಪದಾರ್ಥಗಳನ್ನು ಸಮಯೋಚಿತವಾಗಿ ಉಪಯೋಗಿಸುವ ರೀತಿಯನ್ನು ಉಪಾಧ್ಯಾಯರು ತಿಳಿದಿರಬೇಕು. ನಿದರ್ಶನವಾಗಿ ರೂಪಾಂತರಕರಣವನ್ನು ತಿಳಿಸುವಾಗ ರಟ್ಟಿನಿಂದ ಮಾಡಿದ ಗಿಲೀಟು ರೂಪಾಯಿ, ಅರ್ಧರೂಪಾಯಿ, ಕಾಲು ರೂಪಾಯಿಗಳನ್ನು ಉಪಯೋಗಿಸುವುದಕ್ಕೂ, ಗುಂಡಿನ ಚೌಕಟ್ಟನ್ನು ಉಪಯೋಗಿಸುವುದಕ್ಕೂ ಇರುವ ವ್ಯತ್ಯಾಸವು ಸ್ಪಷ್ಟವಾಗಿಯೇ ಇರುವುದು. ಕೃತಕನಾಣ್ಯಗಳನ್ನು ಉಪಯೋಗಿಸಿ ನಡೆಸಿದ ರೂಪಾಂತರಕರಣದ ಪಾಠದಲ್ಲಿರುವ ಆದರವು ಗುಂಡಿನ ಚೌಕಟ್ಟನ್ನುಪಯೋಗಿಸಿ ಅಥವಾ ಯಾವ ಉಪಕರಣವೂ ಇಲ್ಲದೆ ನಡೆಸಿದ ಪಾಠದಲ್ಲಿ ಎಂದಿಗೂ ಇರಲಾರದು.

ಮೇಲೆ ಹೇಳಿದಂತೆ ಸ್ಥೂಲಪದಾರ್ಥಗಳ ಉಪಯೋಗದಿಂದ ಸಂಖ್ಯೆಯ ಪಾಠವನ್ನು ನಡೆಸಿದಮೇಲೆ ಈ ಸಂಖ್ಯೆಯನ್ನು ಮಕ್ಕಳ ಮನಸ್ಸಿನಲ್ಲಿ ಸ್ಥಿರಪಡಿಸಲು ಅನುಕೂಲವಾದ ಆಟಗಳನ್ನಾಡಿಸಬಹುದು; ಮತ್ತು ಕಥೆಗಳನ್ನು ಹೇಳಬಹುದು. ಹೀಗೆ ಆಟದ ರೂಪದಲ್ಲಿ ಗಣಿತಪಾಠವನ್ನು ನಡೆಸುವುದರಿಂದ ಈಗ ಈ ಪಾಠವನ್ನು ಬೋಧಿಸುವಾಗ ಉಪಾಧ್ಯಾಯರಿಗೆ ಕಾಣುವ ಶ್ರಮವೆಲ್ಲಾ ತೊಲಗುವದೆಂದು ತೋರುವುದು. ಮೇಲೆ ಹೇಳಿದ ರೂಪಾಂತರಕರಣದ ವಿಷಯವನ್ನು ಮಕ್ಕಳಿಗೆ ತಿಳಿಸುವಾಗ ಅವರ ಕೈಗೆ ಗಿಲೀಟು ರೂಪಾಯಿ, ಅರ್ಧರೂಪಾಯಿ ಮೊದಲಾದುವನ್ನು ಕೊಟ್ಟು ಅಂಗಡಿಯ ಆಟವನ್ನು ಆಡಿಸಬಹುದು. ಸಂಖ್ಯೆಯ ಪಾಠದ ಜತೆಯಲ್ಲಿ ಕಥೆಯನ್ನೂ ಆಟವನ್ನೂ ಹೊಂದಿಸಿಕೊಳ್ಳುವುದಕ್ಕೆ ಮುಂದೆ ಒಂದು ನಿದರ್ಶನವನ್ನು ಕೊಡುವೆವು.

ಕಥೆ.

ಒಂದು ಹಳ್ಳಿಯಲ್ಲಿ ಒಬ್ಬ ಕುರುಬನಿದ್ದನು. ಆ ಕುರುಬನ ಹತ್ತಿರ ಎಂಟು ದೊಡ್ಡ ಕುರಿಗಳೂ ಮೂರು ಮರಿಗಳೂ ಇರುವ ಒಂದು ಸಣ್ಣ ಮಂದೆ ಇತ್ತು. ಈ ಮಂದೆಯನ್ನು ಕಾಯುವುದಕ್ಕೆ ಅವನು ಎರಡು ನಾಯಿಗಳನ್ನು ಇಟ್ಟುಕೊಂಡಿದ್ದನು. ಈ ಅಂಗಳದಲ್ಲಿ ಕುರಿಗಳು ನೀರು ಕುಡಿಯುವುದಕ್ಕಾಗಿ ಒಂದು ಸಣ್ಣ ನೀರಿನ ತೊಟ್ಟಿಯನ್ನು ಇಡಿಸಿದ್ದನು. ಒಂದು ದಿವಸ ಕುರುಬನು ಮಂದೆಯನ್ನು ಹೊರಗೆ ಅಟ್ಟಿಕೊಂಡು ಹೋಗಿ ಸಾಯಂಕಾಲದವರೆಗೂ ಮೇಯಿಸಿ ಮನೆಗೆ ಅಟ್ಟಿ

ಕೊಂಡು ಬಂದನು. ಬರುವಾಗ ಕುರಿಗಳು ಮೊದಲು ಓಡಿಬಂದವು. ಒಳಕ್ಕೆ ಮೊದಲು ಬಂದ ಪ್ರಾಣಿಗಳೆಷ್ಟು ? ಆಮೇಲೆ "ಬ್ಯಾ, ಬ್ಯಾ," ಎಂದು ಅರಚಿಕೊಳ್ಳುತ್ತಾ ಮರಿಗಳು ಒಳಕ್ಕೆ ಓಡಿಬಂದವು. ಈಗ ಎಷ್ಟು ಪ್ರಾಣಿಗಳಾದುವು? ಅಷ್ಟು ಹೊತ್ತಿಗೆ ಈ ಕುರಿಗಳನ್ನು ಕಾಯುವುದಕ್ಕಾಗಿ ಹೋಗಿದ್ದ ನಾಯಿಗಳೂ "ಬವ್, ಬವ್," ಎಂದು ಕೂಗುತ ಒಳಕ್ಕೆ ಬಂದುವು. ಈಗ ಎಷ್ಟು ಕುರಿಗಳು, ಎಷ್ಟು ಮರಿಗಳು, ಎಷ್ಟು ನಾಯಿಗಳು ಒಳಗಿದ್ದವು? ಈ ಕುರಿಗಳಲ್ಲಿ ಕೆಲವು ಓಡಿಓಡಿ ದಣಿದಿದ್ದುದರಿಂದ ತೊಟ್ಟಿಯ ಬಳಿಗೆ ಹೋಗಿ ನೀರು ಕುಡಿಯುತ್ತಿದ್ದವು. ಈ ಸಮಯಕ್ಕೆ ಸರಿಯಾಗಿ ಈ ಕುರಿಗಳನ್ನು ತಿನ್ನಬೇಕೆಂದು ಕಾದುಕೊಂಡಿದ್ದ ಒಂದು ತೋಳವು ನಾಲಗೆಯನ್ನು ನೀಡಿಕೊಂಡು ಬಲುರೋಷದಿಂದ ಒಳಗೆ ನುಗ್ಗಿತು. ಈಗ ಒಳಗೆ ಯಾವಪ್ರಾಣಿಗಳು ಎಷ್ಟೆಷ್ಟಿವೆ? ಆದರೇನು ! ತೋಳದ ಪ್ರಯತ್ನವು ಸಾಗಲಿಲ್ಲ. ನಾಯಿಗಳೆರಡೂ ಘಟ್ಟಿಯಾಗಿ ಬೊಗಳುತ್ತಾ ತೋಳದ ಮೇಲೆ ಬಿದ್ದು ಅದನ್ನು ಕಡಿದು ಓಡಿಸಿಬಿಟ್ಟವು. ಮತ್ತು ಅದನ್ನು ಅಟ್ಟಿಕೊಂಡು ಅದರ ಹಿಂದೆಯೇ ಓಡಿಹೋದುವು, ಈಗ ಅಲ್ಲಿ ಉಳಿದ ಪ್ರಾಣಿಗಳೆಷ್ಟು ?

ಹೀಗೆ ಕಥೆಯನ್ನು ಹೇಳಿದಮೇಲೆ ಅದರ ಅಭಿಪ್ರಾಯವನ್ನು ಆಟದರೂಪದಲ್ಲಿ ತೋರಿಸಬಹುದು. ಕೆಲವು ಹುಡುಗರು ಅಂಗಳದ ಗೋಡೆಯಾಗಿ ನಿಂತುಕೊಳ್ಳುವದು. ಇನ್ನು ಕೆಲವರು ಮಧ್ಯದಲ್ಲಿ ತೊಟ್ಟಿಯಾಗಿ ನಿಂತುಕೊಳ್ಳುವುದು, ಆಮೇಲೆ ಕೆಲವರು ಕುರಿಗಳಾಗಿ ಬಂದು ತೊಟ್ಟಿಯಲ್ಲಿ ನೀರು ಕುಡಿಯುವಂತೆ ನಟಿಸುವುದು. ಆಮೇಲೆ ಇಬ್ಬರು ಹುಡುಗರು ನಾಯಿಗಳಂತೆ ನಟಿಸುತ್ತಾ ಒಳಕ್ಕೆ ಓಡಿಬರುವುದು ಹೀಗಿರುವಾಗ ಒಬ್ಬ ದೊಡ್ಡ ಹುಡುಗನು ಉಗ್ರವಾದ ಮುಖವನ್ನು ಮಾಡಿಕೊಂಡು ತೋಳನಂತೆ ನಟಿಸುತ್ತಾ ಒಳಕ್ಕೆ ಬಂದು ಕುರಿಗಳಮೇಲೆ ಬೀಳುವುದು, ನಾಯಿಗಳಂತೆ ನಟಿಸುವ ಹುಡುಗರು ಇವನನ್ನು ಹೊರಕ್ಕೆ ಅಟ್ಟುವುದು, ಹೀಗೆ ಆಟವನ್ನು ಆಡಿಸಬಹುದು. ಈ ಆಟಕ್ಕೆ ತಕ್ಕ ಗಾನವಿದ್ದರೆ ಅದನ್ನೂ ಹೇಳಿಕೊಡಬಹುದು.

ಮಕ್ಕಳನ್ನು ತೋಟಕ್ಕೆ ಕರೆದುಕೊಂಡು ಹೋದಾಗ ಅಲ್ಲಿರುವ ಹೂವು, ಕಾಯಿ, ಹಣ್ಣು, ಎಲೆ, ಮುಂತಾದುವುಗಳನ್ನು ಎಣಿಸುವಾಗಲೂ ಇವುಗಳಲ್ಲಿ ಕೆಲವು ಹೋದಮೇಲೆ ಉಳಿದುವುಗಳನ್ನು ಎಣಿಸುವಾಗಲೂ, ಬೀಜಗಳನ್ನು ನಡುವ ಸಾಲಿಗೆ ನಾಲ್ಕು ಬೀಜಗಳನ್ನು ನಡಬೇಕಾದರೆ ಐದುಸಾಲಿಗೆ ಎಷ್ಟು

ಬೀಜಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಗೊತ್ತುಮಾಡುವಾಗಲೂ, ತೋಟಕ್ಕೆ ಬೇಕಾದ ಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ಅಂಗಡಿಗೆ ಹೋದಾಗಲೂ, ಸಂಖ್ಯೆಗಳ ವಿಷಯವನ್ನು ತಿಳಿಯುವುದಕ್ಕೆ ವಿಶೇಷ ಅವಕಾಶವಿರುವುದು.

ಈ ರೀತಿಯಲ್ಲಿ ಸಂಖ್ಯೆಗಳ ವಿಷಯವನ್ನು ಕಲಿಯುತಿರುವಾಗ ಮಕ್ಕಳು ಸಂಖ್ಯೆಗಳನ್ನು ಬರೆಯುವುದನ್ನೂ ಜತೆಯಲ್ಲೇ ಕಲಿಯಬೇಕೆಂಬ ನಿರ್ಬಂಧವಿಲ್ಲ. ಸಂಖ್ಯೆಗಳ ಬರವಣಿಗೆಯನ್ನು ಐದಾರು ವಯಸ್ಸಾದಮೇಲೆ ಕಲಿಸಬಹುದು. ಅಲ್ಲಿಯ ವರೆಗೆ ಮಕ್ಕಳು ಸಂಖ್ಯೆಯ ಆಕೃತಿಯನ್ನು ಬಳೆ ಕಡ್ಡಿಗಳ ಆಟ, ನೂಲಿಡುವ ಆಟ, ಇಂತಹ ಆಟಗಳಿಂದ ತೋರ್ಪಡಿಸಿದರೆ ಸಾಕು.

ಸಂಖ್ಯೆಯ ಪಾಠವು ಬಲು ಕಷ್ಟವಾಗುವುದೆಂದು ಎಲ್ಲ ಉಪಾಧ್ಯಾಯರಿಗೂ ತಿಳಿದೇಇರುವುದು. ಈ ಪಾಠವನ್ನು ನಡೆಸಲು, ಇಲ್ಲಿ ಸ್ವಲ್ಪಮಟ್ಟಿಗೆ ವಿವರಿಸಿರುವ ಕಿಂಡರ್‌ಗಾರ್ಟೆನ್ ಕ್ರಮವನ್ನು ಅನುಸರಿಸಿದರೆ ಉಪಾಧ್ಯಾಯರ ಕೆಲಸವು ಸುಲಭವಾಗುವುದೆಂದು ತೋರುವುದು.—

ಕಿಂಡರ್‌ಗಾರ್ಟೆನ್ ಕಥೆಗಳು.

(ಪ್ರಕೃತಿವಿಮರ್ಶೆ)

ನಮ್ಮ ಸರ್ಕಾರದವರು ಹೋದವರ್ಷ ಉಪಾಧ್ಯಾಯರುಗಳ ಉಪಯೋಗಕ್ಕಾಗಿ ಬೆಂಗಳೂರು ಮೈಸೂರುಗಳಲ್ಲಿ ನಡೆಸಿದ ಕಿಂ. ಗಾ॥ ಉಪನ್ಯಾಸಗಳಂತೆ ನೋಡಿದರೆ ಈಗಿನ ಹೊಸಪದ್ಧತಿಗೂ ಹಿಂದಿನದಕ್ಕೂ ವಿಶೇಷ ಭೇದತೋರುವುದು. ಮತ್ತು ಅನೇಕ ಸಂಗತಿಗಳು ಹೊಸದಾಗಿಯೂ ಬಂದಿವೆ. ಒಟ್ಟು ಸ್ಥೂಲವಾಗಿ ನೋಡಿದರೆ ಹಿಂದಿನ ಅಂಶಗಳೆಲ್ಲಾ ಕಿಂ. ಗಾ॥ ನಲ್ಲೇ ಅಡಕವಾಗಿದೆ ಎನ್ನಬಹುದು. ಇದರಲ್ಲಿ ಎಲ್ಲಾ ಪಾಠಗಳನ್ನೂ ಕೈಕೆಲಸಗಳನ್ನೂ ಪ್ರಕೃತಿವಿಮರ್ಶೆಯೆಂಬ ಒಂದೇ ವಿಷಯಕ್ಕೆ ಹೊಂದಿಸಬೇಕು. ಪ್ರಕೃತಿವಿಮರ್ಶೆಯೆಂದರೆ—ಪ್ರಪಂಚದಲ್ಲಿ ದೇವರು ಸೃಷ್ಟಿಸಿರುವ ಯಾವುದಾದರೂ ಪ್ರಾಣಿ, ಸಸ್ಯ, ಧಾತು, ಸೂರ್ಯ ಗಾಳಿಮುಂತಾದವು ಇಂತಹವುಗಳನ್ನು ಚೆನ್ನಾಗಿ ವಿಮರ್ಶೆಮಾಡಿ ತಿಳಿಯುವುದೆಂದು ಅರ್ಥ. "ಹಿಂದೆ ನಿಯಮಿಸಿದ್ದ ವಸ್ತುಪಾಠದಲ್ಲೇ ಇದೆಲ್ಲಾನಡೆಯುತ್ತಿತ್ತು. ಈಗ ಹೊಸದಾಗಿ ತಿಳಿಯಬೇಕಾದ್ದೇನು? " ಎಂದು ಕೇಳಬಹುದು. ಆದರೆ ವಸ್ತುಪಾಠದಲ್ಲಿ ವಸ್ತು

ಕಥೆಗಳು

ಹೀಗೆ ಮಾಡುವುದಕ್ಕೆ ಬದಲಾಗಿ ವಿಮರ್ಶೆಗೆ ಒಂದು ಕಥೆಯನ್ನೇ ಆಧಾರವಾಗಿಟ್ಟುಕೊಂಡು ಮೇಲ್ಕಂಡ ಪಾಠಗಳನ್ನೂ ಕೈ ಕೆಲಸಗಳನ್ನೂ ಅದಕ್ಕೆ ಹೊಂದಿಸಿಕೊಂಡು ಬೋಧಿಸತಕ್ಕ ಸ್ಕೂಲುಗಳೂ ಉಂಟು. ಅಂತು ಕಥೆ ಎರಡುವಿಧದಲೂ ಪ್ರಯೋಜನಕಾರಿ. ಅಲ್ಲದೆ ವಿಷಯವನ್ನು ಜ್ಞಾಪಕವಿಟ್ಟುಕೊಳ್ಳುವುದರಲ್ಲಿ ಕಥೆಯಿಂದ ಬಹಳ ಸಹಾಯವುಂಟು. ನಮ್ಮಲ್ಲಿಯೂ ಮುದುಕರು ಮಕ್ಕಳಿಗೆ ಕಥೆ ಹೇಳುವ ಸಂಪ್ರದಾಯವು ಬಹಳ ಬಳಕೆಯಾಗಿತ್ತು. ಆದರೆ ಈಚಿನ ಕೆಲವರು ಹಿಂದಿನ ಪದ್ಧತಿಗಳನ್ನೆಲ್ಲಾ ಅಲೆಗಳೆಯುತ ಬಂದದ್ದರಿಂದ ಅದೂ ಮಲಿನವಾಗುತ್ತ ಬಂತು. ಮತ್ತು ನಮ್ಮಲ್ಲಿ ಪ್ರಕೃತಿವಿಮರ್ಶೆಗೆ ಹೊಂದಿಕೆಯಾದ ಕಥೆಗಳೂ ವಿರಳ ಅಥವಾ ಈಚಿನ ಕೆಲವು ಪುಸ್ತಕಗಳಲ್ಲಿ ಅಲ್ಲಲ್ಲಿ ಕೆಲವುಕೆಲವಿದ್ದರೂ ಅವೂ ಒಟ್ಟಿಗಿಲ್ಲ. ಇಂತಹ ನ್ಯೂನತೆಗಳಿರುವುದರಿಂದ ಉಪಾಧ್ಯಾಯರುಗಳಿಗೆ ಸರಿಯಾಗಿ ಕೆಲಸಮಾಡಲು ತೊಂದರೆ. ಒಬ್ಬ ಬಡಗಿಯು ತನ್ನ ಚಾತುರ್ಯವನ್ನೆಲ್ಲಾ ತೋರಿಸಲು ಒಳ್ಳೇ ಆಯುಧಗಳು ಬೇಕು. ಹಾಗೆಯೇ ಉಪಾಧ್ಯಾಯರಿಗೂ ಮೇಲಾದ ಪುಸ್ತಕಗಳಿರಬೇಕು. ಅವೇ ಇಲ್ಲದಮೇಲೆ ಹೊಸವಿಷಯವು ತಿಳಿಯುವುದು ಹೇಗೆ? ಹಾಗೆ ತಿಳಿಯದಿದ್ದರೆ ಅತನ ಬೋಧನೆಯುತಾನೇ ಮೇಲಾದೀತೆ? ಅದ್ದರಿಂದಲೇ ಶಿಕ್ಷಕನು ಸದಾ ವ್ಯಾಸಂಗ ಮಾಡುತ್ತಲೇ ಇರಬೇಕೆಂದೂ, ಹಾಗಿಲ್ಲದೆ ಯಾವಾಗ ಉದಾಸೀನ ಮಾಡುವನೋ ಆಗ ಅತನು ತನ್ನ ಕೆಲಸಕ್ಕೆ ಅನರ್ಹನೆಂದೂ ದೊಡ್ಡವರು ಹೇಳುವರು.

ಹೊಸ ಕಿಂ॥ ಗಾ ॥ ಕ್ರಮದಲ್ಲಿ ತಮ್ಮ ಸ್ಕೂಲುಗಳಲ್ಲೂ ಪಾಠ ನಡೆಸಬೇಕೆಂದು ನಮ್ಮ ದೇಶದ ಎಷ್ಟೋ ಉಪಾಧ್ಯಾಯರಿಗೆ ಉತ್ಸಾಹವುಂಟು. ಆದರೆ ಹೇಗೆ ನಡೆಸಬಲ್ಲರು? ಕಿಂ॥ ಗಾ॥ ತರಗತಿಗಳಲ್ಲಿ ವ್ಯಾಸಂಗಮಾಡಬೇಕು. ಇದು ಎಲ್ಲರಿಗೂ ಅಸಾಧ್ಯ. ತಕ್ಕ ಪುಸ್ತಕಗಳಾದರೂ ಇದ್ದರೆ ಪ್ರಯತ್ನಪಡಬಹುದೆಂದರೆ ಅವೂ ಇಲ್ಲ. ಕಳೆದ ವಿದ್ಯಾಭ್ಯಾಸ ಪ್ರದರ್ಶನ (Educational Exhibition) ಕ್ಕೆ ಬಂದಿದ್ದ ಅನೇಕ ಶಿಕ್ಷಕರು ಈ ಹೊಸ ಕಿಂ॥ ಗಾ॥ ಕ್ರಮವನ್ನು ತಿಳಿಯಲು ನ್ನಡದಲ್ಲಿ ತಮಗೆ ಯಾವ ಸಲಕರಣೆಯೂ ಇಲ್ಲದುದಕ್ಕೆ ಪಶ್ಚಾತ್ತಾಪಪಡುತಿ ಸಹಜವಾಗಿದೆ. ಇತರ ಭಾಷೆಗಳಲ್ಲಿರುವುದನ್ನಾದರೂ ನಮ್ಮ ಕನ್ನಡಕ್ಕೆ ಮಾಡಬಹುದೆಂದರೆ ಹೊರದೇಶದವರ ಪದ್ಧತಿ, ವಾಯುಗುಣ, ಸಸ್ಯ

ಗಳು ಮೊದಲಾದ್ದಕ್ಕೆ ಅನುಸಾರವಾಗಿ ಬರೆದಿರುವ ವಿಷಯಗಳು, ಅದರಲ್ಲೂ ಮುಖ್ಯವಾಗಿ ಕಥೆಗಳು ನಮ್ಮ ಪದ್ಧತಿಗೆ ಅಷ್ಟು ಹೊಂದಿಕೆಯಾಗುವುದಿಲ್ಲ. ಆದ್ದರಿಂದ ನಾವು ನಮ್ಮ ಕಥೆಗಳನ್ನೇ ಆರಿಸಿಕೊಳ್ಳಬೇಕು. ಮತ್ತೆ ಕೆಲವನ್ನು ಪ್ರಕೃತಕ್ಕೆ ತಕ್ಕಂತೆ ಕಲ್ಪಿಸಿಕೊಳ್ಳಲೂಬೇಕು. 'ಕಲ್ಪಿತ ಕಥೆಗಳೆಲ್ಲಾ ಸುಳ್ಳು. ಅಂಥಾದ್ದನ್ನು ಮಕ್ಕಳಿಗೆ ಹೇಳಬಹುದೆ?' ಎಂದು ಕೆಲವರು ಆಕ್ಷೇಪಿಸಬಹುದು. ಇದಕ್ಕೆ ಸಮಾಧಾನವುಂಟು.—ಹೇಗೆಂದರೆ—ಮಕ್ಕಳು ಎಲ್ಲವನ್ನೂ ತಮ್ಮಂತೆಯೇ ಭಾವಿಸುವರು. ಉದಾ—ಗಿಡದ ಎಲೆಯನ್ನು ಚಿವುಟಿದರೆ ಅದಕ್ಕೂ ನೋಯುವುದೆನ್ನುವರು. ಮರದ ಬಸವನನ್ನು ಆಡಿಸುತ್ತಿದ್ದು ಅದರಮುಂದೆ ಹುಲ್ಲು ತಂದುಹಾಕಿ 'ತಿನ್ನು ತಿನ್ನು' ಎನ್ನುವರು. ಕೋಲನ್ನು ಕುದುರೆಎಂದು ಭಾವಿಸಿ ಆಡುವರು. ಆದ್ದರಿಂದ ಸಣ್ಣ ಮಕ್ಕಳಿಗೆ ಕಟ್ಟುಕಥೆಗಳನ್ನು ಹೇಳುವುದಕ್ಕೆ ಹಿಂತೆಗೆಯಬೇಕಾಗಿಲ್ಲ.

ಕಥೆಗಳ ಸ್ವರೂಪ.

ಕಥೆಗಳು ಅಸಂಬದ್ಧವಾಗಿರಬಾರದು. ಪ್ರಕೃತಿವಿಮರ್ಶೆಗೆ ಸಂಬಂಧಪಟ್ಟಿರಬೇಕು. ಮಕ್ಕಳ ಯೋಗ್ಯತೆಗೆ ತಕ್ಕಂತೆ ಇರಬೇಕು. ಚಿಕ್ಕದಾಗಿರಬೇಕು. ಉಲ್ಲಾಸಕರವಾಗಿರಬೇಕು. ಉದ್ದೇಶಕ್ಕೆ ವಿಷಯವಾಗಿರಬೇಕು.

ಇಂತಹ ಕಥೆಗಳನ್ನು ಆರಿಸುವುದರಲ್ಲಿ ಅಥವಾ ಕಲ್ಪಿಸುವುದರಲ್ಲಿ ಉಪಾಧ್ಯಾಯರಿಗೆ ಬಹಳ ಕೌಶಲವಿರಬೇಕು.

(ಕಥೆ ಹೇಳುವುದರಿಂದ ಆಗುವ ಪ್ರಯೋಜನಗಳು)

ಇಷ್ಟು ತೊಂದರೆ ಪಟ್ಟಾದರೂ ಕಥೆ ಹೇಳುವುದೇತಕ್ಕೆಂದು ಕೇಳಬಹುದು. ಇದರಿಂದ ಎಷ್ಟೋ ಫಲವುಂಟು—ಮಕ್ಕಳು ಮಾತೃಭಾಷೆಯಲ್ಲಿ ತಪ್ಪಿಲ್ಲದೆ ಮಾತನಾಡಲು ಸಹಾಯ. ತಮ್ಮ ಅಭಿಪ್ರಾಯವನ್ನು ಇತರರಿಗೆ ಸುಲಭವಾಗಿ ತಿಳಿಸುವುದಕ್ಕೆ ಬರುವುದು. ಕಥೆಯಲ್ಲಿನ ಮಾದರಿಗಳಂತೆ ಮಕ್ಕಳು ತಮ್ಮ ನಡತೆಯನ್ನು ತಿದ್ದಿಕೊಳ್ಳಬಹುದು. ಕಥೆಯಲ್ಲಿನ ಪಾತ್ರಗಳೇ ತಾವೆಂದು ಭಾವಿಸಿ ಅವರ ಕಷ್ಟಸುಖಗಳಿಗೆ ಭಾಗಿಗಳಾಗುವ ತಾದಾತ್ಮ್ಯಜ್ಞಾನವುಂಟಾಗುವದು. ಲೋಕದ ನಡೆವಳಿಕೆಯು ಗೊತ್ತಾಗುವದು.

ಕಥೆ ಹೇಳಬೇಕಾದ ಕ್ರಮ.

ಆರಿಸಿದ ಕಥೆಗಳನ್ನು ಹೇಳಬೇಕಾದರೂ ಶಿಕ್ಷಕರು ನಿಪುಣರಾಗಿರಬೇಕು. ಕಥೆಯನ್ನೆಲ್ಲಾ ಪುಸ್ತಕ ನೋಡದೆ ಬಾಯಿಂದಲೇ ನಿಧಾನವಾಗಿ ಹೇಳಬೇಕು.

ಕಥೆಗಳು

ಹೀಗೆ ಮಾಡುವುದಕ್ಕೆ ಬದಲಾಗಿ ವಿಮರ್ಶೆಗೆ ಒಂದು ಕಥೆಯನ್ನೇ ಆಧಾರವಾಗಿಟ್ಟುಕೊಂಡು ಮೇಲ್ಕಂಡ ಪಾಠಗಳನ್ನೂ ಕೈ ಕೆಲಸಗಳನ್ನೂ ಅದಕ್ಕೆ ಹೊಂದಿಸಿಕೊಂಡು ಬೋಧಿಸತಕ್ಕ ಸ್ಕೂಲುಗಳೂ ಉಂಟು. ಅಂತು ಕಥೆ ಎರಡುವಿಧದಲೂ ಪ್ರಯೋಜನಕಾರಿ. ಅಲ್ಲದೆ ವಿಷಯವನ್ನು ಜ್ಞಾಪಕವಿಟ್ಟುಕೊಳ್ಳುವುದರಲ್ಲಿ ಕಥೆಯಿಂದ ಬಹಳ ಸಹಾಯವುಂಟು. ನಮ್ಮಲ್ಲಿಯೂ ಮುದುಕರು ಮಕ್ಕಳಿಗೆ ಕಥೆ ಹೇಳುವ ಸಂಪ್ರದಾಯವು ಬಹಳ ಬಳಕೆಯಾಗಿತ್ತು. ಆದರೆ ಈಚಿನ ಕೆಲವರು ಹಿಂದಿನ ಪದ್ಧತಿಗಳನ್ನೆಲ್ಲಾ ಅಲೆಗಳೆಯುತ ಬಂದದ್ದರಿಂದ ಅದೂ ಮಲಿನವಾಗುತ್ತಾ ಬಂತು. ಮತ್ತು ನಮ್ಮಲ್ಲಿ ಪ್ರಕೃತಿವಿಮರ್ಶೆಗೆ ಹೊಂದಿಕೆಯಾದ ಕಥೆಗಳೂ ವಿರಳ ಅಥವಾ ಈಚಿನ ಕೆಲವು ಪುಸ್ತಕಗಳಲ್ಲಿ ಅಲ್ಲಲ್ಲಿ ಕೆಲವುಕೆಲವಿದ್ದರೂ ಅವೂ ಒಟ್ಟಿಗಿಲ್ಲ. ಇಂತಹ ನ್ಯೂನತೆಗಳಿರುವುದರಿಂದ ಉಪಾಧ್ಯಾಯರುಗಳಿಗೆ ಸರಿಯಾಗಿ ಕೆಲಸಮಾಡಲು ತೊಂದರೆ. ಒಬ್ಬ ಬಡಗಿಯು ತನ್ನ ಚಾತುರ್ಯವನ್ನೆಲ್ಲಾ ತೋರಿಸಲು ಒಳ್ಳೇ ಆಯುಧಗಳು ಬೇಕು. ಹಾಗೆಯೇ ಉಪಾಧ್ಯಾಯರಿಗೂ ಮೇಲಾದ ಪುಸ್ತಕಗಳಿರಬೇಕು. ಅವೇ ಇಲ್ಲದಮೇಲೆ ಹೊಸವಿಷಯವು ತಿಳಿಯುವುದು ಹೇಗೆ? ಹಾಗೆ ತಿಳಿಯದಿದ್ದರೆ ಆತನ ಬೋಧನೆಯುತಾನೇ ಮೇಲಾದೀತೆ? ಆದ್ದರಿಂದಲೇ ಶಿಕ್ಷಕನು ಸದಾ ವ್ಯಾಸಂಗ ಮಾಡುತ್ತಲೇ ಇರಬೇಕೆಂದೂ, ಹಾಗಿಲ್ಲದೆ ಯಾವಾಗ ಉದಾಸೀನ ಮಾಡುವನೋ ಆಗ ಆತನು ತನ್ನ ಕೆಲಸಕ್ಕೆ ಅನರ್ಹನೆಂದೂ ದೊಡ್ಡವರು ಹೇಳುವರು.

ಹೊಸ ಕಿಂ॥ ಗಾ॥ ಕ್ರಮದಲ್ಲಿ ತಮ್ಮ ಸ್ಕೂಲ್‌ಗಳಲ್ಲೂ ಪಾಠ ನಡೆಸಬೇಕೆಂದು ನಮ್ಮ ದೇಶದ ಎಷ್ಟೋ ಉಪಾಧ್ಯಾಯರಿಗೆ ಉತ್ಸಾಹವುಂಟು. ಆದರೆ ಹೇಗೆ ನಡೆಸಬಲ್ಲರು? ಕಿಂ॥ ಗಾ॥ ತರಗತಿಗಳಲ್ಲಿ ವ್ಯಾಸಂಗಮಾಡಬೇಕು. ಇದು ಎಲ್ಲರಿಗೂ ಅಸಾಧ್ಯ. ತಕ್ಕ ಪುಸ್ತಕಗಳಾದರೂ ಇದ್ದರೆ ಪ್ರಯತ್ನಪಡಬಹುದೆಂದರೆ ಅವೂ ಇಲ್ಲ. ಕಳೆದ ವಿದ್ಯಾಭ್ಯಾಸ ಪ್ರದರ್ಶನ (Educational Exhibition)ಕ್ಕೆ ಬಂದಿದ್ದ ಅನೇಕ ಶಿಕ್ಷಕರು ಈ ಹೊಸ ಕಿಂ॥ ಗಾ॥ ಕ್ರಮವನ್ನು ತಿಳಿಯಲು ಕನ್ನಡದಲ್ಲಿ ತಮಗೆ ಯಾವ ಸಲಕರಣೆಯೂ ಇಲ್ಲದುದಕ್ಕೆ ಪಶ್ಚಾತ್ತಾಪಪಡುತ್ತಿದ್ದುದು ಸಹಜವಾಗಿದೆ. ಇತರ ಭಾಷೆಗಳಲ್ಲಿರುವುದನ್ನಾದರೂ ನಮ್ಮ ಕನ್ನಡಕ್ಕೆ ಪರಿವರ್ತನೆ ಮಾಡಬಹುದೆಂದರೆ ಹೊರದೇಶದವರ ಪದ್ಧತಿ, ವಾಯುಗುಣ, ಸಸ್ಯ

ಗಳು ಮೊದಲಾದ್ದಕ್ಕೆ ಅನುಸಾರವಾಗಿ ಬರೆದಿರುವ ವಿಷಯಗಳು, ಅದರಲ್ಲೂ ಮುಖ್ಯವಾಗಿ ಕಥೆಗಳು ನಮ್ಮ ಪದ್ಧತಿಗೆ ಅಷ್ಟು ಹೊಂದಿಕೆಯಾಗುವುದಿಲ್ಲ. ಆದ್ದರಿಂದ ನಾವು ನಮ್ಮ ಕಥೆಗಳನ್ನೇ ಆರಿಸಿಕೊಳ್ಳಬೇಕು. ಮತ್ತೆ ಕೆಲವನ್ನು ಪ್ರಕೃತಕ್ಕೆ ತಕ್ಕಂತೆ ಕಲ್ಪಿಸಿಕೊಳ್ಳಲೂಬೇಕು. 'ಕಲ್ಪಿತ ಕಥೆಗಳೆಲ್ಲಾ ಸುಳ್ಳು. ಅಂಥಾದ್ದನ್ನು ಮಕ್ಕಳಿಗೆ ಹೇಳಬಹುದೆ?' ಎಂದು ಕೆಲವರು ಆಕ್ಷೇಪಿಸಬಹುದು. ಇದಕ್ಕೆ ಸಮಾಧಾನವುಂಟು.—ಹೇಗೆಂದರೆ—ಮಕ್ಕಳು ಎಲ್ಲವನ್ನೂ ತಮ್ಮಂತೆಯೇ ಭಾವಿಸುವರು. ಉದಾ—ಗಿಡದ ಎಲೆಯನ್ನು ಚಿವುಟಿದರೆ ಅದಕ್ಕೂ ನೋಯುವುದೆನ್ನುವರು. ಮರದ ಬಸವನನ್ನು ಆಡಿಸುತ್ತಿದ್ದು ಅದರಮುಂದೆ ಹುಲ್ಲು ತಂದುಹಾಕಿ—ತಿನ್ನು ತಿನ್ನು? ಎನ್ನುವರು. ಕೋಲನ್ನು ಕುದುರೆಎಂದು ಭಾವಿಸಿ ಆಡುವರು. ಆದ್ದರಿಂದ ಸಣ್ಣ ಮಕ್ಕಳಿಗೆ ಕಟ್ಟುಕಥೆಗಳನ್ನು ಹೇಳುವುದಕ್ಕೆ ಹಿಂತೆಗೆಯಬೇಕಾಗಿಲ್ಲ.

ಕಥೆಗಳ ಸ್ವರೂಪ.

ಕಥೆಗಳು ಅಸಂಬದ್ಧವಾಗಿರಬಾರದು. ಪ್ರಕೃತಿವಿಮರ್ಶೆಗೆ ಸಂಬಂಧಪಟ್ಟಿರಬೇಕು. ಮಕ್ಕಳ ಯೋಗ್ಯತೆಗೆ ತಕ್ಕಂತೆ ಇರಬೇಕು. ಚಿಕ್ಕದಾಗಿರಬೇಕು. ಉಲ್ಲಾಸಕರವಾಗಿರಬೇಕು. ಉದ್ದೇಶಕ್ಕೆ ವಿಷಯವಾಗಿರಬೇಕು.

ಇಂತಹ ಕಥೆಗಳನ್ನು ಆರಿಸುವುದರಲ್ಲಿ ಅಥವಾ ಕಲ್ಪಿಸುವುದರಲ್ಲಿ ಉಪಾಧ್ಯಾಯರಿಗೆ ಬಹಳ ಕೌಶಲವಿರಬೇಕು.

(ಕಥೆ ಹೇಳುವುದರಿಂದ ಆಗುವ ಪ್ರಯೋಜನಗಳು)

ಇಷ್ಟು ತೊಂದರೆ ಪಟ್ಟಾದರೂ ಕಥೆ ಹೇಳುವುದೇತಕ್ಕೆಂದು ಕೇಳಬಹುದು. ಇದರಿಂದ ಎಷ್ಟೋ ಫಲವುಂಟು—ಮಕ್ಕಳು ಮಾತೃಭಾಷೆಯಲ್ಲಿ ತಪ್ಪಿಲ್ಲದೆ ಮಾತನಾಡಲು ಸಹಾಯ. ತಮ್ಮ ಅಭಿಪ್ರಾಯವನ್ನು ಇತರರಿಗೆ ಸುಲಭವಾಗಿ ತಿಳಿಸುವುದಕ್ಕೆ ಬರುವುದು. ಕಥೆಯಲ್ಲಿನ ಮಾದರಿಗಳಂತೆ ಮಕ್ಕಳು ತಮ್ಮ ನಡತೆಯನ್ನು ತಿದ್ದಿಕೊಳ್ಳಬಹುದು. ಕಥೆಯಲ್ಲಿನ ಪಾತ್ರಗಳೇ ತಾವೆಂದು ಭಾವಿಸಿ ಅವರ ಕಷ್ಟಸುಖಗಳಿಗೆ ಭಾಗಿಗಳಾಗುವ ತಾದಾತ್ಮ್ಯಜ್ಞಾನವುಂಟಾಗುವದು. ಲೋಕದ ನಡೆವಳಿಕೆಯು ಗೊತ್ತಾಗುವದು.

ಕಥೆ ಹೇಳಬೇಕಾದ ಕ್ರಮ.

ಆರಿಸಿದ ಕಥೆಗಳನ್ನು ಹೇಳಬೇಕಾದರೂ ಶಿಕ್ಷಕರು ನಿಪುಣರಾಗಿರಬೇಕು. ಕಥೆಯನ್ನೆಲ್ಲಾ ಪುಸ್ತಕ ನೋಡದೆ ಬಾಯಿಂದಲೇ ನಿಧಾನವಾಗಿ ಹೇಳಬೇಕು.

ಅರ್ಥಕ್ಕೆತಕ್ಕಂತೆ ಧ್ವನಿಯನ್ನು ಬದಲಾಯಿಸಿಕೊಳ್ಳಬೇಕು. ತಕ್ಕ ಅಭಿನಯಗಳನ್ನೂ ಮಾಡಿ ತೋರಿಸಬಹುದು. ಆಗಾಗ್ಗೆ ಪ್ರಶ್ನೆಮಾಡುತ್ತಿರಬೇಕು. ಅದರಿಂದ ಹೇಳಬೇಕು. ಮಕ್ಕಳು ಪ್ರಶ್ನಿಸಿದರೆ ಗದರಿಸುವುದು ಮುಂತಾದ್ದು ಕೂಡದು. ಹೇಳುವಾಗ ಚಿತ್ರಪಟಗಳನ್ನುಪಯೋಗಿಸಬೇಕು. ತಕ್ಕ ಚಿತ್ರಗಳನ್ನು ಕಪ್ಪು ಹಲಗೆಯಲ್ಲಿಯೂ ಬರೆದು ತೋರಿಸಬೇಕು ಹೇಳಿದ್ದಾದಮೇಲೆ ಮಕ್ಕಳನ್ನೆಲ್ಲಾ ಪ್ರಶ್ನೆಮಾಡಿ ಕೆಲಕೆಲವರಿಂದ ಕೆಲಕೆಲವು ಭಾಗಗಳನ್ನು ಹೇಳಿಸಬೇಕು. ಆಯಾ ಸಂದರ್ಭಕ್ಕೆ ತಕ್ಕ ಚಿತ್ರಗಳನ್ನೂ ಬರೆಸಬೇಕು. ಮಕ್ಕಳನ್ನೇ ಪಾತ್ರಗಳನ್ನಾಗಿ ಮಾಡಿ ನಾಟಕದಂತೆ ಆಡಿಸಲೂಬಹುದು.

ಹಿಂದಿನ ನಿಯಮಗಳಿಗನುಸಾರವಾಗಿ ಇಲ್ಲಿ ಕೆಲವು ಕಥೆಗಳನ್ನೂ, ಸಂಭಾಷಣೆಗಳನ್ನೂ ಮಾದಿರಿಗಾಗಿ ಕೊಟ್ಟಿದೆ.

ಗಾಳಿ.

ಸಂಭಾಷಣೆ.

ಗಾಳಿ ಏನುಮಾಡುತ್ತದೆ? ಮರಗಳ ಸಂಗಡ ಆಟವಾಡುವುದು. ಪಕ್ಷಿಗಳನ್ನು ಉಯ್ಯಾಲಾಡಿಸುವುದು. ಆವಟಿಗಾಳಿ ಯಾವಾಗ ಬರುವುದು? ಜ್ಯೇಷ್ಠ ಆಷಾಢದ ತಿಂಗಳುಗಳಲ್ಲಿ. ಅದರಿಂದ ಏನು ಪ್ರಯೋಜನ? ಅದು ಮಳೆ ಮೋಡಗಳನ್ನು ತರುವುದು. (ಆಕಾಶದಲ್ಲಿ ಮೋಡ ಓಡುವುದನ್ನು ತೋರಿಸುವುದು.) ಯಾವ ಕಡೆಯಿಂದ? ಪಶ್ಚಿಮದಿಂದ. ಹಿಂಗಾರುಗಾಳಿ ಯಾವಾಗ ಬರುವುದು? ಚಳಿಗಾಲದಲ್ಲಿ. ಯಾವಕಡೆಯಿಂದ? ಪೂರ್ವಕಡೆಯಿಂದ. ಅದು ಏನು ಮಾಡುವುದು? ಮರಗಳ ಎಲೆಗಳನ್ನೆಲ್ಲಾ ಉದುರಿಸುವುದು. ಗಾಳಿ ಇನ್ನೇನು ಮಾಡುವುದು? ಬಲವಾಗಿ ಬೀಸುವಾಗ ಪಠಗಳನ್ನು ಮೇಲಕ್ಕೆ ತೆಗೆದುಕೊಂಡು ಹೋಗಿ ಆಡಿಸುವುದು. ಒದ್ದೆ ಬಟ್ಟೆಗಳನ್ನೂ ತೇವದ ನೆಲವನ್ನೂ ಒಣಗಿಸುವುದು. ಸಮುದ್ರದಲ್ಲಿ ಹಡಗುಗಳನ್ನು ತಳ್ಳಿಕೊಂಡು ಹೋಗುವುದು. ನಾವು ಗಾಳಿಯನ್ನು ನೋಡಬಹುದೊ? ಆಗುವುದಿಲ್ಲ. ಮುಟ್ಟಬಹುದೊ? ಅದೇ ಬಂದು ನಮ್ಮ ಮೈಯನ್ನು ಮುಟ್ಟುವುದು. ಅದು ಮಾಡುವ ಕೆಲಸವನ್ನಾದರೂ ನೋಡಬಹುದೋ? ಅಹಾ! ನೋಡಬಹುದು. ಗಾಳಿಯು ಮೇಲೆ ಹೇಳಿದುದನ್ನು ಮಾತ್ರವಲ್ಲದೆ ಇನ್ನೂ ಎಷ್ಟೋ ಕೆಲಸಗಳನ್ನು

ಮಾಡುವುದು. ಅದು ಯಾವ ಯಾವ ಬೀಜಗಳನ್ನೋ ತೆಗೆದುಕೊಂಡು ಹೋಗಿ ಎಲ್ಲೆಲ್ಲಿಯೋ ಬಿತ್ತುವುದು. ಕೆಲವುಕಡೆ ಕಸಾಗುಡಿಸುವುದು. ಮತ್ತೆ ಕೆಲವು ಕಡೆ ಕಸವನ್ನು ತಂದುಹಾಕುವುದು. (ಗಾಳಿಕಾಲದಲ್ಲಿ ಬರುವ ಪಟದ ಹಬ್ಬವನ್ನು ಜ್ಞಾಪಿಸಿ ಗಾಳಿಪಟವನ್ನು ಹಾರಿಸುವುದು. ಗಾಳಿ ಗಿರುಗಟ್ಟೆಯನ್ನಿಟ್ಟು ಅದು ತಿರುಗುವುದನ್ನೂ ಮರಗಿಡಗಳು ಅಲ್ಲಾಡುವುದನ್ನೂ ತೋರಿಸುವುದು. ಮಡಿಯೊಣಗುವುದನ್ನು ಜ್ಞಾಪಿಸುವುದು. ಕಳೆ ಬೀಜಗಳನ್ನು ಯಾರೂ ಬಿತ್ತದೆ ಇದ್ದರೂ ಅವು ಬೆಳೆಯುವುದನ್ನು ತೋರಿಸುವುದು.) ಬೇಸಗೆಯಲ್ಲಿ ನಾವು ಬೀಸಣಿಗೆಯನ್ನು ಪಯೋಗಿಸುವುದು ಯಾತಕ್ಕೆ? ಗಾಳಿ ಚೆನ್ನಾಗಿ ಬೀಸಲಿ ಎಂದು. ಇಲ್ಲದಿದ್ದರೇನಾಗುವುದು? ಸೆಕೆಯಾಗುವುದು. (ಗಾಳಿ ಪ್ರಾಣಕ್ಕೆ ಆಧಾರವೆಂದೂ, ಅದು ನಿರ್ಮಲವಾಗಿರಬೇಕೆಂದೂ, ಕೆಟ್ಟ ವಸ್ತುಗಳಮೇಲೆ ಬೀಸಿಕೊಂಡು ಬಂದರೆ ಕೆಡಕನ್ನುಂಟುಮಾಡುವುದೆಂದೂ ತಿಳಿಸುವುದು. ಗಾಳಿಯು ಯಾವದಿಕ್ಕಿನಿಂದ ಬೀಸುವುದೆಂಬುದನ್ನು ಗಿಡ ಹುಲ್ಲು ಮುಂತಾದವನ್ನು ನೋಡಿ ತಿಳಿಯಬಹುದೆಂದು ಬೋಧಿಸುವುದು.)

ರೇಷ್ಮೆಯ ಹುಳು.

ಸಂಭಾಷಣೆ.

ಇದು ಕಂಬಳೀಹುಳುವಿನ ಜಾತಿಗೆ ಸೇರಿದ್ದು. ಇದನ್ನು ಮೊದಲು ಕಂಡು ಹಿಡಿದದ್ದು ಚೀನಾದೇಶದಲ್ಲಿ. ಇದಕ್ಕೆ ೧೬ ಕಾಲುಗಳುಂಟು. ಎರಡು ಪಕ್ಕಗಳಲ್ಲೂ ಇರುವ ರಂಧ್ರಗಳ ಮೂಲಕ ಉಸಿರಾಡುವುದು. ಇದು ಹಿಪ್ಪಲಿನೇರಳೆ (ಉಪ್ಪುನೇರಳೆ, ಕಂಬಳೀಗಿಡ.) ಯ ಸೊಪ್ಪನ್ನು ತಿಂದು ಬೆಳೆಯುವುದು. ಮೊಟ್ಟೆಯೊಡೆದು ಹುಳುವಾಗಿ, ಗೂಡುಕಟ್ಟಿ, ಚಿಟ್ಟೆಯಾಗಿ ಪುನಃ ಮೊಟ್ಟೆಯಿಡುವವರೆಗೆ ಸುಮಾರು ೬೫ ದಿನಗಳಾಗುವುವು. (ಹುಳುವನ್ನು ಬೆಳೆಸುತ್ತ ತೋರಿಸುವುದು). ಈ ಮಧ್ಯೆ ಆಗಾಗ್ಗೆ ಅದರ ಮೈಮೇಲಿನ ಹಳೇ ಪರೆ ಉದುರಿಹೋಗಿ ಹೊಸಪರೆ ಹುಟ್ಟುವುದು. ಇದಕ್ಕೆ ನಮ್ಮ ದೇಶದವರು ಜ್ವರವೆಂದು ಹೇಳುವರು. ಹೀಗೆ ಸೋಲಿ ಬಿಡಲಾರದೆ ಹಲವು ಹುಳುಗಳು ಸಾಯುವುದೂ ಉಂಟು. ಹುಳು ಚೆನ್ನಾಗಿ ಬೆಳೆದನಂತರ ಹೊಂಬಣ್ಣಕ್ಕೆ ತಿರುಗಿ ತನ್ನ ಬಾಯಿಂದ ದಾರವನ್ನು ತೆಗೆಯುವುದು.

(ಬಾಯಲ್ಲಿನ ಎರಡು ಭಾಗಗಳಿಂದ ಜೊಲ್ಲಿನಂತಹ ರಸವು ಬಂದು ಒಟ್ಟಿಗೆ ಸೇರು ವುದು. ಬಳಿಕ ಹೊರಗಿನ ಗಾಳಿ ಸೋಕಿದ ಕೂಡಲೆ ಅದು ಗಟ್ಟಿಯಾದ ದಾರವಾ ಗುವುದು, ಎಂದು ತಿಳಿಸುವುದು.) ತರುವಾಯ ಆ ಎಳೆಗಳಿಂದ ಕೋಳೀಮೊಟ್ಟೆಯ ಆಕಾರವಾಗಿ ಗೂಡುಕಟ್ಟಿ ಹುಳುವು ಅದರೊಳಗೆ ಸೇರಿಕೊಳ್ಳುವುದು. ಕೆಲವು ದಿನಗಳ ಮೇಲೆ ಗೂಡನ್ನು ಕೊರೆದುಕೊಂಡು ಈಚೆಗೆ ಬರುವುದು. (ಗೂಡಿನಲ್ಲಿದ್ದು ಕೋಶ ಕ್ರಿಮಿಯಾಗಿದ್ದಾಗ ಪರೀಕ್ಷೆ ಮಾಡಿಸಿ ಸ್ವರೂಪವನ್ನು ವಿವರಿಸುವುದು.) ಆಗ್ಗೆ ಅದಕ್ಕೆ ಥಳಥಳಿಸುವ ಎರಡು ರೆಕ್ಕೆಗಳೂ ಎರಡು ದೊಡ್ಡ ಕಣ್ಣುಗಳೂ ಮೀಸೆ ಗಳೂ ಹುಟ್ಟಿ, ಚಿಟ್ಟೆಯಾಗಿರುವುದು. (ಈ ಅವಸ್ಥೆಯಲ್ಲಿ ಪರೀಕ್ಷೆ ಮಾಡಿಸುವುದು.) ಒಂದು ಗೂಡಿನ ಎಳೆಯನ್ನೆಲ್ಲಾ ಸರಿಯಾಗಿ ಬಿಚ್ಚಿದರೆ ಒಂದು ಫರ್ಲಾಂಗಿಗಿಂತ ಉದ್ದವಾಗುವುದು. (ಅದು ತೊಡಕಾಗಿರುವುದರಿಂದ ಸರಿಯಾಗಿ ಬಿಚ್ಚುವುದಕ್ಕೆ ಆಗುವುದಿಲ್ಲವೆಂದು ತಿಳಿಸುವುದು.) ಒಂದು ಹೆಣ್ಣು ಚಿಟ್ಟೆಯು ಇನ್ನೂರರವರೆಗೂ ಮೊಟ್ಟೆಗಳನ್ನಿಡುವುದು. ಚಿಟ್ಟೆಯು ಸೊಪ್ಪು ತಿನ್ನುವುದಿಲ್ಲ. ಇಷ್ಟಬಂದರೆ ಸ್ವಲ್ಪ ಜೇನನ್ನಾಗಲಿ ಸಕ್ಕರೆಯನ್ನಾಗಲಿ ತಿನ್ನುವುದು. ಚಿಟ್ಟೆಯು ಎರಡು ಮೂರು ದಿನ ದೊಳಗಾಗಿ ಸಾಯುವುದು. ಮೊಟ್ಟೆಗಳು ಬೆಳ್ಳಗೆ ಗಸಗಸೆಯಂತೆ ಇರುವುವು. ಅವು ಒಡೆದು ಪುನಃ ಮರಿಗಳಾಗಿ ಸೊಪ್ಪು ಮೇಯುವವು. (ಇದನ್ನೆಲ್ಲಾ ಕ್ರಮ ವಾಗಿ ತೋರಿಸಿ ಪರೀಕ್ಷೆ ಮಾಡಿಸುವುದು. ಗೂಡಿನಲ್ಲಿದ್ದಾಗಲೂ ಹುಳುವಿಗೆ ಯಾವ ಆಹಾರವೂ ಇಲ್ಲವೆಂದು ತಿಳಿಸುವುದು.)ಗೂಡಿನಿಂದ ರೇಷ್ಮೆಯಾಗುವುದು. (ರೇಷ್ಮೆಯ ವಸ್ತುಗಳನ್ನು ತೋರಿಸಿ ಅದರಉಪಯೋಗವನ್ನೂ ತಿಳಿಸುವುದು.)

(ಆದರೆ ರೇಷ್ಮೆ ಕಾರ್ಖಾನೆಗಳಲ್ಲಿ ಗೂಡುಗಳನ್ನು ಬೇಯಿಸಿ ಹುಳುಗಳನ್ನು ಕೊಲ್ಲುವುದನ್ನು ಮಾತ್ರ ಉಪಾಧ್ಯಾಯರು ಖಂಡಿತವಾಗಿಯೂ ತಿಳಿಸಬಾರದು.)

ಅಣ್ಣತಂಗಿಯರು.

ಕಥೆ.

ಸಾಲಗ್ರಾಮವೆಂಬುದು ಒಂದು ಊರು. ಅಲ್ಲಿ ಲಿಂಗೇಗೌಡನೆಂಬ ಒಬ್ಬ ರೈತನಿದ್ದನು. ಅವನಿಗೆ ಬೇಕಾದಷ್ಟು ಹೊಲಗಳಿದ್ದವು. ಅವುಗಳಲ್ಲಿ ರಾಗಿ ಬೆಳೆ ಯುತ್ತಿದ್ದನು. ಅಲ್ಲಿಗೆ ಹೊಸದಾಗಿ ಒಂದು ನದಿಯ ಕಾಲುವೆಯನ್ನು ತೆಗೆದರು. ಆ

ರೈತನ ಒಂದು ಹೊಲದ ಅರ್ಧಭಾಗಕ್ಕೆ ನೀರು ಹತ್ತುವಹಾಗಾಯಿತ್ತು. ಅದನ್ನು ಗದ್ದೆಮಾಡಿ ಬತ್ತದ ಬೆಳೆಯಿಟ್ಟನು. ಉಳಿದ ಭಾಗದಲ್ಲಿ ಯಥಾಪ್ರಕಾರ ರಾಗಿಯನ್ನೇ ಬೆಳೆಯಿಸಿದನು. ದೀಪಾವಳೀ ಹಬ್ಬವೂ ಕಳೆಯಿತು. ಬತ್ತದ ಪೈರೆಲ್ಲಾ ಚೆನ್ನಾಗಿ ಬೆಳೆದು ತೆನೆಯ ಭಾರವನ್ನು ಹೊರಲಾರದೆ ತಲೆ ಬಗ್ಗಿಸಿಕೊಂಡಿದೆ. ರಾಗಿಯೂ ಹುಲುಸಾಗಿ ಬೆಳೆದಿದೆ. ಒಂದೊಂದು ತೆನೆಯಲ್ಲೂ ನೂರಾರು ಕಾಳುಗಳಿವೆ. ಆಗ ರಾಗಿಯು ಬತ್ತವನ್ನು ಕಂಡು—"ಅಯ್ಯೋ ಬತ್ತವೆ! ಇಷ್ಟೇನೆ ನಿನ್ನ ಶೌರ್ಯ! ಹೊಟ್ಟೆನಹಾಗಿರುವ ಕೆಲವು ಕಾಳನ್ನು ಹೊರಲಾರದೆ ತಲೆ ಬಗ್ಗಿಸಿಕೊಳ್ಳುವೆಯಾ?" ಬತ್ತ—"ಛಿ, ದುರಹಂಕಾರಿ, ಏನು, ನಿನ್ನ ಸರಿಯಾರೂ ಇಲ್ಲವೆಂದು ತಲೆಯೆತ್ತಿಕೊಂಡು ಮೆರೆಯುತ್ತೀಯೆ? ಛಿ ಬಡರಾಗಿಯೆ," ರಾಗಿ—"ನಾನು ಬಡವನೊ? ಹಾಗೆಯೇ ಆಗಲಿ. ನನ್ನಲ್ಲಿ ಎಷ್ಟು ಕಾಳುಗಳಿವೆ! ನನ್ನಿಂದ ಎಷ್ಟು ಜನಕ್ಕೆ ಜೀವನ! ನೋಡು." ಬತ್ತ—"ಏನು, ಕಂಡಹಾಗೆಯೇ ಇದೆ. ಯೋಗ್ಯರು ಬೇರೆ ನಿನ್ನ ಮುಖವನ್ನು ನೋಡರು. ಬಡಜನರಿಗೆ ಮಾತ್ರ ನಿನ್ನನ್ನು ಬಿಟ್ಟರೆ ಗತಿಯಿಲ್ಲ. ನನ್ನ ಅಕ್ಕಿಯನ್ನು ಕೊಂಡುಕೊಳ್ಳುವುದಕ್ಕೆ ಅವರಿಗೆ ಶಕ್ತಿಯಿಲ್ಲ." ರಾಗಿ—"ಅಯ್ಯೋ ನಿನಗೇನು ಹುಚ್ಚೊ? ಅಗ್ಗವಾಗಿರುವುದರಿಂದ ನನ್ನ ರಾಗಿಯ ಕಾಳನ್ನು ನಿಮ್ಮ ಐಶ್ವರ್ಯವಂತರು ತಾನೆ ಬಿಡುವರೆ? ಆದರೆ ರಾಗಿಯ ಸಾರವನ್ನು ಅರಗಿಸಿಕೊಳ್ಳುವುದಕ್ಕೆ ಅವರಿಗೆ ಶಕ್ತಿಯಿಲ್ಲ. ಅದಕ್ಕೇ ಅವರ ಮೈಯಲ್ಲಿ ಬಲವೂ ಕಡಮೆ. ನಮ್ಮ ರಾಗಿಯ ಹಿಟ್ಟನ್ನು ತಿನ್ನುವ ಒಬ್ಬ ಒಕ್ಕಲಿಗರ ಹುಡುಗನನ್ನೂ, ನಿನ್ನ ಅಕ್ಕಿಯ ಅನ್ನವನ್ನೇ ತಿನ್ನುವ ಒಬ್ಬ ಬ್ರಾಹ್ಮಣರ ಹುಡುಗನನ್ನೂ ಕುಸ್ತಿಗೆ ಬಿಟ್ಟು ನೋಡೋಣವೆ? ಯಾರು ಗೆಲ್ಲುವರೋ ಗೊತ್ತಾಗುವದು." ಬತ್ತ—"ಇನ್ನೇನು, ಇಂತಹ ಒರಟತನಕ್ಕೆ ಸರಿ. ನಯವಿಲ್ಲ, ನಾಜೋಕಿಲ್ಲ. ನಿಮ್ಮವರೆಲ್ಲಾ ಬಹಳ ಕೆಟ್ಟವರು. ಹೊತ್ತು ಹೆತ್ತು ಸಾಕಿ ಸಂರಕ್ಷಣೆಮಾಡಿದ ತಾಯನ್ನೇ ಮರೆತುಬಿಟ್ಟಿದ್ದೀರಿ. ಈ ತಾಯಿ ನಮಗೋಸ್ಕರ ಎಷ್ಟು ಕಷ್ಟಪಟ್ಟಿದ್ದಾಳು! ಎಷ್ಟು ಗುದ್ದಲಿಯ ಏಟುಗಳನ್ನು ತಿಂದಿದ್ದಾಳು! ಬಿಸಿಲಿನಲ್ಲಿ ಎಷ್ಟು ಒಣಗಿದ್ದಾಳು! ಇಂತಹ ಭೂಮಿತಾಯನ್ನೇ ಮರೆತುಬಿಟ್ಟಿದ್ದೀರಲ್ಲಾ! ಆಗಬಹುದೆ?" ರಾಗಿ—"ಓಹೋ, ಭೂಮಿಯ ವಿಷಯವೊ? ಹೌದು. ಆಕೆ ನಮಗೆ ತಾಯೇ ಹೌದು. ಸಾಕಿಯೂ ಇದ್ದಾಳೆ. ಆದರೆ ಅತಿಶಯವೇನು? ಪ್ರಪಂಚದಲ್ಲಿ ಎಲ್ಲಾ ತಾಯಿಯರೂ ಮಕ್ಕಳನ್ನು ಹೆತ್ತರೆ ಸಾಕದೆ ಬಿಸಾಡುತ್ತಾರೇನು? ಇಷ್ಟಕ್ಕೂ ಅವಳೊಬ್ಬಳೇ ಏನು ಮಾಡಬಲ್ಲಳು? ನಮ್ಮ

ತಂದೆಯಾದ ಸೂರ್ಯನು ಎಲ್ಲವನ್ನೂ ಸಂಪಾದನೆಮಾಡಿ ಕಳುಹಿಸಿದನು. ಅವಳೂ ಸಾಕಿದಳು." ಬತ್ತ—"ಅದೂ ನಿಜ. ಆದರೂ ನೀವು ಇಷ್ಟು ದೊಡ್ಡವರಾಗಿದ್ದು ಫಲ ಬಿಟ್ಟಿರುವಾಗ ತಾಯಿಗೆ ನಮಸ್ಕಾರವನ್ನಾದರೂ ಮಾಡಬೇಡವೆ?" ರಾಗಿ—"ಹೌದು, ಮಾಡಬೇಕು. ಆದರೆ ಯಾವಾಗಲೂ ಕುರಿಗಳಂತೆ ನಿಮ್ಮಹಾಗೆ ತಲೆ ಬಗ್ಗಿಸಿಕೊಂಡೇ ಇರಬೇಕೆ? ಏನೋ ಒಂದೊಂದುಸಲ ಗಾಳಿ ಬಂದಾಗ 'ಅಮ್ಮ' ಎಂದು ತಲೆ ಬಗ್ಗಿಸಿದರಾಯ್ತು. ನಾವೇನೋ ಯಾವಾಗಲೂ ನಮ್ಮ ತಂದೆಯ ಕಡೆಯೇ ನೋಡುತ್ತಿರುತ್ತೇವೆ." ಎಂದವು. ಅಗ್ಗೆ ಸರಿಯಾಗಿ ಅಲ್ಲಿಗೆ ಒಂದು ಗೊರವಂಕನು ಹಾರಿಬಂತು. ಬತ್ತದಪೈರೂ ರಾಗಿಯಪೈರೂ ಹೀಗೆ ಜಗಳವಾಡುತ್ತಿದ್ದುದನ್ನು ಕಂಡಿತು. ಹೇಗಾದರೂಮಾಡಿ ಅವಕ್ಕೆ ಸಮಾಧಾನ ಮಾಡಬೇಕೆಂದುಕೊಂಡು—"ಎಲೈ ರಾಗಿ ಬತ್ತಗಳಿರಾ, ನೀವುನೀವು ಅಣ್ಣತಂಗಿಯರಲ್ಲವೆ? ಇದೇಕೆ ಹೀಗೆ ಕಾದುತ್ತೀರಿ? ರಾಗಿಯ ಪೈರುಗಳೆಲ್ಲಾ ಗಂಡುಮಕ್ಕಳು, ಕಷ್ಟಪಡತಕ್ಕವರು, ಗಟ್ಟಿಗರು. ಗಂಡು ಮಕ್ಕಳಾದ್ದರಿಂದಲೇ ಸಾಮಾನ್ಯವಾಗಿ ತಂದೆಯ ಕಡೆಯೇ ಪ್ರೀತಿಹೆಚ್ಚು. ಆದ್ದರಿಂದಲೇ ಸದಾ ಸೂರ್ಯನನ್ನೇ ನೋಡುತ್ತಿರುತ್ತೀರಿ. ಬತ್ತದ ಪೈರೆಲ್ಲಾ ಹೆಣ್ಣುಮಕ್ಕಳು. ಬಹು ಸುಂದರಿಯರು. ಕಷ್ಟಕ್ಕೆ ತಡೆಯಲಾರದವರು. ಸ್ವಲ್ಪಹೊತ್ತೂ ನೀರಿಲ್ಲದೆ ಇರಲಾರಿರಿ. ನಿಮ್ಮ ಮೈ ಬಹಳ ಕೋಮಲ. ಹೆಣ್ಣುಮಕ್ಕಳಾದ್ದರಿಂದ ಸಾಧಾರಣವಾಗಿ ತಾಯನ್ನು ಕಂಡರೇ ಹೆಚ್ಚು ಪ್ರೀತಿ. ನಾಚಿಕೆಬೇರೆ ಬಂದಿದೆ. ಆದ್ದರಿಂದಲೇ ಯಾವಾಗಲೂ ತಲೆಯನ್ನು ಬಗ್ಗಿಸಿಕೊಂಡೇ ಇದ್ದು ತಾಯಕಡೆಯೇ ನೋಡುತ್ತಿದ್ದೀರಿ." ಎಂದು ಹೇಳಿ ಸಮಾಧಾನಮಾಡಿ ಹಾರಿಹೋಯ್ತು. ಆಗ ಅವೆರಡಕ್ಕೂ ಬಹಳ ಸಂತೋಷವಾಯ್ತು.

ಈ ಕಥೆಯ ಉದ್ದೇಶಗಳು.

ರಾಗಿ ಬತ್ತಗಳ ಬೆಳೆವಳಿಕೆಯ ಸ್ವಭಾವವನ್ನು ತಿಳಿಸಬಹುದು. ಸಸ್ಯಗಳ ಬೆಳೆವಳಿಕೆಗೆ ಭೂಮಿಯೂ ಸೂರ್ಯನೂ ಮುಖ್ಯ ಸಹಾಯಕಗಳೆಂಬುದನ್ನು ತಿಳಿಸಬಹುದು. ರಾಗಿ ಬತ್ತಗಳಲ್ಲಿ ಯಾವಯಾವ ಜನಗಳು ಯಾವಯಾವುದನ್ನು ಏತಕ್ಕೆ ಉಪಯೋಗಿಸುವರೆಂಬುದನ್ನೂ ಕಾರಣಪುರಸ್ಸರವಾಗಿ ತಿಳಿಸಬಹುದು. ಲೋಕದಲ್ಲಿ ಗಂಡುಮಕ್ಕಳಿಗೂ ಹೆಣ್ಣುಮಕ್ಕಳಿಗೂ ಸ್ವಭಾವದಲ್ಲಿರುವ ವ್ಯತ್ಯಾಸಗಳನ್ನು ತೋರಿಸಬಹುದು. ತಾಯ್ತಂದೆಗಳ ವಿಷಯದಲ್ಲಿ ತುಂಬಾ ಕೃತಜ್ಞರಾಗಿರಬೇಕೆಂಬ ನೀತಿಯನ್ನು ಹೊರಡಿಸಬಹುದು.

ಸುಂದರನೂ ಬಂಡಿಯೂ.

ಕಥೆ.

ಸುಂದರನು ಒಳ್ಳೆಯ ಹುಡುಗ. ಅವನಿಗೆ ಇನ್ನೂ ಐದೇ ವರುಷ. ಆ ಬೀದಿಯ ಮಕ್ಕಳೆಲ್ಲಾ ಅವನ ಗೆಳೆಯರೇ. ನೆರೆಮನೆಯಲ್ಲಿ ಪುಟ್ಟಾರಿ ಎಂಬ ಒಂದು ಮಗು ಇತ್ತು. ಆ ಪುಟ್ಟಾರಿಗೂ ಸುಂದರನಿಗೂ ಇನ್ನೂ ಹೆಚ್ಚಾದ ಸ್ನೇಹ. ಪುಟ್ಟಾರಿಗೆ ಎಳೆದುಕೊಂಡು ಆಡುವುದಕ್ಕೆ ಅವನ ತಂದೆ ಒಂದು ಕೈ ಬಂಡಿಯನ್ನು ತಂದುಕೊಟ್ಟಿದ್ದನು. ಅದು ಬಹಳ ಚೆನ್ನಾಗಿತ್ತು. ಅದಕ್ಕೆ ನಾಲ್ಕು ಚಕ್ರಗಳು. ಎಲ್ಲಾ ಮರದ್ದು. ಸುಂದರನೂ ಪುಟ್ಟಾರಿಯೂ ಇಬ್ಬರೂ ಆ ಬಂಡಿಯನ್ನೆಳೆದುಕೊಂಡು ಆಡುತ್ತಿದ್ದರು. ಒಂದುದಿನ ಪುಟ್ಟಾರಿಗೆ ಸ್ವಲ್ಪ ತಲನೋವು ಬಂತು. ಅದರಿಂದ ಅವನು ಆ ದಿನ ಆಡುವುದಕ್ಕೆ ಬರಲಿಲ್ಲ. ಅವನೇ ಬಾರದಮೇಲೆ ಇನ್ನು ಸುಂದರನಿಗೆ ಆಡುವುದಕ್ಕೆ ಬಂಡಿ ಹೇಗೆ ಸಿಕ್ಕೀತು? ಆ ರಾತ್ರೆ ಸುಂದರನು ತನ್ನ ತಂದೆಯ ಸಂಗಡ— "ಅಪ್ಪ, ನನ್ನ ಸ್ನೇಹಿತನಾದ ಪುಟ್ಟಾರಿಗೆ ಆಡುವುದಕ್ಕೆ ಬಂಡಿ ಇದೆ. ನನಗೂ ಒಂದು ಬಂಡಿಯನ್ನು ತಂದುಕೊಡುತ್ತೀಯಾ?" ಎಂದು ಕೇಳಿದನು. ತಂದೆ— "ಮಗು, ನೀನು ಇಷ್ಟು ದೊಡ್ಡ ಹುಡುಗನಾಗಿದ್ದೂ ಇನ್ನೂ ಬಂಡಿಯಲ್ಲಿ ಕೂತುಕೊಂಡು ಆಡಬೇಕೆ? ಓಡಾಡಲಾರೆಯಾ?" ಎಂದನು. ಸುಂದರ— "ಕೂತುಕೊಳ್ಳುವುದಕ್ಕಲ್ಲಪ್ಪ. ಆಡುವುದಕ್ಕೆ." ಎಂದನು. ತಂದೆ— "ಓಹೊ, ಅಂತಹ ಬಂಡಿಯೊ? ಹಾಗಾದರೆ ಅದನ್ನು ನಾಳೆ ದಿನವೇ ತಂದುಕೊಡುತ್ತೇನೆ." ಎಂದನು. ಹಾಗೆಯೇ ಮರುದಿನ ಸಂಜೆಯಲ್ಲಿ ತಂದುಕೊಟ್ಟನು. ಆಗ ಸುಂದರನಿಗೂ ಒಂದು ಬಂಡಿಯಾಯಿತು. ಅದು ಪುಟ್ಟಾರಿಯ ಬಂಡಿಗಿಂತ ಎಷ್ಟೋ ಚೆನ್ನಾಗಿತ್ತು. ಯಾಕೆಂದರೆ— ಅದು ಇನ್ನೂ ಹೊಸದು. ಅದರ ಚಕ್ರಕ್ಕೆ ನೀಲಿಬಣ್ಣ ಹಾಕಿತ್ತು. ಮೇಲಡೆ ಹಳದಿಬಣ್ಣ. ಮಧ್ಯೆಮಧ್ಯೆ ಕೆಂಪು ಗೆರೆಗಳು. ಹಿಡಿಯು ಬಿಳುಪಾಗಿತ್ತು. ಗಾಡಿಯನ್ನು ಕಂಡಕೂಡಲೆ ಸುಂದರನಿಗೆ ಬಲು ಸಂತೋಷವಾಯಿತು. ಅದನ್ನು ಹೇಗೆಹೇಗೆ ಆಡಿಸಬೇಕೆಂದು ಯೋಚಿಸುತ್ತಲೇ ಮಲಗಿಕೊಂಡನು. ಆ ಸಂತೋಷದಲ್ಲಿ ಅವನಿಗೆ ನಿದ್ರೆಯೇ ಇಲ್ಲ. ಸುಂದರನು ಬೆಳಗ್ಗೆ ಎಲ್ಲರಿಗಿಂತ ಮೊದಲೇ ಎದ್ದು ಗಾಡಿಯನ್ನು ತೆಗೆದುಕೊಂಡು ಆಡುವುದಕ್ಕೆ ಹೋದನು. ಹಾಗೆ ಒಬ್ಬನೇ ಸ್ವಲ್ಪ ಹೊತ್ತು ಆಡುತ್ತಿರು

ವಾಗ್ಗೆ ಪುಟ್ಟಾರಿಯೂ ಜತೆಗೆ ಬಂದನು. ಆ ದಿನವೆಲ್ಲಾ ಅವರಿಗೆ ಅದೇಕೆಲಸ. ಅದಕ್ಕೆ ತಕ್ಕಂತೆ ಆದಿನ ಸ್ಕೂಲಿಗೆ ರಜವೂ ಬಂದಿತ್ತು. ಕಾವೇರಿ ಅಲ್ಲಿಗೆ ಬಂದಳು. ಅವಳು ಸುಂದರನ ಅಕ್ಕ. ಅವಳು ಅವರ ಆಟವನ್ನು ಕಂಡು ನಗುತ್ತ—"ಏನಯ್ಯಾ, ಗಾಡಿ ಬಾಡಿಗ್ಗೆ ಬರುತ್ತೀಯೊ?" ಎಂದಳು. ಸುಂದರ—"ಓಹೊ, ಅಗತ್ಯವಾಗಿ ಬರುತ್ತೇನೆ. ಆದರೆ ನಮ್ಮ ಬಂಡಿಗೆ ಬಾಡಿಗೆ ಹೆಚ್ಚು. ಯಾಕಂದರೆ—ಹೊಸಗಾಡಿ, ಒಳ್ಳೇಎತ್ತು". ಕಾವೇರಿ—"ಆಹಾ! ಒಳ್ಳೇಎತ್ತು! ಈ ಎತ್ತು ಮಾತನ್ನೂ ಆಡುತ್ತದೆ. ಇದಕ್ಕೆ ಎರಡು ಕಾಲುಗಳಿವೆ". ಸುಂದರ—"ಹೌದು. ಅದಕ್ಕೋಸ್ಕರವೇ ಹೆಚ್ಚು ಬಾಡಿಗೆ. ಒಳ್ಳೇದು. ಸಾಮಾನು ಏನಿದೆ? ಎಲ್ಲಿಗೆ ಸಾಗಿಸಿಕೊಂಡು ಹೋಗಬೇಕು?" ಕಾವೇರಿ—"ನಾಲ್ಕು ಪುಸ್ತಕಗಳಿವೆ. ಅವನ್ನು ಕಡೇಮನೆಯ ಸೀತೆಗೆ ತಲಪಿಸುವುದು, ಅವಳು ಕೊಡುವ ಎರಡು ಪುಸ್ತಕಗಳನ್ನು ಪುನಃ ಸಾಗಿಸಿಕೊಂಡು ಬರುವದು". ಸುಂದರ—"ಓಹೊ! ಹೋಗುವುದು, ಬರುವುದು—ಎರಡುಸಲವಾಯ್ತು. ಆದ್ದರಿಂದ ದುಗುಣೀಬಾಡಿಗೆ ಬರಬೇಕಾಗುತ್ತದೆ. ಆಗಲಿ, ಮೊದಲು ಬಾಡಿಗೆ ಗೊತ್ತಾಗಲಿ". ಕಾವೇರಿ—"ಇನ್ನೇನು, ಗೊತ್ತೇಇದೆ. ಎತ್ತಿಗೇನಾದರೂ ಮೇವು ಸಿಕ್ಕುತ್ತದೆ". ಸುಂದರ—"ಓಹೊ! ಸರಿ, ಗೊತ್ತಾಯ್ತು, ಹೇಳಲೊ? ನಿನ್ನೆ ಮಾಡಿದ್ದ ಕೋಡುಬಳೆ ಸಿಕ್ಕುವುದು. ಹುಂ, ಆಗಲಿ, ಗಾಡಿಗೆ ಸಾಮಾನು ಹಾಕೋಣ." ಎಂದನು. ಕಾವೇರಿಯು ಒಳಗಿನಿಂದ ನಾಲ್ಕು ಪುಸ್ತಕಗಳನ್ನು ತಂದು ಬಂಡಿಯಲ್ಲಿಟ್ಟಳು. ಸುಂದರನು ಅವನ್ನು ಸಾಗಿಸಿಕೊಂಡು ಹೋಗಿ ಸೀತೆಗೆ ಕೊಟ್ಟು, ಅವಳು ಕಳುಹಿಸಿದ ಎರಡು ಪುಸ್ತಕಗಳನ್ನೂ ಬಂಡಿಯಲ್ಲಿ ಸಾಗಿಸಿಕೊಂಡುಬಂದು ಕಾವೇರಿಗೆ ಕೊಟ್ಟನು. ಅವಳೂ ಅವನಿಗೆ ತಿಂಡಿಯನ್ನು ಕೊಟ್ಟಳು. ಸುಂದರನು ಹಾಗೆಯೇ ಬಾಡಿಗೆ ಹೊಡೆಯುವನಂತೆ ಆಡುತ್ತ, ಆ ಬಂಡಿಯನ್ನು ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಆಡಿಸುತ್ತ ವಿನೋದವಾಗಿದ್ದನು. ಅಷ್ಟರಲ್ಲಿಯೇ ಅದರ ಒಂದು ಚಕ್ರವು ಕಳಚಿಬಿತ್ತು. ಗಾಡಿ ಮುಂದಕ್ಕೆ ಹೋಗುವುದಕ್ಕೇ ಆಗಲಿಲ್ಲ. ಆಗ ಸುಂದರನಿಗೆ ಬಲು ದುಃಖಬಂತು. ಏನುಮಾಡಬೇಕು? "ಅಯ್ಯೋ! ನನ್ನ ಗಾಡಿ ಮುರಿದುಹೋಯ್ತಲ್ಲಾ! ಯಾರು ಸರಿಮಾಡಿಕೊಟ್ಟಾರು? ನಮ್ಮ ತಂದೆಯೇ ಸರಿಮಾಡಬಹುದು. ಆದರೆ ಆತನು ಸಂಜೆಗೇ ಮನೆಗೆ ಬರುವುದು. ಅಲ್ಲಿಯವರೆಗೆ ಏನುಮಾಡಲಿ?" ಎಂದು ಗೋಳಾಡುತ್ತಿದ್ದನು. ಆ ವೇಳೆಗೆ—"ಪೆಟ್ಟಿಗೇ ಸಂದೂಕಾ ಬೀಗಾ ಸರಿಮಾಡುವದೂ"

ಎಂದು ಕೂಗಿಕೊಳ್ಳುತ್ತ ಬೀದಿಯಲ್ಲಿ ಒಬ್ಬನು ಬರುತ್ತಿದ್ದನು. ಅವನು ಮುದುಕ. ಒಂದು ಗಾಡಿ ಮುರಿದಿದ್ದುದನ್ನೂ ಸುಂದರನು ಅಳುತ್ತಿದ್ದುದನ್ನೂ ಕಂಡು—"ಮಗೂ, ಅಳಬೇಡ, ನಾನು ಸರಿಮಾಡಿಕೊಡುತ್ತೇನೆ". ಎಂದು ಹೇಳಿ ಆ ಚಕ್ರವನ್ನು ಪುನಃ ಬಂಡಿಗೆ ತಗಲಿಸಿ ಭದ್ರವಾಗಿ ಮೊಳೇಹೊಡೆದುಕೊಟ್ಟನು.

ಆಗ ಬಂಡಿಯು ಸರಿಹೋಯಿತು. ಸುಂದರನು ಸಂತೋಷದಿಂದ ಕುಣಿದಾಡಿದನು. ಬಳಿಕ—"ಮುದುಕಯ್ಯ, ನಿನ್ನಿಂದ ನನ್ನ ಗಾಡಿ ಸರಿಹೋಯಿತು. ನಿನಗೆ ಕೈಮುಗಿಯುತ್ತೇನೆ." ಎಂದನು. ಮುದುಕ—"ಒಳ್ಳೆಯದಪ್ಪ. ಇನ್ನು ನಾನು ಹೊರಡುತ್ತೇನೆ". ಸುಂದರ—"ಅಜ್ಜಯ್ಯ, ನೀನು ಬಂಡಿ ಸರಿಮಾಡಿಕೊಟ್ಟಿದ್ದಕ್ಕೆ ನಾನೇನೂ ನಿನಗೆ ಕೊಡಲಿಲ್ಲವಲ್ಲಾ, ಆದ್ದರಿಂದ ನಿನ್ನ ಸಾಮಾನಿನ ಚೀಲವನ್ನು ಗಾಡಿಯಮೇಲಿಡು. ತಳ್ಳಿಕೊಂಡು ಬರುತ್ತೇನೆ". ಮುದುಕ—"ಮಗೂ, ಹಾಗೆ ಎಲ್ಲಿಯವರೆಗೆ ತಳ್ಳಿಕೊಂಡು ಬರುತ್ತೀಯಪ್ಪ?" ಸುಂದರ—"ನಮ್ಮ ಬೀದಿ

ಮೇಲಿನ ಮಾದರಿಗಳನ್ನೊಳಗೊಂಡಿರುವ ಒಂದು ಪುಸ್ತಕವು "ಕಿಂಡರ್‌ಗಾರ್ಟನ್ ಕಥೆಗಳು" ಎಂಬ ಹೆಸರಿನಿಂದ ಈಗ ತಾನೆ ಮ॥ ರಾ॥ ಜೆ. ಕೃಷ್ಣಶಾಸ್ತ್ರಿಗಳಿಂದ ಹೊಸದಾಗಿ ಕನ್ನಡದಲ್ಲಿ ಬರೆಯಲ್ಪಟ್ಟಿದೆ.

ಅದರ 1 ನೇ ಭಾಗದಲ್ಲಿ ಸೂರ್ಯ, ಚಂದ್ರ, ಗಾಳಿ, ಮಳೆ ಮುಂತಾದವುಗಳನ್ನೂ 2 ನೇ ಭಾಗದಲ್ಲಿ ಕುದುರೆ, ನಾಯಿ, ಕಪಿ, ಮೊಲ, ರೇಷ್ಮೆಹುಳು, ಪಾರಿವಾಳ, ಕೋಗಿಲೆ, ಗುಬ್ಬಚ್ಚಿ ಮುಂತಾದ ಪ್ರಾಣಿಗಳನ್ನೂ 3 ನೇ ಭಾಗದಲ್ಲಿ ಹತ್ತಿ, ಬೆಂಗಳೂರು ಹುರಳಿ, ತುಳಸಿ, ರಾಗಿ, ಮಲ್ಲಿಗೆ, ಜೋಳ ಮುಂತಾದ ಸಸ್ಯಗಳನ್ನೂ ವಿಷಯವಾಗಿ ಮಾಡಿದೆ. ಬೋಧನಾಕ್ರಮವನ್ನು ಸಂಭಾಷಣೆಯ ರೂಪದಲ್ಲಿ ದೊಡ್ಡಕ್ಷರದಲ್ಲಿ ಕೊಟ್ಟಿದೆ. ಪ್ರತಿ ವಿಷಯಕ್ಕೂ 2, 3 ರಂತೆ ಒಟ್ಟು 37 ವಿಷಯಕ್ಕೂ 86 ಕಥೆಗಳನ್ನು ಕೊಟ್ಟುಇದೆ. 4 ನೇ ಭಾಗದಲ್ಲಿ ಮಕ್ಕಳ ಸ್ವಭಾವವನ್ನು ಕುರಿತ ಐದು ಕಥೆಗಳನ್ನೂ 5 ನೇ ಭಾಗದಲ್ಲಿ ಆಶ್ಚರ್ಯಜನಕವಾದ ನಾಲ್ಕು ಕಥೆಗಳನ್ನೂ ಕೊಟ್ಟು ಇದೆ.

ಮೇಲ್ಕಂಡ ಪುಸ್ತಕದ ರೀತಿಯನ್ನು ಪೂರ್ವಭಾವಿಯಾಗಿಯೇ ವಾಚಕರಿಗೆ ತಿಳಿಸುವುದಕ್ಕೋಸ್ಕರ ಕೆಲವು ಸಂಭಾಷಣೆಗಳೂ ಕೆಲವು ಕಥೆಗಳೂ ಇಲ್ಲಿ ಕೊಡಲ್ಪಟ್ಟಿವೆ. ನಮ್ಮ ಕನ್ನಡನಾಡಿನ ಉಪಾಧ್ಯಾಯರುಗಳೆಲ್ಲಾ ಆ ಪುಸ್ತಕದ ಪ್ರಯೋಜನವನ್ನು ಪಡೆದು ಬಾಲಶಿಕ್ಷೆಯನ್ನು ನಡೆಸಿದರೆ ಗ್ರಂಥಕರ್ತರ ಶ್ರಮವು ಸಾರ್ಥಕವಾಗುವುದು. ಆ ಪುಸ್ತಕಕ್ಕೆ ಸಂಬಂಧಪಟ್ಟ ನೋಟೀಸನ್ನು ಇದರೊಡನೆ ಕಳುಹಿಸುತ್ತೇವೆ. ಎಡಿಟರ್

ಪಾದರಕ್ಷೆಗಳು ಎರಡನ್ನೂ ಮುದುಕನು ಸಂತೋಷದಿಂದ ಬಿಚ್ಚಿಕೊಂಡು, ಕೋಲನ್ನೂ ಗಾಡಿಯಮೇಲಿಟ್ಟನು. ಸುಂದರನು ಆ ಬೀದಿಯ ಕೊನೆಯವರೆಗೂ ತಳ್ಳಿಕೊಂಡುಹೋಗಿ ಕೊಟ್ಟನು.

ಈ ಕಥೆಯ ಉದ್ದೇಶ.

ಇದು ಮಕ್ಕಳ ಸ್ವಭಾವವನ್ನು ಚೆನ್ನಾಗಿ ವ್ಯಕ್ತಗೊಳಿಸತಕ್ಕ ಕಥೆಯಾಗಿದೆ. ಆ ಸ್ವಭಾವವನ್ನು ಸನ್ಮಾರ್ಗದಲ್ಲಿ ಪ್ರವರ್ತನೆ ಮಾಡಿಸಬೇಕೆಂಬುದೇ ಪರಮೋದ್ದೇಶ.

ಈ ಕಥೆಯಲ್ಲಿ ತೋರುವ ಮಕ್ಕಳ ಸ್ವಭಾವಗಳು.

(1) ಆಟದಲ್ಲಿ ಆಶೆ. (2) ತನ್ನ ಸರಿಯವರಂತೆ ತಾನೂ ಇರಬೇಕೆಂಬ ಕುತೂಹಲ. (3) ಒಬ್ಬರಾಡಿದಂತೆ ತಾನೂ ಆಡಬೇಕೆಂದು ಕಂಡಕಂಡದ್ದನ್ನೆಲ್ಲಾ ಅನುಕರಿಸುವುದು. (4) ವಿನೋದಕರವಾದ ಮಾತುಗಳನ್ನಾಡುವದು. (5) ಮಾಡಿದ ಉಪಕಾರವನ್ನು ಸ್ಮರಿಸಿಕೊಳ್ಳುವುದಲ್ಲದೆ ತನ್ನ ಶಕ್ತಿಗೆ ಅನುಸಾರವಾಗಿ ಪ್ರತ್ಯುಪಕಾರ ಮಾಡಬೇಕೆಂಬ ಬುದ್ಧಿ.

ಅ॥ ಮಾ॥ ಗೌ॥ ನಾರ್ಮಲ್ ಸ್ಕೂಲ್

ಮೈಸೂರು.

ಪಾಠಶಾಲೆಗಳ ಪ್ರದರ್ಶನಶಾಲೆಗಳು.

—0—

ಪ್ರತಿಯೊಂದು ಪಾಠಶಾಲೆಗಳಲ್ಲಿಯೂ ಒಂದು ವಸ್ತುಪ್ರದರ್ಶನಶಾಲೆ ಇರಬೇಕು. ಭೂಗೋಳಶಾಸ್ತ್ರವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದಕ್ಕೆ ಬರೀ ಪುಸ್ತಕಪಾಠದಿಂದ ವಿಶೇಷ ಪ್ರಯೋಜನವಾಗುವುದಿಲ್ಲ. ಪಂಚಭೂತಗಳ ವ್ಯಾಪಾರದಿಂದಲೂ ಮನುಷ್ಯ ಮಾಡತಕ್ಕ ಕೆಲಸಗಳಿಂದಲೂ ಭೂಮಿಯಮೇಲೆ ಯಾವಯಾವ ಬದಲಾವಣೆಗಳು ನಡೆಯುತ್ತವೋ ನಾನಾವಿಧವಾದ ಜನಾಂಗಗಳು ಹೇಗೆ ಭೂಮಿಯಮೇಲೆ ವಾಸಮಾಡುತ್ತಿದ್ದಾರೋ ಅವರು ಯಾವರೀತಿಯಾದ ಉದ್ಯೋಗವನ್ನು ಅವಲಂಬಿಸಿರುತ್ತಾರೋ, ಅವರು ತಮ್ಮ ಬುದ್ಧಿಶಕ್ತಿಯಿಂದಲೂ, ದೇಹಶಕ್ತಿಯಿಂದಲೂ, ಹೇಗೆ ಕೆಲಸವನ್ನು ಮಾಡಿ, ಐಹಿಕಾಮುಷ್ಮಿಕ ಸುಖಗಳನ್ನು ಹೇಗೆ ಪಡೆಯುತ್ತಾರೋ ಈ ವಿಷಯಗಳನ್ನೆಲ್ಲಾ ವಿದ್ಯಾರ್ಥಿಗಳಿಗೆ ಚೆನ್ನಾಗಿ ತಿಳಿಸಬೇಕಾದರೂ ರಿಲೀಫ್ ಭೂಪಟಗಳನ್ನು, ಜನಾಂಗಗಳ ನಕ್ಷೆಗಳನ್ನೂ, ಅವರಿಂದ ನಿರ್ಮಾಣವಾಗಿರತಕ್ಕ ವಸ್ತುಗಳ ನಕ್ಷೆಗಳನ್ನೂ ಹೊಂದಿರಬೇಕು. ರಿಲೀಫ್

ಮನುಷ್ಯನನ್ನು ತೋರಿಸಿದ ಕೂಡಲೇ ಮಕ್ಕಳನ್ನು ಕರೆದುಕೊಂಡು ಪಾಠಕ್ರಮದನ್ವಯ ಪಟ್ಟಣವನ್ನು ಬಿಟ್ಟು ಹೊರಗೆ ಹೊರಟು ಇದ್ದರೆ ವಿಷಯಗಳನ್ನು ವ್ಯಾಪ್ತಿಯಲ್ಲಿ ನೋಡಿದ ವಸ್ತುಗಳ ಸಂಬಂಧಪಟ್ಟಗಳಿಂದ ಆಗತಕ್ಕ ವ್ಯತ್ಯಾಸಗಳನ್ನು ಪ್ರತ್ಯಕ್ಷವಾಗಿ ತೋರಿಸುವುದಕ್ಕೆ ಉಪಕ್ರಮ ಮಾಡಬೇಕು. ಭೂಗೋಳವನ್ನು ಓದುವಾಗ ಭೂಮಿಯ ಮೇಲೆ ಇರತಕ್ಕ ಪ್ರಾಣಿಗಳ ವಿಷಯವನ್ನೂ, ಭೂಮಿಯ ಮೇಲೆ ಇರತಕ್ಕ ಲೋಹಗಳ ವಿಷಯವನ್ನೂ, ಸಮಯಕ್ಕೆ ಉಪಯುಕ್ತವಾದ ಮಣ್ಣಿನ ಸ್ವಭಾವವನ್ನೂ, ಭೂಮಿಯಲ್ಲಿ ಉತ್ಪತ್ತಿಯಾಗತಕ್ಕ ನಾನಾವಿಧವಾದ ಧಾನ್ಯಗಳನ್ನೂ ಭೂಮಿಯ ಮೇಲೆ ಬೆಳೆಯುತ್ತಿರುವ ನಾನಾವಿಧವಾದ ಸಸ್ಯಾದಿಗಳ ವಿಷಯವನ್ನೂ ಕಲಿಸುವಾಗ ವಿಷಯವನ್ನು ಅವುಗಳಲ್ಲಿ ಸಿಕ್ಕತಕ್ಕ ವೃಕ್ಷಗಳೂ, ಪಕ್ಷಿಗಳೂ, ಚತುಷ್ಪಾದ ಜಂತುಗಳೂ, ಚಿತ್ರವಿಚಿತ್ರವಾದ ಪ್ರಾಣಿಗಳು ಇವುಗಳ ವಿಷಯವನ್ನು ವಿದ್ಯಾರ್ಥಿಗಳು ಪಾಠಶಾಲೆಯಲ್ಲಿ ಕೇವಲ ಪುಸ್ತಕಗಳಲ್ಲಿ ಓದುವುದರಿಂದ ಹಾಗೆ ಓದುವವರುಗಳ ಮನಸ್ಸಿಗೆ ವ್ಯಕ್ತಿಜ್ಞಾನವುಂಟಾಗುವುದಿಲ್ಲ. ಆ ವ್ಯಕ್ತಿಜ್ಞಾನವುಂಟಾಗುವುದಕ್ಕೋಸ್ಕರ ಪುಸ್ತಕಗಳನ್ನು ಬರೆಯತಕ್ಕವರು ಆ ವಸ್ತುಗಳ ನಕ್ಷೆಯನ್ನೂ ಕೊಡುತ್ತಿರುವುದುಂಟು. ಆದಾಗ್ಯೂ ಆ ನಕ್ಷೆಗಳಿಂದಲೂ ಕೂಡ ಸಂಪೂರ್ಣವಾದ ವ್ಯಕ್ತಿಜ್ಞಾನವು ಬರುವುದಿಲ್ಲ. ಇಂಥಾ ಸಂದರ್ಭದಲ್ಲಿ ಅಂಥಾ ಪದಾರ್ಥಗಳನ್ನೂ ಪ್ರಾಣಿಗಳನ್ನೂ ವಿದ್ಯಾರ್ಥಿಗಳಿಗೆ ತೋರಿಸಿ ಅವುಗಳ ವಿಷಯವನ್ನು ವಿದ್ಯಾರ್ಥಿಗಳಿಗೆ ಪರೀಕ್ಷಿಸಿ ಹೇಳುವಂತೆಯೂ ಬರೆಯುವಂತೆಯೂ ಮಾಡಿದರೆ ಅವರಿಗೆ ವ್ಯಕ್ತಿಜ್ಞಾನವು ಸಮರ್ಪಕವಾಗಿ ಆಗುತ್ತದೆ. ಹೀಗೆ ಗೊತ್ತಾದ ವಿಷಯಗಳನ್ನು ಮರೆಯುವುದು ಕಷ್ಟಸಾಧ್ಯವಾಗುವುದು. ಭೂಗೋಳದಲ್ಲಿಯೂ, ಚರಿತ್ರೆಯಲ್ಲಿಯೂ ಬರುವ ಪ್ರಸಿದ್ಧವಾದ ವಿಷಯಗಳನ್ನು ನಕ್ಷೆಯ ಮೂಲಕವಾಗಿಯೂ, ವ್ಯಕ್ತಿಜ್ಞಾನವುಂಟಾಗುವಂತೆ ಆಯಾಯ ಪದಾರ್ಥಗಳನ್ನು ತೋರಿಸುವುದರ ಮೂಲಕವಾಗಿಯೂ ಪಾಠಗಳನ್ನು ಹೇಳುವ ಪದ್ಧತಿಯು ಪಾಶ್ಚಾತ್ಯರಲ್ಲಿ ವಿಶೇಷ ಅಭಿವೃದ್ಧಿಗೆ ಬರುತ್ತಲಿದೆ. ಪಾಠಶಾಲೆಯ ಸಂಬಂಧದಲ್ಲಿ ವಸ್ತುಪ್ರದರ್ಶನಶಾಲೆಗಳನ್ನಿಟ್ಟುಕೊಳ್ಳುವುದು ಅತ್ಯಂತ ಆವಶ್ಯಕ. ಅವುಗಳ ಸಹಾಯವಿಲ್ಲದೆ ನಡೆಯುತಕ್ಕ ಪಾಠಗಳು ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನಕಾರಿಯಾಗುವುದಿಲ್ಲ. ಚತುಷ್ಪಾದ ಜಂತುಗಳು, ಪಕ್ಷಿಗಳು, ಹುಳುಗಳು, ಲೋಹಗಳು, ನಾನಾವಿಧವಾದ ಧಾನ್ಯಗಳು, ನಮಗೆ ಭೋಗ್ಯವಸ್ತುಗಳು ಯಾವುದರಿಂದ ನಿರ್ಮಾಣ ಮಾಡಲ್ಪಟ್ಟಿದೆಯೋ ಅಂಥಾ ವಸ್ತುಗಳು ಇವುಗಳನ್ನೆಲ್ಲಾ ಪ್ರತ್ಯಕ್ಷವಾಗಿ ನೋಡಿ ಪರೀಕ್ಷಿಸಿ ಹೊಂದಲ್ಪಟ್ಟ ವ್ಯಕ್ತಿಜ್ಞಾನಕ್ಕೂ ಹಾಗಿಲ್ಲದೆ ಈ ವಿಷಯಗಳನ್ನು ಸುಮ್ಮನೆ ಓದುವುದಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಪ್ರತ್ಯಕ್ಷವಾಗಿ ನೋಡಿ ಓದಿ ತಿಳಿದುಕೊಳ್ಳುವುದರಿಂದ ಉಂಟಾಗತಕ್ಕ ಜ್ಞಾನವು ಹಾಗೆ ನೋಡದೆ ತಿಳಿದುಕೊಳ್ಳತಕ್ಕ ಜ್ಞಾನಕ್ಕಿಂತ ಅತ್ಯಂತ ಪ್ರಯೋಜನಕರವಾದದ್ದೆಂದು ನಾವು ಸಾರಾಳವಾಗಿ ಹೇಳಬಹುದು. ವಸ್ತುಶಾಸ್ತ್ರ, ಭೌತಿಕಶಾಸ್ತ್ರ

ಮೊದಲಾದವುಗಳ ವ್ಯಾಸಂಗಕ್ಕೆ ಸಾಧಕವಾದ ಪದಾರ್ಥಗಳು ಪಾಠಶಾಲೆಯ ವಸ್ತುಪ್ರದರ್ಶನಶಾಲೆಗಳಲ್ಲಿ ಇಟ್ಟಿರುವುದು, ಕಬ್ಬಿಣದ ತಂತಿ, ತಾಂಬ್ರದ ತಂತಿ, ಪ್ಲಾಟಿನಮ್ ಎಂಬ ಲೋಹದ ತಂತಿ, ಗಾಜಿನಕೊಳವೆಗಳು, ಸ್ಪಿರಿಟ್‌ಲ್ಯಾಂಪುಗಳು, ಬರ್ನರುಗಳು, ಸೂಕ್ಷ್ಮವಸ್ತುಗಳನ್ನು ನೋಡುವುದಕ್ಕೆ ಅನುಕೂಲವಾದ ಭೂತಕನ್ನಡಿಗಳು, ಶಬ್ದಗಳನ್ನು ಅಳೆಯತಕ್ಕ ಯಂತ್ರಗಳು, ವಾದ್ಯವಿಶೇಷಗಳು, ಅಯಸ್ಕಾಂತಗಳು, ವಿದ್ಯುಚ್ಛಕ್ತಿಯ ಯಂತ್ರಗಳನ್ನು ನಿರ್ಮಾಣಮಾಡತಕ್ಕ ಯಂತ್ರಗಳು, ನೀರನ್ನು ಎತ್ತುತಕ್ಕ ಯಂತ್ರಗಳು, ವಾಯುವನ್ನು ತೆಗೆಯುವ ಮತ್ತು ಸೇರಿಸುವ ಯಂತ್ರಗಳು, ಸ್ಟೀಮ್‌ಎಂಜನ್ನುಗಳು, ಉತ್ತರಮುಖಿ, ಇವೇ ಮೊದಲಾದ ಅನೇಕ ಪದಾರ್ಥಗಳು ಪಾಠಶಾಲೆಯ ಪ್ರದರ್ಶನಶಾಲೆಯಲ್ಲಿ ಇಡಲ್ಪಡಬೇಕು. ಈ ಪದಾರ್ಥಗಳು ಮಾಡತಕ್ಕ ಕೆಲಸಗಳನ್ನು ತೋರಿಸಿ ಅವುಗಳ ಪೂರ್ವಾಪರಗಳನ್ನು ಪಂಚಭೂತಗಳ ಸಹಾಯವನ್ನು ಅವು ಹೇಗೆ ಹೊಂದುತ್ತವೋ ಅದನ್ನು ತಿಳಿಸಬೇಕು. ಬಾಲ್ಯದಿಂದಲೂ ವಿದ್ಯಾರ್ಥಿಗಳು ತಮ್ಮ ಪಂಚೇಂದ್ರಿಯಗಳನ್ನು ತಮ್ಮ ಬುದ್ಧಿಯನ್ನೂ ತಾವೇ ಉಪಯೋಗಿಸಿ ವಸ್ತುತತ್ವಗಳನ್ನು ತಮ್ಮ ಬುದ್ಧಿಬಲದಿಂದ ತಿಳಿದುಕೊಳ್ಳುವಂತೆ ಮಾಡಿಸಲ್ಪಡತಕ್ಕ ವಿದ್ಯಾಭ್ಯಾಸವೇ ಅತ್ಯುತ್ತಮವಾದ ವಿದ್ಯಾಭ್ಯಾಸ. ಇಂಥಾ ವಿದ್ಯಾಭ್ಯಾಸಕ್ಕೆ ಪಾಠಶಾಲೆಯ ವಸ್ತುಪ್ರದರ್ಶನಶಾಲೆಗಳು ಅತ್ಯಂತ ಅವಶ್ಯಕವಾದವುಗಳು. ಪಾಠಶಾಲೆಗೆ ಸೇರಿದ ಪ್ರದರ್ಶನಶಾಲೆಗಳಲ್ಲಿ ಸೇಖರಿಸಿ ಕ್ರಮವಿಡಿದು ಇಟ್ಟ ವಸ್ತುಗಳಲ್ಲಿ ಅನೇಕ ಪದಾರ್ಥಗಳು ಬಾಲಕರಿಂದ ಸೇಖರಿಸಲ್ಪಟ್ಟವಾಗಿಯೂ ಕ್ರಮವರಿತು ಇಡಲ್ಪಟ್ಟವಾಗಿಯೂ ಇರಬೇಕು. ಇದರಿಂದ ಬಾಲಕರಿಗೆ ಪರೀಕ್ಷಾಶಕ್ತಿಯೂ, ಪದಾರ್ಥಸಂಗ್ರಹದಲ್ಲಿ ಆದರವೂ, ಬೇಕಾದ ವಸ್ತುಗಳನ್ನೂ, ವಿಚಿತ್ರವಸ್ತುಗಳನ್ನೂ ಕೂಡಿಹಾಕುವುದರಲ್ಲಿ ಆಸಕ್ತಿಯೂ ಹೆಚ್ಚುವುದು.

ಕಬ್ಬಿನ ಹಾಲಿನಿಂದ ಸಕ್ಕರೆ ಮಾಡುವ ವಿಧಾನವು.

:o:

(ಬೆಂಗಳೂರು ಹತ್ತಿರದಲ್ಲಿರುವ ಹೆಬ್ಬಾಳು ಗೌರ್ನಮೆಂಟ್ ಫಾರಂನಲ್ಲಿ ತೋರಿಸಿದುದು.)

ಮೈಸೂರು ಸರ್ಕಾರದವರು ಜನಗಳ ಉಪಯೋಗಾರ್ಥವಾಗಿಯೂ ಮತ್ತು ತಿಳುವಳಿಕೆಗಾಗಿಯೂ ಹೆಬ್ಬಾಳಿನಲ್ಲಿರುವ ಫಾರಂನಲ್ಲಿ ಕಬ್ಬಿನ ಹಾಲಿನಿಂದಲೇ ಸಕ್ಕರೆಯನ್ನು ಮಾಡುವ ಕ್ರಮವನ್ನು ನಿದರ್ಶನಪೂರ್ವಕವಾಗಿ ತಿಳಿಸಿದರು. ಆ ಕ್ರಮವು ಈ ಕೆಳಗೆ ವಿವರಿಸಲ್ಪಟ್ಟಿದೆ. ಈ ಹೆಬ್ಬಾಳಿನಲ್ಲಿ ಕಬ್ಬಿನ ಹಾಲನ್ನು ತೆಗೆವ ಗಾಣವು ಇತರಕಡೆ ಇರುವ ಗಾಣಗಳಿಗಿಂತ ಉತ್ತಮವಾದುದಾಗಿದೆ. ಇದರ

ಬೆಲೆ ಸುಮಾರು ನೂರಿಪ್ಪತ್ತೈದು ರೂಪಾಯಿಗಳಾಗಬಹುದು. ಇದು ಪಂಜಾಬ್ ನಾರ್ಹ್ ಕಂಪೆನಿಯಲ್ಲಿ ದೊರೆಯುವುದು. ಇದನ್ನು ಸರಕಾರದವರ ಮೂಲಕ ಒಟ್ಟಾಗಿ ತರಿಸಿಕೊಳ್ಳುವುದು ಒಳ್ಳೆಯದು. ಅದರಲ್ಲಿರುವ ಹಲ್ಲುಗಳನ್ನು ಅವರು ಬೇರೆಯಾಗಿರುವಂತೆ ಮಾಡಿಸಿ ತರಿಸಿಕೊಡುತ್ತಾರೆ. ಈ ಗಾಣದಿಂದ ಒಂದು ಘಂಟೆಗೆ ಐನೂರು ಪೌಂಡು ತೂಗುವ ಕಬ್ಬಿನಿಂದ 300 ಅಥವಾ 350 ಪೌಂಡ್ ಹಾಲು ಬರುವುದು ಅಂದರೆ ಸುಮಾರು ಹನ್ನೆರಡು ಹರವಿ ಹಾಲು ಸಿಕ್ಕುವುದು. ಕಬ್ಬು ಹುಲುಸಾಗಿಯೂ ಹದವಾಗಿಯೂ ಇದ್ದಲ್ಲಿ 300 ಪೌಂಡ್ ಹಾಲಿನಿಂದ 60 ಪೌಂಡ್ ಬೆಲ್ಲವನ್ನು ಪಡೆಯಬಹುದು; ಸಕ್ಕರೆಯನ್ನು ಮಾಡಿದಲ್ಲಿ ಈ 300 ಪೌಂಡ್ ಹಾಲಿನಿಂದ 40 ಪೌಂಡ್ ಸಕ್ಕರೆ 20 ಪೌಂಡ್ ಬೆಲ್ಲ ಸಹ ಸಿಕ್ಕುವುದು. ಈ ಹೆಬ್ಬಾಳಿನಲ್ಲಿ ಈಗ ಸಕ್ಕರೆ ಮಾಡಿ ತೋರಿಸುತ್ತಿರುವ ಕಬ್ಬಿಗೆ ವಯಸ್ಸಾಗಿರುವುದರಿಂದ ಅಂದರೆ ಹದ ವಿಾರಿರುವುದರಿಂದ ಮತ್ತು ಮಳೆ ವಗೈರೆ ಕಮ್ಮಿಯಾಗಿ ಬೆಳೆ ಸಹ ಹುಲುಸಲ್ಲದುದರಿಂದ ನಮಿಗೆ ಸಿಕ್ಕಬೇಕಾಗಿದ್ದ ಒಟ್ಟು 60 ಪೌಂಡ್ ಬೆಲ್ಲ ಮತ್ತು ಸಕ್ಕರೆಗಾಗಿ ಒಟ್ಟು 40 ಪೌಂಡ್ ಮಾತ್ರ ಬೆಲ್ಲ ಮತ್ತು ಸಕ್ಕರೆ ಬಂತು. ಅಂದರೆ ಸಕ್ಕರೆ 25 ಪೌಂಡ್ ಬೆಲ್ಲ 15 ಪೌಂಡು ಸಿಕ್ಕಿದಂತಾಯಿತು. ಕಬ್ಬಿನ ಹಾಲನ್ನು ತೆಗೆದ ಮೇಲೆ ಕಂಡ ಗಾಣಕ್ಕೆ ಮೂರು ಕಣೆಗಳಿರುತ್ತವೆ. ಈ ಗಾಣದಿಂದ ತೆಗೆದ ಹಾಲನ್ನು ಒಂದು ಪೀಪಾಯಿನಮೇಲೆ ತಂತಿಯ ವಂದರಿಯನ್ನಿಟ್ಟು ಅದರ ಮೇಲೆ ಒಂದು ಬಟ್ಟೆಯನ್ನು ಎಂದರೆ ಟುವಾಲನ್ನು ಹಾಕಿ ಶೋಧಿಸುವುದರಿಂದ ಹಾಲಿನಲ್ಲಿದ್ದ ದಪ್ಪ ಕಶ್ಮಲಗಳೆಲ್ಲ ಹೋಗಿಬಿಡುವುವು. ಅನಂತರದಲ್ಲಿ ಈ ಹಾಲಿಗೆ ಸುಣ್ಣದ ಬಗ್ಗಡವನ್ನು ತಕ್ಕಷ್ಟನ್ನು ಬೆರಸಬೇಕು. ಸುಣ್ಣವು ಹೆಚ್ಚಾಗಿ ಬೆರೆಸಲ್ಪಟ್ಟಲ್ಲಿ ಸಕ್ಕರೆಯ ಬಣ್ಣವು ಮಾಸಲಾಗುವುದು.

ಕಬ್ಬಿನ ಹಾಲಿಗೆ ಸುಣ್ಣದ ಬಗ್ಗಡವನ್ನು ಬೆರಸುವ ವಿಧಾನ.—ಒತ್ತುವಕಾಗದವನ್ನು ಕೆಂಪು ದಾಸವಾಳದ ಹೂವಿನ ರಸದಿಂದ ನೆನಸಿದರೆ ಆ ಕಾಗದವು ಕಪ್ಪು ಬಣ್ಣಕ್ಕೆ ಬರುವುದು. ಅದನ್ನು ನಿಂಬೆಹಣ್ಣಿನ ರಸ ಅಥವಾ ಹುಣಸೆಯಹಣ್ಣಿನ ರಸದಿಂದ ನೆನಸಿ ಒಣಗಿಸಿದರೆ ಅದು ಕೆಂಪುಬಣ್ಣದ ಕಾಗದವಾಗುವುದು. ಈ ಕಾಗದವನ್ನು ನೀರಿನಲ್ಲಿ ಇಟ್ಟುಕೊಂಡಿರಬೇಕು. ಈ ಬಗೆಯ ಕಾಗದಕ್ಕೆ ಲಿಟ್ಮಸ್ ಪೇಪರೆಂದು ಹೆಸರು. ಈ ಕಾಗದವನ್ನು ಕಬ್ಬಿನ ಹಾಲಿನಲ್ಲಿ ಅದ್ದಿಕೊಂಡಿದ್ದು ಸುಣ್ಣದ ಬಗ್ಗಡವನ್ನು ಹಾಲಿನಲ್ಲಿ ಬೆರಸುತ್ತಾ ಬಂದಲ್ಲಿ ಈ ಕಾಗದವು ಕ್ರಮೇಣ ಸ್ವಲ್ಪ ಕಪ್ಪು ಬಣ್ಣಕ್ಕೆ ತಿರುಗುವುದು. ಆಗ ಕಬ್ಬಿನಹಾಲು ಸಕ್ಕರೆ ಮಾಡುವುದಕ್ಕೆ ತಕ್ಕ ಹದಕ್ಕೆ ಬಂತೆಂದು ತಿಳಿಯಬೇಕು.

ಚೌಕವಾದ ಮೂರು ಕೊಪ್ಪರಿಗೆಗಳನ್ನು ಕಾಟುಕೋಣವನ್ನುಳ್ಳ ಒಲೆ ಗುಪ್ಪಿನಂತೆ ಒಂದು ಕೊಪ್ಪರಿಗೆಯು ಮತ್ತೊಂದಕ್ಕಿಂತ ಹಳ್ಳದಲ್ಲಿರುವಂತೆ ಇಡಬೇಕು. ಎರಡನೆಯ ಕೊಪ್ಪರಿಗೆಯು ಉಳಿದೆರಡು ಕೊಪ್ಪರಿಗೆಗಳಿಗಿಂತ ವಿಶಾಲವಾಗಿರಬೇಕು.

ಹಿಂದೆ ಹೇಳಿದಂತೆ ಸುಣ್ಣವನ್ನು ಬೆರಸಿದ [illegible] ಕೊಪ್ಪರಿಗೆಗೆ ಹಾಕಿ
[illegible] ಸ್ವಲ್ಪ [illegible] ಕಲ್ಮಶವನ್ನು
ತೆಗೆದು [illegible] ಅದನ್ನು [illegible] ಬಟ್ಟೆಯಿಂದ
[illegible] ರಸವನ್ನು [illegible] ಕೊಪ್ಪರಿಗೆಯ [illegible]
[illegible] ಕೊಪ್ಪರಿಗೆಯ [illegible]
[illegible] ಅದನ್ನು [illegible] ಕೊಪ್ಪರಿಗೆಗೆ [illegible]
[illegible] ಬಟ್ಟೆಯನ್ನು [illegible]
[illegible] ಕೊಪ್ಪರಿಗೆಯಲ್ಲಿ [illegible]
[illegible] ಕಲ್ಮಶವನ್ನು [illegible]
[illegible] ಕೊಪ್ಪರಿಗೆಯ [illegible]
[illegible] ಕೊಪ್ಪರಿಗೆಯ [illegible]
[illegible] ಬೇಕು [illegible] ರಸವನ್ನು [illegible]
[illegible]
[illegible]
[illegible] ಕೊಪ್ಪರಿಗೆಯ [illegible]
[illegible]
[illegible]
[illegible]
[illegible] (Centure [illegible] machine) ಎಂಬ ಯಂತ್ರಕ್ಕೆ [illegible]
[illegible]
[illegible]
[illegible]
[illegible]
[illegible] 500 [illegible] 50 [illegible]
[illegible]
[illegible]
[illegible]
[illegible]
[illegible]
[illegible]
[illegible]

❁ ವಿದ್ಯಾದಾಯಿನಿ. ❁

(A MONTHLY JOURNAL)

ಭಾಗ ೧೭] ಜೂನ್—೧೯೦೯ [ನಂಬಿಕೆ ೬.

ಎಲಿಮೆಂಟರಿ ಪಾಠಶಾಲೆಗಳ ಸಂವಿಧಾನ.

ಹಿಂದೆ ಮದರಾಸಿನಲ್ಲಿ ನಡೆದ ವಿದ್ಯಾಭ್ಯಾಸದ ವಸ್ತುಪ್ರದರ್ಶನ ಕಾಲದಲ್ಲಿ ಎಲಿಮೆಂಟರಿ ಪಾಠಶಾಲೆಗಳ ಸಂವಿಧಾನದ ವಿಷಯದಲ್ಲಿ ಮದರಾಸ್ ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ ಮೆ॥ ಆರ್ಥರ್ ವೆಹ್ಯೂ ಸಾಹೇಬರವರಿಂದ ಒಂದು ಶ್ಲಾಘ್ಯವಾದ ಉಪನ್ಯಾಸವು ಕೊಡಲ್ಪಟ್ಟಿತು. ಈ ಉಪನ್ಯಾಸವು ಬಲು ಮುಖ್ಯವಾದುದೆಂದು ತೋರಿದುದರಿಂದ ಅದರ ಸಾರಾಂಶವನ್ನು ಮುಂದೆ ಬರೆಯುವೆವು.

"ಪಾಠಶಾಲೆಯಲ್ಲಿ ಅತ್ಯುತ್ತಮವಾದ ಉಪಾಧ್ಯಾಯರು ಇರಬಹುದು, ಪಾಠಕ್ಕೆ ಬೇಕಾದ ಉಪಕರಣಗಳೆಲ್ಲವೂ ಇರಬಹುದು, ವಿಶೇಷ ಬುದ್ಧಿವಂತರಾದ ಬಾಲಕರಿರಬಹುದು, ಪಾಠಶಾಲೆಯ ಕೆಲಸಕ್ಕೆ ಬೇಕಾದಷ್ಟು ಸ್ಥಳವೂ ಇರಬಹುದು. ಆದರೆ ಉಪಾಧ್ಯಾಯರ ಕೆಲಸವನ್ನೆಲ್ಲಾ ಕ್ರಮಪಡಿಸುವುದಕ್ಕೂ ಪಾಠಶಾಲೆಯಲ್ಲಿ ನಡೆಯುವ ಅಂಶಗಳನ್ನೆಲ್ಲಾ ಮೇಲ್ವಿಚಾರಣೆ ತೆಗೆದುಕೊಳ್ಳುವುದಕ್ಕೂ ತಕ್ಕ ಯಜಮಾನನಿಲ್ಲದಿದ್ದರೆ ಪಾಠಶಾಲೆಯ ಕೆಲಸವು ಕೆಟ್ಟುಹೋಗುವುದು. ಯಂತ್ರವು ಎಷ್ಟು ಉತ್ತಮವಾದುದಾದರೂ ಅದಕ್ಕೆ ಎಣ್ಣೆಯನ್ನು ಹಾಕಿ ಸದಾ ನೋಡಿಕೊಳ್ಳುವವನು ಒಬ್ಬನು ಇದ್ದೇ ಇರಬೇಕು. ಹೀಗೆ ಸದಾ ನೋಡಿಕೊಳ್ಳುವ ಕೆಲಸಕ್ಕೆ ಸಂವಿಧಾನವೆಂದು ಹೆಸರು. ಕ್ರಮವಾದ ಸಂವಿಧಾನವಿರುವ ಪಾಠಶಾಲೆಯಲ್ಲಿ ವಿದ್ಯಾಭ್ಯಾಸದ ಎಲ್ಲಭಾಗಗಳೂ ಕ್ರಮವಾಗಿ ಹೊಂದಿಸಲ್ಪಟ್ಟಿರುವುದರಿಂದ ಅಂತಹ ಪಾಠಶಾಲೆಯಿಂದ ಬಾಲಕರಿಗೆ ವಿಶೇಷ ಫಲವುಂಟಾಗುವುದು.

ಈ ವಿಧವಾದ ಸಂವಿಧಾನದ ಆವಶ್ಯಕತೆಯು ಎಲ್ಲರಿಗೂ ತಿಳಿದಿರಬೇಕಾದರೂ ಅಷ್ಟು ಚೆನ್ನಾಗಿ ತಿಳಿದಿಲ್ಲವೆಂದು ತೋರುವುದು. ಒಂದು ವರುಷದ ಕೆಳಗೆ ವಿದ್ಯಾಭ್ಯಾಸದ ಇಲಾಖೆಯು ಹೊಸ ನಿಯಮಗಳನ್ನು ಪ್ರಚಾರಪಡಿಸಿದಾಗ ಸೆಕೆಂಡರಿ ಸ್ಕೂಲಿನ ಹೆಡ್ಮಾಸ್ಟರು ತಮ್ಮ ಕಾಲದ ಹೆಚ್ಚು ಭಾಗವನ್ನು ಮೇಲ್ವಿಚಾರಣೆಯಲ್ಲಿಯೇ ವಿನಿಯೋಗಿಸಬೇಕೆಂದು ವಿಧಾಯಕವಾಡಲ್ಪಟ್ಟಿತು. ಸ್ಕೂಲ್ ಮ್ಯಾನೇಜರುಗಳು ಹೆಡ್ಮಾಸ್ಟರು "ಪಾಠ ಹೇಳದಿದ್ದರೆ ಇನ್ನೇನುಮಾಡಬೇಕು" ಎಂದು ಅಂದುಕೊಳ್ಳುತಿರುವರು. ಎಲಿಮೆಂಟರಿ ಪಾಠಶಾಲೆಗಳಲ್ಲಂತೂ ಸಂವಿಧಾನಕ್ಕೆ ಹೆಡ್ಮಾಸ್ಟರು ವಿಶೇಷ ಗಮನಕೊಡುವುದೇ ಅಪರೂಪವಾಗಿರುವುದು. ಅನೇಕ ಎಲಿಮೆಂಟರಿ ಸ್ಕೂಲುಗಳಲ್ಲಿ ಹೆಡ್ಮಾಸ್ಟರು ಪ್ರಥಮಕಕ್ಷ್ಯೆಯ ಉಪಾಧ್ಯಾಯನಾಗಿರುವನು (ಇವನು ಸದಾ ಪ್ರಥಮಕಕ್ಷ್ಯೆಯ ಉಪಾಧ್ಯಾಯನೇ ಆಗಿರಬೇಕೆಂಬುದಕ್ಕೆ ಕಾರಣವು ಮಾತ್ರ ಗೊತ್ತಿಲ್ಲ.) ಇವನು ಸಹಾಯೋಪಾಧ್ಯಾಯರ ಕೆಲಸವನ್ನು ಮೇಲ್ವಿಚಾರಿಸುವುದಕ್ಕೆ ಪ್ರಯತ್ನಪಟ್ಟಾಗ ಅವರು ಇವನ ಪ್ರಯತ್ನಗಳನ್ನು ಮುರಿವುದಕ್ಕೆ ಯತ್ನಿಸುವುದು ಎಲ್ಲೆಲ್ಲೂ ವಾಡಿಕೆಯಾಗಿರುವುದು.

ಸಂವಿಧಾನದ ವಿಷಯದಲ್ಲಿ ಉಪಾಧ್ಯಾಯರು ಸ್ವಂತವಾಗಿ ಯೋಚಿಸಿ ತಮ್ಮ ಯೋಚನೆಗಳನ್ನು ಕಾರ್ಯತಃ ತೋರ್ಪಡಿಸಲು ಅವರಿಗೆ ಸಹಾಯಮಾಡಬೇಕೆಂಬುದೇ ಈ ಉಪನ್ಯಾಸದ ಉದ್ದೇಶವು. ಎಲ್ಲಪಾಠಶಾಲೆಗಳಲ್ಲೂ ಸಂವಿಧಾನವು ಒಂದೇಆಗಿರಬೇಕೆಂದು ಹೇಳುವುದು ಎಂದಿಗೂ ಸರಿಯಲ್ಲ, ಆಯಾಯ ಪಾಠಶಾಲೆಯವರು ಅವರವರಿಗೆ ತಕ್ಕಂತೆ ಸಂವಿಧಾನವನ್ನು ಏರ್ಪಡಿಸಿಕೊಳ್ಳಬೇಕು.

ಇಂಗ್ಲೆಂಡಿನಿಂದ ಬಂದಿರುವ ವಸ್ತುಗಳಲ್ಲಿ ಅನೇಕ ಸ್ಕೂಲುಗಳಲ್ಲಿ ನಡೆಯುವ ಪಾಠದಪಟ್ಟಿಗಳೂ ಪಾಠವನ್ನು ಈ ರೀತಿಯಲ್ಲಿಟ್ಟುಕೊಂಡಿರುವುದಕ್ಕೆ ಕಾರಣಗಳೂ, ಪಾಠದ ಬೋಧನೆಗೆ ಅನುಕೂಲವಾದ ಕ್ರಮಗಳೂ ವಿವರಿಸಲ್ಪಟ್ಟಿರುವ ಪುಸ್ತಕಗಳಿರುವುವು. ಈ ಪುಸ್ತಕಗಳಿಂದ ಅಲ್ಲಿನ ಉಪಾಧ್ಯಾಯರು ತಮ್ಮ ಕೆಲಸದ ವಿಷಯವನ್ನು ತಾವೇ ಯೋಚಿಸಿ ಅವುಗೆ ಅನುಕೂಲವಾದ ಕ್ರಮವನ್ನು ಏರ್ಪಡಿಸಿಕೊಳ್ಳುತಿರುವರೆಂಬುದು ಸ್ಪಷ್ಟವಾಗುವುದು. ಈ ದೇಶದಲ್ಲಿ ಉಪಾಧ್ಯಾಯರು ಅನುಸರಿಸುವ ಕ್ರಮಕ್ಕೆಲ್ಲಾ ಸರ್ಕಾರದವರು ಪ್ರಚಾರಪಡಿಸಿರುವ ವಿದ್ಯಾಭ್ಯಾಸದ ಇಲಾಖೆಯ ನಿಯಮಗಳೇ ಕಾರಣಗಳಾಗಿರುವುವು. ಹೀಗೆ ಎಲ್ಲಕಡೆಯಲ್ಲೂ ಸಂವಿಧಾನವು ಒಂದೇಆಗಿರುವುದು ವಿದ್ಯಾಭ್ಯಾಸದ ಅಭಿವೃದ್ಧಿಗೆ ಅಷ್ಟು ಸಾಧಕವಾದುದಲ್ಲ.

ಕರಿಕ್ಯುಲಂ.

ಪ್ರತಿಯೊಂದು ಸೂಲಿನಲ್ಲೂ ಯಾವ ಪಾಠಗಳನ್ನು ಬೋಧಿಸಬೇಕೆಂಬು ದನ್ನು ಗೊತ್ತುಮಾಡುವಾಗ ಮುಂದಿನ ಅಂಶಗಳಿಗೆ ಗಮನ ಕೊಡಬೇಕಾಗುವುದು.

a. ಉಪಾಧ್ಯಾಯರ ಸಂಖ್ಯೆಯು ಕಡಮೆಯಾದಷ್ಟು ಪಾಠಗಳ ಸಂಖ್ಯೆಯು ಕಡಮೆಯಾಗಿರಬೇಕು. ಆದರೆ ಒಬ್ಬ ಉಪಾಧ್ಯಾಯನು ಒಂದು ತರಗತಿಗೆ ಪಾಠ ಹೇಳುತಿರುವಾಗ ಮತ್ತೊಂದು ತರಗತಿಯನ್ನು ಚಿತ್ರಬರೆವುದು, ಮಣ್ಣಿನಕೆಲಸ, ಕಾಗದ ಹೆಣಿಯುವುದು, ಮುಂತಾದ ಕೆಲಸಗಳಲ್ಲಿ ತೊಡಗಿಸಬಹುದೆಂಬುದನ್ನು ಮರೆಯಬಾರದು. ಪಾಠಶಾಲೆಯಲ್ಲಿರುವ ಉಪಾಧ್ಯಾಯರ ಯೋಗ್ಯತೆಯ ವಿಷಯ ವನ್ನು ಯೋಚಿಸುವುದು ಕರಿಕ್ಯುಲಂ ಗೊತ್ತುಮಾಡುವಾಗ ಬಹು ಮುಖ್ಯವಾಗು ವುದು. ವಸ್ತುಪಾಠವನ್ನು ಬೋಧಿಸುವುದಕ್ಕೆ ಶಕ್ತಿಯಿಲ್ಲದ ಉಪಾಧ್ಯಾಯರಿಗೆ ಈ ಪಾಠವನ್ನು ಕೊಟ್ಟರೆ ಯಾವ ಪ್ರಯೋಜನವೂ ಉಂಟಾಗುವುದಿಲ್ಲ ಇಂತಹ ತರಗತಿಗಳಿಗೆ ವಸ್ತುಪಾಠಕ್ಕೆ ಬದಲಾಗಿ ಓದುವಪಾಠವನ್ನು ಹೆಚ್ಚಿಸಬಹುದು. ಈ ನಿಯಮವು ಭೂಗೋಳ, ಆರೋಗ್ಯ, ಮುಂತಾದ ಪಾಠಗಳಿಗೂ ಅನ್ವಯಿಸುವುದು. ಆದುದರಿಂದ ಪ್ರತಿಯೊಬ್ಬ ಹೆಡ್ಮಾಸ್ಟರು ತನ್ನ ಸ್ಕೂಲಿನ ಪ್ರತಿಯೊಂದು ತರಗತಿಗೂ ಪಾಠದ ಕರಿಕ್ಯುಲಂ ನಿಷ್ಕರ್ಷಿಸುವಾಗ ಆ ತರಗತಿಯ ಉಪಾಧ್ಯಾಯನ ಯೋಗ್ಯತೆ ಯನ್ನು ಮನಸ್ಸಿನಲ್ಲಿಡಬೇಕಾಗುವುದು.

b. ಕರಿಕ್ಯುಲಂ ನಿಷ್ಕರ್ಷಿಸುವಾಗ ಸ್ಥಳ, ಮತ್ತು ಬಾಲಕರು ಜನಾಂಗ ದಲ್ಲಿ ಯಾವವರ್ಗಕ್ಕೆ ಸೇರಿದವರು ಈ ಅಂಶಗಳನ್ನು ಯೋಚಿಸಬೇಕಾಗುವುದು. ಕರ್ನೂಲಿನ ಒಂದು ಹಳ್ಳಿಯಲ್ಲಿರುವ ಹೊಲೆಯರ ಸ್ಕೂಲಿನಲ್ಲೂ, ಕುಂಭಕೋಣದಲ್ಲಿ ರುವ ಒಂದು ಬ್ರಾಹ್ಮಣ ಹುಡುಗರ ಸ್ಕೂಲಿನಲ್ಲೂ ಒಂದೇವಿಧವಾದ ಪಾಠಗಳನ್ನು ಬೋಧಿಸಬೇಕೆಂದು ಹೇಳುವುದು ಸರಿಯಲ್ಲ. ಎಲ್ಲಾ ಎಲಿಮೆಂಟರಿ ಪಾಠಶಾಲೆಗ ಳಿಗೂ ಸಾಮಾನ್ಯವಾದ ಕೆಲವು ಅಂಶಗಳು ಇದ್ದೇಇರುವುವು, ಆದರೆ ಆಯಾಸ್ಥಳ ಕ್ಕೇ ತಕ್ಕ ಕೆಲವು ಅಂಶಗಳೂ ಇದ್ದೇಇರುವುವು, ಈ ವಿಷಯದಲ್ಲಿ ಅಲ್ಲಿನ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಅವಶ್ಯಕವು. ಜನರಿಗೆ ಓದುಬರಹವು ತಿಳಿ ಯದಿದ್ದರೂ ಅವರ ಮಕ್ಕಳಿಗೆ ನಡೆಯಬೇಕಾದ ವಿದ್ಯಾಭ್ಯಾಸದ ವಿಷಯದಲ್ಲಿ ಯಾವ ಅಭಿಪ್ರಾಯವೂ ಇಲ್ಲವೆಂದು ಭಾವಿಸುವುದು ಸರಿಯಲ್ಲ. ಮೇಲಾಗಿ ಈ ಜನರ ಸಹಾಯದಿಂದಲೇ ಅನೇಕ ಕಡೆಯಲ್ಲಿ ಪಾಠಶಾಲೆಗಳು ನಡೆಯಬೇಕಾಗು

ವುದು, ಇಂತಹ ಕಡೆಗಳಲ್ಲಿ ಕರಿಕ್ಯುಲಂ ವಿಷಯದಲ್ಲಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಆವಶ್ಯಕವಾಗಿ ಕಾಣುವುದು.

ಪಾಠಶಾಲೆಯಲ್ಲಿ ಬೋಧಿಸಬೇಕಾದ ಪಾಠಗಳ ಪಟ್ಟಿಯನ್ನು ಗೊತ್ತುಮಾಡಿದಮೇಲೆ ಪ್ರತಿಯೊಂದು ತರಗತಿಯಲ್ಲೂ ಯಾವ್ಯಾವ ಪಾಠದಲ್ಲಿ ಎಷ್ಟೆಷ್ಟು ಭಾಗವಾಗಬೇಕೆಂಬುದನ್ನು ಗೊತ್ತುಮಾಡಬೇಕಷ್ಟೆ. ಈ ಅಂಶವನ್ನು ನಾವು ಗೊತ್ತುಮಾಡುವಾಗ ಮುಂದಿನ ಮೂರು ವಿಷಯಗಳನ್ನು ಗಮನಿಸಬೇಕಾಗುವುದು.

1. ಪ್ರತಿಯೊಂದು ಪಾಠದಲ್ಲೂ ಆ ಪಾಠದ ಭಾಗಗಳನ್ನು ಯಾವಕ್ರಮದಲ್ಲಿ ತೆಗೆದುಕೊಳ್ಳಬೇಕೆಂಬುದು. ಈ ವಿಷಯದಲ್ಲಿ ಅನೇಕ ಪುಸ್ತಕಗಳಿರುವುವು. ಅವುಗಳಲ್ಲಿರುವ ಅಂಶಗಳನ್ನೆಲ್ಲಾ ಇಲ್ಲಿ ಚರ್ಚಿಸುವುದು ಅಸಾಧ್ಯವು. ಹೊಸದಾಗಿ ಪ್ರಚಾರಪಡಿಸಲ್ಪಟ್ಟಿರುವ ಕರಿಕ್ಯುಲಂನಲ್ಲಿ ಈ ವಿಷಯದಲ್ಲಿ ಉಪಾಧ್ಯಾಯರಿಗೆ ಸ್ವಲ್ಪ ಸಹಾಯವು ದೊರಕುವುದು. ಇದಕ್ಕೆ ಒಂದು ನಿದರ್ಶನವನ್ನು ಕೊಡುವೆವು. ಪೂರ್ವದಲ್ಲಿ ಪ್ರಚಾರಪಡಿಸಿದ್ದ ನಿಯಮದಲ್ಲಿ ಮಕ್ಕಳ ತರಗತಿಗಳಲ್ಲೂ, ಒಂದನೇ ತರಗತಿಯಲ್ಲೂ ಗಣಿತದಲ್ಲಿ ಕೂಡುವುದು, ಮಗ್ಗಿಯಕೋಷ್ಟಕಗಳು ಇಷ್ಟುಮಾತ್ರ ತಿಳಿಸಬೇಕೆಂತಲೂ ಮೂರನೇ ತರಗತಿಯಲ್ಲಿ ಗುಣಕಾರ, ಭಾಗಹಾರವನ್ನು ಪ್ರಾರಂಭಿಸಬೇಕೆಂತಲೂ ಗೊತ್ತುಮಾಡಲ್ಪಟ್ಟಿತ್ತು. ಆದರೆ ವಿದ್ಯಾಭ್ಯಾಸದ ವಿಷಯದಲ್ಲಿ ವಿಶೇಷ ಅನುಭವವುಳ್ಳ ಅನೇಕಉಪಾಧ್ಯಾಯರು ಕೂಡುವುದು, ಕಳೆವುದು, ಗುಣಿಸುವುದು, ಭಾಗಿಸುವುದು; ಈ ನಾಲ್ಕು ಅಂಶಗಳನ್ನು ಪರಸ್ಪರ ಸಂಬಂಧಿಸಿಕೊಂಡು ಜೊತೆಯಲ್ಲೇ ತಿಳಿಸಬೇಕೆಂದು ಅಭಿಪ್ರಾಯಪಡುವರು. ಈಗಿನ ನಿಯಮವು ಇದಕ್ಕನುಸಾರವಾಗಿ ವ್ಯತ್ಯಾಸಪಡಿಸಲ್ಪಟ್ಟಿರುವುದು. ಹೀಗೆಯೇ ಭೂಗೋಳ, ಆರೋಗ್ಯ, ಪ್ರಕೃತಿವಿಮರ್ಶೆ ಈ ಪಾಠಗಳ ವಿಷಯದಲ್ಲೂ ಉಪಾಧ್ಯಾಯರು ಈ ಪಾಠಗಳನ್ನು ಹೇಗೆ ವಿಭಾಗಿಸಿಕೊಳ್ಳಬೇಕು, ಒಂದನ್ನು ಮತ್ತೊಂದಕ್ಕೆ ಹೇಗೆ ಹೊಂದಿಸಿಕೊಳ್ಳಬೇಕು, ಎಂಬೀ ಅಂಶಗಳನ್ನು ಯೋಚಿಸಬೇಕಾಗುವುದು.

2. ಪ್ರತಿಯೊಂದು ಪಾಠದಲ್ಲೂ ಯಾವಭಾಗಕ್ಕೆ ವಿಶೇಷ ಗಮನಕೊಡಬೇಕು, ಯಾವಭಾಗವನ್ನು ಸ್ವಲ್ಪಮಟ್ಟಿಗೆ ಮೇಲೆಮೇಲೆಯೇ ನಡೆಸಿಬಿಡಬಹುದು, ಅಥವಾ ನಡೆಸದೆಯೇ ಬಿಡಬಹುದು, ಎಂಬೀ ಅಂಶಗಳನ್ನು ಯೋಚಿಸಬೇಕು. ನಿದರ್ಶನವಾಗಿ ಹಿಂದೂಚರಿತ್ರೆಯನ್ನು ಬೋಧಿಸುವಾಗ ಸಣ್ಣ ತರಗತಿಗಳಲ್ಲಿ ಮಹಾತ್ಮರ ಕಥೆಗಳು ಅಥವಾ ಸಮೀಪದಲ್ಲಿರುವ ಸ್ಥಳಗಳಿಗೆ ಸಂಬಂಧಪಟ್ಟ ಇತಿಹಾಸಗ

ಳು ಇವುಗಳಿಗೆ ವಿಶೇಷ ಗಮನ ಕೊಡಬೇಕಾಗುವುದು. ಗಣಿತದಲ್ಲಿ ಇಂಗ್ಲೆಂಡಿನೊಡನೆ ವ್ಯಾಪಾರಮಾಡುವ ಪಟ್ಟಣದ ಬಾಲಕರಿಗೆ ಇಂಗ್ಲೀಷು ನಾಣ್ಯದ ಕೋಷ್ಟಕವನ್ನು ತಿಳಿಸಬೇಕಾಗುವುದು. ಹಳ್ಳಿಯ ಸ್ಕೂಲುಗಳಲ್ಲಿ ಇದರ ಆವಶ್ಯಕತೆಯೇ ಇಲ್ಲ. ಹಳ್ಳಿಯಸ್ಕೂಲುಗಳಲ್ಲಿ ಅಡ್ಡ, ಹಾಗ, ಮುಪ್ಪಾಗ ಇವುಗಳ ವಿಷಯವನ್ನು ಬಾಲಕರಿಗೆ ತಿಳಿಸುವುದರಿಂದ ಹೆಚ್ಚುಮಕ್ಕಳನ್ನು ಪಾಠಶಾಲೆಗೆ ಎಳೆಯಬಹುದು. ಭೂಗೋಳದಲ್ಲಿ ಪಟ್ಟಣದ ಮಕ್ಕಳಿಗೆ ಸ್ವದೇಶದ ವ್ಯಾಪಾರ, ಕೈಗಾರಿಕೆ— ಇವುಗಳನ್ನು ಅನ್ಯದೇಶದ ವ್ಯಾಪಾರ ಕೈಗಾರಿಕೆ ಇವುಗಳೊಡನೆ ಹೋಲಿಸುವಂತೆ ಮಾಡಬೇಕಾಗುವುದು. ಹಳ್ಳಿಗಳಲ್ಲಿ ಸ್ವದೇಶದ ವಾಯುಗುಣ, ಬೆಳೆ, ಇವುಗಳನ್ನು ಅನ್ಯದೇಶದ ಬೆಳೆ ವಾಯುಗುಣ ಇವುಗಳೊಡನೆ ಹೋಲಿಸುವಂತೆ ಮಾಡುವುದು ಅನುಕೂಲವು. ಮಕ್ಕಳು ಪಾಠಶಾಲೆಯಲ್ಲಿ ಎರಡುಮೂರು ವರ್ಷವೇ ಇದ್ದು ಬಿಟ್ಟುಹೋಗುವುದಾದರೆ ಅವರಿಗೆ ಯಾವಯಾವ ಭಾಗಗಳನ್ನು ಮಾತ್ರ ತಿಳಿಸಬೇಕು, ಯಾವಯಾವುದನ್ನು ಬಿಡಬೇಕು ಎಂಬೀ ಅಂಶಗಳನ್ನು ನೋಡಬೇಕಾಗುವುದು. ಹೀಗೆ ಪ್ರತಿಯೊಂದು ಸ್ಕೂಲಿನಲ್ಲೂ ಪ್ರತಿ ಪಾಠದಲ್ಲೂ ಯಾವಯಾವ ಭಾಗಕ್ಕೆ ವಿಶೇಷ ಗಮನ ಕೊಡಬೇಕು, ಯಾವಯಾವದನ್ನು ತೇಲಿಸಬೇಕು, ಎಂಬೀ ಅಂಶಗಳನ್ನು ನೋಡಬೇಕಾಗುವುದು.

3. ಬಾಲಕರ ವರ್ಗೀಕರಣ:—ಸ್ಕೂಲಿನಲ್ಲಿ ಎಷ್ಟು ತರಗತಿಗಳಿರಬೇಕು, ಪ್ರತಿಯೊಂದು ತರಗತಿಯಲ್ಲೂ ಬಾಲಕರು ಎಷ್ಟು ಕಾಲವನ್ನು ಕಳೆಯಬೇಕು, ಎಂಬ ಅಂಶಗಳನ್ನು ನೋಡಬೇಕಾಗುವುದು. ಸಾಧಾರಣವಾಗಿ ಪ್ರತಿಯೊಬ್ಬ ಬಾಲಕನೂ ಒಂದೊಂದು ತರಗತಿಯಲ್ಲಿ ಒಂದೊಂದುವರ್ಷವಿರುವನು. ಆದರೆ ಅನೇಕ ಸ್ಕೂಲುಗಳಲ್ಲಿ ಉಪಾಧ್ಯಾಯರ ಅಥವಾ ಬಾಲಕರ ಸಂಖ್ಯೆಯು ಕಡಮೆಯಾಗಿರುವುದರಿಂದ ಇದು ಅಸಾಧ್ಯವಾಗಿರುವುದು. ಅನೇಕವೇಳೆ ಒಬ್ಬ ಉಪಾಧ್ಯಾಯನು ಐದು ತರಗತಿಗಳನ್ನು ನೋಡಿಕೊಳ್ಳಬೇಕಾಗುವುದು. ಅವನು ಒಂದೇಕಾಲದಲ್ಲಿ ಐದು ಸ್ಥಳಗಳಲ್ಲಿದ್ದುಕೊಂಡು ಐದುಕೆಲಸಗಳನ್ನು ಮಾಡಬೇಕಾಗುವುದು. ವಾಡಿಕೆಯಾಗಿ ಅವನು ಇದು ಅಸಾಧ್ಯವೆಂದು ತಿಳಿದು ಕೆಲವರಿಗೆ ಮಾತ್ರ ಗಮನಕೊಟ್ಟು ಉಳಿದನರು ಸುಮ್ಮನೆ ಕುಳಿತಿರುವಂತೆ ಮಾಡುವನು. ಮುಂದೆ ಹೇಳಿರುವ ಅಂಶಗಳಿಂದ ಈ ಕಷ್ಟವಾದ ಕೆಲಸದಲ್ಲಿ ಉಪಾಧ್ಯಾಯರಿಗೆ ಸ್ವಲ್ಪ ಸಹಾಯವು ದೊರೆಯುವುದು. ಉಪಾಧ್ಯಾಯರ ಸಂಖ್ಯೆಯು ಕಡಮೆಯಾಗಿದ್ದರೆ ತರಗತಿಗಳ

ಸಂಖ್ಯೆಯು ಕಡಮೆಯಾಗಿರಬೇಕೆಂದು ಅನೇಕರು ಹೇಳುವರು. ಆದರೆ ಇದರಲ್ಲೂ ಅನೇಕ ತೊಂದರೆಗಳಿರುವವು. ಕೆಲವರಿಗೆ ತಕ್ಕಷ್ಟು ಕೆಲಸವು ದೊರೆಯದಿರಬಹುದು. ಕೆಲವರಿಗೆ ಯೋಗ್ಯತೆ ಮೀರಿದ ಕೆಲಸವು ದೊರೆಯಬಹುದು. ಕೆಲಸವು ವಯಸ್ಸಿಗೆ ತಕ್ಕಂತಿರಬೇಕೆಂಬ ನಿಯಮವು ಹೋಗಿಬಿಡುವುದು. ಕೆಲವು ಪಾಠಗಳಿಗೆ ಬಹುಮಂದಿ ಬಾಲಕರನ್ನು ಒಟ್ಟಾಗಿ ಸೇರಿಸುವುದು ಅನುಕೂಲವು, ಇನ್ನು ಕೆಲವಕ್ಕೆ ಸಣ್ಣ ಸಣ್ಣ ಭಾಗಗಳನ್ನಾಗಿ ಮಾಡಿಕೊಳ್ಳುವುದು ಅನುಕೂಲವು, ನಿದರ್ಶನವಾಗಿ ನಾನಾ ವಿಧವಾದ ಆಟಗಳು, ಕೈಕೆಲಸಗಳು, ಓದುವುದು, ಬರವಣಿಗೆ, ಭೂಗೋಳ, ಪ್ರಕೃತಿ ವಿಮರ್ಶೆ ಇವಕ್ಕೆಲ್ಲಾ ಬಹುಮಂದಿ ಬಾಲಕರನ್ನು ಒಟ್ಟಾಗಿ ಸೇರಿಸಬಹುದು. ಆದರೆ ಈ ಕೆಲಸವು ಗಣಿತದ ವಿಷಯದಲ್ಲಿ ಸಾಧ್ಯವಲ್ಲ. ಗಣಿತದಲ್ಲಿ ಅವರವರ ಯೋಗ್ಯತೆಗೆ ತಕ್ಕಂತೆ ಬಾಲಕರನ್ನು ಸಣ್ಣ ಸಣ್ಣ ವರ್ಗಗಳಲ್ಲಿ ವಿಂಗಡಿಸಬೇಕಾಗುವುದು.

ಈ ಅಂಶಗಳನ್ನೆಲ್ಲಾ ಗೊತ್ತುಮಾಡಿಕೊಂಡಮೇಲೆ ಪ್ರತಿಯೊಬ್ಬ ಉಪಾಧ್ಯಾಯನೂ ಪ್ರತಿಯೊಂದು ಪಾಠಕ್ಕೂ ಕೊಟ್ಟಿರುವ ಕಾಲಕ್ಕನುಗುಣವಾಗಿ ಕೆಲಸವನ್ನು ವಿಭಾಗಿಸಿಕೊಂಡು ಒಟ್ಟು ವರ್ಷದ ಕೆಲಸದಪಟ್ಟಿಯನ್ನು ಬರೆದಿಡಬೇಕಾಗುವುದು. ಅನೇಕ ಪಾಠಶಾಲೆಗಳಲ್ಲಿ ಈ ಪಟ್ಟಿಯನ್ನು ಬರೆಯುವ ವಾಡಿಕೆಯಿಲ್ಲ. ಕೆಲಸದ ವೇಗವು ಉಪಾಧ್ಯಾಯನ ಮನಸ್ಸಿನಂತೆಯೂ ಇನ್ಸ್‌ಪೆಕ್ಷನ್‌ಕಾಲದ ಸಮೀಪದಂತೆಯೂ ಇರುವುದು. ಇದು ಸರಿಯಲ್ಲ. ಆಯಾಯ ತಿಂಗಳಲ್ಲಿ ನಡೆಯಬೇಕಾದ ಪಾಠವನ್ನು ಸಾಧ್ಯವಾದಮಟ್ಟಿಗೂ ಆ ತಿಂಗಳಲ್ಲೇ ಮುಗಿಸುವುದು ಅನುಕೂಲವು.

ಹೆಡ್ಮಾಷ್ಟರು ಪ್ರತಿ ತರಗತಿಯಲ್ಲೂ ನಡೆಯುತ್ತಿರುವ ಕೆಲಸವನ್ನು ತಿಳಿಯಬೇಕಾದರೆ ಆ ತರಗತಿಯವರು ಕೆಲಸದ ಅಭಿವೃದ್ಧಿಯನ್ನು ತೋರಿಸುವ ಪುಸ್ತಕವನ್ನಿಡಬೇಕು. ಈ ಪುಸ್ತಕದಲ್ಲಿ ಪ್ರತಿದಿವಸದಲ್ಲೂ ನಡೆಯುವ ಕೆಲಸವನ್ನು ಬರೆಯುತ್ತಿರಬೇಕು. ಬರವಣಿಗೆಯು ವಿಶೇಷವಿರಬೇಕಾದುದಿಲ್ಲ. ಅನೇಕವೇಳೆ ಒಂದೆರಡು ಮಾತುಗಳು ಸಾಕು. ಮುಖ್ಯಪಾಠಗಳ ವಿಷಯದಲ್ಲಿ ನಡೆದ ಅಂಶಗಳನ್ನು ಸಂಗ್ರಹಿಸಿ ಬರೆಯಬೇಕು. ಈ ರೆಕಾರ್ಡ್ ಪುಸ್ತಕದಲ್ಲಿ ಉಪಾಧ್ಯಾಯರು ತಮ್ಮ ಸಹಾಯಕ್ಕಾಗಿ ಉಪಯೋಗಿಸಿಕೊಂಡ ಪುಸ್ತಕಗಳ ಹೆಸರನ್ನು ಬರೆದಿಡಬೇಕು. ಇದರಿಂದ ಮುಂದೆ ವಿಶೇಷ ಸಹಾಯವಾಗುವುದು.

ಎಲ್ಲಾ ವೇಳಾ ಪತ್ರಿಕೆಗಳಲ್ಲೂ ಇರಬೇಕಾದ, ಸಂವಿಧಾನ ಪುಸ್ತಕಗಳಲ್ಲೆಲ್ಲಾ ಹೇಳಿರುವ ವೇಳಾ ಪತ್ರಿಕೆಯನ್ನು ಏರ್ಪಡಿಸಲು ಅನುಕೂಲವಾದ ಕೆಲವು ನಿಯ

ಮಗಳು ಇರುವುವು, ಆಗಾಗ್ಗೆ ಸ್ವಲ್ಪ ವಿರಾಮಗಳನ್ನು ಕೊಡುವುದು, ಮಕ್ಕಳ ತರಗತಿಗಳಲ್ಲಿ ಪಾಠಕಾಲವು ಬಹಳ ದೀರ್ಘವಾಗಿಲ್ಲದಿರುವುದು; ಮುಖ್ಯಪಾಠಗಳನ್ನು ದಿವಸದ ಆದಿಯಲ್ಲಿ ಬೋಧಿಸುವುದು; ಇವೇ ಇಂತಹ ನಿಯಮಗಳಿಗೆ ನಿದರ್ಶನಗಳು. ಇವು ಎಲ್ಲ ವೇಳಾಪತ್ರಿಕೆಗಳಲ್ಲೂ ಇರಬೇಕಾದುವು; ಇವುಗಳ ವಿಷಯವನ್ನು ಇಲ್ಲಿ ಚರ್ಚಿಸಬೇಕಾದುದಿಲ್ಲ. ಪ್ರತಿಯೊಂದು ಸ್ಕೂಲಿಗೂ ಅನ್ವಯಿಸುವ ಕೆಲವು ಸಣ್ಣ ನಿಯಮಗಳಿರುವುವು. ಅವುಗಳನ್ನು ಮುಖ್ಯೋಪಾಧ್ಯಾಯರು ಯೋಚಿಸಬೇಕಾಗುವುದು. ನಿದರ್ಶನವಾಗಿ ಅನೇಕ ತರಗತಿಗಳು ಒಂದೇ ಹಾಲಿನಲ್ಲಿ ನಡೆಯುವ ಒಂದು ಸ್ಕೂಲಿನಲ್ಲಿ ಒಂದೇಕಾಲದಲ್ಲಿ ಎಲ್ಲ ತರಗತಿಗಳಿಗೂ ಬಾಯಿಪಾಠವನ್ನಿಡುವುದು ಸರಿಯಲ್ಲ. ಒಂದಕ್ಕೆ ಚಿತ್ರ, ಬರವಣಿಗೆ, ಇವು ಇರುವಾಗ ಇನ್ನೊಂದಕ್ಕೆ ಓದುವುದು, ಪದ್ಯ ಹೇಳುವುದು, ಇರಬಹುದು. ಎಲ್ಲ ತರಗತಿಗಳಿಗೂ ನಾನಾವಿಧವಾದ ಗಾನಗಳನ್ನು ಒಂದು ಹಾಲಿನಲ್ಲಿ ಒಂದೇಸಮಯದಲ್ಲಿ ಹೇಳಿಕೊಡುವ ಸ್ಕೂಲುಗಳನ್ನು ನಾನು ನೋಡಿರುವೆನು. ಈ ಸಂದರ್ಭದಲ್ಲಿ ಪ್ರತಿಯೊಂದು ಸ್ಕೂಲಿನಲ್ಲಿಯೂ ಒಂದು ಗಡಿಯಾರವಿರಬೇಕೆಂದು ಹೇಳುವುದು ಆವಶ್ಯಕವು.

ಪಾಠಶಾಲೆಯಲ್ಲಿ ವೇಳಾ ಪತ್ರಿಕೆ ಇಲ್ಲದಿರುವುದಕ್ಕೆ ಒಬ್ಬನೇ ಉಪಾಧ್ಯಾಯನಿರುವುದನ್ನು ಕೆಲವುವೇಳೆ ಕಾರಣವಾಗಿ ತರುವರು. ಉಪಾಧ್ಯಾಯನ ಕಾಲದ ಬೆಲೆಯು ಹೆಚ್ಚಿದಷ್ಟೂ ಅದನ್ನು ವಿನಿಯೋಗಿಸುವ ರೀತಿಯನ್ನು ತೋರ್ಪಡಿಸುವುದು ಆವಶ್ಯಕವಲ್ಲವೇ ?

ಉಪಾಧ್ಯಾಯರು ಕಡಿಮೆಯಾಗಿರುವಾಗ ವೇಳಾಪತ್ರಿಕೆಯಲ್ಲಿ ಪಾಠಕಾಲವನ್ನು ತೋರಿಸಲು ಮೂರುಮಾರ್ಗಗಳನ್ನು ಅನುಸರಿಸಬಹುದು. ಅವುಗಳನ್ನು ಇಲ್ಲಿ ಸೂಚಿಸುವೆವು.

(*a*) ಎರಡು ಮೂರು ತರಗತಿಗಳಿಗೆ ಒಂದೇ ಕಾಲದಲ್ಲಿ ಒಬ್ಬನು ಕೆಲಸವನ್ನು ಹೊಂದಿಸಿಕೊಂಡು ನಡೆಸಬಹುದು. ಮುಂದಿನ ಪಟ್ಟಿಯಲ್ಲಿ ಮೂರುನಾಲ್ಕನೆ ತರಗತಿಗಳಿಗೆ ಹೀಗೆ ಕೆಲಸ ನಡೆಸಲು ವಾಡಿಕೆಯಾಗಿ ಉಪಾಧ್ಯಾಯರುಅನುಸರಿಸುವ ರೀತಿಯು ಕಾಣುವುದು.

ಕಾಲ.

ತರಗತಿ	A.	B.	C.	D	E.	F.
IV	ಓದುವುದು,	ವಸ್ತುಪಾಠಗಳು,	ಭೂಗೋಳ,	ಬರವಣಿಗೆ,	ಗಣಿತ,	ಮಣ್ಣಿನಕೆಲಸ,

III ಅಂಕಗಣಿತ, ಭೂಗೋಳ, ಉಕ್ತಲೇಖನ, ಮಣ್ಣಿನಕೆಲಸ, ಓದುವುದು, ಚಿತ್ರ,

ಈ ವೇಳಾಪತ್ರಿಕೆಯಲ್ಲಿ ಉಪಾಧ್ಯಾಯರ ಗಮನವನ್ನು ವಿಶೇಷವಾಗಿ ಅಪೇಕ್ಷಿಸುವ ಎರಡು ಪಾಠಗಳು ಎರಡುಕಡೆಯಲ್ಲೂ ಒಂದೇ ಕಾಲದಲ್ಲಿ ಬಂದಿರುವುವು. ಮತ್ತು ಉಪಾಧ್ಯಾಯರ ಗಮನವನ್ನು ವಿಶೇಷವಾಗಿ ಅಪೇಕ್ಷಿಸದ ಎರಡುಪಾಠಗಳೂ ಎರಡು ಕಡೆಯಲ್ಲಿ ಏಕಕಾಲದಲ್ಲಿ ಬಂದಿರುವವು. ಇಂತಹ ವೇಳಾಪತ್ರಿಕೆಯಿಂದ ವಿಶೇಷ ಪ್ರಯೋಜನವಿಲ್ಲ. ಈ ವೇಳಾ ಪತ್ರಿಕೆಯೊಡನೆ ಮುಂದಿನ ವೇಳಾಪತ್ರಿಕೆಯನ್ನು ಹೋಲಿಸಿ ನೋಡೋಣ.

	ಕಾಲ.					
ತರಗತಿ	A	B	C	D	E	F
IV	ಓದುವುದು,	ವಾಕ್ಯರಚನೆ, ಚಿತ್ರ,	ಗಣಿತ,	ಭೂಗೋಳ, ಪಾಠಕ್ಕೆಸಿದ್ಧಪಡಿಸುವುದು.	ಭೂಗೋಳ,	ಮಣ್ಣಿನಕೆಲಸ,
III	ಓದುವಪಾಠಕ್ಕೆ ಸಿದ್ಧಪಡಿಸುವುದು.	ಓದುವುದು,	ಮಣ್ಣಿನ ಕೆಲಸ, ಚಿತ್ರ,	ಭೂಗೋಳಪಾಠ,	ವಾಕ್ಯರಚನೆ,	ಗಣಿತ,

IV ನೇ ತರಗತಿಯಲ್ಲಿ B ಗಂಟೆಯಲ್ಲಿ ಹಿಂದಿನ ಗಂಟೆಯಲ್ಲಿ ಓದಿದ ವಿಷಯದಲ್ಲಿ ವಾಕ್ಯರಚನೆಯನ್ನು ಬರೆಸಬಹುದು. ಮತ್ತು ಅದೇ ಕಾಲದಲ್ಲಿ ಅದಕ್ಕೆ ಸಂಬಂಧಪಟ್ಟ ಚಿತ್ರವನ್ನು ಬರೆಸಬಹುದು. D ಕಾಲದಲ್ಲಿ ಮುಂದಿನ ಗಂಟೆಯಲ್ಲಿ ನಡೆಯುವ ಪಾಠವನ್ನು ಒಂದಾವೃತ್ತಿ ಓದಿಕೊಳ್ಳಬಹುದು. F ಕಾಲದಲ್ಲಿ ಹಿಂದಿನಗಂಟೆಯಲ್ಲಿ ನಡೆದ ಪಾಠಕ್ಕೆ ಸಂಬಂಧಪಟ್ಟಂತೆ ರಿಲೀಫ್ ಮ್ಯಾಪ್ ಮೊದಲಾದ ಮಣ್ಣಿನ ಕೆಲಸವನ್ನು ಮಾಡಬಹುದು.

III. ನೆಯ ತರಗತಿಯಲ್ಲಿ A ಕಾಲದಲ್ಲಿ ಬಾಲಕರು ಮುಂದಿನ ಗಂಟೆಯಲ್ಲಿ ಬರುವ ಓದುವ ಪಾಠವನ್ನು ಮೆಲ್ಲಗೆ ತಾವೇ ಓದಿಕೊಳ್ಳುತ್ತಿರುವರು. C ಕಾಲದಲ್ಲಿ ಓದುವ ಪಾಠಕ್ಕೆ ಸಂಬಂಧಪಟ್ಟ ಮಣ್ಣಿನ ಕೆಲಸವನ್ನು ಮಾಡುವರು ಚಿತ್ರಬರೆಯುವರು. E. ಕಾಲದಲ್ಲಿ ಹಿಂದಿನ ಗಂಟೆಯಲ್ಲಿ ನಡೆದ ಭೂಗೋಳ ಪಾಠಕ್ಕೆ ಸಂಬಂಧಪಟ್ಟ ಕೆಲವು ವಾಕ್ಯಗಳನ್ನು ಬರೆವರು.

ಈರೀತಿಯಲ್ಲಿ ಕೆಲಸ ಮಾಡುವುದರಿಂದ ಉಪಾಧ್ಯಾಯರು ಕಡಮೆಯಾಗಿರುವ ಪಾಠಶಾಲೆಗಳಲ್ಲಿ ಬಾಲಕರಿಗೆ ಉಪಯೋಗವಾಗುವಂತೆ ಪಾಠ ನಡೆಸುವುದು ಸಾಧ್ಯ

ವೆಂದು ತೋರುವುದು. ಮಕ್ಕಳಿಗೆ ಸ್ವಲ್ಪಕಾಲವನ್ನು ಸ್ವಂತಕೆಲಸಕ್ಕಾಗಿ ಕೊಡುವುದರಿಂದ ಸ್ವಪ್ರಯತ್ನದಿಂದ ಕೆಲಸಮಾಡುವ ರೂಢಿಯುಂಟಾಗುವುದು ; ಮತ್ತು ಮೇಲಿನ ವೇಳಾಪತ್ರಿಕೆಯಿಂದ ಪಾಠಗಳನ್ನು ಪರಸ್ಪರ ಸಂಬಂಧಿಸುವುದು ಸಾಧ್ಯವಾಗುವುದು.

೬. ಉಪಾಧ್ಯಾಯರು ಕಡಮೆಯಾಗಿರುವಾಗ ಅರ್ಧದಿವಸ ಸ್ಕೂಲನ್ನು ನಡೆಸುವುದು ಮತ್ತೊಂದು ಉಪಾಯವು. ಕೆಲವು ತರಗತಿಗಳಿಗೆ ಬೆಳಗಿನಹೊತ್ತು, ಕೆಲವುತರಗತಿಗಳಿಗೆ ಮಧ್ಯಾಹ್ನದ ಹೊತ್ತು, ಹೀಗೆ ಪಾಠನಡೆಸುವರು. ಈ ಪದ್ಧತಿಯು ಯೂರೋಪುಖಂಡದಲ್ಲೂ ಅನೇಕಕಡೆಗಳಲ್ಲಿ ಜಾರಿಯಲ್ಲಿರುವುದು. ಆದರೆ ಈ ಪದ್ಧತಿಯಲ್ಲಿ ಅನೇಕ ದೋಷಗಳಿರುವುದರಿಂದ ಉಪಾಧ್ಯಾಯರ ಸಂಖ್ಯೆಯು ಹೆಚ್ಚಿದಹಾಗೆಲ್ಲ ಇದನ್ನು ಬಿಡುತಿರುವರು. ಉಪಾಧ್ಯಾಯರ ಸಂಖ್ಯೆಯು ಕಡಮೆ ಕಡಮೆಯಾಗಿರುವಾಗ ಈ ಪದ್ಧತಿಯು ವಿಶೇಷ ಅನುಕೂಲವೆಂತಲೇ ಕಾಣುವುದು. ಒಬ್ಬನು ಒಂದು ತರಗತಿಗೆ ತನ್ನಗಮನವನ್ನು ಪೂರ್ಣವಾಗಿ ಪ್ರಾತಃಕಾಲಕೊಡುವುದರಿಂದಲೂ, ಮತ್ತೊಂದಕ್ಕೆ ಮಧ್ಯಾಹ್ನ ಕೊಡುವುದರಿಂದಲೂ ಬಾಲಕರಿಗೆ ಪ್ರಯೋಜನವು ಹೆಚ್ಚುವುದು. ಉಪಾಧ್ಯಾಯರಿಗೆ ತೊಂದರೆಯು ಕಡಮೆಯಾಗುವುದು. ಆದರೆ ತಮ್ಮ ಮಕ್ಕಳಿಗೆ ಪೂರ್ಣದಿವಸ ಪಾಠನಡೆಯದೆ ಅರ್ಧದಿವಸ ಮಾತ್ರ ಪಾಠನಡೆಯುವುದಲ್ಲ ಎಂದು ಮಕ್ಕಳ ತಾಯಿತಂದೆಗಳು ಆಕ್ಷೇಪಿಸಬಹುದು. ಈ ಕಾರಣದಿಂದಲೇ ಮಕ್ಕಳ ತರಗತಿಗಳಿಗೆ ದಿನಕ್ಕೆ ಮೂರುಘಂಟೆಗಿಂತಲೂ ಹೆಚ್ಚು ಕಾಲ ಆವಶ್ಯಕವಿಲ್ಲದಿದ್ದರೂ ಈ ಮಕ್ಕಳನ್ನು ಆರುಘಂಟೆಯಕಾಲ ಪಾಠಶಾಲೆಯಲ್ಲಿಟ್ಟುಕೊಂಡಿರುವೆವು. ವ್ಯವಸಾಯ ಅಥವಾ ಕೈಗಾರಿಕೆಯನ್ನು ಅವಲಂಬಿಸುವ ಬಾಲಕರವಿಷಯದಲ್ಲಿ ಈ ಪದ್ಧತಿಯು ವಿಶೇಷ ಅನುಕೂಲವಾದುದು. ಅವರು ಅರ್ಧದಿವಸ ಸ್ಕೂಲಿಗೆ ಬಂದು ಉಳಿದ ಅರ್ಧದಿವಸದಲ್ಲಿ ತಮ್ಮ ಕೆಲಸವನ್ನು ಕಲಿತುಕೊಳ್ಳಬಹುದು. ಈ ಪದ್ಧತಿಯಿಂದ ಒಬ್ಬ ಉಪಾಧ್ಯಾಯನು ಬೆಳಿಗ್ಗೆ ಎರಡು ತರಗತಿಗಳು, ಮಧ್ಯಾಹ್ನ ಎರಡು ತರಗತಿಗಳು. ಹೀಗೆ ನಾಲ್ಕುತರಗತಿಗಳಿಗೆ ಒಟ್ಟಾಗಿ ಪಾಠ ನಡೆಸಬಹುದು.

ಉಪಾಧ್ಯಾಯರಿಗೆ ಕೆಲಸನಿಯಮಿಸುವುದು.

ಎಲಿಮೆಂಟೆರಿ ಸ್ಕೂಲುಗಳಲ್ಲಿ ಒಂದೊಂದು ತರಗತಿಗೆ ಒಬ್ಬೊಬ್ಬ ಉಪಾಧ್ಯಾಯನನ್ನಿಟ್ಟು ಆ ತರಗತಿಯಕೆಲಸಕ್ಕೆಲ್ಲಾ ಅವನನ್ನೇ ಜವಾಬ್ದಾರನನ್ನಾಗಿ ಮಾಡುವು

ದು ಈಗ ವಾಡಿಕೆಯಲ್ಲಿರುವ ಪದ್ಧತಿಯು. ಪಾಠಶಾಲೆಯ ಉಪಾಧ್ಯಾಯರೆಲ್ಲಾ ಸುಶಿಕ್ಷಿತರಾಗಿದ್ದು ಸರಿಯಾದ ಅನುಭವವುಳ್ಳವರಾದರೆ ಇದೇ ಉತ್ತಮವಾದ ಮಾರ್ಗವು. ಆದರೆ ಪಾಠಶಾಲೆಯಲ್ಲಿ ಕೆಲವರು ಉತ್ತಮರಾದ ಉಪಾಧ್ಯಾಯರಾಗಿದ್ದು ಇನ್ನು ಕೆಲವರು ಕೀಳುತರದ ಉಪಾಧ್ಯಾಯರಾಗಿದ್ದರೆ ಈ ಪದ್ಧತಿಯು ಸರಿಹೋಗುವುದಿಲ್ಲ. ಈಗ ಪಾಠಶಾಲೆಯ ಕೆಳಗಿನ ತರಗತಿಗಳನ್ನು ಅನೇಕಕಡೆಗಳಲ್ಲಿ ಇಂತಹ ಉಪಾಧ್ಯಾಯರ ವಶದಲ್ಲೇ ಸಂಪೂರ್ಣವಾಗಿಟ್ಟಿರುವರು. ಇದು ಅಷ್ಟು ಸರಿಯಾದಮಾರ್ಗವಲ್ಲ. ಕೆಲವು ಪಾಠಗಳಿಗಾದರೂ ಮೇಲಿನ ತರಗತಿಯ ಉಪಾಧ್ಯಾಯರು ಅಲ್ಲಿಗೆ ಹೋಗುವುದರಿಂದ ತರಗತಿಗೆ ಜೀವವನ್ನು ಕೊಟ್ಟಂತಾಗುವುದು. ಮೇಲಿನ ತರಗತಿಯಸುಲಭವಾದ ಪಾಠಗಳನ್ನು ಈ ಸಣ್ಣ ಉಪಾಧ್ಯಾಯರು ತೆಗೆದುಕೊಳ್ಳಬಹುದು. ಪಾಠಶಾಲೆಯಲ್ಲಿ ಮಾನಿಟರುಗಳನ್ನಿಟ್ಟುಕೊಂಡು ಪಾಠಕ್ಕೆ ಸಿದ್ಧಪಡಿಸುವುದು, ಕೈಕೆಲಸನಡೆಸುವುದು, ತಪ್ಪುಗಳನ್ನು ತಿದ್ದುವುದು ಇಂತಹ ಕೆಲಸಗಳನ್ನು ಇವರ ಸಹಾಯದಿಂದ ಸುಲಭವಾಗಿ ನಡೆಸಬಹುದು.

ಪರೀಕ್ಷೆಗಳು.

ಈಗ ಪಾಠಶಾಲೆಯ ಸಂವಿಧಾನವನ್ನು ನಂಬರ್ ರಿಜಿಸ್ಟರ್‌ನಿಂದಲೂ ಪರೀಕ್ಷೆಗಳಿಂದಲೂ ನಿರ್ಣಯಿಸುವರು. ಇಂತಹ ಪರೀಕ್ಷೆಗಳಿಂದ ಎಲಿಮೆಂಟರಿಸ್ಕೂಲುಗಳಲ್ಲಿ ಉಪಾಧ್ಯಾಯರ ಕೆಲಸದ ಬೆಲೆಯು ಸರಿಯಾಗಿ ಗೊತ್ತಾಗುವುದಿಲ್ಲವೆಂದು ತೋರುವುದು. ಕೇವಲ ಸಣ್ಣಮಕ್ಕಳಿಗೆ ಕ್ರಮವಾದ ಪರೀಕ್ಷೆಯೇ ಅವಶ್ಯಕವಿಲ್ಲವೆಂದು ತೋರುವುದು. ಉಪಾಧ್ಯಾಯರ ಕೆಲಸದ ರಿಕಾರ್ಡನ್ನು ನೋಡುವುದು; ಅವರು ಪಾಠಹೇಳುವಾಗ ಅವರ ಪಾಠಕ್ರಮವನ್ನು ನೋಡುವುದು ; ಪಾಠಕಾಲದಲ್ಲಿ ಮಕ್ಕಳಸ್ಥಿತಿಯನ್ನು ನೋಡುವುದು ; ಇವೇ ಅತ್ಯುತ್ತಮವಾದ ಪರೀಕ್ಷೆಗಳಾಗಿರುವುವು.

ಪ್ರತಿದಿನವೂ ಹೊತ್ತಿಗೆಸರಿಯಾಗಿ ಸ್ಕೂಲಿಗೆಬರುವುದು.

ಪಾಠಶಾಲೆಯ ಅಭಿವೃದ್ಧಿಗೆ ಇದು ಅತ್ಯಾವಶ್ಯಕವು. ದಿವಸದ ಆದಿಯಲ್ಲಿ ಹಾಜರಿ ರಿಜಿಸ್ಟರನ್ನು ಗುರ್ತುಮಾಡುವುದು ; ಸ್ಕೂಲ್ ಪ್ರಾರಂಭವಾಗುವಾಗ ಹಾಲಿನಲ್ಲಿ ಸೇರುವುದು ; ರಜಾವಿಷಯದಲ್ಲಿ ಕ್ರಮವಾದ ನಿಯಮಗಳನ್ನು ಮಾಡುವುದು ; ಗೈರ್‌ಹಾಜರಾದವರನ್ನು ದಂಡಿಸುವುದು; ಕ್ರಮವಾಗಿ ಪಾಠಶಾಲೆಗೆ ಬಾರದಿರುವವರನ್ನು ಮೇಲಿನ ತರಗತಿಗಳಿಗೆ ಕಳುಹಿಸದಿರುವುದು ; ವರ್ಷದಲ್ಲೆಲ್ಲಾ ಕ್ರಮವಾ

ಗಿ ಪಾಠಶಾಲೆಗೆ ಬಂದವರಿಗೆ ಬಹುಮಾನಕೊಡುವುದು; ಇವೇ ಮಕ್ಕಳು ಕ್ರಮವಾಗಿ ಪಾಠಶಾಲೆಗೆ ಬರುವಂತೆ ಮಾಡಲು ಅನುಕೂಲವಾದ ಕೆಲವು ಉಪಾಯಗಳು

ಮಕ್ಕಳ ಆರೋಗ್ಯಕ್ಕೆ ಗಮನ.

ಸರಿಯಾದ ಸಂವಿಧಾನವು ಮಕ್ಕಳ ಆರೋಗ್ಯಕ್ಕೆ ಗಮನವನ್ನು ಕೊಟ್ಟೇಕೊಡುವುದು. ಮಕ್ಕಳ ಶರೀರದ ಮತ್ತು ಉಡುಪಿನ ನೈರ್ಮಲ್ಯದ ಕಡೆಗೆ ಪ್ರತಿದಿವಸವೂ ಹೆಡ್ಮಾಸ್ಟರ ದೃಷ್ಟಿಯು ಬೀಳಬೇಕು. ಪಾಠಶಾಲೆಯಲ್ಲಿ ಇರಬೇಕಾದ ಬೆಂಚು ಗಾಳಿ, ಬೆಳಕು ಮೊದಲಾದವುಗಳ ಕಡೆಗೆ ಉಪಾಧ್ಯಾಯರ ಗಮನವು ಹೋಗುತಲೇ ಇರಬೇಕು. ಈ ವಿಷಯದಲ್ಲಿ ಅತ್ಯುತ್ತಮವಾದ ಅನೇಕ ಪುಸ್ತಕಗಳಿರುವುದರಿಂದ ಇವನ್ನು ಇಲ್ಲಿ ಬೆಳೆಸಲು ನನಗೆ ಇಷ್ಟವಿಲ್ಲ.

ಪಾಠಶಾಲೆಯಲ್ಲಿ ಕ್ರಮವಾದ ಸಂವಿಧಾನವಿರಬೇಕೆಂತಲೂ ಈ ಸಂವಿಧಾನವನ್ನು ಉಪಾಧ್ಯಾಯರು ತಾವು ಯೋಚಿಸದೆ ಇಲಾಖೆಯ ನಿಯಮಗಳಿಗನುಸಾರವಾಗಿ ಏರ್ಪಡಿಸುವುದಕ್ಕೆ ಬದಲಾಗಿ ತಾವು ಚೆನ್ನಾಗಿ ಯೋಚಿಸಿ ತಮ್ಮ ಪಾಠಶಾಲೆಗೂ, ತಮ್ಮ ಬಾಲಕರಿಗೂ ಅನುಕೂಲವಾಗುವಂತೆ ಕಲ್ಪಿಸಿಕೊಳ್ಳಬೇಕೆಂತಲೂ ಸ್ವಲ್ಪವೂ ಯೋಚಿಸದೆ ಏರ್ಪಡಿಸಿದ ಸಂವಿಧಾನದಿಂದ ವಿಶೇಷ ಪ್ರಯೋಜನವಾಗುವುದಿಲ್ಲವೆಂತಲೂ ತಿಳಿಸುವುದೇ ನನ್ನ ಉಪನ್ಯಾಸದ ಉದ್ದೇಶವು.''

ಮೇಲಿನ ಉಪನ್ಯಾಸದಿಂದ ಶಾಲಾಸಂವಿಧಾನದ ವಿಷಯದಲ್ಲಿ ಉಪಾಧ್ಯಾಯರು ಇಲಾಖೆಯವರು ಏರ್ಪಡಿಸಿರುವ ನಿಯಮಗಳನ್ನನುಸರಿಸಿದರೆ ಮಾತ್ರ ಸಾಲದು. ತಾವೂ ವಿಶೇಷ ಯೋಚಿಸಬೇಕಾದುದು ಅವಶ್ಯಕವೆಂಬುದು ಸ್ಪಷ್ಟಪಡುವುದು. ಉಪಾಧ್ಯಾಯರು ಚೆನ್ನಾಗಿ ಯೋಚಿಸಿ ತಮ್ಮ ಪಾಠಶಾಲೆಯ ಅನುಕೂಲಕ್ಕೆ ತಕ್ಕ ಸಂವಿಧಾನವನ್ನು ಕಲ್ಪಿಸಿಕೊಳ್ಳುವುದೇ ಪಾಠಶಾಲೆಯ ಅಭಿವೃದ್ಧಿಗೆ ಒಂದು ಮುಖ್ಯ ಕಾರಣವಾಗಿರುವುದು.

ನಾಥಮುನಿ.

ಈ ಮಹಾಪುರುಷನ ಇತಿಹಾಸವು ಯಥಾರೀತಿಯಾಗಿ ಇಲ್ಲಿ ಸ್ವಲ್ಪಮಟ್ಟಿಗೆ ವಿವರಿಸಲ್ಪಡುವುದು.

ಈಗ್ಗೆ ಸುಮಾರು ೧೦೦೦ ವರ್ಷಗಳ ಹಿಂದೆ ಈ ಆಚಾರ್ಯನು ವಾಸವಾಗಿದ್ದ ನೆಂದು ತಿಳಿದುಬಂದಿದೆ. ಈತನಿಗೆ ಶ್ರೀರಂಗನಾಥಮುನಿಯೆಂದೂ ಹೆಸರಿದ್ದಿತು. ಈತನ ತಂದೆಯು ಈಶ್ವರಭಟ್ಟನೆಂದೂ ಮಗನು ಈಶ್ವರಮುನಿಯೆಂದೂ ಮಮ್ಮೊಗನು ಯಾಮುನಾಚಾರ್ಯನೆಂದೂ ಕರೆಯಲ್ಪಡುತ್ತಿದ್ದರು. ಇವರ ಊರಿನ ಹೆಸರು ವೀರನಾರಾಯಣಪುರ. ಇದು ಚಿದಂಬರಕ್ಕೆ ಸುಮಾರು ೧೫ ಮೈಲುಗಳ ದೂರದಲ್ಲಿದೆ. ಆ ಊರಿನಲ್ಲಿ ಮನ್ನಾರಕೊಯಿಲ್ ಎಂಬ ದೇವಾಲಯವಿರುವುದು. ಅಲ್ಲಿಯ ದೇವರಿಗೆ ಮನ್ನನಾರ್ ಅಥವಾ ಕೃಷ್ಣ ಅಥವಾ ರಾಜಗೋಪಾಲನೆಂದು ಹೆಸರು. ಈ ದೇವರು ಊರಿಗೆ ಗ್ರಾಮದೇವತೆಯಾಗಿಯೂ ನಾಥಮುನಿಯ ಕುಲದೇವತೆಯಾಗಿಯೂ ಇದ್ದನು.

ನಾಥಮುನಿಯೂ ಆತನ ತಂದೆಯೂ ಮಗನೂ ರಾಜಗೋಪಾಲಸ್ವಾಮಿಯಲ್ಲಿ ಪರಮವಿಶ್ವಾಸವುಳ್ಳವರಾಗಿಯೂ ಪರಮಭಕ್ತರಾಗಿಯೂ ಇದ್ದರು. ಒಂದಾನೊಂದು ದಿವಸ ಈ ಮೂವರೂ ಆ ದೇವಾಲಯಕ್ಕೆ ಹೋಗಿ ರಾಜಗೋಪಾಲಸ್ವಾಮಿಯನ್ನು ಆರಾಧಿಸಿ ಹೀಗೆ ಪ್ರಾರ್ಥಿಸಿದರು:—" ಎಲೈ ಸ್ವಾಮಿಯೇ ! ನೀನು ದುಷ್ಟರನ್ನು ಶಿಕ್ಷಿಸುವುದಕ್ಕೂ ಸಜ್ಜನರನ್ನು ಪರಿಪಾಲಿಸುವುದಕ್ಕೂ ಧರ್ಮವನ್ನು ಸ್ಥಾಪಿಸುವುದಕ್ಕೂ ಅವತಾರವೆತ್ತಿ ಮಥುರೆ ಗೋಕುಲ ಬೃಂದಾವನ ಗೋವರ್ಧನ ದ್ವಾರಕ ಅಯೋಧ್ಯೆ ಸಾಲಗ್ರಾಮ ಬದರಿಕಾಶ್ರಮ ನೈಮಿಶಾರಣ್ಯ ನೃಸಿಂಹಗಿರಿ ಮುಂತಾದ ಸ್ಥಳಗಳಲ್ಲಿ ಬೇರೆ ಬೇರೆ ರೂಪಗಳಿಂದಲೂ ಹೆಸರುಗಳಿಂದಲೂ ನೆಲೆಸಿರುತ್ತಿ, ಆ ದಿವ್ಯಕ್ಷೇತ್ರಗಳಿಗೆ ಹೋಗಿ ನಿನ್ನ ಸೇವೆ ಮಾಡಲು ಅಪ್ಪಣೆಯನ್ನು ದಯಪಾಲಿಸಬೇಕು. " ಹೀಗೆಂದು ಪ್ರಾರ್ಥಿಸಿದರು.

ಸ್ವಾಮಿಯು ಹಾಗೆ ಮಾಡಲು ಅವರಿಗೆ ಒಂದು ಶಕುನದ್ವಾರ ಅಪ್ಪಣೆಯನ್ನು ಕೊಟ್ಟನು. ಅವರು ಸಂತೋಷಚಿತ್ತರಾಗಿ ಸಂಸಾರ ಸಮೇತ ಒಂದಾನೊಂದು ಶುಭದಿವಸದಲ್ಲಿ ಯಾತ್ರಾರ್ಥವಾಗಿ ಹೊರಟರು. ದಾರಿಯಲ್ಲಿ ಸಿಕ್ಕಿದ ಅನೇಕ ದಿವ್ಯಕ್ಷೇತ್ರಗಳಲ್ಲಿ ದೇವರದರ್ಶನವನ್ನೂ ಸೇವೆಯನ್ನೂ ಮಾಡುತ್ತಾ ಕಡೆಗವರ

ಯಮುನಾತೀರದಲ್ಲಿರುವ ಗೋವರ್ಧನಪುರಕ್ಕೆ ಬಂದು ಅಲ್ಲಿ ನೆಲೆಸಿರುವ ಶ್ರೀ ಕೃಷ್ಣನನ್ನು ಆರಾಧಿಸಿದರು. ಆ ಸ್ಥಳವೂ ಸುತ್ತುಮುತ್ತಿನ ಪ್ರದೇಶವೂ ಕೃಷ್ಣ ಮೂರ್ತಿಯೂ ಬಹುರಮ್ಯವಾಗಿಯೂ ಆನಂದಕರವಾಗಿಯೂ ಇದ್ದುದರಿಂದ, ಅವರು ತಮ್ಮ ಉಳಿದ ಜೀವಮಾನಕಾಲವೆಲ್ಲಾ ಅಲ್ಲಿಯೇ ಇದ್ದುಕೊಂಡು ಶ್ರೀ ಕೃಷ್ಣಸ್ವಾಮಿಯನ್ನು ಆರಾಧಿಸುತ್ತಾ ಕಾಲಕಳೆಯಬೇಕೆಂದು ನಿಶ್ಚಯಿಸಿದರು.

ಹೀಗೆ ಅವರು ದೇವರಸೇವೆಯಲ್ಲಿ ನಿರತರಾಗಿ ಆನಂದದಿಂದ ಕೆಲವು ವರ್ಷ ಗಳನ್ನು ಕಳೆದರು. ಹೀಗಿರುತ್ತಿರಲು ಒಂದಾನೊಂದು ದಿವಸ ರಾತ್ರಿಯಲ್ಲಿ ನಾಥ ಮುನಿಯು ಕನಸನ್ನು ಕಂಡನು. ರಾಜಗೋಪಾಲಸ್ವಾಮಿಯು ಆತನ ಸ್ವಪ್ನದಲ್ಲಿ ಕಾಣಿಸಿಕೊಂಡು, ಎಲೈ, ನಾಥಮುನಿಯೆ! ನೀನು ವೀರನಾರಾಯಣಪುರವನ್ನು ಮರತೆಯಾ? ಅಲ್ಲಿಗೆ ಹೋಗುವುದಿಲ್ಲವೆ? ಬೇಗನೆ ಹಿಂತಿರಗಿ ಅಲ್ಲಿಗೆ ಹೋಗು ಎಂದು ಅಪ್ಪಣೆ ಕೊಡಿಸಿದನು. ಪರಮಭಕ್ತನಾದ ನಾಥಮುನಿಯು ಎಚ್ಚರವಾದ ಬಳಿಕ ಆ ಸ್ವಪ್ನವನ್ನು ಸ್ಮರಿಸಿಕೊಂಡು, ಸ್ವಾಮಿಯು ತಿರುಗಿ ವೀರನಾರಾಯಣ ಪುರಕ್ಕೆ ಬರುವಂತೆ ಅಪ್ಪಣೆ ಮಾಡಿರುವನು, ಆದುದರಿಂದ ನಾವೆಲ್ಲರೂ ಅಲ್ಲಿಗೆ ಹೋಗಬೇಕು ಎಂದು ಮನೆಯ ಜನರಸಂಗಡ ಹೇಳಿದನು. ಅಮೇಲೆ ಆತನು ದೇವಸ್ಥಾನಕ್ಕೆ ಹೋಗಿ, ಗೋವರ್ಧನ ಕೃಷ್ಣಸ್ವಾಮಿಯನ್ನು ಕುರಿತು, ಪ್ರಭುವೆ! ವೀರನಾರಾಯಣಪುರಕ್ಕೆ ತಿರುಗಿ ಹೋಗಲು ನನಗೆ ಅಪ್ಪಣೆಯನ್ನು ದಯಪಾ ಲಿಸು ಎಂದು ಕೇಳಿಕೊಂಡನು. ಕೃಷ್ಣಸ್ವಾಮಿಯು ಹಾಗೇ ಆಗಲೆಂದು ಅಪ್ಪಣೆ ಕೊಡಿಸಿ ಆತನಿಗೆ ಪಾವನಕರವಾದ ತೀರ್ಥಪ್ರಸಾದಗಳನ್ನು ಕೊಡಿಸಿ ಕಳುಹಿಸಿ ದನು.

ಹೀಗೆ ಅಪ್ಪಣೆಯನ್ನು ಪಡೆದು ನಾಥಮುನಿಯು ಸಂಸಾರಸಮೇತವಾಗಿ ಗೋವರ್ಧನದಿಂದ ಹೊರಟು ಪ್ರಯಾಣ ಬೆಳೆಸುತ್ತಾ ಮಾರ್ಗದಲ್ಲಿ ಪುರು ಷೋತ್ತಮಕ್ಷೇತ್ರವನ್ನು ಕಂಡು ಅಲ್ಲಿ ಶ್ರೀ ಜಗನ್ನಾಥಸ್ವಾಮಿಯನ್ನಾರಾಧಿಸಿ ಅಲ್ಲಿಂದ ಮುಂದಕ್ಕೆ ಹೊರಟು ಸಿಂಹಾದ್ರಿಯೆಂಬ ಕ್ಷೇತ್ರಕ್ಕೆ ಬಂದು ಅಲ್ಲಿ ನೆಲೆ ಸಿರುವ ಶ್ರೀ ನೃಸಿಹ್ಮಸ್ವಾಮಿಯನ್ನಾರಾಧಿಸಿದನು. ಈ ಕ್ಷೇತ್ರಕ್ಕೆ ಅಹೋಬಲವೆಂ ದೂ ಹೆಸರುಂಟು. ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡಿ ಕಡೆಗೆ ಅವನು ತಿರು ಪತಿಗೆ ಬಂದು ಸೇರಿದನು. ಇಲ್ಲಿ ಭಗವಂತನಾದ ಶ್ರೀನಿವಾಸನು ಅವತರಿಸಿರು ವನು. ಪರಮಪದವಾದ ಪರಮಾಕಾಶವಾದ ಶ್ರೀ ವೈಕುಂಠದಿಂದ ಶ್ರೀನಿವಾಸನು

ಭೂಲೋಕಕ್ಕೆ ಬಂದು ಜನರಿಗೆ ಕ್ಷೇಮವನ್ನುಂಟುಮಾಡುವುದಕ್ಕೋಸ್ಕರ ತಿರುಪತಿಯಲ್ಲಿ ನೆಲೆಸಿರುವನು. ಆದುದರಿಂದ ಆ ಊರಿಗೆ ಭೂವೈಕುಂಠವೆಂದು ಹೆಸರುಬಂದಿದೆ.

ತಿರುಪತಿಯು ಕೇವಲ ರಮಣೀಯವಾಗಿಯೂ ಮನೋಹರವಾಗಿಯೂ ಇದ್ದುದರಿಂದ ನಾಥಮುನಿಗೆ ಅಲ್ಲಿಯೇ ನಿಲ್ಲಬೇಕೆಂದು ಮನಸ್ಸು ಹುಟ್ಟಿತು. ಆದರೆ ಅವನಿಗೆ ರಾಜಗೋಪಾಲಸ್ವಾಮಿಯ ಆಜ್ಞೆಯು ಸ್ಮರಣೆಗೆ ಬಂದಿತು. ಅದನ್ನು ಉಲ್ಲಂಘನಮಾಡಲು ಶಕ್ತನಾಗಿರಲಿಲ್ಲ. ಆದುದರಿಂದ ತಿರುಪತಿಯನ್ನು ಬಿಟ್ಟು ಮುಂದಕ್ಕೆ ಪ್ರಯಾಣ ಬೆಳಸಿದನು. ದಾರಿಯಲ್ಲಿ ಬರುತ್ತಾ ಶ್ರೀ ನೃಸಿಂಹಕ್ಷೇತ್ರವಾದ ಘಟಿಕಾಚಲವನ್ನೂ ವರದರಾಜಕ್ಷೇತ್ರವಾದ ಹಸ್ತಿಗಿರಿ ಅಥವಾ ಕಂಚಿಯನ್ನೂ ದೇವನಾಯಕಕ್ಷೇತ್ರವಾದ ತಿರುವಹೀಂದ್ರಪುರವನ್ನೂ ತ್ರಿವಿಕ್ರಮಕ್ಷೇತ್ರವಾದ ತಿರುಕೋವೆಲೂರನ್ನೂ ರಂಗನಾಥಕ್ಷೇತ್ರವಾದ ಶ್ರೀರಂಗವನ್ನೂ ಸಾರಂಗಪಾಣಿಕ್ಷೇತ್ರವಾದ ಕುಂಭಕೋಣವನ್ನೂ ಪ್ರವೇಶಿಸಿ ಅಲ್ಲಿಯ ದೇವರುಗಳನ್ನೆಲ್ಲಾ ಬಹಳಭಕ್ತಿಯಿಂದಾರಾಧಿಸಿ ಕಡೆಗೆ ವೀರನಾರಾಯಣಪುರಕ್ಕೆ ಬಂದು ಸೇರಿದನು.

ಪುರಜನರು ನಾಥಮುನಿಯು ಬರುವ ಸುದ್ದಿಯನ್ನು ಕೇಳಿ ಊರುಹೊರಕ್ಕೆ ಬಂದು ಆತನನ್ನು ಇದಿರುಗೊಂಡು ಕುಶಲಪ್ರಶ್ನೆಯನ್ನು ಮಾಡಿ ಉತ್ಸವದೊಡನೆ ಮನ್ನನಾರ್ ದೇವಸ್ಥಾನಕ್ಕೆ ಕರೆದುಕೊಂಡುಹೋದರು. ರಾಜಗೋಪಾಲಸ್ವಾಮಿಯು ಆತನನ್ನು ಕಂಡು ಪ್ರೀತನಾಗಿ ಪರಮಸಂತೋಷದಿಂದ ಅಲ್ಲಿ ನೆರೆದಿದ್ದ ಜನರಿಗೆ ತನ್ನ ಇಚ್ಛೆಯನ್ನು ಸೂಚಿಸಿದನು :—

"ಸಜ್ಜನಗಳಿರಾ ! ಈ ನಾಥಮುನಿಯು ನನಗೆ ಪರಮಪ್ರಿಯನು, ಪರಮಭಕ್ತನು; ಇನ್ನುಮೇಲೆ ನೀವು ಗೃಹ ವಸ್ತ್ರ ಭೋಜನಾದಿಗಳ ವಿಷಯದಲ್ಲಿ ಯಾವ ಕೊರತೆಯೂ ಇಲ್ಲದಂತೆ ಈತನನ್ನು ನೋಡಿಕೊಳ್ಳಿರಿ; ಈತನ ಶುಶ್ರೂಷೆಯನ್ನು ಚೆನ್ನಾಗಿ ಮಾಡಿರಿ." ಹೀಗೆಂದು ಸ್ವಾಮಿಯು ಆಜ್ಞಾಪಿಸಿದನು. ಆ ಜನರು ಸಂತೋಷಯುಕ್ತರಾಗಿ ಹಾಗೆಯೇ ಮಾಡಿದರು. ನಾಥಮುನಿಯು ಒಂದು ಕೈತೋಟವನ್ನು ಮಾಡಿಕೊಂಡು ಅಲ್ಲಿ ಪುಷ್ಪಪತ್ರಗಳನ್ನು ಬೆಳೆಯುತ್ತಾ ಅವುಗಳ ಮಾಲಿಕೆಗಳನ್ನು ಮಾಡಿ ಶ್ರೀಮನ್ನನಾರ್‌ಸ್ವಾಮಿಗೆ ಅರ್ಪಿಸುತಿದ್ದನು. ಮತ್ತು ಗಂಧವನ್ನೂ ಪರಿಮಳದ್ರವ್ಯಗಳನ್ನೂ ದೀಪಗಳನ್ನೂ ಸಿದ್ಧಪಡಿಸುತ್ತಾ ಸ್ವಾಮಿಯನ್ನು ಸೇವಿಸುತ್ತಿದ್ದನು. ಕಾಲವನ್ನು ವೃಥಾಹರಣಮಾಡದೆ ಸಜ್ಜನರಸಂಘದಲ್ಲಿದ್ದುಕೊಂಡು ಬ್ರಹ್ಮಜ್ಞಾನವನ್ನು ಹೊಂದುತ್ತಲೂ ಇತರರಿಗೆ ಬೋಧಿಸುತ್ತಲೂ ಇದ್ದನು.

ಹೀಗಿರುತ್ತಿರಲು ಒಂದಾನೊಂದು ದಿವಸ ತಿರುಚನಾಪಳ್ಳಿಯ ಉತ್ತರದಿಂದ ಕೆಲವರು ಶ್ರೀವೈಷ್ಣವರು ರಾಜಗೋಪಾಲಸ್ವಾಮಿಯ ದರ್ಶನಾರ್ಥವಾಗಿ ಮನ್ನಾರ್ ಕೊಯಿಲ್‌ಗೆ ಬಂದು ಆರಾವಮುದು, ನಮ್ಮ ಝುವಾರ್ ತಿರುವಾಯಿಮೊಳ್ಳಿ ಮತ್ತು ಕುರುಗೂರ ಶಠಗೋಪರವರಿಂದ ಹೇಳಲ್ಪಟ್ಟ ಸಾವಿರದಲ್ಲಿ ಈ ಹತ್ತು ಎಂಬ ಪ್ರಬಂಧವನ್ನು ಹಾಡಿದರು. ನಾಥಮುನಿಯು ಇದನ್ನು ಕೇಳಿ ಒಂದು ಸಾವಿರವೆಂಬ ಪ್ರಬಂಧವನ್ನು ಹೇಳಿರೆಂದು ಅವರನ್ನು ಪ್ರಾರ್ಥಿಸಿದನು. ಅದಕ್ಕವರು ನಮಗೆ ತಿಳಿದಿರುವುದು ಸಾವಿರದಲ್ಲಿ ಹತ್ತು ಯೆಂಬುದೊಂದೇ ಹೊರತು ಮಿಕ್ಕದು ಗೊತ್ತಿಲ್ಲವೆಂದು ಹೇಳಿದರು. ಪುನಃ ನಾಥಮುನಿಯು ಅವರನ್ನು ಕುರಿತು ನಿಮ್ಮಲ್ಲಿ ಯಾವನೊಬ್ಬನಿಗಾದರೂ ಆ ಪ್ರಬಂಧವು ಗೊತ್ತುಂಟೆ? ಅಥವಾ ಅದನ್ನು ಯಾರಾದರೂ ಬರದಿಟ್ಟುಕೊಂಡಿರುವುದನ್ನು ಬಲ್ಲಿರಾ? ಎಂದು ಬಲವಂತಮಾಡಿ ಕೇಳಲು ಅವರು ತಮಗದೊಂದೂ ಗೊತ್ತಿಲ್ಲವೆಂದು ಪುನಃ ಉತ್ತರಕೊಟ್ಟರು. ಆಗ ನಾಥಮುನಿಯು ತೀರ್ಥಪ್ರಸಾದವನ್ನು ಕೊಟ್ಟು ಅವರನ್ನು ಕಳುಹಿಸಿಕೊಟ್ಟನು.

ಆ ಪ್ರಬಂಧವನ್ನು ಗೊತ್ತುಮಾಡಿಕೊಳ್ಳಬೇಕೆಂದು ನಾಥಮುನಿಗೆ ಬಹಳ ಕುತೂಹಲವಿದ್ದಿತು. ತಿನ್ನವೆಲ್ಲಿಯ ಹತ್ತಿರದಲ್ಲಿರುವ ಕುರುಗು ಅಥವಾ ಆಝುವಾರ್ ತಿರುನಗರಿಯಲ್ಲಿ ಅದು ಸಿಕ್ಕಬಹುದೆಂದು ಯೋಚಿಸಿ ಆ ಊರಿಗೆ ಹೋಗಿ ಅಲ್ಲಿ ನಮ್ಮ ಝುವಾರನ್ನೂ ಆದಿನಾಥಸ್ವಾಮಿಯನ್ನೂ ಆರಾಧಿಸಿದ ಬಳಿಕ ಪ್ರಚ್ಛನ್ನವಾದಾಪ್ರಬಂಧವನ್ನು ಹುಡುಕಲಾರಂಭಿಸಿದನು. ಅಲ್ಲಿ ಆತನಿಗೆ ಮಧುರಕವಿಯ ಶಿಷ್ಯನಾದ ಪರಾಂಕುಶದಾಸನೆಂಬುವನು ಸಿಕ್ಕಿದನು. ಅವನನ್ನು ಕುರಿತು ಮಹಾಸ್ವಾಮಿ! ತಮಗೇನಾದರೂ ಆ ಪ್ರಬಂಧವಿಷಯವು ಗೊತ್ತಿದೆಯೆ ಯೆಂದು ಕೇಳಿದನು. ಅದಕ್ಕವನು ಸ್ವಾಮಿ! ನಮ್ಮ ಝುವಾರರ ತಿರುವ್ಯಮೋಳ್ಳಿಯನ್ನೂ ಇತರ ಆಝುವಾರರ ಗ್ರಂಥಗಳನ್ನೂ ರಚಿಸಿ ಬಹುವರ್ಷಗಳಾದುದರಿಂದ, ಅವೆಲ್ಲಾ ಮರೆಯಲ್ಪಟ್ಟಿರುವುವು, ಅವು ಒಬ್ಬರಿಗೂ ಗೊತ್ತಿಲ್ಲ; ಆದರೆ ಯಾರು ನಮ್ಮ ಝುವಾರ್ ಪ್ರತಿಮೆಯ ಮುಂದುಗಡೆಯಲ್ಲಿ ಯೋಗಾಸನದಲ್ಲಿಕುಳಿತು ಕೊಂಡು ಚಿತ್ತೈಕಾಗ್ರತೆಯಿಂದ ಕನ್ನಿನನ್ ಶಿರುಟ್ಟಂಬುಯೆಂಬ ಮಂತ್ರವನ್ನು ಹನ್ನೆರಡುಸಾವಿರ ಸಾರಿ ಜಪಿಸುವನೋ ಆತನಿಗೆ ನಮ್ಮ ಝುವಾರರು ಪ್ರಸನ್ನರಾಗಿ ಪ್ರತ್ಯಕ್ಷವಾಗುವರೆಂದು ನಮ್ಮ ಆಚಾರ್ಯರಾದ ಮಧುರಕವಿಗಳು ಹೇಳಿರುವರು ಯೆಂದು ತಿಳಿಸಿದನು.

(ಸಶೇಷ.) S. V.

ಕ್ಷೇತ್ರಗಣಿತ.

I. ವರ್ಗಾಕೃತಿಯಾದ ಒಂದು ಹೊಲದ ವಿಸ್ತಾರವು 10 ಎಕರೆಗಳು ಆದರೆ ಅದರ ಸುತ್ತಳತೆ ಎಷ್ಟು ?

ರೀತಿ :—

1 ಎಕರೆಗೆ 4840 ಚದರಗಜಗಳು

10 $4840 \times 10 = 48400.$

ವರ್ಗಾಕೃತಿಯ 1 ಬಾಹು $\sqrt{\text{ಚದರ}}$

$\therefore \quad \sqrt{48400} = 220.$

ಸುತ್ತಳತೆ $=$ 4 ಬಾಹುಗಳ ಮೊತ್ತ.

$\therefore \quad 220 \times 4 = 880$ ಗಜಗಳು.

II. 28 ಫೂಟು ಅಗಲದ ವರ್ತುಳಾಕಾರದ ಪಡಸಾಲೆಗೆ ಗಾರೆಹಾಕಲು ಚದರಗಜ 1 ಕ್ಕೆ 1 ರೂಪಾಯಿನಂತೆ ಖರ್ಚೆಷ್ಟು ?

ವ. ಪಡಸಾಲೆಯವಿಸ್ತಾರ $\dfrac{\text{ವ್ಯಾಸ} \times \text{ವ್ಯಾಸ} \times 11}{14}$

$\therefore \quad \dfrac{28 \times 28 \times 11}{14}$

$\therefore \quad 56 \times 11$

ಖರ್ಚು $= 1$ ಚ. ಗಜ $= 9$ ಚದರ ಅಡಿಗೆ 1 ರೂ. ರೂ. ಆ. ಪೈ.

$56 \times 11 \qquad \dfrac{56 \times 11}{9} = 58 - 7 - 1\frac{1}{3}$

III. ಒಂದು ಸಮದ್ವಿಬಾಹು ತ್ರಿಭುಜದ ಹೊಲದ ಸುತ್ತಳತೆ 232 ಗಜಗಳು 3 ನೇ ಬಾಹುವು ಸಮಬಾಹುವಿನ $\frac{9}{10}$ ರಷ್ಟಾಗಿದೆ ಇದರ ಕ್ಷೇತ್ರಫಲವೆಷ್ಟು ?

ರೀತಿ :—

ಮೊದಲು ಸಮಬಾಹು 1 ಗಜವಾಗಿರಲಿ.

ಆಗ, 3 ನೇ ಬಾಹುವು $\dfrac{1 \times 9}{10} = \frac{9}{10}$ ಗಜವಾಗುವುದು.

ಅಂದರೆ ಒಟ್ಟು $1+1+\frac{9}{10}=2\frac{9}{10}$ (ಮೂರು ಬಾಹುಗಳಾದುದರಿಂದ).

ಈಗ $2\frac{9}{10}$ ಸುತ್ತಳತೆಗೆ ಸಮಬಾಹು 1 ಆಗಿರುತ್ತದೆ.

232 $\frac{232\times10}{29}=80$

∴ 3 ನೇ ಬಾಹು $\frac{80\times9}{10}=72$ ಗಜ.

ತ್ರಿಭುಜಕ್ಷೇತ್ರ $\sqrt{S(S-a)(S-b)(S-c)}$

$$2S=a+b+c$$
$$S=\frac{a+b+c}{2}$$

ಮುಂದಕ್ಕೆ ಮಾಡಿರಿ!

ಉತ್ತರ $144\sqrt{29\times11}$ ಚ. ಗಜಗಳು.

IV. ಒಂದು ಸಮತ್ರಿಭುಜದ ಸುತ್ತಳತೆಯೂ, ಒಂದು ವರ್ತುಳದ ಸುತ್ತಳತೆಯೂ ಒಂದೇ ಆಗಿದ್ದರೆ ಅದರ ಕ್ಷೇತ್ರಫಲಗಳೆಷ್ಟೆಷ್ಟಾಗಿರುವುವು?

ರೀತಿ:—

ವರ್ತುಳದ ಸುತ್ತಳತೆ 3 ಗಜವಾಗಿರಲಿ ಆಗ,

ಸಮತ್ರಿಭುಜದ ಸುತ್ತಳತೆಯೂ 3 ಗಜವಾಗಿರುತ್ತದೆಯಷ್ಟೆ!

ಈಗ ಸಮತ್ರಿಭುಜಕ್ಷೇತ್ರ 1 ಬಾಹು$^2\times\cdot433$

∴ $\cdot433$ ಆದಂತಾಯಿತು.

ವರ್ತುಳದ ಕ್ಷೇತ್ರ $\frac{\text{ಪರಿಧಿ}\times\text{ಪರಿಧಿ}\times7}{88}$

∴ $\frac{3\times3\times7}{88}$

∴ $\frac{63}{88}=7\cdot159$ ಆಯಿತು.

ಬಿ. ಅನಂತಾಚಾರ್.

ಗ ಣಿ ತ .

---

1 ಕ ಮತ್ತು ಟ ಎಂಬಿಬ್ಬರಿಗೆ ಕೆಲವು ಹಣವು 2:7 ರ ಪ್ರಮಾಣದಂತೆ ಹಂಚಲ್ಪಟ್ಟಿತು. ಕ, ನ ಭಾಗಕ್ಕೆ $222\frac{13}{96}$ ರೂಪೈ ಬಂದರೆ ಟ ನ ಭಾಗಕ್ಕೆಷ್ಟು ಒಟ್ಟು ಮೊತ್ತವೆಷ್ಟು ?

2 ಅ, ಬ ಎಂಬಿಬ್ಬರಿಗೆ ಕೆಲವು ಹಣವು $\frac{3}{8}:1\frac{2}{5}$ ರ ಪ್ರಮಾಣದಂತೆ ಹಂಚಲ್ಪಟ್ಟಿತು. ಅ, ನ ಭಾಗಕ್ಕೆ £ 482 18 s. 4 d. ಗಳು ಬಂದರೆ ಬ, ನ ಭಾಗದ ಹಣವೆಷ್ಟು ? ಮತ್ತು ಒಟ್ಟು ಮೊತ್ತವೆಷ್ಟು ?

ಉತ್ತರ, £ 654—12—$4\frac{8}{9}$

3 ಅ, ಬ, ಕ ಎಂಬ ಮೂರುಜನರಿಗೆ 540 ರೂಪಾಯಿಗಳನ್ನು—ಅ, ಗೆ, ಬ ನ ಕಿಂತಲೂ 60 ರೂಪಾಯಿಗಳು ಕಡಮೆಯಾಗಿಯೂ, ಕ, ಗೆ ಬ ನ ಕಿಂತಲೂ 60 ರೂಪಾಯಿಗಳು ಹೆಚ್ಚಾಗಿಯೂ ಬರುವಂತೆ ಹಂಚಿರಿ ?

ಉತ್ತರ, ಕ = 240 ರೂ.

4 ಬ ಸ ಹಣದ ಎರಡರಷ್ಟು ಅ ಮತ್ತು ಕ ನ ಹಣಕ್ಕೂ ಅ ಸ ಹಣದ ಮೂರೂವರೆಯಷ್ಟು ಬ ಮತ್ತು ಕ ನ ಹಣಕ್ಕೂ ಸಮವಾಗಿರುವಂತೆ 45 ಪೌಂಡುಗಳನ್ನು ಅ, ಬ, ಕ ಎನ್ನುವರಿಗೆ ಹಂಚಿರಿ ?

ಉ: ಕ = 20 ಪೌಂ.

5 ಒಬ್ಬನು ತನ್ನಲ್ಲಿದ 500 £ ಗಳನ್ನು ತನ್ನ ಅ, ಬ, ಕ, ಡ ಎಂಬ ನಾಲ್ಕು ಜನ ಮಕ್ಕಳಿಗೆ ಅ ಗೆ 1 ಭಾಗವನ್ನೂ ಅ ನ $1\frac{1}{2}$ ಯಷ್ಟು ಬ ಗೆ ಬರುವಂತೆಯೂ, ಬ ನ 2 ರಷ್ಟು ಕ ಗೆ ಬರುವಂತೆಯೂ, ಬ ನ $1\frac{1}{3}$ ರಷ್ಟು ಡ ಗೆ ಬರುವಂತೆಯೂ, ಹಂಚಿಕೊಡುತ್ತಾನೆ ಯಾರುಯಾರಿಗೆ ಎಷ್ಟೆಷ್ಟು ಬಂತು?

ಉ: ಡ = £ 133—6—8

6 A + C ಗಳ ಅರ್ಧದಷ್ಟು B ಗೂ, C ಗೆ A + B ಗಳಷ್ಟೂ ಬರುವಂತೆ £ 90 ಗಳನ್ನು A.B.C. ಗಳಿಗೆ ಹಂಚಿರಿ ?

ಉ: B = 30

ನಾರ್ಮಲ್‌ಸ್ಕೂಲ್ ಮೈಸೂರು.

15-3-09 ಸಂಸ್ಕೃತಭಾಷೆ. ಕಾಲ 2 ಘಂಟೆ

ಮೈಸೂರು ನಾರ್ಮಲ್‌ಸ್ಕೂಲು VI ನೇ ತರಗತಿಗೆ ಅಂದರೆ ಅಪ್ಪರ್‌ಸೆಕೆಂಡರಿ ತರಗತಿಗೆ ಈ 1909 ನೇ ಜನವರಿಯಲ್ಲಿ ಹಿಂದೂ ವಿದ್ಯಾರ್ಥಿಗಳು ಒಟ್ಟು ನಾಲ್ವತ್ತೈದುಮಂದಿ ಸೇರಿಸಿಕೊಳ್ಳಲ್ಪಟ್ಟರು. ಇವರಲ್ಲಿ ಅರ್ಹರಾದವರನ್ನು ಆರಿಸಿಕೊಳ್ಳುವದಕ್ಕಾಗಿ ಕಳೆದ ಮಾರ್ಚಿ ೧೫ ನೇ ತಾರೀಖಿನಲ್ಲಿ ಕನ್ನಡ, ಸಂಸ್ಕೃತ, ಅಂಕಗಣಿತಗಳಲ್ಲಿ ಒಂದು ಪರೀಕ್ಷೆಯು ನಡೆಯಿತು. ಇದರಲ್ಲಿ ಒಂಭತ್ತುಮಂದಿಯು ಕೇವಲ ಅನರ್ಹರಾಗಿ ಕಂಡುಬಂದುದರಿಂದ ಹಿಂದಕ್ಕೆ ಕಳುಹಿಸಲ್ಪಟ್ಟರು. ಪ್ರಾಯಃ ಈ ತರಗತಿಗೆ ಸೇರುವವರು ಸಂಸ್ಕೃತವನ್ನೂ ಸ್ವಲ್ಪವಾದರೂ ಓದಿಕೊಂಡು ಬಾರದಿರುವುದರಿಂದ ಈ ಪರೀಕ್ಷೆಯ ಪತ್ರಿಕೆಗಳಲ್ಲಿ ಸಂಸ್ಕೃತಭಾಗದ ಪ್ರಶ್ನಪತ್ರಿಕೆಯನ್ನು ಜನಗಳ ತಿಳುವಿಕೆಗಾಗಿ ಇಲ್ಲಿ ಬರೆದಿದೆ.

I (1) ಕರ್ಕಶವರ್ಣ, ಪರಸ್ಮೈಪದ, ಆತ್ಮನೇಪದಿ, ವಿಕರಣ ಎಂದರೇನು ?

(2) ಪದಾನ್ತದಲ್ಲಿರುವ ಏ, ಓ ಕಾರಗಳ ಮುಂದೆ ಅಕಾರವಿದ್ದರೂ, ಅಕಾರದ ಮುಂದೆ ಏ, ಓ ಕಾರಗಳು ಇದ್ದರೂ ಯಾವ ಸಂಧಿಕಾರ್ಯ ಬರುವುದು ? ಉದಾಹರಿಸಿರಿ.

(3) ವಿಸರ್ಗಕ್ಕೆ ಓ, ರ್, ಸ್, ಆದೇಶಗಳೂ, ಲೋಪವೂ ಯಾವಾಗ ಆಗುವುವು? ಸೂತ್ರಗಳನ್ನೂ ಉದಾಹರಣೆಗಳನ್ನೂ ಬರೆಯಿರಿ.

II (1) ಜನಾನ್ + ಬೋಧಯತಿ + ಏಷಃ + ಕಾಲಃ + ಚಲತಿ — ಇದನ್ನು ಸಂಧಿಮಾಡಿ ಬರೆಯಿರಿ.

(2) ಇದಮ್, ಚತುರ್ (ಇವುಗಳಿಗೆ ಸ್ತ್ರೀಲಿಂಗದಲ್ಲಿ); ಸಖಿ, ಅದಸ್ (ಇವುಗಳಿಗೆ ಪುಲ್ಲಿಂಗದಲ್ಲಿ) ಯುಷ್ಮದ್ , ಈ ಶಬ್ದಗಳ ಎಲ್ಲಾ ವಿಭಕ್ತಿರೂಪಗಳನ್ನೂ ಬರೆಯಿರಿ.

(3) ವಾಚಾ, ಕರಿಣಿ, ವಾರೇ— ಈ ರೂಪಗಳು ಯಾವಯಾವ ಪ್ರಕೃತಿಗಳ ಮೇಲೆ ಯಾವಯಾವ ವಿಭಕ್ತಿವಚನಗಳಲ್ಲಿ ಆಗಿವೆ?

III (1) ದ್ಯುತ್, ತೃಪ್, ದೃಶ್, ಕ್ಷಮ್ ಈ ಧಾತುಗಳ ಅರ್ಥ, ಗಣ, ವರ್ತಮಾನರೂಪಗಳನ್ನೂ; ಹೊರಡು, ಕುಳ್ಳಿರು, ಹಿಂದಿರುಗು, ಆಶ್ಚರ್ಯ

ಪಡು ಈ ಯರ್ಥವನ್ನು ಕೊಡುವ ಒಂದೊಂದು ಧಾತುವನ್ನೂ ಬರೆಯಿರಿ.

(2) ವ್ಯಾಧಿಭಿಃಪೀಡ್ಯಧ್ವೆ, ಓದನಂಪಚನ್ತಿ ಸೂದಾಃ, ಋಷಯೋಜನೇನವಂದ್ಯನ್ತೆ, ಉಪಾಧ್ಯಾಯಾಚ್ಛಾತ್ರೀಶ್ಶಿಕ್ಷತೆವಟುಃ.

ಇವುಗಳಲ್ಲಿ ಕರ್ತ್ತರಿಪ್ರಯೋಗವನ್ನು ಕರ್ಮಣಿಯಲ್ಲಿಯೂ, ಕರ್ಮಣಿ ಪ್ರಯೋಗವನ್ನು ಕರ್ತ್ತರಿಯಲ್ಲಿಯೂ ಬರೆಯಿರಿ,

IV ಕೆಳಗಣ ವಾಕ್ಯಗಳನ್ನು ಸಂಸ್ಕೃತಕ್ಕೆ ತರ್ಜುಮೆಮಾಡಿರಿ.

(1) ಆರು ಹಣ್ಣುಗಳನ್ನು ನಿಮ್ಮಿಬ್ಬರಿಗೆ ನಾಳೆ ಕೊಡುತ್ತೇವೆ.

(2) ಈ ಮೂವರು ಆಳುಗಳು ಯಾತಕ್ಕೆ ಅಲ್ಲಿ ಇಲ್ಲಿ ಅಲೆಯುತ್ತಾರೆ.

(3) ನನಗೆ ಹಲವರು ಗೆಳೆಯರು ಇದ್ದಾರೆ. ಅವರನ್ನು ನಾನು ಈಗ ಕರೆಯುತ್ತೇನೆ. ಅವರು ನನ್ನಮೇಲೆ ಸಿಟ್ಟುಮಾಡುತ್ತಾರೆ.

(4) ನಿಮ್ಮ ಊರು ಆ ಬೆಟ್ಟಕ್ಕೆ ಮೂರುಗಾವುದದಲ್ಲಿದೆ ಎಂದು ನೀವಿಬ್ಬರೂ ಬಲ್ಲಿರಾ?

(5) ಅಲ್ಲಿ ಜಿಂಕೆಗಳು ಹುಲ್ಲನ್ನು ಮೇಯುತ್ತಿರುವುವು, ನಾನು ಅವುಗಳ ಹತ್ತಿರಕ್ಕೆ ಹೋಗುವಷ್ಟರಲ್ಲಿಯೇ ಅವು ಬೇಗನೆ ಓಡುತ್ತವೆ.

(6) ಅವರು ಅಲ್ಲಿಂದ ಯಾವಾಗ ಹೊರಟುಹೋಗುತ್ತಾರೆ ? ನಿಮ್ಮಿಂದ ಯಾವಾಗ ಕಳುಹಿಸಲ್ಪಡುತ್ತಾರೆಯೋ ಆಗಲೇ ಹೊರಡುತ್ತಾರೆ.

(7) ಹುಲಿಗಳಿಗೆ ಹುಲ್ಲೂ ಗಿಡಗಳ ಎಲೆಗಳೂ ಸೇರುವುದಿಲ್ಲ. ಅವು ದನಗಳನ್ನು ಬಹಳ ಆಶಿಸುತ್ತವೆ.

(8) ಅರಸರು ಪ್ರಜೆಗಳನ್ನು ತಮ್ಮ ಮಕ್ಕಳಂತೆ ಚನ್ನಾಗಿ ಸಲಹುತ್ತಾರೆ.

(9) ಹಗೆಗಳು ನಮ್ಮ ರಾಜನ ಸರಲುಗಳಿಂದ ಈ ಹೊತ್ತು ಕೊಲ್ಲಲ್ಪಡುತ್ತಾರೆ.

V ಇವುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿರಿ.

(1) ವಿದ್ಯಾಬಾಲೇಷುಜಾತಾನ್ ದೋಷಾನ್ ಅಪನಯತಿ, ಸಚ್ಚರಿತಾನಿ ಸಂಪಾದಯತಿ.

(2) ಗೋಃ ತೃಣಕಬಳದಾನೇನ ಕಂಡೂಯನೇನಚ ನರಃ ಮಹತ್ಸುಕೃತಂ ಲಭತೆ ಸ್ವೀಯಂವಾಪರಕೀಯಂವಾ ತೃಣಂ ಧಾನ್ಯಂವಾ ಭಕ್ಷಯನ್ತೀಂ ಗಾಂಬುಧೊನತಾಡಯತಿ.

(3) ಪ್ರಭಾತಾರಜನೀ, ತಚ್ಛೀಘ್ರಂಶಯನಂ ಪರಿತ್ಯಜಾಮಿ. ಅಥವಾ ಲಘು ಉತ್ಥಿತೋಽಪಿಕಿಂಕರೋಮಿ. ನಮೇ ಉಚಿತೇಷುಪ್ರಭಾತಕರಣೀಯೇಷುಹಸ್ತಪಾದಂಪ್ರಸರತಿ.

(4) ಪ್ರೀಣಾತಿಯಸ್ಸುಚರಿತೈಃಪಿತರಂಸಪುತ್ರಃ ।
ಯದ್ಭರ್ತುರೇವಹಿತಮಿಚ್ಛತಿತತ್ಕಳತ್ರಂ ।
ತನ್ಮಿತ್ರಮಾಪದಿಸುಖೇಚಸಮಕ್ರಿಯಂಯತ್ ।
ಏತತ್ತ್ರಯಂಜಗತಿಪುಣ್ಯಕೃತೋಲಭಂತೇ ॥

ಷರಾ — ಉತ್ತರಗಳನ್ನು ಸಂಸ್ಕೃತಾಕ್ಷರಗಳಿಂದಲೇ ಬರೆಯಬೇಕು.

ಲೋವರ್ ಸೆಕಂಡರಿ ಗ್ರೇಡ್ ಟ್ರೈನಿಂಗ್ ಕ್ಲಾಸ್.

7—4—09. **ತಿದ್ದುವಿಕೆ.** ಕಾಲ 2 ಘಂಟೆ.

I. ತಿದ್ದುವಿಕೆಗೂ ಶಾಲಾಸಂವಿಧಾನಕ್ಕೂ ಶಿಕ್ಷಣಕ್ಕೂ ಇರುವ ಸಂಬಂಧವೇನು?

II. ಮಕ್ಕಳ ನಡತೆಯನ್ನು ತಿದ್ದಲು ಯತ್ನಿಸುವ ಉಪಾಧ್ಯಾಯರಲ್ಲಿ ಇರಬೇಕಾದ ಲಕ್ಷಣಗಳು ಯಾವುವು? ಈ ಕೆಲಸಕ್ಕಾಗಿ ಇವರು ಮಾಡಬೇಕಾದುದೇನು?

III. ಶೀಲವೆಂದರೇನು? ಮಕ್ಕಳಲ್ಲಿ ಇರಬೇಕಾದ ಮುಖ್ಯವಾದ ಸುಶೀಲಗಳು ಯಾವುವು? ಇವುಗಳಲ್ಲಿ ಯಾವುದಾದರೂ ಒಂದನ್ನು ಉಂಟುಮಾಡುವ ರೀತಿಯನ್ನು ತಿಳಿಸಿರಿ.

IV. ಮಕ್ಕಳಲ್ಲಿ ಸಹಜವಾಗಿರುವ ಯಾವ ರಸಗಳಿಂದ ಅವರ ನಡತೆಯನ್ನು ತಿದ್ದಲು ಸಹಾಯವಾಗುವುದು? ಹೇಗೆ ಸಹಾಯವಾಗುವುದು?

V. ದೇಹದಂಡನೆಯನ್ನು ಪಾಠಶಾಲೆಯಲ್ಲಿ ಉಪಯೋಗಿಸುವ ವಿಷಯದಲ್ಲಿ ಇರುವ ಅಭಿಪ್ರಾಯಗಳೇನು? ಸ್ಪೆನ್ಸರನು ಅನುಮೋದಿಸುವ ದಂಡನೆ ಯಾವುದು? ಇದನ್ನು ಎಷ್ಟರಮಟ್ಟಿಗೆ ಉಪಯೋಗಿಸಬಹುದು?

VI. ಸರ್ಕಾರದವರು ಬಾಲಕರಿಗೆ ಮತಸಂಬಂಧವಾದ ಬೋಧನೆಯನ್ನೂ, ಧರ್ಮೋಪದೇಶವನ್ನೂ ಪಾಠಶಾಲೆಯಲ್ಲಿ ನಡೆಸಬೇಕೆಂದು ನಿಯಮಿಸುವುದಕ್ಕೆ ಕಾರಣಗಳೇನು? ಹಿಂದೂ ಬಾಲಕರಿಗೆ ಮತಬೋಧನೆಗೋಸ್ಕರ ಯಾವ ಯಾವ ತರಗತಿಯಲ್ಲಿ ಯಾವಯಾವ ಗ್ರಂಥಗಳನ್ನು ಬೋಧಿಸಬೇಕೆಂದು ನಿಯಮಿಸಿರುವರು?

VII. ಪಾಠಶಾಲೆಯಲ್ಲಿ ನೀತ್ಯನುಶಾಸನವು ಸರಿಯಾಗಿರುವುದರ ಚಿಹ್ನೆಗಳು ಯಾವುವು?

ವಿದ್ಯೆ.

ರಸೆಯೊಳ್ ನೀರಸಸುಖವಂ ।
ಪಸರಿಪಪರ್ವಗಳನು ಪಡೆಯುತೆಳಸುವಮಗುವೇ ॥
ಜಸವಂ ಮೇಣ್ ಸ್ಥಿರಸುಖವಂ ।
ಪಸರಿಸುವಾ ವಿದ್ಯೆಯಲ್ಲುಮೊಂದಭಿರುಚಿಯುಂ ॥೧॥

ವಿದ್ಯೆ ಪರದೇಶದಲಿತಾಯ್ ।
ವಿದ್ಯೆಯೆ ಲೋಕಕ್ಕೆ ಗುಪ್ತಧನಮಲೆ ಮಗುವೇ ॥
ವಿದ್ಯೆ ಸುರಧೇನುವೆಂಬೋಲ್ ।
ಹೃದ್ಯಫಲಂಗಳನೆ ಸರ್ವದಾ ನಿನಗೀಗುಂ ॥೨॥

ವಿದ್ಯೆಯನೋದಲೆವೇಳ್ಕುಂ ।
ವಿದ್ಯೆಯಿನಿಳೆತಾಳ್ದುಗುರುತೆಯುಂಬೀಗುವುದೈ ॥
ವಿದ್ಯೆಯನೋದದವಂ ಪಶು ।
ವಿದ್ಯೆಯನೋದದನರಂಧರಿತ್ರಿಗೆಭಾರಂ ॥೩॥

ಧನದಿಂ ಹೀನಂಹೀನಂ ।
ಧನಿಕನು ಮೆಲೆ ಮಗುವೆ ಹೀನರಲ್ಲಂಧರೆಯೊಳ್ ॥
ಘನವಿದ್ಯೆಯಿನಾವಂಹೀ ।
ನನೆಂದು ಪೆಸರಾಂತನೆಣಿಸಿದೊಡೆ ಹೀನನವಂ ॥೪॥

ಚಂದಂ ಕೋಗಿಲೆಗೆಸರಂ ।
ಚಂದಂ ಸ್ತ್ರೀಜನಕೆ ಮಗುವೆ ಪಾತಿವ್ರತ್ಯಂ ॥
ಚಂದಂ ಕ್ಷಮೆ ಮುನಿಜನಕದು ।
ಚಂದಂ ವಿದ್ಯೆಯೆ ಕುರೂಪನಹಮನುಜಂಗಂ ॥೫॥

ಸುಡು ಗುಣಹೀನನ ರೂಪಂ ।
ಸುಡು ಮಗು ದುಶ್ಶೀಲನೆನಿಸುವಾತನಕುಲವಂ ॥
ಸುಡುವುದಯೋಗ್ಯನತಿಳಿವಂ ।
ಸುಡುವೇಳ್ಕುಂ ಸದುಪಯೋಗಕೊದಗದಧನವಂ ॥೬॥

ಸೊಗವನೆ ನೀಂ ಮೊದಲೆಳಸಲ್ ।
ಮಗುವೇ ಸರಸತಿಯುನಿನ್ನೊಳೊಲಿಯುವುದಿಲ್ಲಂ ॥
ಸೊಗವಂ ಗಣಿಸದೆ ಜಾಣರ್ ।
ಬಗೆವುದರಿಂ ವಿದ್ಯೆಯುನ್ನು ಸುಖಿಸುವರನಿಶಂ ॥೭॥

ಧನವಂಬೇಡುವನಧಮಂ ।
ಧನಮಾನಂಗಳನೆ ಬೇಡುವಂ ಮಧ್ಯಮನೈ ॥
ಘನನೆಳಸುವನೈ ಮಾನವ ।
ನೆನಲಾ ಮಹನೀಯುರತ್ತೆ ಮಗುಮಾನಧನಂ ॥೮॥

ತರಳನೆ ಸದ್ವಿದ್ಯೆಯು ಕುಡು ।
ವರಿವೊಂದಿಲ್ಲದಿರೆ ನರನೊಳಾತನವಂಶಂ ॥
ಹರೆಯುಂ ಮೇಣ್ ಸೌಂದರ್ಯಂ ।
ಮೆರೆಯುವು ನಿರ್ಗಂಧ ಕಿಂಶುಕಂಗಳತೆರದಿಂ ॥೯॥

ಬಲಶಾಲಿಗಿಹುದೆಭಾರಂ ।
ಕೆಲಸದೊಳಲಸತೆಯುನುಳಿದಗಿಹುದೇಂ ದೂರಂ ॥
ತಿಳಿದುಸುವರ್ಗಂಗೀಹನೇಂಪಗೆ ।
ಯೆಲೆ ಮಗು ಪಂಡಿತನಿಗಿಹುದೆ ಪೇಳ್ ಪರದೇಶಂ ॥೧೦॥

ಮಗುವೇ ನೀ ನೋದುವ ಹೊ ।
ತ್ತಗೆಯೇ ಭೂಗೋಳಮಿದರೊಳಿಹವಸ್ತುಗಳಂ ॥
ಬಗೆಬಗೆದು ಪರೀಕ್ಷಿಸಲಾ ।
ವಗಮುಂ ಕ್ರಮದಿಂದೆ ಪಂಡಿತಾಗ್ರಣಿಯೆನಿಪೈ ॥೧೧॥

ತಿಳಿಪೆಂಬರನ್ನವನು ನೀ ।
ನೆಳಸುವುದೇ ಸತ್ಯಮಾಗಿರಲ್ ಶ್ರೀಗುರುವಿಂ ॥
ತಳೆವುದು ವಿದ್ಯಾರತ್ನವ ।
ಸಲಿಸುತ್ತಾ ಗುರುಗೆ ಭಕ್ತಿಧನವನುಮಗುವೇ ॥೧೨॥

ಎಂ. ಕೃಷ್ಣಪ್ಪ.

ಶ್ರೀರಸ್ತು.

ಎಲ್ಲಾ ಪಾಠಶಾಲೆಗಳಲ್ಲಿಯೂ ಉಪಯೋಗಿಸತಕ್ಕ ಲಲಿತವಾದ

ಸ್ತೋತ್ರಪಾಠದ ಹಾಡು.

:o:

(ಸ್ವಾಮಿದೇವನೆ ಲೋಕಪಾಲನೆ ತೇನವೋಸ್ತು ನಮೋಸ್ತುತೆ. ಎಂಬಂತೆ)

ಶ್ರೀಶಪಾಲಿಸು ವಾಸುದೇವನೆ ದೀನಜನಮಂದಾರನೇ ||ಪ||
ಕ್ಲೇಶಪಟ್ಟೆನು ಪಾಪಿಯಾದೆನು ಕಾಯ್ವರಾರನು ಕಾಣೆನು ||ಅ|ಪ||

ಎನ್ನ ಮನದಿಂ ಮಾತಿನಿಂದಂ ಕಾರ್ಯದಿಂದ ಮಾಡುವ |
ವರ್ಣಿಸಲ್ಕಳವಲ್ಲದೆನ್ನಯ ಸರ್ವದುರಿತ ಸಮೂಹವ ||
ಪೂರ್ಣರೂಪನೆ ಮನ್ನಿಸುತ್ತಲಿ ಪೂರ್ಣಕೃಪೆಯಿಂ ನೋಡುತ |
ಸನ್ನುತಾಂಗನೆ ರಕ್ಷಿಪುದು ಸರ್ವೋತ್ತಮನೆ ಜಗದೀಶನೇ ||೧||

ನೇಸರುದಿಸುವಕಾಲದಿಂ ತಾ ನಸ್ತಮಿಪಪರ್ಯಂತರಂ |
ಭಾಸುರಾಂಗನೆ ಮಾಳ್ಪಕಜ್ಜಗಳೆಲ್ಲಮಂ ನೀನೋಡುವೈ ||
ಘಾಸಿಯಾಗದ ಮಾಳ್ಕೆಯಿಂ ಸಲೆ ರಾತ್ರಿಯೊಳ್ಕವಲಿಲ್ಲದೇ |
ವಾಸವಾರ್ಚಿತ ಬೇಡುವೆನು ಸಲೆ ರಕ್ಷಿಪುದು ಜಗದೀಶನೇ ||೨||

ಆರಕಾಣೆನು ಶಕ್ತರಂ ಪರಮಾತ್ಮನೇ ಪರಿಪಾಲಿಸೈ |
ನಾರಿಯುಂ ಸುತರಂ ವಿಚಾರಿಸೆ ತಂದೆತಾಯ್ವಿರುಮಿಲ್ಲವೈ ||
ಕಾರಣಾಂತರದಿಂದಲೊದಗುವ ಸೋದರರ್ಕಳು ಮಿಲ್ಲವೈ |
ಆರುಮಿಲ್ಲವು ನೀನೆ ಎಲ್ಲವು ಭೋದಯಾನಿಧೆ ರಕ್ಷಿಸೈ ||೩||

ಸರ್ವಕಾಲದಿ ಸರ್ವರೊಳ್ಸಂಮೋದದಿಂದಾವಾಸಿಪೈ |
ಗರ್ವವಿಲ್ಲನಪೇಕ್ಷ ಜಗದಾನಂದದಾಯಕನಲ್ಲವೇಂ? ||
ಸರ್ವಕರ್ತನು ಸರ್ವಶಕ್ತನು ಸರ್ವಮಂ ಪರಿಪಾಲಿಪೈ |
ಸರ್ವಜಗದಾಧಾರನಾಗುತಲುರ್ವಿಯುಂ ಪರಿಪೋಷಿಪೈ ||೪||

ಅರಿಗುಸುರುವೆ ಎನ್ನಬಿನ್ನಹವಾದಿಮೂರುತಿ ದೇವನೆ|
ಸರ್ವದಾ ನಾ ತಪ್ಪುಮಾಡದ ರೀತಿ ಬುದ್ಧಿಯಪಾಲಿಸೈ||
ಸಾರತರ ಪಾದಾರವಿಂದವ ನಂಬಿ ಭಜಿಸುವ ಎಮ್ಮನು |
ಭೂರಮೇಶನೆ ಶ್ರೀನಿವಾಸ ದಯಾಸಮುದ್ರನೆ ರಕ್ಷಿಸೈ ||೫||

M. S. Sreenivasa Iyengar,

ವಿ ದ್ಯಾ ದಾ ಯಿ ನಿ .

(A MONTHLY JOURNAL)

ಭಾಗ ೧೨] ಜೂಲೈ—೧೯೦೯ [ಸಂಚಿಕೆ ೭.

ಪಾಠಶಾಲೆಯ ಉಪಕರಣಗಳು.

ಪಾಠಶಾಲೆಗಳ ಉಪಕರಣಗಳ ವಿಷಯವನ್ನು ಅನೇಕರು ಅಷ್ಟು ಮನಸ್ಸಿಗೆ ಆಹ್ಲಾದಕರವೆಂದು ಭಾವಿಸುವುದಿಲ್ಲ. ಇವನ್ನು ಡಿಪಾರ್ಟ್‌ಮೆಂಟಿನವರು ಇಡಬೇಕೆಂದು ನಿರ್ಬಂಧಿಸುವ ಕರಿಯ ಹಲಿಗೆಗಳು, ಭೂಪಠಗಳು, ಚಿತ್ರಗಳು ಮೊದಲಾದ ಗಳೆಂದು ಭಾವಿಸಿದರೆ ಮನಸ್ಸಿಗೆ ಆಹ್ಲಾದವೂ ಇರಲಾರದು. ಆದರೆ ನಮ್ಮ ವಶದಲ್ಲಿರುವ ಸಣ್ಣ ಮಕ್ಕಳಮೇಲೆ ದೃಷ್ಟಿಯಿಟ್ಟು ಅವರಿಗೆ ದೇವರು ಕೊಟ್ಟಿರುವ ಬುದ್ಧಿಯನ್ನು ಹೆಚ್ಚಿಸುವ ವಿಷಯವನ್ನೂ ಅವರ ಮನಸ್ಸಿಗೆ ಸಂತೋಷವನ್ನು ಉಂಟುಮಾಡುವ ವಿಷಯವನ್ನು ಯೋಚಿಸಿದರೆ ಉಪಕರಣಗಳವಿಷಯವು ಮನಸ್ಸಿಗೆ ಅಷ್ಟು ಬೇಸರಿಕೆಯನ್ನು ಉಂಟುಮಾಡಲಾರದು. ಸಣ್ಣ ಮಕ್ಕಳ ಪಾಠಶಾಲೆಗಳಲ್ಲಿ ಉಪಕರಣಗಳಿಲ್ಲದಿದ್ದರೆ ಆ ಪಾಠಶಾಲೆಯ ಕೆಲಸದಿಂದ ಮಕ್ಕಳಿಗೆ ವಿಶೇಷ ಪ್ರಯೋಜನವಿರಲಾರದು. ಆದುದರಿಂದಲೇ ಉಪಕರಣಗಳ ಉಪಯೋಗದವಿಷಯದಲ್ಲಿ ಇಲಾಖೆಯವರು ವಿಶೇಷ ನಿರ್ಬಂಧವನ್ನು ಇಟ್ಟಿರುವರು. ಉಪಕರಣಗಳನ್ನು ಉಪಯೋಗಿಸಿ ಪಾಠಹೇಳುವುದನ್ನು ಕತ್ತಲೆಯ ಮನೆಗೆ ದೀಪವನ್ನು ತೆಗೆದುಕೊಂಡು ಹೋಗುವುದಕ್ಕೆ ಹೋಲಿಸುವುದುಂಟು. ದೀಪದಿಂದ ಹೇಗೆ ಮನೆಯಲ್ಲಿರುವ ವಸ್ತುಗಳೆಲ್ಲ ಕಣ್ಣಿಗೆ ಒಡನೆಯೇ ಕಾಣುವುವೋ ಹಾಗೆಯೇ ಉಪಕರಣಗಳಿಂದ ಗಹನವಾದ ಅಂಶಗಳು ಮನಸ್ಸಿಗೆ ತಟ್ಟನೆ ಹೊಳೆಯುವುವು. ಈಗ ಎಲ್ಲಾ ಕಡೆಯಲ್ಲಿಯೂ ಪ್ರಚಾರಕ್ಕೆ ಬಂದಿರುವ ಬಯಸ್ಕೋಪಿನಲ್ಲಿ ಕಾಣುವ ಚಲನೆಯಿಂದ ಕೂಡಿದ ಚಿತ್ರಗಳಿಗೂ, ಮ್ಯಾಜಿಕ್ ಲ್ಯಾಂಟರ್ನಿನಲ್ಲಿ ಕಾಣುವ ಚಲನೆಯಿಲ್ಲದ

ಚಿತ್ರಗಳಿಗೂ, ಎಷ್ಟು ವ್ಯತ್ಯಾಸವಿರುವುದೋ ಉಪಕರಣಗಳಿಂದ ಕೂಡಿದ ಪಾಠಕ್ಕೂ ಉಪಕರಣಗಳಿಲ್ಲದ ಪಾಠಕ್ಕೂ ಅಷ್ಟೇ ವ್ಯತ್ಯಾಸವಿರುವುದು.

ಆದರೆ ಉಪಕರಣಗಳನ್ನು ಅತಿಯಾಗಿ ಉಪಯೋಗಿಸುವುದನ್ನೂ ಅನಾವಶ್ಯಕವಾಗಿ ಉಪಯೋಗಿಸುವುದನ್ನೂ ತಪ್ಪೆಂತಲೇ ಭಾವಿಸಬೇಕಾಗುವುದು. ಒಂದು ಸ್ಕೂಲಿನಲ್ಲಿ ಭೂಗೋಳದ ವಿಷಯದಲ್ಲಿ ಪಾಠ ನಡೆಯುತಿದ್ದಾಗ ಒಬ್ಬ ಉಪಾಧ್ಯಾಯನು ದ್ವೀಪದ ವಿಷಯವನ್ನು ತಿಳಿಸಲು ಒಂದು ತಟ್ಟೆಗೆ ನೀರುಹಾಕಿ ಅದರ ಮಧ್ಯದಲ್ಲಿ ಸ್ವಲ್ಪ ಮಣ್ಣನ್ನಿಟ್ಟು ಪಾಠಕ್ಕೆ ಬಲು ಎಚ್ಚರಿಕೆಯಿಂದ ಉಪಕರಣವನ್ನು ಸಿದ್ಧಪಡಿಸಿಕೊಂಡಿದ್ದನು. ಆದರೆ ಪಾಠಶಾಲೆಯ ಹೊರಗಡೆಯಲ್ಲಿ ಕಿಟಕಿಯ ಮಾರ್ಗವಾಗಿ ಸುಲಭವಾಗಿ ಕಾಣುತ್ತಿದ್ದ ಒಂದು ನದಿಯ ಮಧ್ಯದಲ್ಲಿದ್ದ ಸ್ವಾಭಾವಿಕವಾದ ದ್ವೀಪವನ್ನು ಉಪಯೋಗಿಸುವುದು ಆತನಿಗೆ ತೋರದೆ ಹೋಯಿತು. ಪಾಠವಾದ ನಂತರ ಸ್ವಾಭಾವಿಕವಾದ ದ್ವೀಪವು ಎಷ್ಟು ದೊಡ್ಡದಾಗಿರುವುದೆಂದು ಇನ್ಸ್‌ಪೆಕ್ಟರವರು ಒಬ್ಬ ಬಾಲಕನನ್ನು ಕೇಳಿದಾಗ ಅವನು ಒಂದು ಹೆಬ್ಬೆಟ್ಟಿನ ಗಾತ್ರಕ್ಕಿರುವುದೆಂದು ಹೇಳಿದನು. ಆದುದರಿಂದ ಅನಾವಶ್ಯಕವಾಗಿ ಕೃತಕವಾದ ಉಪಕರಣಗಳನ್ನು ಉಪಯೋಗಿಸುವುದನ್ನು ತಪ್ಪೆಂತಲೇ ಭಾವಿಸಬೇಕಾಗುವುದು. ಪ್ರಕೃತಿಯಲ್ಲಿ ನಮಗೆ ಬೇಕಾದ ನಿದರ್ಶನಗಳು ದೊರಕುವ ಸಂದರ್ಭದಲ್ಲಿ ಕೃತಕವಾದ ಉಪಕರಣಗಳ ಸಹಾಯವನ್ನು ನಾವು ಅಪೇಕ್ಷಿಸಬಾರದು.

ಪಾಠಶಾಲೆಯಲ್ಲಿ ಇರಬೇಕಾದ ಉಪಕರಣಗಳಲ್ಲಿ ಕರೀ ಹಲಿಗೆಯೇ ಬಲು ಮುಖ್ಯವಾದುದು. ಚಿತ್ರವನ್ನು ಬರೆಯುವ ಅಭ್ಯಾಸವುಳ್ಳ ಉಪಾಧ್ಯಾಯನು, ಅನುಕೂಲವಾದ ಕರೀಲಿಹಗೆ. ಈ ಎರಡು ಅಂಶಗಳಿದ್ದರೆ ಅನೇಕವೇಳೆ ತನಗೆ ಬೇಕಾದ ಭೂಪಟಗಳು, ಚಿತ್ರಗಳು, ಆಕೃತಿಗಳು ಇವುಗಳನ್ನು ಉಪಾಧ್ಯಾಯನೇ ಮಾಡಿಕೊಳ್ಳಬಹುದು. ಆದುದರಿಂದ ಪಾಠಶಾಲೆಯಲ್ಲಿ ಕರೀಹಲಿಗೆಗಳು ಯಥೇಚ್ಛವಾಗಿರಬೇಕು. ಅದರಲ್ಲೂ ಗೋಡೆಯಲ್ಲಿರುವ ಕರೀಹಲಿಗೆಗಳು ಬಹಳ ಉತ್ತಮವಾದುವು. ಇವುಗಳಿಂದ ಸ್ಥಳವು ಕೂಡಿಬರುವುದು. ಒಂದು ಸ್ಥಳದಿಂದ ಇನ್ನೊಂದುಸ್ಥಳಕ್ಕೆ ತೆಗೆದುಕೊಂಡು ಹೋಗಬೇಕಾದ ಆವಶ್ಯಕವಿಲ್ಲವಾದುದರಿಂದ ಮುರಿದುಹೋಗುವುದಿಲ್ಲ. ಬಾಲಕರು ವಸ್ತುಗಳನ್ನು ಲಂಬವಾದರೀತಿಯಲ್ಲಿ ನೋಡುವುದರಿಂಗ ಲಂಬವಾದ ಗೋಡೆಯಲ್ಲಿರುವ ಕರೀಹಲಿಗೆಗಳು ಚಿತ್ರ ಬರೆಯುವುದಕ್ಕೆ ವಿಶೇಷ ಅನುಕೂಲವಾಗಿರುವುವು. ಮಕ್ಕಳ ತರಗತಿಯಲ್ಲಿ ಉಪ

ಯೋಗಿಸುವಕರೀಹಲಿಗೆಗಳು ಅವರಿಗೆಬರೆಯಲು ಸಾಧ್ಯವಾಗುವಂತೆ ಗೋಡೆಯ ಕೆಳ ಭಾಗದಲ್ಲಿರಬೇಕಾಗುವುದು. ಮೈಸೂರು ನಾರ್ಮಲ್ ಸ್ಕೂಲಿಗೆ ಸೇರಿದ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲೂ ಮಹಾರಾಣೀ ಕಾಲೇಜಿನಲ್ಲೂ ಮಕ್ಕಳು ಚಿತ್ರ ಬರೆಯುವುದಕ್ಕೆ ಇಂತಹ ಕರೀಹಲಿಗೆಯನ್ನೇ ಉಪಯೋಗಿಸುತ್ತಿರುವರು. ಎರಡುಭಾಗ ತೆಂಗಿನ ಕರಟದ ಇದ್ದಲು, ಒಂದುಭಾಗ ಸಣ್ಣಮರಳು, ಒಂದುಭಾಗ ಸುಣ್ಣ, ಈ ಮೂರನ್ನೂ ಅಳಲೇಕಾಯಿ ನೀರಿನಲ್ಲಿ ನುಣ್ಣಗೆ ಅರೆದು ಗೋಡೆಗೆ ಸಮಗಾರೆ ಮಾಡುವುದರಿಂದ ಇಂತಹ ಹಲಿಗೆಗಳು ಏರ್ಪಡುವುವು. ಕೊಠಡಿಯಸುತ್ತಲೂ ಈ ಬೋರ್ಡುಗಳಿರುವುದರಿಂದ ಎಷ್ಟು ಅನುಕೂಲವೆಂಬುದು ಅದನ್ನು ಉಪಯೋಗಿಸಿದವರಿಗೆ ಗೊತ್ತು. ಬರೆಯುವುದನ್ನು ವಿಶೇಷ ಸಂಕೋಚಮಾಡಿ ಬರೆಯಬೇಕಾದುದಿಲ್ಲ. ಬೇಕಾದಷ್ಟು ಸ್ಥಳವನ್ನು ಉಪಯೋಗಿಸಬಹುದು. ಕರೀಹಲಿಗೆಯಿಂದ ಕೊಠಡಿಯೊಳಕ್ಕೆ ಬೆಳಕು ಬರಲು ಪ್ರತಿಬಂಧಕವಾಗುವುದು ಎಂಬ ಭಯವಿಲ್ಲ. ಆದುದರಿಂದ ಸಾಧ್ಯವಾದ ಸ್ಕೂಲುಗಳಲ್ಲೆಲ್ಲಾ ಇಂತಹ ಕರೀಹಲಿಗೆಗಳನ್ನು ಮಾಡಿಸುವುದು ಆವಶ್ಯಕವೆಂದು ತೋರುವುದು. ಈ ಹಲಿಗೆಗಳ ಜೊತೆಗೆ ಪಾಠಶಾಲೆಯಲ್ಲಿ ನಾನಾಬಣ್ಣದ ಸುಣ್ಣಗಳನ್ನು ತರಿಸಿಟ್ಟಿದ್ದರೆ ಮಕ್ಕಳಿಗೆ ಚಿತ್ರಬರೆಯುವಾಗ ವಿಶೇಷ ಉತ್ಸಾಹವಿರುವುದೆಂದು ಹೇಳಬೇಕಾದುದೇ ಇಲ್ಲ.

ಪ್ರತಿಯೊಂದು ಪಾಠಶಾಲೆಯಲ್ಲೂ ಉತ್ತಮವಾದ ಭೂಪಟಗಳು ಚಿತ್ರಗಳು ಇರುವುದು ಅತ್ಯಾವಶ್ಯಕವು. ಕೆಲಸಕ್ಕೆ ಬಾರದ ಭೂಪಟಗಳು, ಚಿತ್ರಗಳು ಇರುವುದಕ್ಕಿಂತ ಇವುಗಳು ಇಲ್ಲದಿರುವುದೇಮೇಲು. ಪ್ರತಿಯೊಂದು ಸ್ಕೂಲಿನಲ್ಲೂ ಆ ಸ್ಕೂಲಿರುವ ಡಿಸ್ಟ್ರಿಕ್ಟಿನ ಭೂಪಟವೊಂದು ಇದ್ದೇ ಇರಬೇಕು. ಇದರ ಜೊತೆಗೆ ಪ್ರಪಂಚದ ಭೂಪಟವು ಒಂದು ಇರಬೇಕು ಮಕ್ಕಳು ತಮ್ಮ ದೇಶವನ್ನು ಇತರ ದೇಶಗಳೊಡನೆ ಹೋಲಿಸಲು ಪ್ರಪಂಚದ ಭೂಪಟದಿಂದ ಸಹಾಯವಾಗುವುದು. ಅನೇಕ ಭೂಪಟಗಳನ್ನು ಕೊಂಡುಕೊಳ್ಳುವ ಶಕ್ತಿಯಿಲ್ಲದ ಪಾಠಶಾಲೆಗಳಲ್ಲಿ ಪ್ರಪಂಚದ ಭೂಪಟ ವೊಂದಿದ್ದರೆ ಅದೊಂದೇ ಸಾಕಾಗಿರುವುದು. ಪಾಠಶಾಲೆಯಲ್ಲಿರುವ ಭೂಪಟಗಳನ್ನೂ ಚಿತ್ರಗಳನ್ನೂ ಪಾಠಶಾಲೆಯ ಕಾಲದಲ್ಲಿ ಗೋಡೆಗಳಿಗೆ ತಗಲುಹಾಕಿರಬೇಕು. ಹೀಗೆಮಾಡುವುದರಿಂದ ಇವು ಬೇಗಹರಿದುಹೋಗಬಹುದೆಂದು ಅನೇಕರು ಯೋಚಿಸಬಹುದು. ಆದರೆ ಮಕ್ಕಳಿಗೆ ಇದರಿಂದುಂಟಾಗುವ ಪ್ರಯೋಜನವನ್ನು ಯೋಚಿಸಿದರೆ ಹರಿದುಹೋದರೂ ಚಿಂತೆಯಿಲ್ಲ. ಹೀಗೆ ತಗಲಿಹಾಕುವುದೇ

ಉತ್ತಮವೆಂದು ಕಾಣುವುದು ಪ್ರತಿದಿವಸವೂ ಗೋಡೆಯಮೇಲೆ ತಗಲಿಹಾಕಿರುವ ಭೂಪಟಗಳನ್ನೂ ಚಿತ್ರಗಳನ್ನೂ ಬಾಲಕರು ನೋಡುವುದರಿಂದ ಯಾರಉಪದೇಶವೂ ಇಲ್ಲದೆ ಇವುಗಳವಿಷಯವು ಬಾಲಕರ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವುದು. ಒಂದು ದಿವಸ ತರಗತಿಯಲ್ಲಿ ಖಡ್ಗಮೃಗದ ವಿಷಯವಾಗಿ ಪಾಠ ನಡೆಯುತಿದ್ದಾಗ ಒಬ್ಬ ಬಾಲಕನು ಅದರ ವಿಷಯವನ್ನು ಸ್ಪಷ್ಟವಾಗಿ ತಪ್ಪಿಲ್ಲದಂತೆ ವಿವರಿಸಿದನು. ಈ ವಿಷಯವು ನಿನಗೆಲ್ಲಿತಿಳಿಯಿತೆಂದು ಕೇಳಿದಾಗ ಅವನು ಗೋಡೆಯಮೇಲೆ ತಗಲಿಹಾಕಿರುವ ಪಟವನ್ನು ನೋಡಿ ತಿಳಿದುಕೊಂಡೆ ಎಂದು ಹೇಳಿದನು. ಆದುದರಿಂದ ಪಾಠಶಾಲೆಯಲ್ಲಿರುವ ಭೂಪಟಗಳನ್ನೂ, ಚಿತ್ರಗಳನ್ನೂ ಒಳಗೆ ಭದ್ರವಾಗಿ ಮುಚ್ಚಿಡುವುದಕ್ಕೆ ಬದಲಾಗಿ ಪಾಠಶಾಲೆಯಕಾಲದಲ್ಲಿ ಇವುಗಳನ್ನು ಗೋಡೆಗೆ ತಗಲಿಹಾಕಿರುವುದು ಆವಶ್ಯಕವೆಂದು ತೋರುವುದು.

ಪಾಠಶಾಲೆಯಲ್ಲಿರಬೇಕಾದ ಮಾದರಿಗಳಲ್ಲಿ ಗೋಳವು ಮೊದಲನೆಯಸ್ಥಾನವನ್ನು ವಹಿಸುವುದು. ಗೋಳವನ್ನು ಸರಿಯಾಗಿ ಉಪಯೋಗಿಸುವುದರಿಂದ ಬಾಲಕರಿಗೆ ವಿಶೇಷ ಪ್ರಯೋಜನವಿರುವುದು. ಆದುದರಿಂದಲೇ ಇಲಾಖೆಯವರು ಪ್ರತಿಯೊಂದು ಪಾಠಶಾಲೆಯಲ್ಲೂ ಒಂದು ಗೋಳವಿರಬೇಕೆಂದು ಹೇಳುವುದು. ಇದನ್ನು ಭೂಗೋಳಪಾಠವಿರುವ ತರಗಳಲ್ಲಿ ಮಾತ್ರವೇ ಅಲ್ಲ,ಇತರ ತರಗತಿಗಳಲ್ಲೂ ಮಕ್ಕಳು ಉಪಯೋಗಿಸಬೇಕು. ಮತ್ತು ಇದರಲ್ಲಿ ತಿಳಿದ ಅಂಶಗಳನ್ನು ಭೂಪಟದಲ್ಲೂ ನೋಡುತಿರಬೇಕು. ಮಣ್ಣಿನ ಕೆಲಸವೂ ಚಿತ್ರಾಭ್ಯಾಸವೂ ಈಗ ನಮ್ಮ ದೇಶದ ಅನೇಕ ಪಾಠಶಾಲೆಗಳಲ್ಲಿ ನಡೆಯುತಿರುವುವು. ಈ ಕೆಲಸಗಳಿಗನುಕೂಲವಾದ ಮಾದರಿಗಳಿರುವುದು ಆವಶ್ಯಕವು. ನಿದರ್ಶನವಾಗಿ ಮಾವಿನ ಹಣ್ಣಿನ ಕಾಲವಲ್ಲದೆ ಇರುವಾಗ ಮಾವಿನಹಣ್ಣನ್ನು ಮಣ್ಣಿನಲ್ಲಿ ಮಾಡಿಸಬೇಕಾದರೆ ಅದರ ಮರದ ಮಾದರಿಯು ಆವಶ್ಯಕವಾಗುವುದು. ಪಟ್ಟಣದಲ್ಲಿರುವ ಸ್ಕೂಲಿನಲ್ಲಿ ರೈತರು ಉಳುವ ವಿಷಯ ಮುಂತಾದುದನ್ನು ಹೇಳಿಕೊಡಬೇಕಾದರೆ ನೇಗಲಿನ ಮಾದರಿಯು ಆವಶ್ಯಕವಾಗುವುದು. ಹೀಗೆಯೇ ದೋಣಿಗಳ ವಿಷಯದಲ್ಲಿ ಪಾಠ ಹೇಳುವಾಗ, ದೋಣಿಯ ಮಾದರಿಯು ಇರಬೇಕಾದದು ಆವಶ್ಯಕವು.

ಅವಕಾಶವಿರುವ ಸ್ಕೂಲಿನಲ್ಲಿ ಒಂದು ವಸ್ತು ಪ್ರದರ್ಶನಶಾಲೆಯು ಮತ್ತು ಒಂದು ತೋಟವು ಇದ್ದೇಇರಬೇಕು. ಇವುಗಳಿಂದ ವಿದ್ಯಾಭ್ಯಾಸಕ್ಕೆ ಆಗುವಪ್ರಯೋಜನವು ಎಲ್ಲರಿಗೂ ತಿಳಿದಿರುವುದರಿಂದ ಅವುಗಳ ವಿಷಯವನ್ನು ಇಲ್ಲಿ ವಿಶೇಷ ಬರೆಯು

ಬೇಕಾದುದಿಲ್ಲ. ಇವು ಮುಖ್ಯವಾಗಿ ಪಾಠಶಾಲೆಯ ಬಾಲಕರ ಕೆಲಸದಿಂದಲೇ ಬೆಳೆಯಬೇಕು. ಇವುಗಳನ್ನು ಕ್ರಮವಾಗಿ ಇಡಲು ಪಾಠಶಾಲೆಯ ಯಾವುದೋ ಒಂದು ತರಗತಿಯವರಲ್ಲ ಪ್ರಯತ್ನ ಪಡಬೇಕಾದುದು, ಎಲ್ಲರೂ ಪ್ರಯತ್ನ ಪಡಬೇಕಾದುದು ಅವಶ್ಯಕವು.

ಪ್ರತಿಯೊಂದು ಸ್ಕೂಲಿನಲ್ಲೂ ಒಂದು ಪುಸ್ತಕ ಭಾಂಡಾರವು ಇರಬೇಕು. ಆದರೆ ಹೋಬಳೀ ಸ್ಕೂಲುಗಳಲ್ಲಿ ಇದಕ್ಕೆ ವಿಶೇಷ ಅವಕಾಶವಿಲ್ಲದೆ ಇರಬಹುದು. ಆದರೂ ಇರುವ ಪುಸ್ತಕಗಳನ್ನಾದರೂ ಎಲ್ಲರಿಗೂ ಉಪಯೋಗ ವಾಗುವಂತೆ ಕ್ರಮವಾಗಿ ಇಡುವುದು ಅವಶ್ಯಕವು.

ಇದುವರೆಗೂ ಹೇಳಿರುವ ಉಪಕರಣಗಳಲ್ಲದೆ ಉಪಾಧ್ಯಾಯರು ಸಮಯಬಂದಾಗ ತಾವೇ ತಮಗೆ ಬೇಕಾದ ಉಪಕರಣಗಳನ್ನು ಕಲ್ಪಿಸಿ ಕೊಳ್ಳಬೇಕಾಗುವದು. ಅವರಿಗೆ ಕೆಲಸದಲ್ಲಿ ಉತ್ಸಾಹವಿದ್ದಷ್ಟು ಇಂತಃ ಉಪಕರಣಗಳನ್ನು ಕಲ್ಪಿಸಿ ಕೊಳ್ಳುವ ಶಕ್ತಿಯು ಹೆಚ್ಚುವುದು. ಮಣ್ಣು, ಮರಳು, ಬೀಜಗಳೂ, ಕಾಳುಗಳೂ ಕಡ್ಡಿಗಳೂ, ಕವಡೆಗಳು ಇವು ಎಲ್ಲೆಲ್ಲೂ ಯಥೇಚ್ಛವಾಗಿ ಸಿಕ್ಕುವುವು. ಇವುಗಳ ಸಹಾಯದಿಂದ ಉಪಾಧ್ಯಾಯರು ತಮಗೆ ಬೇಕಾದ ಉಪಕರಣಗಳನ್ನು ಕಲ್ಪಿಸಿ ಕೊಳ್ಳಬಹುದು.

ಸ್ಕೂಲಿಗೆ ಬೇಕಾದ ಉಪಕರಣಗಳನ್ನು ಒದಗಿಸಿಕೊಳ್ಳುವುದಕ್ಕಿಂತಲೂ ಅವುಗಳನ್ನು ಸರಿಯಾಗಿ ಉಪಯೋಗಿಸಿ ಎಚ್ಚರಿಕೆಯಿಂದ ಕಾಪಾಡುವುದು ಇನ್ನೂ ಮುಖ್ಯವು. ಉಪಾಧ್ಯಾಯನು ತನ್ನ ಉಪಕರಣಗಳನ್ನು ಕೆಲಸಗಾರನು ಆಯುಧಗಳನ್ನು ನೋಡಿಕೊಳ್ಳುವಂತೆ ನೋಡಿಕೊಳ್ಳಬೇಕು. ಆಯುಧಗಳಿಲ್ಲದಿದ್ದರೆ ಕೆಲಸವು ಹೇಗೆ ನಿಲ್ಲುವುದೋ ಹಾಗೆಯೇ ಉಪಕರಣಗಳಿಲ್ಲದಿದ್ದರೆ ಪಾಠಶಾಲೆಯ ಕೆಲಸಕ್ಕೂ ತೊಂದರೆಯುಂಟಾಗುವುದು. ಕೆಟ್ಟುಹೋಗಿರುವ ಕರೀಹಲಗೆ, ಚಿಂದಿಚಿಂದಿಯಾಗಿರುವ ಚಿತ್ರಗಳು ಭೂಪಟಗಳು, ಮುರಿದು ಹೋಗಿರುವ ಗುಂಡಿನ ಚೌಕಟ್ಟು ಇಂತಹ ಉಪಕರಣಗಳು, ನಮ್ಮೆಲ್ಲರಿಗೂ ಬಳಿಕೆಯಾದುವುಗಳೇ ಆಗಿರುವುವು. ಇವುಗಳು ಇರುವುದಕ್ಕಿಂತಲೂ ಇಲ್ಲದಿರುವುದೇ ಮೇಲು.

ಪಾಠಶಾಲೆಯ ಕೆಲಸದ ಬೆಳೆಯು ವಿಶೇಷವಾಗಿ ಉಪಕರಣಗಳನ್ನೇ ಆಶ್ರಯಿಸಿರುವುದರಿಂದ ಇವುಗಳ ವಿಷಯದಲ್ಲಿ ಉಪಾಧ್ಯಾಯರೂ ಇಲಾಖೆಯವರೂ ಎಚ್ಚರಿಕೆಯನ್ನು ತೆಗೆದು ಕೊಳ್ಳುವುದು ಅವಶ್ಯಕವು.

———0———

ನಾ ಥ ಮು ನಿ .

ಈ ಮಾತನ್ನು ಕೇಳಿ ನಾಥಮುನಿಗೆ ತುಂಬಾ ಸಂತೋಷವುಂಟಾದಿತು. ಅವನು ಪರಾಂಕುಶದಾಸನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಕನ್ನಿನನ್ ಶಿರುಟ್ಟಾಂಬು ಎಂಬ ಮಂತ್ರವನ್ನು ತನಗೆ ದಯವಿಟ್ಟು ಉಪದೇಶಿಸಬೇಕೆಂದು ಕೇಳಿಕೊಂಡನು. ನಾಥಮುನಿಯು ಮಂತ್ರೋಪದೇಶಕ್ಕೆ ಅರ್ಹನಾಗಿರುವುದನ್ನು ತಿಳಿದು ದಾಸನು ಅವನಿಗೆ ಆ ಮಂತ್ರವನ್ನು ಯಥಾವಿಧಿಯಲ್ಲಿ ಉಪದೇಶಿಸಿದನು. ಆ ಬಳಿಕ ನಾಥ ಮುನಿಯು ಒಂದು ದಿವಸ ಸ್ನಾನಮಾಡಿ ನಿತ್ಯಕರ್ಮವನ್ನು ಮುಗಿಸಿಕೊಂಡು ಶುಚಿ ರ್ಭೂತನಾಗಿ ಶುದ್ಧ ಮನಸ್ಸಿನೊಡನೆ ನಮ್ಮಾಳ್ವಾರ್ ಪ್ರತಿಮೆಯ ಮುಂದುಗಡೆ ಯಲ್ಲಿ ಯೋಗಾಸನದಲ್ಲಿ ಕುಳಿತುಕೊಂಡು ಚಿತ್ತೈಕಾಗ್ರತೆಯಿಂದಲೂ ಪರಮ ಭಕ್ತಿಯಿಂದಲೂ ಆ ಮಂತ್ರವನ್ನು ಹನ್ನೆರಡು ಸಾವಿರ ಸಾರಿ ಜಪಿಸಿದನು.

ಜಪವು ಸಿದ್ಧಿಸಿತು. ನಾಥಮುನಿಯು ಆಸ್ತಿಕನು ಧರ್ಮಶೀಲನು ಪರಮ ಭಕ್ತನು ಆಚಾರನಿಷ್ಠನು ಶುಚಿರ್ಭೂತನು ಧೀರಶಿಷ್ಯನು ಸದ್ವೃತ್ತನು ಸತ್ಯಸಂಧನೂ ಆದುದರಿಂದ, ಪರಮಕೃಪಾಳುವಾದ ಶ್ರೀಯು ನಾಥಮುನಿಗೆ ಪ್ರತ್ಯಕ್ಷದರ್ಶನವನ್ನು ಕೊಡೆಂದು ನಮ್ಮಾಳ್ವಾರಿಗೆ ಅಪ್ಪಣೆಮಾಡಿದಳು. ಸ್ವರ್ಗಲೋಕದಿಂದ ವಾಣಿಯು ಇಳಿದು ಬಂದಿತೋ ಎಂಬಂತೆ ನಮ್ಮಾಳ್ವಾರ್ ಪ್ರತಿಮೆಯ ಬಾಯಿಯಿಂದ, ನಾಥಮುನಿಯೆ! ನನ್ನನ್ನು ಏತಕ್ಕೆ ಕರದೆ? ನಿನಗೇನು ಬೇಕು? ಎಂಬ ವಚನಗಳು ಹೊರಟುವು. ಅದಕ್ಕೆ ನಾಥಮುನಿಯು, ಪ್ರಭುವೆ! ನಷ್ಟವಾಗಿರುವ ಪ್ರಬಂಧ ಜ್ಞಾನವನ್ನು ನನಗುಂಟುಮಾಡಿ ರಕ್ಷಿಸಬೇಕು ಎಂದು ಕೇಳಿಕೊಂಡನು. ಶ್ರೀಕೃಷ್ಣನ ಪ್ರಸಾದದಿಂದ ಅರ್ಜುನನಿಗೆ ದಿವ್ಯದೃಷ್ಟಿಯುಂಟಾದಂತೆ ನಮ್ಮಾಳ್ವಾರರ ಪ್ರಸಾದ ದಿಂದ ಆಗ ನಾಥಮುನಿಗೆ ದಿವ್ಯದೃಷ್ಟಿಯುಂಟಾದಿತು. ಸಹಸ್ರಶ್ಲೋಕಗಳುಳ್ಳ ತಿರುವಾಯಿಮೋಳಿಯೂ ಋಷಿಗಳಿಂದ ಹೇಳಲ್ಪಟ್ಟ ಮೂರು ಸಹಸ್ರಶ್ಲೋಕಗಳುಳ್ಳ ಪ್ರಬಂಧಗಳೂ ತ್ರಿರಹಸ್ಯವೂ ಯೋಗರಹಸ್ಯವೂ ಆತನಿಗೆ ಗೊತ್ತಾದುವು.

ಇದರಿಂದ ನಾಥಮುನಿಗೆ ಪರಮಾನಂದ ವುಂಟಾದಿತು. ತಾನು ಧನ್ಯನಾದೆ ನೆಂದು ತಿಳಿದುಕೊಂಡನು. ಆದಿನಾಥನ ಮತ್ತು ಆಳ್ವಾರಿನ ಸೇವೆಯಲ್ಲಿ ನಿರತ ನಾಗಿ ತಿರುನಗರಿಯಲ್ಲಿಯೇ ನಿಂತನು. ಹೀಗಿರಲು ಮನ್ನನಾರ್ ಸ್ವಾಮಿಯು ಸ್ವಪ್ನ ದಲ್ಲಿ ನಾಥಮುನಿಗೆ ಕಾಣಿಸಿಕೊಂಡು, ಮುನಿಯೆ! ನನ್ನಿದಿರಿಗೆ ಬಂದು ನೀನು

ಕಲಿತ ಆ ಗ್ರಂಥಗಳನ್ನು ಹೇಳೆಂದು ಅಪ್ಪಣೆ ಮಾಡಿದನು. ಈ ಸಂಗತಿಯನ್ನು ನಾಥಮುನಿಯು ಆದಿನಾಥ ಆಳುವಾರುಗಳ ಸನ್ನಿಧಿಯಲ್ಲಿ ಅರಿಕೆಮಾಡಿದನು. ಆಗ ವರು ಮುನಿಯನ್ನು ಕುರಿತು ನೀನು ನಿಮ್ಮೂರಿಗೆ ಹೋಗು ಮತ್ತು ಕ್ರಮದಮಾದಿಗ ಳುಳ್ಳ ಸತ್ಪಾತ್ರರಾದ ಶ್ರೀವೈಷ್ಣವರಿಗೆ ನೀನು ಕಲಿತಿರುವ ಪ್ರಬಂಧಗಳನ್ನು ಹೇಳಿ ಕೊಟ್ಟು ಪ್ರಚಾರಪಡಿಸು ಎಂದು ಅಪ್ಪಣೆಮಾಡಿದರು. ಹೀಗೆ ಅಪ್ಪಣೆಯನ್ನು ಪಡೆ ದವನಾಗಿ ನಾಥಮುನಿಯು ತನ್ನ ಊರನ್ನು ಕುರಿತು ಪ್ರಯಾಣಮಾಡಿದನು. ದಾರಿ ಯಲ್ಲಿ ಸಿಕ್ಕಿದ ಅನೇಕ ದೇವಾಲಯಗಳನ್ನು ಪ್ರವೇಶಿಸಿ ಅಲ್ಲಿಯ ದೇವರುಗಳನ್ನಾ ರಾಧಿಸಿ ಕಡೆಗೆ ವೀರನಾರಾಯಣ ಪುರಕ್ಕೆ ಬಂದು ಮನ್ನನಾರ್ ಸ್ವಾಮಿಯ ಸನ್ನಿಧಿ ಯಲ್ಲಿ ತಾನು ಕಲಿತ ಪ್ರಬಂಧಗಳನ್ನು ಒಪ್ಪಿಸಿದನು.

ರಾಜಗೋಪಾಲಸ್ವಾಮಿಯು ಈ ಪ್ರಬಂಧಗಳನ್ನು ಕೇಳಿ ತನ್ನಲ್ಲಿ ತಾನು ಹೀಗೆ ಆಲೋಚಿಸಿದನು:—ಆತ್ಮರುಗಳ ಪ್ರಯೋಜನಾರ್ಥವಾಗಿ ದೇಹವನ್ನೂ ಜ್ಞಾನೇಂದ್ರಿಯಗಳನ್ನೂ ನಿರ್ಮಿಸಿದೆನು; ಸನ್ಮಾರ್ಗದಲ್ಲಿ ಪ್ರವರ್ತಿಸುವುದಕ್ಕಾಗಿ ಶಾಸ್ತ್ರಗಳನ್ನು ಕೊಟ್ಟಿರುವೆನು; ಲೋಕಹಿತಾರ್ಥವಾಗಿ ನಾನೇ ಅನೇಕ ಸಾರಿ ಅವ ತಾರ ವೆತ್ತಿದೆನು; ಇಷ್ಟಾದರೂ ಮಾಡಬೇಕಾದ ಕಾರ್ಯಗಳೆಲ್ಲಾ ಪೂರೈಸಲಿಲ್ಲ; ಲೋಕೋದ್ಧಾರಕ್ಕೆ ಆಳುವಾರರ ಪ್ರಬಂಧಗಳು ಬಹಳ ಪ್ರಯೋಜನಕರವಾಗಿರು ವುವು; ಆದುದರಿಂದ ಅವುಗಳು ಪುನಃ ನಷ್ಟವಾಗದಂತೆ ನೋಡಿಕೊಳ್ಳಬೇಕಾಗಿ ರುವುದು. ಹೀಗೆ ಸ್ವಾಮಿಯು ಪರ್ಯಾಲೋಚಿಸಿ, ಆ ಪ್ರಬಂಧಗಳನ್ನು ಗಾನರೂ ಪವಾಗಿ ರಚಿಸಿ ಸುಜ್ಞಾನವನ್ನು ಜನರಲ್ಲಿ ಪ್ರಚಾರಪಡಿಸೆಂದು ನಾಥಮುನಿಗೆ ಅಪ್ಪಣೆ ಮಾಡಿದನು.

ಸ್ವಾಮಿಯ ಈ ಅಪ್ಪಣೆಯನ್ನು ಶಿರಸಾವಹಿಸಿದವನಾಗಿ ನಾಥಮುನಿಯು ತನ್ನ ಣ್ಣನ ಮಕ್ಕಳಾದಕೀಳೈಯಹಕರುವಾನ್ ಮತ್ತು ಮೇಲೈಯಹಕರುವಾನ್ ಎಂ ಬುವರ ಸಹಾಯದಿಂದ ಆ ಪ್ರಬಂಧಗಳನ್ನು ದೇವಗಾನರೂಪಕ್ಕೆ ತಂದನು. ಅವುಗ ಳೀಗ ವೇದಗಳಂತೆ ಉದಾತ್ತಾನುದಾತ್ತಸ್ವರಿತಯುಕ್ತಗಳಾಗಿ ದಕ್ಷಿಣದೇಶದಲ್ಲಿ ವಿಶೇಷವಾಗಿ ಪ್ರಚಾರಗೊಂಡಿರುವುವು. ನಾಥಮುನಿಯು ಹೀಗೆ ಪ್ರಬಂಧಗಳನ್ನು ರಚಿಸಿ ರಾಜಗೋಪಾಲಸ್ವಾಮಿಯ ಸೇವೆಯನ್ನು ಮಾಡುತ್ತಾ ಸಹ ಶ್ರೀವೈಷ್ಣವರಿಗೆ ತತ್ತ್ವೋಪದೇಶವನ್ನು ಮಾಡುತ್ತಾ ಇರುತ್ತಿರಲು, ಗಂಗಾಯಿಕೊಂಡ ಭೋಜಪುರ ದಲ್ಲಿ ಚೋಳರಾಜನು ರಾಜ್ಯಭಾರವನ್ನು ಮಾಡಿಕೊಂಡಿದ್ದನು.

ಒಂದಾನೊಂದುದಿವಸ ಆ ರಾಜನ ಬಳಿಗೆ ಇಬ್ಬರು ಸ್ತ್ರೀಯರು ಬಂದು ಹೀಗೆ ಬಿನ್ನೈಸಿದರು:—ಮಹಾರಾಜನೆ! ನಾವು ಸಂಗೀತಗಾರರು; ಒಬ್ಬಳು ದೇವಗಾನವನ್ನೂ ಮತ್ತೊಬ್ಬಳು ಮಾನುಷಗಾನವನ್ನೂ ಹಾಡುವೆವು; ನಮ್ಮಿಬ್ಬರಲ್ಲಿ ಶ್ರೇಷ್ಠರು ಯಾರೆಂಬುದನ್ನು ಗೊತ್ತುಮಾಡಿಕೊಳ್ಳಲು ಬಂದಿರುವೆವು; ಮಹಾಸ್ವಾಮಿಯವರು ದಯಮಾಡಿ ನಮ್ಮಿಬ್ಬರನ್ನು ಪರೀಕ್ಷಿಸಿ ಗಟ್ಟಿಗರು ಯಾರೆಂಬುದನ್ನು ನಿರ್ಧರಿಸಿ ಕೊಡೋಣವಾಗಬೇಕು ಎಂಬದಾಗಿ ಪ್ರಾರ್ಥಿಸಿದರು. ರಾಜನು ಹಾಗೇಆಗಲೆಂದು ಹೇಳಿಸಭೆಯನ್ನು ಸೇರಿಸಿ ಅವರಿಬ್ಬರನ್ನೂ ಪರೀಕ್ಷಿಸಿದನು. ಮನುಷ್ಯಗಾನದವಳೇ ಗಟ್ಟಿಗಳೆಂದು ನಿರ್ಧರವಾದಿತು. ಆಗವಳಿಗೆ ರಾಜನು ವಿಶೇಷವಾದ ಬಹುಮಾನವನ್ನು ಕೊಟ್ಟು ಕಳುಹಿಸಿದನು. ದೇವಗಾನೆಯು ತಿರಸ್ಕೃತಳಾದಳು.

ಈ ರೀತಿಯಲ್ಲಿ ಅವಮಾನಿತಳಾದ ಆಕೆಯು ತನ್ನ ಮನಸ್ಸಿನಲ್ಲಿ ತಾನು ಹೀಗೆ ಪರ್ಯಾಲೋಚಿಸಿದಳು:—ಮನುಷ್ಯರಾದ ಇವರು ದೇವಗಾನದ ಸ್ವಾರಸ್ಯವನ್ನು ತಿಳಿಯರು; ಆದುದರಿಂದ ನಾನು ದೇವರುಗಳ ಸನ್ನಿಧಿಯಲ್ಲಿ ನನ್ನ ಗಾನವನ್ನು ಅರ್ಪಿಸುವೆನು. ಹೀಗೆ ನಿಶ್ಚಯಿಸಿ ಆಕೆಯು ದೇಶಸಂಚಾರಮಾಡುತ್ತಾ ಅನೇಕ ದೇವಾಲಯಗಳಿಗೆ ಹೋಗಿ ಅಲ್ಲಿ ದೇವರುಗಳ ಸಾನ್ನಿಧ್ಯದಲ್ಲಿ ತನ್ನ ಗಾನವನ್ನು ಹೇಳುತ್ತಾ ಕಡೆಗೆ ವೀರನಾರಾಯಣಪುರಕ್ಕೆ ಬಂದಳು. ಅಲ್ಲಿಮನ್ನಾರ ಕೊಯಿಲಿಗೆ ಹೋಗಿ ರಾಜಗೋಪಾಲಸ್ವಾಮಿಯ ಸನ್ನಿಧಿಯಲ್ಲಿ ನಾಥಮುನಿಯ ಮುಂದೆಯೂ ಅಲ್ಲಿ ನೆರದಿದ್ದ ಇತರ ಜನರ ಸಮಕ್ಷದಲ್ಲಿಯೂ ಗಾನವನ್ನು ಹಾಡಿದಳು. ಆ ಗಾನವನ್ನು ನಾಥಮುನಿಯು ಕೇಳಿ ಪರಮಾನಂದ ಭರಿತನಾಗಿ ನಿನ್ನ ಗಾನವು ದಿವ್ಯವಾದುದೆಂದು ಹೇಳಿ ಕೊಂಡಾಡಿ ತೀರ್ಥ ಪ್ರಸಾದಗಳನ್ನು ಕೊಟ್ಟು ಆಕೆಯನ್ನು ಕಳುಹಿಸಿದನು.

ಅಲ್ಲಿಂದ ಅವಳು ಪುನಃ ಚೋಳರಾಜನ ಬಳಿಗೆ ಬಂದು, ಮಹಾಸ್ವಾಮಿಯೆ! ನನ್ನ ದೇವಗಾನದ ಸ್ವಾರಸ್ಯವನ್ನು ತಿಳಿದವನು ಮನುಷ್ಯರಲ್ಲಿ ಒಬ್ಬನಾದರೂ ಯಿರುವನು; ಆತನು ವೀರನಾರಾಯಣ ಪುರದ ರಾಜಗೋಪಾಲಸ್ವಾಮಿಯ ಕಿಂಕರನಾದ ನಾಥಮುನಿಯೆಂದು ಹೇಳಿದಳು. ಇದನ್ನು ಕೇಳುತ್ತಲೆ ರಾಜನಿಗೆ ಆತನನ್ನು ನೋಡಬೇಕೆಂದು ಕುತೂಹಲವುಂಟಾಯಿತು. ತನ್ನ ಆಸ್ಥಾನಕ್ಕೆ ದಯಮಾಡಿಬರಬೇಕೆಂದು ನಾಥಮುನಿಗೆಹೇಳಿ ಕಳುಹಿಸಿದನು. ರಾಜಾಹ್ವಾನವನ್ನು ಕೇಳಿ ನಾಥಮುನಿಯು ತನ್ನಲ್ಲಿ ತಾನು ಹೀಗೆ ಆಲೋಚಿಸಿದನು:—ಈ ದಿವ್ಯವಾದ ಪ್ರಬಂಧವನ್ನು ಗಾನರೂಪಕ್ಕೆ ತಂದಿರುವೆನು; ಇದನ್ನು ಲೋಕದಲ್ಲಿ ಪ್ರಚಾರಪಡಿಸಲು ಇದೇ ಉತ್ತಮವಾದ

ಸಮಯ; ಆದುದರಿಂದ ನಾನು ಆಸ್ಥಾನಕ್ಕೆ ಹೋಗುವುದು ಉಚಿತವಾಗಿರುವುದು. ಹೀಗೆ ಭಾವಿಸಿ ನಾಥಮುನಿಯು ತನ್ನ ಊರಿಂದ ಹೊರಟು ರಾಜನ ಬಳಿಗೆ ಬಂದನು. ಆತನು ಬರುತ್ತಲೇ ರಾಜನು ಸಿಂಹಾಸನದಿಂದೆದ್ದು ಆತನಿಗೆ ಸನ್ಮಾನವನ್ನು ಮಾಡಿ ಯೋಗ್ಯವಾದ ಆಸನದಲ್ಲಿ ಕುಳ್ಳಿರಿಸಿದನು.

ಆಗ ನಾಥಮುನಿಯು ರಾಜನಿಗೆ ಆಶೀರ್ವಾದಗಳನ್ನು ಮಾಡಿದನು. ಅವರಿಬ್ಬರಿಗೂ ಕುಶಲ ಪ್ರಶ್ನೆಗಳ ಸಂಬಂಧವಾದ ಸಂಭಾಷಣೆಗಳು ನಡೆದವು. ಆ ಬಳಿಕ ನಾಥಮುನಿಯು ರಾಜನನ್ನು ಕುರಿತು, ಮಹಾಸ್ವಾಮಿಯವರು ತನ್ನನ್ನು ಯಾತಕ್ಕೋಸ್ಕರ ಕರೆಕಳುಹಿಸೋಣವಾಯಿತೆಂದು ಕೇಳಿದನು. ಅದಕ್ಕೆ ರಾಜನು, ಎಲೈ ಮಹಾಪುರುಷನೆ! ನೀನು ದೇವ ಮತ್ತು ಮನುಷ್ಯಗಾನಗಳ ತಾರತಮ್ಯಗಳನ್ನು ಕಂಡು ಹಿಡಿಯ ಬಲ್ಲೆಯಾ? ಎಂದು ಪ್ರಶ್ನೆಮಾಡಿದನು. ನನ್ನಿದಿರಿನಲ್ಲಿ ಗಾನವಾಗಲಿ ಎಂದು ನಾಥಮುನಿಯು ಹೇಳಿದನು. ಆಗ ಇಬ್ಬರು ಸ್ತ್ರೀಯರೂ ಪುನಃ ಗಾನ ಮಾಡಿದರು. ಅದು ಮುಗಿದ ಮೇಲೆ ನಾಥಮುನಿಯು ರಾಜನನ್ನು ಕುರಿತು ಮಹಾಸ್ವಾಮಿ! ಮನುಷ್ಯರಾದ ನೀವು ಮನುಷ್ಯಗಾನವನ್ನು ಮಾತ್ರ ತಿಳಿಯಬಲ್ಲಿರಿ; ದೇವಗಾನವನ್ನು ತಿಳಿಯಲು ದೇವರುಗಳೇ ಆಗಬೇಕು ಎಂದು ನುಡಿದನು.

ಆಗ ಧೊರೆಯು ವಿನಯದೊಡನೆ, ಮಹಾಪುರುಷನೆ! ನಾನು ಅದರ ರಹಸ್ಯವನ್ನು ತಿಳಿಯಲಪೇಕ್ಷಿಸುತ್ತೇನೆ; ಕೃಪೆಯಿಟ್ಟು ಅದನ್ನು ತಿಳಿಸುವವನಾಗು ಎಂದು ಪ್ರಾರ್ಥಿಸಲು, ನಾಥಮುನಿಯು ನಾನೂರು ತಾಳ ಭೇದಗಳನ್ನು ಆತನಿಗೆ ವಿಶದವಾಗಿ ತಿಳಿಸಿದನು. ಆಗ ರಾಜನಿಗೆ ದೇವಗಾನದ ಸ್ವಾರಸ್ಯವು ಗೊತ್ತಾಗಿ ಪರಮಾನಂದವುಂಟಾದಿತು. ಆ ಬಳಿಕ ಒಂದು ಕಂಬದ ಹತ್ತಿರ ಒಂದು ಜತೆ ತಾಳಗಳನ್ನಿಟ್ಟು ದೇವಗಾನವನ್ನು ಹಾಡಿದರು. ಆಗ ಕಂಬವು ಕರಗಲಾರಂಭಿಸಿತು. ಗಾನಮಾಡುವುದನ್ನು ಬಿಟ್ಟು ತಾಳಗಳನ್ನು ಎತ್ತಲಿಕ್ಕೆ ಪ್ರಯತ್ನಿಸಲು ಅವು ಆ ಕಂಬಕ್ಕೆ ಗಟ್ಟಿಯಾಗಿ ಅಂಟಿಕೊಂಡಿದ್ದದುರಿಂದ ಮೇಲಕ್ಕೆತ್ತಲಾಗಲಿಲ್ಲ. ಪುನಃ ಗಾನಮಾಡಲು ತಾಳಗಳನ್ನು ಸುಲಭವಾಗಿ ಎತ್ತಲು ಸಾಧ್ಯವಾಯಿತು. ಇದನ್ನೆಲ್ಲಾ ಕಂಡು ರಾಜನಿಗೆ ಪರಮಾಶ್ಚರ್ಯವೂ ಸಂತೋಷವೂ ಉಂಟಾಗಿ ನಾಥಮುನಿಗೆ ವಿಶೇಷವಾಗಿ ಬಹುಮಾನವನ್ನು ಕೊಡುವುದಕ್ಕೆ ಪ್ರಯತ್ನಿಸಿದನು. ಸಮಸ್ತವಾದ ಚಕ್ರಾಧಿಪತ್ಯವನ್ನು ಕೊಟ್ಟಾಗ್ಯೂ ಒಲ್ಲದ ವಿರಕ್ತನಾದ ಆ ನಾಥಮುನಿಯು ಬಹುಮಾನವನ್ನು ತೆಗೆದುಕೊಳ್ಳದೆ ರಾಜನಿಗೆ ಆಶೀರ್ವಾದವನ್ನು ಮಾಡಿ ತಿರುಗಿ ವೀರನಾರಾಯಣ ಪುರಕ್ಕೆ ಹೊರಟು ಹೋದನು. (ಸಶೇಷ.) S. V.

———0———

ಗಣಿತ.

(ಕಳೆದ ಸಂಚಿಕೆಯ ೧೫೭ ನೇ ಪುಟದ ಶೇಷ.)

(7) ಒಬ್ಬನಲ್ಲಿ 1 ಡಬ್ಬಾ ಸೀಮೆಎಣ್ಣೆ ಇತ್ತು. ಅದರಲ್ಲಿ $\frac{1}{8}$ ಭಾಗವನ್ನು ಮನೆಗೂ ಉಳಿದಿದ್ದರ $\frac{2}{7}$ ಭಾಗವನ್ನು ಮಾರಿಕೆಗೂ, ತರುವಾಯ ನಿಂತದ್ದರ $\frac{2}{5}$ ಭಾಗವನ್ನು ಎರವಾಗಿಯೂ ಉಪಯೋಗಿಸಿದನು. ನಂತರ ಅದರಲ್ಲಿ 9 ಸೀಸಾ ಎಣ್ಣೆ ಇದ್ದರೆ ಒಟ್ಟು ಆ ಡಬ್ಬಾದಲ್ಲಿದ್ದ ಸೀಸಾ ಎಷ್ಟು? ಯಾವಯಾವರೀತಿ ಎಷ್ಟೆಷ್ಟು ಸೀಸಾ ವಿಲೇವಾರಿಮಾಡಿದನು. ಉ. 24 ಸೀ.

(8) ಒಂದುಸಂಖ್ಯೆಯು 428ನ್ನು ಭಾಗಿಸಿದಾಗ 5ಶೇಷವನ್ನೂ 256 ನ್ನು ಭಾಗಿಸಿದಾಗ 4 ಶೇಷವನ್ನೂ ಕೊಡುವುದು. ಅದು ಯಾವುದು? ಉ. 9

(9) A ಯು 1ಕೆಲಸವನ್ನು 8ದಿನಗಳಲ್ಲಿ ಮಾಡುವನು. ಆ Aಯು5ದಿನಗಳವರೆಗೂ ಮಾಡಿಬಿಟ್ಟದನ್ನು B ಯು Cಯೊಡನೆಸೇರಿ 4ದಿನಗಳಲ್ಲಿ ಮುಗಿಯಿಸುವನು. B ಯು C ಯ $1\frac{1}{4}$ ರಷ್ಟು ಬುದ್ಧಿವಂತನಾದರೆ 1 ಕೆಲಸವನ್ನು B. ಒಬ್ಬನೇ ಎಷ್ಟು ದಿವಸಗಳಲ್ಲಿ ಮಾಡುವನು?

(10) A ಯು $\frac{3}{8}$ ಕೆಲಸವನ್ನು 3 ಗಂಟೆಯಲ್ಲಿ ಮಾಡುತ್ತಾನೆ. ಉಳಿದ ಕೆಲಸವನ್ನು B ಯು $2\frac{2}{5}$ ಗಂಟೆಯಲ್ಲಿ ಮಾಡುತ್ತಾನೆ– ಈ ಇಬ್ಬರೂ ಸೇರಿ ಒಂದು ಕೆಲಸವನ್ನು ಎಷ್ಟು ಹೊತ್ತಿನಲ್ಲಿ ಮಾಡುತ್ತಾರೆ?

(11) A ಯು 8 ದಿನಗಳಲ್ಲಿ 1ಕೆಲಸವನ್ನೂ B ಯು 6 ದಿನಗಳಲ್ಲಿ 1 ಕೆಲಸವನ್ನೂ ಮಾಡಬಲ್ಲರು. ಇವರಿಬ್ಬರೂ 5 ದಿನಗಳವರೆಗೂ ಕೆಲಸಮಾಡಿ 70 ಪಾ. ಗಳನ್ನು ಸಂಪಾದಿಸಿದರು. ಅದರಲ್ಲಿ A ಗೆಷ್ಟು? B ಗೆಷ್ಟು ಬರಬೇಕು.

(12) $\frac{13}{120}$, $\frac{151}{376}$, $\frac{31}{96}$, ಇವುಗಳ ಮಹತ್ತಮಸಾಮಾನ್ಯ ಮತ್ತು ಲಘುತ್ತಮ ಸಾಮಾನ್ಯ ಅಪವರ್ತನವೆಷ್ಟು?

(13) 4ಆ 6ಪೈ+7ಆ 8ಪೈ ರ 6ಆ 6ಪೈ–ಗಳನ್ನು 9ಆ+10ಆ 6ಪೈ+3ಆ 8ಪೈ ಇಂದ ಭಾಗಿಸಬೇಕು. ನಂತರ 3ರೂ. 12 ಆ 7 ಪೈ ನಿಂದ ಗುಣಿಸಿ. ಈ ಲೆಕ್ಕವು ಒಂದು ಸಂಕರ ಭಿನ್ನರಾಶಿಗೆ ಸಮವೆಂದು ತೋರಿಸಿ ಇದರ ಉತ್ತರವನ್ನು ರೂ. ಆ. ಪೈ. ನಲ್ಲಿ ಭಿನ್ನರಾಶಿಯ ನಮೂನೆಯಂತೆ ಮಾಡಿ ಬರೆಯಿರಿ.

(14) 1 ಮಣ ಮೆಣಸಿನಕಾಯಿಗೆ 2 ರೂಪಾಯಿ 12 ಆಣೆ ಮೇರೆ 15 ಮಣ ಕಾಯಿಯನ್ನು ತೆಗೆದು ಒಟ್ಟನಲ್ಲಿ 5 ರೂಪಾಯಿ ಲಾಭವನ್ನು ಪಡೆಯಬೇಕಾದರೆ ಮಣ 1ಕ್ಕೆ ಹೇಗೆ ಮಾರಬೇಕು? ಉ. 3ರೂ. 1ಆ. 4ಪೈ.

(15) ಮಣ 1ಕ್ಕೆ 2ರೂ 8ಆ ಮೇರೆ 10 ಮಣ ಮಣಸಿನಕಾಯಿಯನ್ನೂ, ಮಣ 1ಕ್ಕೆ 3ರೂ 2ಆ ಮೇರೆ 12 ಮಣವನ್ನೂ ತೆಗೆದು 2ನ್ನೂ ಸೇರಿಸಿ ಮಣ 1ಕ್ಕೆ 2ರೂ 12ಆ. ಮೇರೆ ಮಾರಿದರೆ ಎಷ್ಟು ನಷ್ಟವಾಗುತ್ತದೆ? ಸೇಕಡಾ ನಷ್ಟವೆಷ್ಟು? ಉ. $2\frac{14}{33}$%.

(16) ಪೇಟೆಯಧಾರಣೆ ರೂಪಾಯಿ 1ಕ್ಕೆ ಅಕ್ಕಿ 8 ಸೇರು. ತೊಗರಿಯಬೇಳೆ 6 ಸೇರು. ಉಪ್ಪು 12 ಸೇರು. ಕೊತ್ತುಂಬರಿ ಬೀಜ 12 ಸೇರು. ಬೆಲ್ಲ 1 ಸೇರಿಗೆ 7ಪೈ. ತೆಂಗಿನಕಾಯಿ 100 ಕ್ಕೆ 3ರೂ 2ಆ 5ಪೈ. ಇರುವಾಗ 1 ಮನೆಗೆ 1 ತಿಂಗಳಿಗೆ 25 ಸೇರು ಅಕ್ಕಿ. 16 ಸೇರು ಬೇಳೆ. 4 ಸೇರು ಉಪ್ಪು. ಕೊತ್ತುಂಬರಿ ಬೀಜ 5ಸೇರು. ಬೆಲ್ಲ 10 ಸೇರು. ತೆಂಗಿನಕಾಯಿ 20. ಇತರ ವಿಧವಾದ ಖರ್ಚು ರೂಪಾಯಿ 2—4—4 ಪೈಗಳಾದರೆ ಆ ಮನೆಗೆ ಒಟ್ಟು ಖರ್ಚು ಎಷ್ಟಾಗುವುದು? ಇದನ್ನು ಬಿಲ್‌ಫಾರಮ್ಮಿನ ಮೂಲಕ ಮಾಡಿ ಹೇಳಿ?

(17) ಪೇಟೆಯಧಾರಣೆಯು ರೂಪಾಯಿ 1ಕ್ಕೆ 12ಸೇರು ರಾಗಿ. 16ಸೇರು ಜೋಳ ಈ ರೀತಿ ಯಿರುವಾಗ 1 ಮನೆಗೆ ಖರ್ಚು ರಾಗಿಯಿಂದ 6ರೂ. 8ಆ. ಜೋಳದಿಂದ 4ರೂ. 2ಆ. ಆಗುವುದು. ಧಾರಣೆಯು ರೂ. 1ಕ್ಕೆ 16 ಸೇರು ರಾಗಿ. 12 ಸೇರು ಜೋಳ ಆದಾಗ ಎಷ್ಟು ಆಗುವುದು?

(18) ಸೇರು 1ಕ್ಕೆ 1ಆ. 6ಪೈ ನಂತೆ 13 ಸೇರು ಉದ್ದಿಗೂ, ಪಲ್ಲ 1ಕ್ಕೆ 9ರೂ. 3ಆ ಪ್ರಕಾರ 4 ಪಲ್ಲ 25 ಸೇರು ಅಕ್ಕಿಗೂ, ಮಣ 1ಕ್ಕೆ 3ರೂ. 12ಆ. ಮೇರೆಗೆ 3 ಮಣ 3 ಧಡಿಯ ಸಕ್ಕರೆಗೂ, ಪಲ್ಲ 1ಕ್ಕೆ 18ರೂ. 8ಆ. ಮೇರೆ 3 ಪಲ್ಲ 75 ಸೇರು ಗೋದಿಗೂ ಎಷ್ಟಾಗುವುದು. (ಬಿಲ್‌ಫಾರಮ್ಮಿನ ಮೂಲಕ ಮಾಡಿ).

(19) ಒಂದು ಪದಾರ್ಥಕ್ಕೆ £ 2—5 s—10 d ಮೇರೆ $450\frac{1}{4}$ ಪದಾರ್ಥಕ್ಕೆ ಎಷ್ಟು? ರೂಢಿಗಣಿತದ ರೀತಿಯಿಂದ ಮಾಡಿ.

(20) ಒಬ್ಬ ವ್ಯಾಪಾರಿಯು ಭಾಗ 1ಕ್ಕೆ 450ರೂ. 10ಆ. 10ಪೈ ನಂತೆ 11 ಭಾಗಗಳನ್ನೇರ್ಪಡಿಸಿ ಪ್ರತಿಭಾಗದ ಹಣಕ್ಕೂ ಸೇಕಡಾ 11 ರಂತೆ ಬಡ್ಡಿಯನ್ನು

ಕೊಟ್ಟು ಒಟ್ಟು ಭಾಗಗಳನ್ನೆಲ್ಲಾ ಸೇರಿಸಿ 1 ಕಾರ್ಯದಲ್ಲಿ ಹಾಕಿ ಸೇ $15\frac{3}{4}$ ರಂತೆ ಲಾಭವನ್ನು ಪಡೆಯುತ್ತಾನೆ. 3 ಭಾಗದ ಹಣವು ಆತನದೇ ಆಗಿದ್ದರೆ ಉಳಿದ ಭಾಗಗಳ ಲಾಭಕ್ಕೂ ಇವನ ಒಟ್ಟು ಲಾಭಕ್ಕೂ ಆಗುವ ವ್ಯತ್ಯಾಸವೆಷ್ಟು? ಯಾರದು ಎಷ್ಟು ಹೆಚ್ಚು ?

(21) A ಗೆ B ಗಿಂತಲೂ 123 ರೂ. 4 ಆ. ಹೆಚ್ಚು ಬರುವಂತೆಯೂ, C. ಗಿಂತಲೂ 219 ರೂ. 15 ಆ. ಕಮ್ಮಿ ಬರುವಂತೆಯೂ, 2168 ರೂ. 15 ಆ. ಗಳನ್ನು A. B. C ಗಳಿಗೆ ಹಂಚಿರಿ. ಉ. C = 910 ರೂ. 11 ಆ.

(22) ಬೆಕ್ಕು 12 ಮಿನೀಟುಗಳಲ್ಲಿ ಹೋಗುವ ದೂರವನ್ನು ಇಲಿಯು 20 ಮಿನೀಟು ಗಳಲ್ಲಿ ಹೋಗುವುದು. ಇಲಿಯು 1 ಗಂಟೆಗೆ 2 ಮೈಲಿ ಹೋದರೆ ಬೆಕ್ಕು ಎಷ್ಟು ನಡೆಯುವುದು ?

(23) ಒಬ್ಬನು 20 ಜನಗಳನ್ನು 1 ಮನೆಯನ್ನು ಕಟ್ಟುವುದಕ್ಕೆಂದು 42 ದಿನಗಳ ವರೆಗೆ ಅವಧಿಯನ್ನು ಗೊತ್ತುಮಾಡಿದನು. ನಂತರ 18 ದಿನಗಳಾದಮೇಲೆ ಕೆಲಸವನ್ನು ನೋಡಲಾಗಿ $\frac{5}{8}\frac{3}{8}$ ಭಾಗ ಮಾತ್ರ ಆಗಿತ್ತು. ಉಳಿದದಿನಗಳಲ್ಲಿ ಮಿಕ್ಕ ಕೆಲಸವನ್ನು ಮಾಡಲು ಎಷ್ಟು ಜನಗಳನ್ನು ಗೊತ್ತುಮಾಡಬೇಕು? ಉ. 25 ಜನ.

(24) ಒಬ್ಬನು 1 ಕೆಲಸವನ್ನು 40 ದಿನಗಳಲ್ಲಿ ಮಾಡಬೇಕೆಂದು 21 ಜನಗಳನ್ನು ನಿಯಮಿಸಿದನು. 12 ದಿನಗಳಾದನಂತರ ಕೆಲಸವನ್ನು ನೋಡುವಲ್ಲಿ $\frac{3}{4}$ ಭಾಗದ ಕೆಲಸ ಬಾಕಿ ಯಿತ್ತು. ಗೊತ್ತಾದ ದಿನಗಳಲ್ಲಿಯೇ ಕೆಲಸವನ್ನು ಮುಗಿಸಲು ಹೊಸದಾಗಿ ಎಷ್ಟು ಜನರನ್ನು ನಿಯಮಿಸಬೇಕು? ಉ. 6 ಜನ.

(25) 26 ಜನಗಳು ದಿನ 1ಕ್ಕೆ 4 ಘಂಟೆಹೊತ್ತು ಕೆಲಸಮಾಡಿ 1 ಕೆಲಸವನ್ನು 13 ದಿವಸಗಳಲ್ಲಿ ಪೂರೈಸಿದರೆ ದಿನ 1ಕ್ಕೆ 3 ಘಂಟೆ ಕೆಲಸಮಾಡುತ್ತಾ $1\frac{1}{3}$ ಕೆಲಸವನ್ನು 39 ಜನಗಳು ಎಷ್ಟು ದಿನಗಳಲ್ಲಿ ಮಾಡಿ ಪೂರೈಸುವರು ?

(26) £1567—15—11 ನ್ನು 18 ರಿಂದ ಒಂದೇ ಸಾಲಿನಲ್ಲಿ ಭಾಗಿಸಿರಿ?

ರೀತಿ:—18 | 1567—15—11

ಬಿ. ಅನಂತಾಚಾರ್.

ನೀತಿ ವಚನಮಾಲೆ.

ಕಂ|| ಧರೆಯಲಿ ಸದ್ಧರ್ಮವನು |
ದ್ಧರಿಸುವಬಿರುದೊಂದನಾಂತ ಸಿರಿರಾಮನವೋಲ್ ||
ನರಪಮಣಿಕೃಷ್ಣರಾಜಂ |
ಪೊರೆಯಲಿ ಕರ್ಣಾಟಮಹಿಯನಾಚಂದ್ರಾರ್ಕಂ ||೧||
ಕಿರಿಯರುಮರಿವಾತೆರದಿಂ |
ದೊರೆಯುವವೆನ್ನೈ ಕೆಲವು ಸರಸಕಂದಗಳಿಂದಂ ||
ಹಿರಿಯರ್ ಪೇಳ್ದೊಳ್ನುಡಿಗಳ |
ಪರಿಯಂ ತಿಳಿದಿದನೆ ಮಕ್ಕಳಾಚರಿಸಲಿ ತಾಂ ||೨||
ಬೆಳಗಾಗಲ್ ವೊದಲೇಳು |
ತ್ತಲಸತೆಯಂಬಿಟ್ಟು ದೇವನಂ ಸ್ಮರಿಸುತ್ತುಂ ||
ಘಳಿಲನೆ ನಿನ್ನಯ ಮನೆಯೊ |
ಳ್ಗೆಲಸಗಳಂ ಮಾಡಿ ಪಾಠವಂ ಪಠಿಸು ಸುತಾ ||೩||
ನೀರಂ ಪಾತ್ರೆಯೊಳಾನುತೆ |
ಸೇರ್ದೈ ಬಯಲೆಡೆಯನಲ್ಲಿ ಮಲಬಾಧೆಗಳಂ ||
ತೀರಿಸಿ ಕೊಂಡಬಳಿಕ್ಕಾ |
ನೀರಿಂದಂ ಶುದ್ಧನೆನಿಸು ನೀಂ ಸುಕುಮಾರ ||೪||
ಕೊಳೆಯಿಲ್ಲದಮಣ್ಣಿಂದೊಡ |
ನಲಸದೆ ಕೈಕಾಲುಗಳುಮನಾಪಾತ್ರೆಯುಮಂ ||
ತೊಳೆದು ಬಳಿಕ್ಕಾಪಾತ್ರೆಯೊ |
ಳೆಳೆಯಾ ! ನೀರಾಂತು ನಿನ್ನ ಮುಖವನು ತೊಳೆಯೈ ||೫||
ಕೆರೆಬಾವಿಗಳಂ ಕೊಳವಂ |
ತೊರೆಯಂ ನೀಂ ಸೇರುತವುಗಳುದಕದೊಳೆಂದುಂ ||
ತರಳನೆ ನೀನುಗುಳದಿರೈ |
ಗರುವದೆ ಮಣ್ಗುಂಡುಕಸಗಳಂ ಚೆಲ್ಲದಿರೈ ||೬||
ಪೊರೆವಳು ಪಾಲಂ ಕುಡುತ |
ಕ್ಕರೆಯಿಂ ತಾನಿರುವ ಜಾಗದೊಳೆ ತಾಯ್ ನಿನ್ನಂ ||
ಕೆರೆ ತೊರೆ ಮುಂತವು ನಿನ್ನಂ |
ಪೊರೆಯುವವೆಲ್ಲೆಡೆಯೊಳಮೃತವನೆ ನೀಡುತ್ತುಂ ||೭||
ಹಿರಿಯರು ತಿಳಿಸಿಹತೆರದಿಂ |
ಧರಿಸೈ ಪಣೆಯಲ್ಲಿ ತಿಲಕವಂ ನೀಂ ಬಳಿಕಂ ||

ಗುರುಜನಗಳೊಪ್ಪುವಂದದಿ ।
ತರಳನೆ ನೀಂ ಮಾಡು ಮುಂದಣೊಳ್ಳಜ್ಜಗಳಂ ||೮||
ನಂಟಂ ತಾಯಿಂದುತ್ತಮು ।
ನಂಟೇಂ ಪ್ರಿಯಮಿತ್ರನಿರುವನೇಂ ತಾಯಿಂದಂ ||
ಉಂಟೇನದರಿಂದಂನಿ ।
ಷ್ಣಂಟಂಗಗಳಿಂದ ಮಗುವೆ ತಾಯ್ಗಭಿನಮಿಸೈ ||೯||
ಕಂದನೆ ನಿನ್ನಯ ತಾಯುಂ ।
ವಂದಿಪುದೈ ಮೊದಲು ಭಕ್ತಿಯಿಂದಂ ಬಳಿಕಂ ||
ತಂದೆಯನಾಬಳಿಕಂ ನೀಂ ।
ವಂದಿಪುದೈ ಮಿಕ್ಕಹಿರಿಯುರಂ ನಯದಿಂದಂ ||೧೦||
ಬೇಸರವಿರದಾಗಳೆ ನೀ ।
ನಾಸಕ್ತಿಯನಾಂತು ಕಲಿವುದೈ ಪಾಠಗಳಂ ||
ಬೇಸರ ಕೆಡೆಯುಂ ಕೊಟ್ಟೊಡೆ ।
ಮಾಸುವೆ ಮಡಿಮಾಡದುಟ್ಟ ಪೊಸಪಟ್ಟೆಯವೋಲ್ ||೧೧||
ತರಳನೆ ಕಾಲವ ಮೀರದೆ ।
ಬರುಕುಂ ನೀಂ ಪಾಠಶಾಲೆಗೊಡನಾಡಿಗಳೊಳ್ ||
ಬೆರೆದಲ್ಲಿ ದೇವರಂ ಮೇಣ್ ।
ಗುರುಗಳುಮಂ ಬಕುತಿಯಿಂದೆ ವಂದಿಸಿ ಪೊಗಳ್ದೈ ||೧೨||
ಮುದದೆ ತಿಳಿ ಗುರುಗಳಿಂ ಪ ।
ರ್ಗದೊಳಿರುತಂ ನೀನು ತಿಳಿಯದಿರುವೋದುಗಳಂ ||
ಸದಯರವರ್ ನಿನ್ನಂ ಕಳು ।
ಹಿದ ಪೊಳ್ತೊಳ್ ಪಾಠಶಾಲೆಯಿಂ ಮನೆಗೈದೈ ||೧೩||
ಸಂಜೆಯೊಳಾನಂದಿಸುತಂ ।
ಪಂಜರದಿಂ ಬಂದ ಪಕ್ಕಿಯಂತೋಡಾಡೈ ||
ಅಂಜುತೆ ಜತೆಯವರೊಳ್ ನೀಂ ।
ಮುಂಜಾಗ್ರತೆಯಿಂದ ತೋರು ಮೆಯ್ಲಾಘವವಂ ||೧೪||
ಬಿಡು ಮತ್ಸರವಂ ಮಿತ್ರರೊ ।
ಳಿಡು ಮರ್ಯಾದೆಯನು ಮಗುವೆ ನೀನೆಲ್ಲರೊಳಂ ||
ಬಿಡು ಕೆಟ್ಟವರ್ಗಳ ಜತೆಯುಂ ।
ಬಿಡಬೇಡೆಂದೆಂದುಮೊಳ್ಪಿದರ್ ಸೇರ್ದೆಡೆಯಂ ||೧೫||
ಎಂದುಂ ನಿನ್ನಯ ಹಿರಿಯರ್ ।
ಚಂದದಿನೊಂದೊಂದು ಬೆಳಗುವೊಳ್ಳಜ್ಜಮುಮಂ ||
ಸಂದಾಚರಿಸುವತೆರದಿಂ ।
ದೆಂದುಮುದಂ ಕಾಲಕಾಲಕಾಗಿಸುಮಗುವೇ ||೧೬||

ಸವಿಯಾಂತಪಣ್ಗಳೀವುಂ |
ತವುಗಳನೆಂದೆಂದು ಮೋರ್ವನೇ ತಿನ್ನದಿರ್ಕೈ ||
ತವಕದಿ ಬೆರೆದಿಷ್ಟರುಗಳ್ಳೊ |
ಳವುಗಳನಾನಂದದಿಂದ ಭುಂಜಿಸು ಕುವರಾ ||೧೭||

ಬಡವನು ನಾನೆಲ್ಲರುಮಿದೊ |
ಕಡೆಗಾಣುವರೆನ್ನನೆಂದು ದುಃಖಿಸಬೇಡೈ ||
ಬಡವಂ ಮೇಣ್ ಧನಿಕನುಮೊ |
ಳ್ಪಡೆ ನುಡಿಗಳೆನಿಪ್ಪರನ್ನದಿಂದಲೆ ಮಾನ್ಯರ್ ||೧೮||

ಜ್ಞಾನಂ ಪರೋಪಕಾರಂ |
ನಾನಾದೇಶಂಗಳಲ್ಲಿ ಮೇಣ್ ಸಂಚಾರಂ ||
ಮಾನಿತ ಬುಧರೊಳ್ ಕೂಟಮು |
ಮಾನಂದಿಪ್ಪವಿತ್ತು ಮಾನವಂ ನಿನಗೆ ಸುತಾ ||೧೯||

ಮಗುವೇ ನೀನೋದುವಹೊ |
ತ್ತಗೆಯೋ ಭೂಗೋಳಮಿದರೊಳಿಹ ಪುರುಳುಗಳಂ ||
ಬಗೆಬಗೆದು ಪರೀಕ್ಷಿಸಲಾ |
ವಗಮುಂ ಕ್ರಮದಿಂದೆ ಪಂಡಿತಾಗ್ರಣಿಯೆನಿಪೈ ||೨೦||

ನೆಲದೊಳ್ ಕಾಣುವ ಗಿಡುಮರ |
ಗಳುಮಂ ಮೇಣವುಗಳೆಲೆಗಳಂ ಕುಸುಮಗಳಂ ||
ಫಲಗಳ ಬಗೆಯುಂ ಬೇರ್ಗಳ |
ನೆಳೆಯನೆ ನೀಂ ಬಯಲಿಗೈದಿ ಪರಿಕಿಸು ನಯದಿಂ ||೨೧||

ಮರಗಳೊಳಂ ಮಣ್ಣಿನೊಳಂ |
ಮರಳಿನೊಳಂ ನೀರಿನಲ್ಲುಮಿಹ ಪುರುಳುಗಳಂ ||
ನಿರುಕಿಸು ಪರಿಕಿಸು ನಯದಿಂ |
ತರಳನೆ ನೀನದರಿ ನಾಂಪೆಯ್ಸೆ ಸಮ್ಮುದಮುಂ ||೨೨||

ಒಂದೊಂದುಂ ವಸ್ತುವನಾ |
ನಂದದಿಂ ನೀಂ ಪರಿಕಿಸುಸುತ ಬಿಡದಾವುದುಮಂ ||
ಸಂದೆಯಮಿಲ್ಲದೆ ನಿನಗಿದ |
ರಿಂದಂ ತಿಳಿಯುವುದು ಗುರುಗಳರುಪುವುದೆಲ್ಲಂ ||೨೩||

ಜೀವಿಗಳಂ ನೀ ಪರಿಕಿಸು |
ವಾವೇಳೆಯೊಳವುಗಳನ್ನು ನೋಯಿಸಬೇಡೈ ||
ನೋವಿಂ ನೀನಳುವಂತಾ |
ಜೀವಿಗಳು ಮಳಲ್ವವವನು ನಿನ್ನವೊಲರಿಯೈ ||೨೪||

ಎಂ. ಕೃಷ್ಣಪ್ಪ.

ಭೂಗೋಳ.

1. (a) ಭೂಗೋಳಶಾಸ್ತ್ರವೆಂದು ಯಾವುದಕ್ಕೆ ಹೆಸರು.

(b) ಈ ಶಾಸ್ತ್ರದಲ್ಲಿ ಯಾವಯಾವ ವಿಷಯಗಳು ತಿಳಿಸಲ್ಪಡುತ್ತಿವೆ?

2. ಜಲಾನಯನಭೂಮಿ, ದುರ್ಗಗಳು, ಕಡಲ್ಗಾಲುವೆ, ನಿಮ್ನಪ್ರಾಂತಗಳು, ಪ್ರಸ್ಥಭೂಮಿ, ಯಮಳನದಿಗಳು, ಬೆಟ್ಟ, ತಪ್ಪಲು ಗಿರಿ, ಎಂದರೆ ಏನು?

ಇವುಗಳಿಗೆ ಎರಡೆರಡು ಉದಾಹರಣೆಗಳನ್ನು ಕೊಡಿ.

3. ದ್ವೀಪವೆಂದರೇನು?

ನಾವು ವಾಸಿಸುವ ಹಿಂದೂದೇಶವು ಪೂರ್ವದಲ್ಲಿ ಎಂತಹ ದ್ವೀಪವೆಂದು ಪ್ರಖ್ಯಾತಿಯನ್ನು ವಾಡಿಕೆಯಾಗಿ ಹೊಂದಿತ್ತು?

ದ್ವೀಪವೆಂಬ ಅರ್ಥವಿವರಣೆಯು ಯಾವಯಾವ ಜಲಾಶಯಗಳಿಂದ ಸಾರ್ಥಕವಾಗಿತ್ತು?

4. (1) ಕಂಬಳಿ, ಶಾಲು, ವೀಣೆಯ ತಂತಿಗಳು, ಚಿನ್ನ, ಗಂಧಕ, ಕಬ್ಬಿಣ, ಕಲ್ಲಿದ್ದಲು ಇಂಡಿಯಾದೇಶದಲ್ಲಿ ಎಲ್ಲೆಲ್ಲಿ ಇವು ಸಿಕ್ಕುತ್ತವೆ?

4. (2) ಗೋಧಿ, ಹತ್ತಿ, ನೀಲಿ, ಬತ್ತ, ರಾಗಿ,ಜೋಳ, ಗೋಂದು, ಏಲಕ್ಕಿ, ಮೆಣಸಿನಕಾಳು, ಲವಂಗ, ತೆಂಗಿನಕಾಯಿ, ಜಾಯಿಕಾಯಿ—ಇವು ಇಂಡಿಯಾದ ಯಾವಯಾವ ದೇಶಗಳಲ್ಲಿ ಹೆಚ್ಚಾಗಿ ಬೆಳೆಯುವುವು.

5. (1) "ಹಿಮವಾನ್ನಿಷಧೋ ವಿಂಧ್ಯೋ ಮಾಲ್ಯವಾನ್ ಪಾರಿಯಾತ್ರಕಃ॥
ಗಂಧಮಾಧನಮನ್ಯೇಚ ಹೇಮಕೂಟಾದಯೋ ನಗಾಃ ॥೧॥
ಈ ಶ್ಲೋಕದಲ್ಲಿರುವ ಪರ್ವತಗಳ ಸ್ಥಾನಗಳನ್ನು ಹೇಳಿ?

(2) ಇಂಡಿಯಾದೇಶದಲ್ಲಿ ಈ ಪರ್ವತಗಳಲ್ಲಿ ಎಷ್ಟುಪರ್ವತಗಳು ಈಗ ಈ ಹೆಸರಿನಿಂದ ಪ್ರಸಿದ್ಧಿಯಾಗಿಲ್ಲ.

(3) ಭಾಗೀರಥೀ, ನರ್ಮದಾ, ಶರಾವತಿ, ಕಾವೇರಿ, ಗಂಗಾ, ಸಿಂಧು, ಕೃಷ್ಣಾ, ಗೋದಾವರಿ, ಈ ಪುಣ್ಯನದಿಗಳು ಯಾವಯಾವ ದೇಶಗಳ ಮೇಲೆ ಹರಿಯುತ್ತಿವೆ. ಇವುಗಳ ತೀರಪಟ್ಟಣಗಳನ್ನು ಬರೆದು ಉದ್ದದಳತೆಯ ಲೆಕ್ಕದಿಂದ ಒಂದರ ಕೆಳಗೆ ಒಂದು ಬರುವಂತೆ ತಾರತಮ್ಯವನ್ನು ತಿಳಿಸಿರಿ.

ಮೈಸೂರು ದೇಶೀಯಪರೀಕ್ಷೆ—1909.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೧ ನೇಯ ಭಾಗಕ್ಕೆ ಬೆಂಗಳೂರು ಗೌ॥ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ಸಿ. ಕೃಷ್ಣರಾವ್ ಬಿ. ಎ. ಯವರು. ೨ ನೇಯ ಭಾಗಕ್ಕೆ ಮೈಸೂರು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ರೆವರೆಂಡ್ ಆರ್. ಡಬ್ಲಿಯು ಜೂಟ್ ಯವರು.
ಇಂಗ್ಲೀಷು ಬರವಣಿಗೆ ಮತ್ತು ಉಕ್ತಲೇಖನ.	ತುಮಕೂರು ಗೌ॥ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ವಿ. ಸುಬ್ರಹ್ಮಣ್ಯೈಯ್ಯರ್ ಬಿ. ಎ. ಯವರು.
ಇಂಗ್ಲೀಷು ವಾಕ್ಯರಚನೆ (ಲೋವರ್ ಸೆಕೆಂಡರಿ ಪರೀಕ್ಷೆಗೆ.)	ಬೆಂಗಳೂರು ಗೌ॥ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ಸಿ. ಕೃಷ್ಣರಾವ್ ಬಿ. ಎ. ಯವರು.
ಭಾಷಾಂತರ (ಲೋವರ್ ಸೆಕೆಂಡರಿಪರೀಕ್ಷೆಗೆ)	ಬೆಂಗಳೂರು ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಯಸ್. ಟಿ. ರಾಘವಾಚಾರ್ ಬಿ. ಎ. ಯವರು.
ಗಣಿತ—ಲೋವರ್ ಸೆಕಂಡರಿ ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಮಾತ್ರ.	ಶಿವಮೊಗ್ಗಾ ಗೌ॥ ಹೈಸ್ಕೂಲ್ ಹೆಡ್ಮಾಸ್ಟರಾದ ಮೆ॥ ಎಂ. ಕೃಷ್ಣಯ್ಯಂಗಾರ್ ಬಿ. ಎ. ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಗಣಿತ—ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ. (ಇಂಗ್ಲೀಷ್ ವಿದ್ಯಾರ್ಥಿಗಳು ಹೊರತು.)	೧ ನೇ ಭಾಗಕ್ಕೆ ಶಿವಮೊಗ್ಗಾ ಗ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮ॥ ಎ. ವೆಂಕಣ್ಣ, ಬಿ. ಎ., ಎಲ್. ಟಿ. ಯವರು. ೨ ನೇ ಭಾಗಕ್ಕೆ ಚಿತ್ರದುರ್ಗದ ಗ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮ॥ ಎಂ. ಶಿವರಾಮಕೃಷ್ಣಯ್ಯರ್, ಬಿ. ಎ. ಯವರು.
ಅಪ್ಪರ್ ಸೆಕೆಂಡರಿ ಪರೀಕ್ಷೆಗೆ—ರೇಖಾ, ಕ್ಷೇತ್ರ ಮತ್ತು ಬೀಜಗಣಿತ, ಲೋವರ್ ಸೆಕೆಂಡರಿ ಪರೀಕ್ಷೆಗೆ ಕ್ಷೇತ್ರಗಣಿತ.	ಮೈಸೂರು ಮಹಾರಾಜಾ ಕಾಲೇಜ್ ಸಹಾಯೋಪಾಧ್ಯಾಯರಾದ ಮ॥ ಹೆಚ್. ಆರ್. ಕೃಷ್ಣಮೂರ್ತಿ, ಬಿ. ಎ. ಯವರು.
ಕನ್ನಡ ಟೆಕ್ಸ್ಟ್ (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ) ಕನ್ನಡ ಆಡ್ವಾನ್ಸ್ ವ್ಯಾಕರಣ (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ.)	ಬೆಂಗಳೂರು ಸೆಂಟ್ರಲ್ ಕಾಲೇಜ್ ಸೀನಿಯರ್ ಕನ್ನಡ ಪಂಡಿತರಾದ ವೇ॥ ಪಂಡಿತ ಗರಣಿ ಕೃಷ್ಣಮಾಚಾರ್ ಯವರು.
ಕನ್ನಡ ವ್ಯಾಕರಣ (ಲೋವರ್ ಸೆಕೆಂಡರಿ ಪರೀಕ್ಷೆಗೆ.)	ಮೈಸೂರು ಗ॥ ನಾರ್ಮಲ್ ಸ್ಕೂಲ್ ಪಂಡಿತರಾದ ವೇ॥ ತಿಮ್ಮಪ್ಪಯ್ಯಶಾಸ್ತ್ರಿಯವರು.
ಕನ್ನಡ ಟೆಕ್ಸ್ಟ್ (ಲೋವರ್ ಸೆಕೆಂಡರೀ ಪರೀಕ್ಷೆಗೆ.)	ವಿದ್ಯಾಭ್ಯಾಸದ ಇಲಾಖೆಯಲ್ಲಿರುವ ಭಾಷಾಂತರಕಾರಿಗಳಾದ ಮ॥ ಎಂ. ನಾರಣಪ್ಪ, ಬಿ. ಎ. ಯವರು.
ಕನ್ನಡ ವಾಕ್ಯರಚನೆ. (ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ.)	ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ರವರಿಗೆ ಸಹಾಯಕರಾದ ಮ॥ ಸಿ. ವಾಸುದೇವಯ್ಯನವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಕನ್ನಡ ಉಕ್ತಲೇಖನ. (ಲೋವರ್ ಸೆಕೆಂಡರಿ ಪರೀಕ್ಷೆಗೆ.)	ಮೈಸೂರು ಮಹಾರಾಣಿ ಕಾಲೇಜ್ ಸಹಾಯೋಪಾಧ್ಯಾಯಿನಿಯರಾದ ಶ್ರೀಮತಿ ಕೆ. ಸುಬ್ಬಮ್ಮ, ಬಿ. ಎ. ಯವರು.
ಕನ್ನಡ ಬರವಣಿಗೆ. (ಲೋವರ್ ಸೆಕೆಂಡರಿ ಪರೀಕ್ಷೆಗೆ.)	ಬೆಂಗಳೂರು ಗ॥ ಬಾಲಿಕಾ ಪಾಠಶಾಲೆಯ ಹೆಡ್ ಮಿಸ್ಟ್ರೆಸ್‌ರಾದ ಶ್ರೀಮತಿ ಪುಟ್ಟ ಸುಬ್ಬಮ್ಮನವರು.
ಉರ್ದು ಟೆಕ್ಸ್ಟ್, ವ್ಯಾಕರಣ, ವಾಕ್ಯರಚನೆ (ಅಪ್ಪರ್ ಸೆಕಂಡರಿ ಪರೀಕ್ಷೆಗೆ). ಪರಿಷಿಯನ್ ಟೆಕ್ಸ್ಟ್, ಮತ್ತು ಭಾಷಾಂತರ, ಉಕ್ತಲೇಖನ ಬರವಣಿಗೆ, (ಲೋವರ್ ಸೆಕೆಂಡರೀ ಪರೀಕ್ಷೆಗೆ.)	ಮೈಸೂರು ಮಹಾರಾಜಾ ಕಾಲೇಜ್ ಹಿಂದೂಸ್ಥಾನಿ ಮುನಿಷಿ ಹಜರತ್ ಸುಲ್ತಾನ್ ಮಹಮ್ಮದ್ ಖಾನ್ ರವರು.
ಉರ್ದು ಟೆಕ್ಸ್ಟ್, ವ್ಯಾಕರಣ, ಮತ್ತು ವಾಕ್ಯರಚನೆ, ಬರವಣಿಗೆ, ಉಕ್ತಲೇಖನ, ಪರಿಷಿಯನ್ ಟೆಕ್ಸ್ಟ್ ಮತ್ತು ವ್ಯಾಕರಣ, ಭಾಷಾಂತರ, ಉಕ್ತಲೇಖನ, ಬರವಣಿಗೆ. (ಲೋವರ್ ಸೆಕೆಂಡರಿ ಪರೀಕ್ಷೆಗೆ.)	ಬೆಂಗಳೂರು ಗ॥ ಸೆಂಟ್ರಲ್ ಬುಕ್‌ಡಿಪೋ ಕ್ಯೂರೇಟರಾದ ಹಜರತ್ ಯಸ್. ಅಬ್ದುಲ್ ಹೈ ಯವರು.
ಅರಬ್ಬಿ ಟೆಕ್ಸ್ಟ್ ಮತ್ತು ವ್ಯಾಕರಣ, ಭಾಷಾಂತರ. ಪರಿಷಿಯನ್ ಟೆಕ್ಸ್ಟ್, ವ್ಯಾಕರಣ, ಮತ್ತು ಭಾಷಾಂತರ. (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ.)	ಮೈಸೂರು ಗ॥ ನಾರ್ಮಲ್ ಸ್ಕೂಲಿನಲ್ಲಿರುವ ಸಹಾಯೋಪಾಧ್ಯಾಯರಾದ ಹಜರತ್ ಮೌಲ್ವಿ ಮುಜಾತ್ ಹಸನ್ ಖಾನ್ ರವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಅಪ್ಪರ್ ಸೆಕೆಂಡರೀ ಪರೀಕ್ಷೆಯ ಉರ್ದು ಗಣಿತ, ರೇಖಾ ಮತ್ತು ಕ್ಷೇತ್ರಗಣಿತ, ಬೀಜಗಣಿತ, ಆರೋಗ್ಯ, ವ್ಯವಸಾಯ, ಚರಿತ್ರೆ, ಭೂಗೋಳ ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಗೆ ಭಾಷಾಂತರ ಇವುಗಳಿಗೆ.	ಹಿಂದೂಸ್ಥಾನಿ ಸ್ಕೂಲ್‌ಗಳ ಡೆಪ್ಯುಟಿ ಇನ್‌ಸ್ಪೆಕ್ಟರಾದ ಹಜರತ್ ಬಿ. ಮಹಮದ್ ಬೇಗ್, ಬಿ. ಎ. ಯವರು.
ಲೋವರ್ ಸೆಕೆಂಡರಿಯ ಪರೀಕ್ಷೆಗೆ ಉರ್ದು ಗಣಿತ, ಚರಿತ್ರೆ, ಭೂಗೋಳ, ನಕ್ಷೆ ಬರೆಯುವುದು, ಆರೋಗ್ಯ ಮತ್ತು ವ್ಯವಸಾಯಶಾಸ್ತ್ರಗಳಿಗೆ.	ಚನ್ನಪಟ್ಟಣದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಹಜರತ್ ಎಂ. ಬಾವಸಾಹೇಬ್ ಮಿರ್ಯಾ ರವರು.
ಸಂಸ್ಕೃತ ಟೆಕ್ಸ್ಟ್, ಮತ್ತು ವ್ಯಾಕರಣ, (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ.) ಲೋವರ್ ಸೆಕೆಂಡರಿ ಪರೀಕ್ಷೆಯ ಸಂಸ್ಕೃತ ಟೆಕ್ಸ್ಟ್, ಮತ್ತು ವ್ಯಾಕರಣ, ಭಾಷಾಂತರ, ಉಕ್ತಲೇಖನ ಕೈಬರಹ (ಲೋವರ್ ಸೆಕೆಂಡರಿ ಪರೀಕ್ಷೆಗೆ.)	ಬೆಂಗಳೂರು ಸೆಂಟ್ರಲ್ ಕಾಲೇಜ್ ಸೀನಿಯರ್ ಸಂಸ್ಕೃತ ಪಂಡಿತರಾದ ವೇ॥ ಪಂಡಿತ್ ವಿಶ್ವೇಶ್ವರಶಾಸ್ತ್ರಿಗಳವರು.
ಸಂಸ್ಕೃತ ಭಾಷಾಂತರ—(ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಸಂಸ್ಕೃತ ಟೆಕ್ಸ್ಟ್, ವ್ಯಾಕರಣ, ಮತ್ತು ಭಾಷಾಂತರ, ಉಕ್ತಲೇಖನ, ಕೈಬರಹ, (ಲೋವರ್ ಸೆಕೆಂಡರಿ ಪರೀಕ್ಷೆಗೆ)	ಬೆಂಗಳೂರು ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮಿ॥ ಡಿ. ಶ್ರೀನಿವಾಸಾಚಾರ್, ಎಂ. ಎ. ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ತೆಲುಗುಭಾಷೆ ಮತ್ತು ಎಲ್ಲಾ ತೆಲುಗು ಗ್ರಂಥಗಳಿಗೆ.	ಮೈಸೂರು ಗೌ॥ ಓರಿಯಂಟಲ್ ಲೈಬ್ರರಿ ಕ್ಯೂರೇಟರ್ ಮೆ॥ ಎ. ಮಹದೇವಶಾಸ್ತ್ರಿ ಬಿ. ಎ. ಯವರು.
ಆರೋಗ್ಯಶಾಸ್ತ್ರ—(ಅಪ್ಪರ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ)	ಬೆಂಗಳೂರು ಸೆಂಟ್ರಲ್ ಕಾಲೇಜ್ ಉಪನ್ಯಾಸಕರಾದ ಮೆ॥ ಸಿ. ಎಂ. ವಿಜಯರಾಘವಾಚಾರ್ ಬಿ. ಎ. ಯವರು (೧ನೇ ಭಾಗ ಅಪ್ಪರ್‌ಸೆಕೆಂಡರಿ) ಮತ್ತು ಬೆಂಗಳೂರು ಪಶುವೈದ್ಯ ಇಲಾಖೆಯ ಇನ್ಸ್‌ಪೆಕ್ಟರಾದ ಮೆ॥ ಎನ್. ನರಸಿಂಹಯ್ಯಂಗಾರ್ ಯವರು. (೨ ನೇ ಭಾಗ ಲೋವರ್‌ಸೆಕೆಂಡರಿ).
ವ್ಯವಸಾಯಶಾಸ್ತ್ರ-(ಲೋವರ್ ಮತ್ತು ಅಪ್ಪರ್ ಸೆಕೆಂಡರಿಪರೀಕ್ಷೆಗಳಿಗೆ)	ಮೈಸೂರು ಗೌ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಕೆ. ನರಸಿಂಹಯ್ಯಂಗಾರ್ ರವರು. (೧ನೇ ಭಾಗ ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗಳಿಗೆ) ಮತ್ತು ೨ ನೇ ಭಾಗಗಳಿಗೆ ಬೆಂಗಳೂರು ಲಾಲ್‌ಬಾಗ್ ಕ್ಯೂರೇಟರಾದ ಮೆ॥ ವೈ. ರಾಮರಾವ್ ಯವರು. (ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗಳಿಗೆ).
ಭೌತಿಕಶಾಸ್ತ್ರ—(ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ) ಭೌತಿಕ ಭೂಗೋಳಶಾಸ್ತ್ರ (ಲೋವರ್‌ಸೆಕೆಂಡರಿ ಪರೀಕ್ಷೆಗೆ) ಮತ್ತು ಭೂಗೋಳ, ನಕ್ಷೆ ಬರೆಯುವುದು (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ)	ಚಿತ್ರದುರ್ಗದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಆರ್. ಕೃಷ್ಣಯ್ಯಂಗಾರ್ ಬಿ. ಎ. ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಲೋವರ್ ಸೆಕಂಡರಿ ಪರೀಕ್ಷೆಯ ಹಿಂದೂಚರಿತ್ರೆ ಮತ್ತು ಅಪ್ಪರ್ ಸೆಕಂಡರಿ ಪರೀಕ್ಷೆಯ ಚರಿತ್ರೆ	೧ ನೇ ಭಾಗ ಲೋವರ್ ಸೆಕಂಡರಿಗೆ ಹಿಂದೂಚರಿತ್ರೆ ಮತ್ತು ಅಪ್ಪರ್ ಸೆಕೆಂಡರಿ ಇಂಗ್ಲೀಷ್ ಚರಿತ್ರೆಗೆ ಮೈಸೂರು ಮಹಾರಾಜಾ ಕಾಲೇಜ್ ಸಹಾಯೋಪಾಧ್ಯಾಯರಾದ ಮೆ॥ ಬಿ. ಸುಬ್ಬರಾವ್ ಬಿ. ಎ. ಯವರು ೨ ನೇ ಭಾಗಕ್ಕೆ ಲೋವರ್ ಸೆಕಂಡರಿ ಹಿಂದೂಚರಿತ್ರೆ ಮತ್ತು ಅಪ್ಪರ್ ಸೆಕಂಡರಿಯ ಹಿಂದೂ ಚರಿತ್ರೆಗೆ ಮೈಸೂರು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ಬಿ. ರಾಮೇಶ್ವರಯ್ಯ ಬಿ. ಎ. ಯವರು.
ನಕ್ಷೆ ಬರೆಯುವುದು (ಲೋವರ್ ಸೆಕಂಡರಿ ಪರೀಕ್ಷೆ)	ಮೈಸೂರು ದೇಶೀಯ ಪರೀಕ್ಷೆಯ ಆಫೀಸ್ ಮ್ಯಾನೇಜರಾದ ಮೆ॥ ಕೆ. ರಾಮಯ್ಯನವರು.
ಭೂಗೋಳಶಾಸ್ತ್ರ—(ಲೋವರ್ ಸೆಕಂಡರೀ ಪರೀಕ್ಷೆ)	೧ ನೇ ಭಾಗ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರ ಆಫೀಸ್ ಮ್ಯಾನೇಜರ್ ಮೆ॥ ಕೆ. ಸೂರಯ್ಯ ಬಿ. ಎ. ಯವರು. ೨ ನೇ ಭಾಗಕ್ಕೆ— ಮೈಸೂರು ಗ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಕೆ. ಶ್ರೀನಿವಾಸಯ್ಯಂಗಾರ್ ಬಿ. ಎ. ಯವರು
ಪಾಕಶಾಸ್ತ್ರ—(ಕನ್ನಡ ಲೋವರ್ ಸೆಕಂಡರೀ ಪರೀಕ್ಷೆಗೆ)	ತುಮಕೂರು ಯಂಪ್ರೆಸ್ ಬಾಲಿಕಾಪಾಠಶಾಲೆಯ ಹೆಡ್ ಮಿಸ್ಟ್ರೆಸ್‌ರಾದ ಶ್ರೀಮತಿ ದೊಡ್ಡಸುಬ್ಬಮ್ಮನವರು.
ಪಾಕಶಾಸ್ತ್ರ—(ಹಿಂದೂಸ್ಥಾನಿ ಲೋವರ್ ಸೆಕಂಡರಿಪರೀಕ್ಷೆಗೆ)	ಮೈಸೂರು ಹಿಂದುಸ್ಥಾನಿ ಬಾಲಿಕಾಪಾಠಶಾಲೆಯ ಹೆಡ್ ಮಿಸ್ಟ್ರೆಸ್‌ರಾದ ಮರಿಯಂಬಿಯವರು.
ಕಸೂತಿ ಕೆಲಸ—(ಲೋವರ್ ಮತ್ತು ಅಪ್ಪರ್ ಸೆಕಂಡರಿ ಪರೀಕ್ಷೆಗೆ)	ಮೈಸೂರು ಮಹಾರಾಣಿ ಕಾಲೇಜು ಸಹಾಯೋಪಾಧ್ಯಾಯಿನಿಯರಾದ ಶ್ರೀಮತಿ ಶ್ರೀರಂಗಮ್ಮ ಬಿ. ಎ. ಯವರು.
ಸಂಗೀತ—(ಅಪ್ಪರ್ ಸೆಕಂಡರಿ ಪರೀಕ್ಷೆಗೆ)	ಮೈಸೂರು ಗ॥ ಶಾಸನದ ಇಲಾಖೆಯಲ್ಲಿರುವ ಮೆ॥ ಆರ್. ನರಸಿಂಹಾಚಾರ್ ಎಂ. ಎ. ಯವರು.
ಇಂಗ್ಲೀಷು ವಾಕ್ಯರಚನೆ ಮತ್ತು ಪ್ಯಾರಾಫ್ರೇಜ್ ಇಂಗ್ಲೀಷ್ ಭಾಷೆ ತೆಗೆದುಕೊಂಡಿರುವರಿಗೆ ಮಾತ್ರ)	ಮೈಸೂರು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ರೆವರೆಂಡ್ ಆರ್. ಡಬ್ಲಿಯು ಬೂಟ್ ಯವರು.

ಮತವಿಚಾರದ ಬೋಧೆಯು ಮಕ್ಕಳಿಗೆ ಮೊದಲಿಂದಲೂ ಅವಶ್ಯಕವೆಂಬ ವಿಷಯದ ಉಪನ್ಯಾಸ.

ಪ್ರಪಂಚದಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಮೊದಲುಮಾಡಿದಂದಿನಿಂದ ಜನರು ಈಗ ಇತರ ವಿದ್ಯಾಭ್ಯಾಸಗಳನ್ನು ಹೇರಳವಾಗಿ ಮಾಡಿಸುವರೇ ಹೊರ್ತು ಮತವಿಷಯವಾದ ವಿದ್ಯಾಭ್ಯಾಸವನ್ನು ಮಾಡಿಸುವುದಿಲ್ಲ. ಅಥವಾ ಮತಬೋಧೆಯನ್ನು ಚಿಕ್ಕಂದಿನಲ್ಲಿ ಮಾಡಿಸುವರಿರುವರೆಂದರೆ - ಎಲ್ಲಿಯೋ ಹಲವುಮಂದಿಮಟ್ಟಿಗೆ ಮಾಡಿಸುವರು. ಯಾವ ಬಾಲಕರಿಗೆ ಚಿಕ್ಕಂದಿನಿಂದ ಮತಬೋಧೆಯುಂಟಾಗುವುದೋ ಆ ಬಾಲಕರು ದೊಡ್ಡವರಾದಮೇಲೆ ಬಹಳ ಆಸ್ತಿಕರಾಗಿರುವರು; ಯಾರಿಗಿಲ್ಲವೋ ಅವರಲ್ಲಿ ಬಹುಶಃ ಆಸ್ತಿಕ್ಯವು ಕಡಮೆಯಾಗಿ ಕಂಡುಬರುವುದು. ಅಥವಾ ಅವರವರ ಮತಾಚಾರಗಳು ಕಡಮೆಯಾಗಿ ಕಂಡುಬರುವುದು. ಮತಬೋಧೆಯು ಯಾವ ಬಾಲಕರಿಗೆ ಉಂಟಾಗಿರುವುದೋ ಆ ಬಾಲಕರು ದೊಡ್ಡವರಾದಮೇಲೆ ಪ್ರಾಯಶಃ ಇತರರು ಹೊಗಳುವಂತೆ ಕಟ್ಟುನಟ್ಟಾದ ಪದ್ಧತಿಯನ್ನು ಕೈಗೊಂಡಿರುವರು. ಯಾರಲ್ಲಿಲ್ಲವೋ ಅಂಥವರ ಪದ್ಧತಿಯು ಕಟ್ಟುನಟ್ಟಾಗಿರುವುದಿಲ್ಲ. ಇದ್ದರೂ ಕಡಮೆ.

ಮತಾಚರಣೆಯು ಆಯಾ ಜನಾಂಗದಲ್ಲಿ ಐಕಮತ್ಯ, ಕ್ರಮ, ಸದಾಚಾರ, ನಿರ್ಮಲಮನಸ್ಕತೆ, ಸ್ಥಿರತೆ, ಮೊದಲಾದ ಗುಣಗಳನ್ನುಂಟುಮಾಡುವುದರಿಂದ ಈ ಗುಣಗಳು ಆಯಾ ಜನಾಂಗದ ರಾಜ್ಯಕೋಶಾದ್ಯಭಿವೃದ್ಧಿಗೂ ಕಾರಣವೆಂದು ವಿದ್ವಾಂಸರು ಹೇಳುವರು ಆದಕಾರಣ ಮತಾಚರಣೆಯು ಪ್ರತಿಯೊಬ್ಬನಲ್ಲಿಯೂ ಇರತಕ್ಕುದು ಆವಶ್ಯಕವು. ಇದಕ್ಕಾಗಿ ಮತಬೋಧೆಯನ್ನೂ ಮಾಡತಕ್ಕುದು ಅವಶ್ಯಕವು.

ಆದರೆ ಚಿಕ್ಕತನದಿಂದಲೂ ಈ ಬೋಧೆಯನ್ನು ಮಾಡತಕ್ಕುದು ಮತ್ತಷ್ಟು ಅವಶ್ಯಕವು. ಬಾಲಕರಲ್ಲಿ ಅನುಕರಣಶಕ್ತಿಯೂ ಗ್ರಹಣಶಕ್ತಿಯೂ ವಿಶೇಷವಾಗಿರುವುದರಿಂದ ಈಕಾಲದಲ್ಲಿ ಹೇಳಿಕೊಟ್ಟುದು ಸ್ಥಿರವಾಗಿ ನಿಲ್ಲುತ್ತದೆ. ಲೋಕದಲ್ಲಿ ದೊಡ್ಡವನಾದಾಗ ಕಲಿತ ವಿಷಯವು ಬಹಳ ದಿವಸ ಜ್ಞಾಪಕವಿರುವುದಿಲ್ಲ. ಚಿಕ್ಕಂದಿನಲ್ಲಿ ಕಲಿತುದು ಮುದುಕನಾದರೂ ಜ್ಞಾಪಕವಿರುವುದು. ಮತ್ತು "ಗಿಡದಲ್ಲಿ ಬಗ್ಗದಿದ್ದುದು ಮರವಾದಮೇಲೆ ಬಗ್ಗೀತೆ" ಎಂದು ಹೇಳುವಂತೆ

ದೊಡ್ಡವರಾದಮೇಲೆ ಬಹಳ ನಿರ್ಬಂಧವುಳ್ಳ ಮತವಿಷಯದಲ್ಲಿ ಪ್ರವರ್ತಿಸುವುದು ಕಷ್ಟವಾಗುವುದು. ಆದಕಾರಣ ಚಿಕ್ಕತನದಲ್ಲಿಯೇ ಹುಡುಗರಿಗೆ ಈ ವಿಷಯಗಳನ್ನು ಬೋಧಿಸಬೇಕು. ಹುಡುಗರು ಹೇಗೆಂದರೆ ಹಾಗೆ ಕೇಳುತ್ತಾರೆ. ಹೇಗೆ ನಡೆದರೆ ಅಥವಾ ನಡಿಸಿದರೆ ಹಾಗೆ ನಡೆಯುವರು. ಏನನ್ನಂದರೂ ಆದರಂತೆನ್ನುವರು. ಹೀಗೆ ಅವರು ಇರುವುದಕ್ಕೆ ಬಾಲ್ಯದಲ್ಲಿರುವ ಅನುಕರಣಶಕ್ತಿಯೊಂದಲ್ಲದೆ ಅವರಿಗೆ ಸ್ವಭಾವವಾಗಿರುವ ಕುತೂಹಲವೂ, ವಿಧೇಯತೆಯೂ, ಚಟುವಟಿಕೆಯೂ ಮುಖ್ಯಕಾರಣವಾಗಿರುತ್ತೆ.

ವಯಸ್ಸು ಬಂದಮೇಲೆ ಪ್ರತಿಯೊಬ್ಬನೂ ತನ್ನ ಮನಸ್ಸು ಬಂದಂತೆ ಸ್ವತಂತನಾಗಿರುವುದಕ್ಕೂ, ತನ್ನ ಮನಸ್ಸಿಗೆ ಯಾವುದು ಒಪ್ಪುವುದೋ ಅದನ್ನು ಪರಿಗ್ರಹಿಸುವುದಕ್ಕೂ, ಯಾವುದು ಸುಖವೋ ಅದನ್ನೇ ಬಯಸುವುದಕ್ಕೂ ಸಿದ್ಧನಾಗಿರುವನು. ಅವನಿಗೆ ಕಟ್ಟುನಟ್ಟಾದ ಮತ ವಿಷಯವು ಶ್ರಮವಾಗಿಯೂ, ನಿರ್ಬಂಧವಾಗಿಯೂ, ತೋರಿಬಿಡುವುದು. ನಿರ್ಬಂಧದ ವಿಷಯದಲ್ಲಿ ಸ್ವತಂತ್ರರಾಗಿರಬೇಕೆಂಬವರಿಗೆ ಸುಖವೂ ತೋರುವುದಿಲ್ಲ. ಆದಕಾರಣ ದೊಡ್ಡವನಾದಮೇಲೆ ಮತಬೋಧೆಯನ್ನು ಹೊಂದಿ ಅದರ ಫಲವನ್ನು ಪಡೆಯುವನೆಂಬ ವಿಷಯವನ್ನು ನಿಶ್ಚಯಪಡಿಸಲಾಗುವುದಿಲ್ಲ. ಆದರೆ ಕೆಲವರು ದೊಡ್ಡವರಾದವರಿಗೆ ಮತ ವಿಷಯಗಳನ್ನು ತಿಳಿಸತಕ್ಕದು ಯುಕ್ತವೆಂದು ಹೇಳುವರು. ಹಾಗೆ ಹೇಳತಕ್ಕವರಿಗೆ ಮತವಿಷಯದಲ್ಲಿ ತತ್ವವಿಚಾರಗಳು ಬರುವುದರಿಂದ ಅವನ್ನು ಬಾಲಕರು ತಿಳಿಯುವುದು ಕಷ್ಟವಾಗುವುದೆಂದಭಿಪ್ರಾಯವು. ವಿಷಯಗಳನ್ನು ಹುಡುಗರಿಗೆ ತಕ್ಕಂತೆ ಸುಲಭವಾಗಿ ಮಾಡಿಕೊಂಡು ರೂಢಿಯಾದ ಬಳಕೆ ಮಾತಿನಲ್ಲಿ ಚೆನ್ನಾಗಿ ಬೋಧಿಸಿದರೆ ಹುಡುಗರು ಗ್ರಹಿಸುವುದಕ್ಕೇನೂ ಕಷ್ಟವಾಗುವುದಿಲ್ಲ. ಅಥವಾ ಬಹಳ ಗಹನವಾದ ವಿಷಯಗಳಿದ್ದರೆ ಅಂಥವನ್ನು ಬಿಟ್ಟುಬಿಡಬಹುದು. ಅಥವಾ ಅವರಿಗೆ ಚಿಕ್ಕಂದಿನಲ್ಲಿ ಅಂಥವುಗಳನ್ನು ಬಾಯಿಪಾಠಮಾಡಿಸಿ ದೊಡ್ಡವರಾದಮೇಲೆ ಅರ್ಥವಿಚಾರವನ್ನು ಹೇಳಿಕೊಡಬಹುದು. ವಿಷಯಗಳು ಗಹನಗಳೆಂಬ ಕಾರಣದಿಂದ ಚಿಕ್ಕಂದಿನಲ್ಲಿ ಬೋಧಿಸುವುದನ್ನು ಬಿಟ್ಟು ದೊಡ್ಡವರಾಗುವುದನ್ನು ನಿರೀಕ್ಷಿಸಿದರೆ ಹಿಂದೆ ವಿವರಿಸಿದಂತೆ ಅವರಿಗೆ ಈ ಮಾರ್ಗವೇ ಒಡಂಬಡುವುದಿಲ್ಲ. ಮತ್ತು ಅವರಿಗೆ ಚಿಕ್ಕಂದಿನಲ್ಲಿ ಯಾವ ವಿದ್ಯಾಭ್ಯಾಸವು ನಡೆದಿರುವುದೋ ಅದರಮೇಲೆಯೇ ಅಭಿರುಚಿಯಿರುವುದು.

ಸಶೇಷ.

❁ ವಿದ್ಯಾದಾಯಿನಿ. ❁

(A MONTHLY JOURNAL)

ಭಾಗ ೧೨] ಆಗಸ್ಟ್—೧೯೦೯ [ಸಂಚಿಕೆ ೭.

ಪ್ರಕೃತಿವಿಮರ್ಶೆ



ಪಾರಿವಾಳದ ಹಕ್ಕಿಯ ವಿಷಯ.

ಈ ವಿಮರ್ಶೆಯು ಮೈಸೂರು ಗೌ॥ ನಾರ್ಮಲ್ ಸ್ಕೂಲಿಗೆ ಸಂಬಂಧಪಟ್ಟ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿ 1908 ನೇ ಇಸವಿ ನವಂಬರ್, ಡಿಸೆಂಬರ್ ಮತ್ತು 1909ನೆ ಇಸವಿ ಜನವರಿ ತಿಂಗಳುಗಳಲ್ಲಿ ನಡೆಯಿತು. ವಿಮರ್ಶೆಯು ನಡೆದ ಕ್ರಮವು ಮುಂದಿನಪಟ್ಟಿಯಿಂದ ಕಾಣುವುದು.

I. ಉದ್ದೇಶ:—ಪ್ರಪಂಚದ ಜೀವರಾಶಿಗಳಲ್ಲಿ ಪ್ರಾಣಿ, ಸಸ್ಯವರ್ಗಗಳೆಂದು ಎರಡು ವಿಭಾಗಗಳಿರುವುವಷ್ಟೆ. ಇವುಗಳಲ್ಲಿ ಪ್ರಾಣಿವರ್ಗವು ಪ್ರಕೃತಿಯಲ್ಲಿ ಕಾಣುವ

ಒಂದು ಮುಖ್ಯ ಭಾಗವಾಗಿರುವುದು. ಈ ಪ್ರಾಣಿಗಳ ವಿಷಯದಲ್ಲಿ ಮಕ್ಕಳಿಗೆ ನಿಷ್ಕೃಷ್ಟವಾದ ಜ್ಞಾನವನ್ನುಂಟುಮಾಡುವುದು; ಅವುಗಳ ಪೋಷಣೆಯಲ್ಲಿ ಆಸಕ್ತಿಯನ್ನು ಹುಟ್ಟಿಸುವುದು; ಅವುಗಳ ಬೆಳವಳಿಕೆಯಲ್ಲಿ ಕಾಣುವ ಆಶ್ಚರ್ಯಗಳನ್ನು ತೋರ್ಪಡಿಸುವುದು; ಈ ಆಶ್ಚರ್ಯಕ್ಕೆ ಕಾರಣನಾದ ದೇವರಲ್ಲಿ ಭಕ್ತಿಯನ್ನು ಹುಟ್ಟಿಸುವುದು; ಇವೇ ಈ ವಿಮರ್ಶೆಯ ಮುಖ್ಯೋದ್ದೇಶಗಳು.

II. ಅನುಭವ:— ಉಪಾಧ್ಯಾಯರು ಪಾರಿವಾಳದ ಹಕ್ಕಿಗಳನ್ನು ಪ್ರತಿದಿವಸವೂ ನೋಡುತ ಅವುಗಳಲ್ಲಿ ಕಾಣುವ ವಿಶೇಷ ಲಕ್ಷಣಗಳನ್ನು ಬರೆದಿಡಬೇಕು. ಈ ಹಕ್ಕಿಯ ವಿಷಯದಲ್ಲಿ ಬರೆದಿರುವ ಪುಸ್ತಕಗಳನ್ನೋದಿ ಅದರ ಸ್ವಭಾವ, ಜಾತಿಗಳು ಮುಂತಾದ ಅಂಶಗಳನ್ನು ತಿಳಿಯಬೇಕು. ಮಕ್ಕಳು ಹಕ್ಕಿಯನ್ನು ಪಾಠಶಾಲೆಯಲ್ಲಿ ಸಾಕುತ ಅದಕ್ಕೆ ಪ್ರತಿದಿವಸವೂ ತಿಂಡಿಯನ್ನು ಹಾಕುವಾಗ ಅದರ ಸ್ವಭಾವವನ್ನು ಪರೀಕ್ಷಿಸುತಿರಬೇಕು.

III. ವಿಮರ್ಶೆ:—(1) ಮೊಟ್ಟೆ,—ಈ ಹಕ್ಕಿಯು ಒಂದಾವೃತ್ತಿಗೆ ಎರಡು ಮೊಟ್ಟೆಗಳನ್ನು ಇಡುವುದು. ಈ ಮೊಟ್ಟೆಗಳು ಬಾದಾಮಿ ಮಾಟಕ್ಕೆ ಇರುವುವು; ಇವುಗಳ ಬಣ್ಣವು ಕೆಂಪು ಮಿಶ್ರವಾದ ಬಿಳುಪು; ಕೆಲವು ಉದ್ದದಲ್ಲಿ ಹೆಚ್ಚಾಗಿಯೂ ಇನ್ನು ಕೆಲವು ಉದ್ದದಲ್ಲಿ ಕಡಮೆಯಾಗಿಯೂ ಇರುವುವು. ಬರಬರುತ ಬಿಳುಪು ಕಡಮೆಯಾಗುವುದು. ತೂಕದಲ್ಲಿ ವ್ಯತ್ಯಾಸವಾಗುವುದು; ಈಯಂಶಗಳನ್ನು ಮಕ್ಕಳು ಪರೀಕ್ಷಿಸಬೇಕು. ಮೊಟ್ಟೆ ಹಾಕಿದ ದಿವಸವನ್ನೂ ಮೊಟ್ಟೆಯೊಡೆದ ದಿವಸವನ್ನೂ ಗುರ್ತುಮಾಡಿ ಈ ಮಧ್ಯದ ಅಂತರವನ್ನು ತಿಳಿಯಬೇಕು. ಮೊಟ್ಟೆಯು ಬಲಿಯುತಿರುವ ಕಾಲದಲ್ಲಿ ಹಕ್ಕಿಯು ಆಹಾರವನ್ನು ಬಿಟ್ಟು ಅದರಮೇಲೆ ಕುಳಿತಿರುವುದನ್ನೂ, ಹಾಗೆ ಕುಳಿತಿರುವುದಕ್ಕೆ ಕಾರಣವನ್ನೂ ತಿಳಿಸಬೇಕು. ತಾಯಿಯು ಮಕ್ಕಳ ವಿಷಯದಲ್ಲಿ ತೆಗೆದುಕೊಳ್ಳುವ ಶ್ರಮವನ್ನು ಜ್ಞಾಪಿಸಬೇಕು. ಈ ಕಾಲದಲ್ಲಿ ಗಂಡುಹಕ್ಕಿಯು ಆಗಾಗ್ಗೆ ತಾನು ಬಂದು ಮೊಟ್ಟೆಯಮೇಲೆ ಕುಳಿತು ಹೆಣ್ಣುಹಕ್ಕಿಯನ್ನು ಆಹಾರಕ್ಕಾಗಿ ಕಳುಹಿಸುವುದನ್ನು ತೋರಿಸಿ ಆ ಎರಡು ಹಕ್ಕಿಗಳಿಗೂ ಇರುವ ಪ್ರೀತಿಯಿಂದ ಲೋಕದಲ್ಲಿ ಗಂಡಹೆಂಡಂದಿರಿಗೆ ಇರಬೇಕಾದ ಪ್ರೀತಿಯನ್ನು ವಿವರಿಸಬೇಕು. ಮೊಟ್ಟೆಯು ಬಲಿತಮೇಲೆ ತಾಯಿಯು ಅದನ್ನು ಕುಕ್ಕಿ ಮರಿಯು ಈಚೆಗೆ ಬರುವಂತೆ ಮಾಡುವುದನ್ನು ತೋರಿಸಬೇಕು. ಆಮೇಲೆ ಮೊಟ್ಟೆಯ ಚಿಪ್ಪನ್ನು ತಾಯಿಹಕ್ಕಿಯು ಕೊಕ್ಕಿನಿಂದ ಕಚ್ಚಿಕೊಂಡು ಈಚೆಗೆ ತಂದು ಬಿಸಾಡು

ವುದನ್ನು ತೋರಿಸಿ ಈ ಹಕ್ಕಿಗಳಂತೆ ನಾವೂ ಸ್ವೈರ್ಯವನ್ನು ಕಲಿಯಬೇಕೆಂಬು ದನ್ನು ತಿಳಿಸಬೇಕು. ಈ ಚಿಪ್ಪನ್ನು ಮಕ್ಕಳು ಪರೀಕ್ಷಿಸಿ ಅದು ಸುಣ್ಣಕಲ್ಲಿನಂತೆ ಗಟ್ಟಿಯಾಗಿರುವುದನ್ನು ನೋಡಬೇಕು. ಆಮೇಲೆ ಅದನ್ನು ಇದ್ದಲಿನ ಜೊತೆಯಲ್ಲಿ ಸುಟ್ಟರೆ ಸುಣ್ಣವಾಗುವುದು ಎಂಬ ಅಂಶವನ್ನು ಪರೀಕ್ಷೆಯಿಂದ ತೋರಿಸಬೇಕು.

(2) ಸಣ್ಣ ಮರಿಗಳು:— ಮೊಟ್ಟೆಯಿಂದೀಚೆಗೆ ಬಂದ ಸಣ್ಣ ಮರಿಗಳು ಸುಮಾರು ಒಂದು ನಿಂಬೆಯಕಾಯಿಗಾತ್ರಕ್ಕಿರುವುವು ; ಹಳದಿ ಮಿಶ್ರವಾದ ಕಪ್ಪು ಬಣ್ಣಕ್ಕಿರುವುವು. ನಡೆಯಲಾರವು, ಹಾರಲಾರವು, ಏತಕ್ಕೆ ನಡೆಯಲಾರವು ಮತ್ತು ಹಾರಲಾರವು ಎಂಬುದನ್ನು ತಿಳಿಯಬೇಕು. ಇವಕ್ಕೆ ಆಹಾರವನ್ನು ತಾಯಿ ಯು ತಂದುಕೊಟ್ಟು ಪೋಷಿಸುವುದನ್ನು ತೋರಿಸಬೇಕು. ತಾಯಿಯು ಆಹಾರ ವನ್ನು ಗಂಟಲಿನಲ್ಲಿಟ್ಟುಕೊಂಡು ತರುವುದು. ಮರಿಯು ತನ್ನ ಕೊಕ್ಕನ್ನು ಅದರ ಬಾಯೊಳಗಿಟ್ಟು ಅದರ ಗಂಟಲಿನಿಂದ ಆಹಾರವನ್ನು ತೆಗೆದುಕೊಳ್ಳುವುದು. ಈ ಆಶ್ಚರ್ಯಕರವಾದ ಅಂಶವನ್ನು ಮಕ್ಕಳು ನೋಡಬೇಕು. ತಾಯಿಯು ಮಕ್ಕಳಿಗೆ ಹಾಲು, ತಿಂಡಿ, ಇವುಗಳನ್ನು ಕೊಡುವುದನ್ನು ಜ್ಞಾಪಿಸಬೇಕು. ಈ ಮರಿಗಳು ಬರಬರುತ ದೊಡ್ಡದಾಗುವುದನ್ನೂ ಬಣ್ಣದಲ್ಲಿ ಕ್ರಮೇಣ ಬೂದುಬಣ್ಣಕ್ಕೆ ಅಥವಾ ಬಿಳುಪುಬಣ್ಣಕ್ಕೆ ಅಥವಾ ಧೂಮ್ರವರ್ಣಕ್ಕೆ ಅಥವಾ ಸ್ವಲ್ಪಭಾಗ ಕಪ್ಪು ಸ್ವಲ್ಪ ಭಾಗ ಬಿಳುಪು ಬಣ್ಣಕ್ಕೆ ತಿರುಗುವುದನ್ನು ತೋರಿಸಬೇಕು. ಕತ್ತಿನ ಬಣ್ಣವು ಮೊದಲು ಕಪ್ಪು ಮಿಶ್ರವಾದ ಬೂದುಬಣ್ಣಕ್ಕಿದ್ದು ಕ್ರಮೇಣ ಕೆಂಪು, ಹಸುರು, ಊದ, ನೀಲಿಯ ಬಣ್ಣಗಳಿಂದ ಕೂಡಿ ಹೊಳೆಯುವುದನ್ನು ನೋಡಬೇಕು. ಮರಿ ಗಳನ್ನು ಮುಟ್ಟುವುದಕ್ಕೆ ಹೋದಾಗ ತಾಯಿಯು ರೇಗುವುದನ್ನು ತೋರಿಸಿ ಇದಕ್ಕೆ ಕಾರಣವನ್ನು ಕೇಳಬೇಕು. ಮರಿಯು ಗುಟುಕು ತೆಗೆದುಕೊಳ್ಳುವಾಗ ಕೂಗುವು ದಷ್ಟೆ; ಈ ಧ್ವನಿಗೂ ದೊಡ್ಡ ಹಕ್ಕಿಯ ಧ್ವನಿಗೂ ವ್ಯತ್ಯಾಸವನ್ನು ತಿಳಿಯಬೇಕು. ಮರಿಗಳು ಸ್ವಂತವಾಗಿ ಆಹಾರವನ್ನು ತೆಗೆದುಕೊಳ್ಳಲು ಈಚೆಗೆ ಬರುವುದಕ್ಕೆ ಎಷು ದಿನಗಳಾಗುತ್ತವೆಂಬುದನ್ನು ಮಕ್ಕಳು ಗೊತ್ತುಮಾಡಬೇಕು. ಹಾರುವುದಕ್ಕೆ ಎಷ್ಟು ದಿನಗಳು ಬೇಕೆಂಬುದನ್ನು ತಿಳಿಯಬೇಕು. ಹೀಗೆಯೇ ಮಕ್ಕಳು ತಮ್ಮ ಕೈಯಿಂ ದಲೇ ಊಟಮಾಡುವುವುದಕ್ಕೂ ಇತರರ ಸಹಾಯವಿಲ್ಲದೆ ನಡೆಯುವುದಕ್ಕೂ, ಎಷ್ಟುಕಾಲ ಬೇಕಾಗುವುದೆಂಬುದನ್ನು ಕೇಳಬೇಕು.

(3) ದೊಡ್ಡಹಕ್ಕಿ:—(*a*) ಶರೀರದ ರಚನೆ—(1) ತಲೆ:-ಇದರಲ್ಲಿ ಕೊಕ್ಕು ನಿಶ್ಶೇಷ ಮುಖ್ಯವಾಗಿ ಕಾಣುವುದು ಇದು ಸ್ವಲ್ಪ ಬಾಗಿರುವುದು, ಗಟ್ಟಿಯಾಗಿ

ಇರುವುದು, ಮೊನಚಾಗಿರುವುದು, ಹಕ್ಕಿಯ ಕಣ್ಣಿನ ಸುತ್ತಲೂ ಕೂದಲು ಬೆಳೆಯದೆ ಬರೀ ಚರ್ಮವಿರುವುದು, ಇದರ ಬಾಯನ್ನು ಬಿಡಿಸಿ ಹಲ್ಲುಗಳಿಲ್ಲದಿರುವುದನ್ನು ತೋರಿಸಿ ನಾಲಗೆಯು ಒರಟಾಗಿರುವುದನ್ನೂ ಕತ್ತಿನ ಕೆಳಗೆ ಕಾಳುಗಳನ್ನು ಇಟ್ಟುಕೊಳ್ಳುವುದಕ್ಕೆ ಅನುಕೂಲವಾದ ಚೀಲವಿರುವುದನ್ನೂ ತೋರಿಸಬೇಕು. ಕೆಲವು ಹಕ್ಕಿಗಳಿಗೆ ತಲೆಯಮೇಲೆ ಸಣ್ಣ ಜುಟ್ಟಿರುವುದು. (2) ಕತ್ತು:—ಇದು ಉದ್ದವಾಗಿ ನಾನಾ ಬಣ್ಣಗಳಿಂದ ಕೂಡಿರುವುದು. ಹಕ್ಕಿಯು ಗುಬ್ಬಳಿಸುವಾಗ ಕತ್ತಿನ ಗರಿಗಳು ಕೆದರಿಕೊಂಡು ಕತ್ತು ದಪ್ಪನಾಗಿ ಕಾಣಿಸುವುದು. (3) ಎದೆ:—ಎದೆಯ ಮೂಳೆಯು ವಿಶೇಷ ಅಗಲವಾಗಿರುವುದು. ಈ ಮೂಳೆಗೆ ಶರೀರದ ಮುಖ್ಯ ಮಾಂಸಖಂಡಗಳು ತಗುಲಿಕೊಂಡಿರುವುವು. ಇದರಿಂದ ಹಾರುವುದಕ್ಕೆ ವಿಶೇಷ ಅನುಕೂಲವು. ಭುಜದ ಮೂಳೆಗಳು ಮುಂಗಾಲಿನ ಮೂಳೆಗಳೊಡನೆ ಸಂಬಂಧಿಸಲ್ಪಟ್ಟಿರುವುವು. (4) ಮುಂಗಾಲು:—ಈ ಮುಂಗಾಲಿನಲ್ಲಿ ಮೊದಲು ಒಂದು ಮೂಳೆ, ಆಮೇಲೆ ಎರಡು ಮೂಳೆಗಳು. ಗಿಣ್ಣಿಗೆ ಬದಲಾಗಿ ಒಂದು ಉದ್ದವಾದ ಮೂಳೆ, ಇವು ಇರುವುವು. ಹಾರುವುದಕ್ಕೆ ಬೇಕಾದ ಮುಖ್ಯವಾದ ಗರಿಗಳೆಲ್ಲಾ ಈ ಮುಂಗಾಲಿಗೆ ತಗುಲಿಕೊಂಡಿರುವುವು. ಈ ಗರಿಗಳು ಮುಂಗಾಲನ್ನು ಮುಚ್ಚಿರುವುದರಿಂದ ಹಕ್ಕಿಗೆ ಮುಂಗಾಲಿರುವುದೇ ಕಾಣುವುದಿಲ್ಲ. (5) ಹಿಂಗಾಲು:—ಹಿಂಗಾಲಿನಲ್ಲಿ ಹೆಬ್ಬೆಟ್ಟು ಮತ್ತು ಮೂರು ಬೆರಳುಗಳುಮಾತ್ರವಿರುವುವು. ಮುಂಗಾಲಿನ ರಚನೆಗೂ ಹಿಂಗಾಲಿನ ರಚನೆಗೂ ಇರುವ ವ್ಯತ್ಯಾಸವೇನು? ಹೆಬ್ಬೆಟ್ಟು ಹಿಂದಕ್ಕೆ ತಿರುಗಿರುವುದು. ಈ ಬೆರಳುಗಳ ರಚನೆಯಿಂದ ಮರಗಳನ್ನು ಹಿಡಿದುಕೊಳ್ಳುವುದಕ್ಕಿರುವ ಅನುಕೂಲವನ್ನು ನೋಡಬೇಕು. (6) ಸ್ವಭಾವ:—ಗಂಡು ಹಕ್ಕಿಯು ಗುಬ್ಬಳಿಸುವುದು; ಕೆಲವು ವೇಳೆಗಳಲ್ಲಿ ಕೊಕ್, ಕೊಕ್ ಎಂದು ಶಬ್ದಮಾಡುವುದು, ಕೆಲವುವೇಳೆ ಕೂ, ಕೂ ಎಂತಲೂ ಕೂಗುವುದು. ಜಗಳವಾಡುವಾಗ ತಲೆಯನ್ನು ಬಾಗಿಸುವುದು, ಕತ್ತನ್ನು ದಪ್ಪನಾಗಿ ಮಾಡಿಕೊಳ್ಳುವುದು. ಈ ಹಕ್ಕಿಗಳು ಗೋಡೆಯ ಸಮೀಪಕ್ಕೆ ಹೋಗಿ ಸಣ್ಣ ಕಲ್ಲುಗಳನ್ನು ಆರಿಸಿಕೊಳ್ಳುವುವು. ಈ ಕಲ್ಲು ಆಹಾರವು ಜೀರ್ಣವಾಗುವುದಕ್ಕೆ ಅವಶ್ಯಕವಾಗಿ ಬೇಕು. ನಮ್ಮ ಹಲ್ಲಿನ ಕೆಲಸವನ್ನು ಈ ಕಲ್ಲುಗಳು ಮಾಡುವುವು. ಒಂದು ಪಾತ್ರೆಯಲ್ಲಿ ನೀರನ್ನು ತಂದಿಟ್ಟರೆ ರೆಕ್ಕೆಯನ್ನೊದರಿಕೊಂಡು ಸ್ನಾನ ಮಾಡುವುವು. ಗಂಡುಹಕ್ಕಿಯೂ, ಹೆಣ್ಣುಹಕ್ಕಿಯೂ ಜೊತೆಯಲ್ಲಿ ಕುಳಿತುಕೊಂಡು ಒಂದು ಮತ್ತೊಂದರ ಮೈಮೇಲಿರುವ ಹೇನು

ಗಳನ್ನು ತೆಗೆಯುವುದು. ಈ ಹಕ್ಕಿಗಳಿಗೆ ಬಿಸಿಲನ್ನು ಕಂಡರೆ ಬಲು ಇಷ್ಟ. ಸಾಕುವವರನ್ನು ವಿಶೇಷವಾಗಿ ಪ್ರೀತಿಸುವುವು. ಗೂಡಿನಿಂದ ಎಷ್ಟುದೂರ ತೆಗೆದುಕೊಂಡು ಹೋಗಿ ಬಿಟ್ಟರೂ ಪುನಃ ಗೂಡಿಗೆ ಬರುವುವು. ಈಯಂಶಗಳನ್ನು ಕ್ರಮವಾದ ಪರೀಕ್ಷೆಗಳಿಂದ ತೋರಿಸಬೇಕು. (c) ಆಹಾರ:—ಮಕ್ಕಳು ಈ ಹಕ್ಕಿಗಳಿಗೆ ಪ್ರತಿದಿವಸವೂ ಕೊಡುವ ಕಾಳುಗಳ ಹೆಸರುಗಳನ್ನು ಜ್ಞಾಪಿಸಿ ಪಾರಿವಾಳದ ಹಕ್ಕಿಗಳು ಯಾವ ಕಾಳುಗಳನ್ನು ತಿನ್ನುತ್ತವೆ, ಇವಕ್ಕೆ ವಿಶೇಷ ಇಷ್ಟವಾದ ಕಾಳುಗಳು ಯಾವುವು ಎಂಬುದನ್ನು ತಿಳಿಸಬೇಕು.

IV. ಪಾರಿವಾಳದ ಹಕ್ಕಿಯ ಜಾತಿಗಳು:—ಪಾಠಶಾಲೆಯಲ್ಲಿರುವ ಹಕ್ಕಿಗಳಲ್ಲಿ ನಾನಾಬಣ್ಣಗಳುಳ್ಳ ಹಕ್ಕಿಗಳು ಇರುವುದನ್ನು ಮಕ್ಕಳು ನೋಡಬೇಕು. ಇವುಗಳಲ್ಲಿ ಬೂದುಬಣ್ಣದ ಹಕ್ಕಿಗಳೇ ಎಲ್ಲೆಲ್ಲೂ ಸಾಮಾನ್ಯವಾಗಿ ಸಿಕ್ಕುವ ಹಕ್ಕಿಗಳೆಂಬುದನ್ನು ತಿಳಿಸಬೇಕು. ಪಾಠಶಾಲೆಯಲ್ಲಿರುವ ಕೆಲವು ಹಕ್ಕಿಗಳು ಗರಿಗಳನ್ನು ಮೇಲಕ್ಕೆತ್ತಿಕೊಂಡು ಬೀಸಣಿಗೆಯಂತೆ ನಿಲ್ಲಿಸುವುದನ್ನು ಮಕ್ಕಳು ನೋಡಬೇಕು. ಈ ಹಕ್ಕಿಗಳಿಗೆ ಸಾಧಾರಣ ಹಕ್ಕಿಗಳಿಗಿಂತಲೂ ವಿಶೇಷ ಗರಿಗಳಿರುವುವು. ಆದರೆ ಅವುಗಳಷ್ಟು ವೇಗವಾಗಿ ಹಾರಲಾರವು. ಈ ಬೀಸಣಿಗೆಯ ಹಕ್ಕಿಗಳು ತಮ್ಮ ಕತ್ತನ್ನು ಸಾಧಾರಣ ಹಕ್ಕಿಗಳಿಗಿಂತ ವಿಶೇಷ ಹಿಂದಕ್ಕೆ ಬಾಗಿಸುವುವು. ಹಿಂದಕ್ಕೆ ಲಾಗಾ ಹೊಡೆಯುವುವು. ಈ ಆಶ್ಚರ್ಯಕರವಾದ ಅಂಶಗಳೆಲ್ಲಾ ಮಕ್ಕಳ ಕಣ್ಣಿಗೆ ಬೀಳುವಂತೆ ಮಾಡಿ ಇಷ್ಟು ಚೆಲುವಾದ ಹಕ್ಕಿಗಳನ್ನು ನಾವು ಹಿಂಸಿಸಬಾರದೆಂಬುದನ್ನು ತಿಳಿಸಬೇಕು. ಮತ್ತು ಈ ಹಕ್ಕಿಗಳಲ್ಲಿ ಇಷ್ಟು ಆಶ್ಚರ್ಯಕರವಾದ ಅಂಶಗಳನ್ನುಂಟುಮಾಡಿರುವ ದೇವರ ಕಡೆಗೆ ಮಕ್ಕಳ ಗಮನವನ್ನು ಎಳೆಯಬೇಕು.

V. ಉಪಯೋಗ:—ಪಾರಿವಾಳದ ಹಕ್ಕಿಗಳನ್ನು ಜನರು ಸಮಾಚಾರ ತರುವುದಕ್ಕೆ ಉಪಯೋಗಿಸುವುದನ್ನು ಪರೀಕ್ಷೆಯಿಂದ ತೋರಿಸಬೇಕು. ಆಹಾರಕ್ಕಾಗಿ ಉಪಯೋಗಿಸುವುದನ್ನೂ ತಿಳಿಸಬೇಕು.

ಈ ವಿಮರ್ಶೆಯ ಕಾಲದಲ್ಲಿ ಮಕ್ಕಳು ತಮ್ಮ ಅನುಭವವನ್ನು ಭಾಷೆಯಿಂದಲೂ ಚಿತ್ರದಿಂದಲೂ ಮುಂದೆ ಕಾಣುವ ರೀತಿಯಲ್ಲಿ ತೋರ್ಪಡಿಸಿದರು.

23—10—08. ನಾವು ಸಾಕುವ ಪಾರಿವಾಳದ ಹಕ್ಕಿಗಳಲ್ಲಿ ಒಂದು ಈ ದಿವಸ ಒಂದು ಮೊಟ್ಟೆಯನ್ನಿಟ್ಟಿತು. ಈ ಮೊಟ್ಟೆಯು ಬಾದಾಮಿಯ ಆಕಾರಕ್ಕಿದೆ. ಬಣ್ಣ ಕೆಂಪು ಮಿಶ್ರವಾದ ಬಿಳುಪು, ಮೊಟ್ಟೆಯಮೇಲೆ ಬಿಳಿಯ ಚುಕ್ಕಿಗಳಿವೆ.

24—10—೦೮. ಈ ದಿವಸ ಹಕ್ಕಿಯು ಇನ್ನೊಂದು ಮೊಟ್ಟೆಯನ್ನು ಇಟ್ಟಿತು. ಒಂದು ಮೊಟ್ಟೆಯು ಇನ್ನೊಂದಕ್ಕಿಂತಲೂ ಗಾತ್ರದಲ್ಲಿ ದೊಡ್ಡದು. ಒಂದು ಏಳೂವರೆ ಕಾಸು ತೂಕ ಇನ್ನೊಂದು ಎಂಟೂವರೆ ಕಾಸು ತೂಕವಿತ್ತು.

29—10—08. ತಾಯಿಯು ಮೊಟ್ಟೆಗಳಮೇಲೆ ಕುಳಿತಿತ್ತು. ಮೊಟ್ಟೆಯನ್ನು ಮುಟ್ಟುವುದಕ್ಕೆ ಹೋಗಲು ಕಚ್ಚುವುದಕ್ಕೆ ಬಂತು. ತಾಯಿಗೆ ಕಾಳು ತೋರಿಸಿ ಈಚೆಗೆ ಕರೆದು ಮೊಟ್ಟೆಯನ್ನು ಮುಟ್ಟಿದೆವು. ಬೆಚ್ಚಗಿತ್ತು. ಹಕ್ಕಿಯು ತಿಂಡಿಯನ್ನು ಕೂಡ ಬಿಟ್ಟು ಮೊಟ್ಟೆಯಮೇಲೆ ಕುಳಿತಿರುವುದು.

4—11—08. ಈ ದಿವಸ ಮೊಟ್ಟೆಗಳನ್ನು ತೂಗಿದೆವು. ಒಂದು ಏಳೂವರೆ ಕಾಸು ಮತ್ತೊಂದು ಎಂಟುಕಾಸು ತೂಕವಿತ್ತು.

7—11—08. ಈದಿವಸ ಮೊಟ್ಟೆಗಳನ್ನು ಪುನಃ ತೂಗಿದೆವು. ಇವು ಏಳು, ಏಳೂವರೆ ಕಾಸು ತೂಕವಿದ್ದವು.

12—11—08. ದೊಡ್ಡ ಮೊಟ್ಟೆಯು ಒಡೆಯಿತು. ಮರಿಯ ಮೈಬಣ್ಣ ಕೆಂಪು, ಕೂದಲು ಹಳದಿಯಬಣ್ಣ. ಕೊಕ್ಕು ಮಾಸಲುಕೆಂಪುಬಣ್ಣ ಮತ್ತು ದಪ್ಪನಾಗಿದೆ. ತುದಿಯಲ್ಲಿ ಬಿಳಿಯ ಚುಕ್ಕಿ ಇದೆ.

13—11—08. ಸಣ್ಣ ಮೊಟ್ಟೆಯೊಡೆದು ಮರಿಯಾಗಿರುತ್ತೆ. ಈ ಮರಿಯು ಬಲು ಚಿಕ್ಕದು. ಮರಿಯಾಗುವುದಕ್ಕಿಂತ ಮುಂಚೆ ಮೊಟ್ಟೆಗೆ ಸ್ವಲ್ಪ ಅಪಾಯವಾಗಿತ್ತು.

14—11—08. ಸಣ್ಣ ಮರಿಯು ಕಾಲವಾಗಿ ಹೋಯಿತು.

17—11—08. ಮತ್ತೊಂದು ಮರಿಯು ದಪ್ಪನಾಗಿದೆ, ಮೈಬಣ್ಣ ಮಾಸಲುಕೆಂಪು. ಕಣ್ಣನ್ನು ಸುಮಾರಾಗಿ ಬಿಡುತಲೂ ಮುಚ್ಚಿಕೊಳ್ಳುತಲೂ ಇತ್ತು.

19—11—08. ಮರಿಯ ಮೈ ಕಪ್ಪು. ಎರಡುಕಡೆಗಳಲ್ಲೂ ರೆಕ್ಕೆಗಳು ದೊಡ್ಡದಾಗಿ ಬೆಳೆಯುತ ಇರುತ್ತವೆ. ಮೊದಲು ಹುಟ್ಟಿದ ಹಳದಿಯ ಕೂದಲುಗಳು ಉದುರಿಹೋಗುತ್ತಾ ಇವೆ. ಮರಿಯು ದಪ್ಪನಾಗಿದೆ.

26—11—08. ಮರಿಯ ಮೈಮೇಲೆ ತುಂಬಾ ಗರಿಗಳು ಬೆಳೆದಿವೆ. ಬಣ್ಣ ಬೂದು. ತಲೆಯಮೇಲೆ ಮಾತ್ರ ಹಳದಿಯಬಣ್ಣದ ಕೂದಲುಗಳಿರುವುವು. ಕಣ್ಣು ಚೆನ್ನಾಗಿ ಬಿಟ್ಟಿರುವುದು. ಎದೆಯ ಮುಂಭಾಗದಲ್ಲಿ ಕಪ್ಪು ಕೂದಲುಗಳಿವೆ. ತಾಯಿಯು ಮರಿಗೆ ಪ್ರೀತಿಯಿಂದ ಗುಟುಕು ಕೊಡುತಿತ್ತು.

1—12—08. ಹಕ್ಕಿಯು ಸುಮಾರು ಒಂದು ತೆಂಗಿನಕಾಯಿ ಗಾತ್ರಕ್ಕೆ ಇದೆ. ಮುಟ್ಟುವುದಕ್ಕೆ ಹೋದರೆ ಕೊಕ್ಕಿನಿಂದ ಕುಕ್ಕುವುದು. ಗೂಡಿನಲ್ಲಿ ಚಟುವಟಿಕೆಯಿಂದ ಓಡಾಡುವುದು. ರೆಕ್ಕೆಗಳು ಉದ್ದವಾಗಿ ಬೆಳೆಯುತ್ತಿವೆ. ಕಾಲಿನಮೇಲೆ ಉಂಗುರದಂತೆ ಗೀರುಗಳು ಕಾಣಿಸುತ್ತವೆ.

3—12—08. ಹಕ್ಕಿಯ ಉಗುರುಗಳು ಮೊನಚಾಗಿವೆ. ಹಕ್ಕಿಯು ಕೂ, ಎಂದು ಕೂಗುತಿತ್ತು.

10—12—08. ಮರಿಯು ಗೂಡಿನಿಂದ ಈಚೆಗೆ ಬಂದು ಹೊರಭಾಗದಲ್ಲಿ ಸಂಚರಿಸುತ್ತಿತ್ತು. ಗಾತ್ರದಲ್ಲಿ ದೊಡ್ಡದಾಗಿದೆ. ಕತ್ತಿನಮೇಲೆ ಹಸುರು, ಕೆಂಪು, ಊದಾ ಬಣ್ಣಗಳು ಕಾಣಿಸುತ್ತವೆ.

15—12—08. ಮರಿಯು ತಾಯಿಯ ಜೊತೆಯಲ್ಲಿ ಹಾರಿಹೋಗಿ ಬಿಸಲು ಮಹಡಿಯಮೇಲೆ ಕುಳಿತಿತ್ತು. ಇದಕ್ಕೆ ಬಿಸಿಲನ್ನು ಕಂಡರೆ ಬಲು ಇಷ್ಟ. ತಾನೇ ಕಾಳನ್ನು ಆರಿಸಿಕೊಳ್ಳುತಿತ್ತು. ಮೊಟ್ಟೆಯೊಡೆದ ದಿವಸದಿಂದ ಹಕ್ಕಿಯು ಹಾರಾಡುವುದಕ್ಕೆ 33 ದಿವಸಗಳಾಗುವುದು.

17—12—08. ಈ ದಿವಸ ದೊಡ್ಡ ಹಕ್ಕಿಯನ್ನು ಪರೀಕ್ಷಿಸಿದೆವು. ಇದರ ತಲೆಯು ನಿಂಬೇಕಾಯಿ ಗಾತ್ರಕ್ಕೆ ಇದೆ. ತಲೆಯಲ್ಲಿ ಕೊಕ್ಕು ಮುಖ್ಯವಾಗಿ ಕಾಣುವ ಭಾಗವು. ಈ ಕೊಕ್ಕು ಗಟ್ಟಿಯಾಗಿ ಬಾಗಿರುವುದು, ತುದಿಯು ಮೊನಚಾಗಿರುವುದು. ಕಣ್ಣುಗಳು ದುಂಡಗಿವೆ, ಇವುಗಳ ಸುತ್ತಲೂ ಕೂದಲಿಲ್ಲದ ಚರ್ಮವಿರುವುದು.

18—12—08. ಈದಿವಸವೂ ದೊಡ್ಡ ಹಕ್ಕಿಯನ್ನು ಪರೀಕ್ಷಿಸಿದೆವು. ಹಕ್ಕಿಯ ಕುತ್ತಿಗೆಯು ಉದ್ದವಾಗಿತ್ತು. ಗುಟ್ಟುಳಿಸುವಾಗ ದಪ್ಪನಾಗುತಿತ್ತು. ಮತ್ತು ಕುತ್ತಿಗೆಯಮೇಲಿನ ಗರಿಗಳು ಕೆದರುತ್ತಿದ್ದವು. ಎದೆಯ ಮೂಳೆಯು ಅಗಲವಾಗಿದೆ. ಇದರಿಂದ ಹಾರಲು ಅನುಕೂಲ. ಭುಜದಮೂಳೆಗಳು ಮುಂಗಾಲನ್ನು ಮುಂಡದೊಡನೆ ಸಂಬಂಧಿಸಿವೆ, ಮುಂಗಾಲಿನಲ್ಲಿ ಮೊದಲು ಒಂದು ಮೂಳೆ ಅನಂತರ ಎರಡು ಮೂಳೆಗಳು ಇವೆ, ಗಿಣ್ಣಿಗೆಬದಲಾಗಿ ಒಂದು ಉದ್ದವಾದ ಮೂಳೆಯಿದೆ. ಈ ಮುಂಗಾಲಿಗೆ ಗರಿಗಳು ಅಂಟಿಕೊಂಡು ಹಕ್ಕಿಗೆ ರೆಕ್ಕೆಗಳಾಗಿವೆ. ಈ ಮುಂಗಾಲಿನಿಂದಲೇ ಹಕ್ಕಿಯು ಹಾರುವುದು.

5—1—09. ಈದಿವಸ ಹಕ್ಕಿಯ ಹಿಂಗಾಲನ್ನು ಪರೀಕ್ಷಿಸಿದೆವು. ಈ ಕಾಲಿನ ಹಿಂಭಾಗದಲ್ಲಿ ಒಂದು ಹೆಬ್ಬೆಟ್ಟೂ, ಮುಂಭಾಗದಲ್ಲಿ ಮೂರು ಬೆರಳುಗಳೂ ಇರುವುವು. ಈ ಬೆರಳುಗಳ ತುದಿಯಲ್ಲಿ ಮೊನೆಯಾದ ಉಗುರುಗಳಿರುವುವು. ಹಕ್ಕಿಯನ್ನು ನಮ್ಮ ಕೈಮೇಲೆ ಕೂಡಿಸಿಕೊಂಡೆವು. ಈ ಉಗುರುಗಳಿಂದ ನಮ ಕೈಯನ್ನು ಬಲವಾಗಿ ಹಿಡಿದುಕೊಂಡಿತು.

7—1—09. ಹಕ್ಕಿಯ ಬಾಯನ್ನು ಬಿಡಿಸಿ ನೋಡಿದೆವು. ನಾಲಗೆಯು ಉದ್ದವಾಗಿ ಮೊನೆಯಾಗಿತ್ತು. ಹಲ್ಲುಗಳಿರಲಿಲ್ಲ, ಕುತ್ತಿಗೆಯ ಕೆಳಭಾಗದಲ್ಲಿ ಒಂದು ಚೀಲವು ಕಾಣಿಸುತಿತ್ತು. ಮತ್ತೊಂದು ಹಕ್ಕಿಯು ಕಲ್ಲನ್ನು ನುಂಗುತಿತ್ತು. ಈಕಲ್ಲುಗಳು ಹಲ್ಲಿನ ಕೆಲಸವನ್ನು ಮಾಡುತ್ತವೆ ಎಂದು ಉಪಾಧ್ಯಾಯರು ಹೇಳಿದರು.

12—1—09. ಎರಡು ಗಂಡುಹಕ್ಕಿಗಳು ಜಗಳವಾಡುತಿದ್ದವು. ಜಗಳವಾಡುತಿದ್ದಾಗ ತಲೆಯನ್ನು ಬಗ್ಗಿಸಿಕೊಂಡು ಕತ್ತನ್ನು ದಪ್ಪನಾಗಿ ಮಾಡಿಕೊಂಡಿದ್ದುವು. ಒಂದನ್ನೊಂದು ಕೋಪದಿಂದ ಕುಕ್ಕುತಿದ್ದುವು. ಒಂದು ಹಕ್ಕಿಯು ಗರಿಗಳನ್ನು ಕೆದರಿಕೊಂಡು ನೀರಿನಲ್ಲಿ ಸ್ನಾನಮಾಡುತಿತ್ತು.

19—1—09. ಎರಡು ಹಕ್ಕಿಗಳು ಒಂದರಹತ್ತಿರ ಒಂದು ಬಿಸಿಲಿನಲ್ಲಿ ಕುಳಿತುಕೊಂಡು ತಲೆಯಲ್ಲಿ ಹೇನು ತೆಗೆಯುತಿದ್ದುವು. ಕಾಳನ್ನು ತೆಗೆದುಕೊಂಡು ನಾವು ಹೋಗಲು ನಮ್ಮ ಹತ್ತಿರಕ್ಕೆ ಬಂದು ನಮ್ಮ ಕೈಮೇಲೆ ಕುಳಿತುಕೊಂಡವು.

21—1—09. ಪಾರ್ಕಿಗೆ ಹೋಗಿ ಅಲ್ಲಿಂದ ಒಂದು ಹಕ್ಕಿಯ ಕಾಲಿಗೆ ಚೀಟಿಯನ್ನು ಕಟ್ಟಿ ಗೂಡಿನ ಬಳಿ ಯಿರುವ ನಮ್ಮ ಸ್ನೇಹಿತರಿಗೆ ಸಮಾಚಾರವನ್ನು ಕಳುಹಿಸಿದೆವು. ಹಕ್ಕಿಗಳಿಗೆ ನಾವು ನಿತ್ಯವೂ, ರಾಗಿ, ಹೆಸರು, ಜೋಳ, ಹುರಿಗಡಲೆ, ಬಟಾಣಿ, ಸಾವೆ, ನವಣೆ ಈ ಕಾಳುಗಳನ್ನು ಹಾಕುತಿರುವೆವು. ಹೆಸರನ್ನು ಕಂಡರೆ ಅವಕ್ಕೆ ಬಲುಇಷ್ಟ.

26—1—09. ನಾವು ಸಾಕುತಿರುವ ಹಕ್ಕಿಗಳ ಬಣ್ಣದಲ್ಲಿ ಹೆಚ್ಚುಕಡಿಮೆ ಇರುವುದು. ಒಂದು ಹಕ್ಕಿಗೆ ಮೈಯೆಲ್ಲಾ ಬಿಳುಪು, ಕಾಲು ಮತ್ತು ಕೊಕ್ಕು ಕೆಂಪು, ಇನ್ನೊಂದಕ್ಕೆ ಮೈಮೇಲೆ ಕಪ್ಪು ಮತ್ತು ಬಿಳುಪು ಬಣ್ಣಗಳ ಒಟ್ಟುಗಳವೆ, ಕಾಲು ಮತ್ತು ಕೊಕ್ಕು ಮಾಸಲು ಕೆಂಪು, ಮತ್ತೊಂದು ಹಕ್ಕಿಯು ಬೂದು ಬಣ್ಣಕ್ಕಿದೆ, ಕತ್ತಿನಮೇಲೆ ಹಸುರು, ಊದ, ಕೆಂಪು ಮಿಶ್ರವಾಗಿದೆ. ಕಾಲು ಕೊಕ್ಕು ಮಾಸಲು

ಕಪ್ಪು. ಕೆಲವು ಹಕ್ಕಿಗಳು ಗರಿಯನ್ನು ಬೀಸಣಿಗೆಯಂತೆ ಕೆದರಿಕೊಂಡು ಕುತ್ತಿಗೆಯನ್ನು ಹಿಂದಕ್ಕೆ ಬಾಗಿಸಿಕೊಂಡಿದ್ದುವು. ಒಂದು ಹಕ್ಕಿಗೆ ತಲೆಯಮೇಲೆ ಒಂದು ಸಣ್ಣ ಜುಟ್ಟಿತ್ತು.

28—1—09. ಒಂದು ಹೆಣ್ಣು ಹಕ್ಕಿಯು ಬಲು ಚೆನ್ನಾಗಿ ಲಾಗಾ ಹಾಕುತಿತ್ತು. ಮತ್ತೊಂದು ಗೋಡೆಯಬಣ್ಣ ಸುಣ್ಣದ ಚೂರುಗಳನ್ನು ಆರಿಸಿಕೊಳ್ಳುತಿತ್ತು. ಶಾಲೆಯಲ್ಲಿ ಕೆಂಡವನ್ನು ಮಾಡಿ, ಮೊಟ್ಟೆಯ ಚಿಪ್ಪನ್ನು ಕೆಂಡದ ಮೇಲಿಟ್ಟೆವು. ಸ್ವಲ್ಪ ಹೊತ್ತಿನಲ್ಲಿ ಅದು ಕೆಂಪುಬಣ್ಣಕ್ಕೆ ತಿರುಗಿತು, ನೀರನ್ನು ಹಾಕಿದೆವು. ಬೆಳ್ಳಗೆ ನಾವು ಉಪಯೋಗಿಸುವ ಸುಣ್ಣದಹಾಗೆ ಆಯಿತು. ಚಿಪ್ಪನ್ನು ಸುಡುವಾಗ ಒಂದುಬಗೆಯಾದ ವಾಸನೆಯುಂಟಾಯಿತು.

1—2—09. ಹಕ್ಕಿಯ ಗರಿಯನ್ನು ಪರೀಕ್ಷಿಸಿದೆವು. ಹಿಂದಿನ ತುದಿಯು ಟೊಳ್ಳಾಗಿತ್ತು. ಮುಂಭಾಗದಲ್ಲಿ ಬೆಂಡಿನಹಾಗಿರುವ ತಿರುಳಿತ್ತು. ಮಧ್ಯದ ಕಾಂಡದ ಎರಡುಕಡೆಯಲ್ಲಿಯೂ ಮೃದುವಾದ ಸಣ್ಣ ಗರಿಗಳಿದ್ದುವು.

ಈ ವಿಮರ್ಶೆಯ ಕಾಲದಲ್ಲಿ ಮಕ್ಕಳು ಮುಂದಿನ ಎರಡು ಪದ್ಯಗಳನ್ನು ಬಾಯಿಪಾಠ ಮಾಡಿದರು.

ಶಿಬಿಚಕ್ರವರ್ತಿಯ ಕಥೆ.

1 ಭಾ॥ ಷ॥ ಮರದೆಕುಳಿತ ಕಪೋತಪಕ್ಷಿಯ ।
ಕರದಸಾಳ್ವಗೆ ತೋರಿ ಶಬರನು ।
ತ್ವರದೆ ಬಿಡಲದು ಗರುಡನಂದದೆ ಬರದೆ ಬರುತಿರಲೂ ॥
ಬರವಕಂಡು ಕಪೋತ ಪ್ರಾಣಾ ।
ತುರದಿ ಶಿಬಿ ನರಪಾಲಚಂದ್ರನ ।
ಮರೆಯಹೊಕ್ಕುದು ಭೀತಿಯಲಿ ನಂಬಿದೆನು ಸಲಹೆನುತ ॥

2 ಹಿಂದೆ ಸಾಳ್ವನ ಮಾರ್ಗವಿಡಿಸ್ಯೆ ।
ತಂದು ಕಂಡಾ ಶಬರ ನೃಪನೊಲ ।
ವಿಂದಪ್ಪಕಪೋತವನು ಪಿಡಿದೊಯ್ವೆನೆಂದೆನುತ ॥
ಮುಂದೆ ನಿಲಲವನೀಶ ನಾಗ್ರಹ ।
ದಿಂದೆ ಎಲವೊ ನಿರ್ದೋಹಿ ಕ್ಷತ್ರಿಯ ।
ರಂದವಿದು ಮರೆಹೊಕ್ಕ ಪಕ್ಕಿಯನೀವೆನಲ್ಲೆಂದ ॥

ಈ ವಿಮರ್ಶೆಯ ಕಾಲದಲ್ಲಿ ಮಕ್ಕಳಿಗೆ ಪಾರಿವಾಳದ ಹಕ್ಕಿಗಳ ವಿಷಯಕವಾದ ಕೆಲವು ಕಥೆಗಳು ಹೇಳಲ್ಪಟ್ಟವು. ಅವುಗಳಲ್ಲೊಂದನ್ನು ಮುಂದೆ ಬರೆಯುವೆವು.

ಒಂದು ಗೂಡಿನಲ್ಲಿ ಅನೇಕ ಪಾರಿವಾಳದ ಹಕ್ಕಿಗಳು ಸುಖದಿಂದ ವಾಸಮಾಡುತಿದ್ದುವು. ಪ್ರತಿದಿನವೂ ಯಜಮಾನಿಯು ಅಂಗಳಕ್ಕೆ ಒಂದು ಗೂಡಿನ ಬಾಗಿಲನ್ನು ತೆರೆದು ಅವಕ್ಕೆ ಸೊಗಸಾದ ತಿಂಡಿಯನ್ನು ಹಾಕುತಿದ್ದಳು. ಈ ಗೂಡಿನಲ್ಲಿದ್ದ ಬೀಸಣಿಗೆಯ ಪುಕ್ಕವಿರುವ ಒಂದು ಸಣ್ಣ ಬಿಳಿಯ ಪಾರಿವಾಳದ ಹಕ್ಕಿಯು ಒಂದುದಿವಸ ಹೀಗೆ ಯೋಚಿಸಿತು. "ನನ್ನಿಂದ ಯಜಮಾನಿಗೆ ಯಾವ ಪ್ರಯೋಜನವೂ ಇಲ್ಲವಲ್ಲ! ನನಗೆ ವಿಶೇಷ ಬುದ್ಧಿಯಿಲ್ಲ, ಕೋಳಿಗಳಂತೆ ಯಜಮಾನಿಗೆ ಮೊಟ್ಟೆಗಳನ್ನು ಕೊಡುವುದಿಲ್ಲ. ಹಸುವಿನಂತೆ ಹಾಲು, ಮೊಸರು, ಬೆಣ್ಣೆಗಳನ್ನು ಕೊಡುವುದಿಲ್ಲ. ಕೋಗಿಲೆಯಂತೆ ಹಾಡುವುದಿಲ್ಲ; ಬೆಕ್ಕಿನಂತೆ ಇಲಿಯ ಹಾವಳಿಯನ್ನು ತಪ್ಪಿಸುವುದಿಲ್ಲ; ನಾಯಿಯಂತೆ ಮನೆ ಕಾಯುವುದಿಲ್ಲ; ಅಯ್ಯೋ! ನಾನು ಯಾವಕೆಲಸಕ್ಕೂ ಪ್ರಯೋಜನವಿಲ್ಲವಲ್ಲ! ಒಳ್ಳೇದು, ಈ ಅಂಗಳದ ಹಿಂಭಾಗದಲ್ಲಿರುವ ಮರದ ಪೊಟರೆಯಲ್ಲಿ ವಾಸಮಾಡುವ ಗೂಬೆಯನ್ನಾದರೂ ಕೇಳುವೆನು; ಈ ಗೂಬೆಗೆ ವಿಶೇಷ ಬುದ್ಧಿ ಇರುವುದೆಂದು ಜನರು ಹೇಳಿಕೊಳ್ಳುವರು; ಒಳ್ಳೇದು; ನೋಡೋಣ," ಹೀಗೆ ಅಂದುಕೊಂಡು ಗೂಬೆಯಿರುವ ಪೊಟರೆಯ ಬಳಿಗೆ ಹೋಗಿ ಹಗಲೆಲ್ಲಾ ಅದನ್ನು ನೋಡುತ ಕುಳಿತಿದ್ದಿತು. ಗೂಬೆಯು ತನ್ನ ಬಾಗಿರುವ ಕೊಕ್ಕು, ದೊಡ್ಡದಾಗಿ ಗುಂಡಾಗಿರುವ ಕಣ್ಣುಗಳುಳ್ಳ ತನ್ನಮುಖವನ್ನು ಹಕ್ಕಿಯಕಡೆಗೆ ತಿರುಗಿಸಿತೇ ಹೊರ್ತು ಅದರಸಂಗಡ ಒಂದು ಮಾತನ್ನೂ ಆಡಲಿಲ್ಲ. ಆದಿವಸವೆಲ್ಲಾ ಹಕ್ಕಿಗೆ ಆಹಾರವೇ ಇಲ್ಲದೆಹೋಯಿತು. ಸಾಯಂಕಾಲವಾಗುತಲೆ ಗೂಬೆಯು ಹಾರಿಯೇಹೋಯಿತು. ಆಮೇಲೆಹಕ್ಕಿಯು "ಗೂಬೆಗೆ ಎಷ್ಟು ಬುದ್ಧಿಯಿದ್ದರೇನುಪ್ರಯೋಜನ? ಆ ಬುದ್ಧಿಯಿಂದ ಇತರರಿಗೆ ಉಪಕಾರ ಮಾಡುವದಿಲ್ಲ." ಹೀಗೆ ಅಂದುಕೊಂಡು ವ್ಯಸನದಿಂದ ಗೂಡಿಗೆ ಹೋಯಿತು. ಮರುದಿವಸ ಬೆಳಿಗ್ಗೆ ಹಕ್ಕಿಯುವ್ಯಸನವು ಹಿಂದಿನದಿನದಂತೆಯೇ ಇತ್ತು. ಯಜಮಾನಿಯು ಹಕ್ಕಿಗಳನ್ನುನೋಡಲು ಬಂದಾಗ ಇದು ಅವಳಬಳಿಗೆಹೋಗದೆ ಒಂದು ಮೂಲೆಯಲ್ಲಿ ತಲೆಯನ್ನು ಬಾಗಿಸಿಕೊಂಡು ಅವಿತುಕೊಂಡಿತ್ತು. "ತನ್ನ ಮುದ್ದು ಹಕ್ಕಿಗಳಲ್ಲೊಂದಕ್ಕೆ ರೋಗ ಬಂದಿರುವುದಲ್ಲಾ" ಎಂದು ವ್ಯಸನಪಡುತ ಆಕೆಯು ಹೊರಟುಹೋದಳು. ಇದೇ ಅಂಗಳದಲ್ಲಿ ಎಲ್ಲರಲ್ಲೂ ವಿಶೇಷ ಪ್ರೀತಿಯುಳ್ಳ ಕಷ್ಟ ಸುಖಗಳನ್ನು ಚೆನ್ನಾಗಿ ಅರಿತಿದ್ದ ಒಂದು ಮುದಿಬಾತುಕವು ಇತ್ತು. ಇದಕ್ಕೆ ನೂರುವರ್ಷವಾಗಿತ್ತು, ಪ್ರಪಂಚವನ್ನೆಲ್ಲಾ ಚೆನ್ನಾಗಿ ನೋಡಿತ್ತು. ಇದು ಪಾರಿವಾಳದಹಕ್ಕಿಯು ಕೊರಗುತಿರುವುದನ್ನು ಕಂಡು ತನ್ನಬಳಿಗೆ ಅದನ್ನು ಕರೆಸಿತು. ಆ ಹಕ್ಕಿಯು ಬಂದೊಡನೆಯೇ "ಮಗುವೇ! ನಿನ್ನೇನು ಸಂಕಟ? ಬಿಸಿಲು ಚೆನ್ನಾಗಿ ಕಾಯುತ್ತಿದೆ! [illegible], [illegible], [illegible] ಬೇಕಾದಷ್ಟಿವೆ, [illegible] ನೀ ಕಾಣುವುದು ಏತಕ್ಕೆ?

ಹಕ್ಕಿ:—ನನ್ನಿಂದ ಪ್ರಪಂಚದಲ್ಲಿ ಏನೂ ಉಪಯೋಗವಿಲ್ಲ. ಇತರ ಹಕ್ಕಿಗಳೂ, ಪ್ರಾಣಿಗಳೂ ಯಾವುದಾದರೂ ಒಂದು ಕೆಲಸಕ್ಕೆ ಬರುವುವು; ಆದರೆ ನನ್ನಿಂದ ಯಾವಕೆಲಸವೂ ನಡೆಯುತ್ತಿಲ್ಲ.

ಬಾತು:—ಬುದ್ಧಿಯಿಲ್ಲದ ಹಕ್ಕಿಯೇ! ಪ್ರಯೋಜನವಿಲ್ಲವೆಂದು ನೀನು ಹೇಗೆ ಹೇಳುವೆ, ದೇವರು ಸೃಷ್ಟಿಸಿರುವ ಪ್ರತಿಯೊಂದು ವಸ್ತುವೂ ಯಾವುದಾದರೂ ಒಂದು ಕೆಲಸಕ್ಕೆ ಬರುವುದು; ಕುದುರೆಯಂತಹ ಬಲವಾದ ಪ್ರಾಣಿಗಳು ವಿಶೇಷ ಕಷ್ಟಕೆಲಸವನ್ನು ಮಾಡುವುವು; ನಮ್ಮಂತಹ ಚಿಕ್ಕ ಪುಟ್ಟ ಪ್ರಾಣಿಗಳು ತಮ್ಮ ಕೈಲಾದ ಸಣ್ಣಸಣ್ಣ ಕೆಲಸಗಳನ್ನು ಮಾಡುವುವು; ಕೆಲವು ತಮ್ಮ ಮಧುರವಾದ ಧ್ವನಿಯಿಂದ ಹಾಡುವುವು. ನಿನ್ನಂತಹ ಅಂದವಾದ ಕೆಲವು ಹಕ್ಕಿಗಳು ತಮ್ಮ ಸೊಬಗಿನಿಂದ ಸಂತೋಷಪಡಿಸುವುವು; ನಿನ್ನ ಪುಕ್ಕವು ಎಷ್ಟು ಚೆನ್ನಾಗಿರುವುದು ಬಲ್ಲೆಯಾ?

ಹಕ್ಕಿ:—ನನ್ನ ಪುಕ್ಕದ ವಿಷಯವನ್ನು ನಾನು ಮರೆತೇ ಬಿಟ್ಟೆನು.

ಬಾತು:—ನಿನಗಿಲ್ಲದಿರುವುದನ್ನು ನೀನು ಬಯಸುವುದರಲ್ಲಿ ಇದ್ದುದನ್ನು ಮರತೇ ಬಿಟ್ಟು, ನಿನಗಿರುವುದನ್ನು ಚೆನ್ನಾಗಿ ಇಟ್ಟುಕೊಂಡಿಲ್ಲ. ನೋಡು, ನಿನ್ನ ಪುಕ್ಕವೆಲ್ಲಾ ಕೊಳೆಯಾಗಿ ಕೆಟ್ಟುಹೋಗಿದೆ. ಈದಿನ ಯಜಮಾನಿಯು ಅಂಗಳಕ್ಕೆ ಬಂದಾಗ ನೀನು ಅವಳ ಹತ್ತಿರಕ್ಕೆ ಹೋಗದೆ ಇದ್ದುದಕ್ಕಾಗಿ ಆಕೆಯು ಬಲು ವ್ಯಸನಪಟ್ಟಳು. ಈಗ ಮನೆಗೆಹೋಗು, ಇನ್ನುಮೇಲೆ ನಿನಗೆ ಇಲ್ಲದುದಕ್ಕೆ ಸುಮ್ಮನೆ ಅಳಬೇಡ, ಇರುವ ಭಾಗ್ಯದಿಂದ ತೃಪ್ತಿಯನ್ನು ಹೊಂದು.

ಹಕ್ಕಿಯು ಬಾತನ್ನು ವಂದಿಸಿ ಮನೆಗೆ ಹೋಗಿ ತನ್ನ ಗರಿಗಳನ್ನು ಸರಿಮಾಡಿಕೊಂಡಿತು. ಮರುದಿನ ಯಜಮಾನಿಯು ಅಂಗಳಕ್ಕೆ ಬಂದೊಡನೆಯೇ ಅವಳ ಹತ್ತಿರಕ್ಕೆ ಇದು ಓಡಿಹೋಯಿತು. ತನ್ನ ಮುದ್ದುಹಕ್ಕಿಯು ಸ್ವಸ್ಥವಾಗಿರುವುದನ್ನು ಕಂಡು ಆಕೆಗೆ ಬಲು ಸಂತೋಷವಾಯಿತು.

ಈ ವಿಮರ್ಶೆಯ ಕಾಲದಲ್ಲಿ ಮಕ್ಕಳು ಇದಕ್ಕೆ ಸಂಬಂಧಪಟ್ಟ ಆಟಗಳನ್ನು ಈ ಕೆಳಗಿನ ಹಾಡುಗಳನ್ನು ಹೇಳಿಕೊಂಡು ಆಡಿದರು.

ಮುದ್ದು ಹಕ್ಕಿಯ ಆಟ.

1— ಮುದ್ದುಹಕ್ಕಿ ಬಂದ್ಯೆ । ಸುದ್ದಿ ಏಂ ತಂದ್ಯೆ ॥
ಅಮ್ಮನೇನಂಪೇಳ್ದಳ್ । ನಮ್ಮೋಳ್ ನೀನಾಡ್ಯೆ ॥

2 ತಂದೆಮುತ್ತಂ ಮತ್ತಂ । ಒಂದೇಲೇಖನಮಂ ॥
ಆದನೀನೊಲ್ಲದಿರೆ । ಮೊದಲೇ ಕೊಂಡೊಯ್ವೆಂ ॥

3 ನಮ್ಮಪ್ರೀತಿಯನ್ನು । ಅಮ್ಮನೋಳ್ ತಿಳಿಸೈ ॥
ಹಾರಿಹೋಗೈ ಬೇಗ । ಪಾರಿವಾಳವೇ ॥

(2) ಪಾರಿವಾಳದ ಹಕ್ಕಿಗಳ ಆಟ.

ಗೂಡೀನಿಂದ ಪಾರೀವವು । ಓಡುವಂತೆ ತೆರೆಯುವಾ ॥
ಹೊಲಗಳತ್ತ ಹಾರಲೀ । ನೆಳಲಿನತ್ತಸೇರಲೀ । ಓಡಿಬಂದಬಳಿಕಲೀ ।
ಗೂಡಿನಿಂದುಹೊಚ್ಚುವ । ಎಲ್ಲವುಕೂಡಿ। ಮೆಲ್ಲನೆಹಾಡಿ ।
ಕಂಡುದನೆಲ್ಲ । ಕೊಂಡಾಡುವುವು ।
ರುಕು, ರುಕೂ, ರುಕೂ, ರುಕೂ, ರುಕು, ರುಕೂ, ರುಕೂ, ರುಕೂ, ॥

(3) ತೋಟದಲ್ಲಿ ಹಕ್ಕಿಗಳು ಕಾಳಾರಿಸಿಕೊಳ್ಳುವ ಆಟ.

1— ಹಕ್ಕಿತೋಟದಲ್ಲೀ । ಮಿಕ್ಕುನೆರೆಯುತಾ ॥
ಇಂಪುಗೂಡಿಹಾಡೀ । ಸೊಂಪನೀವವೂ ।
ಲಲಲಾ, ಲಲಲಾ, ಲಲಲಾಲ, । ಲಾಲಲಾಲ, ಲಲಲಲಾ ॥

2 ಹಕ್ಕಿತೋಟದಲ್ಲೀ । ಚಿಕ್ಕಗೂಡನು ॥
ಮಾಡಿನಿದ್ದೆಗೈಯಲ್ । ಕೂಡಿನಲಿವವೂ ॥
ಲಲಲಾ, ಲಲಲಾ, ಲಲಲಾ, ಲ, । ಲಾಲ, ಲಾಲ, ಲಲಲಾ ॥

3 ಹಕ್ಕಿತೋಟದಲ್ಲೀ । ಸೊಕ್ಕಿಹಾಡುತೇ ॥
ನಿದ್ದೆಗೈಯುತಲ್ಲೀ । ಇದ್ದು ಸುಖಿಪವು ॥
ಲಲಲಾ, ಲಲಲಾ, ಲಲಲಾ, ಲ, । ಲಾಲ, ಲಾಲ, ಲಲಲ, ಲಾ ॥

(4) ಕೋಗಿಲೆಯ ಆಟ.

ಎಳೆಯರೆ ನೀಪೇಳಿ । ಉಲಿವುದು ಪಿಕಂ ॥
ಎಳೆಬಿಸಿಲಿನಲ್ಲಿ । ಪೊಳೆವುದುಮುಗಿಲ್ ॥
ಏಳೇಳ್ । ಏಳೇಳ್ । ಉಲಿವುದು ಪಿಕಂ ॥
ಕುಕಿಲ್ । ಕುಕಿಲ್ । ಕುಕಿಲ್ ಕುಕಿಲ್, ಕುಕಿಲ್ ॥

ಈ ವಿಮರ್ಶೆಯ ಕಾಲದಲ್ಲಿ ಕಿಂಡರ್‌ಗಾರ್ಟನ್ ಕೈಕೆಲಸಗಳು, ಆಟಗಳು ಮುಂತಾದುವು ಇದಕ್ಕೆ ಸಂಬಂಧಿಸಲ್ಪಟ್ಟುವು.
ಹೀಗೆ ಸಂಬಂಧಿಸಲ್ಪಟ್ಟ ರೀತಿಯು ಮುಂದಿನ ಪಟ್ಟಿಯಿಂದ ಕಾಣುವುದು.

ನಂ	ಕೆಲಸಗಳು	I ನೆಯ ತರಗತಿ.	B ತರಗತಿ.	A ತರಗತಿ.
1	ಡ್ರಾಯಿಂಗ್.	ಮೊಟ್ಟೆ, ಗೂಡು, ನೀರಿಡುವ ಪಾತ್ರೆ, ಕಾಳಿಟ್ಟಿರುವ ಶ್ರಾವೆ, ಹಕ್ಕಿಯ ಮರಿ, ಹಕ್ಕಿಯ ಗರಿ, ಹಕ್ಕಿ ಹಕ್ಕಿಗೆ ಹಾಸುವ ಹುಲ್ಲು, ನೀರು ತರುವಪಾತ್ರೆ.	ಮೊಟ್ಟೆ,ಗೂಡು,ನೀರಿಡುವಪಾತ್ರೆ, ಕಾಳಿಟ್ಟಿರುವಶ್ರಾವೆ, ಹಕ್ಕಿಯಮರಿ ಹಕ್ಕಿಯ ಗರಿ, ಹಕ್ಕಿ, ಹಕ್ಕಿಗೆ ಹಾಸುವ ಹುಲ್ಲ, ನೀರು ತರುವ ಪಾತ್ರೆ.	ಮೊಟ್ಟೆ, ಗೂಡು, ನೀರಿಡುವ ಪಾತ್ರೆ, ಕಾಳಿಟ್ಟಿರುವ ಶ್ರಾವೆ, ಹಕ್ಕಿಯಮರಿ, ಹಕ್ಕಿಯ ಗರಿ, ಹಕ್ಕಿಗೆ ಹಾಸುವ ಹುಲ್ಲು, ನೀರು ತರುವ ಪಾತ್ರೆ.
2	ಬ್ರಷ್‌ವರ್ಕ್.	ಮೊಟ್ಟೆ, ನೀರಿಡುವ ಪಾತ್ರೆ, ಗೂಡು, ಗರಿ, ಹಕ್ಕಿ		
3	ಕ್ಲೇಮೊಡಲಿಂಗ್.	ಮೊಟ್ಟೆ, ನೀರಿಡುವಪಾತ್ರೆ, ಹಕ್ಕಿಗೆ ಹಾಕುವ ಕಾಳುಗಳು, ಮರಿ, ಕಾಳಿಡುವ ತಟ್ಟೆ, ಹಕ್ಕಿ , ನೀರು ತರುವ ಪಾತ್ರೆ.	ಮೊಟ್ಟೆ, ನೀರಿಡುವ ಪಾತ್ರೆ, ಹಕ್ಕಿಗೆ ಹಾಕುವ ಕಾಳುಗಳು, ಮರಿ, ಕಾಳಿಡುವ ತಟ್ಟೆ.	ಮೊಟ್ಟೆ, ನೀರಿಡುವಪಾತ್ರೆ, ಹಕ್ಕಿಗೆ ಹಾಕುವ ಕಾಳುಗಳು.
4	ಕಾಗದ ಮಡಿಸುವುದು	ಕಾಳು ಹಾಕುವ ಬಟ್ಟಲುಗಳು, ನೀರಿಡುವಪಾತ್ರೆ,ಗೂಡು, ನೀರು ತರುವ ಪಾತ್ರೆಗಳು.	ಕಾಳು ಹಾಕುವ ಬಟ್ಟಲುಗಳು ನೀರಿಡುವ ಪಾತ್ರೆ, ಗೂಡು, ನೀರು ತರುವ ಪಾತ್ರೆಗಳು.	ಕಾಳು ಹಾಕುವ ಬಟ್ಟಲುಗಳು ನೀರಿಡುವ ಪಾತ್ರೆ, ಗೂಡು, ನೀರುತರುವ ಪಾತ್ರೆಗಳು.

ನಂ	ಕೆಲಸಗಳು.	I ನೆಯ ತರಗತಿ.	B ತರಗತಿ.	A ತರಗತಿ.
5	ಕಾಗದ ಕತ್ತರಿಸುವುದು.	ಮೊಟ್ಟೆ, ಹಕ್ಕಿ, ಮರದಮೇಲೆ ಹಕ್ಕಿ ಗೂಡು, ಪಾತ್ರೆ, ಕಂಭ, ಏಣಿ, ಹಕ್ಕಿಗಳು ಕುಳಿತುಕೊಳ್ಳುವ ಮನೆ, ಹಾರುತಿರುವ ಹಕ್ಕಿ.	ಮೊಟ್ಟೆ, ಹಕ್ಕಿ, ಮರದಮೇಲೆ ಹಕ್ಕಿ ಗೂಡು, ಪಾತ್ರೆ, ಕಂಭ, ಏಣಿ, ಹಕ್ಕಿಗಳು ಕುಳಿತುಕೊಳ್ಳುವ ಮನೆ, ಹಾರುತಿರುವ ಹಕ್ಕಿ.	
6	ಸೂಲಿಡುವುದು.			
7	V. VI ನೇಕರಣಗಳು.	ಮನೆ, ಗೂಡು, ಕಂಭ, ಏಣಿ, ಪಾತ್ರೆ, ತೊಟ್ಟಿ, ಭಾವಿ.	……	ಪಾತ್ರೆ, ಗೂಡು, ಮೊಟ್ಟೆ, ಮನೆ, ಏಣಿ ಕಂಭ.
8	III. IV ನೇಕರಣಗಳು	… …	ಮನೆ, ಗೂಡು, ಪಾತ್ರೆ, ಕಂಭ, ಏಣಿ, ನೀರುತೊಟ್ಟಿ, ಭಾವಿ,	ಮನೆ, ಗೂಡು, ಪಾತ್ರೆ, ಕಂಭ ಏಣಿ, ನೀರುತೊಟ್ಟಿ, ಭಾವಿ.
9	ಬಳೆ ಮತ್ತು ಕಡ್ಡಿ.	… …	ಮೊಟ್ಟೆ, ಗೂಡು, ಪಾತ್ರೆಗಳು, ಮನೆ, ಭಾವಿ, ಏಣಿ,	ಮೊಟ್ಟೆ, ಗೂಡು, ಪಾತ್ರೆಗಳು, ಮನೆ, ಭಾವಿ, ಏಣಿ.
10	ದಬ್ಬೆಗಳು.	ಗೂಡು, ಮನೆ, ಏಣಿ,		
11	ಮರಳು ಕೆಲಸ.	…	ಚಳಿಗಾಲದಲ್ಲಿ ಪ್ರಕೃತಿಯ ಸ್ವರೂಪವನ್ನು ತೋರಿಸುವ ಮರಳಿನ ಆಟ, ಪಾರಿವಾಳದ ಹಕ್ಕಿಯ ಗೂಡು, ಮೊಟ್ಟೆ.	ಚಳಿಗಾಲದಲ್ಲಿ ಪ್ರಕೃತಿಯ ಸ್ವರೂಪವನ್ನು ತೋರಿಸುವ ಮರಳಿನ ಆಟ, ಪಾರಿವಾಳದ ಹಕ್ಕಿಯ ಗೂಡು, ಮೊಟ್ಟೆ,
12	ಮಣಿ ಕೆಲಸ.			ಗೂಡಿನ ಮುಂಭಾಗ, ತಂತಿಯ ಮೇಲೆ ಪೋಣಿಸಿದ ಹಕ್ಕಿ

ನಂ	ಕೆಲಸಗಳು.	I ತರಗತಿ.	B ತರಗತಿ.	A ತರಗತಿ.
13	ಕಥೆ.	(1) ಪಾರಿವಾಳದ ಹಕ್ಕಿ, ಗಿಡಗ, ಮತ್ತು ಶಿಬಿ ಚಕ್ರವರ್ತಿ ಕಥೆ, (2) ಪಾರಿವಾಳದ ಹಕ್ಕಿಯು ಪಟ್ಟಣವನ್ನು ಕಾಪಾಡಿದ್ದು. (3) ಬೀಸಣಿಗೆಯು ಪುಕ್ಕದ ಪಾರಿವಾಳದ ಹಕ್ಕಿ. (4) ಪಾರಿವಾಳದಹಕ್ಕಿ ಮತ್ತು ಇರುವೆ. (5) ಪಾರಿವಾಳದ ಹಕ್ಕಿಗಳ ಮುಂದಿನ ಯೋಚನೆ. (6) ಪಾರಿವಾಳ ಹಕ್ಕಿಯೂ, ಬೇಡನೂ, ಗಿಡಗವೂ. (7) ಮುತ್ತಮ್ಮನೂ ಅವಳ ಪಾರಿವಾಳದ ಹಕ್ಕಿಯೂ. (8) ಚಿತ್ರಗ್ರೀವನ ಕಥೆ.		
14	ಪದ್ಯಗಳು.	ಪಾರಿವಾಳದ ಹಕ್ಕಿಗಳ ವಿಷಯಕವಾದ ಎರಡು ಪದ್ಯಗಳು.		
15	ಆಟಗಳು.	(1) ಪಾರಿವಾಳದ ಹಕ್ಕಿಯ ಆಟ. (2) ಮುದ್ದುಹಕ್ಕಿಯು ಆಟ, (3) ಕೋಗಿಲೆಯು ಆಟ. (4) ತೋಟದಲ್ಲಿ ಹಕ್ಕಿಗಳ ಆಟ.		

ನಾಥಮುನಿ.

ಯೂಯೊಕ್ಕೊಂಡಾರ್, ಕುರುಕಾಯ್ ಕಾವಲಪ್ಪನ್, ನಂಬಿ ಕರುಣಾಕರ ದಾಸರ್, ಇರುತಿರುವಡೆಯಾರ್, ತಿರುಕನ್ನಮಂಗಾಯ್ ಯಂಡನ್, ವನಮಾಮಲಾಯ್ ದೇವಿಯಂಡನ್, ಯುರಪ್ ಪಟ್ಟರ್ ಅಜ್ಜನ್ ಪಿಳ್ಳೆ, ಮತ್ತು ಸೊಕಟೂರ್ ಆಳ್ವಾನ್ ಎಂಬ ಎಂಟುಜನರು ನಾಥಮುನಿಯ ಶಿಷ್ಯರಾಗಿದ್ದರು. ಇವರು ಗುರುವಿನಲ್ಲಿ ಪರಮ ಭಕ್ತಿಯುಳ್ಳವರಾಗಿ ಆತನ ಸೇವೆಯಲ್ಲಿ ನಿರತರಾಗಿದ್ದರು. ಸದಾಚಾರಸಂಪನ್ನರಾಗಿ ಯೋಗ್ಯರಾಗಿದ್ದುದರಿಂದ ಇವರಿಗೆ ನಾಥಮುನಿಯು ಮತ ತತ್ವಗಳನ್ನೂ ದಿವ್ಯಪ್ರಬಂಧಗಳನ್ನೂ ಪುರುಷಾರಣ್ಯಾನ್ಯಾಯತತ್ವಗಳನ್ನೂ ಯೋಗ ರಹಸ್ಯಗಳನ್ನೂ ಉಪದೇಶಿಸಿದನು. ತಾನು ಇತರಕಾರ್ಯಗಳನ್ನು ಬಿಟ್ಟು ನಿಶ್ಚಿಂತನಾಗಿ ಯೋಗಾಸನದಲ್ಲಿ ಕುಳಿತು ಶ್ರೀ ಪರಮಾತ್ಮನ ಪ್ರತಿಮೆಯನ್ನು ಮನಸ್ಸಿನಲ್ಲಿಟ್ಟು ಆತನನ್ನು ಧ್ಯಾನಿಸಲಾರಂಭಿಸಿದನು.

ಸ್ವಲ್ಪಕಾಲದಲ್ಲಿಯೇ ಈತನಿಗ ಸಮಾಧಿಯು ಸಿದ್ಧಿಸಿತು. ಈತನು ಸಮಾಧಿಸ್ಥಿತಿಯಲ್ಲಿ ಕುಳಿತಿರುವುದು ಜನಜನಿತವಾಗಿ ಕಡೆಗೆ ಚೋಳರಾಜನಕಿವಿಗೂ ಬಿದ್ದಿತು. ಮನ್ನನಾರ್ ಸ್ವಾಮಿಯನ್ನೂ ಮತ್ತು ಮಹಾ ಪುರುಷನಾದ ನಾಥಮುನಿಯನ್ನೂ ನೋಡಬೇಕೆಂದು ಕುತೂಹಲವುಳ್ಳವನಾಗಿ ಆ ರಾಜನು ಪರಿವಾರಸಮೇತನಾಗಿ ತನ್ನ ದೇಶವನ್ನು ಬಿಟ್ಟು ಹೊರಟು ವೀರನಾರಾಯಣಪುರಕ್ಕೆ ಬಂದನು. ಅಲ್ಲಿ ಧ್ಯಾನಮಾಡುತ್ತಾ ಕುಳಿತಿದ್ದ ಯೋಗಿಯಾದ ನಾಥಮುನಿಯ ದರ್ಶನವನ್ನು ಮಾಡಿ ಪರಮಾಶ್ಚರ್ಯವನ್ನೂ ಆನಂದವನ್ನೂ ಹೊಂದಿ ಆತನನ್ನು ಸನ್ಮಾನಿಸಿ ಪುನಃ ತನ್ನ ರಾಜಧಾನಿಗೆ ಅರಸು ಹೊರಟುಹೋದನು.

ಇತ್ತಲಾಗಿ ನಾಥಮುನಿಯು ತಾನು ಕುಳಿತಿದ್ದ ಸ್ಥಳದಿಂದೆದ್ದು ಏಕಾಯೇಕಿ ಓಡಲಾರಂಭಿಸಿದನು. ಈ ವಿಚಿತ್ರ ಕಾರ್ಯವನ್ನು ಕಂಡು ಆತನ ಶಿಷ್ಯರು ಆವನ ಬೆನ್ನಟ್ಟಿ ಓಡಿದರು. ಕಡೆಗೆ ನಾಥಮುನಿಯು ಗಂಗೈಕೊಂಡ ಚೋಳಪುರಂ ಯೆಂಬೂರಿನಲ್ಲಿ ನಿಂತನು. ಅವರೂ ಅಲ್ಲಿಯೇ ನಿಂತು ನೀನು ಏತಕ್ಕೆ ಹೀಗೆ ಓಡಿದೆ ಎಂದು ಕೇಳಿದರು. ಶ್ರೀ ಕೃಷ್ಣನೂ ಆತನ ಹೆಂಡತಿಯರೂ ಹೋಗುತ್ತಿದ್ದುದನ್ನು ಕಂಡು ಅವರನ್ನು ಹಿಂಬಾಲಿಸಿದೆಯೆಂದು ಪ್ರತ್ಯುತ್ತರ ಕೊಟ್ಟನು. ಈತನಿಗೆ ಯೋಗಾಭ್ಯಾಸದಿಂದ ಹುಚ್ಚುಹಿಡಿಯಿತೆಂದು ತಮ್ಮೊಳಗೆ ತಾವು ಮಾತಾಡಿಕೊಂಡು ಆಬಳಿಕ ನಾಥಮುನಿಯನ್ನು ಕುರಿತು ಗುರುಗಳೇ, ತಾವು ಯೋಗಾಭ್ಯಾಸವನ್ನು ಬಿಟ್ಟು ಮನ್ನನಾರ್ ಸ್ವಾಮಿಯನ್ನು ಆರಾಧಿಸುತ್ತಲೂ ನಮಗೆಲ್ಲಾ ಸದುಪದೇಶವನ್ನು ಮಾಡುತ್ತಲೂ ಇರಬೇಕು; ತಾವು ಯೋಗದಲ್ಲಿ ಕುಳಿತರೆ, ದೇವಾರಾಧನೆಯು ತಪ್ಪಿಹೋಗುತ್ತದೆ; ಆದುದರಿಂದ ಇನ್ನುಮೇಲೆ ಯೋಗಾಭ್ಯಾಸವನ್ನು ಬಿಟ್ಟು ಜಾಗ್ರತಾವಸ್ಥೆಯಲ್ಲಿರಬೇಕೆಂದು ಪ್ರಾರ್ಥಿಸಿದರು.

ಯೋಗಾಭ್ಯಾಸಮಾಡುವುದರಿಂದ ನನಗೆ ಹುಚ್ಚು ಹಿಡಿಯುತ್ತದೆಂದು ಇವರು ಭಾವಿಸಿರುವರೆಂದು ತನ್ನ ಜ್ಞಾನದೃಷ್ಟಿಯಿಂದ ನಾಥಮುನಿಯು ತಿಳಿದು ಸಧ್ಯಕ್ಕೆ ಇವರ ಪ್ರಾರ್ಥನೆಯಂತೆ ಮಾಡಬೇಕೆಂದು ಯೋಚಿಸಿ ನೀವು ಕೋರಿದಂತಾಗಲಿ ಎಂದು ಹೇಳಿ ಅತನು ಪುನಃ ವೀರನಾರಾಯಣಪುರಕ್ಕೆ ಬಂದು ಅಲ್ಲಿ ನೆಲೆಸಿರುವ ರಾಜಗೋಪಾಲಸ್ವಾಮಿಯನ್ನು ಆರಾಧಿಸುತ್ತಿದ್ದನು. ಈರೀತಿಯಲ್ಲಿ ಕೆಲವು ವರ್ಷಗಳು ಕಳೆದವು. ಒಂದಾನೊಂದು ದಿವಸ ನಾಥಮುನಿಯು ತನ್ನ ಶಿಷ್ಯರಲ್ಲಿ ಕೆಲವರನ್ನು ಹತ್ತಿರಕ್ಕೆ ಕರೆದು ಅಂತರಂಗದಲ್ಲಿ ಅವರಿಗೆ ಯೋಗಶಾಸ್ತ್ರವನ್ನು ಉಪದೇಶಿಸಿದನು. ಅಷ್ಟಾಂಗಗಳಾದ ಯಮ ನಿಯಮ ಆಸನಪ್ರಾಣಾಯಾಮ ಪ್ರತ್ಯಾಹಾರ ಧಾರಣ ಧ್ಯಾನ ಸಮಾಧಿಗಳ ರಹಸ್ಯಗಳನೆಲ್ಲಾ ಹೇಳಿಕೊಟ್ಟನು. ಆ ಶಿಷ್ಯರು ಯೋಗವಿಷಯವನ್ನು ಕುರಿತು ಅನೇಕ ಪ್ರಶ್ನೆಗಳನ್ನು ಕೇಳಿದರು. ಅವುಗಳಿಗೆಲ್ಲಾ ವಿಚಾರಪೂರ್ವಕವಾಗಿ ಸದುತ್ತರಗಳನ್ನು ಕೊಟ್ಟು ಅವರ ಸಂಶಯವನ್ನು ಪರಿಹರಿಸಿದನು.

ಆಬಳಿಕ ನಾಥಮುನಿಯು ತನ್ನ ಮುಖ್ಯಶಿಷ್ಯನಾದ ಕುರುಗೈಕಾವಲಪ್ಪನ್ ಎಂಬುವನನ್ನು ಕರೆದು ನೀನು ಯೋಗವನ್ನು ಕಲಿತುಕೊ ಅದನ್ನು ಹೇಳಿಕೊಡುತ್ತೇನೆಂದು ಹೇಳಿದನು. ಅದಕ್ಕವನು ಗುರುವೆ, ನನ್ನ ಶರೀರವಿರುವವರೆಗೂ ಮನ್ನನಾರ ಸ್ವಾಮಿಯನ್ನು ಸೇವಿಸಬೇಕೆಂದು ಇದ್ದೇನೆ ; ಯೋಗದಲ್ಲಿ ಕುಳಿತರೆ, ಸ್ವಾಮಿಯನ್ನಾರಾಧಿಸಲಿಕ್ಕಾಗುವುದಿಲ್ಲ. ಆದುದರಿಂದ ನನಗೆ ದೇವರನ್ನು ಆರಾಧಿಸುವಂತೆ ಅಪ್ಪಣೆ ಕೊಡು ಎಂದು ಕೇಳಿಕೊಂಡನು. ಈ ಶಿಷ್ಯನಿಗೆ ಜ್ಞಾನಯೋಗದಲ್ಲಿ ಅಭಿಲಾಷೆ ಇಲ್ಲದಿರುವುದನ್ನೂ ಭಕ್ತಿಪ್ರಪತ್ತಿಗಳಲ್ಲಿ ಅಭಿರುಚಿಯಿರುವುದನ್ನೂ ತಿಳಿದು ನಾಥಮುನಿಯು, ನೀನು ದೇವರ ಆರಾಧನೆಯನ್ನೇ ಮಾಡಿಕೊಂಡಿರು, ಪ್ರಬಂಧಗಳನ್ನು ಅಭ್ಯಾಸಿಸುತ್ತಿರು ಎಂದು ಅವನಿಗೆ ಅಪ್ಪಣೆಕೊಟ್ಟನು.

ಆಮೇಲೆ ನಾಥಮುನಿಯು ತನ್ನ ಮಗನಾದ ಈಶ್ವರಮುನಿಯನ್ನು ಸಮೀಪಕ್ಕೆ ಕರೆದು, ನಿನಗೊಬ್ಬ ಮಗನು ಹುಟ್ಟುವನು, ಅವನಿಗೆ ಯಾಮುನೈತುರೈವಾರ್ ಎಂದು ಹೆಸರನ್ನಿಡು ಎಂದು ಹೇಳಿದನು. ಪುನಃ ಶಿಷ್ಯರನ್ನು ಕರೆದು ಈ ಹುಟ್ಟುವಮೊಮ್ಮಗನಿಗೆ ಸಕಾಲದಲ್ಲಿ ಶಾಸ್ತ್ರಗಳನ್ನೂ ಪ್ರಬಂಧಗಳನ್ನೂ ಯೋಗಾಭ್ಯಾಸವನ್ನೂ ಕಲಿಸಿಕೊಡುವಂತೆ ಅಪ್ಪಣೆಕೊಟ್ಟು ತಾನು ಯೋಗಾರೂಢನಾದನು. ಹೀಗೆ ಕೆಲವು ವರ್ಷಗಳು ಕಳೆದವು. ಒಂದಾನೊಂದು ದಿನ ನಾಥಮುನಿಯು ಯೋಗಾಸನದಿಂದ

ಎದ್ದು ಒಂದುಕಡೆಗೆ ಸುಮ್ಮನೆ ಓಡುತ್ತಾ ಹೋದನು. ಕಡೆಗೆ ಗಂಗಾಯಿಕೊಂಡ ಸಪುರಂ ಎಂಬ ಸ್ಥಳಕ್ಕೆ ಬಂದು ಅಲ್ಲಿಯ ಜನರನ್ನು ಕುರಿತು ನೀವು ರಾಮ ಶೀತಾ ಲಕ್ಷ್ಮಣರು ಇಲ್ಲಿ ಹೋದುದನ್ನು ಕಂಡಿರೋ? ಎಂದು ಕೇಳಿದನು. ಅವರು ತಾವು ಕಾಣಲಿಲ್ಲ, ಇಲ್ಲಿಗೆ ಅವರು ಯಾರೂ ಬರಲಿಲ್ಲ, ದೇವರುಗಳು ಈ ಭೂಲೋಕಕ್ಕೆ ಎಂದಿಗಾದರೂ ಬಂದಾರೆ? ಇದೆಂಥಾಮಾತು ಎಂದು ಉತ್ತರಕೊಟ್ಟರು. ಇವನು ಹುಚ್ಚನಾಗಿರಬಹುದೆಂದು ತಮ್ಮೊಳಗೆ ತಾವು ಮಾತಾಡಿಕೊಂಡರು.

ನಾಥಮುನಿಯು, ಎಲೈ ಸಾಕ್ಷಾದ್ಭಗವಂತನಾದ ರಾಮನೆ! ಎಲೈ ಲಕ್ಷ್ಮಿಯಾದ ಶೀತೆಯೆ! ಏತಕ್ಕೆ ಅದೃಶರಾದಿರಿ? ಪುನಃ ನನಗೆ ದರ್ಶನವನ್ನು ಕೊಡಿರಿ; ಈ ದೇಹವನ್ನು ಬಿಟ್ಟು ನಿಮ್ಮ ಬಳಿಗೆ ಬರಬೇಕೆಂದು ಹೇಳುವಿರೊ? ಒಳ್ಳೆಯದು; ಹಾಗೆಯೇ ಮಾಡುವೆನೆಂದು ಹೇಳಿದಕೂಡಲೆ, ಆತನ ದೇಹವು ತಟ್ಟನೆ ನೆಲದ ಮೇಲೆ ಬಿದ್ದಿತು. ಆಗ ತೇಜೋಮಯವಾದ ಸೂಕ್ಷ್ಮವಾದ ನಾಥಮುನಿಯ ಆಕಾರವನ್ನು ಹೋಲುವಂಥಾ ಒಂದು ದಿವ್ಯ ಆಕೃತಿಯು ಅಂತರಿಕ್ಷದಲ್ಲಿ ಕೆಲವು ದೂರಕ್ಕೆ ಹೊರಟುಹೋಗಿ ಆಮೇಲೆ ಅದೃಶವಾಯಿತು. ಅಲ್ಲಿ ನೆರದಿದ್ದ ಜನರು ಇದನ್ನೆಲ್ಲಾ ಕಂಡು ಪರಮಾಶ್ಚರ್ಯಪಟ್ಟರು. ಭೂಮಿಯಮೇಲೆ ಬಿದ್ದಿದ್ದ ದೇಹವನ್ನು ಮುಟ್ಟಿ ನೋಡಿದರು. ಅದು ಗತಪ್ರಾಣವಾಗಿ ಶೀತವಾಗಿದ್ದಿತು. ನಾಥಮುನಿಯು ದೇಹವನ್ನು ಬಿಟ್ಟು ಪರಲೋಕಕ್ಕೆ ಹೊರಟುಹೋದನೆಂದು ಅದರು ತಿಳಿದುಕೊಂಡರು.

ಈ ರೀತಿಯಾದ ವಿಚಿತ್ರ ಮರಣವು ಜನಜನಿತವಾದಿತು. ಆ ಸುದ್ದಿಯನ್ನು ಕೇಳಿದವರೆಲ್ಲರೂ ಆಶ್ಚರ್ಯಪಟ್ಟು ನಾಥಮುನಿಯು ಮಹಾತ್ಮನು ಸತ್ಪುರುಷನು ದೇವಭಕ್ತನು ದೇವಪ್ರಿಯನೆಂದು ಕೊಂಡಾಡಿದರು. ಈ ಸಮಾಚಾರವು ಕಡೆಗೆ ನಾಥಮುನಿಯ ಮಗನಿಗೂ ಶಿಷ್ಯರಿಗೂ ತಿಳಿದಿತು. ಅವರು ಈ ವಿಚಿತ್ರಮರಣದಿಂದ ಆಶರ್ಯವನ್ನೂ ಗುರುವಿಯೋಗದಿಂದ ವ್ಯಸನವನ್ನೂ ಏಕಕಾಲದಲ್ಲಿ ಹೊಂದಿ ಆ ಸ್ಥಳಕ್ಕೆ ಬೇಗನೆ ಬಂದು ಮೃತಶರೀರದ ಮುಂದೆ ಅಡ್ಡಬಿದ್ದರು. ಆಮೇಲೆ ವೇದೋಕ್ತಬ್ರಹ್ಮಮೇಧರೀತಿಯಲ್ಲಿ ಅದನ್ನು ಸಂಸ್ಕರಿಸಿದರು. ಮನೆಗೆ ಹಿಂತಿರುಗಿ ಬಂದು ಈಶ್ವರಮುನಿಯು ಶ್ರಾದ್ಧಕರ್ಮಗಳನೆಲ್ಲಾ ಯಥಾವಿಧಿಯಾಗಿ ಮಾಡಿ ಪೂರೈಸಿದನು. ನಾಥಮುನಿಯ ಶಿಷ್ಯರಲ್ಲೊಬ್ಬನಾದ ಕುರುಗಾವಲಪ್ಪನ್ ಎಂಬಾತನು ಗುರುವು ಕುಳಿತುಕೊಂಡು ಯೋಗಾಭ್ಯಾಸವನ್ನು ಮಾಡುತ್ತಿದ್ದಸ್ಥಳದಲ್ಲಿ ತಾನೂ ಕುಳಿತುಕೊಂಡು ಯೋಗಾಭ್ಯಾಸವನ್ನು ಮಾಡಲಾರಂಭಿಸಿದನು. ಈ ಶಿಷ್ಯನು ಕ್ರಮೇಣ ಯೋಗಸಿದ್ಧಿಯನ್ನು ಹೊಂದಿ ಈ ಭೂಲೋಕದಲ್ಲಿ ೫೪೦ ಸಂವತ್ಸರಗಳ ಪರ್ಯಂತ ಬದುಕಿದ್ದನೆಂದು ಇತಿಹಾಸದಲ್ಲಿ ಉಕ್ತವಾಗಿದೆ.

S. V.

ಮೈಸೂರು ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ರವರ ಆಫಿಸ್.

ಬೆಂಗಳೂರು, 1909ನೆ ಇಸವಿ ಮೇ ತಾರೀಖು 22,

1908—09ರ ಸರ್ಕ್ಯುಲರ್ ನಂಬರು 40.

ಸಂಸ್ಥಾನದಲ್ಲಿರುವ ಎಲ್ಲಾ ಇನ್‌ಸ್ಪೆಕ್ಟಿಂಗ್ ಆಫೀಸರುಗಳಿಗೆ ಮತ್ತು ಸ್ಕೂಲ್ ಹೆಡ್ಮಾಸ್ಟರುಗಳಿಗೆ.

ಸ್ಯಾನಿಟರಿ ಕಮಿಷನರವರು ಎಲ್ಲಾ ಡಿಸ್ಟ್ರಿಕ್ಟುಗಳ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರುಗಳಿಗೆ 1909ನೆಯ ಇಸವಿ ಮೇ 1ನೆಯ ತಾರೀಖು 4706—14ನೆಯ ಸರ್ಕ್ಯುಲರನ್ನು ದಯವಿಟ್ಟು ಕೊಟ್ಟಿರುತ್ತಾರೆ. ಈ ಸರ್ಕ್ಯುಲರ್ ಮೂಲಕವಾಗಿ ಪ್ರತಿಯೊಬ್ಬ ಮೆಡಿಕಲ್ ಆಫೀಸರಿಗೂ, ಲೋಕಲ್ ಫಂಡ್ ಆಸ್ಪತ್ರೆಗಳಲ್ಲಿಯೂ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರವರ ಅಧೀನಕ್ಕೊಳಗಾದ ಇತರ ವೈದ್ಯಶಾಲೆಗಳಲ್ಲಿಯೂ ಇರುವ ತಾಬೇದಾರರಿಗೂ ಆಜ್ಞೆಯಾಗಿರುವುದೇನಂದರೆ—ತಾವಿರುವ ಪಟ್ಟಣದಲ್ಲಿ ಅಥವಾ ಸಮುದಾಯದಲ್ಲಿರತಕ್ಕ ಗವರ್ನ್‌ಮೆಂಟು ಸ್ಕೂಲುಗಳಲ್ಲಿಯೂ ಗ್ರ್ಯಾಂಟ್‌ಇನ್‌ಏಡ್ ಸ್ಕೂಲುಗಳಲ್ಲಿಯೂ ಓದುವ ಹುಡುಗರಲ್ಲಿ ರೋಗಿಷ್ಠರಾದವರನ್ನೆಲ್ಲಾ ಪರೀಕ್ಷಿಸಿ, ಚಿಕಿತ್ಸೆಯ ಅವಶ್ಯವಿದ್ದವರನ್ನು ಸ್ಕೂಲ್ ಕೆಲಸಕ್ಕೆ ಪ್ರತಿಬಂಧಕವಾಗದಿರುವ ಹೊತ್ತಿನಲ್ಲಿ ಆಸ್ಪತ್ರೆಗೆ ಹೋಗಿಬರುವುದಕ್ಕೆ ಶಿಫಾರಸು ಮಾಡುವ ಉದ್ದೇಶದಿಂದ, ಇಲ್ಲಿಂದ ಮುಂದೆ ಕ್ಲುಪ್ತಕಾಲಾನುಸಾರವಾಗಿ ಹದಿನೈದುದಿನಕ್ಕೊಂದುಬಾರಿ ಅಂತಹ ಸ್ಕೂಲುಗಳ ವಿಚಾರಣೆ ಮಾಡಬೇಕು—ಎಂದು ಆಜ್ಞೆಯಾಗಿರುವುದು. ಮೆಡಿಕಲ್ ಆಫೀಸರುಗಳೂ ಅವರ ಕೈಗೆಳಗಿನವರೂ ವಿಚಾರಣೆಗೆ ಬಂದ ಕಾಲದಲ್ಲಿ ಹೆಡ್ಮಾಸ್ಟರುಗಳಾದವರು ಅವರಿಗೆ ಬೇಕಾದ ಅನುಕೂಲತೆಗಳನ್ನೆಲ್ಲ ಒದಗಿಸಿ ಕೊಡುವುದಲ್ಲದೆ, ಗೊತ್ತಾಗಿರುವ ಕಾಲದಲ್ಲಿ ಆಸ್ಪತ್ರೆಗೆ ಹೋಗಿ ಬರುವಂತೆ ಹುಡುಗರಿಗೆ ಕಟ್ಟುಮಾಡಬೇಕು. ಅಂತಹ ಹುಡುಗರು ಆರೋಗ್ಯವನ್ನು ಮತ್ತೆ ಪಡೆದು ಇನ್ನು ಮುಂದೆ ಬರಬೇಕಾಗಿಲ್ಲವೆಂದು ಹೇಳುವವರೆಗೂ ಅವರು ಕ್ರಮವಾಗಿ ಆಸ್ಪತ್ರೆಗೆ ಹೋಗಿಬರುತ್ತಿರುವಂತೆ ನೋಡಿಕೊಳ್ಳಬೇಕೆಂದು ಅವರ ತಂದೆತಾಯಿಗಳಿಗೆ ಅಥವಾ ರಕ್ಷಕರಿಗೆ ತಿಳಿಸಬೇಕು. ಪ್ರತಿ ಹೆಡ್ಮಾಸ್ಟರೂ ಒಂದು ರಿಜಿಸ್ಟರನ್ನು ಇಟ್ಟುಕೊಂಡು ಆಸ್ಪತ್ರೆಗೆ ಹೋಗಿ ಬರಬೇಕೆಂದು ನಿಯಮಿತರಾಗಿರುವ ಹುಡುಗರ ಹೆಸರುಗಳನ್ನೆಲ್ಲ ಬರೆದುಕೊಳ್ಳಬೇಕು. ಆ ರೆಜಿಸ್ಟರನ್ನು ಮುಂದೆ ತಿಳಿಸುವ ಕ್ರಮಪ್ರಕಾರ ಇಟ್ಟಿರಬೇಕು.

ಹುಡುಗರ ಹೆಸರು	ತಂದೆಯ ಹೆಸರು	ಹುಡುಗರ ವಯಸ್ಸು	ವ್ಯಾಧಿಯ ಸ್ವಭಾವ	ಚಿಕಿತ್ಸೆಗೆ ಮೊದಲಾದ ದಿನ	ಆಸ್ಪತ್ರೆಗೆ ಹುಡುಗರು ಹಾಜರಾಗುವ ದಿನಗಳು. (ಈ ತಾರೀಖುಗಳನ್ನ ನಮೂದಿಸಿ ಮೆಡಿಕಲ್ ಆಫೀಸರು ಚಿಕ್ಕ ರುಜು ಮಾಡತಕ್ಕದ್ದು).	ಆಸ್ಪತ್ರೆಯಿಂದ ಬಿಡುಗಡೆ ಮಾಡುವ ದಿನ ಮತ್ತು ಮೆಡಿಕಲ್ ಆಫೀಸರ ಚಿಕ್ಕ ರುಜು	ಮೆಡಿಕಲ್ ಆಫೀಸರು ಬರೆಯಬೇಕಾದ ಚಿಕಿತ್ಸಾ ಫಲಿತಾಂಶ	ಷರಾ

ಏಪ್ರಿಲ್ 15, ಜುಲೈ 15, ಆಕ್ಟೋಬರ್ 15, ಜನವರಿ 15ಕ್ಕೆ ಮುಂಚಿತವಾಗಿ ಮೂರುತಿಂಗಳಿಗೊಂದುಬಾರಿ ಹೆಡ್ಮಾಸ್ಟರುಗಳು ಇನ್ಸ್ಪೆಕ್ಟಿಂಗ್ ಆಫೀಸರುಗಳಿಗೆ ಚಿಕಿತ್ಸೆಗೊಳಗಾದ ಹುಡುಗರ ಸಂಖ್ಯೆಯನ್ನೂ ಅವರ ವ್ಯಾಧಿಗಳನ್ನೂ ಚಿಕಿತ್ಸಾಫಲಿತಾಂಶವನ್ನೂ ತೋರಿಸುವ ಪಟ್ಟಿಯೊಂದನ್ನು ಕಳುಹಿಸಿಕೊಡಬೇಕು. ಮೇಲಣತಖ್ಸೀಲುಗಳನ್ನು ತೋರಿಸುವ ಗೋಷ್ವಾರೆ ಪಟ್ಟಿಯೊಂದನ್ನು ಅಸಿಸ್ಟೆಂಟ್, ಡೆಪ್ಯುಟಿಇನ್ಸ್ಪೆಕ್ಟರವರು ಡೆಪ್ಯುಟಿ ಇನ್ಸ್ಪೆಕ್ಟರವರಿಗೆ ಕಳುಹಿಸಬೇಕು. ಇದೇ ರೀತಿಯಲ್ಲಿ ಆಯಾ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಇನ್ಸ್ಪೆಕ್ಟರುಗಳೂ ಹಿಂದುಸ್ಥಾನೀ ಸ್ಕೂಲ್ ಡೆಪ್ಯುಟಿ ಇನ್ಸ್ಪೆಕ್ಟರೂ ತಮ್ಮ ಅಧೀನಕ್ಕೊಳಗಾದ ಸ್ಕೂಲುಗಳಿಗೆ ಸಂಬಂಧಪಟ್ಟ ಗೋಷ್ವಾರೆ ಪಟ್ಟಿಗಳನ್ನು ತಮ್ಮ ಸರ್ಕಲ್ ಇನ್ಸ್ಪೆಕ್ಟರಿಗೆ ಕಳುಹಿಸಬೇಕು. ಸರ್ಕಲ್ ಇನ್ಸ್ಪೆಕ್ಟರುಗಳು ತಮ್ಮ ಒಟ್ಟು ಸರ್ಕಲಿಗೆ ಸಂಬಂಧಪಟ್ಟ ಮೇಲ್ಕಂಡ ತಖ್ಸೀಲುಗಳನ್ನು ತೋರಿಸುವ ಸಾಂವತ್ಸರಿಕ ಪಟ್ಟಿಯೊಂದನ್ನು ಸಂವತ್ಸರಾಂತ್ಯದಲ್ಲಿ ತಮ್ಮರಿಪೋರ್ಟಿನೊಡನೆ ಕಳುಹಿಸಬೇಕು. ಹೆಚ್. ಜೆ. ಭಾಭಾ,—ಇನ್ಸ್ಪೆಕ್ಟರ್ ಜನರಲ್

ಮೈಸೂರು ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರ ಆಫೀಸ್.

ಬೆಂಗಳೂರು, 7 ನೇ ಜನವರಿ, 1909.

1908—09 ರ ಸರ್ಕ್ಯುಲರ್ ಸಿ, ನಂಬರು 25.

ಮೈಸೂರಲ್ಲಿರುವ ಕಾಲೇಜುಗಳಲ್ಲಿಯೂ ಸ್ಕೂಲುಗಳಲ್ಲಿಯೂ ಓದುವ ಮುಹಮ್ಮದೀಯ ವಿದ್ಯಾರ್ಥಿಗಳಿಗೆ ಮತನೀತಿಬೋಧೆ.

1. ಕಾಲೇಜುಗಳಲ್ಲಿಯೂ ಸ್ಕೂಲುಗಳಲ್ಲಿಯೂ ಓದುವ ಮುಹಮ್ಮದೀಯ ವಿದ್ಯಾರ್ಥಿಗಳಿಗೆ ಮತನೀತಿ ಪಾಠಗಳನ್ನು ಬೋಧಿಸುವುದಕ್ಕೆ, ಈ ಮುಂದೆ ತಿಳಿಸುವ ಕ್ರಮವು, ಸಧ್ಯದಲ್ಲಿ ಅನುಸರಿಸುವುದಕ್ಕೋಸ್ಕರ, ಕೊಡಲ್ಪಟ್ಟಿದೆ.

ತರಗತಿ	ವಿಷಯ	ಪುಸ್ತಕಗಳ ಹೆಸರು
ಇನ್‌ಫೆಂಟ್ ತರಗತಿ	ಮತ	(ಅಂಜುಮಾನೀ ಹಿಮಾಯತೀ ಇಸಲಾಮ್, ಲಾಹೋರ್) ಉರ್ದು IIನೆ ಪುಸ್ತಕದಲ್ಲಿರುವ ಹಾಡುಗಳು; 73 ರಿಂದ 80 ಪುಟಗಳು; ಐದು ಕಲಿಮಗಳನ್ನೂ ಬುಗ್ದಾದಿ ಅಲೀಫ್ ಬೀಯನ್ನೂ ಓದುವುದು.
	ನೀತಿ	ಅಂಜುಮಾನೀ ಹಿಮಾಯತೀ ಇಸ್ಲಾಮ್, ಲಾಹೋರಿನ ಮೊದಲನೆಯ ರೀಡಿಂಗ್ ಬುಕ್ಕು; ಪ್ರಶ್ನೆಗಳು, ಉತ್ತರಗಳು.
I ತರಗತಿ	ಮತ	ಮೇಲಣ ಪುಸ್ತಕಮಾಲೆಯ ಉರ್ದು IIIನೆಯ ಪುಸ್ತಕದಲ್ಲಿರುವ ಹಾಡುಗಳು, 137 ರಿಂದ 152 ಪುಟಗಳು; ಕೋರಾನ್ ಮೊದಲ ಕಾಲುಭಾಗವನ್ನು ಓದುವುದು.
	ನೀತಿ	(ಅಂಜುಮಾನೀ ಹಿಮಾಯತೀ ಇಸ್ಲಾ, ಲಾಹೋರ್) ದಿನಿಯಾತಾ ಪಹಿಲಾ ರಿಸಾಲಾ; ಮೇಲಣ ಪುಸ್ತಕಮಾಲೆಯ IIನೆ ರೀಡಿಂಗ್ ಬುಕ್ಕಿನಲ್ಲಿರುವ ನೀತಿಪಾಠಗಳು, 5 ರಿಂದ 18 ಪುಟಗಳು.
II ತರಗತಿ	ಮತ	ಅದೇ ಪುಸ್ತಕಮಾಲೆಯ ಉರ್ದು III ನೆ ಪುಸ್ತಕದಲ್ಲಿರುವ ಹಾಡುಗಳು, 137 ರಿಂದ 152 ಪುಟಗಳು; ಕೋರಾನ್ ಎರಡನೆ ಕಾಲುಭಾಗವನ್ನು ಓದುವುದು.
	ನೀತಿ	ದಿನಿಯಾತ್ಕಾ ದುಸ್ರಾ ರಿಸಾಲಾ ಮತ್ತು ಮೇಲಣ ಪುಸ್ತಕಮಾಲೆಗೆ ಸೇರಿದ IIನೆ ರೀಡಿಂಗ್ ಬುಕ್ಕಿನಲ್ಲಿರುವ ನೀತಿ ಪಾಠಗಳು, 62 ರಿಂದ 72 ಪಾಠಗಳು.

ತರಗತಿ	ವಿಷಯ	ಪುಸ್ತಕಗಳ ಹೆಸರು
III ತರಗತಿ	ಮತ	ಆದೇ ಪುಸ್ತಕಮಾಲೆಯ ಉರ್ದು IIIನೆ ಪುಸ್ತಕದಲ್ಲಿರುವ ಹಾಡುಗಳು, 137 ರಿಂದ 152 ಪುಟಗಳು; ಕೋರಾನಿನಲ್ಲಿ ಉತ್ತರಾರ್ಧವನ್ನು ಓದುವುದು.
	ನೀತಿ	ಅದೇ ಪುಸ್ತಕಮಾಲೆ IIIನೆ ಪುಸ್ತಕ 81 ರಿಂದ 136 ಪುಟಗಳಲ್ಲಿರುವ ನೀತಿಕಥೆಗಳು; ದಿನಿಯಾತ್ಕಾ ತಿಸ್ರಾರಿಸಾಲಾ.
IV ತರಗತಿ	ಮತ ಮತ್ತು ನೀತಿ	ದಿವಾನೀ ಅಮಿರೀ ಮಿನಾಯಿಯಲ್ಲಿರುವ ಹಾಡುಗಳು ಮತ್ತು ಸಯ್ಯದ್ ಅಹಮದ್ ಫರೋಖಿಯರು ಮಾಡಿದ ಅಹ್ಲಾಕುಲ್ ಮಹಮದಿ, Iನೆ ಭಾಗ (ಅಹಮದಿ ಪ್ರೆಸ್, ಅಲಿಗರ್).
V ತರಗತಿ	ಡಿಟ್ಟೋ	ದಿವಾನೀ ಅಮಿರೀ ಮಿನಾಯಿಯಲ್ಲಿರುವ ಹಾಡುಗಳು ಮತು ಅಹ್ಲಾಕುಲ್ ಮಹಮದಿ IIನೆ ಭಾಗ.
IV ಫಾರಂ	ಡಿಟ್ಟೋ	ಫತೆ ಮಹಮದ್‌ಖಾನ್‌ರವರಿಂದಾದ ಇರ್ಷಾದತುಲ್ ಖುರ್ರಾ Iನೆ ಭಾಗ (ರಿಫಾಹಿ ಆಮ್ ಪ್ರೆಸ್, ಲಾಹೋರ್).
V ಫಾರಂ	ಡಿಟ್ಟೋ	ಡಿಟ್ಟೋ IIನೆ ಭಾಗ.
VI ಫಾರಂ	ಡಿಟ್ಟೋ	ಪ್ರೊಫೆಸರ್ ಷಿಬ್ಲಿಯವರು ರಚಿಸಿದ ಸೀರಾತುಲ್ ನ್ಯೂಮಾನ್.
ಜೂನಿಯರ್ ಎಫ್. ಎ.	ಡಿಟ್ಟೋ	ಇಲ್ಮಿಕಲಮ್, Iನೆ ಭಾಗ, ಪ್ರೊಫೆಸರ್ ಷಿಬ್ಲಿರಚಿತ.
ಸೀನಿಯರ್ ಎಫ್. ಎ.	ಡಿಟ್ಟೋ	ಡಿಟ್ಟೋ IIನೆ ಭಾಗ, ಡಿಟ್ಟೋ
ಜೂನಿಯರ್ ಬಿ. ಎ.	ಡಿಟ್ಟೋ	ಷಿಜ್ರಾತುಲ್ ಮರಿಫತ್ತಿ (ನವಿಲ್ ಕಿಷೋರ್, ಲಕ್ನೊ)
ಸೀನಿಯರ್ ಬಿ. ಎ.	ಡಿಟ್ಟೋ	ಡಿಟ್ಟೋ ಡಿಟ್ಟೋ

2. ಮೇಲೆ ಹೇಳಿರುವ ಪಾಠಕ್ರಮವು ಯಾವುದೊಂದು ಪಂಗಡದವರಿಗೂ ವಿರುದ್ಧವಲ್ಲದೆ ಸಾಮಾನ್ಯವಾಗಿರುವುದು. ಆಯಾ ಪಂಗಡಕ್ಕೆ ಮಾತ್ರ ಸರಿಹೋಗಿ ಇತರರಿಗೆ ವಿರುದ್ಧವಾಗಿರುವ ಅಭಿಪ್ರಾಯಗಳನ್ನೆಲ್ಲಾ, ಉಪಾಧ್ಯಾಯರು ಜಾಗರೂಕತೆಯಿಂದ ಬಿಟ್ಟುಬಿಡಬೇಕು.

3. ಹಿಂದುಸ್ತಾನಿಯಲ್ಲಿ ಸರಿಯಾದ ಪುಸ್ತಕಗಳಿಲ್ಲದಿರುವುದರಿಂದ IVನೆಯ ತರಗತಿಯಿಂದ ಮೇಲ್ಪಟ್ಟ ತರಗತಿಗಳಲ್ಲಿ ಮತಬೋಧೆಯನ್ನೂ ನೀತಿಬೋಧೆಯನ್ನೂ ಪ್ರತ್ಯೇಕಿಸುವುದಕ್ಕಾಗುವುದಿಲ್ಲ. ಮತಬೋಧೆಯು ಪ್ರತ್ಯೇಕವಾಗಿರುವ ಸಂದರ್ಭದಲ್ಲಿ, ಅದನ್ನು ಮಂಗಳವಾರ ಗುರುವಾರಗಳಲ್ಲಿ ಹಾಜರ್ ಗೈರ್‌ಹಾಜರಿಯನ್ನು ತೆಗೆದುಕೊಳ್ಳುತ್ತಲೆ, ಅರ್ಧಘಂಟೆಹೊತ್ತು ನಡಿಸಬೇಕು. ಮತನೀತಿಗಳೆರಡನ್ನೂ ಬೆರಸುವಾಗ, ವಾರಕ್ಕೆ ಒದು ದಿನಗಳು ಹಾಜರ್ ಗೈರ್‌ಹಾಜರಿಯನ್ನು ತೆಗೆದುಕೊಂಡಾದಮೇಲೆ ಅರ್ಧಘಂಟೆಯ ವರೆಗೆ ಆ ಪಾಠವನ್ನು ಹೇಳಬೇಕು.

ಹೆಚ್. ಜೆ. ಭಾಭಾ, ಇನ್ಸ್ಪೆಕ್ಟರ್ ಜನರಲ್.

ಪ್ರಬಂಧಮಂಜರಿ.

ಬೆಂಗಳೂರಲ್ಲಿರುವ ಗೌ॥ ಹೈಸ್ಕೂಲಿನ ಅ॥ ಮಾಸ್ಟರು ಮ॥ ರಾ॥ ಎಸ್. ಟಿ. ರಾಘವಾಚಾರ್ಯ, ಬಿ. ಎ. ಯವರಿಂದ ರಚಿತವಾದ ಈ ಅತ್ಯುಪಯುಕ್ತವಾದ ಗ್ರಂಥವು ದ್ವಿತೀಯ ಮುದ್ರಣವನ್ನು ಕಾಣುವಷ್ಟು ಪ್ರಚಾರಕ್ಕೆ ಬಂದಿರುವುದು ಬಹಳ ಸಂತೋಷಕರವಾಗಿದೆ. ಈ ಮುದ್ರಣದ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಇದನ್ನು ಆಮೂಲಾಗ್ರವಾಗಿ ಓದಿ ನೋಡಿದೆವು. ಈ ಮುದ್ರಣದಲ್ಲಿ ಗ್ರಂಥಕರ್ತರು ತಮ್ಮ ಪುಸ್ತಕವನ್ನು ಚೆನ್ನಾಗಿ ಶೋಧಿಸಿ, ಮೊದಲಿದ್ದ ನಾಲ್ವತ್ತು ಪ್ರಬಂಧಗಳ ಜತೆಗೆ ಹೊಸದಾಗಿ ಇಪ್ಪತ್ತು ಪ್ರಬಂಧಗಳನ್ನು ಪೂರ್ಣವಾಗಿ ಬರೆದು ಸೇರಿಸಿದ್ದಾರೆ. ಭಾಷಾಶೈಲಿ, ಪ್ರಬಂಧರಚನಾಕ್ರಮ ಮೊದಲಾದ ಪ್ರಕರಣಗಳಲ್ಲಿ ಹೇಳಿರುವ ವಿಧಿಗಳಿಗೆ ಮೊದಲು ಕೊಟ್ಟಿದ್ದ ಉದಾಹರಣೆಗಳಿಗೆ ಬದಲು ಹೊಸಗನ್ನಡದಗ್ರಂಥಗಳಿಂದ ಬೇರೆಬೇರೆ ವಾಕ್ಯಗಳನ್ನು ಎತ್ತಿ ಬರೆದಿದ್ದಾರೆ. ಹೀಗೆ ಗ್ರಂಥವು ಮೊದಲಿಗಿಂತ ಶ್ಲಾಘ್ಯವಾಗಿರುವದಲ್ಲದೆ, ಅರ್ಧಗಾಲು ಹೆಚ್ಚಾಗಿದೆ. ಆದರೂ ಎಲ್ಲಾ ವಿದ್ಯಾರ್ಥಿಗಳಿಗೂ ಸುಲಭವಾಗಿರಲೆಂದು ಕ್ರಯವನ್ನು ೧೨ ಆಣೆಯಿಂದ ೮ ಆಣೆಗೆ ಇಳಿಸಿದ್ದಾರೆ.

ಇಂಗ್ಲಿಷಿನಲ್ಲಿ ಪ್ರಬಂಧರಚನಾಕ್ರಮವನ್ನು ಬೋಧಿಸುವ ಪುಸ್ತಕಗಳು ಲೆಕ್ಕವಿಲ್ಲದಷ್ಟು ಇವೆ. ಆದರೆ ಕನ್ನಡದಲ್ಲಿ ಇಂಥಾ ಪುಸ್ತಕ ಒಂದಾದರೂ ಈವರೆಗೆ ಇರಲಿಲ್ಲ. ಈ ಕುಂದನ್ನು ಹೋಗಲಾಡಿಸಿ, ವಿಧಿ ಮತ್ತು ಉದಾಹರಣೆಗಳ ಮೂಲಕ ಬಾಲಕರಿಗೆ ಹೊಸಗನ್ನಡದಲ್ಲಿ ಪ್ರಬಂಧರಚನೆಯನ್ನು ಕಲಿಸಿಕೊಡುವುದಕ್ಕಾಗಿ ಈ ಗ್ರಂಥವು ಹೊರಟಿದೆ. ಇದರಲ್ಲಿ ಭಾಷಾಶೈಲಿಯ ಸ್ವರೂಪ ಮತ್ತು ಗುಣದೋಷಗಳು, ವಾಕ್ಯ, ವಾಕ್ಯಬೃಂದ (Paragraph), ಲೇಖನಚಿಹ್ನೆಗಳು (Punctuation) ಇವುಗಳ ವಿಷಯವಾಗಿ ತಿಳಿಯಬೇಕಾದ ಮುಖ್ಯಾಂಶಗಳನ್ನು ವಿವರಿಸಿದೆ. ಪ್ರಬಂಧದ (Essay) ಸ್ವರೂಪವನ್ನೂ, ಅದರ ರಚನಾಕ್ರಮವನ್ನೂ ಚೆನ್ನಾಗಿ ಬೋಧಿಸಿದೆ. ಪರೀಕ್ಷೆಗಳಲ್ಲಿ ಸಾಮಾನ್ಯವಾಗಿ ಕೊಡುವ ಅರುವತ್ತು ವಿಷಯಗಳನ್ನು ಕುರಿತು ಪ್ರಬಂಧಗಳನ್ನು ಮಾದರಿಗಾಗಿ ಸಂಪೂರ್ಣವಾಗಿ ಬರೆದು ತೋರಿಸಿದೆ.

ಇದರಲ್ಲಿ ಅಡಕವಾಗಿರುವ ವಿಷಯಗಳನ್ನು ಪರಿಶೀಲಿಸಿ ನೋಡಿದರೆ, ಇದಕ್ಕೆ ಕೊಡಬೇಕಾದ ಕ್ರಯವು (೮ ಆಣೆ) ಬಹಳ ಕಡಿಮೆಯೆಂದು ವ್ಯಕ್ತವಾಗುವುದು. ಕರ್ನಾಟಕ ಭಾಷಾಭಿಮಾನಿಯಾದ ಪ್ರತಿಯೊಬ್ಬ ಉಪಾಧ್ಯಾಯನೂ, ಪ್ರಬಂಧರಚನೆಯನ್ನು ಕಲಿಯಬೇಕೆಂದಿರುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ಗ್ರಂಥಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕು. ಮೈಸೂರು ದೇಶೀಯಪರೀಕ್ಷೆಗಳಿಗೂ, ಮದರಾಸು ಯೂನಿವರ್ಸಿಟಿಯ ಪರೀಕ್ಷೆಗಳಿಗೂ ಓದುವ ವಿದ್ಯಾರ್ಥಿಗಳಿಗೆ ಅತ್ಯಂತೋಪಯುಕ್ತವಾಗಿದೆ ಯೆಂದು ಬಹು ದೃಢವಾಗಿ ನಂಬಿದ್ದೇವೆ.

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಸೂಚನೆಗಳು ಮತ್ತು ಸಮಾಚಾರಗಳು.

ಮಧುಗಿರಿತಾಲ್ಲೋಕ್ ರಾಂಪುರದ ಗ್ರಾಮ ಪಾಠಶಾಲೆಯ ಸಹಾಯೋಪಾಧ್ಯಾಯರಾದ ಶ್ರೀನಿವಾಸಾಚಾರ್, ಉರಫ್ ಶ್ರೀನಿವಾಸತಾತಾಚಾರ್ಯರೆಂಬುವರು ಇದರಡಿ ಕಾಣಿಸಿರುವ ಕಾರಣಗಳಿಂದ ಕೆಲಸದಿಂದ ವಜಾಮಾಡಲ್ಪಟ್ಟಿರುವರು.

ಈ ಶ್ರೀನಿವಾಸತಾತಾಚಾರ್ಯರವರು, ಹಿಂದೆ 1900 ನೇ ಇಸವಿಯಲ್ಲಿ ಶ್ರೀನಿವಾಸಾಚಾರ್ ಎಂಬ ಹೆಸರಿನಿಂದ, ಸಾಗರದ ಎ. ವಿ. ಸ್ಕೂಲ್ ಸಹಾಯೋಪಾಧ್ಯಾಯರಾಗಿ ಕೆಲಸಮಾಡುತ್ತಿದ್ದರು. ಆಗ ಇವರು ಕೆಲಸಕ್ಕೆ ಅನರ್ಹರೆಂದೂ, ಅವಿಧೇಯರೆಂದೂ, ಅಪ್ಪಣೆ ಇಲ್ಲದೆ ಕೆಲಸಕ್ಕೆ ಬರದೆ ನಿಂತು ಹೋಗುತಿದ್ದರೆಂದೂ ವಜಾಮಾಡಲ್ಪಟ್ಟಿದ್ದರು. ಈ ವಿಷಯವನ್ನು ಮರೆಮಾಚಿ ಹೆಸರನ್ನು ಶ್ರೀನಿವಾಸತಾತಾಚಾರ್ಯರೆಂದು ಬದುಲಾಯಿಸಿಕೊಂಡು, ಸುಳ್ಳುವಯಸ್ಸನ್ನು ಕೊಟ್ಟು ತುಮಕೂರು ಡಿ|| ಮಧುಗಿರಿ ತಾಲ್ಲೋಕ್ ರಾಂಪುರದಗ್ರಾಮಪಾಠಶಾಲೆಯಲ್ಲಿ ಸಹಾಯೋಪಾಧ್ಯಾಯರಾಗಿ ಸೇರಿಕೊಂಡರು. ಇಲ್ಲಿಯೂ ಮೊದಲಿನಂತೆ ಅವಿಧೇಯತೆಯನ್ನೇ ತೋರಿಸುತಬಂದರು. ಇಷ್ಟರಲ್ಲಿ ಹಿಂದೆ ಶಿವಮೊಗ್ಗ ಡಿ|| ನಲ್ಲಿ ಡೆಪ್ಯುಟಿ ಇನ್ಸ್ಪೆಕ್ಟರ್‌ರಾಗಿದ್ದವರು ತುಮಕೂರಿನ ಡಿ|| ಗೆ ವರ್ಗಾಯಿಸಲ್ಪಟ್ಟಿದ್ದರು. ಇವರಿಗೆ ಶ್ರೀನಿವಾಸತಾತಾಚಾರ್ಯರ ನಡೆನುಡಿಗಳಿಂದ ಅನುಮಾನಹುಟ್ಟಿ ವಿಚಾರಿಸಲಾಗಿ ನಿಜಾಂಶವು ಹೊರಬಿದ್ದಿತು. ಶ್ರೀನಿವಾಸತಾತಾಚಾರ್ಯರಮೇಲೆ ರುಜುವಾದ ತಪ್ಪಿತಗಳಿಗಾಗಿ ಅವರನ್ನು ಕೆಲಸದಿಂದ ತೆಗೆದುಹಾಕಿರುವರಲ್ಲದೆ ಮೈಸೂರು ದೇಶದ ಯಾವ ಇಲಾಖೆಯಲ್ಲಿಯೂ ಇವರಿಗೆ ಕೆಲಸ ಕೊಡಕೂಡದೆಂದು ಸರಕಾರದವರು ಹುಕ್ಕುಂ ಮಾಡಿರುತ್ತಾರೆ.

2. ಕಾನಕಾನಹಳ್ಳಿಗೆ ಸೇರಿದ ಚಾರೋಹಳಿ ಗ್ರಾಮದ ಸ್ಕೂಲ್ ಮ್ಯಾಸ್ಟರ್ ಮ|| ವೆಂಕಟರಾಮಯ್ಯನವರು ಅಂಟುಜಾಡ್ಯವಾದ ಕಚಿ ಕುರುವಿನಿಂದ ಪೀಡಿತರಾಗಿದ್ದರೂ ಸ್ಕೂಲಿಗೆ ಬರುತ್ತಿದ್ದರಾದುದರಿಂದ ರೂ. ೨ ಜುರ್ಮಾನೆ ವಿಧಿಸಲ್ಪಟ್ಟರು

❁ ವಿದ್ಯಾದಾಯಿನಿ ❁

(A MONTHLY JOURNAL.)

ಭಾಗ ೧೨] ಸೆಪ್ಟೆಂಬರ್ ೧೯೦೯. [ಸಂಚಿಕೆ ೯.

ಸಣ್ಣ ಮಕ್ಕಳಿಗೆ ಅನುಕೂಲವಾದ ಕೆಲಸಗಳು, ದೊಡ್ಡವರಿಗೆ ಅನುಕೂಲವಾದ ಕೆಲಸಗಳು, ಮಕ್ಕಳ ವಿದ್ಯಾಭ್ಯಾಸದಲ್ಲಿ ಫ್ರೋಬೆಲ್ಲನಿಗೆ ಇದ್ದ ಉದ್ದೇಶವನ್ನು ಜನರು ಅನ್ಯಥಾ ಭಾವಿಸಿರುವುದು.

ದೊಡ್ಡವರಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕಿಂತಲೂ ಸಣ್ಣಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದು ಬಲು ಕಷ್ಟವಾದುದೆಂಬುದು ಅನೇಕ ಉಪಾಧ್ಯಾಯರ ಅನುಭವದಲ್ಲಿರುವ ಅಂಶವು. ಇದಕ್ಕೆ ಕಾರಣವೇನು? ಸಣ್ಣಮಕ್ಕಳಿಗೂ ಸ್ವಲ್ಪ ವಯಸ್ಸಾದವರಿಗೂ ಏನೇನು ವ್ಯತ್ಯಾಸಗಳಿರುವವು? ಈ ವ್ಯತ್ಯಾಸಗಳನ್ನು ಮನಸ್ಸಿನಲ್ಲಿಟ್ಟುಕೊಂಡು ವಿದ್ಯಾಭ್ಯಾಸಕ್ರಮದಲ್ಲಿ ಯಾವಯಾವ ಬದಲಾವಣೆಗಳನ್ನು ಮಾಡಿಕೊಳ್ಳಬೇಕು? ಎಂಬೀ ಅಂಶಗಳನ್ನು ಉಪಾಧ್ಯಾಯರು ಯೋಚಿಸುವುದು ಅವಶ್ಯಕವಲ್ಲವೆ?

ಸಣ್ಣ ಮಕ್ಕಳಿಗೂ ಸ್ವಲ್ಪ ವಯಸ್ಸಾದ ಮಕ್ಕಳಿಗೂ ದೇಹದ ಶಕ್ತಿಗಳಲ್ಲೂ ಮನೋಧರ್ಮಗಳಲ್ಲೂ ಅನೇಕ ವ್ಯತ್ಯಾಸಗಳಿರುವುವು. ಮೊದಲಿನ ಏಳು ವರ್ಷಗಳಲ್ಲಿ ಮಗುವಿನ ಮಿದಳು ಬಲುಬೇಗ ಬೆಳೆಯುವುದು. 7 ವರ್ಷಕ್ಕೆ ಅದರ ತೂಕವು 40 ಔನ್ಸ್ ಆಗುವುದು. ಮುಂದಿನ 5 ವರ್ಷಗಳಲ್ಲಿ ಅದರ ತೂಕವು 5 ಔನ್ಸ್ ಮಾತ್ರ ಹೆಚ್ಚುವುದು. ಅಮೇಲೆ ಮಿದಳು 20 ನೆಯ ವಯಸ್ಸಿನ ಹೊತ್ತಿಗೆ ಅದರ ಪೂರ್ಣವಾದ ತೂಕವನ್ನು ಹೊಂದುವುದು. ಈ ತೂಕವು 47 ಔನ್ಸಿನಿಂದ 50 ಔನ್ಸಿನ ವರೆಗಿರುವುದು. ಬಾಲ್ಯದಲ್ಲಿ ಮೂಳೆಗಳು ಬಲು ಮೃದು

ವಾಗಿರುವುವು, ಮತ್ತು ಅವುಗಳ ಸಂಖ್ಯೆಯು ಸುಮಾರು 200 ಇರುವುದು. ಮಗುವಿಗೆ ವಯಸ್ಸಾಗುತ ಬಂದಹಾಗೆಲ್ಲ ಈ ಮೂಳೆಗಳ ಸಂಖ್ಯೆಯು ಕಡಮೆಯಾಗುತ ಬರುವುದು, ಮತ್ತು ಅವು ಕ್ರಮೇಣ ಕಠಿನವಾಗುತಲೂ ಬರುವುವು. ಹೀಗೆ ಸಣ್ಣ ಮಕ್ಕಳಿಗೂ ಸ್ವಲ್ಪ ವಯಸ್ಸಾದ ಮಕ್ಕಳಿಗೂ ದೇಹದ ಶಕ್ತಿಗಳಲ್ಲಿ ಅನೇಕ ವ್ಯತ್ಯಾಸಗಳಿರುವುವು.

ಮನೋಧರ್ಮಗಳಲ್ಲೂ ಶಿಶುಗಳಿಗೂ ಸ್ವಲ್ಪ ವಯಸ್ಸಾದ ಮಕ್ಕಳಿಗೂ ಅನೇಕ ವ್ಯತ್ಯಾಸಗಳಿರುವುವು. ಸಣ್ಣ ಮಕ್ಕಳಿಗೆ ಊಹಾಶಕ್ತಿಯೂ, ಅವಧಾನವೂ ಬಲು ಕಡಿಮೆ. ಅದರ ಸುತ್ತಲೂ ಇರುವ ಪ್ರಪಂಚವು ಅವರಿಗೆ ಹೊಸದಾದುದರಿಂದ ಅದರ ವಿಷಯದಲ್ಲಿ ಹೆಚ್ಚು ಹೆಚ್ಚು ಅಂಶಗಳನ್ನು ತಿಳಿದುಕೊಳ್ಳಲು ಬಹು ಕುತೂಹಲಪಡುವರು. ತಮ್ಮ ಅವಯವಗಳನ್ನು ಉಪಯೋಗಿಸುವುದಕ್ಕೂ, ಇತರರ ಸಂಗಡ ಮಾತನಾಡುವುದಕ್ಕೂ ಅವರು ಬಹು ಇಷ್ಟಪಡುವರು ಚಟುವಟಿಕೆಯೇ ಅವರಲ್ಲಿ ಕಾಣುವ ಮುಖ್ಯ ಲಕ್ಷಣವು. ಅದನ್ನು ನಾನಾವಿಧದಲ್ಲಿ ಉಪಯೋಗಿಸುವರು. ಈ ಮಕ್ಕಳಿಗೆ ಕೆಲಸಮಾಡಲು ಇಷ್ಟವೇನೋ ಇರುವುದು. ಆದರೆ ಈ ಕೆಲಸದಿಂದ ಇವರಿಗೆ ಪ್ರಯೋಜನವಾಗಬೇಕಾದರೆ ಇನ್ನೊಬ್ಬರ ಮೇಲ್ವಿಚಾರಣೆಯು ಅವಶ್ಯಕವು. ಈ ಮಕ್ಕಳಲ್ಲಿ ಕಲ್ಪನೆಯು ಬಹಳ ಹೆಚ್ಚಾಗಿರುವುದು. ಮನಸ್ಸಿಗೇನಾದರೂ ಒಂದಂಶವು ತೋರಿದರೆ ಅದರ ವಿಷಯದಲ್ಲಿ ವಿಶೇಷ ಯೋಚಿಸದೆ ಒಡನೆಯೇ ಕಾರ್ಯದಲ್ಲಿ ಪ್ರವರ್ತಿಸುವರು. ಅವರು ತಮ್ಮ ಸುತ್ತಲೂ ಇರುವ ನಿಜವಾದ ಪ್ರಪಂಚದಲ್ಲೂ ತಮ್ಮ ಕಲ್ಪನಾಪ್ರಪಂಚದಲ್ಲೂ ಕೆಲಸಮಾಡಲು ಇಷ್ಟಪಡುವರು. ಈ ಮಕ್ಕಳಿಗೆ ಅನುಕೂಲವಾದ ಕೆಲಸವನ್ನು ಗೊತ್ತುಮಾಡುವುದೇ ಬಲು ಕಷ್ಟವಾಗುವುದು. ಫ್ರೊಬೆಲ್ಲನು ಅವನ ಕಿಂಡರ್‌ಗಾರ್ಟನ್ನಿನಲ್ಲಿ ಈ ಕಷ್ಟವನ್ನು ಪರಿಹರಿಸಲು ಅನುಕೂಲವಾದ ಉಪಾಯಗಳನ್ನು ಕಲ್ಪಿಸಿರುವನು. ಸಣ್ಣ ಮಕ್ಕಳಿಗೆ ಸೌಖ್ಯವು ಅವಶ್ಯಕವಾದರೂ ಅದನ್ನು ಹೊಂದುವ ವಿಷಯದಲ್ಲಿ ಅವರಿಗೆ ಅತ್ಯಧಿಕವಾದ ಕುತೂಹಲವೇನೂ ಇರುವುದಿಲ್ಲ. ಮಕ್ಕಳನ್ನು ಕಷ್ಟದಿಂದ ಕಾಪಾಡಿದರೆ ಸಾಕು, ಅವರ ಸೌಖ್ಯವನ್ನು ಹೆಚ್ಚಿಸಲು ವಿಶೇಷಪ್ರಯತ್ನಪಡಬೇಕಾದುದಿಲ್ಲ ಎಂದು ಕೆಲವರು ಹೇಳುವರು. ಆದರೆ ಹೀಗೆ ಹೇಳುವುದು ಅಷ್ಟು ಸಮ್ಮತವಾಗಿ ಕಾಣುವುದಿಲ್ಲ. ತಮ್ಮ ಸುತ್ತಲೂ ಇರುವ ಪ್ರಪಂಚದಲ್ಲಿ ಸುಖಪಡಬೇಕೆಂತಲೇ ಮಕ್ಕಳು ಇಷ್ಟಪಟ್ಟಿರುವರು.

ಸ್ವಲ್ಪ ವಯಸ್ಸಾದ ಮಕ್ಕಳಲ್ಲಿ ಮನಃಸ್ಥೈರ್ಯವೂ ಸಂಕಲ್ಪವೂ ಅಧಿಕವಾಗಿರುವುವು. ಇವರಿಗೆ ಪ್ರಪಂಚದ ಅನುಭವವು ಹೆಚ್ಚಾಗಿರುವುದು. ಸಣ್ಣಮಕ್ಕಳಿಗೆ ಅನುಕೂಲವಾದ ಆಟಗಳೂ, ಗಾನಗಳೂ, ಇವರಿಗೆ ರುಚಿಸದಿರಬಹುದು. ಕೇವಲ ಸಣ್ಣ ಮಕ್ಕಳಿಗೆ ವಿಶೇಷ ಅವಧಾನವನ್ನು ಅಪೇಕ್ಷಿಸದ ಇಲಿ ಬೆಕ್ಕಿನ ಆಟ, ಬೀಜವನ್ನು ಬಿತ್ತುವ ಆಟ ಇಂತಹ ಆಟಗಳನ್ನು ಆಡಲು ಬಹು ಕುತೂಹಲವಿರುವುದು. ಆದರೆ ದೊಡ್ಡ ಮಕ್ಕಳಿಗೆ ಹೆಚ್ಚು ಅವಧಾನವು, ಕಷ್ಟವನ್ನು ಸಹಿಸುವ ಶಕ್ತಿಯೂ ಇರುವುದರಿಂದ ಅವರು ಇಂತಹ ಆಟಗಳಿಂದ ತೃಪ್ತಿಪಡುವುದಿಲ್ಲ. ಇವರಿಗೆ ಕಷ್ಟವಾದ ಆಟಗಳನ್ನು ಕಲ್ಪಿಸಬೇಕಾಗುವುದು. ಈ ಮಕ್ಕಳಲ್ಲಿ ಪರೀಕ್ಷಣಶಕ್ತಿಯು ಶಿಶುಗಳಿಗಿಂತಲೂ ಹೆಚ್ಚಾಗಿರುವುದು. ಇವರು ಇತರರ ಜತೆಯಲ್ಲಿ ಸೇರುವುದಕ್ಕೂ ಆಟಗಳನ್ನಾಡುವುದಕ್ಕೂ ಇಷ್ಟಪಡುವರು. ಅನುತಾಪವು ಇವರಲ್ಲಿ ಅಧಿಕವಾಗಿರುವುದು. ತಾವು ಮಾಡಿದ ಪದಾರ್ಥಗಳನ್ನು ಎಚ್ಚರಿಕೆಯಿಂದ ಕಾಪಾಡಲು ಇವರು ಇಷ್ಟಪಡುವರು. ಸಣ್ಣಮಕ್ಕಳಿಗೆ ಕಲ್ಪನಾಪ್ರಪಂಚದಲ್ಲೇ ಮಮತೆಯು ಅಧಿಕವಷ್ಟೆ. ಸ್ವಲ್ಪ ವಯಸ್ಸಾದವರಿಗೆ ತಮ್ಮ ಸುತ್ತಲೂ ಇರುವ ನಿಜವಾದ ಪ್ರಪಂಚದಲ್ಲೇ ಮಮತೆಯು ಹೆಚ್ಚಾಗಿರುವುದು. ಆದುದರಿಂದ ಕೇವಲ ಸಣ್ಣಮಕ್ಕಳನ್ನೂ ವಯಸ್ಸಾದವರನ್ನೂ ಒಂದೇ ತರಗತಿಯಲ್ಲಿಟ್ಟು ಪಾಠಹೇಳುವುದು ಸರಿಯಲ್ಲವೆಂದು ತೋರುವುದು.

ಮೂರರಿಂದ ಐದುವಯಸ್ಸಿನ ವರೆಗಿನ ಮಕ್ಕಳಿಗೆ ಗಾನಸಹಿತವಾದ ಆಟಗಳು ಬಾಯಿಪಾಠಕ್ಕಾಗಿ ಸಣ್ಣಸಣ್ಣ ಪದ್ಯಗಳು, ಒಂದು ಚಿತ್ರವನ್ನು ತೋರಿಸಿ ಅದರ ವಿಷಯದಲ್ಲಿ ಸಲ್ಲಾಪ, ಬಣ್ಣದ ರಟ್ಟುಗಳಿಂದ ನಾನಾವಿಧವಾದ ಹಸೆಗಳನ್ನು ರಚಿಸುವುದು, ಕರಿಹಲಗೆಯಮೇಲೂ ಮರಳಿನಮೇಲೂ ಚಿತ್ರಬರೆಯುವುದು, ನಾನಾ ಬಣ್ಣದ ವಸ್ತುಗಳಿರುವ ರಾಶಿಯಿಂದ ಕೇಳಿದ ಬಣ್ಣದ ವಸ್ತುವನ್ನು ತೆಗೆದುಕೊಡುವುದು, ದಪ್ಪ ಸೂಜಿಗಳಿಂದ ಕಸೂತಿಹಾಕುವುದು, ಎರಡು ಮೂರು ಮಣಿಗಳನ್ನು ಒಟ್ಟೊಟ್ಟಾಗಿ ಪೋಣಿಸುವುದೂ, ಬಳೆಕಡ್ಡಿಗಳಿಂದ ಆಕೃತಿಗಳನ್ನು ರಚಿಸುವುದು, ಮೂರು ನಾಲ್ಕನೆಯ ಕರಣಗಳಿಂದ ನಾನಾವಿಧವಾದ ಕಟ್ಟಡಗಳನ್ನು ಕಟ್ಟುವುದು, ಇವೇ ಈ ವಯಸ್ಸಿನ ಮಕ್ಕಳಿಗೆ ಅನುಕೂಲವಾದ ಕೆಲಸಗಳೆಂದು ಕಾಣುವುವು.

ಐದರಿಂದ ಏಳುವಯಸ್ಸಿನವರೆಗಿನ ಮಕ್ಕಳಿಗೆ ಬ್ರಷ್‌ವರ್ಕ್, ಪೆನ್ಸಿಲ್ ಚಿತ್ರ, ಪ್ರಕೃತಿವಿಮರ್ಶೆ, ವರ್ಣನೆಯೇ ಪ್ರಧಾನವಾದ ಚರಿತ್ರೆ, ದೇಶಸಂಚಾರ ಇವಕ್ಕೆ

ಸಂಬಂಧಪಟ್ಟ ಕಥೆಗಳು, ಬರೆವಣಿಗೆ, ಓದುವುದು, ಡ್ರಿಲ್, ಸ್ವಲ್ಪ ಕಷ್ಟವಾದ ಆಟಗಳು, ಮಣ್ಣಿನ ಕೆಲಸ, ಚಿತ್ರದಿಂದ ಹೆಣೆಯುವದು, ಉದ್ದವನ್ನೂ ತೂಕ ವನ್ನೂ ಅಳತೆಮಾಡುವುದು, ಚೆಂಡಿನ ಆಟಗಳು, ಕಾಗದವನ್ನು ಮಡಿಸುವುದು, ಕತ್ತರಿಸುವುದು, ಮತ್ತು ಇದರಿಂದ ಹೆಣೆಯುವುದು, ಇವೇ ಇವರಿಗೆ ಅನುಕೂಲ ವಾದ ಕೆಲಸಗಳೆಂದು ಕಾಣುವುವು.

ಏಳರಿಂದ ಎಂಟುವಯಸ್ಸಿನಮಕ್ಕಳಿಗೆ ಐದು ಆರನೆಯ ಕರಣಗಳಿಂದ ಆಕೃತಿ ಗಳನ್ನು ಕಟ್ಟುವುದು, ಬ್ರಷ್ ವರ್ಕ್, ಮಣ್ಣಿನ ಕೆಲಸ, ಮಗ್ಗದಲ್ಲಿ ಹೆಣೆಯುವದು, ಗೂಡೆ ಮಾಡುವುದು, ರಟ್ಟಿನ ಕೆಲಸ, ಪ್ರಕೃತಿವಿಮರ್ಶೆ, ಡ್ರಿಲ್, ಕ್ರಮವಾದ ಆಟ ಗಳು, ಇವೇ ಈ ವಯಸ್ಸಿಗೆ ತಕ್ಕ ಕೆಲಸಗಳಾಗಿ ಇರುವುವು. ಈ ಮಕ್ಕಳಿಗೆ ಪ್ರಕೃತಿ ವಿಮರ್ಶೆಯನ್ನು ನಡೆಸುವಾಗ ಪ್ರಕೃತಿಯಲ್ಲಿ ಪ್ರೀತಿಯನ್ನು ಹುಟ್ಟಿಸುವುದೇ ಮುಖ್ಯೋದ್ದೇಶವಾಗಿರಬೇಕು. ನಾವು ಮಾಡಿಸುವ ಪ್ರತಿಯೊಂದು ಕೆಲಸದಲ್ಲೂ ಮನೆಯಲ್ಲಿ ಅಥವಾ ಪಾಠಶಾಲೆಯಲ್ಲಿ ಉಪಯುಕ್ತವಾಗುವಂತೆ ಒಂದು ಉದ್ದೇಶ ವನ್ನು ಇಟ್ಟುಕೊಳ್ಳಬೇಕು.

ಒಂಭತ್ತು ವಯಸ್ಸಿನ ಮಕ್ಕಳಿಗೆ ಮಣ್ಣಿನಕೆಲಸ, ಮಗ್ಗದಲ್ಲಿ ಹೆಣೆಯುವದು, ಬ್ರಷ್‌ವರ್ಕ್, ಪೆನ್ಸಿಲ್ ಚಿತ್ರ, ಸ್ಲಾಯಿಡ್ ಕೆಲಸದಲ್ಲಿ ಆದಿಭಾಗ, ಪ್ರಕೃತಿವಿ ಮರ್ಶೆ, ತೋಟಮಾಡುವುದು, ಇದೇ ಅನುಕೂಲವಾದ ಕೆಲಸಗಳೆಂದು ತೋರು ವುದು. ಪ್ರತಿಯೊಂದು ಕೆಲಸದಲ್ಲೂ ವಿದ್ಯಾಭ್ಯಾಸಕ್ಕೆ ಪ್ರಯೋಜನಕರವಾದ ಒಂದು ಉದ್ದೇಶವಿರಬೇಕು. ಅಂಥ ಒಂದನ್ನೇ ಮುಖ್ಯವಾಗಿಟ್ಟುಕೊಂಡು ಯಾವ ಪದಾರ್ಥವನ್ನೂ ಮಾಡಿಸಕೂಡದು. ಈ ಮಕ್ಕಳ ವಿಷಯದಲ್ಲಿ ಪ್ರಕೃತಿವಿಮರ್ಶೆ ಯನ್ನು, ಮುಂದೆ ನಡೆಯುವ ಸಸ್ಯಶಾಸ್ತ್ರ, ಭೂಗರ್ಭಶಾಸ್ತ್ರ, ಪ್ರಾಣಿಶಾಸ್ತ್ರ ಇವು ಗಳಿಗೆ ಸಹಾಯವಾಗುವಂತೆ ಮಾಡಿಕೊಳ್ಳಬೇಕು.

ಇಲ್ಲಿ ಬರೆದಿರುವ ಅಂಶಗಳಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಅವರಲ್ಲಿ ಸಹಜವಾಗಿ ರುವ ಕಾರ್ಯಾಭಿನಿವೇಶವೇ ಆಧಾರವಾಗಿರಬೇಕು, ಅವರ ವಿದ್ಯಾಭ್ಯಾಸವು ಆಟದ ರೂಪದಲ್ಲಿ ನಡೆಯಬೇಕು, ಮತ್ತು ಈ ಮಕ್ಕಳ ಸೌಖ್ಯವನ್ನು ಹೆಚ್ಚಿಸುವುದಕ್ಕೆ ಉಪಾಧ್ಯಾಯರು ಹೆಚ್ಚು ಪ್ರಯತ್ನಪಡಬೇಕು, ಎಂಬೀ ಅಂಶಗಳೇ ಫ್ರೊಬೆಲ್ಲನು ಅನುಮೋದಿಸುವ ಕ್ರಮದ ಸಾರವಾಗಿರುವವೆಂದು ಸ್ಪಷ್ಟಪಡುವುದಷ್ಟೆ. ಆದರೆ ಇತರರು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಅವರು ತಮ್ಮ ಅಭಿಪ್ರಾ

ಯಕ್ಕೆ ತಕ್ಕ ಅನೇಕ ಕಾರಣಗಳನ್ನು ಹೇಳುವರು. ಮಗುವಿಗೆ ಸುಖಾನುಭವವೊಂದೇ ಇರಬಾರದು, ಪ್ರಪಂಚದಲ್ಲಿ ಕಷ್ಟಸುಖಗಳು ದ್ವಂದವಾಗಿರುವುದರಿಂದ ಮಗುವು ಕಷ್ಟವನ್ನೂ ಸ್ವಲ್ಪ ಅರಿತಿರಬೇಕು, ಹೀಗೆಂದು ಇವರು ಹೇಳುವರು. ಈ ಎರಡು ವಿಧವಾದ ಅಭಿಪ್ರಾಯಗಳಲ್ಲೂ ಗುಣದೋಷಗಳೆರಡೂ ಇರುವುವು. ಒಟ್ಟಿನಲ್ಲಿ ಫ್ರೊಬೆಲ್ಲನು ಅನುಮೋದಿಸುವ ಅಭಿಪ್ರಾಯವೇ ಉತ್ತಮವಾದುದೆಂದು ತೋರುವುದು, ಅಂದರೆ ನಾವು ಪಾಠಶಾಲೆಯಲ್ಲಿ ಮಕ್ಕಳ ಸೌಖ್ಯವನ್ನು ಹೆಚ್ಚಿಸುವುದನ್ನೇ ಮುಖ್ಯವಾಗಿಟ್ಟುಕೊಳ್ಳಬೇಕಾಯಿತು. ದೇವರು ಸೃಷ್ಟಿಸಿರುವ ಜಂತುಗಳಲ್ಲಿ ಅತ್ಯುತ್ತಮನಾದ ಮನುಷ್ಯನು ಸುಖಪಡಬೇಕೆಂದಲ್ಲವೇ ಜಗದೀಶನು ಇಷ್ಟು ಸುಂದರವಾದ ಪ್ರಪಂಚವನ್ನು ಸೃಷ್ಟಿಸಿರುವುದು? ಆದರೆ ಈ ಸೌಖ್ಯವು ಏತರಿಂದುಂಟಾಗುವುದು? ಕ್ರಮವಾಗಿ ಕೆಲಸವನ್ನೊದಗಿಸುವುದು, ಸ್ವಾತಂತ್ರ್ಯವನ್ನು ಕೊಡುವುದು, ವಿಧೇಯರಾಗಿರುವಂತೆ ಮಾಡುವುದು. ಪ್ರಕೃತಿಯಲ್ಲಿ ಕಾಣುವ ಸೌಂದರ್ಯವನ್ನು ತಿಳಿಯುವ ಶಕ್ತಿಯನ್ನುಂಟುಮಾಡುವುದು, ಇತರರ ಸೌಖ್ಯವನ್ನು ಹೆಚ್ಚಿಸುವುದಕ್ಕೆ ಪ್ರಯತ್ನಪಡುವುದು, ಇವೇ ಮನುಷ್ಯನ ಸೌಖ್ಯಕ್ಕೆ ಆಧಾರವಾದ ಅಂಶಗಳೆಂದು ತೋರುವುದು. ಮಕ್ಕಳಿಗೆ ಸ್ವಾತಂತ್ರ್ಯವನ್ನು ಕೊಡುವುದೆಂದರೆ ಸ್ವೇಚ್ಛಾಪ್ರವರ್ತನೆಗೆ ಬಿಡುವುದಿಲ್ಲ. ಸ್ವತಃ ಯೋಚಿಸುವ ಶಕ್ತಿಯನ್ನುಂಟುಮಾಡುವುದು. ಪಾಠಶಾಲೆಯಲ್ಲಿ ದೇಹದಂಡನೆಯು ಎಂದಿಗೂ ಇರಬಾರದು, ಇದರಿಂದ ನಮ್ಮ ಕಾರ್ಯವನ್ನು ಸರಿಯಾಗಿ ನೆರವೇರಿಸುವ ಶಕ್ತಿಯು ನಮ್ಮಲ್ಲಿ ಇಲ್ಲವೆಂಬುದು ವ್ಯಕ್ತವಾಗುವುದು. ಪ್ರತಿಯೊಂದು ಮಗುವೂ ಒಂದೇಕಾಲದಲ್ಲಿ ಒಂದೇ ಕೆಲಸವನ್ನು ಮಾಡಬೇಕೆಂಬ ಸೈನ್ಯಕ್ಕೆ ಸಂಬಂಧವಾದ ನಿಯಮವನ್ನು ಪಾಠಶಾಲೆಯಲ್ಲಿ ಸದಾ ಆಚರಣೆಯಲ್ಲಿಡುವುದೂ ಸರಿಯಲ್ಲ. ಮಕ್ಕಳನ್ನು ಸದಾ ಸ್ವೇಚ್ಛಾಪ್ರವರ್ತನೆಗೂ ಬಿಡಬಾರದು. ಅಥವಾ ಸೈನ್ಯದಲ್ಲಿರುವ ಕಠಿಣವಾದ ನಿಯಮಗಳಂಥ ನಿಯಮಗಳಿಗೂ ಗುರಿಮಾಡಬಾರದು. ಪಾಠಶಾಲೆಯ ಆಳ್ವಿಕೆಯು ಇವೆರಡಕ್ಕೂ ಮಧ್ಯಸ್ಥವಾಗಿರಬೇಕು. ಮಕ್ಕಳು ಉಪಾಧ್ಯಾಯರಿಗೆ ಅವರಲ್ಲಿರುವ ಪ್ರೀತಿಯ ಸಹಾಯದಿಂದ ಮನಃಪೂರ್ವಕವಾಗಿ ವಿಧೇಯರಾಗಿರಬೇಕು. ಪಾಠಶಾಲೆಯಲ್ಲಿ ಸರಿಯಾದ ಆಳ್ವಿಕೆಯನ್ನು ಕಾಪಾಡುವುದಕ್ಕೂ, ಅಲ್ಲಿನ ಕೆಲಸಗಳನ್ನು ಉಪಾಧ್ಯಾಯರು ಸುಲಭವಾಗಿ ನಡೆಸುವುದಕ್ಕೂ ಇದೇ ಫ್ರೊಬೆಲ್ಲನು ಅನುಮೋದಿಸುವ ಮಾರ್ಗವಾಗಿರುವುದು.

(ಜೂಲೈ ತಿಂಗಳ ೧೬೮ನೇ ಪುಟದ ಉಪನ್ಯಾಸದ ಶೇಷ).

'ಅನಭ್ಯಾಸೇ ವಿಷಂ ವಿದ್ಯಾ' ಎಂಬಂತೆ ಹೊಸದಾದ ಈ ವಿದ್ಯಾಭ್ಯಾಸದಲ್ಲಿ ಅಭಿರುಚಿ ಹುಟ್ಟುವುದು ಕಡಮೆ. ಬಾಲ್ಯದಲ್ಲಿ ಮತಾಚರಣೆಯೂ ಇವರಿಗಿಲ್ಲದುದರಿಂದ ದೊಡ್ಡವರಾದಮೇಲೆ ಬರತಕ್ಕುದೂ ಅಸಂಭವವು.

ಆದಕಾರಣ ಮತಸಂಬಂಧವಾದ ವಿಷಯಗಳು ಹುಡುಗರ ಮನಸ್ಸಿನಲ್ಲಿ ಚೆನ್ನಾಗಿ ನೆಲಸಿ ದೊಡ್ಡವರಾದಮೇಲೂ ಅವರು ಆದರಂತೆ ಆಚರಿಸಲಿ ಎಂಬ ಪರಿಜ್ಞಾನದಿಂದ ನಾವು ಬಾಲ್ಯದಲ್ಲೇ ಮಕ್ಕಳಿಗೆ ಮತವಿಷಯಗಳನ್ನು ಬೋಧಿಸಬೇಕು ಯಾರಲ್ಲಿ ಮತಸಂಬಂಧವಾದ ವಿಷಯಗಳಿಲ್ಲವೊ ಅವರಲ್ಲಿ ನಿಯಮವಿರುವುದಿಲ್ಲ. ಅಂದರೆ ಒಂದು ಕಟ್ಟುನಿಟ್ಟು ಇರುವುದಿಲ್ಲ. ಮನಸ್ಸಿಗೆ ಬಂದುದೆಲ್ಲಾ ಆಚರಣೆಯಾಗಿಬಿಡುತ್ತದೆ. ಇಂಥಾ ಸಂದರ್ಭದಲ್ಲಿ ಒಬ್ಬನ ಆಚರಣೆಯು ಮತ್ತೊಬ್ಬನಿಗೆ ಸರಿಹೋಗದಿದ್ದರೆ ಪರಸ್ಪರ ವೈಷಮ್ಯವೂ ಕಲಹವೂ ಉಂಟಾಗುವುದು. ಇದರಿಂದ ಐಕಮತ್ಯವು ಕಡಮೆಯಾಗುವುದು. ಇದಕ್ಕೆ ದೃಷ್ಟಾಂತವಾಗಿ ಕಾಡುಜನಗಳನ್ನು ತೆಗೆದುಕೊಳ್ಳಬಹುದು. ಅವರು ಪದೇಪದೇ ಜಗಳ ಹಿಡಿಯುತ್ತಲೇ ಇರುವರು. ಒಂದು ಸ್ಥಳದಲ್ಲಿರುವರು ಮತ್ತೊಂದುಸ್ಥಳಕ್ಕೆ ಅಂದರೆ ಮತ್ತೊಬ್ಬನಿರುವಸ್ಥಳಕ್ಕೆ ಹೋದರೆ ಜಗಳ ಹಿಡಿಯುವರು. ಇದರಿಂದಲೇ ಅಂತಹ ದೊಡ್ಡ ಕಾಡುಗಳಲ್ಲಿ ಕೂಡ ಬಹಳ ದೂರದೂರಕ್ಕೆ ಕಾಡುಜನರ ಊರುಗಳು ಒಂದೊಂದಿರುವುವು. ಇವರಲ್ಲಿ ಜಾತಿ ಕುಲ ಗೋತ್ರಗಳಿಲ್ಲ. ಇದರಿಂದ ಒಬ್ಬೊಬ್ಬನ ಆಚರಣೆ ಒಂದೊಂದು ವಿಧವಾಗಿದೆ. ಕ್ರಮವಿಲ್ಲ. ಮತಾಚರಣೆಯಿದ್ದರೆ ಪ್ರತಿಯೊಬ್ಬರಲ್ಲಿಯೂ ಒಂದೇರೀತಿಯಾದ ಕ್ರಮವಿರುತ್ತಿತ್ತು. ಇದನ್ನರಿತು ಕುಶಲರಾದವರು ಪ್ರತಿಯೊಬರೂ ಯಾವದಾದರೂ ಒಂದು ಶ್ಲಾಘ್ಯವಾದ ಮತವನ್ನವಲಂಬಿಸಿ ಆ ಮತದ ಸಾರವನ್ನು ತಮ್ಮ ಮಕ್ಕಳಿಗೂ ಬೋಧಿಸಬೇಕು.

ಮಕ್ಕಳಿಗೆ ಮತವಿಷಯಗಳನ್ನು ಬೋಧಿಸುವುದೆಂದರೆ ಶ್ರೀಭಾಷ್ಯಾದಿಗಳನ್ನೇ ಬೋಧಿಸಬೇಕೆಂಬ ತಾತ್ಪರ್ಯವಲ್ಲ. ದೊಡ್ಡದೊಡ್ಡ ಗ್ರಂಥಗಳಲ್ಲಿ ಹೇಳಿರತಕ್ಕ ವಿಷಯಗಳನ್ನು ಸಂಗ್ರಹಿಸಿ ಅವಶ್ಯಕಗಳಾಗಿ ಸಾರವಾದುವುಗಳನ್ನು ಬಳಕೆಯ ಮಾತಿನಲ್ಲಿ ಹೇಳಿಕೊಡಬೇಕು. ಹೇಳಿಕೊಟ್ಟುದನ್ನು ಆಚರಿಸುವಂತೆ ಮಾಡಬೇಕು. ಕೇವಲ ವಿಷಯಬೋಧನೆಯೇ ಅಲ್ಲದೆ ಮತಗಳಲ್ಲಿ ಕೇವಲ ಆಚಾರಗಳೇ ಕೆಲವುಂಟು. ಅವುಗಳನ್ನು ಹೇಳಿಕೊಡಬೇಕು. ಅವುಗಳಲ್ಲಿ ತಪ್ಪುಗಳಿದ್ದರೆ ತಿದ್ದುಪಾಟುಗಳನ್ನು ಮಾಡಬೇಕು.

ಹೀಗೆ ಮಾಡಿದರೆ ಬಾಲಕರು ದೊಡ್ಡವರಾದಮೇಲೆ ಈ ವಿಷಯಗಳನ್ನು ಎಂದೆಂದಿಗೂ ಮರೆಯುವುದಿಲ್ಲ. ದೊಡ್ಡವರಾದಮೇಲೆ ಉದ್ಗ್ರಂಥಗಳನ್ನು ಹೇಳಿಕೊಡುವುದಕ್ಕೂ ಪೂರ್ವದಲ್ಲಿಯೇ ಅವರಲ್ಲಿ ಸಂಸ್ಕಾರವಿರುವದರಿಂದ ಬೋಧೆಯು ಸುಲಭವಾಗುವುದು. ದೊಡ್ಡವನಾದಾಗ ಉದ್ಗ್ರಂಥಗಳನ್ನೇ ಮೊದಲುಮಾಡಿದರೆ ಅವನಿಗೆ ಸಂಸ್ಕಾರವಿಲ್ಲದುದರಿಂದ ಗಹನವಾಗಿ ತೋರುವುದು. ಚಿಕ್ಕತನದಲ್ಲಿ ಮತಾಚರಣೆಗಳೂ ಸುಲಭವಾದುವುಗಳಾಗಿರಬೇಕು. ದೊಡ್ಡವನಾದಮೇಲೆ ಅದಕ್ಕಿಂತಲೂ ಕಷ್ಟವಾದ ಆಚಾರಗಳನ್ನು ಹೇಳಿಕೊಡಬಹುದು. ಇದರಿಂದ ಸೌಲಭ್ಯವುಂಟಾಗುವುದು. ಈ ಸೌಲಭ್ಯವು ಬಾಲ್ಯದಲ್ಲಿ ಆತನಿಗೆ ಸಂಸ್ಕಾರ ಉಂಟಾದುದರಿಂದಲೇ ಆಯಿತಾದುದರಿಂದ ಬಾಲ್ಯದಲ್ಲಿಯೇ ಮತವಿಷಯವನ್ನು ಬೋಧಿಸತಕ್ಕದು ಅವಶ್ಯಕವು.

ಏವಂಚ ಹುಡುಗರಲ್ಲಿ ಅನುಕರಣಾಶಕ್ತಿ, ಗ್ರಹಣಶಕ್ತಿ, ಕುತೂಹಲ, ಲವಲವಿಕೆ, ನಾಗರೀಕತೆ, ಏಕಮತ್ಯ, ಉತ್ಸಾಹ, ಉಪಕಾರ್ಯೋಪಕಾರಿಭಾವ, ತತ್ವಜ್ಞತೆ, ಮೊದಲಾದುವುಗಳು ಜನಿಸುವುದರಿಂದಲೂ, ವಿದ್ಯಾಬೀಜಕ್ಕೂ ಸಂಸ್ಕಾರಕ್ಕೂ ಪಾತ್ರವಾದ ಬಾಲ್ಯದಲ್ಲಿಯೇ ಮತಬೋಧೆಯನ್ನು ಮಾಡಬೇಕೆಂದು ಎಲ್ಲರೂ ತಿಳಿದು ಅದರಂತೆ ಆಚರಣೆಗೆ ತರತಕ್ಕದು ಮೇಲಾಗಿದೆ. ಈ ವಿಷಯದಲ್ಲಿ ಭಗವಂತನು ಸಹಾಯ ಮಾಡಬೇಕೆಂದು ಕೋರುವೆನು,

ಟಿ. ಶ್ರೀನಿವಾಸರಂಗಾಚಾರ್ಯ.

ಗಣಿತ.

I $\frac{\frac{2}{3}\left(1\frac{2}{3}-\frac{3}{8} \text{ ರ } 1\frac{1}{9}\right)+\frac{1}{17}}{\frac{3}{4}\times 1\frac{4}{7}\div 1\frac{1}{2}-\frac{11}{28}}\times\frac{\frac{3}{4}+\frac{2}{3}}{\frac{3}{4}-\frac{2}{3}}-20$

II ಎರಡು ಸಂಖ್ಯೆಗಳ ಲ.ಸಾ. ಅ = 3060288 ಮ.ಸಾ. ಅ = 168 ಮತ್ತು ಒಂದು ಸಂಖ್ಯೆಯು 12096 ಆದರೆ ಮತ್ತೊಂದನ್ನು ಕಂಡುಹಿಡಿಯಿರಿ?

III 72 ಮಂದಿ ಒಂದು ಕೆಲಸವನ್ನು ಕೆಲವುದಿವಸಗಳಲ್ಲಿ ಮಾಡುತ್ತಾರೆ. 18 ಮಂದಿ ಅದೇ ಕೆಲಸವನ್ನು ಮಾಡುವುದಕ್ಕೆ 10 ದಿನಗಳು ಹೆಚ್ಚಾಗಿ ತೆಗೆದುಕೊಳ್ಳುತ್ತಾರೆ. ಅದೇಕೆಲಸವನ್ನು 8 ದಿವಸಗಳಲ್ಲಿ ಎಷ್ಟುಮಂದಿ ಮಾಡುತ್ತಾರೆ?

IV ಪಲ್ಲಾ 1ಕ್ಕೆ 12 ರೂ. 10 ಆ. 8 ಕಾ. ಮೇರೆ 24 ಪಲ್ಲ 71$\frac{1}{4}$ ಸೇರು ಗಳ ಅಕ್ಕಿಗೆ ಆಗುವ ಬೆಲೆಯನ್ನು ರೂಥಿಗಣಿತದ ಮಾರ್ಗವಾಗಿ ಕಂಡು ಹಿಡಿಯಿರಿ ?

V ಒಬ್ಬನು ಒಂದು ಪದಾರ್ಥವನ್ನು ಶೇಕಡ 25 ರ ಲಾಭಕ್ಕೆ ಮಾರುತ್ತಾನೆ. ಅದರ ಅಸಲು 12$\frac{1}{2}$ ಕಡಮೆಯಾಗಿದ್ದು ಅವನು ಶೇ 30ರ ಲಾಭಕ್ಕೆ ಮಾರಿದ್ದರೂ ಅವನಿಗೆ ಅದೇ ಮೊಬಲಗು ಬರುತ್ತಿತು. ಆದರೆ ಆ ಪದಾರ್ಥದ ಅಸಲು ಖರೀದಿಯೇನು ?

VI. ಶೇಕಡಾ ಆರರಮೇರೆ 150 ಪೌಂಡಿಗೆ ಎಷ್ಟು ಕಾಲದಲ್ಲಿ 4$\frac{1}{3}$ ಪೌಂಡು ಬಡ್ಡಿ ಬರುತ್ತದೆಯೋ ಅದೇಕಾಲದಲ್ಲಿ ಯಾವ ದರದಪ್ರಕಾರ 200 ಪೌಂಡಿಗೆ 210 ಪೌಂಡು ಮೊತ್ತವಾಗುತ್ತದೆ ?

VII. ನಾನು ಕೆಲವು ಕಿತ್ತಲೇಹಣ್ಣುಗಳನ್ನು 5 ಪೈಗೆ 1ರ ಮೇರೆ ಕೊಂಡು ಕೊಂಡು ಅವುಗಳಲ್ಲಿ $\frac{1}{3}$ ಭಾಗವನ್ನು 3 ಹಣ್ಣುಗಳನ್ನು A ಗೂ ಉಳಿದಿದ್ದರ $\frac{2}{7}$ ಭಾಗವನ್ನು 2 ಹಣ್ಣುಗಳನ್ನು B ಗೂ ಇನ್ನು ಉಳಿದಿದ್ದರ $\frac{1}{4}$ ಭಾಗವನ್ನು 4ಹಣ್ಣುಗಳನ್ನು Cಗೂ ಕೊಟ್ಟ ತರುವಾಯು ಉಳಿದ ಹಣ್ಣುಗಳನ್ನು ಶೇ 40ರ ಲಾಭಕ್ಕೆ ಮಾರಿದುದರಿಂದ ನನಗೆ 6 ಆ. 5 ಪೈ ಬಂತು ಹಾಗಾದರೆ ನಾನು ಕೊಂಡುಕೊಂಡ ಹಣ್ಣುಗಳೆಷ್ಟು ?

VIII ಒಬ್ಬ ವ್ಯಾಪಾರಿಯು ಕುದುರೆ 1ಕ್ಕೆ 25 ರೂ ಗಳ ಪ್ರಕಾರ ಕೆಲವು ಕುದುರೆಗಳನ್ನು ಕೊಂಡುಕೊಂಡು ಅವುಗಳಲ್ಲಿ 70 ಕುದುರೆಗಳನ್ನು ಶೇ 20 ರ ಮೇರೆ ಲಾಭ ಬರುವಂತೆಯೂ ಉಳಿದುವನ್ನು ಶೇ 25ರ ಮೇರೆ ನಷ್ಟವಾಗುವ ಹಾಗೆಯೂ ಮಾರಿದನು. ಈ ವ್ಯಾಪಾರದಿಂದ ಅವನಿಗೆ ಒಟ್ಟು 37 ರೂ. 8. ಆ. ಲಾಭಬಂದಿದ್ದರೆ ಅವನು ಮೊದಲು ತೆಗದುಕೊಂಡ ಕುದುರೆಗಳೆಷ್ಟು.

IX Aಯು $\frac{1}{2}$ಭಾಗವು Bಯು 1$\frac{1}{4}$ಕ್ಕೆ ಸಮವಾಗಿಯೂ Bಯು 1$\frac{1}{5}$ ಭಾಗ Cಯು $\frac{3}{4}$ಭಾಗಕ್ಕೆ ಸಮವಾಗಿರುವಂತೆ 205 ರೂ. ಗಳನ್ನು A+B+C ಎಂಬವರಿಗೆ ಹಂಚಿರಿ.

ಎಸ್. ನರಸಿಂಹಯ್ಯ.

ರಕ್ತಚಲನೆ.

ರಕ್ತವು ಮನುಷ್ಯದೇಹದಲ್ಲಿ ಯಾವಾಗಲೂ ಹರಿಯುತ್ತಲೇ ಇರುವುದು. ಜೀವಧಾರಣೆಗೆ ಅದು ಹೀಗೆ ಚಲನಮಾಡುತ್ತಿರುವುದು ಅತ್ಯಾವಶ್ಯಕ. ರಕ್ತಚಲನೆಯು ನಿಂತರೆ ಜೀವವು ಉಳಿಯುವುದಿಲ್ಲ. ದೇಹದಲ್ಲಿರುವ ಸರ್ವಭಾಗಗಳ ಪೋಷಣೆಗೂ ಶುದ್ಧವಾದ ರಕ್ತವು ಬೇಕು. ದೇಹದಲ್ಲಿ ಸರ್ವದಾ ಉಂಟಾಗುತ್ತಿರುವ ಕಶ್ಮಲಗಳನ್ನು ಹೊರಗೆ ಹಾಕುವುದಕ್ಕೂ ರಕ್ತವು ಬೇಕು. ರಕ್ತವು ಒಂದೇ ಕಡೆಯಲ್ಲಿದ್ದರೆ ಮಿಕ್ಕ ಭಾಗಗಳ ಪೋಷಣೆಗೆ ಮಾರ್ಗವಿಲ್ಲ. ಒಂದು ಭಾಗದ ಕಶ್ಮಲಗಳನ್ನು ಹೊಂದಿದ ಬಳಿಕ ರಕ್ತವು ತಾನೂ ಕಶ್ಮಲವಾಗಿ ಪರಿಣಮಿಸುವುದು. ಕಶ್ಮಲವಾದ ರಕ್ತವು ಅವಯವಗಳನ್ನು ಪೋಷಿಸಲಾರದು. ಆದುದರಿಂದ ಕಶ್ಮಲವಾದ ರಕ್ತವೂ ಪುನಃ ಶುದ್ಧವಾಗಬೇಕು. ಹೀಗೆ ಅವಯವಗಳನ್ನು ಪೋಷಿಸಲಿಕ್ಕೂ ಕಶ್ಮಲವನ್ನು ಹೊಂದಿದಬಳಿಕ ಪುನಃ ಶುದ್ಧವಾಗಲಿಕ್ಕೂ ರಕ್ತವು ಸರ್ವದಾ ಸಂಚರಿಸುತ್ತಾ ಇರುವುದು ಅತ್ಯಾವಶ್ಯಕವಾಗಿರುವುದು. ಅದು ಹೇಗೆ ಚಲಿಸುತ್ತದೆ ಎಂಬುದು ಇಲ್ಲಿ ಸ್ವಲ್ಪಮಟ್ಟಿಗೆ ತಿಳಿಸಲ್ಪಡುವುದು.

ರಕ್ತವು ಹೃದಯ ಮತ್ತು ನಾಡಿಗಳ ಮುಖಾಂತರ ದೇಹದಲ್ಲಿ ಸಂಚರಿಸುತ್ತಿರುವುದು. ಹೃದಯವು ಎದೆಯ ಮಧ್ಯಪ್ರದೇಶದಲ್ಲಿರುವುದು ಅದರ ಸುತ್ತಲೂ ಶ್ವಾಸಕೋಶಗಳು ವ್ಯಾಪಿಸಿಕೊಂಡಿರುವುವು. ಅದರ ಮೇಲ್ಭಾಗವು ಅಗಲವಾಗಿಯೂ ಕೆಳಭಾಗವು ಸಪುರವಾಗಿಯೂ ಇವೆ. ಆ ಕೆಳಭಾಗವು ಎಡಗಡೆ ಇರುವ ಐದು ಮತ್ತು ಆರನೆಯ ಪಕ್ಕೆ ಎಲಬುಗಳ ಮಧ್ಯಪ್ರದೇಶದವರಿಗೂ ವ್ಯಾಪಿಸಿರುತ್ತದೆ. ಹೃದಯವು ಸಾಮಾನ್ಯವಾಗಿ ಐದು ಅಂಗುಲ ಉದ್ದವಾಗಿಯೂ ಮೂರುವರೆ ಅಂಗುಲ ಅಗಲವಾಗಿಯೂ ಎರಡುವರೆ ಅಂಗುಲ ದಪ್ಪವಾಗಿಯೂ ಇರುವುದು. ಪ್ರಾಯದ ಗಂಡಸಿನ ಹೃದಯವು ಸುಮಾರು ಹತ್ತು ಅಥವಾ ಹನ್ನೆರಡು ಔನ್ಸ್ ಭಾರವಾಗಿಯೂ ಪ್ರಾಯದ ಹೆಂಗಸಿನ ಹೃದಯವು ಸುಮಾರು ಎಂಟು ಅಥವಾ ಹತ್ತು ಔನ್ಸ್ ಭಾರವಾಗಿಯೂ ಇರುವುವು. ಹೃದಯವು ಮಾಂಸದ ಪರೆಯಿಂದ ನಿರ್ಮಿತವಾದ ಒಂದು ಚೀಲವು. ಶುಂಡಾಕಾರವಾಗಿರುವುದು. ಯಾರಿಗೆ ಸೇರಿರುವುದೋ ಅವರ ಮುಷ್ಟಿಯಷ್ಟು ತೋರವಾಗಿರುವುದು. ಪೆರಿಕಾರ್ಡಿಯಂ ಎಂಬ ಹೊದಿಕೆಯಿಂದ ಮುಚ್ಚಲ್ಪಟ್ಟಿರುವುದು.

ಹೃದಯದಲ್ಲಿ ನಾಲ್ಕು ಅರೆಗಳಿರುವುವು. ಮೇಲಿನ ಎರಡು ಅರೆಗಳಿಗೆ ಆರಿಕಲುಗಳೆಂದೂ ಕೆಳಗಿನ ಎರಡು ಅರೆಗಳಿಗೆ ವೆಂಟ್ರಿಕಲುಗಳೆಂದೂ ಹೆಸರು. ಆರಿಕಲುಗಳು ಒಂದು ಎಡಕ್ಕೂ ಮತ್ತೊಂದು ಬಲಕ್ಕೂ ಇರುವುವು. ಹಾಗೆಯೇ ವೆಂಟ್ರಿಕಲುಗಳು ಒಂದು ಎಡಕ್ಕೂ ಮತ್ತೊಂದು ಬಲಕ್ಕೂ ಇರುವುವು. ವೆಂಟ್ರಿ

ಕಲುಗಳ ಮೈಗಳು ಆರಿಕಲುಗಳ ಮೈಗಳಿಗಿಂತ ದಪ್ಪವಾಗಿರುವುವು ಆರಿಕಲುಗ ಮಧ್ಯದಲ್ಲಿಯೂ ವೆಂಟ್ರಿಕಲುಗಳ ಮಧ್ಯದಲ್ಲಿಯೂ ರಂಧ್ರವಿಲ್ಲ. ಆದರೆ ಎಡ ಆರಿಕಲ್ ಮತ್ತು ವೆಂಟ್ರಿಕಲ್‌ಗಳ ಮಧ್ಯದಲ್ಲಿ ಒಂದು ರಂಧ್ರವೂ ಹಾಗೆಯೇ ಬಲಭಾಗದ ಆರಿಕಲ್ ಮತ್ತು ವೆಂಟ್ರಿಕಲ್‌ಗಳ ಮಧ್ಯದಲ್ಲಿ ಮತ್ತೊಂದು ರಂಧ್ರವೂ ಇರುವುವು. ಈ ರಂಧ್ರಗಳಿಗೆ ಮುಚ್ಚಳಗಳಿರುವುವು. ಬಲ ಆರಿಕಲಿಗೆ ಎರಡುನಾಡಿಗಳ ಮುಖಾಂತರವಾಗಿ ರಕ್ತವು ಬಂದು ಬೀಳುವುದು. ಕೆಳಗಡೆಯಿರುವ ನಾಡಿಗೂ ಆರಿಕಲಿಗೂ ಸಂಧಿಯುಂಟಾಗುವ ಸ್ಥಳದಲ್ಲಿ ಒಂದು ಮುಚ್ಚಳವಿರುವುದು. ಈ ನಾಡಿಗಳಿಂದ ಆರಿಕಲಿಗೆ ಬರುವ ರಕ್ತವು ಮಲಿನರಕ್ತವಾಗಿರುವುದು.

ಎಡಗಡೆಯ ಆರಿಕಲಿಗೆ ನಾಲ್ಕು ನಾಡಿಗಳು ಸೇರಿರುವುವು. ಶ್ವಾಸಕೋಶಗಳಲ್ಲಿ ಶುದ್ಧಿಮಾಡಲ್ಪಟ್ಟ ರಕ್ತವು ಈ ನಾಡಿಗಳಲ್ಲಿ ಹರಿದು ಆ ಆರಿಕಲಿಗೆ ಬೀಳುವುದು. ಆರಿಕಲುಗಳಿಗಿಂತಲೂ ವೆಂಟ್ರಿಕಲುಗಳು ದೊಡ್ಡವು. ಪ್ರತಿವೆಂಟ್ರಿಕಲ್ಲಿನಲ್ಲಿಯೂ ಸುಮಾರು ಐದಾರು ಔನ್ಸ್ ರಕ್ತವು ಹಿಡಿಯಬಹುದು. ಬಲಭಾಗದ ವೆಂಟ್ರಿಕಲಿನ ಮೈಗಿಂತಲೂ ಎಡಭಾಗದ ವೆಂಟ್ರಿಕಲಿನ ಮೈಯು ದಪ್ಪವಾಗಿರುವುದು. ಆರಿಕಲುಗಳಿಂದ ಆಯಾ ವೆಂಟ್ರಿಕಲುಗಳಿಗೆ ರಕ್ತವು ಹರಿದುಬರುವುದೇ ಹೊರತು ವೆಂಟ್ರಿಕಲುಗಳಿಂದ ಪುನಃ ಆರಿಕಲುಗಳಿಗೆ ಹೋಗದಂತೆ ರಕ್ತವನ್ನು ಮುಚ್ಚಳಗಳು ತಡೆಯುವುವು. ಬಲಆರಿಕಲಿನಿಂದ ರಕ್ತವು ಹರಿದು ಬಲವೆಂಟ್ರಿಕಲಿಗೆ ಬರುವುದು. ಪುನಃ ಇಲ್ಲಿಂದ ಹಿಂದಕ್ಕೆ ಹೋಗದೆ ಮುಂದಕ್ಕೆ ಆವೆಂಟ್ರಿಕಲಿಗೆ ಸೇರಿರುವ ಒಂದು ನಾಡಿಯಲ್ಲಿ ಪ್ರವೇಶಿಸುವುದು. ಪುನಃ ಇಲ್ಲಿಂದ ಹಿಂದಕ್ಕೆ ಹೋಗದಂತೆ ಅದನ್ನು ಅಲ್ಲಿರುವ ಒಂದು ಮುಚ್ಚಳವು ತಡೆಯುವುದು. ಆದುದರಿಂದ ಆರಕ್ತವು ಮುಂದಕ್ಕೆ ಶ್ವಾಸಕೋಶಗಳಿಗೆ ಹೋಗುವುದು,

ಎಡಭಾಗದ ವೆಂಟ್ರಿಕಲಿಗೆ ಎವೋರ್ಟವೆಂಬ ನಾಡಿಯು ಸೇರಿರುವುದು. ಇವೆರಡರ ಮಧ್ಯದಲ್ಲಿ ಒಂದು ಮುಚ್ಚಳವಿರುವುದು. ಇದು ವೆಂಟ್ರಿಕಲಿನಿಂದ ಆ ನಾಡಿಗೆ ರಕ್ತವು ಬರುವಂತೆ ಅವಕಾಶಕೊಡುವುದೇ ಹೊರತು ನಾಡಿಯಿಂದ ವೆಂಟ್ರಿಕಲ್ಲಿಗೆ ಪುನಃ ಹೋಗಲಿಕ್ಕೆ ಮಾರ್ಗವನ್ನು ಕೊಡುವದಿಲ್ಲ. ರಕ್ತವು ಈ ಎವೋರ್ಟದಿಂದ ಮುಂದಕ್ಕೆ ಹರಿದು ದೇಹದ ಎಲ್ಲಾ ಭಾಗಗಳಿಗೂ ಹೋಗುವುದು. ರಕ್ತದಿಂದ ತುಂಬಿದೊಡನೆಯೆ ಆರಿಕಲುಗಳು ಮುದುಡಿಕೊಂಡು ಆ ರಕ್ತವನ್ನು ವೆಂಟ್ರಿಕಲುಗಳೊಳಗೆ ತಳ್ಳುವುವು. ವೆಂಟ್ರಿಕಲುಗಳು ಹೀಗೆ ರಕ್ತದಿಂದ ತುಂಬಿದೊಡನೆಯೇ ಮುದುಡಿಕೊಂಡು ಆ ರಕ್ತವನ್ನು ಅವುಗಳಿಂದ ಹೊರಟಿರುವ ನಾಡಿಗಳೊಳಗೆ ತಳ್ಳುವುವು. ಹೀಗೆ ಈ ಅರೆಗಳು ತಮ್ಮಲ್ಲಿ ಒಂದು ಬೀಳುವ ರಕ್ತವನ್ನು ಪುನಃಪುನಃ ಮುಂದಕ್ಕೆ ತಳ್ಳುತ್ತಲೇ ಇರುವುವು. ಎಡಯ ಎಡಭಾಗದಲ್ಲಿ

ಕೈಯಿಟ್ಟು ಪರೀಕ್ಷಿಸಿದರೆ ಹೃದಯವು ಬಡಿಯುವುದು ಗೊತ್ತಾಗುತ್ತದೆ. ವೆಂಟ್ರಿಕಲುಗಳು ಮುದುಡುವುದರಿಂದಲೇ ಹೀಗೆ ಹೃದಯವು ಬಡಿಯುವುದು. ಎಂದರೆ ಹೃದಯದ ಕೆಳಭಾಗವು ಎದೆಗೆ ತಗಲಿ ಶಬ್ದವಾಗುವುದು.

ಹೃದಯದ ಚಲನೆಯಿಂದ ಎರಡುಬಗೆಯ ಶಬ್ದಗಳು ಉಂಟಾಗುವುವು. ಒಂದು ಲುಬ್ಬ ಎಂತಲೂ ಮತ್ತೊಂದು ಡುಪ್ ಎಂತಲೂ ಕೇಳಿಸುವುವು. ಈ ಶಬ್ದಗಳಾದ ಬಳಿಕ ಸ್ವಲ್ಪ ವಿರಾಮ ತೋರುವುದು. ಹೀಗೆ ಶಬ್ದವಿರಾಮಗಳು ಪುನಃ ಪುನಃ ಉಂಟಾಗುತ್ತಲೇ ಇರುವುವು. ಕಪೋಲ ಕೈಹರಡು ಕಾಲುಹರಡು ಮೊದಲಾದ ಸ್ಥಳಗಳಲ್ಲಿ ಬೆಟ್ಟುಗಳನ್ನಿಟ್ಟು ಪರೀಕ್ಷಿಸಿದರೆ ಅಲ್ಲಿರುವ ನಾಡಿಗಳು ಬಡಿಯುತ್ತಿರುವುದು ಗೊತ್ತಾಗುವುದು. ಇವು ಹೀಗೆ ಬಡಿಯುವುದಕ್ಕೂ ವೆಂಟ್ರಿಕಲುಗಳ ಮುದುಡುವಿಕೆಯೇ ಕಾರಣವಾಗಿರುವುದು. ರೋಗದಲ್ಲಿ ನಾಡಿಯ ಗತಿಯು ಬದಲಾಯಿಸುವುದು. ಇದರಿಂದ ವೈದ್ಯರು ಮನುಷ್ಯರ ನಾಡಿಗಳನ್ನು ಪರೀಕ್ಷಿಸಿ ಅವರು ಆರೋಗ್ಯವಾಗಿರುವರೋ ಅಥವಾ ರೋಗಾಕ್ರಾಂತರಾಗಿರುವರೋ ಎಂದು ಗೊತ್ತುಮಾಡಿಕೊಳ್ಳಲು ಸಮರ್ಥರಾಗುವರು. ಇದಲ್ಲದೆ ಕೆಲವು ರೋಗಗಳಲ್ಲಿ ಹೃದಯದ ಬಡಿಯುವಿಕೆಯೂ ಶಬ್ದಗಳೂ ಬದಲಾಯಿಸುವುವು. ಇದರಿಂದಲೂ ರೋಗವನ್ನು ಕಂಡುಹಿಡಿಯಲು ವೈದ್ಯರಿಗೆ ಶಕ್ಯವಾಗುವುದು.

ರಕ್ತನಾಡಿಗಳು ಮೂರುವಿಧವಾಗಿರುವುವು. ಕೆಲವು ನಾಡಿಗಳು ರಕ್ತವನ್ನು ಹೃದಯದಿಂದ ಬೇರೆಬೇರೆ ಭಾಗಗಳಿಗೆ ಒಯ್ಯುವುವು. ಇವಕ್ಕೆ ಆರ್ಟರಿಗಳೆಂದು ಹೆಸರು. ಬೇರೆ ಕೆಲವು ನಾಡಿಗಳು ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿದ ರಕ್ತವನ್ನು ಪುನಃ ಹೃದಯಕ್ಕೆ ತಂದು ಬಿಡುವುವು. ಇವಕ್ಕೆ ವೈನುಗಳೆಂದು ಹೆಸರು. ಇವಲ್ಲದೆ ಆರ್ಟರಿವೈನುಗಳನ್ನು ಸೇರಿಸುವ ಅತಿ ಸೂಕ್ಷ್ಮವಾದ ನಾಡಿಗಳು ಬೇರೆ ಇರುವುವು. ಇವಕ್ಕೆ ಕೆಪಿಲರಿಗಳೆಂದು ಹೆಸರು. ರಕ್ತವು ಹೃದಯದಿಂದ ಆರ್ಟರಿಗಳಲ್ಲಿ ಪ್ರವೇಶಿಸಿ ಅಲ್ಲಿಂದ ಕೆಪಿಲರಿಗಳಿಗೆ ಬಂದು ಅನಂತರ ವೈನುಗಳಲ್ಲಿ ಹರಿದು ಪುನಃ ಹೃದಯಕ್ಕೆ ಬಂದು ಬೀಳುವುದು. ಆಮೇಲೆ ಮತ್ತೆ ಆರ್ಟರಿ ಕೆಪಿಲರಿ ವೈನುಗಳಲ್ಲಿ ಹರಿದು ಪುನಃ ಹೃದಯಕ್ಕೆ ಬಂದು ಸೇರುವುದು. ಹೀಗೆ ರಕ್ತಪರಿವರ್ತನವು ಸರ್ವದಾ ಆಗುತ್ತಲೇ ಇರುವುದು. (ಸಶೇಷ).

S. V.

ನೀತಿವಚನಮಾಲೆ.

ಸರಗರ್ಗಳ ಮರೆಯುವಿರಿಂತೇ ।
ಕರಿಯಿಪನೆನೀಂ ದಾರಿಗಳಲಿ ನಡೆವುದನೆನುತಂ ॥
ಅರಿಯಿಪತೆರದಿಂ ಮಗುವೇ ।
ಶಿರವಂ ಬಾಗಿಸುತೆ ತಿರುಗು ಗೌರವದಿಂದಂ ॥೨೫॥

ಓದುವುದಂ ನೀಂ ಬರೆವುದ ।
ನಾದರದಿಂ ಪಾಡುವುದನು ಮನೆಯೊಳಗಿರುತಂ ॥
ಸೋದರಿಯಾಗಿಸು ಮತ್ತೆ ।
ಲ್ಲಾದರಿವಂ ಹಿರಿಯರಾಜ್ಞೆಯಂತೆಸಗುವುದಾ ॥೨೬॥

ನಯುವಾದೊಳ್ನುಡಿಯಿಂ ಕ ।
ಸ್ನೆಯೆ ನೀನೆಲ್ಲರೊಳು ಮಾತನಾಡೆಳಸಿದುದಂ ॥
ದಯಮಾಡಿ ಕುಡುವುದೆನುತಂ ।
ಪ್ರಿಯವಚನಗಳಿಂದ ನಿನ್ನ ಸಮಯಂ ಕೇಳಾ ॥೨೭॥

ತರಳನೆನೀಂ ದಾರಿಯೊಳ್ಳೆ ।
ತರುವಾಗಳ್ ತುಂಟತನವ ಮಾಡದೆ ನಡೆಯ್ವೈ ॥
ಹಿರಿಯರ್ ಮೇಣ್ ಗುರುಜನಗಳ್ ।
ಬರಲವರ್ಗಳ್ಗೊಡನೆ ಬಕುತಿಯಿಂ ಕೈಮುಗಿಯ್ವೈ ॥೨೮॥

ದಡದಡನೆ ದಾರಿಯೊಳ್ ನೀ ।
ನಡಿಗಳನಿರಿಸದೆಯೆ ಮೆಲ್ಲಮೆಲ್ಲನೆನಡೆಯ್ವೈ ॥
ನಡೆವಾಗಳ್ ಹಿರಿಯರ್ ಬರ ।
ಲೊಡನೆಡೆಯಂ ಕುಡುತವರ್ಗೆ ಪಕ್ಕವನೊಂದೈ ॥೨೯॥

ಮಡಿಮಾಡಿದುಡುಗೆಗಳನು ।
ಟ್ಟಿಡೆ ಸಾಕೈ ಬೇಡ ನಿನಗಮೌಲ್ಯಂವಸನಂ ॥
ಜಡಮತಿ ಥಳಕಿಂಗೊಲಿವಂ ।
ಗೆಡನೀನೀಪರಿಯ ಥಳಕಿಗೊಲಿಯುವಿರು ಸುತಾ ॥೩೦॥

ಅನುವಿಂ ಸಿಗೆವುಡಿಯಿಂದಂ ।
ತನುವಂ ಚೆನ್ನಾಗಿತೊಳೆದು ಕಳೆಯೈ ಕೊಳೆಯಂ ॥
ಮನವಂ ಶ್ರೀ ವೇಂಕಟಪದ ।
ವನಜಂಗಳೊಳಿರಿಸಿ ನಿರ್ಮಲತ್ವವನೊಂದೈ ॥೩೧॥

ಪಡೆಯೈ ಶಾಂತತೆಯಂ ಮೇಣ್ ।
ಪಡೆನೀಂ ಪ್ರಾಣಿಗಳವಿಷಯದೊಳ್ ಬಹುದಯೆಯಂ ॥
ಬಿಡುಸೀನಳಿಗಜ್ಜಗಳಂ ।
ನುಡಿಯದಿರೈ ಮಗುವೆ ಬಿರುನುಡಿಯ ನೋರ್ವನೊಳಂ ॥೩೨॥

ಅಲಸತೆಯಂ ತೊರೆಯುತೆನೀಂ ।
ಕೆಲಸಂಗಳ ನೆಸಗು ಹಿರಿಯರುಸುದರ್ಶಕ್ಷಣದೊಳ್ ॥
ಲಲಿತಾ! ಎಂತಹಕೆಲಸಂ ।
ಗಳನೆಸಗಲು ಮೆರಡುವೇಳೆ ಹೇಳಿಸಿಕೊಳದಿರ್ ॥೩೩॥

ಆಣೆಗಳನಿಡಲೆಬೇಡೈ ।
ಜಾಣದುರುಕ್ತಿಗಳನುಡಿವರಂ ಸೇರದಿರೈ ॥
ಮಾಣದಿರಲಿವುಗಳಂ ನೀಂ ।
ನಾಣಿಲ್ಲೀತಂಗೆನುತ್ತೆ ಸುಜನರುಮೆಂಬರ್ ॥೩೪॥

ಮುಂದಾಗುವುದಂ ಬಗೆಯದ ।
ಮಂದಂಗೇಂ ಫಲವನೀವುವೈ ಶಾಸ್ತ್ರಂಗಳ್ ॥
ಚಂದದಕನ್ನಡಿಯಿಂ ತ ।
ನ್ನಂದವನರಿಯಲ್ಕೆ ಕುರುಡನಾದಂಗಹುದೇಂ ॥೩೫॥

ಸುಮದಿಂ ಮೃದು ಬಜ್ಜರದಿಂ ।
ದಮಮಾ ಕಠಿಣಂಮಹಾಂತರಂತಃಕರಣಂ ॥
ಕ್ಷಮೆಯೊಳಿದನರಿದೆವೆನುತಂ ।
ಭ್ರಮೆಯಿಂದಂ ಬೀರುತಿರ್ಪರಜ್ಞಜನಂಗಳ್ ॥೩೬॥

ಉದಯದೆಮೇಣ್ ಮುಳುಗುವೆಡಂ ।
ಬಿಸೆ ರವಿ ತಳೆದಿರ್ಪ ಕೆಂಪನಂದದೆ ಸೆಯುತಿಹಂ ॥

ಒದವಿದಕಷ್ಟಸುಖಂಗಳೊ
ಳದುರದೆ ಯೊಂದಂದದಿಂ ಮಹಾಂತರ್ ಮೆರೆವರ್ ||೩೭||

ಕ್ರೋಧವನಾಗಿಸಿದೊಡನೇಂ ।
ಸಾಧುಗಳಾಂತಪರೆ ವಿಕೃತಿಯಂ ಮಾನಸದೊಳ್ ||
ಆದಂ ಪುಲ್ಬೆಂಕಿಯಿ ನಾ ।
ರಾದರುಮೇಂ ಸಾಗರಾಂಬುವಂ ಕಾಯಿಪರೇ ||೩೮||

ನಾಸುವೆಯನಿಕುಮನನ್ಯರ ।
ದೋಷವನಾರಿಸುವನಾಖಲಂ ಮೇಣ್ ತನ್ನೊಳ್ ||
ಸೂಸಿರುವಪಲವುಬಗೆಯಹ ।
ದೋಷಂಗಳನರಿಯದಿಹುದೆ ಪರಮಾಶ್ಚರ್ಯಂ ||೩೯||

ಧರೆಯೊಳ್ ಜಲಮಿರದಬ್ಜಾ ।
ಕರವೊಣಗಿದ ವೃಕ್ಷರಾಜಿಮೇಣ್ ರೆಕ್ಕೆಗಳಂ ||
ತೊರೆದಿರುವಪಕ್ಷಿಪಲ್ಲಂ ।
ಧರಿಸದಪಾವಾದರಿದ್ರನುಂ ಸಮರೆನಿಪರ್ ||೪೦||

ಕೆಲಸಂಗಳನೆಸಗುತಿಹಂ ।
ಗೊಲಿಯದ ಕಜ್ಜಂಗಳಾವುವಿರ್ಪುವುಪೇಳ್ಗೈ ||
ಮಲಗಿಹಕೇಸರಿಯಾನನ ।
ಬಿಲದೊಳ್ ಮೃಗಪಂಕ್ತಿತಾನೆ ಬೀಳ್ವುದೆನೋಡೈ ||೪೧||

ಗಾಡಿಗೆ ಗಾಲಿಯದೊಂದೇ ।
ನೋಡಲ್ ಸಾರಥಿಯೊ ಕುಂಟನಸಮಹಯಂಗಳ್ ||
ಪೂಡಲ್ ರವಿಗಾದೊಡ ಮೋ ।
ಡಾಡುತವಂ ನಭವನೆಲ್ಲವಂ ಬೆಳಗಿಸುವಂ ||೪೨||

ಬಲಮಿಲ್ಲಿದಕೆನುತಂ ನೀಂ ।
ಕಳೆಯದಿರೈ ಸ್ವಲ್ಪವಸ್ತುವೆಮನಜ್ಞತೆಯಿಂ ||
ಪಲವಹನೂಲೆಳೆಗಳ್ ಸಂ ।
ಗಳಿಸಲ್ ಬಂಧಿಸವೆ ಪಾಶವಾಗುತೆಕರಿಯಂ ||೪೩||

ಪುರುಷಂ ಸಹನಾಯುಧವಂ ।
ಧರಿಸಿರಲವನಂ ದುರಾತ್ಮನೇಂ ಜಯಿಸುವನೇ ॥
ಮರಗಿಡುಪುಲ್ಗಳ್ ಬೆರೆಯದ ।
ಧರೆಯೊಳ್ ಬೀಳ್ದಿರ್ಪ ಬೆಂಕಿಯೇಂ ಒಳೆದಪುದೇ ॥೪೪॥

ಆವನಶೀಲಮುದಾವುದೊ ।
ಭಾವಿಸಲದನಾವನಾದೊಡಂ ಬಿಡನ್ಬೈ ನಾಯು್ ॥
ಈ ವಸುಧೆಗಧಿಪನಾದೊಡ ।
ಮೋವುತ್ತಂ ಜೋಡನೆಳೆದು ತಿನ್ನದಪೇಳ್ಕೈ ॥೪೫॥

ಆವನ ಸುಯಶಂ ಬದುಕಿಹು ।
ದೋವಸುಧೆಯೊಳಾತನಾವಗಂ ಬದುಕಿದವಂ ॥
ಆವನಪಕೀರ್ತಿ ಜಗದೊಳ್ ।
ತೀವಿಹುದೊ ಜಗದೊಳಾತನಿರ್ದೇಂ ಮೃತನ್ಬೈ ॥೪೬॥

ನುಡಿವುದು ನಿಜಮಂ ದಯೆಯಂ ।
ಪಡೆವುದು ಸುಜನರ್ಗೆ ಕುಡುವುದಂ ಮೇಣ್ ಶೌರ್ಯಂ ॥
ಬಿಡದಾರೊಳ್ ಬೆರೆದಿಹುದಾ ।
ಪೊಡವಿಪನಂ ಪೊಗಳದಿರುವನುಂಟೇಂ ಜಗದೊಳ್ ॥೪೭॥

ಕುಡುವಂ ತಪ್ಪಂ ಕ್ಷಮಿಸುವ ।
ನಿಡಿದೊಳ್ಗುಣಕೊಲಿವ ನರಪನೇ ನೃಪರತ್ನಂ ॥
ದೃಢನಮಲಂ ಶಕ್ತಂ ತ ।
ನ್ನೊಡೆಯನೊಳನುರಾಗಿಯಾದ ಭೃತ್ಯನೆಭೃತ್ಯಂ ॥೪೮॥

ಬಾಳ್ವಂ ತನ್ನಿಂದೆವರಂ ।
ಬಾಳ್ವಂತಾಂ ಜನಕನಿಂದೆ ಮಧ್ಯಮನಧಮಂ ॥
ಬಾಳ್ವಂ ಮಾತುಲನಿಂದಂ ।
ಬಾಳ್ವಂಮೇಣ್ ಶ್ವಶುರನಿಂದಲಧಮಾಧಮನ್ಬೈ ॥೪೯॥

ಭೂಗೋಳಪಾಠವನ್ನು ಕಲಿಸಲಿಕ್ಕೆ ಉಪಕರಣಗಳು.

I. ಪಠಗಳನ್ನು ಬರೆಯಿಸುವುದು:—ಯಾವದೇಶವನ್ನು ಕುರಿತು ಬೋಧಿಸಬೇಕಾಗಿದ್ದರೂ ಆ ದೇಶದ ಪಠವನ್ನು ಪ್ರತಿಒಬ್ಬ ಹುಡುಗನಕೈಗೂ ಕೊಡತಕ್ಕದ್ದು.

(a) ದಿಕ್ಕುಗಳನ್ನು ನಿರ್ದೇಶಿಸುವಿಕೆ:—ಇದಕ್ಕಾಗಿ ಪ್ರತಿಹುಡುಗನಿಂದಲೂ ಕಾಗದವನ್ನು ಎರಡುಸಾರಿ ಅರ್ಧವಾಗಿ ಮಡಿಸತಕ್ಕದು. ಈ ಕಾಗದದ ನಾಲ್ಕುಕೋಣಗಳೂ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳೆಂಬ ನಾಲ್ಕು ದಿಕ್ಕುಗಳನ್ನು ತೋರುವುವು. ಮರಳಿ ಆ ಕಾಗದವನ್ನು ಮತ್ತೊಂದುಸಾರಿ ಮಡಿಸಿದರೆ ಎಂಟುಕೋಣಗಳೇರ್ಪಡುವುವು. ಮೊದಲಿದ್ದ ನಾಲ್ಕುಕೋಣಗಳು ದಿಕ್ಕುಗಳಾದುವು. ಈಗ ಏರ್ಪಟ್ಟ ನಾಲ್ಕು ಕೋಣಗಳೂ ದಿಕ್ಕುಗಳೆನಿಸುವುವು. ಇವೇ ಆಗ್ನೇಯ, ನೈಋತ್ಯ, ವಾಯುವ್ಯ, ಈಶಾನ್ಯಗಳೆಂಬುವು. ವಿದ್ಯಾರ್ಥಿಗಳು ಪಾಠಶಾಲೆಯ ಕೊಠಡಿಗಳಲ್ಲಿಯೂ, ಬಯಲಿನಲ್ಲಿಯೂ, ಈ ದಿಕ್ಕುಗಳನ್ನು ಗುರುತಿಸುವ ಅಭ್ಯಾಸವು ಬರುವಂತೆ ಬೋಧಿಸಬೇಕು.

(b) ದೂರವನ್ನು ನಿರ್ದೇಶಿಸುವುದು:—ಬಾಲಕರಿಂದ ತಮ್ಮತಮ್ಮ ಪಠಗಳಲ್ಲಿ ತೋರಿಸುವ ಸ್ಕೇಲ (ಅಳತೆ) ನ್ನು ಪರಿಶೀಲಿಸುವಂತೆ ಮಾಡುವುದು. ಪ್ರತಿಹುಡುಗನಿಂದಲೂ ಒಂದೊಂದು ಕಾಗದವನ್ನು ಮಡಿಸಿಸಿ, ಅವುಗಳ ಕೊನೆಯ ಅಂಚುಗಳಲ್ಲಿ ಪಟದಲ್ಲಿ ತೋರಿಸುವಂತೆ ದೂರವನ್ನು ಗುರುತುಮಾಡಿಸುವುದು. ಇಷ್ಟುದೂರವೆಂದು ಹುಡುಗರಿಗೆ ತಿಳಿಸಲೇಬಾರದು. ದೇಶದ ಉದ್ದ ಅಗಲಗಳನ್ನೂ, ಪರ್ವತ, ನದಿಗಳ ಉದ್ದವನ್ನೂ, ಪಟ್ಟಣಗಳಿಗಿರುವ ದೂರವನ್ನೂ, ರೈಲುಮಾರ್ಗ, ಜಲಮಾರ್ಗಗಳನ್ನೂ ವಿದ್ಯಾರ್ಥಿಗಳು ತಾವೇ ಅಳೆದುನೋಡಿ ನಿರ್ಣಯಿಸುವಂತೆ ಮಾಡತಕ್ಕದು.

(c) ದೇಶದ ಸ್ವಭಾವಿಕಲಕ್ಷಣಗಳನ್ನು ನಿರೂಪಿಸುವುದು:—ಭೂಸ್ವಭಾವಸ್ಥಿತಿಯನ್ನು ತೋರಿಸುವ ಪ್ರಾಕೃತಿಕಪಠಗಳನ್ನು ವಿದ್ಯಾರ್ಥಿಗಳಮುಂದೆ ಇಟ್ಟು, ಅವರೇ ಪರಿಶೀಲಿಸುವಂತೆ ಮಾಡಿ, ಅದನ್ನು ಉದ್ದಕ್ಕೆ ಸೀಳಿದರೆ ಆಯಾ ಪ್ರದೇಶಗಳಲ್ಲಿ ಸ್ಪಷ್ಟಪಡುವ ಸ್ವಾಭಾವಿಕಭೇದಗಳನ್ನು ಬೇರೆಬೇರೆ ಕಾಗದಗಳಲ್ಲಿ ತೋರಿಸಿ ತಿಳಿಸುವುದು.

(d) ವಿಸ್ತೀರ್ಣವನ್ನು ನಿರ್ಣಯಿಸುವುದು. ಪಠದಲ್ಲಿ ತೋರಿಸುವ ಸ್ಕೇಲನ್ನು ಅಳತೆಮಾಡಿಸಿ, ಸ್ವಲ್ಪ ನಿರ್ಣಯುವಾದ ಒಂದು ಚೌಕವನ್ನು ದೊಡ್ಡ ಕಾಗದ ದಿಂದ ಕುಯಿಸು. ಅದು ಹತ್ತುಸಾವಿರ ಚದರಮೈಲಿಗಳ ವೈಶಾಲ್ಯವನ್ನು ನಿರೂಪಿಸುವ ಕಾಗದವಾಗಿದ್ದಲ್ಲಿ ಅದನ್ನು ಪಠದಮೇಲೆ ಇಟ್ಟು, ಪಠದಲ್ಲಿರುವ ದೇಶದ ವಿಸ್ತೀರ್ಣವನ್ನು ಸ್ವಲ್ಪ ಹೆಚ್ಚುಕಡಮೆಯಾಗಿ ಹುಡುಗರು ತಿಳಿದುಕೊಳ್ಳುವಂತೆ ಮಾಡಬಹುದು.

II. ವಿವಿಧಾಂಶಗಳನ್ನು ಬೋಧಿಸುವ ಪಠಗಳು—ಹಳ್ಳತಿಟ್ಟುಗಳನ್ನು ಬೋಧಿಸಲಿಕ್ಕೆ ಫಿಲಿಪ್ಸ್ ಕಂಪೆನಿಯುವರಿಂದ ಬಣ್ಣದ ಪಠಗಳು ಪ್ರಕಟಿಸಲ್ಪಟ್ಟಿವೆ. ಸಮುದ್ರಮಟ್ಟದಿಂದ ವಿವಿಧಭಾಗಗಳ ಹಳ್ಳತಿಟ್ಟುಗಳು ಇವುಗಳಲ್ಲಿ ಬೇರೆ ಬೇರೆ ಬಣ್ಣಗಳಿಂದ ಕಾಣಬರುವುವು. ಸಮುದ್ರಭಾಗಕ್ಕೆ ನೀಲಿಯುಬಣ್ಣವೂ, ಹಳ್ಳದ ಪ್ರದೇಶಗಳಿಗೆ ಎಲೆ ಹಸುರುಬಣ್ಣವೂ, ಪ್ರಸ್ಥಭೂಮಿಗಳಿಗೆ ಇಟ್ಟಿಗೆಯು ಬಣ್ಣವೂ, ಸಮುದ್ರದ ಆಳವನ್ನು ತಿಳಿಸುವುದಕ್ಕೆ ನೀಲಿಯು ಬಗೆ ಬಗೆಯು ಬಣ್ಣಗಳೂ ತೋರಿಸಲ್ಪಟ್ಟಿವೆ. ಇವುಗಳನ್ನು ಉಪಯೋಗಿಸುವುದು.

(b) ಸ್ಥಾನಿಕಪಠಗಳು ಕೆಲವಿರುವುವು. ಇವುಗಳಲ್ಲಿ ಬೇರೆಬೇರೆ ಕೆಲವು ಪಟ್ಟಣಗಳು, ಹಳ್ಳಿಗಳು, ಸಮುದ್ರಪ್ರಾಂತ್ಯಗಳೂ, ಪರ್ವತಗಳು, ಜಲವಸತಿ, ಭೂಸ್ವಭಾವ ಇವುಗಳ ಚರಿತ್ರೆಗಳು ಕಣ್ಣಿಗೆ ಅಂದವಾಗಿರುವಂತೆ ತೋರಿಸಲ್ಪಟ್ಟಿವೆ. ಬೇರೆಬೇರೆ ಭಾಗಗಳ ಭೂವಿವರಣೆಯುನ್ನು ಬೋಧಿಸುವುದಕ್ಕೆ ಅವು ಬಹಳ ಪ್ರಯೋಜನಕರವಾಗಿರುವುವು. ಯುೂರೋಪ್ ಅಮೆರಿಕಾ ಮುಂತಾದ ನಾಗರಿಕ ಖಂಡಗಳ ಬೇರೆಬೇರೆ ದೇಶಗಳನ್ನು ಕುರಿತ ಇಂತಹ ಪಠಗಳು ಅನೇಕವಾಗಿರುವವು.

(c) ದೇಶದಲ್ಲಿ ಬೆಳೆಯುವ ಧಾನ್ಯಾದಿಗಳನ್ನೂ ಖನಿಜಗಳನ್ನೂ ಪ್ರಾಣಿಗಳನ್ನೂ, ದೇಶಕಾಲಭೇದಗಳಿಗೆ ಸಂಬಂಧವಾಗುವಂತೆ ಬರೆಯುಲ್ಪಟ್ಟ ಪಠಗಳು ಕೆಲವಿರುವುವು. ಸಾಮಾನ್ಯವಾಗಿ ದೊಡ್ಡದೊಡ್ಡ ದೇಶಗಳ ವಿವರಣೆಯುನ್ನು ಬೋಧಿಸಲು ಇಂತಹ ಪಠಗಳು ಬಹು ಅನುಕೂಲವಾಗಿವೆ.

(d) ವಿದ್ಯಾರ್ಥಿಗಳು ವಿರಾಮದೊರೆತಾಗ ತಮ್ಮ ಮನೆಗಳಲ್ಲಿ ಇಂತಹ ಪಠಗಳನ್ನು ಬರೆಯುತ್ತಿರಬೇಕು. ಬೇರೆಬೇರೆ ದೇಶಗಳ ವಿಸ್ತೀರ್ಣವನ್ನು ಹಿಂದೂದೇಶದ ವಿಸ್ತೀರ್ಣದೊಂದಿಗೆ ಹೋಲಿಸುವ ಪಠಗಳನ್ನು ನಿರ್ಮಿಸಬಹುದು.

ಭೂ ಸ್ವಭಾವವನ್ನು ಕೆರೆ, ಕೊಳ, ತೋಪು, ಗುಡ್ಡ ಮುಂತಾದವುಗಳನ್ನು, ರೈಲುಮಾರ್ಗವನ್ನು ತೋರಿಸುವ ಗ್ರಾಮಪಠಗಳನ್ನೂ ಬರೆಯುತ್ತಾ ಬಂದರೆ ಒಳ್ಳೆಯ ಅಭ್ಯಾಸವಾಗುವುದು.

III. ಪಟ್ಟಣಗಳನ್ನು ಕುರಿತು ಬೋಧಿಸುವುದು.—ಆಯಾ ಸ್ಥಳಗಳಲ್ಲಿಯೇ ದೊಡ್ಡ ಪಟ್ಟಣಗಳಾದುದಕ್ಕೆ ಕಾರಣಗಳು ಇರುವುವು. ಪೂರ್ವಿಕರೂ ಅಲ್ಲಿ ಕೆಲವು ಅನುಕೂಲತೆಗಳನ್ನು ಕಂಡು ಅಲ್ಲಿ ನೆಲಸುತ್ತಾಬಂದುದರಿಂದಲೇ ಅವು ವೃದ್ಧಿಗೆ ಬಂದು ಪಟ್ಟಣಗಳಾದುವು. ಇದಲ್ಲದೆ ವ್ಯಾಪಾರಕ್ಕೆ ಅನುಕೂಲವಿರುವ ಸ್ಥಳಗಳು ಬೇಗಬೇಗ ಅಭಿವೃದ್ಧಿಗೆ ಬಂದು ದೊಡ್ಡಪಟ್ಟಣಗಳಾಗುವುವು. ಜಲವಸತಿ, ಖನಿಜಗಳು, ಉತ್ತಮವಾದ ಹವಾ ಇವುಗಳಿರುವ ಸ್ಥಳಗಳಲ್ಲಿಯೂ ದೊಡ್ಡಪಟ್ಟಣಗಳಾಗಲು ಅವಕಾಶವುಂಟು.

(a) ನದಿಗಳು ಸಮುದ್ರದಲ್ಲಿ ಬೀಳುವ ಕರೆಗಳಲ್ಲಿ ಭೂಭಾಗದಿಂದ ಜಲಭಾಗಕ್ಕೆ ಹೋಗಿಬರಲು ಬಹಳ ಸೌಲಭ್ಯವಿರುವುದರಿಂದ ಇಂತಹ ಸ್ಥಳಗಳಲ್ಲಿ ದೊಡ್ಡ ಪಟ್ಟಣಗಳಾಗುವುವು. ಉದಾ. ಕಲ್ಕತ್ತಾ. ಹುಗ್ಲಿನದಿಯಿಂದ, ಇದಕ್ಕೆ ಬಹು ಅನುಕೂಲವುಂಟು.

(b) ವಿಶಾಲವಾದ ಮೈದಾನದಮೇಲೆ ಎತ್ತರವಾದ ಪ್ರದೇಶವಿದ್ದಲ್ಲಿ ಅಲ್ಲಿ ದೊಡ್ಡ ಪಟ್ಟಣವಾಗಬಹುದು. ಅಲ್ಲಿನ ಜನರು ಸುತ್ತಲಪ್ರದೇಶಗಳನ್ನು ವ್ಯವಸಾಯಮಾಡಿಕೊಂಡು ಸೌಖ್ಯದಿಂದ ಜೀವನಮಾಡಲು ಅನುಕೂಲವಿರುವುದರಿಂದ ಅಲ್ಲಿ ಸೇರುವರು. ಉದಾ. ಕಂಭ, ಓರಗಲ್ಲು ಮುಂತಾದುವು ಹೀಗೆಯೇ ಬೆಳದುವು.

(c) ದೊಡ್ಡ ಮಾರ್ಗಗಳನ್ನು ಅನುಸರಿಸಿ ಪಟ್ಟಣಗಳು ಬೆಳೆಯುವುವು. ಪೂರ್ವಕಾಲದಲ್ಲಿ ಹಿಂದೂದೇಶದಲ್ಲಿ ಎರಡೇ ಭಾರಿಯ ಮಾರ್ಗಗಳಿದ್ದುವು. ಮದರಾಸಿನಿಂದ ಕಲ್ಕತ್ತೆಗೆ ಹೋಗುವಮಾರ್ಗವೊಂದು ಪಿಷಾವರಿನಿಂದ ಕಲ್ಕತ್ತೆಗೆ ಹೋಗುವ ಮಾರ್ಗವೊಂದು. ಈ ಮಾರ್ಗಗಳಲ್ಲಿಯೇ ದೊಡ್ಡಪಟ್ಟಣಗಳಿರುವುವು. ಗಂಗಾನದಿಯ ಉದ್ದಕ್ಕೂ ಇಂಡಿಯಾದ ಮುಖ್ಯನಗರಗಳಿವೆ.

(d) ದೊಡ್ಡದೊಡ್ಡ ಕಟ್ಟಡಗಳಿರುವ ಕಡೆಗಳೂ ಒಂದೊಂದುವೇಳೆ ದೊಡ್ಡಪಟ್ಟಣಗಳಾಗಬಹುದು. ಇದಕ್ಕೆ ಉದಾಹರಣೆ, ಶ್ರೀರಂಗ, ಮಧುರೆ ತಿರುಪತಿ ಮುಂತಾದುವು.

(e) ಪರ್ವತಮಧ್ಯದಲ್ಲಿ ಹವೆಯು ಅನುಕೂಲತೆಯೂ, ಕಾಡುತೀಪ್ಪೆಗಳಲ್ಲಿ ಪಶುಗಳ ಮೇವೂ ಸಮೃದ್ಧಿಯಾಗಿರುವುದರಿಂದ ಅಲ್ಲಿ ದೊಡ್ಡ ಪಟ್ಟಣಗಳಾಗುವುವು.

IV ದೇಶದ ಜನಗಳನ್ನು ಕುರಿತು ಬೋಧಿಸುವುದು.

(a) ಸಮುದ್ರಪ್ರಾಂತ್ಯಗಳಲ್ಲಿಯೇ ಜನಸಂಖ್ಯೆ ಹೆಚ್ಚು; ಅಂತಹ ಪಟ್ಟಣಗಳನ್ನು ಕುರಿತು ವಿವರಿಸಿ.

(b) ಕೈಗಾರಿಕೆಯ ಕಸಬುಗಳು ಅಭಿವೃದ್ಧಿಯಾಗಿರುವಕಡೆ ಜನಗಳು ಹೆಚ್ಚಾಗಿ ಸೇರುವರು.

(c) ವ್ಯವಸಾಯಾಭಿವೃದ್ಧಿಯಿಲ್ಲದಕಡೆ ಜನರು ಹೆಚ್ಚಾಗಿ ಸೇರರು. ಮಲೆನಾಡು ಪ್ರಾಂತ್ಯವೇ ಇದಕ್ಕೆ ನಿದರ್ಶನ.

(d) ಜೀವನಕ್ಕೆ ವಸತಿ ಇಲ್ಲದ ಕಡೆ ಹಳ್ಳಿಯ ಜನರು ಪಟ್ಟಣವಾಸಕ್ಕೆ ಹೋಗಿ ಸೇರುತ್ತಿರುವರು.

(e) ಜನಸಂಖ್ಯೆಯ ವಿಷಯವನ್ನು ಬೋಧಿಸುವಾಗ ತಿಳಿದ ಸ್ಥಳಗಳ ಮೂಲಕ ತಿಳಿಯದ ಸ್ಥಳಗಳ ವಿಷಯವನ್ನು ಹೋಲಿಸಿ ಕಲಿಸತಕ್ಕದು.

V ರೈಲ್ವೆಯನ್ನು ಕುರಿತು ಬೋಧಿಸುವ ವಿಧ.

(a) ಪೂರ್ವಕಾಲದಲ್ಲಿ ನದಿಗಳೂ, ರಸ್ತೆಗಳೂ, ಕಾಲುವೆಗಳೂ ಮುಖ್ಯವಾಗಿದ್ದುವು. ಈಗ ರೈಲುಮಾರ್ಗಗಳೇ ತುಂಬಾ ಲಾಭಕರವಾಗಿವೆ.

(b) ರೈಲ್ವೆ ಪಟಗಳನ್ನೂ, ಕೆಲವು ಕಂಪೆನಿಯವರು ಪ್ರಕಟಿಸಿರುವ ಚಿತ್ರಗಳನ್ನೂ ದೇಶದ ಪಟಗಳನ್ನು ತೋರಿಸಿ, ಭೂಸ್ವಭಾವಗಳು, ಸೇತುವೆಗಳು, ಸುತ್ತಣಸ್ಥಳಗಳ ವರ್ಣನೆ ಇವುಗಳನ್ನು ಬೋಧಿಸಿ.

(c) ಪ್ರಕೃತ್ಯರ್ಥಕ ಭೂಪಟಗಳನ್ನು ತೋರಿಸಿ ರೈಲುಮಾರ್ಗಗಳನ್ನು ಮೊದಲು ನಿರ್ಣಯಿಸಿದ ಶಾಸ್ತ್ರಜ್ಞರು ಸ್ವಾಭಾವಿಕ ಭೂಭಾಗಗಳನ್ನು ಕಂಡು ಹಿಡಿದು ಹೇಗೆ ಮಾಡಿದರೊ, ಹೊಗೇಬಂಡಿಯ ವೇಗವನ್ನು ಬೆಳಸುವುದಕ್ಕೆ ಭೂಸ್ವಭಾವವು ಹೇಗೆ ಅನುಕೂಲಿಸುವುದೋ, ತಿಳಿಯಪಡಿಸಿರಿ.

(d) ರೈಲುಮಾರ್ಗಗಳಿಗೋಸ್ಕರವೇ ಪರ್ವತಗಳನ್ನು ಕೊರೆದು ಸುರಂಗಮಾರ್ಗಮಾಡಿರುವರು. ಇದರ ಕಾರಣಗಳನ್ನು ತಿಳಿಸಿರಿ.

(e) ರೈಲುಮಾರ್ಗಗಳನ್ನು ಜಲಮಾರ್ಗ (ನಾವಿಕಮಾರ್ಗ) ದೊಂದಿಗೆ ಸಂಬಂಧಿಸುವಂತೆ ಮಾಡಿ ಅದಕ್ಕೆ ಕಾರಣಗಳನ್ನು ತಿಳಿಯಪಡಿಸಿರಿ.

K. R.

ವಸ್ತುಪಾಠ.

ವಿಷಯ:—ಮಣ್ಣಿನಲ್ಲಿ ಮಾದರಿ ಮಾಡಿಸುವುದು. (ಆಲೂಗೆಡ್ಡೆ)

ಉಪಕರಣಗಳು—ಆಲೂಗೆಡ್ಡೆಯ ಗಿಡ, ಆಲೂಗೆಡ್ಡೆ, ಮಣ್ಣು, ತಟ್ಟೆ, ಮರದ ಚಕ್ಕೆಗಳು (Tools) ಸ್ಪಂಜು.

ವಿಷಯ.	ಬೋಧನಕ್ರಮ.
ಅವತಾರಿಕೆ—ಒಂದೂರಿನಲ್ಲಿ ಒಂದು ಪಾಠಶಾಲೆಯಿತ್ತು. ಅದರಸುತ್ತಲೂ ಹುಡುಗರಿಂದ ಕೈತೋಟ ಮಾಡಿಸಿದ್ದರು. ಅಲ್ಲಿ ಕೆಲವು ಪಾತಿಗಳಲ್ಲಿ ಹೂವಿನಗಿಡಗಳನ್ನೂ, ಮತ್ತೆ ಕೆಲವು ಪಾತಿಗಳಲ್ಲಿ ಬಗೆಬಗೆಯಾದ ಕಾಯಿಪಲ್ಯಗಳನ್ನೂ ಬೆಳೆಸಿದ್ದರು.	ಕೆಲವು ಹೂವುಗಳಹೆಸರನ್ನೂ, ಕಾಯಿಪಲ್ಯಗಳ ಹೆಸರನ್ನೂ ಬಾಲಕರಿಂದ ಹೇಳಿಸುವುದು.
ಒಂದುದಿನ ಉಪಾಧ್ಯಾಯರು ಹುಡುಗರಸಂಗಡ ಆ ತೋಟಕ್ಕೆ ಹೋಗಿ ಆಲೂಗೆಡ್ಡೆ ಗಿಡಗಳನ್ನು ನೋಡಿ–ಇನ್ನು ಈ ಬೆಳೆ ಮುಗಿಯಿತು. ಈಗ ಅಗೆದು ನೆಲದೊಳಗೆ ಬಿಟ್ಟಿರುವ ಹೊಸಗೆಡ್ಡೆಗಳನ್ನು ಆರಿಸೋಣವೆಂದರು. ಆಗ ಹುಡುಗರೆಲ್ಲರೂ ಅಗೆದು ಗೆಡ್ಡೆಗಳನ್ನಾರಿಸುತ್ತಾ ಬಂದರು.	ಫಲಕ್ಕೆ ಬಂದಿರುವ ಆಲೂಗೆಡ್ಡೆಯ ಗಿಡವನ್ನು ತೋರಿಸುವುದು. ಈರುಳ್ಳಿ, ಬೆಳ್ಳುಳ್ಳಿ, ಮೂಲಂಗಿ, ಗೆಣಸು, ಮುಂತಾದ ಇತರಗೆಡ್ಡೆಗಳನ್ನು ಬಾಲಕರಿಂದ ಹೇಳಿಸಿ ಹಲಗೆಯಮೇಲೆ ಬರೆಯುವುದು.
ಆಗ ಒಂದೊಂದುಗೆಡ್ಡೆಯೂ ಒಂದೊಂದುವಿಧವಾಗಿರುವುದನ್ನು ನೋಡಿ ಅವರು ಉಪಾಧ್ಯಾಯರನ್ನು ಕುರಿತು–ಉಪಾಧ್ಯಾಯರೆ, ನಮಗೆ ಇದುವರೆಗೆ ಮಣ್ಣಿನಲ್ಲಿ ಮಾಡಿಸಿರುವ ಆಕೃತಿಗಳ ಜತೆಗೆ ಈ ಆಲೂಗೆಡ್ಡೆಗಳನ್ನೂ ಒಂದುದಿವಸ ಮಾಡಿಸಬೇಕೆಂದು ಕೇಳಿಕೊಂಡರು. ಅದಕ್ಕೆ ಅವರು ಹಾಗೇ ಆಗಲೆಂದು ಸಂತೋಷದಿಂದ ಒಪ್ಪಿಕೊಂಡು ಎಲ್ಲರನ್ನೂ ತರಗತಿಗೆ ಕರೆದುಕೊಂಡುಹೋಗಿ ಅದನ್ನು ಮಣ್ಣಿನಲ್ಲಿ ಮಾಡಿಸುವುದಕ್ಕಾರಂಭಿಸಿದರು	ನಾವೂ ಈಗ ಮಣ್ಣಿನಲ್ಲಿ ಆಲೂಗೆಡ್ಡೆಯನ್ನು ಮಾಡೋಣವೆಂದು ಪ್ರತಿಬಾಲಕನಿಗೂ ಮಾದರಿಗೆ ಒಂದೊಂದು ಆಲೂಗೆಡ್ಡೆಯನ್ನೂ, ಮಣ್ಣು, ತಟ್ಟೆ, ಮರದ ಚಕ್ಕೆ (Tools) ಗಳನ್ನೂ ಒಬ್ಬರಿಂದೊಬ್ಬರಿಗೆ ಕ್ರಮವಾಗಿ ಕೊಡಿಸಿ ಅವುಗಳನ್ನುಪಯೋಗಿಸುವ ವಿಧಾನವನ್ನು ತಿಳಿಸುವುದು.

ವಿಷಯ.	ಬೋಧನಕ್ರಮ.
I ಆಲೂಗೆಡ್ಡೆಯನ್ನು ಮಾಡಿಸುವುದು. (i) ಸಾಮಾನ್ಯಾಕೃತಿ (General Shape) ಅಂಡಾಕಾರ.	ಅವರವರ ಹತ್ತಿರವಿರುವ ಆಲೂಗೆಡ್ಡೆಯ ಗಾತ್ರದಷ್ಟು ಮಣ್ಣನ್ನು ತೆಗೆದುಕೊಳ್ಳುವಂತೆ ಹೇಳಿ ಉಪಾಧ್ಯಾಯರು ಒಂದು ಮಾದರಿಯನ್ನು ಮಾಡುತ್ತಾ ಮಣ್ಣನ್ನು ಹಿಡಿದುಕೊಳ್ಳುವ ವಿಧಾನವನ್ನು ತಿಳಿಸುವುದು. ಈರೀತಿಯಾದ ಆಕೃತಿಯನ್ನು ಹಲಗೆಯಮೇಲೆ ಬರೆದು ತೋರಿಸಿ ಅಂಡಾಕಾರವಾಗಿ ಮಾಡಿಸುವುದು.
(ii) ಎತ್ತರ ತಗ್ಗುಗಳನ್ನು ಕಾಣಿಸುಸುವುದು.	ಅವರವರ ಹತ್ತಿರವಿರುವ ಆಲೂಗೆಡ್ಡೆಗಳನ್ನು ಕೈಗೆ ತೆಗೆದುಕೊಂಡು ಪರೀಕ್ಷಿಸುವಂತೆ ಮಾಡಿ ಅದಕ್ಕನುಸಾರವಾಗಿ ತಗ್ಗಾಗಿರುವ ಕಡೆ ಬಲಗೈ ಹೆಬ್ಬೆರಲು, ತರ್ಜನೀಬೆರಲುಗಳಿಂದ ಅಮುಕಿ ಹಳ್ಳ ತಿಟ್ಟುಗಳು ಕಾಣುವಂತೆ ಮಾಡಿಸುವುದು.
(iii) ಕಣ್ಣುಗಳನ್ನು ತೋರಿಸುವುದು.	ಕಣ್ಣುಗಳಿರುವ ಕಡೆ ಟೂಲನ್ನು ಪಯೋಗಿಸಿ ಅದನ್ನು ಕಾಣುವಂತೆಮಾಡಿಸುವುದು
(iv) ಆಕೃತಿಯನ್ನು ಪೂರ್ತಿಮಾಡಿಸುವುದು.	ಕೈಯನ್ನು ತೇವ ಮಾಡಿಕೊಂಡು ಆಕೃತಿಯನ್ನು ನಯಮಾಡಿಸುವುದು. ಆಕೃತಿಯನ್ನು ಯಾವಕ್ರಮದಲ್ಲಿ ಮಾಡಿದೆವೆಂಬುದನ್ನು ಬಾಲಕರಿಂದಲೇ ಹೇಳಿಸುತ್ತ ಹಲಗೆಯಲ್ಲಿ ಬರೆದು ಆವೃತ್ತಿ ಮಾಡಿಸುವುದು.
II ಆಲೂಗೆಡ್ಡೆಯಲ್ಲಿರುವ ಪ್ರತಿಯೊಂದು ಕಣ್ಣುಗಳಿಂದಲೂ ಒಂದೊಂದು ಗಿಡವಾಗುವುದು. ಆದುದರಿಂದ ಹೋಳುಗಳನ್ನೇ ನೆಡುವರು.	ನೆಟ್ಟು ಸ್ವಲ್ಪದಿವಸವಾಗಿರುವ ಒಂದು ಗಿಡವನ್ನು ತೋರಿಸುವುದು.

ವಿಷಯ.	ಬೋಧನಾಕ್ರಮ.
III ಉಪಯೋಗಗಳು. (i) ಹುಳಿ, ಪಲ್ಯ, ಬೋಂಡ ಮುಂತಾದುವುಗಳನ್ನು ಮಾಡುವರು.	ಮಕ್ಕಳ ಅನುಭವವನ್ನು ಜ್ಞಾಪಿಸಿ ಹೇಳಿಸುವುದು.
(ii) ಐರ್ಲೆಂಡ್ ಎಂಬುದೊಂದು ದೇಶದಲ್ಲಿ ಇದನ್ನೇ ಮುಖ್ಯಾಹಾರವಾಗಿ ಉಪಯೋಗಿಸುವರು.	ನಮ್ಮ ದೇಶದಲ್ಲಿ ಹೆಚ್ಚಾಗಿ ಬೆಳೆಯುವ ಅಕ್ಕಿ, ರಾಗಿ ಇವುಗಳೇ ನಮಗೆ ಮುಖ್ಯಾಹಾರವಾಗಿರುವುದನ್ನು ಜ್ಞಾಪಿಸಿ ಐರ್ಲೆಂಡಿನಲ್ಲಿ ಆಲೂಗೆಡ್ಡೆಯನ್ನು ಹೆಚ್ಚಾಗಿ ಉಪಯೋಗಿಸುವುದಕ್ಕೆ ಕಾರಣವನ್ನು ಹೇಳಿಸುವುದು. ಆಲೂಗೆಡ್ಡೆಯ ಉಪಯೋಗವನ್ನು ಹಲಗೆಯಮೇಲೆ ಬರೆಯುವುದು. ಒಟ್ಟು ಹಲಗೆಯಮೇಲೆ ಬರೆದಿರುವುದನ್ನು ಆವೃತ್ತಿ ಮಾಡಿಸುವುದು. ಎ. ಹಿರಿಯಣ್ಣಪ್ಪ, ಹೆಡ್ಮಾಸ್ಟರ್.

ದೇವರ ಪ್ರಾರ್ಥನೆ.

ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಅಪ್ಪರ್ ಸೆಕೆಂಡರಿ ತರಗತಿಗಳ ವಿದ್ಯಾರ್ಥಿಗಳಿಗೆ ಮತಬೋಧನೆಯ ಅಂಗವಾಗಿ ಮುಂದೆ ತಿಳಿಸುವ ಕೆಲವು ಸಂಸ್ಕೃತಪದ್ಯಗಳು ಭಗವಂತನ ಪ್ರಾರ್ಥನಾರೂಪವಾಗಿ ಕಲಿಸಲ್ಪಟ್ಟಿವೆ. ಇವು ಸರ್ವಮತ ಸಾಧಾರಣವಾಗಿಯೂ ಸಾರವಾದ ಅರ್ಥವುಳ್ಳವುಗಳಾಗಿಯೂ, ಉತ್ತಮೋತ್ತಮವಾದ ಪ್ರಾಚೀನಗ್ರಂಥಗಳಿಂದ ತೆಗೆಯಲ್ಪಟ್ಟವುಗಳಾಗಿಯೂ ಇರುವುದರಿಂದ ಇತರ ಪಾಠಶಾಲೆಗಳ ವಿದ್ಯಾರ್ಥಿಗಳಿಗೂ ಉಪಯೋಗವಾಗಲೆಂದು ಇಲ್ಲಿ ಅರ್ಥದೊಡನೆ ಬರೆಯಲ್ಪಟ್ಟಿವೆ.

ಮಹತಃ ಪರಿತಃ ಪ್ರಸರ್ಪತಃ ।
ತಮಸೋ ದರ್ಶನ ಭೇದಿನೋ ಭಿದೇ ॥
ದಿನನಾಥ ಇವ ಸ್ವತೇಜಸಾ ।
ಹೃದಯವ್ಯೋಮ್ನಿ ಮನಾಗು ದೇಹಿನಃ ॥೧॥

ಪರಿತಃ—ಸುತ್ತಲೂ, ಪ್ರಸರ್ಪತಃ—ಹರಡಿಕೊಳ್ಳುತ್ತಿರುವ, ಮಹತಃ—ಅಧಿಕವಾದ, ದರ್ಶನಭೇದಿನಃ—ಜ್ಞಾನವನ್ನುತಪ್ಪಿಸುವ, ನೋಟಕ್ಕೆ ಅಡ್ಡಿಯಾಗಿರುವ, ತಮಸಃ—ಅಜ್ಞಾನವನ್ನು, ಕತ್ತಲೆಯನ್ನು, ಸ್ವತೇಜಸಾ—ತನ್ನ ಪ್ರಕಾಶದಿಂದ, ಭಿದೆ—ನಿವಾರಿಸುವುದಕ್ಕಾಗಿ, ದಿನನಾಥಇವ—ಸೂರ್ಯನೋಪಾದಿಯಲ್ಲಿ, ನಃ—ನಮ್ಮ, ಹೃದಯವ್ಯೋಮ್ನಿ—ಮನಸ್ಸೆಂಬ ಆಕಾಶದಲ್ಲಿ, ಮನಾಕ್—ಸ್ವಲ್ಪ, ಉದೇಹಿ—ಆವಿರ್ಭವಿಸು.

ಕಲ್ಯಾಣಾನಾಂತ್ವಮಸಿಮಹಸಾಂ ಭಾಜನಂ ವಿಶ್ವಮೂರ್ತೆ ।
ಧುರ್ಯಾಂಲಕ್ಷ್ಮೀ ಮಿಹಮಯಿಭೃಶಂ ಧೇಹಿದೇವಪ್ರಸೀದ ॥
ಯದ್ಯತ್ಪಾಪಂ ಪ್ರತಿಜಹಿಜಗನ್ನಾಥ ನಮ್ರಸ್ಯತನ್ಮೆ ।
ಭದ್ರಂಭದ್ರಂ ವಿತರಭಗವನ್ ಭೂಯಸೆ ಮಂಗಳಾಯ ॥೨॥

ವಿಶ್ವಮೂರ್ತೆ—ಎಲೈ ಸರ್ವಸ್ವರೂಪನೆ, ತ್ವಂ—ನೀನು, ಕಲ್ಯಾಣಾನಾಂ—ಮಂಗಳಕರಗಳಾದ, ಮಹಸಾಂ—ತೇಜಸ್ಸುಗಳಿಗೆ, ಭಾಜನಂ—ಪಾತ್ರನು, ಅಸಿ—ಆಗಿದ್ದೀಯೆ, ಇಹಮಯಿ—ಈ ನನ್ನಲ್ಲಿ, ಧುರ್ಯಾಂ—ಶ್ರೇಷ್ಠವಾದ, ಲಕ್ಷ್ಮೀಂ—ತೇಜಸ್ಸನ್ನು, ಸಂಪತ್ತನ್ನು, ಭೃಶಂ—ಅತ್ಯಂತವಾಗಿ, ದೇಹಿ—ಉಂಟುಮಾಡು, ದೇವ—ಎಲೈ ಸ್ವಾಮಿಯೆ, ಪ್ರಸೀದ-ಪ್ರಸನ್ನನಾಗು, ಜಗನ್ನಾಥ—ಲೋಕಕ್ಕೆ ಸ್ವಾಮಿಯೆ, ಯದ್ಯತ್ ಪಾಪಂ—ಯಾವಯಾವಪಾಪವು (ಇದೆಯೊ) ನಮ್ರಸ್ಯ—ವಿಧೇಯನಾದ, ಮೆ—ನನ್ನ, ತತ್—ಆಯಾಪಾಪವನ್ನು, ಪ್ರತಿಜಹಿ—ನಾಶಮಾಡು. ಭಗವನ್—ಓ ಪೂಜ್ಯನೆ, ಭೂಯಸೆ—ಬಹಳವಾದ, ಮಂಗಳಾಯ—ಒಳ್ಳೇದಕ್ಕೋಸ್ಕರ, ಭದ್ರಂಭದ್ರಂ—ವಿಶೇಷ ಕ್ಷೇಮವನ್ನು, ವಿತರ—ಕೊಡು.

ತ್ವಮಾದಿದೇವಃ ಪುರುಷಃ ಪುರಾಣಃ ।
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ ॥
ವೇತ್ತಾಸಿ ವೇದ್ಯಂಚ ಪರಂ ಚ ಧಾಮ ।
ತ್ವಯಾತತಂ ವಿಶ್ವ ಮನನ್ತರೂಪ ॥೩॥

ತ್ವಂ—ನೀನು, ಆದಿದೇವಃ -ಮೊದಲನೇ ದೇವನು, ಪುರಾಣಃ ಪುರುಷಃ—ಪುರಾತನನಾದ ಆತ್ಮನು, ತ್ವಂ—ನೀನು, ಅಸ್ಯವಿಶ್ವಸ್ಯ—ಈಜಗತ್ತಿನ, ಪರಂನಿಧಾನಂ—ಶ್ರೇಷ್ಠನಾದ ನಿಧಿಸ್ವರೂಪನು, ವೇತ್ತಾ—ನೀನು ಎಲ್ಲವನ್ನೂ ತಿಳಿಯತಕ್ಕವನು, ಆಸಿ—ಆಗಿದ್ದೀಯೆ, ವೇದ್ಯಂ—ಜೀವಾತ್ಮರುಗಳಿಂದ ತಿಳಿಯಲ್ಪಡತಕ್ಕ ಅಥವಾ

ಹೊಂದಲ್ಪಡತಕ್ಕ, ಪರಂ —ಉತ್ಕೃಷ್ಟವಾದ, ಧಾಮ—ತೇಜಸ್ಸ್ವರೂಪನು ಅಥವಾ ಸ್ಥಾನಸ್ವರೂಪನು (ಆಗಿದ್ದೀಯೆ), ಅನನ್ತರೂಪ-ನಾಶವಿಲ್ಲದಿರುವ ಆಕಾರವುಳ್ಳವನೇ, ತ್ವಯಾ—ನಿನ್ನಿಂದ, ವಿಶ್ವಂ—ಸಮಸ್ತವೂ, ತತಂ—ವ್ಯಾಪಿಸಲ್ಪಟ್ಟದ್ದು(ಆಗಿದೆ).

ಯೊನ್ತಃ ಪ್ರವಿಶ್ಯಮಮವಾಚಮಿಮಾಂ ಪ್ರಸುಪ್ತಾಂ ।
ಸಂಜೀವಯತ್ಯಖಿಲಶಕ್ತಿಧರ ಸ್ಸ್ವಧಾಮ್ನಾ ।
ಅನ್ಯಾಂಶ್ಚ ಹಸ್ತಚರಣ ಶ್ರವಣತ್ವಗಾದೀನ್ ।
ಪ್ರಾಣಾನ್ನಮೊ ಭಗವತೆ ಪುರುಷಾಯತುಭ್ಯಂ ॥೪॥

ಅಖಿಲಶಕ್ತಿಧರಃ—ಸರ್ವಸಾಮರ್ಥ್ಯವನ್ನು ಹೊಂದಿರುವ, ಯಃ—ಯಾವನು, ಸ್ವಧಾಮ್ನಾ—ತನ್ನ ತೇಜಸ್ಸಿನಿಂದ, ಮಮ—ನನ್ನ, ಅಂತಃ—ಒಳಗೆ, ಪ್ರವಿಶ್ಯ—ಹೊಕ್ಕು, ಪ್ರಸುಪ್ತಾಂ—ನಿದ್ರೆಹೋದ,ಮಂಕಾದ, ಇಮಾಂವಾಚಂ—ಈಮಾತಾಡುವ ಶಕ್ತಿಯನ್ನು ಅನ್ಯಾನ್—ಇತರವಾದ, ಹಸ್ತಚರಣಶ್ರವಣತ್ವಗಾದೀಂಶ್ಚ—ಕೈ ಕಾಲು ಕಿವಿ ಚರ್ಮ ಮೊದಲಾದುವುಗಳನ್ನೂ, ಪ್ರಾಣಾನ್--ಪ್ರಾಣಗಳನ್ನೂ, ಕೂಡ ಸಂಜೀವಯತಿ—ಚೇತನಗೊಳಿಸುತ್ತಾನೆಯೋ, ಅಂಥಾ, ಭಗವತೆ—ಪೂಜ್ಯನಾದ, ಪುರುಷಾಯ—ಆತ್ಮಸ್ವರೂಪನಾದ, ತುಭ್ಯಂ—ನಿನಗೆ, ನಮಃ—ನಮಸ್ಕಾರವು.

ನಧರ್ಮನಿಷ್ಠೊಸ್ಮಿನಚಾತ್ಮವೇದೀ ।
ನಭಕ್ತಿಮಾನ್ತ್ವಚ್ಚರಣಾರವಿನ್ದೆ ॥
ಅಕಿಂಚನೋಽನನ್ಯಗತಿಶ್ಶರಣ್ಯ ।
ತ್ವತ್ಪಾದಮೂಲಂ ಶರಣಂ ಪ್ರಪದ್ಯೇ ॥೫॥

ಧರ್ಮನಿಷ್ಠಃ—ನಾನು ಧರ್ಮಾಚರಣತತ್ಪರನು, ನ ಅಸ್ಮಿ—ಆಗಿಲ್ಲ, ಆತ್ಮವೇದೀಚ—ಆತ್ಮವಸ್ತುವನ್ನು ಬಲ್ಲವನೂ, ನ ಅಸ್ಮಿ—ಆಗಿಲ್ಲ, ತ್ವಚ್ಚರಣಾರವಿಂದೆ—ನಿನ್ನ ಪಾದಕಮಲದಲ್ಲಿ, ಭಕ್ತಿಮಾನ್—ಭಕ್ತಿಯುಳ್ಳವನು, ನ ಅಸ್ಮಿ—ಆಗಿಲ್ಲ, ಅಕಿಂಚನಃ—ಏನೂ ಇಲ್ಲದ ದೀನನೂ, ಅನನ್ಯಗತಿಃ—ಬೇರೆ ಮಾರ್ಗವಿಲ್ಲದವನೂ ಆದ ನಾನು, ಶರಣ್ಯ—ಎಲೈ ರಕ್ಷಕನೆ, ತ್ವತ್ಪಾದಮೂಲಂ—ನಿನ್ನ ಪಾದಗಳ ಬುಡವನ್ನು, ಶರಣಂ—ರಕ್ಷಕವಾದುದನ್ನಾಗಿ, ಪ್ರಪದ್ಯೆ—ಹೊಂದುತ್ತೇನೆ.

❁ ವಿದ್ಯಾದಾಯಿನಿ ❁

(A MONTHLY JOURNAL.)

ಭಾಗ ೧೨] ಅಕ್ಟೋಬರ್ ೧೯೦೯. [ಸಂಚಿಕೆ ೧೦

ಭಾಷೆಯ ಪಾಠಗಳು.

ಓದುವುದು, ಬರವಣಿಗೆ, ಸಲ್ಲಾಪೋಪದೇಶಗಳು.

ನಮ್ಮ ಅಭಿಪ್ರಾಯಗಳನ್ನು ಹೊರಪಡಿಸಲು ಭಾಷೆಯೇ ವಿಶೇಷ ಪ್ರಚಾರದಲ್ಲಿರುವ ಉಪಾಯವು. ಮಗುವು ಇಂದ್ರಿಯಗಳಿಂದ ಗ್ರಹಿಸುವುದಕ್ಕೆ ಸಾಧ್ಯವಾಗದಷ್ಟು ದೂರದಲ್ಲಿರುವ ಪದಾರ್ಥಗಳ ಜ್ಞಾನವನ್ನು ಹೊಂದುವುದಕ್ಕೆ ಭಾಷೆಯೇ ಮುಖ್ಯಸಾಧಕವು. ಇದುವರೆಗೂ ಹೊರಗಿರುವ ಪದಾರ್ಥಗಳ ಜ್ಞಾನವನ್ನು ಹೊಂದುವುದಕ್ಕೂ ಮನಸ್ಸಿನೊಳಗಿನ ಅಭಿಪ್ರಾಯಗಳನ್ನು ತಿಳಿಸುವುದಕ್ಕೂ ಭಾಷೆಯೊಂದೇ ಉಪಾಯವೆಂದು ತಿಳಿದುಕೊಂಡಿದ್ದರು. ಆದರೆ ನಮ್ಮ ಮನಸ್ಸಿನೊಳಗಿನ ಅಂಶಗಳನ್ನು ಭಾಷೆಯ ಮೂಲಕ ಹೊರಪಡಿಸುವುದು ಅಷ್ಟು ಸ್ವಾಭಾವಿಕವಾದ ಮಾರ್ಗವಲ್ಲ, ಮತ್ತು ಸಣ್ಣಮಕ್ಕಳಿಗೆ ಅವರ ಅಭಿಪ್ರಾಯಗಳನ್ನು ಹೊರಪಡಿಸಲು ಭಾಷೆಯು ಅಷ್ಟು ಅನುಕೂಲವಾದ ಉಪಾಯವೂ ಅಲ್ಲ. ವಸ್ತುತಃ ಭಾಷೆಯು ಅವರಿಗೆ ಬಲುಕಷ್ಟವಾದ ಅಂಶವು, ಅವರ ಅಂತರ್ಯವಾದ ಅಭಿಪ್ರಾಯಗಳನ್ನು ಹೊರಪಡಿಸಲು ಇದಕ್ಕಿಂತಲೂ ಚಿತ್ರವು ವಿಶೇಷ ಅನುಕೂಲವಾದುದೆಂದು ಹಿಂದೆ ತಿಳಿಸಲ್ಪಟ್ಟಿರುವುದು. ಶಬ್ದಗಳು ಕೃತಕ ಸಂಜ್ಞೆಗಳು. ಮಕ್ಕಳು ಮಾತನಾಡುವಾಗ ಈ ಸಂಜ್ಞೆಗಳ ಉಪಯೋಗವನ್ನು ಕಲಿಯಬೇಕಾಗುವುದು. ಈ ಕೆಲಸಕ್ಕೆ ಮೊದಲು ಮೊದಲು ವಿಶೇಷ ಪ್ರಯತ್ನವು ಆವಶ್ಯಕವು. ಈ ಸಂಜ್ಞೆಗಳನ್ನು ಬರೆಯುವಾಗ ಮತ್ತೊಂದುವಿಧ

ವಾದ ಕೃತಕ ಚಿಹ್ನೆಗಳನ್ನು ಕಲಿಯಬೇಕಾಗುವುದು. ಒಂದು ಮಗುವು ತನ್ನ ಅಭಿಪ್ರಾಯವನ್ನು ಬರೆಯುವಾಗ ಸಂಜ್ಞಾರೂಪವಾದ ಶಬ್ದದ ಸಂಜ್ಞೆಯನ್ನು ಅಂದರೆ ಅಕ್ಷರವನ್ನು ಬರೆಯಬೇಕಾಗುವುದು. ಆದುದರಿಂದಲೇ ಮಕ್ಕಳಿಗೆ ಅಕ್ಷರಪರಿಚಯವನ್ನು ಮಾಡಿಸುವುದು ಬಲುಕಷ್ಟವಾಗಿರುವುದು. ಆದರೆ ಪ್ರಾಣಿಸಸ್ಯಗಳ ರಚನೆಗೂ, ಅವುಗಳ ಕಾರ್ಯಕ್ಕೂ ಇರುವ ಸಂಬಂಧ, ಅವುಗಳ ರಚನೆಯಲ್ಲಿ ಕಾಣುವ ಸೌಂದರ್ಯ, ಈ ರಚನೆಯಿಂದ ತೋರುವ ದೇವರ ಮಹಿಮೆ ಮುಂತಾದ ಅಂಶಗಳನ್ನು ತಿಳಿಸಲು ಭಾಷೆಯೇ ಉತ್ತಮವಾದ ಮಾರ್ಗವು.

ಆದುದರಿಂದ ಮಗುವಿಗೂ ಜನಸಮುದಾಯಕ್ಕೂ ಇರುವ ಸಂಬಂಧವನ್ನೂ ಮತ್ತು ಮಗುವಿಗೂ ಪ್ರಕೃತಿಗೂ ಇರುವ ಸಂಬಂಧವನ್ನೂ, ಮಗುವಿಗೂ ದೇವರಿಗೂ ಇರುವ ಸಂಬಂಧವನ್ನೂ ತಿಳಿಸಲು ಪಾಠಶಾಲೆಯಲ್ಲಿ ಭಾಷೆಯ ಪಾಠನ್ನೂ, ಇದಕ್ಕೆ ಅಂಗವಾದ ಬರವಣಿಗೆಯ ಪಾಠವನ್ನೂ ನಡೆಸುವುದು ಅವಶ್ಯಕವೆಂದು ತೋರುವುದು. ಫ್ರೊಬೆಲ್ಲನ ಉದ್ದೇಶಕ್ಕೆ ಅನುಗುಣವಾಗಿ ಈ ಪಾಠವನ್ನು ನಡೆಸುವುದಾದರೆ ಮಕ್ಕಳಿಗೆ ಏಳುವರ್ಷಕ್ಕೆ ಮುಂಚೆ ಓದುಬರಹವನ್ನು ಕಲಿಸುವುದು ಸರಿಯಲ್ಲವೆಂದು ಕಾಣುವುದು. ಆದರೆ ವಾಡಿಕೆಯಾಗಿ ಮಕ್ಕಳಿಗೆ ಓದುಬರಹವನ್ನು ಕಲಿಸಲು ಈ ವಯಸ್ಸಿನವರೆಗೆ ಕಾಯುತಿಲ್ಲ. ಐದಾರು ವರ್ಷಕ್ಕೆ ಪಾಠಶಾಲೆಗಳಲ್ಲಿ ಈ ಕೆಲಸವನ್ನು ಪ್ರಾರಂಭಿಸುವರು. ಆದಕ್ಕಿಂತಲೂ ಮೊದಲು ಈ ಪಾಠವನ್ನು ಎಂದಿಗೂ ನಡೆಸಕೂಡದು.—ಐದಾರು ವರ್ಷಕ್ಕೆ ಪ್ರಾರಂಭಿಸಿದರೂ ಆಗಲೂ ಮಕ್ಕಳಿಗೆ ಈ ಕೆಲಸವು ಆಟರೂಪದಲ್ಲೇ ಇರಬೇಕು. ಮತ್ತು ಅವರಿಗೆ ವಿಶೇಷ ಉತ್ಸಾಹಕರವಾದ ಪಾಠಶಾಲೆಯ ತೋಟ, ಪ್ರಕೃತಿವಿಮರ್ಶೆ, ಈ ವಿಧವಾದ ಕೆಲಸಗಳಿಗೆ ಸಂಬಂಧವುಳ್ಳದ್ದಾಗಿರಬೇಕು. ಮೊದಲು ಮೊದಲು ಈ ಕೆಲಸಗಳಿಗೆ ಸಂಬಂಧಪಟ್ಟ ಒಂದೊಂದು ಮಾತನ್ನು ಉಪಾಧ್ಯಾಯರು ಹಲಗೆಯಮೇಲೆ ಬರೆದು ಓದಿಸಬೇಕು. ಆಮೇಲೆ ಆ ಓದಿದ ಮಾತಿನ ವಿಷಯವಾಗಿ ಸ್ವಲ್ಪಹೊತ್ತು ಮಕ್ಕಳಸಂಗಡ ಮಾತನಾಡಬೇಕು.

ಹೀಗೆ ಪಾಠಶಲೆಯ ಮುಖ್ಯಪಾಠಕ್ಕೆ ಸಂಬಂಧಪಟ್ಟ ಮಾತುಗಳನ್ನು ಹಲಗೆಯಮೇಲೆ ಬರೆದು ಓದಿಸುವಾಗ ಈ ಮಾತುಗಳನ್ನು ಬರೆಯುವುದಕ್ಕೆ ಅನುಕೂಲವಾದ ಸಂಜ್ಞೆಗಳನ್ನು ಅಂದರೆ ಅಕ್ಷರಗಳನ್ನು ತಿಳಿಸಬೇಕಾಗುವುದು. ಆದರೆ ಈ ಕಾಲದಲ್ಲಿ ಅವರಿಂದ ಅಕ್ಷರಗಳನ್ನು ಕ್ರಮವಾಗಿ ಬರೆಸಬೇಕಾದುದಿಲ್ಲ. ಹಿಂದಿನ

ಗಾರ್ಟನ್ ಉಪಕರಣಗಳ ಸಹಾಯದಿಂದ ಬರವಣಿಗೆಯ ಪಾಠವನ್ನು ಆಟದ ರೂಪ ದಲ್ಲೇ ನಡೆಸಬೇಕು. ನಿದರ್ಶನವಾಗಿ ಉಪಾಧ್ಯಾಯರು ಮರ ಎಂಬ ಶಬ್ದವನ್ನು ಹಲಗೆಯಮೇಲೆ ಬರೆದು ಓದಿಸಿದರೆಂದು ಭಾವಿಸೋಣ. ಈ ಶಬ್ದದಲ್ಲಿರುವ ಅಕ್ಷರಗಳು ಮಕ್ಕಳಿಗೆ ಬಳಕೆಯಾಗುವಂತೆ ಮಾಡಲು ಇವುಗಳ ಆಕೃತಿಯನ್ನು ಬಳೆ ಕಡ್ಡಿಗಳಿಂದ ಅಥವಾ ಮಣಿಗಳಿಂದ ಇಡಿಸಬಹುದು. ಉದ್ದವಾದ ದಾರವನ್ನು ಒದ್ದೆಮಾಡಿ ಇದೇ ಅಕ್ಷರಗಳ ಆಕೃತಿಯಲ್ಲಿ ಇಡಿಸಬಹುದು. ಅಥವಾ ನಾನಾವಿಧವಾದ ಆಕಾ ರಕ್ಕಿರುವ ರಟ್ಟುಗಳ ಚೂರನ್ನು ಕೊಟ್ಟು ಈ ಅಕ್ಷರಗಳ ಆಕೃತಿಗಳನ್ನು ಕಟ್ಟಿಸಬ ಹುದು. ಅಥವಾ ಕಸೂತಿಯ ಕೆಲಸಗಳಲ್ಲಿ ಅಕ್ಷರದ ಆಕೃತಿಯನ್ನು ರಚಿಸುವಂತೆ ಮಾಡಬಹುದು. ಹೀಗೆ ಅಕ್ಷರದ ಆಕೃತಿಗಳನ್ನು ಬಳಕೆಯಾಗಿ ಮಾಡಲು ನಾನಾ ಉಪಾಯಗಳಿರುವುವು. ತರಗತಿಯ ಮಕ್ಕಳಲ್ಲಿ ಕೆಲವರನ್ನು 'ಮ' ಅಕ್ಷರದ ಆಕೃತಿ ಯಲ್ಲೂ ಇನ್ನೂ ಕೆಲವರನ್ನು 'ದ' ಅಕ್ಷರದ ಆಕೃತಿಯಲ್ಲೂ ನಿಲ್ಲಿಸಿ ಆಟಗಳನ್ನು ಆಡಿಸಬಹುದು. ಈ ಆಟಗಳಿಗೆ ತಕ್ಕ ಗಾನಗಳನ್ನು ಹೇಳಿಕೊಡಬಹುದು. ಹೀಗೆ ಕೆಲವುಕಾಲ ನಡೆಸುತ ಬಂದರೆ ಮಕ್ಕಳಿಗೆ ಅಕ್ಷರಗಳ ಆಕೃತಿಗಳು ಬಳಕೆಯಾಗುತ ಬಂದು ಮುಂದೆ ಬರವಣಿಗೆಯನ್ನು ಕಲಿಯುವಾಗ ಅವರಿಗೆ ಶ್ರಮವು ಬಲು ಕಡ ಮೆಯಾಗುವುದು.

ಮಕ್ಕಳಿಗೆ ಸುಲಭವಾದ ಮಾತುಗಳನ್ನು ಓದುವುದಕ್ಕೆ ಬಂದಮೇಲೆ ವಾಕ್ಯ ಗಳನ್ನು ಓದಿಸಬೇಕಾಗುವುದು. ಈ ವಾಕ್ಯಗಳನ್ನು ಈಗ ನಾವು ಓದಿಸುತಿರುವಂತೆ ಪಾಠಪುಸ್ತಕಗಳಿಂದ ಓದಿಸಬೇಕಾದುದಿಲ್ಲ. ಮಕ್ಕಳು ಪ್ರಕೃತಿವಿಮರ್ಶೆಯಲ್ಲಿ ನೋ ಡಿದ ಅಂಶಗಳನ್ನು ಉಪಾಧ್ಯಾಯರು ಶೇಖರಿಸಿ ಅವುಗಳನ್ನು ಕ್ರಮವಾದ ರೀತಿ ಯಲ್ಲಿ ಹಲಗೆಯಮೇಲೆ ಬರೆದು ಓದಿಸಬಹುದು. ಆದರೆ ಉಪಾಧ್ಯಾಯರು ಬರೆ ಯುವ ವಾಕ್ಯಗಳು ಸಣ್ಣ ಮಕ್ಕಳಿಗೆ ಅನುಕೂಲವಾದುವುಗಳಾಗಿ ಇರಬೇಕು. ನಿದರ್ಶನವಾಗಿ ತರಗತಿಯಲ್ಲಿ ಮಕ್ಕಳು ಸೂರ್ಯಕಾಂತಿ ಗಿಡದ ವಿಮರ್ಶೆಯನ್ನು ನಡೆ ಸುತಿರುವರೆಂದು ಇಟ್ಟುಕೊಳ್ಳೋಣ. ಈ ವಿಮರ್ಶೆಯಲ್ಲಿ ಮಕ್ಕಳು ನೋಡಿದ ಅಂಶಗಳನ್ನು ಮುಂದೆ ಕಾಣುವ ಮೂರು ವಿಧಗಳಲ್ಲಿ ಬರೆಯಬಹುದು.

ಒಂದನೆಯವಿಧ:—"ಸೂರ್ಯಕಾಂತಿಗಿಡವು ಮೂರಡಿ ಉದ್ದಕ್ಕೆ ಬೆಳೆವುದು. ಅದರ ಎಲೆಯು ಹಿಪ್ಪಲಿಸೊಪ್ಪಿನ ಎಲೆಯಂತೆ ಇರುವುದು. ಎಲೆಯ ಅಂಚು ಸಮ ನಾಗಿಇಲ್ಲ. ಕಚ್ಚುಕಚ್ಚಾಗಿ ಇರುವುದು. ಅದರ ಹೂ ಅಗಲವಾಗಿ ಅನೇಕ ದಳ

ಗಳಿಂದ ಕೂಡಿರುವುದು. ಈ ಹೂವು ಸೂರ್ಯನಕಡೆಗೆ ಅರಳುವುದು.'' ಈ ರೀತಿ ಯಲ್ಲಿ ಉಪಾಧ್ಯಾಯರು ಅಂಶಗಳನ್ನು ಸಂಗ್ರಹಿಸಿ ಬರೆಯಬಹುದು.

ಆದರೆ ಈ ವಿಧವಾದ ವರ್ಣನೆಯು ಮಕ್ಕಳಿಗೆ ವಿಶೇಷ ಉತ್ಸಾಹಕರವಾಗಿ ಇರುವುದಿಲ್ಲ. ಈ ವಾಕ್ಯಗಳನ್ನು ಓದುವುದಕ್ಕೆ ಅವರಿಗೆ ವಿಶೇಷ ಕುತೂಹಲ ವಿರುವುದಿಲ್ಲ.

ಎರಡನೆಯ ವಿಧ:—ಒಂದು ಮಗುವು ಬೆಳೆಸಿದ ಸೂರ್ಯಕಾಂತಿಯ ಗಿಡದ ವಿಷ ಯವನ್ನು ತೆಗೆದುಕೊಂಡು ಆ ಮಗುವಿನಿಂದಲೇ ಆ ಗಿಡದ ವಿಷಯವನ್ನು ಹೀಗೆ ಹೇಳಿಸಬಹುದು.

"ನನ್ನ ಸೂರ್ಯಕಾಂತಿಯ ಗಿಡವು ನನಗಿಂತಲೂ ಉದ್ದವಾಗಿರುವುದು. ಇ ದರ ಅಂಚು ಕಚ್ಚುಕಚ್ಚಾಗಿ ಇರುವುದು. ಇದರ ಹೂವು ಎಷ್ಟು ಚೆನ್ನಾಗಿದೆ! ನನ್ನ ಗಿಡದಲ್ಲಿ ಎಷ್ಟು ದೊಡ್ಡ ಹೂ ಬಿಟ್ಟಿದೆ! ನನಗೆ ಸೂರ್ಯನನ್ನು ಕಂಡರೆ ಎಷ್ಟು ಸಂ ತೋಷವೋ ಈ ಹೂವಿಗೂ ಅಷ್ಟು ಸಂತೋಷ."

ಹೀಗೆ ಉತ್ತಮ ಪುರುಷದ ಪ್ರಯೋಗದಿಂದ ಗಿಡದ ವರ್ಣನೆಯನ್ನು ಓದು ವುದರಲ್ಲಿ ಮಕ್ಕಳ ಆದರವು ಅಧಿಕವಾಗುವುದು.

ಮೂರನೆಯವಿಧ:—ಇದೇ ಗಿಡದ ವರ್ಣನೆಯನ್ನು ಸೂರ್ಯಕಾಂತಿ ಗಿಡದ ಬಾಯಲ್ಲೇ ಹೇಳಿಸಿದರೆ ಮಕ್ಕಳಿಗೆ ಆದರವು ಇನ್ನೂ ಹೆಚ್ಚುವುದು ಮೇಲಿನ ವರ್ಣ ನೆಯನ್ನು ಹೀಗೆ ಹೇಳಿಸಬಹುದು.

"ನೋಡಿ! ನೀವು ನಟ್ಟ ಪುಟ್ಟ ಬೀಜದಿಂದ ನಿಮಗಿಂತಲೂ ಉದ್ದವಾಗಿ ಬೆಳೆದಿ ರುವೆನು. ನನ್ನ ಎಲೆಗಳು ನಿಮ್ಮ ಕೈಗಳಿಗಿಂತಲೂ ಅಗಲವಾಗಿ ಮೇಲಕ್ಕೆ ಎದ್ದು ಕೊಂಡಿವೆ. ನೀವು ಕೈಯಿಂದ ತಿಂಡಿಯನ್ನು ತೆಗೆದುಕೊಳ್ಳುವಹಾಗೆ ನಾನೂ ತೆಗೆದು ಕೊಳ್ಳುವೆನು. ನಿಮ್ಮ ಸಂತೋಷಕ್ಕಾಗಿ ಹೊಂಬಣ್ಣಕ್ಕಿರುವ ಹೂವನ್ನು ಬಿಡಿಸಿರುವೆ ನು. ನಿಮಗೆ ಬಿಸಿಲಿನಲ್ಲಿ ಆಡಲು ಇಷ್ಟವಿರುವಂತೆ ನನಗೂ ಇಷ್ಟವಿರುವುದು. ಸರ್ಯನನ್ನು ಕಂಡರೆ ನಿಮ್ಮಂತೆ ನನಗೂ ಬಲು ಸಂತೋಷವಾಗುವುದು."

ಹೀಗೆ ಗಿಡದ ಬಾಯಲ್ಲಿ ಮಾತುಗಳನ್ನ ಹೇಳಿಸುವುದರಿಂದ ಮಕ್ಕಳ ಕಲ್ಪನೆಯು ವೃದ್ಧಿಗೆ ಅವಕಾಶವಾಗುವುದು. ಈ ವಾಕ್ಯಗಳನ್ನು ಓದುವಾಗ ಅವರಿಗೆ ಓದುವು ದರಲ್ಲಿ ಆದರವು ವಿಶೇಷವಾಗಿರುವುದು. ಹೀಗೆ ವಾಕ್ಯಗಳನ್ನು ಓದುವ ಶಕ್ತಿಯು ಮಕ್ಕಳಿಗೆ ಬರುವಸಮಯಕ್ಕೆ ಅವರಿಗೆ ಅಕ್ಷರಗಳನ್ನು ಬರೆಯುವುದು ಬಂದಿರಬೇಕು.

ಉಪಾಧ್ಯಾಯರು ಹಲಿಗೆಯಮೇಲೆ ಬರೆದ ವಾಕ್ಯಗಳನ್ನು ಮಕ್ಕಳು ತಮ್ಮ ಬರವಣಿಗೆಯ ಪುಸ್ತಕದಲ್ಲಿ ಅಂದವಾದ ರೀತಿಯಲ್ಲಿ ಬರೆದುಕೊಂಡು ಈ ಬರವಣಿಗೆಯ ಪಕ್ಕದಲ್ಲಿ ಅದಕ್ಕೆ ತಕ್ಕ ಚಿತ್ರಗಳನ್ನು ಬರೆವುದರಿಂದ ಮಕ್ಕಳಿಗೆ ಓದುವುದಕ್ಕನುಕೂಲವಾದ ಪಾಠಪುಸ್ತಕಗಳನ್ನು ಅವರೇ ಕಲ್ಪಿಸಿಕೊಂಡಂತಾಗುವುದು. ಮಕ್ಕಳಿಗೆ ಏಳೆಂಟು ವಯಸ್ಸಾಗುವವರೆಗೂ ಓದು ಬರಹಗಳನ್ನು ಹೀಗೆ ಪಾಠಶಾಲೆಯ ಮುಖ್ಯ ಪಾಠಕ್ಕೆ ಅಂಗವಾಗಿ ಇಟ್ಟುಕೊಳ್ಳುವುದೇ ಉತ್ತಮವಾಗಿ ಕಾಣುವುದು. ಈ ಕ್ರಮದಲ್ಲಿ ಓದುಬರಹಗಳನ್ನು ಕಲಿಸುವುದರಿಂದ ಈ ಪಾಠದಲ್ಲಿ ಇದುವರೆಗೂ ಮಕ್ಕಳಿಗೆ ಕಾಣುತಿರುವ ಬೇಸರವು ತೊಲಗುವುದೆಂದು ತೋರುವುದು.

ಮಕ್ಕಳ ತರಗತಿಗಳಲ್ಲಿ ಓದುಬರಹಗಳನ್ನು ಮೇಲೆ ತಿಳಿಸಿರುವ ರೀತಿಯಲ್ಲಿ ಪ್ರಕೃತಿವಿಮರ್ಶೆಯ ಪಾಠದೊಡನೆ ಸಂಬಂಧಿಸುವುದರಿಂದ ವಸ್ತುಪರೀಕ್ಷೆಯಲ್ಲಿ ತಿಳಿದ ಅಂಶಗಳು ಸ್ಥಿರಪಡುವುವು. ತಮ್ಮ ಅಭಿಪ್ರಾಯಗಳನ್ನು ಭಾಷೆಯರೂಪದಲ್ಲಿ ತಿಳಿಸಲು ಇವರಿಗೆ ಸೌಲಭ್ಯವು ಹೆಚ್ಚುವುದು. ಮತ್ತು ವಿಶೇಷ ಪ್ರಯತ್ನವಿಲ್ಲದೆ ಓದುಬರಹಗಳಲ್ಲೂ ಮಕ್ಕಳು ಅಭಿವೃದ್ಧಿಯನ್ನು ತೋರ್ಪಡಿಸುವರು. ಈ ಕಾಲದಲ್ಲಿ ಮಕ್ಕಳ ಬರವಣಿಗೆಯಲ್ಲಿ ಅಂದವು ಹೆಚ್ಚುವುದಕ್ಕೂ ಪ್ರಯತ್ನಪಡಬೇಕು. ಅಕ್ಷರಗಳು ಸ್ಪಷ್ಟವಾಗಿಯೂ, ವಿರಳವಾಗಿಯೂ ದುಂಡಾಗಿಯೂ ಇರಬೇಕು. ವಾಕ್ಯಗಳನ್ನು ಮಕ್ಕಳು ಬೇಗ ಬರೆಯುವುದನ್ನೂ ಅಭ್ಯಾಸಮಾಡಬೇಕು.

ಪ್ರಕೃತಿ ವಿಮರ್ಶೆಗೆ ಸಂಬಂಧಪಟ್ಟ ವಾಕ್ಯಗಳನ್ನು ಮಕ್ಕಳು ಓದುತಿರುವಾಗ ಈ ಪಾಠದ ಜೊತೆಗೆ ಉತ್ತಮವಾದ ಕವಿಗಳು ರಚಿಸಿರುವ ಗ್ರಂಥಗಳಿಂದ ತೆಗೆದ ಇದರೊಡನೆ ಹೊಂದಿಕೊಳ್ಳುವ ಪದ್ಯಗಳನ್ನು ಹೇಳಿಕೊಡಬೇಕು. ಇಂತಹ ಪದ್ಯಗಳಿಂದ ಪಾಠಕ್ಕೆ ಜೀವವನ್ನುಂಟುಮಾಡಿದಂತಾಗುವುದು.

ಮೇಲಿನ ತರಗತಿಗಳಲ್ಲಿ ಓದುವ ಪಾಠವನ್ನು ಪ್ರಕೃತಿ ವಿಮರ್ಶೆಯ ಪಾಠಕ್ಕೆ ಪೂರ್ಣವಾಗಿ ಸಂಬಂಧಿಸುವುದು ಅನೇಕವೇಳೆ ಸಾಧ್ಯವಲ್ಲ. ಆ ತರಗತಿಗಳಲ್ಲಿ ಓದುವ ಪಾಠದ ಉದ್ದೇಶವು ಎರಡುವಿಧವಾಗಿರುವುದು. (1) ಹೆಚ್ಚು ವಿಷಯಗಳನ್ನು ತಿಳಿಯುವುದು. (2) ಮಕ್ಕಳಿಗೆ ಭಾಷೆಯಲ್ಲಿರುವ ಸೌಂದರ್ಯವನ್ನು ತಿಳಿಸುವುದಕ್ಕೂ ಅವರ ನಡತೆಯಲ್ಲಿ ಮೇಲನ್ನುಂಟುಮಾಡುವುದಕ್ಕೂ ಅನುಕೂಲವಾದ ದೊಡ್ಡ ದೊಡ್ಡ ಕಾವ್ಯಗಳನ್ನು ಓದುವುದು.

ಚರಿತ್ರೆ, ದೇಶಸಂಚಾರ, ಪ್ರಾಣಿಸಸ್ಯಗಳ ಬೆಳೆವಳಿಕೆ ಇವುಗಳಿಗೆ ಸಂಬಂಧ ಪಟ್ಟ ಪುಸ್ತಕಗಳನ್ನು ಮಕ್ಕಳು ಓದುವುದರಿಂದ ಮೊದಲನೆಯ ಉದ್ದೇಶವು ನೆರ ವೇರುವುದು. ಈ ಪುಸ್ತಕಗಳನ್ನೋದುವಾಗ ಪ್ರಕೃತಿ ವಿಮರ್ಶೆಯಲ್ಲಿ ಕಲಿತ ಅಂಶಗಳು ವಿಶೇಷ ಸಹಾಯಮಾಡುವುವು.

ರಾಮಾಯಣ, ಮಹಾಭಾರತ ಜೈಮಿನಿ ಮುಂತಾದ ಕಾವ್ಯಗಳನ್ನೋದುವುದ ರಿಂದ ಎರಡನೆಯ ಉದ್ದೇಶವು ನೆರವೇರುವುದು. ಭಾಷೆಯ ಸೌಂದರ್ಯವನ್ನು ತಿಳಿ ಯುವುದಕ್ಕೂ, ಭಾಷೆಯ ಪಾಠದಲ್ಲಿ ಮಕ್ಕಳಿಗೆ ಆದರವನ್ನುಂಟುಮಾಡುವುದಕ್ಕೂ ಇಂತಹ ಕಾವ್ಯಗಳಿಂದ ವಿಶೇಷ ಸಹಾಯವಾಗುವುದು. ಪ್ರಕೃತಿವಿಮರ್ಶೆಯಲ್ಲಿ ಪ್ರಕೃತಿಯ ಸೌಂದರ್ಯದಕಡೆ ಮಕ್ಕಳ ಅವಧಾನವನ್ನೆಳೆಯುವುದರಿಂದ ಅವರ ಸ್ವಭಾವದಲ್ಲಿ ಮಾರ್ಗವನ್ನುಂಟುಮಾಡುವುದಕ್ಕೂ ಅವರಿಗೆ ದೇವರ ಮಹಿಮೆಯನ್ನು ತಿಳಿಸುವುದಕ್ಕೂ ಅನೇಕ ಅವಕಾಶಗಳು ಇರುವುವಷ್ಟೆ. ಮಕ್ಕಳು ದೊಡ್ಡ ಕವಿ ಗಳು ರಚಿಸಿರುವ ಕಾವ್ಯಗಳನ್ನು ಓದುವಾಗ ಈ ಕೆಲಸಗಳಿಗೆ ಅನೇಕ ಅವಕಾ ಶಗಳು ದೊರಕುವುವು.

ಈಕಾಲದಲ್ಲಿ ಮಕ್ಕಳ ಬರವಣಿಗೆಯನ್ನೂ ಪೂರ್ಣವಾಗಿ ಪ್ರಕೃತಿವಿಮ ರ್ಶೆಯ ಪಾಠಕ್ಕೆ ಸಂಬಂಧಿಸುವುದು ಸಾಧ್ಯವಲ್ಲ. ಈಗ ಬರವಣಿಗೆಯ ಪಾಠದ ಉದ್ದೇಶವು ವಾಕ್ಯಗಳನ್ನು ಅಂದವಾಗಿಯೂ, ಬೇಗಬೇಗನೆಯೂ ಬರೆವುದು ಮಾತ್ರವೇ ಅಲ್ಲ, ಅವರು ಬರೆಯುವ ವಾಕ್ಯಗಳಲ್ಲಿ ಶಬ್ದಗಳ ಹೊಂದಿಕೆಯು ಚೆನ್ನಾಗಿರಬೇಕು. ಆದುದರಿಂದ ಈಗ ವಾಕ್ಯರಚನೆಗೆ ವಿಶೇಷ ಗಮನ ಕೊಡ ಬೇಕಾಗುವುದು. ಉಪಾಧ್ಯಾಯರು ಒಂದು ದಿವಸ ಬರವಣಿಗೆಗೆ ಒಂದಂಶವನ್ನು ಗೊತ್ತುಮಾಡಿ ಅದನ್ನು ಬಾಲಕರು ಚೆನ್ನಾಗಿ ಯೋಚಿಸುವಂತೆ ಮಾಡಿ ಆಮೇಲೆ ಅದರ ವಿಷಯದಲ್ಲಿ ಕೆಲವು ವಾಕ್ಯಗಳನ್ನು ಬರೆಸಬೇಕು. ಈ ವಾಕ್ಯಗಳು ಭಾಷೆ ಯ ನಿಯಮಗಳಿಗನುಸಾರವಾಗಿರುವುವೇ? ಬರೆದಿರುವ ವಿಷಯಗಳು ನಿಷ್ಕೃಷ್ಟ ವಾಗಿರುವವೆ? ಭಾಷಾಸೌಂದರ್ಯವು ಈ ವಾಕ್ಯಗಳಲ್ಲಿ ಸ್ವಲ್ಪಮಟ್ಟಿಗೆ ಕಾಣು ವುದೇ? ಎಂಬೀ ಅಂಶಗಳಿಗೆ ವಿಶೇಷ ಗಮನಕೊಡಬೇಕು. ಈಗ ಮಕ್ಕಳು ಓದುವಾಗ ಸರಿಯಾದ ಧ್ವನಿಯಿಂದಲೂ, ಮುಖಭಾವದಿಂದಲೂ ಕವಿಯ ಅಭಿಪ್ರಾ ಯವು ಇತರರಿಗೆ ಸುಲಭವಾಗಿ ತಿಳಿಯುವಂತೆ ಓದಲು ಪ್ರಯತ್ನಪಡಬೇಕು. ಚಿತ್ರ ಬರೆವುದು, ಮಣ್ಣಿನ ಕೆಲಸ ಮುಂತಾದ ಕೈಕೆಲಸಗಳನ್ನು ಈಕಾಲದಲ್ಲಿ ಓದುವ ಪಾಠಕ್ಕೆ ಅಂಗವಾಗಿ ಇಟ್ಟುಕೊಳ್ಳಬಹುದು.

ಸಲ್ಲಾಪೋಪದೇಶ.

ಸಲ್ಲಾಪೋಪದ ಮುಖ್ಯೋದ್ದೇಶವು ಮಕ್ಕಳಿಗೆ ಅವರ ಸುತ್ತಲೂ ಇರುವ ಅನೇಕ ಅಂಶಗಳು ಬಳಕೆಯಾಗುವಂತೆ ಮಾಡುವುದು. ನಿದರ್ಶನವಾಗಿ ದಿನದ ವಾಯುಗುಣದ ವಿಷಯದಲ್ಲಿ ತಿಳಿವಳಿಕೆಯನ್ನುಂಟುಮಾಡುವುದು ಒಂದುದಿವಸ ನಡೆಯುವ ಸಲ್ಲಾಪೋಪದೇಶದ ಉದ್ದೇಶವಾಗಬಹುದು. ಮತ್ತೊಂದುದಿವಸ ಮಕ್ಕಳಿಗೆ ಅವರು ನೋಡದೇ ಇರುವ ಮರಳುಕಾಡಿನ ವಿಷಯವನ್ನು ಸಲ್ಲಾಪೋಪದೇಶಕ್ಕಾಗಿ ಇಟ್ಟುಕೊಳ್ಳಬಹುದು. ಹೀಗೆ ಮಕ್ಕಳಿಗೆ ಪ್ರಪಂಚದ ವಿಷಯಕವಾದ ತಿಳಿವಳಿಕೆಯನ್ನು ಹೆಚ್ಚಿಸುವುದು ಸಲ್ಲಾಪೋಪದೇಶದ ಮುಖ್ಯೋದ್ದೇಶವಾದರೂ ಮಕ್ಕಳಿಗೆ ಭಾಷೆಯ ಪರಿಚಯವನ್ನು ಹೆಚ್ಚಿಸುವುದಕ್ಕೂ ಈ ಪಾಠದಲ್ಲಿ ವಿಶೇಷ ಅವಕಾಶಗಳಿರುವುವು. ಉಪಾಧ್ಯಾಯರು ತಾವೇ ಹೆಚ್ಚಾಗಿ ಸಂಭಾಷಿಸುವುದರಿಂದ ಈ ಉದ್ದೇಶವು ನೆರವೇರಲಾರದು. ಮಕ್ಕಳು ತಾವು ತಿಳಿದುಕೊಂಡ ವಿಷಯದ ಸಂಬಂಧವಾಗಿ ಸಂಭಾಷಿಸಲು ಪ್ರೋತ್ಸಾಹವನ್ನುಂಟುಮಾಡಬೇಕು. ಸರಿಯಾದ ಪ್ರಶ್ನೆಯನ್ನು ಕೇಳಿ ಈ ಪ್ರಶ್ನೆಗಳಿಗೆ ವಾಕ್ಯರೂಪದಲ್ಲಿ ಮಕ್ಕಳು ಉತ್ತರಗಳನ್ನು ಹೇಳುವಂತೆ ಮಾಡುವುದರಿಂದ ಅವರಿಗೆ ಭಾಷೆಯು ಬಳಕೆಯಾಗುತ ಬರುವುದು ಮಕ್ಕಳಮುಂದೆ ಒಂದುಪಟವನ್ನಿಟ್ಟು ಆ ಪಟದಲ್ಲಿ ಕಾಣುವ ಅಂಶಗಳನ್ನು ಅವರು ಹೇಳುವಂತೆ ಮಾಡುವುದರಿಂದ ಅವರಿಗೆ ಭಾಷೆಯಲ್ಲಿ ಜ್ಞಾನವು ಹೆಚ್ಚುವುದು. ಆದುದರಿಂದ ಸಲ್ಲಾಪೋಪದೇಶಕ್ಕೆ ಚಿತ್ರಗಳು, ಮರಳಿನತಟ್ಟೆ ಮುಂತಾದ ಉಪಕರಣಗಳು ವಿಶೇಷ ಸಹಾಯಮಾಡುವುವು. ಈ ಪಾಠದಿಂದ ಮಕ್ಕಳ ಭಾಷಾಪರಿಚಯವನ್ನು ಹೆಚ್ಚಿಸುವುದಕ್ಕೆ ಬಲು ಸಹಾಯವಾಗುವುದು.

ಗ್ರಾಮಪಾಠಶಾಲೆಗಳ A ತರಗತಿಯಲ್ಲಿ ಅಕ್ಷರಾಭ್ಯಾಸ ಮಾಡಿಸಬೇಕಾದ ರೀತಿಯನ್ನು ಕುರಿತು.

ವಿದ್ಯಾದಾಯಿನಿಯ 1908 ನೆಯ ಇಸವಿ ಮಾರ್ಚಿ ತಿಂಗಳ ಸಂಚಿಕೆಯಲ್ಲಿ ಈಗ ಸಾಮಾನ್ಯವಾಗಿ ಗ್ರಾಮಪಾಠಶಾಲೆಗಳಲ್ಲಿ ಅಕ್ಷರಾಭ್ಯಾಸವನ್ನು ಮಾಡಿಸುತ್ತಿರುವ ರೀತಿಯನ್ನೂ ಮತ್ತು ಆದರಿಂದುಂಟಾಗುವ ಪ್ರಯೋಜನಗಳನ್ನೂ ತಿಳಿಸಿದ್ದಾಯಿತು. ಇನ್ನು ಮುಂದೆ ಅಕ್ಷರಾಭ್ಯಾಸವನ್ನು ಮಾಡಿಸಬೇಕಾದ ರೀತಿಯು ತಿಳಿಸಲ್ಪಡುತ್ತದೆ.

ಅಕ್ಷರಜ್ಞಾನ.

ಒಂದು ಧ್ವನಿಯನ್ನು (Sound) ಉಚ್ಚರಿಸಿದರೆ ಅದಕ್ಕೆ ಸರಿಯಾದ ಅಕ್ಷರವನ್ನು ಒಡನೆ ಬರೆವುದಕ್ಕೂ ಒಂದು ಅಕ್ಷರವನ್ನು ತೋರಿಸಿದರೆ ಅದಕ್ಕೆ ಸರಿಯಾದ ಧ್ವನಿಯನ್ನು ಉಚ್ಚರಿಸುವುದಕ್ಕೂ ಒಂದು ಮಗುವಿಗೆ ಬಂದರೆ ಅದಕ್ಕೆ ಅಕ್ಷರಜ್ಞಾನವಾಗಿದೆಯೆಂದು ಹೇಳುತ್ತೇವೆ. ಈ ಜ್ಞಾನವನ್ನು ಮಕ್ಕಳಿಗೆ ಸ್ವಲ್ಪಕಾಲದಲ್ಲಿಯೇ ಸುಲಭವಾಗಿ ಉಂಟುಮಾಡುವ ರೀತಿಯನ್ನು ಅವಲಂಬಿಸಬೇಕು.

1 ನೆಯ ರೀತಿ.—ಮಕ್ಕಳು ಬಳಿಕೆಯಾಗಿ ಆಡುವ ಮಾತುಗಳನ್ನು ಅವರಿಂದ ಹೇಳಿಸಿ ಆ ಮಾತುಗಳಲ್ಲಿರುವ ಧ್ವನಿಗಳನ್ನು ಸೂಚಿಸುವ ಗುರುತು ಅಥವಾ ಅಕ್ಷರಗಳನ್ನು ಬರೆಸಿ ಅಕ್ಷರಜ್ಞಾನವನ್ನುಂಟುಮಾಡುವುದು. ಈರೀತಿಯು ಬಾಲಬೋಧೆಯಲ್ಲಿ ವಿವರವಾಗಿ ತಿಳಿಸಿದೆ.

2 ನೆಯ ರೀತಿ.—ನಮ್ಮ ವಿದ್ಯಾಭ್ಯಾಸದ ಇಲಾಖೆಯಲ್ಲಿ ಹೊಸದಾಗಿ ತಯಾರಾಗಿರುವ ವರ್ಣಮಾಲೆಯ ಪಟದಲ್ಲಿ ಪ್ರತಿಯೊಂದು ಅಕ್ಷರದಿಂದಲೂ ಪ್ರಾರಂಭವಾಗುವ ವಸ್ತುಗಳ ಹೆಸರುಗಳೂ ಆಯಾ ವಸ್ತುಗಳ ಚಿತ್ರಗಳೂ ಪ್ರತಿಯೊಂದು ಅಕ್ಷರದ ಪಕ್ಕದಲ್ಲಿಯೂ ಬರೆದಿದೆ. ಚಿತ್ರಗಳನ್ನು ನೋಡುವುದರಲ್ಲಿ ಮಕ್ಕಳಿಗೆ ಬಲು ಆಸೆ. ಅವುಗಳನ್ನು ನೋಡುವಾಗ ಅವುಗಳ ಹೆಸರನ್ನು ಉಪಾಧ್ಯಾಯರು ಹೇಳಿಕೊಡುತ್ತಾರೆ. ಹೆಸರು ಗೊತ್ತಾದಮೇಲೆ ಆ ಮಾತಿನ ಮೊದಲಕ್ಷರವನ್ನು ಹೇಳಿಕೊಡುವುದು. ಚಿತ್ರಗಳು ಇರುವುದರಿಂದಲೂ ಅವುಗಳ ಹೆಸರುಗಳು ಬಾಯಿಗೆ ಬಂದಿರುವುದರಿಂದಲೂ ಮಕ್ಕಳು ಆ ಹೆಸರುಗಳ ಆದಿಯಕ್ಷರವನ್ನು ಕುತೂಹಲದಿಂದ ಜಾಗ್ರತೆಯಾಗಿ ಕಲಿತುಕೊಳ್ಳುತ್ತವೆ.

ಈ ಎರಡು ರೀತಿಗಳಲ್ಲಿ ಅಕ್ಷರವನ್ನು ಕಲಿಸಬೇಕು. ಇದು ತಪ್ಪಿದರೆ ಈಗ ಬಳಿಕೆಯಲ್ಲಿರುವ ರೀತಿಯನ್ನು ಬಿಟ್ಟು ಕೆಳಗೆ ತಿಳಿಸುವ 2 ರೀತಿಗಳಲ್ಲಾದರೂ ಕಲಿಸುವುದು ವಾಸಿಯೆಂದು ತೋರುತ್ತದೆ.

3 ನೆಯ ರೀತಿ.—ಅಕ್ಷರಗಳ ಆಕೃತಿಗೆ ಲಕ್ಷ್ಯಕೊಟ್ಟು ಯಾವ ಯಾವ ಅಕ್ಷರಗಳನ್ನು ಅವುಗಳ ಆಕೃತಿಗನುಗುಣವಾಗಿ ಒಂದು ಗುಂಪಿಗೆ ಸೇರಿಸಬಹುದೋ ಅದನ್ನು ನಿಶ್ಚಯಿಸಬೇಕು. ಆಮೇಲೆ ಆಯಾ ಗುಂಪಿನಲ್ಲಿರುವ ಅಕ್ಷರಗಳನ್ನು ಅವುಗಳ ಆಕೃತಿಯ ಸೌಲಭ್ಯಾನುಗುಣವಾಗಿ ಬರೆಯಿಸಿ ಅಕ್ಷರಜ್ಞಾನವನ್ನುಂಟುಮಾಡುವುದು. ಅಕ್ಷರಗಳನ್ನು ಅವುಗಳ ಆಕೃತಿಯನ್ನು ಆಕೃತಿಯ ಸೌಲಭ್ಯಗಳಗನು

ಗುಣವಾಗಿ ಕೆಲವು ಗುಂಪುಗಳಾಗಿ ವಿಂಗಡಿಸಿದೆ. ಅವುಗಳು ಯಾವವೆಂದರೆ: —

(೧) ೦, ರ, ಠ, ೩, ಕ, ಹ, ಯ, ಝ, ತ, ಈ.

(೨) ಎ, ಪ, ಛ, ಮ, ಪ, ಫ, ಷ, ಘ, ಎ, ಐ.

(೩) ಲ, ಉ, ಅ, ಊ, ಆ. (೪) ದ, ಧ, ಥ, ಡ, ಢ.

(೫) ಬ, ಬ, ಓ, ಜ, ಜ, ಭ, ಚ, ಔ. (೬) ಗ, ನ, ಸ.

(೭) ಇ, ಈ. (೮) ಖ, ಶ, ಋ, ೠ, (೯) ಳ.

(೧೦) ಣ. (೧೧) ಟ.

ಈ ಗುಂಪುಗಳಲ್ಲಿ ಸುಲಭವಾದ ಆಕೃತಿಯುಳ್ಳ ಅಕ್ಷರಗಳ ಗುಂಪನು ಮೊದಲು, ಕಷ್ಟವಾದ ಆಕೃತಿಯುಳ್ಳ ಅಕ್ಷರಗಳ ಗುಂಪನ್ನು ಆಮೇಲೆ, ಈರೀತಿಯಾಗಿ ಕ್ರಮವಾಗಿ ಬರೆದಿದೆ. ಒಂದೊಂದು ಗುಂಪಿನಲ್ಲಿಯೂ ಸುಲಭವಾದ ಅಕ್ಷರವನ್ನು ಮೊದಲು, ಅದಕ್ಕೆ ಕಷ್ಟವಾದ ಅಕ್ಷರವನ್ನು ಆಮೇಲೆ ಈ ರೀತಿಯಾಗಿ ಕ್ರಮವಾಗಿ ಬರೆದಿದೆ. ತಲೆಕಟ್ಟು, ಕೊಂಬು, ಹೊಕ್ಕಳು ಇವುಗಳನ್ನು ಮೊದಲು ತಿಳಿಸಿ ಆಮೇಲೆ ಅಕ್ಷರಗಳನ್ನು ಕಲಿಸಬೇಕು.

(೧) ೦ ೦ ೦ ೩ ೩ ಐ ೦ ೦ ೦ ೦

೦ ರ ಠ ೩ ಕ ಹ ಯ ಝ ತ ಈ.

ಸೊನ್ನೆಗೆ ತಲೆಕಟ್ಟು, ಕೊಂಬು ಮುಂತಾದವು ಕೊಡುವುದರಿಂದ ಈ ಗುಂಪಿನ ಅಕ್ಷರಗಳೆಲ್ಲಾ ಆಗುತ್ತದೆ.

ಸೊನ್ನೆಯನ್ನು ಬರೆಯುವುದು ಕೇವಲ ಸುಲಭ. ಅದನ್ನು ಮೊದಲು ಕಲಿಸಬೇಕು. ಸೊನ್ನೆಗೆ ತಲೆಕಟ್ಟು ಕೊಟ್ಟರೆ 'ರ' ಆಗುತ್ತದೆ. ಸೊನ್ನೆ ಬಂದಮೇಲೆ ಅದಕ್ಕೆ ತಲೆಕಟ್ಟು ಕೊಟ್ಟು 'ರ' ವನ್ನು ಕಲಿಸಬೇಕು. 'ರ' ವಿನ ಮಧ್ಯದಲ್ಲಿ ಒಂದು ಚುಕ್ಕಿ ಹಾಕಿದರೆ 'ಠ' ಆಗುತ್ತದೆ. ಆದಕಾರಣ 'ರ' ಬರದಮೇಲೆ ಅದರಮಧ್ಯೆ ಒಂದು ಚುಕ್ಕಿಯನ್ನು ಹಾಕಿ 'ಠ' ವನ್ನು ಕಲಿಸಬೇಕು. ಆಮೇಲೆ ಎರಡು ಸೊನ್ನೆ ಹಾಕುವುದನ್ನು ಕಲಿಸಬೇಕು. ಎರಡು ಸೊನ್ನೆಗಳಿಗೂ ತಲೆಕಟ್ಟು ಕೊಟ್ಟರೆ 'ಕ' ಆಗುತ್ತದೆ. ಎರಡು ಸೊನ್ನೆಗಳು ಹಾಕುವುದು ಬಂದಮೇಲೆ ಅವುಗಳಿಗೆ ತಲೆಕಟ್ಟು

ಕೊಟ್ಟು 'ಕ' ವನ್ನು ಕಲಿಸಬೇಕು. ಒಂದು ಸೊನ್ನೆಯ ಪಕ್ಕದಲ್ಲಿ ಮತ್ತೊಂದು ಸೊನ್ನೆಯನ್ನು ಸೇರಿದಹಾಗೆ ಬರೆದು ತಲೆಕಟ್ಟು ಕೊಟ್ಟರೆ 'ಹ' ಆಗುತ್ತದೆ. 'ಯ' ವನ್ನು ಕಲಿಸಬೇಕಾದರೆ ಸೊನ್ನೆಗೆ ಒಂದು ಕೊಂಬು ಕೊಟ್ಟು ಆ ಕೊಂಬಿಗೆ ತಲೆಕಟ್ಟುಕೊಟ್ಟು ಆ ಕೊಂಬಿಗೆ ಮತ್ತೊಂದು ಕೊಂಬು ಕೊಟ್ಟರೆ 'ಯ' ಆಗುತ್ತದೆ. 'ರ' ವಿಗೆ ಕೊಂಬುಕೊಟ್ಟು ಈ ಕೊಂಬಿಗೆ ಮತ್ತೊಂದು ಕೊಂಬು ಕೊಟ್ಟು ಹೊಕ್ಕಳು ಸೀಳಿದರೆ 'ಝ' ಆಗುತ್ತದೆ. ಯ, ಝ, ತ, ಈ ಎಂಬ ೪ ಅಕ್ಷರಗಳು ಈ ಗುಂಪಿಗೆ ಸೇರಿದ್ದರೂ ಕಷ್ಟವಾದವುಗಳು.

(೨) ಎ ಎ ಎ ಎ ಎ ಎ ಎ ಎ ಎ ಎ
ಎ ವ ಛ ಮ ಪ ಫ ಷ ಘ ಏ ಐ

'ಎ' ಗೆ ತಲೆಕಟ್ಟು, ಕೊಂಬು, ಹೊಕ್ಕಳು ಮುಂತಾದವುಗಳನ್ನು ಕೊಡುವುದರಿಂದ ಈ ಗುಂಪಿನ ಅಕ್ಷರಗಳೆಲ್ಲಾ ಆಗುತ್ತವೆ.

ಸೊನ್ನೆಗೆ ಕೊಂಬು ಕೊಟ್ಟು ಆ ಕೊಂಬನ್ನು ಸ್ವಲ್ಪ ಮೇಲಕ್ಕೆ ಎಳೆದರೆ 'ಎ' ಆಗುತ್ತದೆ. 'ಎ' ಗೆ ತಲೆಕಟ್ಟು ಕೊಟ್ಟರೆ 'ವ' ಆಗುತ್ತದೆ. 'ವ' ವಿಗೆ ಹೊಕ್ಕಳು ಸೀಳಿದರೆ 'ಛ' ಆಗುತ್ತದೆ. 'ವ' ವಿಗೆ ಕೊಂಬು ಕೊಟ್ಟರೆ 'ಮ' ಆಗುತ್ತದೆ. 'ಎ' ಮೇಲೆ ಒಂದು 'ರ' ವನ್ನು ಚಿಕ್ಕದಾಗಿ ಬರೆದರೆ 'ಪ' ಆಗುತ್ತದೆ. 'ಪ' ವಿಗೆ ಹೊಕ್ಕಳು ಸೀಳಿದರೆ 'ಫ' ಆಗುತ್ತದೆ. ಈ ರೀತಿಯಲ್ಲಿ ಅಕ್ಷರಗಳನ್ನು ಕ್ರಮವಾಗಿ ಕಲಿಸಬೇಕು. ಈ ಗುಂಪಿನಲ್ಲಿ ಘ, ಏ, ಐ, ಎಂಬವು ಕಷ್ಟವಾದವು.

(೩) ಒ ಒ ಒ ಒ ಒ ಒ ಒ ಒ
ಒ ಬ ಓ ಜ ಜ ಭ ಚ ಔ.

'ಒ' ಗೆ ತಲೆಕಟ್ಟು, ಹೊಕ್ಕಳು ಮುಂತಾದವು ಕೊಡುವುದರಿಂದ ಈ ಗುಂಪಿನ ಅಕ್ಷರಗಳೆಲ್ಲಾ ಆಗುತ್ತವೆ.

ಇದೇ ರೀತಿಯಾಗಿ ಸುಲಭವಾದ ಆಕೃತಿಯುಳ್ಳ ಅಕ್ಷರಗಳನ್ನು ಮೊದಲು, ಕಷ್ಟವಾದ ಆಕೃತಿಯುಳ್ಳ ಅಕ್ಷರಗಳನ್ನು ಆಮೇಲೆ ಬರೆಸಿ ಎಲ್ಲಾ ಗುಂಪುಗಳಲ್ಲಿರುವ ಅಕ್ಷರಗಳನ್ನೆಲ್ಲಾ ಕಲಿಸಬೇಕು.

(೪) ನೆಯ ರೀತಿ. ಅಕಾರಾದಿಯಾಗಿ ಳಕಾರದವರೆಗೆ ಎರಡೆರಡು ಅಥವಾ ಮೂರು ಮೂರು ಅಕ್ಷರಗಳನ್ನು ಒಟ್ಟಿಗೆ ಬರೆದು ಅಕ್ಷರಗಳನ್ನು ಕಲಿಸಿದರೆ ಹ್ರಸ್ವ, ದೀರ್ಘ,

ಅಲ್ಪಪ್ರಾಣ, ಮಹಾಪ್ರಾಣಗಳಿರುವ ವ್ಯತ್ಯಾಸವು ತಿಳಿವುದಿಲ್ಲವೆಂಬುದನ್ನು ಹಿಂದಣ ಸಂಚಿಕೆಯಲ್ಲಿಯೇ ತಿಳಿಸಿದ್ದಾಯಿತು. ಅಕಾರದಿಂದ ಳಕಾರದ ವರೆಗೆ ಪೂರ್ವ ಪದ್ಧತಿ ಪ್ರಕಾರ ಕಲಿಸಬೇಕಾದರೆ ಎರಡು ಬದಲಾವಣೆಗಳನ್ನು ಮಾಡಿಕೊಳ್ಳಬೇಕು. (೧) ಅಕ್ಷರಗಳನ್ನು ಒಂದೊಂದಾಗಿ ಕಲಿಸಬೇಕು. ಎರಡು ಮೂರು ಅಕ್ಷರಗಳನ್ನು ಒಟ್ಟಿಗೆ ತಿದ್ದಿಹಾಕಿ ಕಲಿಸಕೂಡದು. (೨) ಅಕ್ಷರಗಳನ್ನು ಹ್ರಸ್ವ, ದೀರ್ಘ, ಅಲ್ಪ ಪ್ರಾಣ, ಮಹಾಪ್ರಾಣಗಳಾಗಿ ವಿಂಗಡಿಸಿಕೊಂಡು ಒಂದೊಂದಾಗಿ ಕಲಿಸಬೇಕು. ಅಕ್ಷರಗಳನ್ನು ಕೆಳಗಣ ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು.

ಅ, ಇ, ಉ, ಋ, ಎ, ಒ, ಆ, ಈ, ಊ, ೠ, ಏ, ಓ, ಐ, ಔ, ಕ, ಚ, ಟ, ತ, ಪ, ಗ, ಜ, ಡ, ದ, ಬ, ಖ, ಛ, ಠ, ಥ, ಫ, ಘ, ಝ, ಢ, ಧ, ಭ, ಙ, ಞ, ಣ, ನ, ಮ, ಯ, ರ, ಲ, ವ, ಶ, ಷ, ಸ, ಹ, ಳ.

ಹೀಗೆ ವಿಂಗಡಿಸಿಕೊಂಡು ಒಂದೊಂದು ಅಕ್ಷರವಾಗಿ ಕಲಿಸಿದರೆ ಮಕ್ಕಳಿಗೆ ಅಕ್ಷರಜ್ಞಾನ ವುಂಟಾಗುತ್ತದೆ ಎಂದರೆ ಒಂದು ಅಕ್ಷರವನ್ನು ತೋರಿಸಿದರೆ ಅದಕ್ಕೆ ಸರಿಯಾದ ಧ್ವನಿಯನ್ನೂ ಉಚ್ಚರಿಸುವುದಕ್ಕೂ ಒಂದು ಧ್ವನಿಯನ್ನು ಉಚ್ಚರಿಸಿದರೆ ಅದಕ್ಕೆ ಸರಿಯಾದ ಅಕ್ಷರವನ್ನು ತೋರಿಸುವುದಕ್ಕೂ ಬರುತ್ತದೆ. ಈ ಗುರುತಿಗೆ ಇದೇಧ್ವನಿ, ಈ ಧ್ವನಿಗೆ ಇದೇ ಗುರುತು ಎಂಬುದು ಮಕ್ಕಳಿಗೆ ಗೊತ್ತಾಗುತ್ತದೆ.

ಈ ೪ ರೀತಿಗಳಲ್ಲಿ ಉಪಾಧ್ಯಾಯರಿಗೆ ತಮ್ಮ ಪಾಠಶಾಲೆಯಲ್ಲಿ ದೊರಕುವ ಕಾಲಕ್ಕನುಗುಣವಾಗಿಯೂ ಉಪಕರಣಗಳಿಗನುಗುಣವಾಗಿಯೂ ಯಾವರೀತಿಯು ಸೌಕರ್ಯವೋ ಆ ರೀತಿಯಲ್ಲಿ ಬೋಧಿಸಬಹುದು.

ಇದಲ್ಲದೆ ಅಕ್ಷರಗಳ ಆಕೃತಿಯು ಮನಸ್ಸಿನಲ್ಲಿ ಸ್ಥಿರವಾಗಿ ನಾಟುವುದಕ್ಕಾಗಿ, ಮಕ್ಕಳ ಕೈಲಿ ಕೆಳಗೆ ವಿವರಿಸುವ ಕೆಲಸಗಳಲ್ಲಿ ಯಾವುದಕ್ಕೆ ಉಪಕರಣಗಳಿವೆಯೊ ಅದನ್ನು ಮಾಡಿಸಬಹುದು.

(1) ಮರದ ಹಲಗೆಗಳಲ್ಲಿ ಅಕ್ಷರಗಳನ್ನು ಹಳ್ಳವಾಗಿ ಕೊರೆದು ಇಟ್ಟಿರಬೇಕು. ಈ ಹಲಗೆಯನ್ನು ಮಗುವಿನಮುಂದೆ ಮಡಗಿ ಮಗುವಿನ ಕೈಲಿ ಒಂದು ಕಡ್ಡಿ ಕೊಟ್ಟು ಆ ಹಳ್ಳವಾಗಿ ಕೊರೆದಿರುವ ಅಕ್ಷರವನ್ನು ಕಡ್ಡಿಯಿಂದ ತಿದ್ದುವಂತೆ ಹೇಳುವುದು.

(2) ಅಕ್ಷರವನ್ನು ನೆಲದಮೇಲೆ ಆಗಲಿ ಹಲಗೆಯಮೇಲೆ ಆಗಲಿ ಬರೆದು ಸೀಮೆಸುಣ್ಣದಲ್ಲಿ ಬರೆದು ಹುಣಸೇಬೀಜಗಳನ್ನು ಆ ಆಕೃತಿಯಮೇಲೆ ಜೋಡಿಸುವಂತೆ ಹೇಳುವುದು.

ಕಿವಿಗೆ ಕೇಳಿಸುವುದರಿಂದಲೂ ಮಗುವಿಗೆ ಅಕ್ಷರದ ಆಕೃತಿಯು ಮತ್ತು ಅದರ ಧ್ವನಿಯು ಚನ್ನಾಗಿ ಮನಸ್ಸಿಗೆ ನಾಟಿ ಬೇಗ ಕಲಿವುದಕ್ಕೆ ಅವಕಾಶವಾಗುತ್ತದೆ.

ಪ್ರತಿಯೊಂದು ಮಗುವಿಗೂ ಬೇರೆಬೇರೆ ಅಕ್ಷರಗಳನ್ನು ತಿದ್ದಿಹಾಕಬೇಕಾದರೆ ಉಪಾಧ್ಯಾಯರು ಪ್ರತಿಯೊಂದು ಮಗುವಿನ ಮುಂದೆಯೂ ಹೋಗಿ ಅದಕ್ಕೆ ಬಂದಿರುವ ಅಕ್ಷರವನ್ನು ತಿಳಿದು ಮುಂದಲಕ್ಷರವನ್ನು ತಿದ್ದಿಹಾಕಬೇಕು. ಹೀಗೆ ಪ್ರತಿಯೊಂದು ಮಗುವಿಗೂ ತಿದ್ದಿಹಾಕಬೇಕಾದರೆ ಹೆಚ್ಚಾದ ಕಾಲ ಹಿಡಿಯುತ್ತದೆ. ಎಲ್ಲರಿಗೂ ಒಂದೇ ಬಗೆಯ ಅಕ್ಷರವನ್ನು ತಿದ್ದಿಹಾಕುವ ಪಕ್ಷದಲ್ಲಿ ಎಲ್ಲರಮುಂದೆಯೂ ಒಂದೇ ಅಕ್ಷರವನ್ನು ಬರೆದು ಸಾಲದ್ದಕ್ಕೆ ಕಪ್ಪುಹಲಗೆಯ ಮೇಲೆ ಆ ಅಕ್ಷರವನ್ನು ಬರೆದು ಅದರ ಧ್ವನಿಯನ್ನು ಹೇಳಿದರೆ ಸಾಕು. ಇದನ್ನು ಮಾಡಲು ಹೆಚ್ಚಾಗಿ ಕಾಲ ಹಿಡಿವುದಿಲ್ಲ. ಗ್ರಾಮಪಾಠಶಾಲೆಗಳಲ್ಲಿ ಉಪಾಧ್ಯಾಯರುಗಳಿಗೆ ಸಾಧಾರಣವಾಗಿ ೫ ತರಗತಿಗಳಿರುವುದರಿಂದ ಈ ಈ ತರಗತಿಯಲ್ಲಿ ಕೂಡಿಬರುವ ಕಾಲವನ್ನು ಇತರ ತರಗತಿಗಳಲ್ಲಿ ಪಾಠಹೇಳಲು ವಿನಿಯೋಗಿಸಬಹುದು. ಹೊಸದಾಗಿ ಹುಡುಗರು ಪಾಠಶಾಲೆಗೆ ಸೇರಿದರೂ ಅವರಿಗೂ ತರಗತಿಯಲ್ಲಿ ಕಲಿಸುತ್ತಿರುವ ಅಕ್ಷರವನ್ನೇ ತಿದ್ದಿಹಾಕಬೇಕು. ಉಳಿದ ಅಕ್ಷರಗಳನ್ನು ಆ ಮಗುವು ಮುಂದೆಮುಂದೆ ಕಲಿತುಕೊಳ್ಳುತ್ತದೆ.

R. Alvaraiyenger.

ನೀತಿವಚನಮಾಲೆ.

(ಕಳೆದ ಸಂಚಿಕೆಯ ೨೦೭ ನೆಯ ಪುಟದ ಶೇಷ.)

ಧನದಿಂಲೋಭಿಯನಾಕ್ರ ।
ದ್ಧದನೆರಡುಂ ಕೈಗಳನ್ನು ಮುಗಿವುದರಿಂದಂ ॥
ಅನುಸರಿಪುದರಿಂ ಮೂರ್ಖನ ।
ನನುನಯಿಸೈ ಸತ್ಯವಚನದಿಂ ಪಂಡಿತನಂ ॥೫೦॥

ಉಂಟೇಂ ಕ್ಷಾಂತಿಸಮಂತಪ ।
ಮುಂಟೇಂ ಸಂತೋಷಸದೃಶ ಮಾದಾನಂದಂ ॥
ಉಂಟೇಂ ರೋಗಂತೃಷ್ಣೆಯ ।
ನುಂಟೇಂ ದಯೆಯಿಂದಲುತ್ತಮಂ ಸದ್ಧರ್ಮಂ ॥೫೧॥

ನರನಂ ಮದಿಯಿಸದೈಸಿರಿ ।
ಸಿರಿಯುತ್ತಾಶೆಯನೆ ತೊರೆದವಂ ಸುಖಿಯೆನಿಪಂ ॥
ವರವಿಶ್ವಾಸಿಯೆ ಮಿತ್ರಂ ।
ಪುರುಷಂ ತನ್ನಿಂದ್ರಿಯಂಗಳಂ ಜಯಿಸಿದಪಂ ॥೫೨॥

ಅರಸುತನಂ ಮೂರ್ಖತ್ವಂ ।
ಹರೆಯುಂ ಸಿರಿಯೆಂಬ ನಾಲ್ಕರಲ್ಲೊಂದೊಂದೇ ॥
ಧರೆಯಂ ವ್ಯಥೆಗೀಡಾಗಿಸು ।
ತಿರಲೀ ನಾಲ್ಕುಂಜನರ್ಗೆ ಕುಡುವಳಲೆನಿತೋ ॥೫೩॥

ಪೆರರೊಳ್ ಪಲರ್ಮೆ ಬೆರೆಯು ।
ತ್ತಿರಬೇಡಿದರಿಂದ ಪಳಿಗೆ ಗುರಿಯೆನಿಸುವೆಯ್ಕೆ ॥
ಸಿರಿಕಂಡದಗಿಡುಗಳನಾ ।
ಚರಮಾದ್ರಿಯೊಳಿರ್ಪ ಕಾಡುಜನರುರಿಯಿಸುವರ್ ॥೫೪॥

ಚಿನ್ನದ ಪೊರ್ದುಗೆಯಿಲ್ಲದೆ ।
ರನ್ನಂಗಳ ಮೌಲ್ಯಮಾದೊಡಂ ಬೆಳಗವು ಮೇಣ್ ॥
ಚನ್ನೆಯರರಿದರ್ ಬಳ್ಳಿಗ ।
ಳಿನ್ನೇನಾಸರೆಯನುಳಿದು ತಾಂ ಬೆಳಗುವುವೇ ॥೫೫॥

ತೊಡವುಂ ಸೇವಕರುಂ ತ ।
ಮ್ಮೊಡೆಯಂ ತೊರೆದುಳಿದ ಕಡೆಯೊಳೆಸೆವರೆ ಪೇಳೆ ॥
ಕ್ಕಡವವದಾವಂ ಮುಡಿಯೊಳ್ ।
ತೊಡವೆನುತಂಪಡೆದು ಸಡಗರಿಪ್ಪನೊ ಕಾಣೆಂ ॥೫೬॥

ಹರುಷದೆ ಮೇಣ್ ಸಂಕಟದೊಳ್ ।
ತರದಿನದಾವಂ ವಿಚಾರವಂಮಾಡದೆ ಮುಂ ॥
ಬರೆಯುನೊ ಭರದಿಂದಾತನೆ ।
ಧರೆಯೊಳ್ ದುಃಖಕ್ಕೆ ಸಿಲುಕಿ ನೋಯುವುದಿಲ್ಲಂ ॥೫೭॥

ದಾನಂ ಪ್ರಿಯವಾಣಿಗಳಿಂ ।
ಜ್ಞಾನಮಹಂಕಾರವಿಲ್ಲದುದರಿಂದೆ ಧನಂ ॥
ದಾನದಿನಾಪಾರ್ತತಾಳ್ಮೆಯಿ ।
ನೀ ನೆಲದೊಳ್ ಸೇರಿ ಮೆರೆವುದೆತ್ತಲೊ ಕಾಣೆಂ ॥೫೮॥

ಅಳಲೊದವುವ ಮೊದಲೇ ನೀಂ ।
ತಿಳಿಯೈ ದುಃಖಕ್ಕೆ ತಕ್ಕಪಡಿಗೆಜ್ಜಗಳಂ ॥
ಜ್ವಲನಂ ಮನೆಯಂ ಸುಡುತಿರೆ ।
ನೆಲದೊಳ್ ಬಾವಿಯನೆ ತೋಡುವುದುಂ ಫಲಮೇಂ ॥೫೯॥

ಅಳಲೊಳ್ ಕೆಳೆಯುಂ ವೀರಂ ।
ಕೊಳಗುಳದೊಳ್ ಋಣದೊಳಮಲನರ್ಥಾಂಗಿಧನಂ ॥
ತೊಲಗಿದ ಸಮಯದೆ ನಂಟಂ ।
ಬಲುದುಗುಡದೆ ತಮ್ಮನನ್ನಿಯುಂ ತಿಳಿಯಿಸುವರ್ ॥೬೦॥

ಗಣಿಸೈ ನಿನ್ನಿಂ ಬಡವರ ।
ನೆಣಿಸುವೆಯೈ ಧನಿಕನೆನುತಮಾಗಳ್ ನಿನ್ನಂ ॥
ಗಣಿಸೈ ನಿನ್ನಿಂ ಧನಿಕರ ।
ನೆಣಿಸುವೆಯೈ ಬಡವನೆನುತಮಾಗಳ್ ನಿನ್ನಂ ॥೬೧॥

ಪನಿಪನಿಕೂಡಲ್ ಪಾತ್ರೆಯೊ ।
ಳನುವಿಂ ನೀರ್ ತುಂಬುವಂತೆ ಧರ್ಮಧನಂಗಳ್ ॥
ಅನಿತಿನಿತೆ ಸೇರುತಿರ್ದೊಡ
ಮನುವಿಂಧನ ರಾಶಿಧರ್ಮರಾಶಿಗಳಕ್ಕುಂ ॥೬೨॥

ಅರಯ್ದು ಬಿಸಿಲ್ಗುದುರೆಗ ।
ಸಾರಂ ಸಂಸಾರ ಮೆಣೆಯೆನುತ್ತುಂ ಸುಜನಂ ॥
ವಾರಿಸಿ ಸಂಸೃತಿ ಸುಖವಂ ।
ಸೇರುವುದೈ ಧರ್ಮದೆಸಕದೊಳ್ ಸಮ್ಮದದಿಂ ॥೬೩॥

ಸಂತರಜತೆಯುಂ ಮಾನವ ।
ನಾಂತಿರಲದರಿಂದೆ ಧರ್ಮವಂತನೆನಿಪ್ಪಂ ॥
ಎಂತೆನಲಾತಾವರೆಯೆಲೆ ।
ಯಂತಾಳ್ದುದಬಿಂದು ಮುತ್ತಿನಂತೆಸೆಯುವವೊಲ್ ॥೬೪॥

ತಳೆಯಲ್ ಪೌರುಷವಂ ಧರೆ ।
ತಳೆವುದು ಗೌರವವನಾವನಾಕೇಸರಿಯುಂ ॥
ಬೆಳಗುತಿಹ ಪಟ್ಟವಣೆಯೊಳ್ ।
ನಿಲಿಸುತೆ ಮೃಗರಾಜ ಪದದೊಳಭಿಷೇಚಿಸಿದಂ ॥೬೫॥

ಬಲಿಬಲವಂತನ ಬಲವಂ ।
ತಿಳಿರಂ ಮೃಗರಾಜಶಕ್ತಿಯುಂ ಗಜಮುರಿಗುಂ ॥
ತಿಳಿಗುಂ ಕೋಗಿಲೆ ಮಧುಗುಣ ।
ದಳವಂ ಮೇಣ್ ತಿಳಿಯನಪಲನಿಲಯಾಕಾಕಂ ॥೬೬॥

ಅರಿಯದರೊರೆದೊಡಮೇನೆ ।
ಲ್ಲರತಲೆಯುಂ ತಿಳಿವುದುತ್ತಮಾಂಗಮೆನುತ್ತಂ ॥
ಸಿರಿಯರ ಪದಪಾಂಸುಗಳಿಂ ।
ಮೆರಯದತಲೆಯುತ್ತಮಾಂಗಮೆನಿಪುದದೆಂತೈ ॥೬೭॥

ಚಂದಮನೀಯದು ಪೊಂದೊಡ ।
ಮಂದಮನಾರನ್ನದೊಡವುಮಾವುದೊಡಮುಂ ॥
ಒಂದುಂಚನ್ನಲ್ಲಾತ್ತಿರ ।
ಕಂದಂ ಸಜ್ಜನರ ಚರಣಪಾಂಸುವದೊಂದೇ ॥೬೮॥

ಚಂದಂಋಷಿಗೆ ಕೃಶತ್ವಂ ।
ಚಂದಂ ಕುಲವನಿತೆಯರ್ಗೆ ನಾಚಿಕೆಯುಮಲಂ ॥
ಚಂದಂ ಸಹನಂ ನೃಪತಿಗೆ ।
ಚಂದಂ ಬುಧಜನಕೆ ವಿದ್ಯೆಯೆಂಬೈಸಿರಿಯೇ ॥೬೯॥

ಜೀವಂಗಳನೆಲ್ಲಮುಮಂ ।
ಭಾವಿಸಿ ತನ್ನಂತೆ ಕುಶಲಮಂ ಮೇಣ್ ಹಿತಮಂ ॥
ಅವಗಮವುಗಳ್ಗೆಣಿಪುದೆ ।
ಭಾವಿಸಲುತ್ತಮಮಹಿಂಸೆಯೆನಿಸುವುದಿಳೆಯೊಳ್ ॥೭೦॥

ಮನುಜಂ ತಾಂ ನೋಡಿಹುದಂ ।
ಮನದೊಳ್ ಸಂದೇಹಮಿರದವೋಲ್ ತಿಳಿದಿಹುದಂ ॥
ನೆನೆದಾವಂಗಂಸಂಕಟ ।
ಮಿನಿಸಾದರುಮಾಗದಂತೆ ನುಡಿವುದೆ ಸತ್ಯಂ ॥೭೧॥

ಕೊರಗುತೆ ಕಷ್ಟಂಗಳ ಕರ ।
ಕರೆಯಿಂ ಸುತಸತಿಯರಿಂದೆ ನೋಯಿಸಿಕೊಳುತಂ ॥
ನೆರೆ ಬಡತನದೊಳ್ ಸಿಲುಕಿ ।
ರ್ದರುಮನ್ಯರ ಧನವ ಕದಿಯದಿಹುದಸ್ತೇಯಂ ॥೭೨॥

ಎಳಸದೆಯೆ ಸೌಖ್ಯಭೋಗಂ ।
ಗಳ ನಿಂದ್ರಿಯ ವರ್ಗದರ್ಪಮಂ ಜಯಿಸುತ್ತಂ ॥
ಬೆಳಗುವುದೇ ಮಾನವನಂ ।
ಬೆಳಗಿಸುವಾ ಬ್ರಹ್ಮಚರ್ಯೆಯೆಂಬುದು ಧರ್ಮಂ ॥೭೩॥

ಮನದೊಳ್ ಕಪಟವನಾನುತೆ ।
ಮನುಜಂ ದುರ್ಮಾರ್ಗಿಯಾದೊಡಂ ಸುಜನನವೋಲ್ ॥
ಜನರೊಳ್ ಕಾಣಿಸಿಕೊಳ್ವುದೆ ।
ನೆನೆಯಲ್ ತಾಂ ದಂಭಮಿಲ್ಲದಿರಲಿದದಂಭಂ ॥೨೪॥

ಬಲವಂತರಲ್ಲದವರಿಂ ।
ಪಲವಗೆಯಿಂ ನೋವನಾಂತೊಡಂ ಕೋಪಿಸದೇ ॥
ತಳೆಯಲ್ ಸಹನವನದನೇ ।
ತಿಳಿದವರಕ್ರೋಧಮೆನ್ನುತಂ ಪೇಳುವರೈ ॥೨೫॥

ಅರಿಯಿಸಿದಂ ಗಾಯತ್ರಿಯ ।
ನರಿಯಿಸಿದಾತಂ ಸುವಿದ್ಯೆಯಂ ಮೋಕ್ಷ ಜನಕಂ ॥
ಪೊರೆದಂ ಕಷ್ಟದೊಳನ್ನವ ।
ದೊರೆಯಿಸಿದಂ ಗುರುಗಳೆನಿಪರೈ*ವರುಮಿವರ್ಗಳ್ ॥೨೬॥

ಕೊಳೆಯಿಲ್ಲದ ಮಣ್ಣಿಂದಂ ।
ಮಲಗಂಧಂ ತೊಲಗುವಂತೆ ತೊಳೆ ಕೈಕಾಲಂ ॥
ನೆಲನಂ ನೋಡುತೆ ನಡೆಯೈ ।
ಕೊಳೆಯಿರದೆಡೆ ಚಿತ್ತಶುದ್ಧಿಯಿಂ ಶುಚಿಯೆನಿಪಯ್ ॥೨೭॥

ತೊರೆಯದೆ ಸುಧರ್ಮಪಥವಂ ।
ದೊರೆದನಿತೈಸಿರಿಯೆ ಸಾಲ್ಗುಮೆನುತಂ ತಣಿವಂ ॥
ನರನಾಂತು ಮುದದಿನಿರುವುದೆ ।
ಪರಮಂ ಸಂತೋಷಮೆನಿಪುದದು ಪಂಡಿತರಿಂ ॥೨೮॥

ವೈರಿಗಳಂ ಸಖರಂ ಸಾ ।
ಧಾರಣರಂ ಸಮತೆಯಿಂದಮೊಂದುಂ ಮನುಜಂ ॥
ಆರಯ್ದು ನೋಡುತಿರಲದೆ ।
ಸಾರಿಕೆಯುಳ್ಳಾರ್ಜವಾಖ್ಯೆಯಂ ತಾಳುವುದೈ ॥೨೯॥

ಪರಧನವಂ ಮಣ್ಣುಂಡೆಯ ।
ತೆರದಿಂ ಪರವನಿತೆಯರ್ಗಳಂ ತಾಯ್ಗಿರವೋಲ್ ॥
ಪೆರರಂ ತನ್ನಯ ತೆರದಿಂ ।
ದರಿವಾತನೆ ಪಂಡಿತಾಗ್ರಗಣ್ಯಂ ಮಾನ್ಯಂ ॥ ॥೩೦॥

ಮರೆವೆಯೆನಿಪ್ಪ ಕಳ್ತಲೆ ।
ಯಿರುಂಬಿನಿಂ ಕುರುಡನಾದ ಮನುಜನ ಕಣ್ಣಂ ॥
ಅರಿವೆನಿಪಂಜನದಿಂದಂ ।
ಮೆರೆಯಿಸಿದಾ ಪರಮಗುರುವಿನಂಘ್ರಿಗೆ ಮಣಿವೆಂ ॥ ॥೮೧॥
ಮೆರೆವಾವೇದಾಂತಹರೀ ।
ಶ್ವರನೆಲ್ಲಿಯುವರೆಗಮಾರ್ಪಿನಿಂ ಗರ್ಜಿಸನೋ ॥
ಉರುಶಾಸ್ತ್ರಜಂಬುಕಂಗಳ್ ।
ಪರಿಪರಿಯಿಂ ಕೂಗುತಿರ್ಪುವಲ್ಲಿಯುವರೆಗಂ ॥ ॥೯೦॥

(ಸಶೇಷ.)

ಬಾಲಕರಿಗೆ ಹೇಳಿಕೊಡತಕ್ಕ ನೀತಿಕಥೆ.

ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀ ।
ದೈರ್ವಂ ಹಿ ದೈವಮಿತಿ ಕಾಪುರುಷಾ ವದಂತಿ ॥
ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ ।
ಯತ್ನೇ ಕೃತೇ ಯದಿ ನ ಸಿದ್ಧ್ಯತಿ ಕೋತ್ರ ದೋಷಃ ॥೧॥

ಎಂದು, ಕೆಲಸಮಾಡತಕ್ಕ ಮನುಷ್ಯನನ್ನು ಲಕ್ಷ್ಮಿಯು ಆಶ್ರಯಿಸುವಳಾದುದರಿಂದ ಕೆಲಸಮಾಡದೇ ಕೂತುಕೊಳ್ಳಬಾರದೆಂದು ನರಿಯು ಅರಣ್ಯದಲ್ಲಿಯೇ ಸಂಚರಿಸುತ್ತಾ ಹೊರಟಿತು. ಆಗ ಬಲೆಯಲ್ಲಿ ಸಿಕ್ಕಿದ್ದ ಒಂದು ಹುಲಿಯನ್ನು ನೋಡಿ ತನ್ನ ಮನಸ್ಸಿನಲ್ಲಿ.

ಮನುಷ್ಯರು ಬಲದಲ್ಲಿ ಕಡಮೆಯಾಗಿದ್ದರೂ ಬುದ್ಧಿಯನ್ನುಳ್ಳವರಾದುದರಿಂದ ಎಂತಹ ಬಲಿಷ್ಠವಾದ, ದುಷ್ಟಜಂತುವನ್ನೂ ಬಂಧನದಲ್ಲಿ ಸಿಕ್ಕಿಸುವರು. ಇದೀಗ ಬುದ್ಧಿವಂತಿಕೆ! ಎಂದು,

ಹುಲಿಯನ್ನು ಕುರಿತು "ರಾಜಾ ಪ್ರತ್ಯಕ್ಷದೇವತಾ" ಎಂದಿರುವುದು. ಮತ್ತು ಪ್ರಾತಃಕಾಲದಲ್ಲಿ ತಮ್ಮ ದರುಶನವಾದುದರಿಂದ ದೇವರ ದರುಶನವಾದಂತಾಯಿತು ಈ ದಿನದ ನನ್ನ ಕೆಲಸಗಳೆಲ್ಲವೂ ಸುಲಲಿತವಾಗಾಗುವುದಲ್ಲದೆ ಇಷ್ಟಾರ್ಥಸಿದ್ಧಿಯೂ ಆಗುವುದು.

ಈಗ ತಮಗಾಗಿರುವ ಈ ಸೆರೆಯನ್ನು ನೋಡಿ ಬಹು ಸಂಕಟವಾಯಿತು. ನನ್ನಿಂದಾಗತಕ್ಕದೇನು ಎಂದಿತು.

ಹುಲಿ:—ತನ್ನ ಮನಸ್ಸಿನಲ್ಲಿ—

ವ್ಯೋಮ್ನ್ಯೇಕಾಂತವಿಹಾರಿಣೋಽಪಿ ವಿಹಗಾಃ ಸಂಪ್ರಾಪ್ನುವಂತ್ಯಾಪದಂ।
ಬಧ್ಯಂತೇ ನಿಪುಣೈರಗಾಧಸಲಿಲಾನ್ಮೀನಾಃ ಸಮುದ್ರಾದಪಿ॥
ದುರ್ನೀತಂ ಕಿಮಿಹಾಸ್ತಿ ಕಿಂಚ ಸುಕೃತಂ ಕಃ ಸ್ಥಾನಲಾಭೇ ಗುಣಃ।
ಕಾಲಃ ಸರ್ವಜನಾನ್ ಪ್ರಸಾರಿತಕರೋ ಗೃಹ್ಣಾತಿ ದೂರಾದಪಿ॥೬॥

ಎಂದು ದೈವಬಲದಿಂದ ನಾನು ಎಂತಹ ಗಟ್ಟಿಗನಾದರೂ ಬಂಧನದಲ್ಲಿ ಸಿಕ್ಕ ಬೇಕಾಯಿತು. ಮತ್ತು ಕೀಳುಪ್ರಾಣಿಯಿಂದ ಸಹಾಯವನ್ನೂ ಹೊಂದಬೇಕಾಯಿತು. "ಕಾರ್ಯವಾಸಿ ಕತ್ತೇಕಾಲಕಟ್ಟು" ಎಂಬುಕ್ತಿಯು ಅಫಲವಾಗಬಾರದು. ನನ್ನ ಕಾರ್ಯವೂ ಆಗಬೇಕಾಗಿರುವುದರಿಂದ ಸಾಮವೇ ಮೊದಲಾದ ಚತುರೋಪಾಯ ಗಳನ್ನೂ ಅರಿತ ನರಿಯನ್ನು ಬಿಟ್ಟರೆ ನನ್ನ ಬಂಧನವು ತಪ್ಪಲಾರದೆಂದು ಪ್ರಕಾಶ ವಾಗಿ ನಾನು ಹೇಳಬೇಕಾದುದೇನಿದೆ—ಎನ್ನುವಷ್ಟರಲ್ಲಿ—ನರಿ: ನಿಮ್ಮನ್ನು ಈ ಸೆರೆ ಯಿಂದ ಬಿಡಿಸಲು ಒಂದು ಇಲಿಯನ್ನು ಕರೆತರುವೆನು ಎಂದು ಹೊರಟಿತು.

ಹುಲಿಯು "ಸಂಕಟಬಂದಾಗ ವೆಂಕಟರಮಣ" ಎನ್ನುವಂತೆ ವಿಶೇಷವಾಗಿ ದೇವರನ್ನು ಧ್ಯಾನಿಸುತಲಿತ್ತು. ನರಿಯು ಇದನ್ನು ತಿಳಿದು ಮುಂದೆ ಬರುವ ವಿಪತ್ತ ನ್ನರಿತು ಮೊದಲೇ ದೇವರಲ್ಲಿ ಭಕ್ತಿಯನ್ನೂ ಬಡಪ್ರಾಣಿಗಳಲ್ಲಿ ಕರುಣೆಯನ್ನೂ ತೋರಿಸಿದ್ದರೆ ಇಂತಹ ವಿಪತ್ತೇಕೆ ಬರುತ್ತಲಿತ್ತೆಂದು ಹೇಳಿ-ಒಂದು ಇಲಿಯನ್ನು ವಿಶೇಷ ಅಭಯವನ್ನಿತ್ತು ಕರೆತಂದು ಹುಲಿಯ ಬಂಧನವನ್ನು ತಪ್ಪಿಸಿತು.

ಸೆರೆಯನ್ನು ತಪ್ಪಿಸಿಕೊಂಡ ಹುಲಿಯು ಇಲಿ ಮತ್ತು ನರಿಗಳನ್ನು ನೋಡಿ ನನ್ನ ಈ ಕಥೆಯಿಂದ:— ಕೆಲಸ ಮಾಡುತ್ತಿರುವುದರಿಂದ ದೈವವು ಬೇಕಾದ ಸಂಪ ತ್ತನ್ನು ಒದಗಿಸಿಕೊಡುವುದು. ಶಕ್ತಿಯಿಂದ ಆಗದ ಕೆಲಸವು ಯುಕ್ತಿಯಿಂದ ಆಗುವುದು. ಪ್ರತಿಯೊಂದು ಪ್ರಾಣಿಯೂ, ಮತ್ತು ಪದಾರ್ಥವೂ ಉಪಯೋ ಗಕ್ಕೆ ಬೇಕಾಗುವುವು.

ಸೃಷ್ಟಿಕರ್ತನಾದ ದೇವರು ಸಕಲರ ದುಃಖಗಳನ್ನೂ ಬಲ್ಲನಾದುದರಿಂದ ವಿಪ ತ್ತಿನಲ್ಲಿ ಅಲ್ಲದೆ ಸದಾ ಸ್ಮರಣೆಗೆ ಯೋಗ್ಯನಾಗಿದ್ದಾನೆ. ಎಂಬ ವಿಷಯಗಳು ತಿಳಿ ದುವು ಎಂದಿತು.

ನರಿ ಮತ್ತು ಇಲಿಗಳು ಹುಲಿಯಿಂದ ಅಮಿತವಾದಾಹಾರವನ್ನೂ ದ್ರವ್ಯವನ್ನೂ ಹೊಂದಿ ಅನುಮತಿಯನ್ನು ಪಡೆದು ಹೊರಟುಹೋಗುವಾಗ ದಾರಿಯಲ್ಲಿ ನರಿಯು ಇಲಿಯನ್ನು ನೋಡಿ.

ನರಿ:—ನಿನ್ನ ಸಹಾಯವು ನನಗಾಗದಿದ್ದರೆ ಹುಲಿಯಿಂದ ಆಹಾರವನ್ನು ಹೊಂದುವುದೂ ಐಶ್ವರ್ಯವನ್ನು ಹೊಂದುವುದೂ ಆಗುತ್ತಲಿತ್ತೆ?

ಇಲಿ:—ಬುದ್ಧಿವಂತರು ತಮ್ಮನ್ನು ತಾವೇ ಹೊಗಳಿಕೊಳ್ಳುವರೆ? ನಿನ್ನ ಸಹವಾಸ ನನಗಿಲ್ಲದಿದ್ದರೆ ನನಗೆ ಹುಲಿಯ ಬಂಧನದ ಸಂಗತಿಯು ಹೇಗೆ ಗೊತ್ತಾಗುತಲಿತ್ತು! ಸದಾ ಕೆಲಸಮಾಡುತ್ತಿರುವ ನಿನ್ನಿಂದತಾನೇ ದ್ರವ್ಯವೂ ಹೆಚ್ಚಾದ ಆಹಾರವೂ ದೊರೆಯಿತು!

ನರಿ:—ನಿನ್ನ ಸಂಪಾದನೆಯು ಕೆಲಸಮಾಡಿದುದರಿಂದಾಯಿತು. ನನ್ನದು ಕೆಲಸವಿಲ್ಲದೆ ಆದಂತಾಯಿತು. ಇದರಿಂದ ನನಗೆ ವ್ಯಥೆಯಾಗಿದೆ!

ಇಲಿ:—ನಿನ್ನ ವಾಸಸ್ಥಳದಿಂದ ಇಷ್ಟು ದೂರ ಬಂದು ಕ್ರೂರಜಂತುವಾದ ಹುಲಿಯನ್ನು ಕಂಡು ಹಿತವಚನದಿಂದ ಹುಲಿಗೆ ಸುಗುಣವನ್ನುಂಟುಮಾಡಿ ನನ್ನಲ್ಲಿಗೆ ಬಂದು ನನಗೂ ಅಭಯವಿತ್ತು ನಿನ್ನಿಂದ ಆ ಹುಲಿಯ ಬಂಧನವನ್ನು ತಪ್ಪಿಸಿದುದು ಕೆಲಸವಲ್ಲವೆ?.

ಕೆಲಸ ಮಾಡದೆ ದೊರೆತ ದ್ರವ್ಯವು ಮೈಗಳ್ಳತನವನ್ನುಂಟುಮಾಡುವುದೆನ್ನುವ ನಿನ್ನ ವ್ಯಥೆಯನ್ನು ನಿಲ್ಲಿಸೆಂದು ಹೇಳಿತು.

ನರಿ:—(ಇಲಿಯ ಮಾತಿನಿಂದ) ಸಮಾಧಾನವನ್ನು ಮನಸ್ಸಿಗೆ ತಂದುಕೊಂಡು ಇಲಿಗೆ ಅಪ್ಪಣೆಯನ್ನು ಕೊಟ್ಟು ತಾನೂ ಅದರ ಅನುಮತಿಯಂತೆ ತನ್ನ ವಾಸಸ್ಥಾನವನ್ನು ಸೇರಿ ತನ್ನ ಮನದಲ್ಲಿ—ನಾನು ಕೆಲಸಮಾಡದೆ ಮನೆಯಲ್ಲಿಯೇ ಇದ್ದಲ್ಲಿ ನನಗೆ ಈ ಅಮಿತವಾದಾಹಾರವನ್ನು ನಾನು ಬಯಸಿದಾಗ್ಗೂ ಹೊಂದುತ್ತಿರಲಿಲ್ಲ. ಈಧನವನ್ನಂತೂ ಹೊಂದುವುದೂ ಆಗುತ್ತಿರಲಿಲ್ಲ. ಆದುದರಿಂದಲೇ ಹಿರಿಯರು—

ಉದ್ಯಮೇನ ಹಿ ಸಿದ್ಧ್ಯಂತಿ ಕಾರ್ಯಾಣಿ ನ ಮನೋರಥೈಃ ॥
ನ ಹಿ ಸುಪ್ತಸ್ಯ ಸಿಂಹಸ್ಯ ವಿಶಂತಿ ವದನೇ ಮೃಗಾಃ ॥೩॥

ಎಂದು ಹೇಳಿರುವರು. ಆದುದರಿಂದ ನೀತಿಬೋಧನೆಯನ್ನು ಮರೆಯಬಾರದೆಂದುಕೊಂಡಿತು !!

ನೋಟು:—

ಉಪಾಧ್ಯಾಯರು ಇದರಲ್ಲಿ ಬಂದಿರುವ ಮೃಗಗಳನ್ನು ಎರೆಯ ಮಣ್ಣಿನಲ್ಲಿ ಮಾಡಿಸಿ ಬಣ್ಣವನ್ನೂ ಅವರಿಂದಲೇ ಹಚ್ಚಿಸಿ ಬಣ್ಣದ ಹೆಸರನ್ನು ತಿಳಿಸಿ—ಹುಲಿ—ನರಿ—ಇಲಿ—ಇವುಗಳಲ್ಲಿರುವ ಬಣ್ಣಗಳ ಭೇದವನ್ನೂ—ಮಿಶ್ರಬಣ್ಣಗಳನ್ನೂ ತಿಳಿಸಬೇಕು.

ಜಾತಿಯಲ್ಲಿ ಬೇರೆಬೇರೆ ಆದಾಗ್ಯೂ ಅನ್ಯೋನ್ಯ ಪ್ರೀತಿಯಿಂದ ಮಾಡಿದ ಉಪಕಾರ ಪ್ರತ್ಯುಪಕಾರಗಳನ್ನು ತಿಳಿಸಿಕೊಟ್ಟು—ಮೃಗಜಾತಿಯಲ್ಲಿಯೇ ಇಷ್ಟು ಒಗ್ಗಟ್ಟಿರುವಾಗ ಮನುಷ್ಯರಾದ ನಾವು ಜಾತಿಭೇದಗಳನ್ನು ಬಿಟ್ಟು ದ್ವೇಷಾಸೂಯೆಗಳನ್ನು ತೊರೆದು ಪರಸ್ಪರ ಉಪಕಾರ ಪ್ರತ್ಯುಪಕಾರದಿಂದ ಇದ್ದಲ್ಲಿ ಅತಿಯಾದ ಸಂತೋಷವನ್ನು ಹೊಂದಿ ಚಿರಕಾಲ ಜೀವಿಸಿಕೊಂಡಿರಬಹುದೆನ್ನುವುದನ್ನು ತಿಳಿಸಬೇಕು. “ಚಿಂತೆಯೇ ಮುಪ್ಪು ಸಂತೋಷವೇ ಯೌವನ” ಎಂದು ತಿಳಿಸಬಹುದು.

ಮತ್ತು ಹುಲಿಯು ತನ್ನ ಕಥೆಯಿಂದ ತಿಳಿದುಕೊಂಡೆನೆಂದು ಹೇಳುವ ನೀತಿಗಳನ್ನು ವಿವರಿಸಿ ತಿಳಿಸಬೇಕು.

ಬಿ. ಅನಂತಾಚಾರ್.

ಅಂಕಗಣಿತ.

ಸಾಮಾನ್ಯ ವಿಧಿಗಳು.

(ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರ.)

ಒಟ್ಟು—ಎರಡು ಸಂಖ್ಯೆಗಳನ್ನು ಕೂಡಿದರೆ ಬರುವ ಸಂಖ್ಯೆ. ಇದಕ್ಕೆ ಸಂಕಲನ ಲಬ್ಧವೆಂದೂ ಹೇಳುವುದು. ಕೂಡುವ ಚಿಹ್ನೆ = ‘+’ ಇದನ್ನು ಪ್ಲಸ್‘ ಎಂದು ಓದು.

ಅಂತರ.—ಅಧಿಕ ಸಂಖ್ಯೆಯಲ್ಲಿ ಅಲ್ಪ ಸಂಖ್ಯೆಯನ್ನು ಕಳೆದುಳಿಯುವಸಂಖ್ಯೆ ಕಳೆಯುವ ಚಿಹ್ನೆ = ‘—’ ಇದಕ್ಕೆ ‘ಮೈನಸ್’ ಎಂದು ಹೆಸರು.

ಅಧಿಕ ಸಂಖ್ಯೆ + ಅಲ್ಪ ಸಂಖ್ಯೆ = ಒಟ್ಟು.

ಅಧಿಕ ಸಂಖ್ಯೆ — ಅಂತರ = ಅಲ್ಪಸಂಖ್ಯೆ.

∴ (ಆದುದರಿಂದ) ಅಧಿಕಸಂಖ್ಯೆ + ಅಧಿಕಸಂಖ್ಯೆ — ಅಂತರ = ಒಟ್ಟು.

∴ 2 × ಅಧಿಕ ಸಂಖ್ಯೆ = ಒಟ್ಟು + ಅಂತರ.

∴ ಅಧಿಕಸಂಖ್ಯೆ = $\frac{\text{ಒಟ್ಟು} + \text{ಅಂತರ}}{2}$.

ಅಂದರೆ ಎರಡು ಸಂಖ್ಯೆಗಳ ಒಟ್ಟನ್ನೂ ಅಂತರವನ್ನು ಸೇರಿಸಿ ಅರ್ಧ ಮಾಡಿದರೆ ಅಧಿಕ ಸಂಖ್ಯೆ ಬರುವುದು.

ಉದಾ :—(8) ಎರಡು ಸಂಖ್ಯೆಗಳ ಒಟ್ಟು 147 ; ಅವುಗಳ ಅಂತರವು 21. ಆ ಸಂಖ್ಯೆಗಳು ಯಾವುವು ?

ರಚನಾಕ್ರಮ.—ಅಧಿಕಸಂಖ್ಯೆ = $\frac{\text{ಒಟ್ಟು} + \text{ಅಂತರ}}{2}$

$= \frac{147+21}{2} = \frac{168}{2} = 84$.

ಅಲ್ಪಸಂಖ್ಯೆ = ಒಟ್ಟು — ಅಧಿಕ ಸಂಖ್ಯೆ.

$= 147 - 84 = 63$.

∴ ಸಂಖ್ಯೆಗಳು 84 ಮತ್ತು 63 ಉತ್ತರ.

ಅಭ್ಯಾಸ. ಉದಾ.

(9) ಈ ಕೆಳಗಿನ ಒಟ್ಟು ಮತ್ತು ಅಂತರಗಳುಳ್ಳ ಸಂಖ್ಯೆಗಳು ಯಾವುವು ?

(1) 444 ಮತ್ತು 200.
(2) 143 ,, 101.
(3) 135 ,, 121.
(4) 1273 ,, 421.

(10) ಎರಡು ಸಂಖ್ಯೆಗಳಲ್ಲಿ ಅಧಿಕ ಸಂಖ್ಯೆಯು 7628 ; ಅವುಗಳ ಅಂತರವು 6983. ಆ ಎರಡರ ಒಟ್ಟಿಗೂ ಅಂತರಕ್ಕೂ ಇರುವ ಅಂತರವೇನು ?

(11) ಎರಡು ಸಂಖ್ಯೆಗಳ ಅಂತರವು ಅಲ್ಪ ಸಂಖ್ಯೆಯು ನಾಲ್ಕರಷ್ಟು ದೊಡ್ಡದು. ಅಂತರವು 1000 ಆದರೆ ಅಧಿಕ ಸಂಖ್ಯೆಗೂ ಅಂತರಕ್ಕೂ ಅಂತರವೆಷ್ಟು ?

(12) ಎರಡು ಸಂಖ್ಯೆಗಳಲ್ಲಿ ಅಲ್ಪ ಸಂಖ್ಯೆಯು ಅಧಿಕ ಸಂಖ್ಯೆಗಿಂತ 37 ಕಮ್ಮಿ ; ಅಧಿಕ ಸಂಖ್ಯೆಯು ಅವುಗಳಂತರಕ್ಕಿಂತ 597 ಹೆಚ್ಚು. ಆ ಸಂಖ್ಯೆಗಳ ಒಟ್ಟೆಷ್ಟು ?

(13) ಒಂದು ಗಾಡಿ ಮತ್ತು ಕುದುರೆಯ ಬೆಲೆ 650 ರೂ. ಕುದುರೆಯು ಗಾಡಿಗಿಂತ 50 ರೂ. ಹೆಚ್ಚಾಗಿ ಬೆಲೆ ಬಾಳುತ್ತೆ. ಗಾಡಿಯ ಕ್ರಯವೆಷ್ಟು?

(14) ಒಂದು ಮನೆ ಮತ್ತು ಸಾಮಾನುಗಳು 1125 ರೂ. ಕ್ರಯವಾಗುತ್ತವೆ. ಸಾಮಾನುಗಳು ಮನೆಗಿಂತ 155 ರೂ. ಕಮ್ಮಿ ಬೆಲೆ ಬಾಳುತ್ತವೆ. ಮನೆಯ ಬೆಲೆ ಏನು?

(15) ರಾಮ ಶಾಮ ಮತ್ತು ಭೀಮ ಎಂಬ ಮೂವರು ಹುಡುಗರಲ್ಲಿ 70 ಗೋಲಿಗಳಿವೆ. ರಾಮ ಮತ್ತು ಶಾಮನಲ್ಲಿ 55, ಭೀಮ ಮತ್ತು ರಾಮನಲ್ಲಿ 45, ಇವೆ. ಪ್ರತಿಯೊಬ್ಬನಲ್ಲಿಯೂ ಎಷ್ಟೆಷ್ಟು ಗೋಲಿಗಳಿವೆ?

* ಎರಡು ಸಂಖ್ಯೆಗಳ ಒಟ್ಟು 650. ಅವುಗಳ ಅಂತರ 50. ಸಂಖ್ಯೆಗಳಾವುವು? ಎಂದಹಾಗೆ.

ರಚನಾಕ್ರಮ — ಮೂರು ಜನಗಳಲ್ಲಿರತಕ್ಕ ಒಟ್ಟು ಸಂಖ್ಯೆಯಲ್ಲಿ ಇಬ್ಬರಲ್ಲಿರತಕ್ಕದ್ದನ್ನು ಕಳೆದರೆ ಮೂರನೇಯವನಲ್ಲಿರತಕ್ಕದ್ದು ಗೊತ್ತಾಗುವುದು?

ರಾಮ + ಶಾಮ + ಭೀಮ ಇವರಲ್ಲಿರುವುದು = 70 ಗೋಲಿ.
ರಾಮ + ಶಾಮ ,, 55 ,,
∴ ಭೀಮನಲ್ಲಿ ,, 70 − 55 = 15 ಗೋ,
ರಾಮ ಮತ್ತು ಭೀಮನಲ್ಲಿ ,, 45 ಗೋಲಿ.
ಭೀಮನಲ್ಲಿರುವುದು 15 ಗೋಲಿ.
∴ ರಾಮನಲ್ಲಿರುವುದು = 45 − 15 = 30 ಗೋಲಿ.
ರಾಮ ಮತ್ತು ಶಾಮನಲ್ಲಿರುವುದು 55 ಗೋಲಿ.
ರಾಮನಲ್ಲಿ ,, 30 ಗೋಲಿ.
∴ ಶಾಮನಲ್ಲಿರುವುದು = 55 − 30 = 25 ಗೋಲಿ.

ಉತ್ತರ. ರಾಮನಲ್ಲಿ 30, ಶಾಮನಲ್ಲಿ 25, ಭೀಮನಲ್ಲಿ 15 ಗೋಲಿಗಳು

(16) ಒಂದು ಮನೆ, ತೋಟ ಮತ್ತು ಲಾಯವು ಒಟ್ಟಿಗೆ 1391 ರೂ. ಬೆಲೆಯಾಗುತ್ತವೆ. ಮನೆ ತೋಟಗಳೆರಡೂ 1240 ರೂ. ತೋಟ ಮತ್ತು ಲಾಯವು 751 ರೂ. ಆದರೆ ಪ್ರತಿ ಒಂದರ ಕ್ರಯವೆಷ್ಟು!

(17) ಒಂದು ಗಡಿಯಾರ, ಅದರ ಸರಪಣಿ ಮತ್ತು ಪೆಟ್ಟಿಗೆ ಮೂರಕ್ಕೂ 130 ರೂ. ಬೆಲೆ. ಗಡಿಯಾರ ಮತ್ತು ಸರಪಣಿಗೆ 115 ರೂ. ಗಡಿಯಾರ ಮತ್ತು ಪೆಟ್ಟಿಗೆ ಎರಡಕ್ಕೂ 100 ರೂ. ಕ್ರಯವಾಗುತ್ತವೆ. ಪ್ರತಿಯೊಂದರ ಕ್ರಯವೇನು? ಗಡಿಯಾರದ ಕ್ರಯವು ಪೆಟ್ಟಿಗೆ ಕ್ರಯಕ್ಕಿಂತ ಎಷ್ಟು ಹೆಚ್ಚು?

ವಿ ದ್ಯಾ ದಾ ಯಿ ನಿ

(A MONTHLY JOURNAL.)

ಭಾಗ ೧೨] ನವೆಂಬರ್ ೧೯೦೯. [ಸಂಚಿಕೆ ೧೧.

ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

ವಿ ದ್ಯಾ ಭ್ಯಾ ಸ .

1. ವಿದ್ಯಾಭ್ಯಾಸದ ಇಲಾಖೆಯಲ್ಲಿ 1908–09ನೆ ಸಾಲಿನಲ್ಲಿ ನಡೆದ ಕೆಲಸವು ಬಹಳ ತೃಪ್ತಿಕರವಾಗಿರುತ್ತದೆ. ಈ ವರ್ಷದಲ್ಲಿ 43 ಸರ್ಕಾರಿ ಸ್ಕೂಲುಗಳು ಹೊಸದಾಗಿ ಏರ್ಪಟ್ಟವು. 42 ಸ್ಕೂಲ್‍ಗಳು ಮೌಕೂಫ಼್ ಆದವು. ಈ 42 ರ ಪೈಕಿ ಸರ್ಕಾರೀ ಸಹಾಯ ಹೊಂದದೇ ಇದ್ದವುಗಳೇ ಅನೇಕ. ಈ ಇಲಾಖಾ ನಿಬಂಧನೆಗಳ ಮೇರೆಗೆ ತರಗತಿ ಇಡದೆ ಇರುವ ಖಾಸಗಿ ಸ್ಕೂಲ್‍ಗಳ ಸಂಖ್ಯೆಯೂ ಸಹಾ ಈ ವರ್ಷದಲ್ಲಿ ಬಹಳವಾಗಿ ಜಾಸ್ತಿಯಾಗಿರುತ್ತದೆ. ಒಟ್ಟಿನಲ್ಲಿ ಸ್ಕೂಲ್‍ಗಳ ಸಂಖ್ಯೆಯು 4,146 ರಿಂದ 4,310 ಕ್ಕೂ, ವಿದ್ಯಾರ್ಥಿಗಳ ಸಂಖ್ಯೆಯು 1,23;000 ದಿಂದ 1,39,000 ಕ್ಕೂ ಏರಿರುತ್ತವೆ. ಹಿಂದಿನ ವರ್ಷ ಸ್ಕೂಲಿಗೆ ಹೋಗುವ ವಯಸ್ಸಿನ ಹುಡುಗರ ಪೈಕಿ ಶೇಕಡಾ 25·2 ಭಾಗದವರೂ, ಹುಡುಗಿಯರ ಪೈಕಿ ಶೇಕಡಾ 4·72 ಭಾಗದವರೂ, ಸ್ಕೂಲ್‍ಗಳಲ್ಲಿ ಓದುತ್ತಾ ಇದ್ದರು; ಈ ವರ್ಷ ಅಂಥವರ ಸಂಖ್ಯೆಯು ಹೆಚ್ಚಿ ಹುಡುಗರ ಪೈಕಿ ಶೇಕಡಾ 28·4 ಭಾಗದವರೂ ಹುಡುಗಿಯರ ಪೈಕಿ ಶೇಕಡಾ 5·3 ಭಾಗದವರೂ ಓದುತ್ತಾ ಇದ್ದರು. ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಇಷ್ಟುಮಟ್ಟಿನ ಅಭಿವೃದ್ಧಿಯು ಮುಖ್ಯವಾಗಿ ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳಲ್ಲೂ, ವರ್ನಾಕ್ಯುಲರ್ ಮಿಡಲ್ ಮತ್ತು ಪ್ರೈಮರಿ ಸ್ಕೂಲುಗಳಲ್ಲೂ ಉಂಟಾಗಿರುತ್ತದೆ. ಗ್ರಾಮಾಂತರದ ಪ್ರಾಥಮಿಕ ಸ್ಕೂಲ್‍ಗಳ ಮಿಡಲ್ ಸ್ಕೂಲ್ ತರಗತಿಗಳಲ್ಲಿಯೂ, ಆಂಗ್ಲೋವರ್ನಾಕ್ಯುಲರ್ ಮತ್ತು ವರ್ನಾಕ್ಯುಲರ್ ಸ್ಕೂಲ್‍ಗಳ ಪ್ರೈಮರಿ ತರಗತಿಗಳಲ್ಲಿಯೂ ಸ್ಕೂಲ್ ಸಂಬಳವನ್ನು ವಜಾ ಮಾಡಿರುವದರಿಂದ

ಲೂ ಎಲ್ಲಾ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ಗಳಲ್ಲಿಯೂ 3ನೆ ತರಗತಿಯ ಲಾಗಾಯಿತು ಇಂಗ್ಲೀಷು ಭಾಷೆಯನ್ನು ಅವಶ್ಯಕವಾಗಿ ಅಭ್ಯಾಸ ಮಾಡಲೇಬೇಕೆಂದು ವಿಧಿಸಿದುದರಿಂದಲೂ ಈ ರೀತಿಯಾಗಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಲಿಕ್ಕೆ ಕಾರಣವಾಯಿತು.

2. ಸ್ತ್ರೀ ವಿದ್ಯಾಭ್ಯಾಸವು ಬಹಳ ಅಭಿವೃದ್ಧಿಗೆ ಬಂತು. ಬಾಲಿಕಾಪಾಠಶಾಲೆಗಳ ಸಂಖ್ಯೆಯು 259 ರಿಂದ 272ಕ್ಕೂ ವಿದ್ಯಾರ್ಥಿನಿಯರ ಸಂಖ್ಯೆಯು 19,000 ದಿಂದ 21,400ಕ್ಕೂ ಹೆಚ್ಚಿದುವು. ಈ ವರ್ಷ ಮಹಾರಾಣಿ ಕಾಲೇಜಿನ ಒಬ್ಬ ಉಪಾಧ್ಯಾಯಿನಿಯು ಬಿ. ಎ. ಡಿಗ್ರಿಯನ್ನು ಪಡೆದರು; ಸದರಿ ಕಾಲೇಜಿನಿಂದ ಡಿಗ್ರಿ ಪಡೆದವರಲ್ಲಿ ಇವರು ಮೂರನೆಯವರು. ಇದಲ್ಲದೆ ಸದರಿ ಕಾಲೇಜಿನಿಂದ ಒಬ್ಬ ವಿದ್ಯಾರ್ಥಿನಿಯು ಪಂಡಿತಪರೀಕ್ಷೆಯ ಸಂಸ್ಕೃತ ಭಾಗದಲ್ಲಿ ತೇರ್ಗಡೆ ಹೊಂದಿದರು.

3. ಗ್ರಾಮಾಂತರಗಳ ಉಪಾಧ್ಯಾಯರ ಸಂಬಳವನ್ನು 10 ರೂಪಾಯಿಗೆ ಕಮ್ಮಿಯಿಲ್ಲದಂತೆ ಹೆಚ್ಚಿಸಿದ ವಿಷಯವನ್ನು ಕಳೆದ ವರುಷದ ಉಪನ್ಯಾಸದಲ್ಲಿ ಸೂಚಿಸಿತಷ್ಟೆ. ಇದನ್ನು ಈ ವರುಷ ಸಂಪೂರ್ಣವಾಗಿ ಜಾರಿಯಲ್ಲಿ ತಂದಿರುತ್ತದೆ.

4. ಈ ಸಂಸ್ಥಾನದ ಕಲಾಶಾಲೆಗಳಲ್ಲಿ (ಕಾಲೇಜುಗಳಲ್ಲಿ) ಯೂನಿವರ್ಸಿಟಿಯ ಹೊಸ ನಿಬಂಧನೆಗಳಿಗನುಸಾರವಾಗಿ ಕೆಲಸ ನಡೆಯುವಂತೆ ಏರ್ಪಾಟು ಮಾಡಿ ಮೈಸೂರು ಕಾಲೇಜಿನಲ್ಲಿ ಹೆಚ್ಚಾಗಿ ಬೇಕಾದ ಸ್ಥಳವನ್ನು ಒದಗಿಸಿಕೊಟ್ಟದಲ್ಲದೆ ಅಲ್ಲಿಗೆ ಇನ್ನೊಬ್ಬ ಇಂಗ್ಲೀಷ್ ಪ್ರೊಫೆಸರನ್ನು ಈಚೆಗೆ ನೇಮಿಸಿ ಇದೆ. ಅಲ್ಲಿನ ಪುಸ್ತಕಭಂಡಾರವನ್ನು ವೃದ್ಧಿಪಡಿಸುವುದಕ್ಕೂ ಹಣವನ್ನು ಮಂಜೂರ್ಮಾಡಿದೆ. ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಹೊಸದಾಗಿ ಮೊಕರರಾದ ಫಿಜಿಕ್ಸ್ ಪ್ರೊಫೆಸರ್ ಯಾ ಭೌತಿಕ ಶಾಸ್ತ್ರಜ್ಞರು 1908ನೆ ಇಸವಿಯ ನವೆಂಬರ್ ತಿಂಗಳಲ್ಲಿ ಕೆಲಸದ ಮೇಲೆ ಹಾಜರಾದರು. ಸದರಿ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರವನ್ನೂ, ಸಸ್ಯಶಾಸ್ತ್ರವನ್ನೂ, ಪ್ರಾಣಿಶಾಸ್ತ್ರವನ್ನೂ ಕಲಿಸುವುದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿದೆ. ಈ ಕಲಾಶಾಲೆಯ ಶೋಧನಾಲಯಕ್ಕೆ (ಲ್ಯಾಬೊರೇಟರಿಗೆ) ಬೇಕಾದ ಸಾಮಗ್ರಿಗಳನ್ನು ಒದಗಿಸುವುದಕ್ಕೂ, ಪುಸ್ತಕಭಂಡಾರವನ್ನು ಅಭಿವೃದ್ಧಿಪಡಿಸುವುದಕ್ಕೂ ವಿಶೇಷವಾಗಿ ಹಣವನ್ನು ಮಂಜೂರುಮಾಡಿ, ಭೌತಿಕಶಾಸ್ತ್ರದ ಶೋಧನಾಲಯಕ್ಕಾಗಿ ಹೊಸದಾಗಿ ಒಂದು ಕಟ್ಟಡವನ್ನು ಕಟ್ಟಿಸುತ್ತಾ ಇದೆ. ಈ ಕಾಲೇಜಿನಲ್ಲಿದ್ದ ಹೈಸ್ಕೂಲ್ ತರಗತಿಗಳನ್ನು ಬೇರೆ ಕಟ್ಟಡಕ್ಕೆ ವರ್ಗಾಯಿಸಿ ಆದರ ಮೇಲ್ವಿಚಾರಣೆಗೆ ಶಕ್ತರಾದ ಒಬ್ಬ ಹೆಡ್ಮಾಸ್ಟರನ್ನು ನೇಮಿಸಲಾಯಿತು. ಈ ಹೈಸ್ಕೂಲಿಗಾಗಿ ಲಾಯಃಖಾದ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದು ಉದ್ದೇಶವಿದೆ. ಈ ಬಗ್ಗೆ ಒಂದು ಒಳ್ಳೇ ಸಳವನ್ನು ಚುನಾಯಿಸಿದೆ.

5. ಗ್ರಾಮಾಂತರಗಳಲ್ಲಿರುವ ಪಾಠಶಾಲೆಗಳಿಗೂ ಲಾಯಖಾದ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಇದಕ್ಕಾಗಿ 1908-09ನೆ ಸಾಲಿನಲ್ಲಿ 54,000 ರೂಪಾಯಿಯನ್ನು ಕೊಟ್ಟಿತು. ಅದೇರೀತಿಯಾಗಿ ಈ ವರ್ಷವೂ 50,000 ರೂಪಾಯಿಯನ್ನು ಮಂಜೂರ್ಮಾಡಿಇದೆ.

6. ಸರ್ಕಾರೀ ಪಾಠಶಾಲೆಗಳಲ್ಲಿ ನೀತಿಬೋಧಕವಾದ ಮತ್ತು ಮತಸಂಬಂಧವಾದ ಪಾಠವನ್ನು ಹೇಳಿಕೊಡುವ ಪದ್ಧತಿಯನ್ನು ಜಾರಿಗೆ ತಂದದ್ದು ಈ ವರ್ಷದಲ್ಲಿ ನಡೆದ ಮತ್ತೊಂದು ಮುಖ್ಯ ವಿಷಯವಾಗಿದೆ. ಇದಕ್ಕೆ ಅವಶ್ಯಕವಾದ ಪಾಠಕ್ರಮವನ್ನು ನಿರ್ಣಯಿಸುವುದಕ್ಕೋಸ್ಕರ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು ಸಭೆ ಸೇರಿ ಆಲೋಚಿಸಿ ಪಾಠದ ಪುಸ್ತಕಗಳನ್ನು ಚುನಾಯಿಸಿ ಇತರ ವಿಷಯಗಳನ್ನು ನಿಷ್ಕರ್ಷೆಮಾಡಿದರು. ಆದರೆ ಈ ಏರ್ಪಾಟನ್ನು ಇನ್ನೂ ಅಚಮಾಯಿಷಿ ತರೀಕಾಗಿಯೇ ಇಟ್ಟು ಇದರ ಫಲಿತಾಂಶವನ್ನು ನಿರೀಕ್ಷಿಸುತ್ತಾಇದೆ.

ಹಸ್ತಕೌಶಲದ ಶಿಕ್ಷಣ.

7. ಈ ಸಂಸ್ಥಾನದಲ್ಲಿರುವ 10 ಹೈಸ್ಕೂಲುಗಳ ಪೈಕಿ 9 ರಲ್ಲಿ ಸ್ಲಾಯಿಡ್ ಬೋಧನಾಕ್ರಮವನ್ನು ಜಾರಿಗೆ ತಂದು ಇದನ್ನು ಬೋಧಿಸುವುದಕ್ಕೆ ಡಾಕ್ಟರ್, ಲಾರ್ಸನ್‌ರವರಿಂದ ತರಬೇತಾದ ಉಪಾಧ್ಯಾಯರನ್ನು ನೇಮಿಸಲಾಯಿತು. ಇವುಗಳಲ್ಲಿ ಒಟ್ಟು 1,260 ಹುಡುಗರಿಗೆ ಪಾಠ ಕಲಿಸುವುದಕ್ಕೆ ಏರ್ಪಾಟುಮಾಡಿ ಆ ಬಗ್ಯೆ 180 ಬೆಂಚುಗಳನ್ನು ಸರಬರಾಯಿ ಮಾಡಿದೆ. ಎಲ್ಲಾ ಸ್ಥಳಗಳಲ್ಲಿಯೂ ಹುಡುಗರು ಈ ಪಾಠಗಳನ್ನು ಕಲಿಯುವುದರಲ್ಲಿ ವಿಶೇಷ ಉತ್ಸಾಹವನ್ನು ತೋರಿಸುತ್ತಿದ್ದಾರೆ. ಇವರು ತಯಾರುಮಾಡಿರುವ ನಮೂನೆಗಳೂ ಚಿತ್ರಗಳೂ ಬಹು ಪರಿಷ್ಕಾರವಾಗಿವೆಯೆಂತಲೂ ಅವುಗಳಲ್ಲಿ ಕೆಲವು ಸರ್ವೋತ್ಕೃಷ್ಟವಾಗಿನೆಯೆಂತಲೂ ತಿಳಿಯಬಂದಿದೆ. ಕಾಗದದ ರಟ್ಟಿನಿಂದ ಸಾಮಾನು ತಯಾರು ಮಾಡುವುದನ್ನು ಕಲಿಸುವದಕ್ಕಾಗಿ ಈ ಸಾಲ್ ಆಖೈರಿನಲ್ಲಿ 12 ಸ್ಥಳಗಳಲ್ಲಿ ಪಾಠಶಾಲೆಗಳನ್ನು ಏರ್ಪಡಿಸಲಾಯಿತು.

ಕಿಂಡರ್‌ಗಾರ್ಟನ್ ಪಾಠಗಳು.

8. ಕಿಂಡರ್ ಗಾರ್ಟನ್ ಪಾಠಗಳನ್ನು ಹೇಳುವುದಕ್ಕೆ ಈ ವರ್ಷ ಸುಮಾರು 260 ಮಂದಿ ಉಪಾಧ್ಯಾಯರು ತರಬಿಯತ್ ಆದರು.

ವ್ಯವಸಾಯ ಮತ್ತು ಕೈಗಾರಿಕೆಯ ವಿದ್ಯಾಭ್ಯಾಸ.

9. ಕೈಗಾರಿಕೆ ಸ್ಕೂಲುಗಳ ಸಂಖ್ಯೆಯು 19 ರಿಂದ 20 ಕ್ಕೂ, ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯು 888 ರಿಂದ 1,198 ಕ್ಕೂ ಹೆಚ್ಚಿತು. ಈ ಎಲ್ಲಾ ಸ್ಕೂಲುಗಳಲ್ಲಿಯೂ ಅದರಲ್ಲೂ ಮೈಸೂರ್ ಕೈಗಾರಿಕೆ ಸ್ಕೂಲಿನಲ್ಲಿ ಕೆಲಸವು ಬಹಳ

ಚೆನ್ನಾಗಿ ನಡೆಯಿತು. ಮೈಸೂರು ನಾರ್ಮಲ್ ಸ್ಕೂಲಿನ (ಡೆಮಾನ್ಸ್ಟ್ರೇಷನ್ ಫಾರಂ) ವ್ಯವಸಾಯ ಕಾರ್ಯನಿದರ್ಶನ ಕ್ಷೇತ್ರದಲ್ಲಿ ಬಹಳ ಉಪಯೋಗಕರವಾದ ಪಾಠಗಳನ್ನು ಕಲಿಸಿದರು. ಇಲ್ಲಿ ಅನೇಕ ಮಂದಿ ಎಲಿಮೆಂಟರಿ ಸ್ಕೂಲ್ ಮಾಸ್ಟರುಗಳು ಸುಲಭವಾದ ವ್ಯವಸಾಯ ಕಾರ್ಯಗಳಲ್ಲಿ ತರಬೇತಾದರು.

ಸೆರಿಕಲ್ಚರಲ್ ಯಾ ರೇಷ್ಮೆ ತಯಾರಿ.

10. ಕೆಲವು ಗ್ರಾಮ ಪಾಠಶಾಲೋಪಾಧ್ಯಾಯರುಗಳನ್ನು ಬೆಂಗಳೂರಿನಲ್ಲಿ ಮಿ॥ ತಾತಾಯವರ ರೇಷ್ಮೆ ಕಾರ್ಖಾನೆಯಲ್ಲಿ ರೇಷ್ಮೆ ತಯಾರಿ ಕ್ರಮದಲ್ಲಿ ತರಬೇತು ಮಾಡಿ ಅವರು ಗ್ರಾಮಗ್ರಾಮಕ್ಕೂ ಹೋಗಿ ಆಯಾ ಗ್ರಾಮಸ್ಥರಿಗೆ ಇದರ ನವೀನಕ್ರಮಗಳನ್ನು ಹೇಳಿಕೊಡುವ ಉದ್ದಿಶ್ಯ 1906 ರಲ್ಲಿ ಏರ್ಪಾಟುಮಾಡಿತ್ತು. ಆದರೆ ಇದು ಸಫಲವಾಗದೆ ಹೋಯಿತು. ಆದಕಾರಣ ಸದರಿ ಉಪಾಧ್ಯಾಯರುಗಳನ್ನು ವಿದ್ಯಾಇಲಾಖೆಯಲ್ಲಿ ಅವರವರ ಕೆಲಸಗಳಿಗೆ ವಾಪಸು ಕಳುಹಿಸಿಕೊಟ್ಟು, ಹುಡುಗರಿಗೆ ಪಾಠ ಹೇಳುವ ಕಾಲದಲ್ಲಿ ಹೊರತು ಮಿಕ್ಕ ವಿರಾಮ ಕಾಲದಲ್ಲಿ ರೇಷ್ಮೆ ಕೆಲಸದವರ ಹುಡುಗರಿಗೆ ಸದರಿ ಪಾಠ ಹೇಳಿಕೊಡಬೇಕೆಂದು ಹುಕುಂ ಮಾಡಿತ್ತು. ಈಗಿನ ಕೆಲಸಗಾರರು ಪೂರ್ವದಿಂದಲೂ ಉಪಯೋಗಿಸುತ್ತಿರುವ ಸಾಧನಗಳನ್ನು ಬಿಡುವುದಕ್ಕೆ ಇಷ್ಟಪಡುವುದಿಲ್ಲ. ಅವರ ಮಕ್ಕಳಾದರೂ ಸದರಿ ಸಾಧನಗಳನ್ನು ಬಿಟ್ಟು ನವೀನ ಸಾಧನಗಳ ಪ್ರಯೋಜನಗಳನ್ನು ಚೆನ್ನಾಗಿ ತಿಳಿದುಕೊಂಡು ಅವುಗಳನ್ನು ಉಪಯೋಗಿಸಿಯಾರೆಂದು ಊಹಿಸಿದ್ದೆವು. ಈ ಏರ್ಪಾಟೂಕೂಡ ಫಲಕಾರಿಯಾಗಲಿಲ್ಲ. ಈ ರೇಷ್ಮೆ ಕೃಷಿಯ ಅಭಿವೃದ್ಧಿಗಾಗಿ ತಾತಾಯವರ ಸಿಲ್ಕ್ ಫಾರಮನ್ನು ಇತರ ವಿಧವಾಗಿ ಉಪಯೋಗಿಸಲು ಬೇರೆ ಏರ್ಪಾಡನ್ನು ಮಾಡಬೇಕೆಂದು ಸರ್ಕಾರದವರು ಆಲೋಚಿಸಿದ್ದಾರೆ.

ಓರಿಯೆಂಟಲ್ ಲೈಬ್ರೆರಿ ಎಂಬ ಪುಸ್ತಕಭಂಡಾರ.

11. ಜೈಮಿನಿಯ ಉಪನಿಷತ್ತು, ತಲವಕಾರ ಉಪನಿಷತ್ತು ಇವೇ ಮೊದಲಾದ ಅಪೂರ್ವಗ್ರಂಥಗಳನ್ನು ಈ ಪುಸ್ತಕ ಭಂಡಾರಕ್ಕೆ ಸೇರಿಸಲಾಯಿತು. ಚಾಣಕ್ಯನ ಅರ್ಥಶಾಸ್ತ್ರವೂ ಮತ್ತು ತೈತ್ತಿರೀಯ ಬ್ರಾಹ್ಮಣದ ಮೊದಲನೆ ಭಾಗವೂ ಈ ವರ್ಷ ಪ್ರಕಟಿಸಲ್ಪಟ್ಟುವು.

ದಾಮೋದರದಾಸ್ ವಿದ್ಯಾರ್ಥಿ ವೇತನಗಳು.

12. 1908—09ನೆ ಸಾಲಿನಲ್ಲಿ ಗಣಿಗಳಲ್ಲಿ ಕೆಲಸಮಾಡುವುದನ್ನೂ ಅದುರುಗಳಿಂದ ಲೋಹವನ್ನು ತಯಾರು ಮಾಡುವುದನ್ನೂ ಕಲಿಯುವುದಕ್ಕಾಗಿ ಎರಡು ವೇತನಗಳು, ಎಲೆಕ್ಟ್ರಿಕಲ್ ಇಂಜನಿಯರಿಂಗ್ ವಿದ್ಯೆಯನ್ನು ಕಲಿಯುವುದಕ್ಕಾಗಿ

ಒಂದು ವೇತನ, ವೈದ್ಯಶಾಸ್ತ್ರಾಭ್ಯಾಸಕ್ಕಾಗಿ ಒಂದು ವೇತನ, ಈ ಪ್ರಕಾರ 4 ವೇತನಗಳನ್ನು ಕೊಟ್ಟಿರುತ್ತದೆ. ಈವರುಷವೂ ಎಲೆಕ್ಟ್ರಿಕಲ್ ಇಂಜನಿಯರಿಂಗಿಗಾಗಿ ಒಂದು ವೇತನವನ್ನು ಕೊಟ್ಟಿತು. ಸಂಸ್ಥಾನದ ಸರಕಾರಿ ನೌಕರಿಯಲ್ಲಿರುವ ಇಬ್ಬರು ನೌಕರರಿಗೆ ವ್ಯವಸಾಯ ಮತ್ತು ಕೃಷಿರಸಾಯನ ಶಾಸ್ತ್ರಗಳನ್ನು ಕಲಿತುಕೊಂಡು ಬರುವುದಕ್ಕಾಗಿ ದಾಮೋದರದಾಸ್ ಫಂಡಿನಿಂದ 2 ವೇತನಗಳನ್ನು ಕೊಟ್ಟಿರುತ್ತದೆ. ಈ ವೇತನದ ಜೊತೆಗೆ ಇವರ ಸಂಬಳದ ಪೈಕಿ ಕೆಲವುಭಾಗವೂ ಸಲ್ಲುತ್ತದೆ. ಅನ್ಯೋನ್ಯಸಹಾಯಕ ವಿಷಯಕ್ಕೆ ಸಂಬಂಧಪಟ್ಟ ಅರ್ಥಶಾಸ್ತ್ರವನ್ನು ಓದಿಕೊಂಡು ಬರುವುದಕ್ಕಾಗಿ ಒಬ್ಬ ವಿದ್ಯಾರ್ಥಿಗೆ ವೇತನವನ್ನು ಕೊಟ್ಟು ಕಳುಹಿಸಿರುವ ಸಂಗತಿಯನ್ನು ಹಿಂದೆಯೇ ಸೂಚಿಸಿರುತ್ತದೆ.

ವಿದ್ಯಾಭ್ಯಾಸದ ಇಲಾಖೆಯ ಪ್ರದರ್ಶನಶಾಲೆ.

13. ದಸರಾ ಮಹೋತ್ಸವದಲ್ಲಿ ಕೆಲವು ದಿವಸಗಳ ಮಟ್ಟಿಗೆ ವಿದ್ಯಾಭ್ಯಾಸದ ಇಲಾಖೆಯ ಪ್ರದರ್ಶನಕ್ಕೆ ತಕ್ಕ ಏರ್ಪಾಟು ಮಾಡುವುದಕ್ಕೆ ಬದಲಾಗಿ ಪ್ರದರ್ಶನಕ್ಕೆ ಯೋಗ್ಯಗಳಾದವಸ್ತುಗಳನ್ನಿಡಲು ಶಾಶ್ವತವಾದ ಒಂದು ಪ್ರದರ್ಶನಶಾಲೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವಂತೆ ಹುಕುಂ ಆಗಿದೆ. ಈ ಪ್ರದರ್ಶನಶಾಲೆಯನ್ನು ಕೆಲವು ದಿವಸಗಳ ಮಟ್ಟಿಗೆ ಎಂದರೆ ಹೊಸ ಹೈಸ್ಕೂಲ್ ವಠಾರದಲ್ಲಿ ಒಂದು ಶಾಶ್ವತವಾದ ಕಟ್ಟಡವು ತಯಾರಾಗುವವರೆಗೂ, ಶೇಷಾದ್ರಿ ಮೆಮೋರಿಯಲ್ ಹಾಲ್‌ನಲ್ಲಿ ಇಡಬೇಕೆಂದು ಯೋಚಿಸಿದೆ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯಾನೆ ಇಂಡಿಯಾದೇಶದ ಶಾಸ್ತ್ರಶಾಲೆ.

14. ಈ ಶಾಸ್ತ್ರಶಾಲೆಗಾಗಿ ಅವಶ್ಯಕವಾದ ಕಟ್ಟಡವನ್ನು ಪ್ರಾರಂಭಿಸಿದೆ. ಇದರ ಆಡಳಿತವನ್ನು ನಡೆಸುವುದಕ್ಕೆ ಇಂಡಿಯಾ ಸರ್ಕಾರದವರು ಈಚೆಗೆ ಕಮಿಟಿಗಳನ್ನು ಏರ್ಪಡಿಸಿರುತ್ತಾರೆ. ಸದರಿ ಶಾಲೆಯ ಆಡಳಿತದ ವಿಚಾರದಲ್ಲಿ ನಮ್ಮ ಸರ್ಕಾರಕ್ಕೂ ತಕ್ಕಮಟ್ಟಿಗೆ ಅಧಿಕಾರವನ್ನು ಕೊಟ್ಟಿರುತ್ತದೆ.

ಕೋತಿಯನ್ನು ಕುರಿತು ಪಾಠ.

ಪ್ರಾರಂಭ.—ನಮಗೆ ಕೈಗಳು ಹೇಗಿವೆ ಎಂಬುದನ್ನು ಕೇಳು. ಕೈಗೂ ಕಾಲಿಗೂ ಇರುವ ಭೇದಗಳನ್ನು ತಿಳಿಯಪಡಿಸು. ಇವೆರಡು ನಿರ್ಮಾಣವೂ ಸಮಾನವಾಗಿಯೇ ಇವೆ. ಕೈಗೂ ಕಾಲಿಗೂ ಐದೈದು ಬೆರಳುಗಳೇ ಇವೆ. ಈ ಬೆರಳುಗಳಲ್ಲಿ ಒಂದೊಂದು ದೊಡ್ಡ ಬೆರಳಿವೆ. ಇದನ್ನೇ ಹೆಬ್ಬೆಟ್ಟು ಎಂಬರು. ಕಾಲಿನ ಬೆರಳುಗಳು ಚಿಕ್ಕವಾಗಿಯೂ ಕೈಬೆರಳುಗಳು ಉದ್ದವಾಗಿಯೂ ಇವೆ. ಅಂಗೈಯು ಮೃದುವಾಗಿಯೂ ಚಿಕ್ಕದಾಗಿಯೂ ಇದೆ. ಅಂಗಾಲು ದಪ್ಪವಾಗಿಯೂ ಹಳ್ಳವಾಗಿಯೂ ಇರುವುದು. ನಮ್ಮ ಕೈಯಿಂದ ಯಾವವಸ್ತುವನ್ನಾದರೂ ಬಲವಾಗಿ ನಾವು ಹಿಡಿದುಕೊಳ್ಳಬಹುದು. ಕಾಲಿನಿಂದ ಹಾಗೆ ಮಾಡಲಿಕ್ಕೆ ಬಂದೀತೆ? ಈ ಕಾರಣದಿಂದಲೇ ಅವುಗಳ ಉಪಯೋಗಕ್ಕೆ ಅನುಕೂಲಿಸುವಂತೆ ಕೈಯ ಹೆಬ್ಬೆರಳೂ ಕಾಲಿನ ಹೆಬ್ಬೆರಳೂ ಸ್ವಲ್ಪ ವ್ಯತ್ಯಾಸವಾಗಿ ನಿರ್ಮಿಸಲ್ಪಟ್ಟಿವೆ. ಈ ಭೇದಗಳಿಂದಲೇ ನಾವು ನಮ್ಮ ಕೈಗಳಿಂದ ಪದಾರ್ಥಗಳನ್ನು ಬಲವಾಗಿ ಹಿಡಿಯುತ್ತಿರುವೆವು. ಸ್ಪರ್ಶಶೋಧನೆಯಿಂದ ವಸ್ತುಗಳ ನೈಜಗುಣಗಳನ್ನು ಗುರ್ತಿಸಬಲ್ಲೆವು.

ನಾಲ್ಕುಕೈಯ ಜಂತುಗಳು,—ಕೋತಿಯ ಪಟವನ್ನು ತೋರಿಸಿ ಪ್ರಶ್ನೆಮಾಡು. ಪ್ರತ್ಯಕ್ಷದಲ್ಲಿ ಒಂದು ಕೋತಿಯನ್ನು ತಂದು ತೋರಿಸಲು ಅನುಕೂಲವಾದರೆ ಉತ್ತಮ. ಕೋತಿಗಳು ಉಷ್ಣದೇಶದ ಕಾಡುಗಳಲ್ಲಿ ಹೆಚ್ಚಾಗಿರುವುವು. ಶೀತದೇಶಗಳಲ್ಲಿ ಇವು ಬದುಕಲಾರವು. ಶೀತದೇಶಗಳಲ್ಲಿ ಬಿಳಿಯ ಕುಂದಿಲಿ (ಮೊಲ) ಗಳಿಗೆ ಎಂತಹ ನೆಲಗಳಿರುವುವೋ ಹಾಗೆಯೇ ಉಷ್ಣರಾಜ್ಯಗಳಲ್ಲಿ ಕಾಡುಗಳು ಕೋತಿಗಳಿಗೆ ನೆಲೆಯಾಗಿರುವುವು. ಕೋತಿಯ ಮೈಮೇಲೆಲ್ಲ ಕೂದಲುಗಳಿರುವವು. ಮುಖದಲ್ಲಿ ಕುಟಿಲತೆಯು ಕಾಣುಬರುವುದು. ಕಣ್ಣುಗಳನ್ನು ನೋಡಿದರೆ ಹಟಮಾರಿಯೆಂದು ತೋರುವುದು. ಅದರ ಕೈಗಳು ಬಲು ಉದ್ದವಾಗಿ ಮೊಣಕಾಲುಗಳನ್ನು ಮುಟ್ಟುವಂತೆ ಇವೆ. ಸ್ವರೂಪದಲ್ಲಿ ಇದು ಮನುಷ್ಯನನ್ನು ಹೋಲುವುದು. ಆದರೆ ಸ್ವಲ್ಪ ಭೇದವುಂಟು. ನೋಡಿರಿ. ನಮಗೆ ಎರಡು ಕೈಗಳೂ ಎರಡು ಕಾಲುಗಳೂ ಇರುವುವು. ಕೋತಿಗಾದರೋ ನಾಲ್ಕು ಕೈಗಳೇ. ನಮ್ಮ ಪಾದಗಳಿಗೂ ಕೈಗಳಿಗೂ ಇರುವ ಭೇಧಗಳು ಕೋತಿಗಳಲ್ಲಿ ಕಾಣಬರುವುವು. ನಮ್ಮ ಹೆಬ್ಬೆರಳು ಬಹಳ ಉಪಯೋಗಕರವಾಗಿದೆ. ಯಾವುದನ್ನಾದರೂ ಇದರ ಆಧಾರದಿಂದ ಹಿಡಿಯಬಲ್ಲೆವು. ಕೋತಿಗೆ ನಾಲ್ಕು ಕೈಗಳಿರುವುದರಿಂದ ಅದು ಯಾವಾಗಲೂ ಗಿಡಗಳಮೇಲೆ ಮನಸ್ಸುಬಂದಂತೆ ಓಡಾಡುತ್ತಿರುವುದು. ನಾಲ್ಕು ಕೈಗಳಿಂದಲೂ ಕೊಂಬೆಗಳನ್ನು ಹಿಡಿದುಕೊಂಡು, ಗಿಡಗಳ ನಡುವೆ ಸುಖವಾಗಿ ಅಡಗಿಕೊಂಡಿರುವುದು.

ಕೋತಿಗಳು ನಮ್ಮಂತೆ ನಿಂತುಕೊಳ್ಳಲಾರವು. ಒಂದು ಕೋತಿಯನ್ನು ನೆಲದಮೇಲೆ ಕುಳ್ಳಿರಿಸಿದರೆ ಏನಾಗುವುದೋ ನೋಡೋಣ. ಅದರ ನಡುವು ನಿಲ್ಲಲಾರದು. ಆದುದರಿಂದ ಬಗ್ಗಿ ಕುಳಿತುಕೊಳ್ಳುವುದು. ಆಗಲಾದರೂ ನಮ್ಮಂತೆ ತಲೆಯನ್ನು ಸರಿಯಾಗಿ ನಿಲ್ಲಿಸಲಾರದು. ತನ್ನ ಮುಂಗೈಗಳಿಂದ ಹಿಡಿದುಕೊಂಡಿರುವುದು. ದೊಡ್ಡ ಅಡವಿಗಳೇ ಕೋತಿಗಳ ವಾಸಸ್ಥಳಗಳು. ಉಷ್ಣದೇಶದ ಕಾಡುಗಳಲ್ಲಿ ಇವು ಲೆಕ್ಕವಿಲ್ಲದಷ್ಟು ತುಂಬಿರುವುವು.

ಕೋತಿಗಳಲ್ಲಿ ಮೂರು ವಿಧಗಳುಂಟು.—ಮೊಂಡಬಾಲದ ಕೋತಿಗಳು; ದೊಡ್ಡಬಾಲದ ಕೋತಿಗಳು; ತುಂಡುಬಾಲದ ಕೋತಿಗಳು.

(1) ಮೋಟುಬಾಲದವು:—ಇವಕ್ಕೆ ಬಾಲವಿಲ್ಲ. "ಗೋರಿಲ್ಲಾ" ಎಂಬ ಹೆಸರಿನ ಕೋತಿಯ ಪಟವನ್ನು ತೋರಿಸಿ: ಇದು ಆರೇಳಡಿಗಳ ಎತ್ತರವಿರುವುದು. ಬಹು ಬಲವುಳ್ಳದ್ದು. ಬೂದುಬಣ್ಣದ ಕೂದಲಿಂದ ಅದರ ಮೈಯೆಲ್ಲವೂ ಮುಚ್ಚಲ್ಪಟ್ಟಿರುವುದು. ತಲೆಯಮೇಲಿನ ಕೂದಲು ಮಾತ್ರ ಸ್ವಲ್ಪ ಕೆಂಪಾಗಿರುವುದು. ಕೈಗಳ ಒಳಭಾಗಗಳೂ ಮುಖವೂ ಕಪ್ಪಾಗಿರುವುದು. ಇದು ಸಾಮಾನ್ಯವಾಗಿ ಪಶ್ಚಿಮ ಆಫ್ರಿಕಾಖಂಡದ ಅಡವಿಗಳಲ್ಲಿರುವುದು. ಇದು ಮನುಷ್ಯನನ್ನು ಕಂಡಕೂಡಲೆ ತನ್ನ ಹಸ್ತಗಳಿಂದ ಎದೆಯನ್ನು ಬಡಕೊಳ್ಳುವುದು. ಆಗ ನಗಾರಿಯ ಧ್ವನಿಯಂತೆ ದೊಡ್ಡ ಸದ್ದಾಗುವುದು. ಒಡನೆ ಕೋಪಾವೇಶದಿಂದ ಮನುಷ್ಯನಿಗೆ ಎದುರು ಬೀಳುವುದು. ಪಶ್ಚಿಮ ಆಫ್ರಿಕಾಖಂಡದ ಕಾಡುಗಳಲ್ಲಿಯೇ "ಚಿಂಪಾಂಜಿ" ಎಂಬ ಮತ್ತೊಂದು ಬಗೆಯ ಕೋತಿ ಇರುವುದು. (ಇದರ ಪಟವನ್ನು ಇಲ್ಲಿ ತೋರಿಸಿ) "ಒರಾಂಗೋಟಾಂಗ್" ಎಂಬ ಮತ್ತೊಂದು ಬಗೆಯ ಮೊಂಡುಕೋತಿಯು ಸುಮಾತ್ರ, ಜಾವಾ ಮೊದಲಾದ ದ್ವೀಪಗಳಲ್ಲಿರುವುದು. ಇವುಗಳೆಲ್ಲವೂ ತುಂಬ ಬಲವುಳ್ಳವುಗಳು. ಅವು ಕೈಯಿಂದ ಒಂದು ಪೆಟ್ಟು ಹೊಡೆದರೆ ಕೂಡಲೇ ಮನುಷ್ಯನು ಸಾಯುವನು. ಈ ಜಾತಿಯ ಕೋತಿಗಳು ಬಹುಮಟ್ಟಿಗೆ ಮನುಷ್ಯನನ್ನು ಹೋಲಿರುವುವು.

(2) ದೊಡ್ಡಬಾಲದಕೋತಿಗಳು:—ಇವುಗಳ ಪಟವನ್ನು ತೋರಿಸು. ಇದು ಅಷ್ಟು ಬಲವುಳ್ಳುದಲ್ಲ. ಇದರ ಬಾಲ ಉದ್ದವಾಗಿರುವುದು. ಸಾಮಾನ್ಯವಾಗಿ ಉಷ್ಣರಾಜ್ಯಗಳಲ್ಲೆಲ್ಲ ಈ ಬಗೆಯ ಕೋತಿಗಳಿರುವುವು. ಆಯಾ ದೇಶಗಳಲ್ಲಿರುವ ದೊಡ್ಡಬಾಲದ ಕೋತಿಗಳಲ್ಲಿ ಸ್ವಲ್ಪಮಟ್ಟಿಗೆ ಭೇದ ತೋರುವುದು. ಕೆಲವಕ್ಕೆ ಬಾಲವು ಬಹು ಉದ್ದವಾಗಿರುವುದು. ಮತ್ತೆ ಕೆಲವಕ್ಕೆ ಹಾಗಿರದು. ಗಿಡಗಳ ಮೇಲೆ ಸಂಚರಿಸುವುದರಲ್ಲಿ ಇವು ಬಹು ಚತುರತೆಯನ್ನು ತೋರುವುವು. ತಮ್ಮ ಉದ್ದವಾದ ಬಾಲವನ್ನು ಐದನೆಯ ಕೈಯಂತೆ ಉಪಯೋಗಿಸಿಕೊಂಡು ಗಿಡಗಳ ಮೇಲೆ ಬಹು ಚಮತ್ಕಾರವಾಗಿ ವಿಹರಿಸುತ್ತಿರುವುವು. ಗಿಡಗಳ ರೆಂಬೆಗಳಿಗೆ ತಮ್ಮ

ಬಾಲವನ್ನು ಸುತ್ತಿಬಿಟ್ಟು, ತಮ್ಮ ಉದ್ದವಾದ ಕೈಗಳಿಂದ ಅವುಗಳನ್ನು ಹಿಡಿದುಕೊಂಡು ಗಿಡಗಳಮೇಲೆ ತೂಗಾಡುತ್ತಿರುವುವು.

(3) ತುಂಡುಬಾಲದ ಕಪಿಗಳು.— ಚಿಕ್ಕಬಾಲದ ಕಪಿಗಳ ಚಿತ್ರವನ್ನು ತೋರಿಸಿ. ಇವು ತುಂಬ ಘೋರ ಮೃಗಗಳು. ಇವುಗಳಲ್ಲಿ "ಮಾಂಡ್ರಿಲ್" ಎಂಬ ಹೆಸರಿನ ಕೋತಿಯೊಂದುಂಟು. ಅದು ತುಂಬ ಭಯಂಕರವಾದುದು, ಅದರ ಮುಖದಮೇಲೆ ಹಲವು ಬಣ್ಣದ ಚುಕ್ಕೆಗಳು ತುಂಬಿರುವುವು. ಇದು ಮನುಷ್ಯನಷ್ಟು ಉದ್ದವಾಗಿರುವುದು.

ಸಣ್ಣ ಸಣ್ಣ ಹೊಳೆಗಳನ್ನು ದಾಟುವುದಕ್ಕೆ ದೊಡ್ಡಬಾಲದ ಕೋತಿಗಳು ಸೇತುವೆಯಂತೆ ಏರ್ಪಟ್ಟು ನಿಲ್ಲುವುವು. ಇತರ ಕೋತಿಗಳು ಅವುಗಳಮೇಲೆ ಓಡಿಹೋಗಿ ನದಿಯನ್ನು ದಾಟುವುವು. ಈ ಮಂಗಗಳ ಸೇತುವೆಗಳು ಬಹು ವಿಚಿತ್ರವಾಗಿರುವುವು. (ಈ ಬಗೆಯ ಪಟವನ್ನು ತೋರಿಸಿ ವಿಶೇಷಾಂಶಗಳನ್ನು ವರ್ಣಿಸಿರಿ).

ಕೋತಿಗಳ ಆಹಾರ:—ಕೋತಿಗಳು ಸಾಮಾನ್ಯವಾಗಿ ಕಂದಮೂಲ ಫಲಗಳನ್ನು ತಿಂದು ಜೀವಿಸುವುವು. ಅವಕ್ಕೆ ಕಬ್ಬನ್ನು ಕಂಡರೆ ಬಹು ಇಷ್ಟ. ಇವು ಸಾಮಾನ್ಯವಾಗಿ ಜೋಳದ ಹೊಲಗಳಿಗೆ ನುಗ್ಗಿ, ಜೋಳದ ತೆನೆಗಳನ್ನು ಕದ್ದು ತಿನ್ನುವುವು. ದೀರ್ಘಕಾಲದ ಸಣ್ಣ ಕೋತಿಗಳಿಗೆ ಇರುವೆಗಳು ಬಹು ಪ್ರಿಯವಾದ ಆಹಾರವಾಗಿರುವುವು. ಆದುದರಿಂದ ಅವು ಬಹಳವಾಗಿ ಗಿಡಗಳ ಬುಡಗಳಲ್ಲಿ ಕಾದಿದ್ದು, ಸಿಕ್ಕಿದ ಇರುವೆಗಳನ್ನೆಲ್ಲ ತಿನ್ನುತ್ತಿರುವುವು. ಕೋತಿಗಳು ಹಕ್ಕಿಗಳ ಮೊಟ್ಟೆಯನ್ನೂ, ಅಡವಿಯ ಜೇನುತುಪ್ಪವನ್ನೂ ತಿನ್ನುತ್ತಿರುವುವು. ಎಲ್ಲಾ ಬಗೆಯ ಕೋತಿಗಳೂ ಹಣ್ಣುಗಳನ್ನೂ ಕಾಯಿಗಳನ್ನೂ ತಿನ್ನುವುವು.

ಸಾಕಿ ಬೆಳಸಿದ ಕೋತಿಗಳು:—ಒಂದು ಮೂರನೆಯ ಜಾತಿಯ ಕೋತಿಗಳನ್ನು ಸಾಕುವುದು ಕಷ್ಟ. ಆದರೆ ಅಂತವುಗಳನ್ನು ಹಿಡಿದು ತಂದು ಲಂಡನ್ ಮೊದಲಾದ ದೊಡ್ಡ ಪಟ್ಟಣಗಳ ಪ್ರದರ್ಶನಶಾಲೆಗಳಲ್ಲಿ ಇಟ್ಟಿರುವರು. ಎರಡನೆಯ ಬಗೆಯ ಕೋತಿಗಳನ್ನು ಸಾಕುವುದು ಸುಲಭ. ಹಾಗೆ ಬೆಳಸಿದ ಕೋತಿಗಳಿಂದ ಮನುಷ್ಯರು ಮಾಡುವ ಕೆಲಸಗಳನ್ನೆಲ್ಲ ಮಾಡಿಸಬಹುದು. ಮನುಷ್ಯನು ತಿನ್ನುವ ಪದಾರ್ಥಗಳಲ್ಲಿ ಹಲವುಬಗೆಯವುಗಳನ್ನೆಲ್ಲ ಅವು ತಿನ್ನುವುವು. ಆದರೆ ಮಾಂಸವನ್ನು ಮಾತ್ರ ಅವು ತಿನ್ನುವುದಿಲ್ಲ. ಎಷ್ಟು ಸಾಕಿದರೂ ಅವುಗಳಲ್ಲಿರುವ ದುಷ್ಟ ಸ್ವಭಾವವನ್ನು ಬಿಡಲಾರವು. ಅವಕಾಶ ಸಿಕ್ಕಿದರೆ ಹಣ್ಣು ಕಾಯಿ ಮುಂತಾದುವನ್ನು ಅವು ಕದ್ದು ತಿನ್ನುವುವು.

K. R.

ಕೋಪ.

ಸಿಟ್ಟೆಂಬುವುದು ಮನುಷ್ಯನಿಗೆ ಒಂದು ದೊಡ್ಡಶತ್ರುವು. ಇದನ್ನು ಗೆಲ್ಲುವುದು ಕಷ್ಟ. ಅಲ್ಪಮನಸ್ಸಿನವರು ಇದನ್ನು ಗೆಲ್ಲುವುದಕ್ಕೆ ಆಗುವುದಿಲ್ಲ. ಇದು ಪ್ರಬಲವಾದರೆ ದೊಡ್ಡದೊಡ್ಡ ಅನರ್ಥಗಳು ಸಂಭವಿಸುತ್ತವೆ. ಮನುಷ್ಯನಿಗೆ ಬಲವಾದ ಕ್ರೋಧ ಬಂದಕಾಲದಲ್ಲಿ ತನ್ನ ಪ್ರಾಣವನ್ನೂ, ಇತರರ ಪ್ರಾಣಗಳನ್ನೂ ತೆಗೆಯುವುದಕ್ಕೆ ಅನುಮಾನಿಸುವುದಿಲ್ಲ. ಅಗ್ನಿಯು ತಾನು ಉತ್ಪನ್ನವಾದ ಬಿದರುಮೆಳೆ, ಕಟ್ಟಿಗೆ ಮುಂತಾದ್ದನ್ನು ಸುಡುವವರಿವಿಗೂ ಹ್ಯಾಗೆ ಶಾಂತವಾಗುವುದಿಲ್ಲವೋ, ಹಾಗೆಯೇ ಕ್ರೋಧವು ಯಾರಲ್ಲಿ ಹುಟ್ಟುತ್ತದೋ ಅವನನ್ನು ಹಾಳು ಮಾಡುವವರಿವಿಗೂ ಬಿಡುವುದಿಲ್ಲ. ಆದ್ದರಿಂದ ಇಂಥಾ ಕ್ರೋಧವೆಂಬ ಬೆಂಕಿಯನ್ನು ಕ್ಷಮೆ ಎಂಬ ನೀರಿನಿಂದ ಕೂಡಲೇ ಆರಿಸಬೇಕು. ಸಿಟ್ಟುಬಂದ ಕಾಲದಲ್ಲಿ ಇಂಥ ಮಾತನ್ನು ಆಡಬಹುದು, ಇಂಥಾದ್ದನ್ನು ಆಡಬಾರದು ಎಂಬ ವಿವೇಕವಿರುವುದಿಲ್ಲ. ಆಗ ವಿಚಾರವಿಲ್ಲದೆ ಆಡಿದ ಸ್ವಲ್ಪ ಮಾತಿನಿಂದಲೂ ಮುಂದೆ ಬಹಳ ದುಃಖಗಳು ಸಂಭವಿಸುವವು. ಮದ್ದಿನಮೇಲೆ ಬೆಂಕಿಯ ಸಣ್ಣ ಕಿಡಿ ಬಿದ್ದಾಗ್ಯೂ ಅದರಿಂದ ದೊಡ್ಡ ದೊಡ್ಡ ಕೋಟೆಗಳು ಸಹ ಬಿದ್ದುಹೋಗುತ್ತವೆ. ಹೀಗೆ ಸಿಟ್ಟಿನ ವೇಳೆಯಲ್ಲಿ ಆಡಿದ ಸಣ್ಣ ಮಾತಿನಿಂದ ತಮಗೂ ಇತರರಿಗೂ ಅಪಾಯ ಸಂಭವಿಸುತ್ತದೆ. ಸಿಟ್ಟು ಬಂದರೆ ವಿಚಾರವಿಲ್ಲದೆ ಮಾತನಾಡುವುದನ್ನು ನಿಲ್ಲಿಸಬೇಕು. ಸ್ವಲ್ಪ ಹೊತ್ತು ವಿಚಾರಮಾಡಿದಲ್ಲಿ ಸಿಟ್ಟು ಸಂಪೂರ್ಣವಾಗಿ ಶಾಂತವಾಗುತ್ತೆ ಅಥವಾ, ಬಹಳಮಟ್ಟಿಗೆ ಕಡಮೆಯಾದರೂ ಆಗುತ್ತೆ. ಆಮೇಲೆ ಯುಕ್ತವಿದ್ದಂತೆ ಕೆಲಸಮಾಡಬಹುದು. ಯಾರ ಸಂಗಡಲೂ ದ್ವೇಷಮಾಡಬಾರದು. ಸ್ವಲ್ಪ ಪ್ರಯೋಜನಕ್ಕಾಗಿ ಇತರರ ಸಂಗಡ ದ್ವೇಷವನ್ನು ಮಾಡುವುದು ಮೂರ್ಖತನವು. ಇದು ಪಶುಗಳಿಗೆ ಯೋಗ್ಯವೇ ಹೊರತು ಮನುಷ್ಯನಿಗೆ ಯೋಗ್ಯವಾದ್ದಲ್ಲ. ದ್ವೇಷವನ್ನು ಮಾಡುವುದರಿಂದ ಒಳ್ಳೇದಾಗಿರುವುದನ್ನು ಯಾರೂ ಕಂಡಿಲ್ಲ. ಕೇಳಿಯೂ ಇಲ್ಲ. ದ್ವೇಷಮಾಡಿದವರು ಸಂಕಟ ಪಟ್ಟದ್ದಕ್ಕೆ ಮಾತ್ರ ನಿದರ್ಶನಗಳಿವೆ. ಇತರರ ಸಂಗಡ ದ್ವೇಷವನ್ನು ಮಾಡಿದವನಿಗೆ ಸಂಕಟಬಂದಕಾಲದಲ್ಲಿ ಯಾರೂ ಸಹಾಯ ಮಾಡುವುದಿಲ್ಲ. "ತ್ರೋಳ ಹಳ್ಳಕ್ಕೆ ಬಿದ್ದರೆ ಆಳಿಗೆ ಒಂದು ಕಲ್ಲು." ಎಂಬಂತೆ ತನಗೆ ಬಂದ ಸಂಕಟವನ್ನು ತಾನೊಬ್ಬನೇ ಅನುಭವಿಸಬೇಕಾಗುತ್ತದೆ.

ಪ್ರೇಮವಾಗಿ ನಡೆಯಬೇಕು. ಹೀಗೆ ನಡೆಯುವುದರಿಂದ ನಮಗೂ ಇತರರಿಗೂ ಮೇಲುಂಟಾಗಿ, ನಮ್ಮನ್ನು ಜನರು ಕೊಂಡಾಡುವರು. ಮತ್ತು ನಮ್ಮ ಮನಸ್ಸು ಸ್ವಸ್ಥವಾಗಿ ಅಂದರೆ ಸಮಾಧಾನಸ್ಥಿತಿಯಲ್ಲಿದ್ದು ನಾವು ಮಾಡತಕ್ಕ ಇಹಪರಗಳ ಕರ್ತವ್ಯಗಳಲ್ಲಿ ಅನುಕೂಲವಾಗಿ ಪ್ರವರ್ತಿಸುವುದು.

ಒಳ್ಳೆಯನಡತೆ.

ಒಳ್ಳೆಯ ನಡತೆಯನ್ನು ಸಂಪಾದಿಸಿಕೊಳ್ಳದೆ ಮನುಷ್ಯನು ಎಷ್ಟು ದಿವಸ ಬದುಕಿದರೂ ವ್ಯರ್ಥವೇ ಸರಿ. ಇದೇ ಅತ್ಯುತ್ತಮವಾದ ದ್ರವ್ಯವು. ಇದನ್ನು ಪಡೆದಿರುವವನು ಎಷ್ಟು ಹೀನಸ್ಥಿತಿಯಲ್ಲಿದ್ದಾಗ್ಯೂ ಎಲ್ಲೆಲ್ಲಿಯೂ ಸರ್ವದಾ ಘನತೆಯನ್ನು ಹೊಂದುವನು. ಒಳ್ಳೆಯ ನಡತೆಯ ಯಶಸ್ಸು ಲೇಶವೂ ಹೆಚ್ಚುಕಡಮೆ ಇಲ್ಲದೆ ಸದಾಕಾಲದಲ್ಲಿಯೂ ಧರ್ಮಗುಣ, ಸತ್ಯ, ಸ್ಥೈರ್ಯವೇ ಮೊದಲಾದ ಸದ್ಗುಣಗಳನ್ನೆ ಅವಲಂಬಿಸುವವರಿಗಲ್ಲದೆ ಉಂಟಾಗಲಾರದು. ಜನಗಳಿಗೆ ಈ ಗುಣಗಳುಳ್ಳ ಮನುಷ್ಯರಲ್ಲಿ ಇರುವಷ್ಟು ಮರ್ಯಾದೆಯೂ ನಂಬಿಕೆಯೂ ಇನ್ನಾರಲ್ಲಿಯೂ ಇರುವುದಿಲ್ಲ. ಯುದ್ಧದಲ್ಲಿಯೂ ಕೂಡ ಜಯವನ್ನು ಹೊಂದುವುದಕ್ಕೆ ಶಾರೀರಬಲಕ್ಕಿಂತ ಗುಣವೇ ಅಧಿಕವಾದುದೆಂದು ನೆಪೋಲಿಯನ್ ಚಕ್ರವರ್ತಿಯು ಹೇಳುತ್ತಿದ್ದನು. ರಾಜ್ಯಗಳ ಬಲವೂ ಕಾರ್ಯನಿರ್ವಾಹತೆಯೂ ನಾಗರಿಕತೆಯೂ ಎಲ್ಲಾ ಪ್ರಜೆಗಳ ನಡತೆಗನುಸಾರವಾಗಿರುವುವು. ಅದು ಸರಿಯಾಗಿಲ್ಲದಿದ್ದರೆ ಆ ದೇಶದಲ್ಲಿ ಬದುಕುವುದೇ ಕಷ್ಟ. ಜನಗಳ ಪದ್ಧತಿಗಳೂ ಧರ್ಮಶಾಸ್ತ್ರಗಳೂ ಅದನ್ನೆ ಅನುಸರಿಸಿರುವುವು. ಪ್ರಪಂಚವ್ಯಾಪಾರದಲ್ಲಿ ಮನುಷ್ಯರಾಗಲೀ, ಜಾತಿಗಳಾಗಲೀ, ಕೊನೆಗೆ ಅವರವರ ಯೋಗ್ಯತೆಗೆ ತಕ್ಕಷ್ಟು ಫಲವನ್ನು ಅನುಭವಿಸುವರೇ ಹೊರತು ಲೇಶವೂ ಹೆಚ್ಚಾಗಿ ಪಡೆಯಲಾರರು. ವಿದ್ಯೆ, ಬುದ್ಧಿ, ಐಶ್ವರ್ಯ, ಮೂರರಲ್ಲಿಯೂ ಕಡಮೆಯಾಗಿದ್ದಾಗ್ಯೂ ಮನುಷ್ಯನಿಗೆ ಒಳ್ಳೆಯ ನಡತೆಯೊಂದಿದ್ದರೆ ಅವನು ವ್ಯಾಪಾರ, ಉದ್ಯೋಗ, ರಾಜಸೇವೆ, ಯಾವದರಲ್ಲಿ ಪ್ರವರ್ತಿಸಿದಾಗ್ಯೂ ಮುಂದಕ್ಕೆ ಬರುವುದಕ್ಕೆ ಅನುಮಾನವಿಲ್ಲ. ವಿದ್ಯಾಬಲಕ್ಕಿಂತಲೂ ಒಳ್ಳೆಯ ಗುಣದ ಶಕ್ತಿ ಅಧಿಕವಾದುದು.

" ಶೀಲವನು ಕೈಕೊಳ್ಳದಾತನೇ ಹೊಲೆಯ. "

ಸಂಸ್ಕೃತದಲ್ಲಿ ಒಳ್ಳೆಯ ನಡತೆಗೆ ಶೀಲವೆಂದು ಹೆಸರು. ಸತ್ಯ, ಅಹಿಂಸೆ ಅಸ್ತೇಯ ಅಂದರೆ ಕಳವು ಮಾಡದಿರೋಣ, ಮುಂತಾದ ಸದ್ಗುಣಗಳೇ ಶೀಲವೆನಿಸುವುದು. ಇದನ್ನು ಪುಸ್ತಕಗಳಲ್ಲಿ ಓದಿಯಾಗಲೀ ನಾನಾವಿಧವಾದ ಉಪನ್ಯಾಸಗಳನ್ನು ಕೇಳಿಯಾಗಲೀ ನಮ್ಮ ಮನಸ್ಸಿನಲ್ಲಿ ಚನ್ನಾಗಿ ತಿಳಿವುದು ಮಾತ್ರ ಸಾಲದು. ಅದರಂತೆ ನಡೆಯಬೇಕು. ಅನೇಕರು ಶಾಸ್ತ್ರಗಳನ್ನು ವ್ಯಾಸಂಗಮಾಡಿ ಈ ವಿಷಯವನ್ನು ಬಹಳ ಚನ್ನಾಗಿ ವಿಚಾರಮಾಡಿರುವರು. ಮತ್ತು ಇದನ್ನು ಇತರರಿಗೆ ಉಪದೇಶಮಾಡುವರು. ಆದರೆ ತಮ್ಮ ಆಚರಣೆಯಲ್ಲಿ ಈ ಉಪದೇಶಕ್ರಮವು ಕಾಣಬರುವದಿಲ್ಲ. ಇದು ಬಹಳ ಅನುಚಿತವೇ ಸರಿ.

ನೀತಿವಚನಮಾಲೆ

ಧನಮಂ ಪ್ರಾಣಂಗಳುಮಂ ।
ವಿನಿಯೋಗಿಸವೇಳ್ಕು ಮನ್ಯರುಪಯೋಗಾರ್ಥಂ ॥
ತನುಜಾ ಎಂದಾದೊಡಮಿವು ।
ಮನುಜನನುಳಿಯುತ್ತೆ ತೊಲಗದೇನಿರ್ದಪುವೇ ॥೧॥

ಧರೆಯೊಳ್ ತನ್ನಯ ಪೊಡೆಯಂ ।
ಪೊರೆಯದಿಹಾ ಜೀವಿಯೊಂದು ಮೇನಿರ್ದಪುದೇ ॥
ಪೆರರಂ ಪೊರೆವುದಳಸುವಂ ।
ಧರಿಸಿಹ ಜೀವಿಗಳಬಾಳೆತಾಂ ಬಾಳೆನಿಕುಂ ॥೨॥

ಅರಿಯದಿರುತ್ತಮನೆನುತಂ ।
ಧರಿಸದೆನೀಂ ಸದ್ಗುಣಂಗಳಂ ಕುಲದಿಂದಂ ॥
ಮರದಿಂ ಸಮೆದಾನೆಯನಾ ।
ರರಿವರೊ ! ಪರಮಾರ್ಥಮೆನಿಸಿದಾನೆಯೆನುತ್ತಂ ॥೩॥

ನೆಲದೆ ಜಿತೇಂದ್ರಿಯನೆನಿಸು ।
ತ್ತೊಲವಿಂ ತಾಯ್ತಂದೆಯರ್ಗಳಂ ಸೇವಿಸುತಂ ॥
ಕೆಳೆಯಿಂದೊಡವುಟ್ಟಿದರಂ ।
ಸಲಹುತಿಹಾ ಮನುಜನುಣಿಂ ಮುತ್ತಮನುಂಟೇ ॥೪॥

ತನ್ನಯ ಬಗೆಯಿಂ ನುಡಿಯಿಂ ।
ತನ್ನಯ ಕೆಲಸಗಳಿನಾರುಮಂ ನೋಯಿಸದೇ ॥
ನನ್ನಿಯುದಾರಿಯೊಳಿಹ ಸಂ ।
ಪನ್ನ ನಿನೀ ಜಗದೊಳುತ್ತಮಂ ಪೇಳುಂಟೇಂ? ॥೫॥

ಬಲ್ಲಗರ್ಗೆಲ್ಲರೊಳಂ ದಯೆ ।
ಯೆಲ್ಲರೊಳೊಲವಿವನನೆಲ್ಲರುಂ ಪ್ರೀತಿಸುವರ್ ॥
ಬಲ್ಲರ್ ನೋಯಿಸರಾರುಮ ।
ನೆಲ್ಲುಂಟಿವರಿಂದ ಮುತ್ತಮರ್ ಮೂಜಗದೊಳ್ ॥೬॥

ಪೆರರೊಡವೆಯ ನೆಳಸದೆ ಮೇಣ್ ।
ಪೆರರಬಲೆಯರಲ್ಲಿ ಮಾತೃಭಕ್ತಿಯನಿಡುತಂ ॥
ಪೆರರಂ ನೋಯಿಸದಾರ್ಜಿಸಿ ।
ಸರಿಯುಹದಾರಿಯೊಳೆ ನಡೆವನಿಂದುತ್ತಮನಾರ್? ॥೭॥

ತನ್ನಕ್ಕತಂಗಿಯರವೋಲ್ ।
ತನ್ನಯ ತಾಯಂತೆ ತನ್ನ ಪೆಣ್ಮಕ್ಕಳವೋಲ್ ॥
ಅನ್ಯೆಯರಬಲೆಯರೆಂಬಾ ।
ಸನ್ನುತಗುಣರತ್ನನಿಂದ ಮುತ್ತಮನಾರ್ಕೆ? ॥೮॥

ಪಿರಿದೆನೆ ವಾತ್ಸಲ್ಯವನಾ ।
ಗುರುಜನರೊಳ್ ತಪ್ಪನೆಸಗಿದವರೊಳಮೊಲವಂ ॥
ಹರಿಯಲ್ಲಾರಾಧನವಂ ।
ತೊರೆಯದಿಹಾ ಮನುಜರತ್ನನಿಂದಾರಧಿಕಂ? ॥೯॥

ಅರಿಯಂ ಮೇಣ್ ಗೆಳೆಯನುಮಂ ।
ಸರಿಯೆಂದರಿತವರೊಳೊಂದೆ ತೆರದಿಂದಿರುತಂ ॥
ಮೆರೆಯಿಸುತೆ ನೇಹವೊಂದನೆ ।
ಬೆರೆವಾ ಗುಣರತ್ನನಿಂದ ಮುತ್ತಮನಾರ್ಕೆ? ॥೧೦॥

ಪೆರವರ್ಗೆರಡಂ ಬಗೆಯದೆ ।
ಪೆರರೊಳ್ ಬಿರುನುಡಿಯನಾಡದೆಲ್ಲರನೊಂದೇ ॥
ಪರಿಯಿಂ ದರಿವಾ ದಾಂತಂ ।
ಗಿರುವನೆ ಸರಿಯೆನಿಪ ಸುಗುಣರತ್ನಂ ಧರೆಯೊಳ್ ॥೧೧॥

ತೊರೆಯುತ್ತಳಿಮಾತುಗಳಂ ।
ತೊರೆಯುತ್ತಂ ಕೆಟ್ಟಕೆಲಸಮಂ ಮಾಡುವುದಂ ॥
ಪರಮಾರ್ಥವನೇ ನುಡಿಯುತೆ।
ಮೆರೆವಾ ನರವರನಿನುತ್ತಮಂ ಪೇಳಿಹನೇಂ ? ||೧೨||

ತನ್ನಯ ಬಿನದದೊಳಂ ಮೇ ।
ಇನ್ನೆಯರೊಳ್ ಹಾಸ್ಯದಿಂದೆ ನುಡಿವುದರಲ್ಲುಂ ॥
ನನ್ನಿಯನುಳಿಯದೆ ಪುಸಿನುಡಿ ।
ಯಂ ನುಡಿಯದ ಮನುಜರತ್ನನಿಂ ದುತ್ತಮನಾರ್ ? ||೧೩||

ಪುರದೊಳೊ! ಮನೆಯೊಳೊ! ಮಾನವ ।
ರರಿವಂತೋ! ತಿಳಿಯದಂತೊ! ಪೆರರೈಶ್ವರ್ಯಂ ॥
ದೊರೆಕೊಡಮದನಾ ರೆಳಸರೊ।
ಧರೆಯುಳ್ಳವರಿಂದಲುತ್ತಮರ್ ಪೇಳುಂಟೇ ? ||೧೪||

ಪಲವರೊಳೊಡವೆರೆದಿರುತಂ ।
ಬಲುಧನಮಂ ದೀನಜನಕೆ ತಾಂ ನೀಡುತ್ತುಂ॥
ಪಲವರನೆ ಪಾಲಿಸುತಲಿಹ ।
ಸುಲಭಂಗೀ ಧರೆಯೊಳಾವನೆಣೆಯೋ ಕಾಣೆಂ ||೧೪||

ಓದಂ ಮೇಣ್ಸೈಸಿರಿಯುಂ ।
ಸಾಧಿಪುದೈ ಮುಪ್ಪುಸಾವು ನಿನಗಿಲ್ಲೆನುತಂ ॥
ಆಧರ್ಮವನೊಂದಂ ನೀಂ ।
ಸಾಧಿಪುದೈ ಸಾವುಬಂದುದೀಗಳೆ ಎನುತಂ ||೧೫||

ಸರಿಯೀ ವಿಚಾರಮೆನುತಂ।
ಪೆರರಾಲೋಚನೆಗೆ ಸಮ್ಮತಿಸುವಾ ಮೊದಲೇ ॥
ತರಳಾ ನೀನು ಮದಂಬಗೆ।
ತೆರದಿಂ ಬಗೆಯದಿರೆ ಕಿಡುವವೈ ಕೆಲಸಂಗಳ್ ||೧೬||

ಗಣಿತ.

(18) A, B ಮತ್ತು C ಮೂರುಜನಗಳಲ್ಲಿ 390 ಗೋಲಿಗಳಿವೆ. A, C ಗಳಲ್ಲಿ 260 ಇವೆ; A, B ಗಳಲ್ಲಿ 275 ಇವೆ. B ಯಲ್ಲಿ C ಗಿಂತ ಎಷ್ಟು ಜಾಸ್ತಿ ಇವೆ?

B. ಗುಣಾಕಾರ. (ಚಿಹ್ನೆ ×)

ಗುಣಾಕಾರ. ಇದು ಸಂಕ್ಷೇಪ ಸಂಕಲನ. ಹೇಗೆಂದರೆ:—

$4+4+4+4+4=20$. ಹೀಗೆ 4 ನ್ನು ಐದಾವರ್ತಿ ಹೇಳಿ ಕೂಡುವದಕ್ಕೆ ಬದಲಾಗಿ ಒಂದಾವರ್ತಿಗೇನೆ 4×5 ಗುಣಿಸುವೆವು. ಇದರಲ್ಲಿ 4 ಕ್ಕೆ ಅಂದರೆ ಗುಣಿಸಲ್ಪಡತಕ್ಕ ಸಂಖ್ಯೆಗೆ ಗುಣ್ಯವೆಂತಲೂ, 5 ಕ್ಕೆ ಅಂದರೆ ಗುಣಿಸುವ ಸಂಖೆಗೆ ಗುಣಕವೆಂತಲೂ, 20 ಕ್ಕೆ ಗುಣ್ಯಲಬ್ಧವೆಂತಲೂ ಹೆಸರು.

ಘಾತ— ಒಂದು ಸಂಖೆಯನ್ನು ಅದರಿಂದಲೇ ಅನೇಕಾವರ್ತಿ ಗುಣಿಸಿ ಬರುವ ಲಬ್ಧಕ್ಕೆ ಆ ಸಂಖೆಯ ಘಾತವೆಂದು ಹೆಸರು. ಉದಾ. $3\times3\times3\times3\times3=243=$ · ಅಂದರೆ 243 ಎಂಬ ಸಂಖೆಯು 3 ರ ಪಂಚಮಘಾತ.

ಅಪವರ್ತನ.— ಒಂದು ಸಂಖೆಯನ್ನು ನಿಶ್ಶೇಷವಾಗಿ ಭಾಗಿಸತಕ್ಕ ಮತ್ತೊಂದು ಸಂಖೆಗೆ ಅಪವರ್ತನವೆಂದು ಹೆಸರು. ಉದಾ. 8 ಕ್ಕೆ 2 ಮತ್ತು 4 ಅಪವರ್ತನಗಳು; 15 ಕ್ಕೆ 3 ಅಪವರ್ತನ 5 ಅಪವರ್ತನ.

ಅಪವರ್ತ್ಯ.—ಒಂದು ಸಂಖೆಯಿಂದ ನಿಶ್ಶೇಷವಾಗಿ ಭಾಗಿಸಲ್ಪಡತಕ್ಕ ಮತ್ತೊಂದು ಸಂಖೆ.

ಉದಾ—3 ರ ಅಪವರ್ತ್ಯ 15. 4 ರ ಅಪವರ್ತ್ಯ 20 ಅಪವರ್ತನಗಳಲ್ಲಿ 1 ರಿಂದ ವಿನಹ ಬೇರೆ ಸಂಖೆಯಿಂದ ನಿಶ್ಶೇಷವಾಗಿ ಭಾಗಿಸಲ್ಪಡದ ಅಪವರ್ತನವು ಅವಿಭಾಜ್ಯ ಅಪವರ್ತನ ವೆಂದೆನಿಸುವುದು.

ಉದಾ—16 ಕ್ಕೆ 8 ಮತ್ತು 2 ಅಪವರ್ತನಗಳು ಆದರೆ 2 ಅವಿಭಾಜ್ಯ ಅಪವರ್ತನ.

ಅಭ್ಯಾಸ ಉದಾಹರಣೆ.

(19) 910 ಕ್ಕೆ ಅವಿಭಾಜ್ಯ ಅಪವರ್ತನಗಳನ್ನು ಕಂಡುಹಿಡಿ.

ರಚನಾಕ್ರಮ—

$$\begin{array}{r|l} 2 & 910 \\ 5 & 455 \\ 7 & 91 \\ 13 & 13 \\ & 1 \end{array}$$

$\therefore\ 910 = 2 \times 5 \times 7 \times 13.$ ಉತ್ತರ.

(20) ಈ ಕೆಳಗಿನ ಸಂಖ್ಯೆಗಳಿಗೆ ಅವಿಭಾಜ್ಯ ಅಪವರ್ತನಗಳನ್ನು ಕಂಡುಹಿಡಿ—

(1) 120; (2) 210; (3) 308; (4) 770; (5) 1820; (6) 7930; (7) 10010; (8) 22330.

C. ಸಂಕ್ಷೇಪ ಗುಣಾಕಾರಗಳು:—

(21) 1632 ನ್ನು 42 ರಿಂದ ಅಪವರ್ತನಗಳನ್ನುಪಯೋಗಿಸಿ ಗುಣಿಸು.

ರಚನಾಕ್ರಮ— 42 ಕ್ಕೆ ಅಪವರ್ತನಗಳು $= 2 \times 3 \times 7$.

$$\therefore\ 1632 \times 42 = 1632 \times 2 \times 3 \times 7$$

$$\begin{array}{r} 1632 \times 2 \\ 3264 \times 3 \\ 9792 \times 7 \\ 68544 \end{array}$$ ಉತ್ತರ.

ಅಭ್ಯಾಸ ಉದಾಹರಣೆ.

(22) ಅಪವರ್ತನಗಳನ್ನುಪಯೋಗಿಸಿ ಈ ಕೆಳಗಿನ ಸಂಖ್ಯೆಗಳ ಗುಣಲಬ್ಧವನ್ನು ಕಂಡುಹಿಡಿ—

(1) 2075×48; (2) 78056×63; (3) 71284×108; (4) 2310×343; (5) 57002×132; (6) 21703×1820.

(23) 20003 ನ್ನು 5563 ರಿಂದ ಗುಣಿಸು.

ರಚನಾಕ್ರಮ—ಇಲ್ಲಿ 20003 ನ್ನು ಗುಣಕವಾಗಿಟ್ಟುಕೊಂಡರೆ ಗುಣಿಸುವುದು ಸುಲಭ.

(1)

$$\begin{array}{r} 5563 \times 20003 \\ \hline 16689 \\ 111260000 \\ \hline 111276689 \end{array}$$

(2) $20003 = 20000 + 3$

$\therefore\ 5563 \times 20003$

$= 5563 \times 20000 + 5563 \times 3$.

$= 111260000 + 16689$

$= 111276689$ ಉತ್ತರ.

ಅಭ್ಯಾಸ ಉದಾಹರಣೆ.

(24) ಇದರಂತೆ ಕೆಳಗಿನ ಸಂಖ್ಯೆಗಳ ಲಬ್ಧವನ್ನು ಕಂಡು ಹಿಡಿ—

(1) 40003×175; (2) 300002×5068;

(3) 150505×50003; (4) 1265×120002;

(5) 1000002×989678.

(25) * 4106 ನ್ನು 637 ರಿಂದ ಎರಡೇ ಪಜ್ತಿಗಳಲ್ಲಿ ಗುಣಿಸು.

ರಚನಾಕ್ರಮ— $637 = 620 \times 7$

$630 = 7 \times 90$

$$\begin{array}{rl} 4106 & \text{ಗುಣ್ಯ} \\ 63,7 & \text{ಗುಣಕ} \\ \hline 28742 \ldots\ldots & = 4106 \times 7 \ldots\ldots (1) \\ 2586780 \ldots\ldots & = (1) \times 90 \ldots\ldots (2) \\ \hline 2615522 \ldots\ldots & = (1) \times (2) = 4106 \times 637. \end{array}$$

ಉತ್ತರ.

(26) ಈ ಕೆಳಗಿನ ಸಂಖ್ಯೆಗಳನ್ನು ಸಂಕ್ಷೇಪವಾಗಿ ಗುಣಿಸು—

(1) 36612×472; (2) 3345×648;

(3) 7163×459; (4) 2208×568;

(5) 172681×11011; (6) 67163×1089.

---

* ಟಿಪ್ಪಣಿ—ಇದಕ್ಕೆ ಸಂಕ್ಷೇಪ ಗುಣಾಕಾರವೆಂದು ಹೆಸರು. ಈ ಕ್ರಮವನ್ನುಪಯೋಗಿಸಲು ಗುಣಕದಂತ್ಯಾಂಕೆಯನ್ನು ಗುಣಕದಲ್ಲಿ ಕಳೆದರೆ ಅಂತ್ಯಾಂಕೆಯು ಶೇಷಕ್ಕೆ ಅಪವರ್ತನವಾಗಿರಬೇಕು. ಗುಣ್ಯವನ್ನು ಅಂತ್ಯಾಂಕೆಯಿಂದ ಗುಣಿಸಿದ ಲಬ್ಧವನ್ನು ಗುಣಕದ ಶೇಷವನ್ನು ಅಂತ್ಯಾಂಕೆಯಿಂದ ಭಾಗಿಸಿ ಬಂದ ಲಬ್ಧದಿಂದ ಗುಣಿಸಬೇಕು. ಅಂದರೆ ಗುಣಕದ ಶೇಷದ ಇತರ ಅಪವರ್ತನಗಳನ್ನು ತೆಗೆದುಕೊಳ್ಳಬಹುದು ಹೇಗೆಂದರೆ 630 ಕ್ಕೆ 70×9 ಎಂದು ತೆಗೆದುಕೊಂಡರೆ ಗುಣಾಕಾರವು ಲಂಬವಾಗುವುದು.

D. ಭಾಗಾಹಾರ. (ಚಿಹ್ನೆ ÷)

ಭಾಜ್ಯ:—ಭಾಗಿಸಲ್ಪಡುವ ಸಂಖ್ಯೆ.

ಭಾಜಕ:—ಭಾಗಿಸುವ ಸಂಖ್ಯೆ.

ಭಾಗಲಬ್ಧ:—ಭಾಗಿಸುವುದರಿಂದ ಬರುವ ಸಂಖ್ಯೆ.

ಶೇಷ:—ಭಾಗವಾಗದೆ ಉಳಿಯುವ ಸಂಖ್ಯೆ—

ಭಾಜಕ. ಭಾಜ್ಯ. ಭಾಗಲಬ್ಧ.

ಉದಾ. 4) 14 (3
12
—
2 ಶೇಷ.

ಇದರಲ್ಲಿ ತಿಳಿಯತಕ್ಕ ಅಂಶಗಳು:—

$14 = 4 \times 3 + 2.$

$4 = (14 - 2) \div 3.$

$3 = (14 - 2) \div 4.$

$2 = 14 - 4 \times 3.$

ಅಂದರೆ ಈ ನಾಲ್ಕರಲ್ಲಿ ಯಾವದಾದರೂ ಮೂರನ್ನು ಕೊಟ್ಟರೆ ನಾಲ್ಕನೆಯದನ್ನು ಗೊತ್ತುಮಾಡಬಹುದು ಹೇಗೆಂದರೆ—

ಭಾಜಕ × ಲಬ್ಧ + ಶೇಷ = ಭಾಜ್ಯ.

(ಭಾಜ್ಯ — ಶೇಷ) ÷ ಲಬ್ಧ = ಭಾಜಕ.

(ಭಾಜ್ಯ — ಶೇಷ) ÷ ಭಾಜಕ = ಲಬ್ಧ.

ಭಾಜ್ಯ — ಭಾಜಕ × ಲಬ್ಧ = ಶೇಷ.

ಅಭ್ಯಾಸ ಉದಾಹರಣೆ.

(27) ಭಾಜಕವು 25, ಲಬ್ಧವು 171, ಶೇಷವು 12, ಆದರೆ ಭಾಜ್ಯವೆಷ್ಟು ?

(28) ಯಾವ ಸಂಖ್ಯೆಯನ್ನು 26 ರಿಂದ ಭಾಗಿಸಿದರೆ 106 ಲಬ್ಧ ಬರುತ್ತದೆ ?

(29) ಭಾಜ್ಯವು 87467, ಲಬ್ಧವು 103, ಶೇಷವು 20. ಭಾಜಕವೆಷ್ಟು ?

(30) 3497 ನ್ನು ಯಾವಸಂಖ್ಯೆಯಿಂದ ಭಾಗಿಸಿದರೆ 17 ಶೇಷವೂ 94 ಲಬ್ಧವೂ ಬರುತ್ತದೆ?

ಪದ್ಧತಿಗಳನ್ನು ಬಿಡುತ್ತಲೂ ಅದಕ್ಕೆ ಅನುಕೂಲವೆಂದು ತೋರಿಬರುವ ನವನಾಗರಿಕ ಸಂಪ್ರದಾಯಗಳನ್ನು ಅನುಸರಿಸುತ್ತಲೂ ಬಂದಿರುವರು. ಆದರೆ ಈ ಪುರಾತನ ವಾದ ಜುಜುತ್ಸುವನ್ನು ಮಾತ್ರ ಬಿಡಲಿಲ್ಲ. ಈಗಲೂ ಅದನ್ನು ಅಭ್ಯಾಸಿಸುತ್ತಲೇ ಇರುವರು. ದೇಹಾರೋಗ್ಯಕ್ಕೂ ಬಲಕ್ಕೂ ಸಹನಶೀಲತೆಗೂ ಆ ವಿದ್ಯೆಯು ಬಹು ಪ್ರಯೋಜನಕರವಾದುದರಿಂದ ಅದನ್ನು ವ್ಯವಸಾಯಮಾಡುತ್ತಲೇ ಇರುವರು. ಪೂರ್ವದಲ್ಲಿ ಈ ವಿದ್ಯೆಯು ಕೆಲವು ಭಾಗ್ಯವಂತರಿಗೆ ಮಾತ್ರ ಗೊತ್ತಿದ್ದಿತು. ಅವರದನ್ನು ಬಹಳ ಗುಟ್ಟಾಗಿಟ್ಟುಕೊಂಡು ತಮ್ಮ ಕುಲಸ್ಥರಿಗೆ ಮಾತ್ರ ಕಲಿಸುತಿದ್ದರೆ ಹೊರತು ಇತರರಿಗೆ ತಿಳಿಸುತ್ತಿರಲಿಲ್ಲ. ತಮ್ಮ ದೇಶದವರೆಲ್ಲರೂ ಅದರಿಂದ ಪ್ರಯೋಜನವನ್ನು ಹೊಂದಲೆಂಬ ಉದಾರಮನಸ್ಸಿನಿಂದ ಈಗ್ಗೆ ಕೆಲವುವರ್ಷಗಳಿಂದ ಸರ್ವರಿಗೂ ಆ ವಿದ್ಯೆಯನ್ನು ಹೇಳಿಕೊಡಲಾರಂಭಿಸಿರುವರು. ಅದರಿಂದುಂಟಾಗುವ ಮಹಾಪ್ರಯೋಜನವನ್ನು ಕಂಡು ಈಚೀಚೆಗೆ ಅಮರಿಕಾದೇಶಸ್ಥರೂ ಬೇರೆ ಕೆಲವು ದೇಶದವರೂ ಈ ವಿದ್ಯೆಯನ್ನು ಜಪಾನೀಯರಿಂದ ಕಲಿತು ಅದನ್ನು ತಮ್ಮ ದೇಶಗಳಲ್ಲಿ ಪ್ರಚಾರಪಡಿಸಲಾರಂಭಿಸಿರುವರು.

ಜಪಾನ್ ದೇಶದಲ್ಲಿ ಸೈನಿಕರೂ ನೌಕಾಯೋಧರೂ ಪೋಲೀಸಿನವರೂ ಜುಜುತ್ಸು ವಿದ್ಯೆಯನ್ನು ಕಲಿತಿರಬೇಕೆಂದು ನಿರ್ಬಂಧವಿರುವದು. ತಕ್ಕಮಟ್ಟಿಗೆ ಯೋಗ್ಯತೆಯನ್ನು ಹೊಂದಬೇಕಾದರೆ ಅದನ್ನು ನಾಲ್ಕು ವರ್ಷಗಳ ಪರ್ಯಂತ ವ್ಯವಸಾಯ ಮಾಡಬೇಕು. ಜಪಾನಿನಲ್ಲಿ ಸರಕಾರಿ ಮತ್ತು ಸಾಹುಕಾರಿ ಜುಜುತ್ಸು ಶಾಲೆಗಳು ಬಹಳವಾಗಿವೆ. ಬೇಕಾದವರು ಅವುಗಳಲ್ಲಿ ವ್ಯಾಯಾಮವನ್ನು ಅಭ್ಯಾಸ ಮಾಡಬಹುದು. ಅನೇಕ ಜಪಾನೀಯರು ತಮ್ಮ ತಮ್ಮ ಮನೆಗಳಲ್ಲಿಯೇ ಅದನ್ನು ಅಭ್ಯಾಸಮಾಡುತ್ತಿರುವರು. ಬೆಳಿಗ್ಗೆ ಏಳುತ್ತಲೇ ಗಂಡಸರೂ ಹೆಂಗಸರೂ ಹುಡುಗರೂ ಮುಖಾದಿಗಳನ್ನು ತೊಳೆದು ಸ್ವಲ್ಪಹೊತ್ತು ಜುಜುತ್ಸುವನ್ನು ಅಭ್ಯಾಸಮಾಡಿ ಆಬಳಿಕ ಬೇರೆ ಕೆಲಸಗಳಿಗೆ ಹೋಗುವರು. ಹೀಗೆ ಪ್ರತಿನಿತ್ಯವೂ ಆ ವಿದ್ಯೆಯನ್ನು ತಪ್ಪದೆ ವ್ಯಾಸಂಗಮಾಡುವರು. ಹೀಗೆ ಮಾಡುವುದರಿಂದ ಅವರಿಗೆ ಮಹಾಪ್ರಯೋಜನಗಳುಂಟಾಗಿರುವುವು. ಅದರಭ್ಯಾಸದಿಂದವರು ಪೂರ್ಣಾರೋಗ್ಯವುಳ್ಳವರಾಗಿಯೂ ಅತ್ಯಂತ ಬಲಿಷ್ಠರಾಗಿಯೂ ಸಹನಶೀಲರಾಗಿಯೂ ಇರುವರು.

ಜಪಾನಿನಲ್ಲಿ ಹೆಂಗಸರೂ ಕೂಡ ಈ ವ್ಯಾಯಾಮವನ್ನು ಅಭ್ಯಾಸಿಸುವುದರಿಂದ, ಅವರು ಗಂಡಸರಷ್ಟು ಬಲವುಳ್ಳವರಾಗಿಯೂ ಗಂಡಸರು ಮಾಡುವಷ್ಟು

ಕಠಿಣ ಕೆಲಸಗಳನ್ನು ಮಾಡಲು ಸಮರ್ಥರಾಗಿಯೂ ಇರುವರು. ಆದುದರಿಂದ ಅಬಲೆಯರೆಂಬ ಹೆಸರು ಅವರಿಗೆ ಸಲ್ಲುವುದಿಲ್ಲ. ಇತರ ದೇಶದಲ್ಲಿ ದುರ್ಬಲರಾಗಿರುವ ಹೆಂಗಸರಿಗೆ ಮಾತ್ರ ಅದು ಈಗ ಸಲ್ಲತಕ್ಕುದಾಗಿರುವುದು. ಜಪಾನೀಯರಲ್ಲಿ ದುರ್ಬಲವನ್ನೂ, ದೀರ್ಘರೋಗಗಳನ್ನೂ ಕಾಣುವುದು ಬಹಳ ಅಪೂರ್ವ. ಅವು ಬಹಳ ಮುದುಕರಾದವರಿಗೆ ಮಾತ್ರ ಉಂಟಾಗಬಹುದಾದ ದುರ್ದೆಶೆ ಎಂದು ಭಾವಿಸಿರುವರು. ಆದೇಶದಲ್ಲಿ ಸಾಮಾನ್ಯವಾದ ದೇಹಪ್ರಕೃತಿಯುಳ್ಳ ಗಂಡಸರಾಗಲೀ ಹೆಂಗಸರಾಗಲೀ, ಮಕ್ಕಳಾಗಲೀ ದುರ್ಬಲರಾಗಿ ಅಥವಾ ರೋಗಿಗಳಾಗಿರಲು ಅವಕಾಶವೇ ಇಲ್ಲ. ಸರ್ವದಾ ಜುಜುತ್ಸುವನ್ನಭ್ಯಾಸಿಸುತ್ತಿರುವುದರಿಂದ ಅವರು ಈ ಪ್ರಪಂಚದ ಜನರಿಗೆ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಬಲಾರೋಗ್ಯದೃಢಕಾಯವುಳ್ಳವರಾಗಲು ಅರ್ಹರಾಗಿರುವರು. ದುರ್ಬಲವು ಶರೀರಸ್ವಭಾವಕ್ಕೆ ಅಸಹಜವಾದ ವಿಪರೀತವಾದದಶೆಯೆಂದು ಭಾವಿಸಿರುವರು. ಈಗ ಜಪಾನಿನಲ್ಲಿ ಕಲಿಸುತ್ತಿರುವ ಜುಜುತ್ಸುವಿದ್ಯೆಯಲ್ಲಿ ಆರುವಿಧಾನಗಳಿರುವುವು. ಅವೆಲ್ಲವೂ ಗಂಡಸರನ್ನೂ ಹೆಂಗಸರನ್ನೂ ಪೂರ್ಣವಾಗಿ ದೃಢಕಾಯರಾಗಿ ಮಾಡಲು ಸಮರ್ಥವಾಗಿರುವುವು.

ಪೂರ್ವದಲ್ಲಿ ಜಪಾನಿನಲ್ಲಿ ಸಮುರಾಯಿ ಎಂಬ ಜಾತಿಯವರು ಜುಜುತ್ಸುವ್ಯಾಯಾಮವನ್ನು ಕಂಡುಹಿಡಿದು ಅದನ್ನು ಅಭ್ಯಾಸಮಾಡುತ್ತಿದ್ದರು. ಅವರು ಜಪಾನಿನ ಶ್ರೀಮಂತರಾಗಿದ್ದರು. ಪೂರ್ವದಲ್ಲಿ ಯೂರೋಪಿನಲ್ಲಿದ್ದ ನೈಟಸ್ ಎಂಬ ಸರದಾರರನ್ನೂ ಹಿಂದೂದೇಶದಲ್ಲಿದ್ದ ಕ್ಷತ್ರಿಯರನ್ನೂ ಅವರು ಹೋಲುತ್ತಿದ್ದರು. ಆರಾಜ್ಯದ ಯುದ್ಧಕಾರ್ಯಗಳನ್ನು ಅವರೇ ಮಾಡುವವರಾಗಿದ್ದರು. ಜಾತಿಯ ಕಟ್ಟನ್ನು ಮಾಡಿಕೊಂಡಿದ್ದರು. ಇತರಜಾತಿಯವರಲ್ಲಿ ಹೆಣ್ಣುಗಂಡುಗಳನ್ನು ತಂದು ಸಂಬಂಧಬೆಳೆಸುತ್ತಿರಲಿಲ್ಲ. ಅವರ ಜಾತಿಮರ್ಯಾದೆಯು ಪರಂಪರೆಯಾಗಿ ಬಂದಿದ್ದಿತು. ಯುದ್ಧಕಾರ್ಯ ಹೊರತು ಮತ್ತಾವಕಸಬನ್ನಾದರೂ ಮಾಡುವುದು ತಮ್ಮ ಗೌರವಕ್ಕೆ ಕಡಿಮೆಯೆಂದು ಭಾವಿಸಿದ್ದರು. ನಿರಂತರ ಜುಜುತ್ಸುವನ್ನು ಅಭ್ಯಾಸಮಾಡಿ ಬಹು ಬಲಿಷ್ಠರಾಗಿಯೂ ದೃಢಕಾಯರಾಗಿಯೂ ಆರೋಗ್ಯಶಾಲಿಗಳಾಗಿಯೂ ಧೈರ್ಯವಂತರಾಗಿಯೂ ಇರುತ್ತಿದ್ದರು. ಆ ವಿದ್ಯೆಯನ್ನು ಇತರಜಾತಿಯವರಿಗೆ ಕಲಿಸದೆ ತಮ್ಮಲ್ಲಿಯೇ ರಹಸ್ಯವಾಗಿಟ್ಟುಕೊಂಡಿದ್ದರು. ಆದುದರಿಂದ ಇತರರು ಬೇರೆವಿಧವಾದ ವ್ಯಾಯಾಮವನ್ನೂ ಕುಸ್ತಿಯನ್ನೂ ಕಲಿಯುತ್ತಿದ್ದರು.

ಈಗ ಜಪಾನೀಯರಲ್ಲಿ ಜಾತಿಭೇದವಿಲ್ಲದೆ ಎಲ್ಲರೂ ಒಂದೇಜಾತಿಯವರಾಗಿ ಕಲತುಕೊಂಡು ಜುಜುತ್ಸುವನ್ನು ಅಭ್ಯಾಸಮಾಡುತ್ತಿರುವರು.

ಪೂರ್ವದಲ್ಲಿ ಜಪಾನಿ ಜಟ್ಟಿಗಳು ಎರಡುವರುಷ ವಯಸ್ಸಿನಿಂದಲೂ ವ್ಯಾಯಾಮಕುಸ್ತಿಗಳನ್ನು ಮಾಡಲಾರಂಭಿಸಿ ಪ್ರಾಯಕ್ಕೆ ಬರುತ್ತಲೆ ರಾಕ್ಷಸರಂತೆ ಬಲಿಷ್ಠರಾಗುತ್ತಿದ್ದರು. ಸ್ಥೂಲಕಾಯರಾಗಿಯೂ ಆರುಅಡಿ ನಾಲ್ಕುಅಂಗುಲ ಪ್ರಮಾಣದವರೆಗೂ ಉದ್ದವಾಗಿಯೂ ಬೆಳೆಯುತ್ತಿದ್ದರು. ಜಟ್ಟಿ ಜುಜುತ್ಸುಗಾರರಲ್ಲಿ ಯಾರು ಗಟ್ಟಿಗರೆಂದು ಪರೀಕ್ಷೆಮಾಡುವ ಉದ್ದಿಶ್ಯ ಕೆಲವರು ಮುಖ್ಯಸ್ಥರು ಸೇರಿ ಆಯಾ ವಿದ್ಯೆಗಳಲ್ಲಿ ಉತ್ತಮರೆಂದು ಪ್ರಸಿದ್ಧರಾದವರಲ್ಲಿ ಒಬ್ಬೊಬ್ಬನನ್ನು ಚುನಾಯಿಸಿ ಒಂದುದಿವಸ ಟೋಕಿಯೋ ನಗರದಲ್ಲಿ ಆ ಇಬ್ಬರನ್ನೂ ಕುಸ್ತಿಗೆಬಿಟ್ಟರು. ಆ ಕುಸ್ತಿಯನ್ನು ನೋಡಲು ಬಹುಜನರು ನೆರೆದಿದ್ದರು. ಕ್ಲುಪ್ತಕಾಲದಲ್ಲಿ ಅವರಿಬ್ಬರು ಒಬ್ಬರಮೇಲೊಬ್ಬರು ನುಗ್ಗಿದರು. ಕಾಲುಮಿನಿಟಿನಲ್ಲಿಯೇ ಜಟ್ಟಿಯು ನೆಲಕ್ಕೆ ಬಿದ್ದು ತಾನು ಸೋತೆನೆಂದು ಒಪ್ಪಿಕೊಂಡನು. ಜುಜುತ್ಸುಗಾರನೇ ಗಟ್ಟಿಗನೆಂದು ತೀರ್ಮಾನವಾಯಿತು. ಆಕಾಲದಿಂದ ಜುಜುತ್ಸುವಿದ್ಯೆಯು ಬಹು ಶ್ರೇಷ್ಠವಾದುದೆಂದು ಪ್ರಖ್ಯಾತಿಯನ್ನು ಹೊಂದಿತು. ಜಟ್ಟಿಕಾಳಗವು ಮೂಲೆಗೆಬಿದ್ದಿತು. ಆದಾಗ್ಯೂ ಈಗಲೂ ಜಪಾನಿನಲ್ಲಿ ಕೆಲವರು ಜಟ್ಟಿಕಾಳಗವನ್ನು ಕಲಿಯುವುದುಂಟು.

ಕೆಲವು ವರ್ಷಗಳಹಿಂದೆ ಒಬ್ಬ ಜಪಾನಿ ಜಟ್ಟಿಯು ಅಮೆರಿಕಾಕ್ಕೆ ಹೋಗಿ ಆದೇಶದ ಮುಖ್ಯ ಜಟ್ಟಿಗಳನ್ನೆಲ್ಲಾ ಕುಸ್ತಿಯಲ್ಲಿ ಜಯಿಸಿದನು. ಅವರು ಇವನನ್ನು ಕಂಡು ಪರಮಾಶ್ಚರ್ಯಪಟ್ಟು ಈತನು ಜಪಾನಿನಲ್ಲೆಲ್ಲಾ ಬಹು ಶೂರನಾದ ಜಟ್ಟಿಯಾಗಿರಬೇಕೆಂದು ಭಾವಿಸಿದರು. ಆದರಿವನು ಜಪಾನಿನ ದೂಯಂ ತರಹದ ಜಟ್ಟಿಯ ಒಬ್ಬ ಶಿಷ್ಯನಾಗಿದ್ದನು. ಇವನಗುರುವೇ ಅಲ್ಲಿಗೆ ಬಂದಿದ್ದರೆ ಅಮೆರಿಕಾದೇಶೀಯರು ಅವನನ್ನು ನೋಡಿ ಇನ್ನೆಷ್ಟು ಆಶ್ಚರ್ಯಪಡುತ್ತಿದ್ದರೊ ತಿಳಿಯದು. ಜುಜುತ್ಸುಗಾರರಾದರೋ ಅತ್ಯುತ್ತಮವಾದ ಜಟ್ಟಿಗಳನ್ನೂ ಕಾಳಗದಲ್ಲಿ ಮೀರಿಸುವಂಥವರಾಗಿರುವರು. ಜುಜುತ್ಸುವು ಪರಮಾಶ್ಚರ್ಯಕರವಾದ ವಿದ್ಯೆಯಾಗಿರುವುದು. ದುರ್ಬಲನು ಬಲಿಷ್ಠನಾದವನ ಬಲವನ್ನೆ ಅವನಮೇಲೆ ಪ್ರಯೋಗಿಸಿ ಅವನನ್ನು ಸೋಲಿಸುವಂಥಾ ಉಪಾಯವನ್ನು ಜುಜುತ್ಸು ವಿದ್ಯೆಯು ಕಲಿಸಿಕೊಡುವುದು. ಜುಜುತ್ಸುಗಾರನು ಆ ವಿದ್ಯೆಯನ್ನರಿಯದವನನ್ನು ಬಹು ಸುಲಭವಾಗಿ ಸೋಲಿಸಬಲ್ಲನು. ಇಬ್ಬರಿಗೂ ಜುಜುತ್ಸು ವಿದ್ಯೆಯು ತಿಳಿದಿದ್ದರೆ, ಯಾವನು ಬೇಗನೆ ತಕ್ಕ ಉಪಾಯವನ್ನು ಮಾಡುವನೋ ಅವನೇ ಗೆಲ್ಲುವನು. (ಸಶೇಷ) S. V.

ಪುಲಿಯ ಕೂಟ.

ಸುಂದರವನದಲ್ಲಿ ಒಂದುಸಾರಿ ಹುಲಿಗಳ ಸಭೆ ಸೇರಿತು. ಅಲ್ಲಿಗೆ ಎಲ್ಲಾಕಡೆಗಳಿಂದಲೂ ಹಲವುಬಗೆಯ ಹುಲಿಗಳು ಬಂದು ಸೇರಿ, ತಮ್ಮ ಭಾರವನ್ನೆಲ್ಲ ಬಾಲದ ಮೇಲೆ ಬಿಟ್ಟು ಕುಳಿತುಕೊಂಡವು. ಆಗ ಅವು ತಮ್ಮಲ್ಲಿ ಯೋಚಿಸಿ, ಅಮಿತೋದರನೆಂಬ ಹುಲಿಯನ್ನು ಅಧ್ಯಕ್ಷನನ್ನಾಗಿ ಮಾಡಿದುವು.

ಅಮಿತೋದರನು:—ಇದೇ ಶುಭದಿನವು; ವನವಾಸಿಗಳಾಗ ನಾವೆಲ್ಲರೂ ಒಂದುಕಡೆ ಸೇರಿದೆವು. ನಮ್ಮಲ್ಲಿ ಒಕ್ಕಟ್ಟಿಲ್ಲವೆಂತಲೂ, ಒಂಟಿಗರಾಗಿ ತಿರುಗಲಾರೆವೆಂತಲೂ ಕೆಲವರು ಹೇಳುವರು. ಈ ನಿಂದೆಯನ್ನು ತಿಳಿದುಕೊಂಡು ನಾವು ಸಭ್ಯರೆಂದು ಹೆಸರುಗೊಳ್ಳುವೆವೆಂಬ ನಂಬಿಕೆ ನನಗೆ ಉಂಟು. ಮತ್ತು, ನಮ್ಮ ಸುಖಕ್ಕಾಗಿ ಹಲವುಬಗೆಯ ಪಶುಗಳನ್ನು ಹಿಂಸಿಸುತ್ತ ಕಾಲಹರಣೆಮಾಡಬೇಕೆಂದು ದೇವರು ಅನುಗ್ರಹಿಸಲಿ (ಎಂಬಲ್ಲಿ ಎಲ್ಲ ಹುಲಿಗಳೂ ಬಾಲವನ್ನು ನೆಲಕ್ಕೆ ಅಪ್ಪಳಿಸಿದುವು) ನಾವು ಸಭೆಸೇರಿದ ಕಾರಣವನ್ನು ಕೇಳಿರಿ. ಈ ಕಾಲದಲ್ಲಿ ಎಲ್ಲರೂ ವಿದ್ವಾಂಸರಾಗುತ್ತಿರುವರು. ನಮ್ಮಲ್ಲಿ ವಿದ್ಯಾಗಂಧವೇ ಮಲಿನವಾಗಿಹೋಯಿತು. ನಾವೂ ಇತರರಂತೆ ವಿದ್ಯಾವಂತರಾಗಲು ಆಲೋಚಿಸಬೇಕೆಂದು ಈ ಸಭೆ ಸೇರಿಸಲ್ಪಟ್ಟಿತು. ಇದಕ್ಕೆ ನೀವೆಲ್ಲರೂ ಅನುಮೋದಿಸತಕ್ಕದು.

ಸಭಾಧ್ಯಕ್ಷನ ಈ ಮಾತನ್ನು ಕೇಳಿ, ಎಲ್ಲವೂ ಒಪ್ಪಿದಂತೆ "ಹಾವು, ಹೂವು" ಎಂದು ಸದ್ದು ಮಾಡಿದವು. ಆಮೇಲೆ ಕೆಲವು ಉಪನ್ಯಾಸಗಳು ಸಭಿಕರಿಂದ ಅಂಗೀಕೃತಗಳಾದುವು. ಆ ಸಂಭಾಷಣೆಗಳು ಭಯಂಕರವಾಗಿದ್ದುವು. ಅವುಗಳ ಕೂಗಿನಿಂದ ಸುಂದರವನವೆಲ್ಲವೂ ನಡುಗಿತು. ಸಭಾಕಾರ್ಯಗಳೆಲ್ಲ ಜರಿಗಿದಮೇಲೆ ಅಧ್ಯಕ್ಷನು ಹೇಳಿದುದು.

ಈ ಸುಂದರವನದಲ್ಲಿ ಬೃಹಲ್ಲಾಂಗೂಲನೆಂಬ ವ್ಯಾಘ್ರಾಚಾರ್ಯನಿರುವನೆಂದು ನಿಮ್ಮೆಲ್ಲರಿಗೂ ತಿಳಿದೇ ಇದೆ. ಅವರು ಈ ರಾತ್ರಿ ಮನುಷ್ಯಚರಿತ್ರೆಯನ್ನು ಕುರಿತು ಉಪನ್ಯಾಸವನ್ನೋದಲು ಒಪ್ಪಿದಾರೆ.

'ಮನುಷ್ಯ' ಎಂಬ ಹೆಸರನ್ನು ಕೇಳದ ಹೊಸಸಭಿಕರಿಗೆಲ್ಲ ಹಸಿವು ತೋರಿತಾದರೂ, ತಕ್ಕ ಸೂಚನೆಗಳಿಲ್ಲದುದರಿಂದ ಬಾಲವನ್ನು ಮುದುರಿಕೊಂಡು ಕುಳಿತವು. ಬೃಹಲ್ಲಾಂಗೂಲನು ಗರ್ಜನೆಯಿಂದ ಮಾರ್ಗಸ್ಥರಿಗೆಲ್ಲ ಹೆದರಿಕೆಯನ್ನು ಹುಟ್ಟಿಸುವ ಧ್ವನಿಯಿಂದ ಹೇಳತೊಡಗಿದನು.

ಸಭಾಧ್ಯಕ್ಷರೇ, ಪೆಣ್ಬುಲಿ ಗಂಡುಪುಲಿಗಳಿರಾ ಮನುಷ್ಯರೊಂದುಬಗೆಯ ದ್ವಿಪಾದಜಂತುಗಳು, ಅವರಿಗೆ ರೆಕ್ಕೆಗಳಿಲ್ಲದುದರಿಂದ ಅವರು ಹಕ್ಕಿಗಳಲ್ಲ. ಚತುಷ್ಪಾದಜಂತುಗಳಂತೆಯೇ ಅವಯವರಚನೆಯಿರುವುದರಿಂದ ಅವರೂ ಒಂದು ಬಗೆಯ ಮೃಗಗಳೆಂತಲೇ ಹೇಳಬೇಕು. ಆದರೂ ನಾಗಾಲಮಿಗಗಳಂತೆ ಬಲವಿಲ್ಲದುದರಿಂದ ಅವರು ಇರ್ಕಾಲ್ಮಿಗಗಳೆಂತಲೇ ಕರೆಯಲ್ಪಡತಕ್ಕವರು.

ನಾಗಾಲಮೃಗಗಳಲ್ಲಿ ವಾನರರಿಗೂ ನರರಿಗೂ ಹೋಲಿಕೆ ಹೆಚ್ಚಾಗಿದೆ. ಪಶುಗಳ ಅವಯವಗಳು ರೂಪಾಂತರವನ್ನು ಹೊಂದಿ ಮತ್ತೊಂದು ಪಶ್ವಾಕಾರವನ್ನು ಪಡೆಯುವವೆಂದು ಪಂಡಿತರು ಹೇಳುವರು. ಅದುಕಾರಣ ನರರೂ ಕೂಡ ಉತ್ಕೃಷ್ಟತೆಯನ್ನು ಹೊಂದಿ ಕಾಲಾಂತರದಲ್ಲಿ ವಾನರರಾಗುವರೆಂದು ನಾನು ತಿಳಿಯುತ್ತೇನೆ.

ಮನುಷ್ಯಪಶುವು ಬಹು ರುಚಿಯಾದ ಆಹಾರವೆಂದು ನಿಮ್ಮೆಲ್ಲರಿಗೂ ತಿಳಿವುದು. (ಸಭಿಕರ ಬಾಯಲ್ಲಿ ನೀರೂರುತ್ತಿತ್ತು) ಮನುಷ್ಯಪಶುವನ್ನು ಆಯಾಸವಿಲ್ಲದೆ ಹಿಡಿದುಕೊಂಡು ತಿನ್ನಬಹುದು. ಮೃಗಗಳಂತೆ ಅವು ಓಡಲರಿಯವು. ಭಗವಂತನು ವ್ಯಾಘ್ರಜಾತಿಯ ಸುಖಕ್ಕಾಗಿಯೇ ಮನುಷ್ಯಪಶುವನ್ನು ಸೃಷ್ಟಿಮಾಡಿದಾನೆ. ಆದುದರಿಂದಲೇ ಆ ಪಶುಗಳಿಗೆ ಓಡುವಶಕ್ತಿಯನ್ನವನು ಕೊಡಲಿಲ್ಲ. ಆತ್ಮಸಂರಕ್ಷಣೆಯ ಬಲವನ್ನುಕೊಡಲಿಲ್ಲ ಆಲೋಚಿಸಿದರೆ ಉಗುರು, ಹಲ್ಲು ಕೊಂಬುಗಳಿಲ್ಲದೆ ಬಹು ಕೋಮಲವಾಗಿ ಸೃಷ್ಟಿಸಲ್ಪಟ್ಟ ನರಪಶುವು ಹುಲಿಗಳ ಸೇವೆಗಾಗಿಯೆ ಹುಟ್ಟಿವೆ ಎಂದು ಸ್ಪಷ್ಟವಾಗಿದೆ. ಮೇಲಿನ ಕಾರಣಗಳಿಂದಲೂ, ಆ ಜಾತಿಯ ಮಾಂಸ ಬಹು ಕೋಮಲವಾಗಿರುವುದರಿಂದಲೂ ನಾವು ಮನುಷ್ಯಜಾತಿಯಲ್ಲಿ ತುಂಬ ಪ್ರೀತಿಯುಳ್ಳವರಾಗಿದೇವೆ. ಆ ನರಪಶುಗಳೂ ನಮ್ಮಲ್ಲಿ ಭಕ್ತಿಯುಳ್ಳವುಗಳು ಆಶ್ಚರ್ಯಕರವಾಗಿದೆ. ಈ ವಿಷಯದಲ್ಲಿ ನೀವು ಸಂದೇಹಪಡಬಹುದು. ಹಾಗಲ್ಲ. ನಾನು ಉತ್ತರದೇಶದಲ್ಲಿ ಸಂಚಾರಮಾಡುತ್ತಿದ್ದೆನು. ಅಲ್ಲಿ ಗೋಮನುಷ್ಯಾದಿ ಜಂತುಗಳೇ ವಾಸವಾಗಿವೆ. ನಾನು ವಿಷಯಕರ್ಮೋಪಲಕ್ಷಿತನಾಗಿ ಅಲ್ಲಿಗೆ ಹೋಗಿದ್ದೆನು. ಇದನ್ನು ಕೇಳಿ ಮಹಾದಂಷ್ಟ್ರನು ವಿಷಯಕರ್ಮವೆಂದರೇನು? ಎಂದು ಕೇಳಲು ಬೃಹಲ್ಲಾಂಗೂಲನು ಹೇಳುತ್ತಾನೆ. (ಸಶೇಷ.) K. R.

❀ ವಿದ್ಯಾದಾಯಿನಿ ❀

(A MONTHLY JOURNAL.)

ಭಾಗ ೧೨] ಡಿಶಂಬರ್ ೧೯೦೯. [ಸಂಚಿಕೆ ೧೨.

ಕಿಂಡರ್‌ಗಾರ್ಟರ್ನ್ ಕೈಕೆಲಸಗಳು.

ನಮ್ಮ ದೇಶದ ಅನೇಕ ಪಾಠಶಾಲೆಗಳಲ್ಲಿ ಮಕ್ಕಳ ವಿದ್ಯಾಭ್ಯಾಸವನ್ನು ಕಿಂಡರ್‌ಗಾರ್ಟರ್ನ್ ಕ್ರಮದಲ್ಲಿ ನಡೆಸಬೇಕೆಂಬ ಪ್ರಯತ್ನವು ನಡೆಯುತ್ತಿರುವುದಷ್ಟೆ. ಆಟದರೂಪದಲ್ಲೇ ಮಕ್ಕಳವಿದ್ಯಾಭ್ಯಾಸವನ್ನು ನಡೆಸುವುದು ಈ ಕ್ರಮದ ಸಾರಾಂಶವಷ್ಟೆ. ಈಕ್ರಮದಲ್ಲಿ ಮಕ್ಕಳವಿದ್ಯಾಭ್ಯಾಸವನ್ನು ನಡೆಸಲು ಅನುಕೂಲವಾದ, ನಮ್ಮದೇಶದಲ್ಲಿ ಆಚರಣೆಗೆ ತರಲು ಸುಲಭವಾದ ಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಉಪಯುಕ್ತವೂ ಆದ ಒಂದೆರಡು ಕೈಕೆಲಸಗಳನ್ನು ಇಲ್ಲಿ ವಿವರಿಸುವೆವು.

ಮರಳಾಟ.

ಮರಳು ಎಲ್ಲೆಲ್ಲೂ ಸುಲಭವಾಗಿ ಸಿಕ್ಕುವುದು. ಈ ಆಟದಿಂದ ಮಕ್ಕಳಿಗೆ ವಿಶೇಷ ಪ್ರಯೋಜನವುಂಟು. ಆದುದರಿಂದ ನಮ್ಮ ಪಾಠಶಾಲೆಗಳಲ್ಲಿ ಈ ಆಟವನ್ನು ವಿಶೇಷವಾಗಿ ಇಟ್ಟುಕೊಳ್ಳಬಹುದೆಂದು ತೋರುವುದು.

ಈ ಆಟವು ಮುಖ್ಯವಾಗಿ ಕೇವಲ ಸಣ್ಣಮಕ್ಕಳಿಗೆ ಅನುಕೂಲವಾದುದು. ಮಕ್ಕಳು ಮರಳಿನಲ್ಲಿ ಕಪ್ಪೆಯಗೂಡು, ಮನೆ, ಭಾವಿ ಮೊದಲಾದ ಆಕೃತಿಗಳನ್ನು ರಚಿಸುವುದು ಕಡ್ಡಿ ಅಥವಾ ಬೆರಳಿನಿಂದ ನಾನಾವಿಧವಾದ ಹಸೆಗಳನ್ನು ಬರೆಯುವುದು—ಇವು ನಮ್ಮೆಲ್ಲರಿಗೂ ಒಳಿಕೆಯಾದ ಅಂಶಗಳು. ಮಕ್ಕಳಲ್ಲಿರುವ ಈ ಸಹಜವಾದ ಕುತೂಹಲವನ್ನು ತೃಪ್ತಿಪಡಿಸುವುದೇ ಮರಳಾಟದ ಉದ್ದೇಶವು. ಕೇವಲ

ಸಣ್ಣಮಕ್ಕಳಿಗೇ ಅಲ್ಲ, ಸ್ವಲ್ಪ ವಯಸ್ಸಾದ ಮಕ್ಕಳಿಗೂ ಈ ಆಟದಿಂದ ಪ್ರಯೋಜನವಾಗುವಂತೆ ಮಾಡಿಕೊಳ್ಳಬಹುದು. ಮಕ್ಕಳು ಪ್ರಕೃತಿವಿಮರ್ಶೆಯಲ್ಲಿ ತಿಳಿದ ಅಂಶಗಳು, ತೋಟದಲ್ಲಿ ನೋಡಿದ ಅಂಶಗಳು, ಕಥೆಯಲ್ಲಿ ಕೇಳಿದಅಂಶಗಳು, ಇಂತಹ ಅಂಶಗಳನ್ನು ಮರಳಾಟದಿಂದ ಇವರು ಸುಲಭವಾಗಿ ತೋರ್ಪಡಿಸಬಹುದು. ಮೇಲಿನತರಗತಿಗಳಲ್ಲಿ ಮರಳಾಟವು ಭೂವಿವರಣೆ ಅಥವಾ ಚರಿತ್ರೆಯ ಪಾಠಕ್ಕೆ ಉಪಯುಕ್ತವಾಗುವಂತೆ ಮಾಡಿಕೊಳ್ಳಬಹುದು. ಆದುದರಿಂದ ಮರಳಾಟವು ಮಕ್ಕಳವಿದ್ಯಾಭ್ಯಾಸಕ್ಕೆ ವಿಶೇಷ ಸಹಾಯಮಾಡುವುದೆಂದು ಧಾರಾಳವಾಗಿ ಹೇಳಬಹುದು.

ಉಪಾಧ್ಯಾಯರಿಗೆ ಒಂದು ದೊಡ್ಡ ತಟ್ಟೆ, ಮಕ್ಕಳಿಗೆ ಸಣ್ಣತಟ್ಟೆಗಳು, ನಯವಾದ ಬಿಳೀ ಮರಳು ಇವು ಮರಳಾಟಕ್ಕೆ ಮುಖ್ಯವಾಗಿ ಬೇಕಾಗುವುವು. ಕೆಲವು ಆಟಗಳಿಗೆ ಮರಳನ್ನು ಸ್ವಲ್ಪ ಒದ್ದೆ ಮಾಡಬೇಕಾಗುವುದು, ಇನ್ನು ಕೆಲವಕ್ಕೆ ಹೀಗೆಮಾಡಬೇಕಾದ ಆವಶ್ಯಕವಿಲ್ಲ. ಆಯಾಯ ಆಟಕ್ಕೆ ತಕ್ಕಂತೆ ಇನ್ನು ಕೆಲವು ಸಣ್ಣ ಉಪಕರಣಗಳೂ ಬೇಕಾಗುವುವು.

ಕಿಂಡರ್ ಗಾರ್ಟನ್ ಕ್ರಮಕ್ಕನುಸಾರವಾಗಿ ವಿದ್ಯಾಭ್ಯಾಸ ನಡೆಯುವ ಮಕ್ಕಳ ಪಾಠಶಾಲೆಗಳಲ್ಲಿ ಪ್ರಕೃತಿವಿಮರ್ಶೆ, ತೋಟಮಾಡುವುದು ಮುಂತಾದುವು ಅಲ್ಲಿನ ಕೆಲಸದ ಮುಖ್ಯಭಾಗಗಳಾಗಿರುವುವಷ್ಟೆ. ಈ ಕೆಲಸಗಳಿಗೆ ಸಂಬಂಧಪಟ್ಟಂತೆ ಮರಳಾಟವನ್ನು ಮುಂದಿನರೀತಿಯಲ್ಲಿ ನಡೆಸಬಹುದು. ಮರಳಿನ ತಟ್ಟೆಯಲ್ಲಿ ಮಕ್ಕಳಿಂದ ತೋಟದ ಪಾತಿಗಳನ್ನು ಮಾಡಿಸಿ ಈಪಾತಿಗಳ ಅಂಚಿಗೆ ಕವಡೆ ಮಣಿ ಅಥವಾ ಕಡ್ಡಿಗಳನ್ನು ಇಡಿಸಬಹುದು. ಈ ಆಟದ ಪಾತಿಗಳಲ್ಲಿ ತೋಟದಪಾತಿಗಳಲ್ಲಿ ಬೆಳೆದಿರುವ ಗಿಡಗಳ ಸಣ್ಣ ರಂಬೆಗಳನ್ನು ಅಥವಾ ಹೂವುಗಳನ್ನು ನೆಡಿಸಬಹುದು. ದಾರಿಯಲ್ಲಿ ಅಲ್ಲಲ್ಲಿ ಕುಳಿತುಕೊಳ್ಳುವುದಕ್ಕೆ ಕಾಗದದಿಂದ ಮಾಡಿದ ಬೆಂಚುಗಳನ್ನು ಇಡಿಸಬಹುದು, ಇವುಗಳಮೇಲೆ ಕಾಗದದಿಂದ ಮಾಡಿದ ಬೊಂಬೆಗಳನ್ನು ಕೂರಿಸಬಹುದು. ಇಂತಹ ಸಣ್ಣಸಣ್ಣ ಅಂಶಗಳನ್ನು ಸೇರಿಸುವುದರಿಂದ ಮಕ್ಕಳಿಗೆ ಆಟದಲ್ಲಿ ಬಹು ಉತ್ಸಾಹವುಂಟಾಗುವುದು. ಇನ್ನೊಂದು ಆಟದಲ್ಲಿ ಮಕ್ಕಳು ತಮ್ಮ ತಟ್ಟೆಯನ್ನು ಹುಲ್ಲಿನ ಮೈದಾನವೆಂದು ಭಾವಿಸಿ ಅಂತಹ ಮೈದಾನದಲ್ಲಿ ಬೆಳೆಯುವ ನಾನಾವಿಧವಾದ ಹುಲ್ಲುಗಳನ್ನೂ, ಕಾಡುಹೂವುಗಳನ್ನೂ, ಮರದ ರಂಬೆಗಳನ್ನೂ ಆ ತಟ್ಟೆಯಲ್ಲಿ ನೆಡಬಹುದು. ಮತ್ತೊಂದು ಆಟದಲ್ಲಿ ಮಕ್ಕಳು ತೋಟದಲ್ಲಿ

ನೋಡುವ ಭಾವಿಯನ್ನು ತಮ್ಮ ತಟ್ಟೆಯಲ್ಲಿ ರಚಿಸಬಹುದು. ತಟ್ಟೆಯ ಮರಳಿನಲ್ಲಿ ಒಂದು ಸಣ್ಣ ಬಟ್ಟಲನ್ನು ಹೂಳಿ ಅದಕ್ಕೆ ನೀರು ತುಂಬಿದರೆ ಅದೇ ಭಾವಿಯಾಗುವುದು. ಪಕ್ಕಗಳಲ್ಲಿ ಎರಡು ಉದ್ದವಾದ ಕಡ್ಡಿಗಳನ್ನೂ ಮೇಲೆ ಒಂದು ಅಡ್ಡ ಕಡ್ಡಿಯನ್ನೂ ನೆಡುವುದರಿಂದ ರಾಟೇ ಭಾವಿಯಾಗುವುದು.

ಮರಳಾಟವನ್ನು ಅಂಕಗಣಿತ ಪಾಠಕ್ಕೆ ಸಂಬಂಧಿಸಲು, ಅಂಗಡಿಯ ಆಟವನ್ನು ಮುಂದೆ ಹೇಳುವ ರೀತಿಯಲ್ಲಿ ಆಡಿಸಬಹುದು. ಒಂದು ಮಗುವು ತನ್ನ ತಟ್ಟೆಯಲ್ಲಿ ಏಳೆಂಟು ಬಟ್ಟಲುಗಳ ತುಂಬ ಒದ್ದೆಯಾದ ಮರಳನ್ನು ತುಂಬಿಕೊಂಡು "ಕಡುಬು ಬೇಕೆ ಕಡುಬು, ದುಡ್ಡಿಗೆ ಎರಡು ಕಡುಬು" ಎಂದು ಕೂಗುತ ಹೋಗುವುದು. ಮತ್ತೊಂದು ಮಗುವು "ನನಗೆ ಒಂದು ಕೊಡು" ಎಂದು ಕೇಳುವುದು; ಅದರ ತಟ್ಟೆಯಲ್ಲಿ ಈ ಮಗುವು ಚೆಲ್ಲದಂತೆ ಒಂದು ಬಟ್ಟಲಿನ ಮರಳನ್ನು ಮಗುಚುವುದು. ಆ ಮಗುವು ಕಾಸು ಕೊಡುವಂತೆ ನಟಿಸುವುದು, ಅಥವಾ ಒಂದು ಚೂರು ರಟ್ಟನ್ನು ಕಾಸೆಂದು ಕೊಡುವುದು; ಆಮೇಲೆ ಈ ಮಗುವು ಮುಂದಕ್ಕೆ ಕೂಗಿಕೊಂಡು ಹೋಗುವುದು; ಹೀಗೆ ಆಡಬಹುದು.

ಕಥೆ ಹೇಳುವುದು ಮಕ್ಕಳ ವಿದ್ಯಾಭ್ಯಾಸದಲ್ಲಿ ಒಂದು ಮುಖ್ಯ ಭಾಗವಷ್ಟೆ. ಮರಳಾಟವನ್ನು ನಾವು ಹೇಳುವ ಕಥೆಗಳಿಗೂ ಮುಂದಿನ ರೀತಿಯಲ್ಲಿ ಸಂಬಂಧಿಸಿಕೊಳ್ಳಬಹುದು. ಉಪಾಧ್ಯಾಯರು ಹೇಳುವ ರೈತನ ಕಥೆಗೆ ತಕ್ಕಂತೆ ಮಕ್ಕಳು ಮರಳಿನಿಂದ ದನದ ಕೊಟ್ಟಿಗೆ, ಆ ಕೊಟ್ಟಿಗೆಯಲ್ಲಿ ದನಗಳು ನೀರು ಕುಡಿಯುವ ತೊಟ್ಟಿ, ಹುಲ್ಲಿಡುವ ಮನೆ, ನಾಯಿ ಕಟ್ಟುವ ಗೂಡು, ಇವುಗಳನ್ನು ರಚಿಸಬಹುದು. ಮರಳುಕಾಡಿನ ಕಥೆಯನ್ನು ಹೇಳುವಾಗ ಮಕ್ಕಳು ತಮ್ಮ ತಟ್ಟೆಯಲ್ಲಿ ಮರಳನ್ನು ಸಮನಾಗಿ ಮಾಡಿಕೊಂಡು ಈ ಕಾಡಿನಲ್ಲಿ ಸಂಚರಿಸುವ ಒಂದು ಒಂಟೆಯನ್ನು ರಟ್ಟಿನಲ್ಲಿ ಕತ್ತರಿಸಿ ಇಡಬಹುದು. ಈ ಕಾಡಿನಲ್ಲಿ ಅಲ್ಲಲ್ಲಿ ನೀರಿರುವ ಪ್ರದೇಶಗಳನ್ನು ತೋರಿಸಲು ಒಂದು ಸಣ್ಣ ಬಟ್ಟಲಿನಲ್ಲಿ ನೀರು ತುಂಬಿ ಮರಳಿನಲ್ಲಿ ಹೂಳಬಹುದು. ಈ ನೀರಿನ ಸುತ್ತಲೂ ಹುಲ್ಲೂ, ಗಿಡಗಳು ಬೆಳೆಯುವುದನ್ನು ತೋರಿಸಲು ಗರಿಕೆಯ ಚೂರುಗಳನ್ನೂ, ಗಿಡಗಳ ರೆಂಬೆಗಳನ್ನೂ ನೆಡಬಹುದು. ಹೀಗೆ ತರಗತಿಯಲ್ಲಿ ಹೇಳುವ ಕಥೆಗಳಿಗನುಸಾರವಾಗಿ ನಾನಾವಿಧವಾಗಿ ಆಡಿಸಬಹುದು.

ಮರಳಾಟವನ್ನು ಆ ಭೂಗೋಳಪಾಠಕ್ಕೂ ಬಹು ಸಹಾಯವಾಗಿ ಮಾಡಿಕೊಳ್ಳಬಹುದು. ಭೂಗೋಳಪಾಠವನ್ನು ಪ್ರಾರಂಭಿಸಲು ಒಂದನೆಯ ತರಗತಿಯ

ವರೆಗೆ ಕಾಯಬೇಕಾದುದೇ ಇಲ್ಲ. ಎ. ಬಿ. ತರಗತಿಗಳಲ್ಲೇ ಭೂಗೋಳಪಾಠಕ್ಕೆ ಸಂಬಂಧಪಟ್ಟ ಅನೇಕ ಆಟಗಳನ್ನು ಮರಳಿನಲ್ಲಿ ಆಡಿಸಬಹುದು. ಮಕ್ಕಳನ್ನು ಹೊರಗೆ ಕರೆದುಕೊಂಡು ಹೋಗಿ ತಮ್ಮ ಊರಿನ ಹತ್ತಿರವಿರುವ ಗುಡ್ಡವನ್ನು ತೋರಿಸಿ, ಈ ಗುಡ್ಡದ ಆಕೃತಿಯನ್ನು ಮರಳಿನಲ್ಲಿ ಮಾಡಿಸಬಹುದು. ಇದರ ಪಕ್ಕದಲ್ಲಿ ಒಂದು ನದಿ ಅಥವಾ ಕೆರೆ ಇದ್ದರೆ ಅದನ್ನು ಮರಳಿನಲ್ಲಿ ತೋರಿಸಬಹುದು. ಮಕ್ಕಳು ಕುಳಿತುಕೊಳ್ಳುವ ಕೊಠಡಿಯ ನಕ್ಷೆಯನ್ನು ಮರಳಿನಲ್ಲಿ ರಚಿಸಬಹುದು. ಪಾಠಶಾಲೆಯ ಸುತ್ತಲೂ ಇರುವ ಮೈದಾನವನ್ನು ಎತ್ತರ ತಗ್ಗಿಗನುಸಾರವಾಗಿ ಮರಳಿನಲ್ಲಿ ಮಾಡಬಹುದು. ಈ ಮರಳಿನ ಮೈದಾನದಮೇಲೆ ಪಾಠಶಾಲೆಯ ಕಟ್ಟಡವನ್ನು ರಟ್ಟಿನಲ್ಲಿ ಕತ್ತರಿಸಿಟ್ಟು ಅದರ ಸುತ್ತಲೂ ಇರುವ ಮರಗಿಡಗಳು, ಕಾಂಪೌಡಂ ಗೋಡೆ, ಬೀದಿ, ಇತರ ಕಟ್ಟಡಗಳು ಮೊದಲಾದುವನ್ನೂ ಆಟದಲ್ಲಿ ತೋರ್ಪಡಿಸಬಹುದು. ಅಗ್ನಿಪರ್ವತದ ವಿಷಯವನ್ನು ಮಕ್ಕಳಿಗೆ ತಿಳಿಸಿದಮೇಲೆ ಮರಳಿನಿಂದ ಒಂದು ಪರ್ವತವನ್ನು ಮಾಡಿಸಿ ಅದರಮೇಲೆ ಹೊಗೆಯಾಡುವ ಒಂದು ಬಿರಣಿಯ ಚೂರನ್ನು ಇಡಿಸಬಹುದು. ಒಂದು ದೇಶದ ವಿವರಣೆಯನ್ನು ನಡೆಸಿದ ಮೇಲೆ ಆ ದೇಶದ ನಕ್ಷೆಯನ್ನು ಮರಳಿನಲ್ಲಿ ಬರೆಸಬಹುದು. ಹೀಗೆ ಮರಳಾಟವನ್ನು ಭೂಗೋಳ ಪಾಠಕ್ಕೆ ಸಹಾಯವಾಗಿ ನಾನಾವಿಧದಲ್ಲಿ ಮಾಡಿಕೊಳ್ಳಬಹುದು.

ಮಕ್ಕಳ ಕೈಗೆ ಕಡ್ಡಿಯನ್ನು ಕೊಟ್ಟು ಮರಳಿನಲ್ಲಿ ನಾನಾವಿಧವಾದ ಹಸೆಗಳನ್ನು ಬರೆಸಬಹುದು. ಕಡ್ಡಿಯಿಂದ ಮರಳಲ್ಲಿ ಮಕ್ಕಳ ಹೆಸರು, ತೋಟದ ಪಾತಿಯಲ್ಲಿ ಅವರು ಬೆಳದಿರುವ ಗಿಡಗಳ ಹೆಸರು ಹೀಗೆ ಅಕ್ಷರಗಳನ್ನೂ ಬರೆಸಬಹುದು.

ಪಾಠಶಾಲೆಯ ಹೊರಗೆ ನೆರಳಿರುವ ಪ್ರದೇಶದಲ್ಲಿ ಒಂದು ಗಾಡಿ ಮರಳನ್ನು ಸುರಿಸಿ ಅಲ್ಲಿಗೆ ಒಂದು ತರಗತಿಯ ಮಕ್ಕಳನ್ನು ಒಟ್ಟಾಗಿ ಕರೆದುಕೊಂಡು ಹೋಗಿ ಅಲ್ಲಿ ಅವರು ತಮತಮಗೆ ಬೇಕಾದ ಆಟಗಳನ್ನಾಡುವಂತೆ ಮಾಡಬಹುದು. ಮಕ್ಕಳಿಗೆ ಉಪಯೋಗಕರವಾಗುವಂತೆ ಮರಳಾಟವನ್ನು ಹೀಗೆ ನಾನಾವಿಧಗಳಲ್ಲಿ ಆಡಿಸಬಹುದು.

ಬೆತ್ತದಿಂದ ಹೆಣೆಯುವುದು.

ಬೆತ್ತದಿಂದ ಹೆಣೆಯುವುದು ಮುಖ್ಯವಾಗಿ ಹಸ್ತಕೌಶಲವನ್ನೂ ನೇತ್ರಪಾಟವವನ್ನೂ ಹೆಚ್ಚಿಸುವುದಕ್ಕೆ ಅನುಕೂಲವಾದ ಕೈಕೆಲಸವು. ಬೆತ್ತವನ್ನು ಯಾವ ರೀತಿಯಲ್ಲಿಬೇಕಾದರೂ ಬಾಗಿಸುವುದು ಸಾಧ್ಯವಾದುದರಿಂದ ಈ ಕೆಲಸದಲ್ಲಿ ಮಕ್ಕಳು

ನಾನಾವಿಧವಾದ ಹೊಸ ಆಕೃತಿಗಳನ್ನು ಸ್ವತಃ ರಚಿಸುವುದು ಸಾಧ್ಯವು. ಮಗುವು ಮನೆಯಲ್ಲಿ ತನ್ನ ಪ್ರೀತಿಗೆ ಪಾತ್ರರಾದವರಿಗೆ ಉಪಯುಕ್ತವಾದ ವಸ್ತುಗಳನ್ನು ಬೆತ್ತದಿಂದ ಹೆಣೆದುಕೊಟ್ಟು ಅವರಿಗೆ ಸಂತೋಷವನ್ನುಂಟುಮಾಡುವುದರಿಂದ ಅದರ ಸಂತೋಷವೂ ಹೆಚ್ಚುವುದು. ಮೇಲಾಗಿ ಬೆತ್ತದಿಂದ ಹೆಣೆಯುವುದು ವಿಶೇಷ ಬೆಲೆಯುಳ್ಳ ಕೈಕೆಲಸವು. ಇದನ್ನು ಕಲಿತಮಕ್ಕಳಲ್ಲಿ ಅನೇಕರು ಮುಂದೆ ಜೀವನಕ್ಕಾಗಿ ಈ ಕೆಲಸವನ್ನೇ ಅವಲಂಬಿಸಬಹುದು. ಹೀಗೆ ಬೆತ್ತ ಹೆಣೆಯುವ ಕೆಲಸದಿಂದ ನಾನಾವಿಧವಾದ ಪ್ರಯೋಜನಗಳಿರುವುವು.

ಬೆತ್ತದ ಕೆಲಸಕ್ಕೆ ವಿಶೇಷ ಉಪಕರಣಗಳೂ ಬೇಕಿಲ್ಲ. ನಾನಾ ಗಾತ್ರಕ್ಕಿರುವ ಬೆತ್ತದ ಸುರಳಿಗಳು, ಹರಿತವಾದ ಒಂದು ಚಾಕು, ಬೆತ್ತದಿಂದ ಎಳೆಮಾಡುವುದಕ್ಕೆ ಅನುಕೂಲವಾದ ನಾಡು ಚಾಕುಗಳು, ಹೊಲಿಯುವ ಸೂಜಿ, ಎಳೆಯನ್ನು ಮಾಡುವುದಕ್ಕೆ ಅನುಕೂಲವಾದ ಮಣೆ, ಒಂದು ಸುತ್ತಿಗೆ—ಈ ಉಪಕರಣಗಳು ಬೇಕಾಗುವುವು.

ಬೆತ್ತವು ಬೆಲೆಯುಳ್ಳ ಪದಾರ್ಥವಾದುದರಿಂದ ಹೆಣೆಯುವ ಕೆಲಸವನ್ನು ಮಕ್ಕಳು ಮೊದಲು ಬಿದರಿನಲ್ಲಿ ಪ್ರಾರಂಭಿಸಬೇಕು. ಬಿದರಿನ ಹಚ್ಚೆಗಳಿಂದ ಮೊದಲು ಚಾಪೆಗಳನ್ನು ಹೆಣೆಸಬಹುದು. ಈ ಕೆಲಸವು ಕೇವಲ ಸಣ್ಣಮಕ್ಕಳಿಗೂ ಸಾಧ್ಯವಾದುದು. ಚಾಪೆಗಳಿಗೆ ಬೇಕಾದ ಹಚ್ಚೆಗಳನ್ನು ಮೇಲಿನ ತರಗತಿಯ ಬಾಲಕರು ಸುಲಭವಾಗಿ ಮಾಡಿಕೊಡಬಹುದು. ಆ ಮೇಲೆ ಮಕ್ಕಳು ಬಿದರಿನ ಹಚ್ಚೆಗಳಿಂದ ಸಣ್ಣಸಣ್ಣ ಬುಟ್ಟಿಗಳನ್ನು ಹೆಣೆಯಬಹುದು. ಇನ್ನು ಸ್ವಲ್ಪ ಅಭ್ಯಾಸವಾದಮೇಲೆ ಉಂಡೆಬೆತ್ತದಿಂದ ಹೂಬುಟ್ಟಿ, ಗೂಡೆ ಮೊದಲಾದುವನ್ನು ಹೆಣೆಯಬಹುದು. ಕೊನೆಗೆ ಬೆತ್ತದಿಂದ ಎಳೆಗಳನ್ನು ಮಾಡಿಕೊಂಡು ಹೂಬುಟ್ಟಿ, ತಟ್ಟೆ ಮೊದಲಾದುವನ್ನು ಮಾಡಬಹುದು. ಈಗ ಮಕ್ಕಳು ಹೊಲಿಯುವ ಸೂಜಿಯನ್ನು ಉಪಯೋಗಿಸಬೇಕಾಗುವುದು. ಹೊಲಿಗೆಯ ಕೆಲಸಗಳಿಗೆ ಬೇಕಾಗುವ ಬೆತ್ತದ ಎಳೆಗಳನ್ನು ಮೊದಲು ಮೇಲಿನ ತರಗತಿಯ ಬಾಲಕರು ಮಾಡಿಕೊಡಬೇಕಾಗುವುದು, ಆಮೇಲೆ ಈ ತರಗತಿಯ ಬಾಲಕರೇ ಮಾಡಿಕೊಳ್ಳಬಹುದು.

ಇಲ್ಲಿ ಸ್ವಲ್ಪಮಟ್ಟಿಗೆ ವಿವರಿಸಿರುವ ಎರಡು ವಿಧವಾದ ಕೆಲಸಗಳನ್ನೂ ನಮ್ಮ ಪಾಠಶಾಲೆಗಳಲ್ಲಿ ಆಚರಣೆಗೆತರುವುದು ಸುಲಭಸಾಧ್ಯವೆಂದು ನಮಗೆ ತೋರುವುದರಿಂದ ನಮ್ಮದೇಶದ ಪಾಠಶಾಲೆಗಳಲ್ಲಿ ಕೆಲಸಮಾಡುವ ಉಪಾಧ್ಯಾಯರು ಈ ವಿಷಯದಲ್ಲಿ ಪ್ರಯತ್ನಪಡಬೇಕೆಂದು ನಾವು ಕೋರುತ್ತೇವೆ.

ಬೇಸಗೆಯಕಾಲ.

(ಕುಸುಮಷಟ್ಪದಿ)

ಧರೆಯೆಳಸಿದುದು ತುಹಿನ |
ಕರನ ಕಿರಣಂಗಳಂ |
ಧರೆಗೆ ರವಿ ಯುರಿಬಿಸಿಲನೆರಚುತಿರುವಂ ||
ಸರಸಿಯೊಳ್ ವಿಹಾಯಲಿದೊ |
ಬರುತುವಿಂದೆ ಜನಸಮಿತಿ |
ನಿರುಕಿಸೆಲೆ ಮಗು ಬಂದಬೇಸಗೆಯನು ||೧||

ಚಂದಿರನ ಚಂದ್ರಿಕೆಯ |
ನೊಂದಿರ್ದ ರಾತ್ರಿಗಳ್ |
ಚಂದದಾಜಲಯಂತ್ರಮಂದಿರಂಗಳ್ |
ಇಂದೂಪಲಂ ಸರಸ |
ಚಂದನಂ ಮನುಜರಿಗೆ |
ಸುಂದರಾ! ಬಲುಸೊಗಮನಿಂದೀವುವು ||೨||

ಇನಿಗಂಪನಾಂತ ಗೃಹ |
ಮಿನಿಗಂಪನಾಂತ ಜಲ |
ಮಿನಿದಾದ ಸರಮನಾಂತಾವೀಣೆಗಳ್ ||
ಮಿನುಗುವಾಚಂದ್ರಿಕೆಯು |
ಮನುವಿಂದೆ ಬೆಳಗುತುಂ |
ಮನುಜರಿಗೆ ಕುಡುವುವೈ ಸಂತೋಷವಾ ||೩||

ಬಿಸಿಲಬೇಗೆಯಿನೊಣಗೆ |
ರಸನೆ ಬಾಯಾರಿಕೆಯ |
ನಸವಸದಿನತ್ತಲಿತ್ತಲ್ ನೋಡುತುಂ ||
ಒಸೆದು ಮೃಗನಿವಹಮಾ |
ಗಸವಜಲಮೆಂದೋಡೆ |
ಕುಸಿಯೆ ಮನಮಂದಲ್ಲಿ ಬೆಕೆಯಾಂಪುವು ||೪||

ಪಗಲೆರೆಯನುರಿಯಿಂದೆ |
ಧಗೆಯಾಂತು ಕಾಯ್ದುವಾಂ |
ಸುಗಳಿಂದೆ ನೋವಾಂತ ಪನ್ನಗೇಂದ್ರಂ ||
ತೆಗೆದೋಡಿ ನವಿಲಡಿಯೊ |
ಳೊಗೆದಿರ್ದ ನೆಳಲೊಳಗೆ |
ಸೊಗದಿಂದಮಿರ್ದಪುದು ನಿದ್ರಿಸುತ್ತುಂ ||೫||

ಬಲಿದಬಾಯಾರಿಕೆಯಿ ।
ನಲೆದಲೆದು ಬಾಯ್ದೆರೆದು ।
ಬಲದಿಂದ ಕುಂದಿದಯ್ವಾಯುಸಿಂಗಂ ॥
ಅಲುಗಿಸುತೆ ಕೇಸರವ ।
ನಲುಗಿಸುತೆ ರಸನೆಯುಂ ।
ಕೆಲದೊಳಿಹ ಗಜವ ನೋಯಿಸದಿರುವೃದು ॥೬॥

ಬಾಯಾರೆ ಬಾಯಿಂದೆ ।
ತೋಯಕಣಗಳನಾಂತು ।
ನೋಯುತಂ ದಿನಪತಿಯ ಕಿರಣಂಗಳಿಂ ॥
ತೋಯುಮಂಕರಿನಿವಹ ।
ಮಾಯಸದಿನರಸುವಂ ।
ಪಾಯೆಡೆಯ ಸಿಂಗಕ್ಕಮಂಜದಿರ್ಕುಂ ॥೭॥

ಹುತವಹ್ನಿಯೆಣೆಯದಿನ ।
ಪತಿಯುಷ್ಣ ಕಿರಣಗಳಿ ।
ನತಿಯಾಗಿ ತಪಿಸೆಬರ್ಹಿಗಳಗಡಣಂ ॥
ಸುತ! ತಮ್ಮ ಬರ್ಹದೊಳು ।
ಬೆತೆಯಿಂದ ಪೊಕ್ಕುರಗ ।
ತತಿಯೊಳೊಂದುಮನಿಂದು ಕೊಲ್ಲದಿರ್ಕುಂ ॥೮॥

ಸರಸಿ ಕೊನ್ನಾರೆಯಿಂ ।
ಬಿರೆದು ಕೆಸರಿಲ್ಲದೆಯೆ ।
ಬರಿಯ ಬಯಲಾಗಿರಲ್ ಸೂಕರಗಣಂ ॥
ತರಣಿಗಂಜುತೆ ನೆಲದೊ ।
ಳಿರುವುದೋ ಎಂಬಂತೆ ।
ಕೊರೆಯುತಿದೆ ತನ್ನ ಮುಸುಡಿಂದಿಳೆಯನು ॥೯॥

ಜಲರಹಿತಮಾಗಿರ್ದ ।
ಕೊಳದಿಂದ ಮಂಡೂಕ ।
ಮಿಳೆಗೆ ಪಾರುತ್ತೆ ತಾಂ ತೃಷಿತಮಾಗಿ ॥
ತಳೆಯುಂತೆ ಮೆರೆದಕುಂ ।
ಡಲಿಯ ಹೆಡೆಯಿಂದಾದ ।
ನೆಳಲೊಳಗೆ ನೋಡಿಂದು ನಿದ್ರಿಸುವುದು ॥೧೦॥

ಕರಿಯೊಂದು ಪೆರತೊಂದು ।
ಕರಿಯುನಿದಿರಿಸುವಂದು ।
ಪರೆದ ತಾವರೆಯುಳಿಯೆ ಬೆದರೆ ವಿರ್ಹಗಳ್ ॥
ಸರಸಿಯಿಂ ಭಯದಿಂದೆ ।
ಪರಿದೋಡೆ ಸಾರಸಂ ।
ಬರಿಯು ಕೆಸರಾಯ್ತು ಸಾಂದ್ರಂ ಬೆಂಚೆಯೊಳ್ ॥೧೧॥

ಆತಪದ ಬೆಳಗಿಂದ ।
ಮಾತಲೆಯುಮಣಿಬೆಳಗೆ ।
ಮಾತರಿಶ್ವನಸೇವಿಸುತೆ ಜಿಹ್ವೆಯಿಂ ॥
ಆತಪವಿಷಾಗ್ನಿಗಳಿ ।
ನಾತೆರದ ಭಯುವಾಂತು ।
ಸೋತು ಫಣಿ ಭೇಕಮಂ ಕೊಲ್ಲದಿರ್ಕುಂ ॥೧೨॥

ನೊರೆವಿಂಡಿನಿಂದೆ ತುಂ ।
ಬಿರುವನಿಡುವೊಗಮಂತೆ ।
ತೆರೆದ ವೊಗಬಿಲದೆ ಜೋಲ್ದಿರುವರಸನೆ ॥
ಅರಿವುತಿರೆ ಮನದಳಲ ।
ಗಿರಿಗಹ್ವರಂಗಳಿಂ ।
ಬರುತುಮಿದೆ ಮಹಿಷತತಿ ನೀರರಸುತಂ ॥೧೩॥

ವನವಹ್ನಿ ಯೊಣಗಿಸಿದ ।
ವನಮಹೀರುಹಸಮಿತಿ ।
ವನಪವನನೇಳಿಸಿದ ಶುಷ್ಕಪರ್ಣಂ ॥
ಇನನಕಾಯ್ಪಿಂ ಪೋದ ।
ವನ ಮುಳ್ಳ ಬೆಂಚೆಗಳ್ ।
ಜನರ ಮಾನಸಕಿಂದು ಭಯುಮ ನೀಗುಂ ॥೧೪॥

ಎಲೆಯಿರದ ಗಿಡುಗಳೊಳ್ ।
ಸಲೆನೊಂದಪುದು ವಿಹಗ ।
ಕುಲಮದ್ರಿಕುಂಜದೊಳ್ ಕಪಿಗಳಿರ್ಕುಂ ॥
ಜಲಮನರಸುತೆ ಗವಯು ।
ಕುಲಮುಲೆದಪುದು ಶರಭ ।
ಕುಲನೊಂದುವುದು ವಾಪಿಯಿಂದೆ ನೀರಂ ॥೧೫॥

ಅರುಣ ಕಾಂತಿಯುನಾಂತು ।
ಬಿರುಸಿಂದೆ ಬಳೆಯುತ್ತೆ ।
ತರುಗಳಂ ತಾಂಗಿದೊಡನುರುಹುತನಲಂ ॥
ಬರುತಮಿರೆ ದೆಸೆದೆಸೆಯೊ ।
ಳುರಿಯೊಂದೆ ಕಂಡಪುದು ।
ನಿರುಕಿಸಲೆ ಸುತ! ರಸೆಯು ನೀರಸತೆಯುಂ ॥೧೬॥

ಅನಲನದ್ರಿಯ ದರಿಯೊ ।
ಳನಿಲನಿಂ ತೋರ್ದ ನಾ ।
ಘನವಂಶ ಸಂಘದೊಳ್ ದನಿಗೈದನು ॥
ಮಿನುಗಿದಂ ತೃಣದೆಡೆಯೊ ।
ಳನುವಿಂದೆ ಬಳೆಯುತ್ತೆ ।
ಕೊನೆಯುನಾಗಿಸಿದನಾಮ್ಮೃಗನಿವಹಕೆ ॥೧೭॥

ಜನಿಸಿದಂ ಶಾಲ್ಮಲಿಯು ।
ವನದೆ ತರುತಳದಲ್ಲಿ ।
ಕನಕಕಾಂತಮೆನಿಪ್ಪಬಣ್ಣಮಾಂತಂ ॥
ವನವೃಕ್ಷ ಶಾಖೆಯಿಂ ।
ತೊನೆಯುತೊಂದವನಿಜಕೆ ।
ವನದೊಳೆತ್ತಲುಮನಲನೋಡಾಡುವಂ ॥೧೮॥

ಹರಿಕರಿಗಳುಂ ಶರಭ ।
ಹರಿಣಗಳ್ ಮುಂತಪ್ಪ ।
ವರೊಳೊಂದು ಪೆರತೊಂಬರೊಳ್ ವೈರಮುಂ ॥
ತೊರೆದನಲ ಬಾಧೆಯಿಂ ।
ಗಿರಿಗುಹೆಗಳಂ ತೊರೆದು ।
ತೊರೆಯು ಪುಳಿನಸ್ಥಳದೆ ಸೇರ್ದಿರ್ಪುವು ॥೧೯॥

ಕಮಲಂಗಳೊಳ್ಗಿನಿಂ ।
ಕಮನೀಯಮಾಗಿರುವ ।
ಕಮಲಾಕರಂಗಳಿಂ ಕಮಲವದನಾ! ॥
ಹಿಮಕರಕರಂಗಳಿಂ ।
ಕಮನೀಯಗೀತದಿಂ ।
ದಮೆ ದಿನಗಳಂ ಕಳೆ ನಿದಾಘದಲ್ಲಿ ॥೨೦॥

ಎಂ. ಕೃಷ್ಣಪ, ಹೆ॥ ಮಾ॥ ಗಂಜಾಂ.

ಗುರುಭಕ್ತಿ.

ವಿದ್ಯಾರ್ಥಿಗಳು—ಉಪಾಧ್ಯಾಯರಲ್ಲಿ ನಡೆದುಕೊಳ್ಳಬೇಕಾದ ಕ್ರಮ:—

ಲೋಕದಲ್ಲಿ ಸಮಸ್ತ ಪ್ರಾಣಿಗಳಲ್ಲೂ ಮನುಷ್ಯನು ಶ್ರೇಷ್ಠನು. ಎಲ್ಲಾ ವಸ್ತುಗಳನ್ನೂ ತನ್ನಧೀನ ಮಾಡಿಕೊಂಡು ಸುಖಪಡುವನು. ಇದಕ್ಕೆ ಇವನ ಬುದ್ಧಿಯೇ ಕಾರಣ. ದೇವರು ಇನ್ನಾವ ಪ್ರಾಣಿಗೂ ಕೊಡದ ಅತಿಶಯವಾದ ಮೆದುಳು ಅಥವಾ ಬುದ್ಧಿಯನ್ನು ಕೊಟ್ಟಿರುವನು. ಇದನ್ನು ಬಾಲ್ಯದಿಂದಲೂ ಕ್ರಮವಾಗಿ ತಿದ್ದದಿದ್ದರೆ ವ್ಯರ್ಥವಾಗುವುದು. ಇದಕ್ಕಾಗಿ ತಕ್ಕ ವಿದ್ಯೆ ಬುದ್ಧಿಗಳನ್ನು ಕಲಿಸಬೇಕು. ತಂದೆತಾಯಿಗಳು ಇವರನ್ನು ಪೂರ್ಣ ವಿದ್ಯಾವಂತರನ್ನಾಗಿ ಮಾಡಲು ಸಾಧ್ಯವಿಲ್ಲ ಅಲ್ಲದೆ ವಿರಾಮವಿರುವುದಿಲ್ಲ—ಇದಕ್ಕಾಗಿ ವಿದ್ಯಾವಂತರಾದ ಮತ್ತು ಬೋಧನಾಶಕ್ತಿಯುಳ್ಳ ಕೆಲವರಿರುವರು—ಇವರನ್ನು ಬೋಧಕರು—ಗುರುಗಳು— ಉಪಾಧ್ಯಾಯರೆಂದು ಕರೆಯುತ್ತಾರೆ. —ಕತ್ತಲೆಯಲ್ಲಿರುವವರನ್ನು ಬೆಳಕಿನಲ್ಲಿ ಕರೆದುಕೊಂಡುಹೋದರೆ ಎಷ್ಟು ಸಂತೋಷಪಡುವರೋ ಹಾಗೆ ವಿದ್ಯಾಗುರುಗಳಾದವರು ಬಾಲಕರನ್ನು ಅಜ್ಞಾನದಿಂದ ಜ್ಞಾನವೆಂಬ ಬೆಳಕಿನಲ್ಲಿ ಬಿಡುವರು.—ಬಾಲಕರು ಜೀವಿತಕಾಲದಲ್ಲಿ—ಸನ್ಮಾರ್ಗದಲ್ಲಿದ್ದು ಲೋಕವ್ಯವಹಾರಕ್ಕೆ ತಕ್ಕವರಾಗುವರು—ಇದರಿಂದ ಉಪಾಧ್ಯಾಯರು ಬಾಲಕರಿಗೂ ಮತ್ತು ದೇಶಕ್ಕೂ—ಮಾಡುವ ಸಹಾಯವು ಅತ್ಯಮೋಘವಾದದ್ದು. ಈ ಉಪಾಧ್ಯಾಯರನ್ನೂ ಗುರುಗಳನ್ನೂ ಅತ್ಯಂತ ಶ್ರೇಷ್ಠರೆಂದು ಹೇಳಬಹುದು. ಇದಕ್ಕಾಗಿ ಎಷ್ಟೋ ನಿದರ್ಶನಗಳಿವೆ.—ಪೂರ್ವದಿಂದಲೂ ವಿದ್ಯಾಗುರುಗಳನ್ನು ಬಹಳವಾಗಿ ಸನ್ಮಾನಿಸುತ್ತಾರೆ.—

ಗುರುಬ್ರಹ್ಮಾ ಗುರುರ್ವಿಷ್ಣುಃ ।
ಗುರುರ್ದೇವೋ ಮಹೇಶ್ವರಃ ।
ಗುರು ಸ್ಸಾಕ್ಷಾತ್ಪರಂಬ್ರಹ್ಮ ।
ತಸ್ಮೈ ಶ್ರೀಗುರವೇನಮಃ ॥೧॥

ಗುರವೇ ಸರ್ವಲೋಕಾನಾಂ ।
ಭಿಷಜೇ ಭವರೋಗಿಣಾಂ ।
ನಿಧಯೇ ಸರ್ವವಿದ್ಯಾನಾಂ ।
ದಕ್ಷಿಣಾಮೂರ್ತಯೇನಮಃ ॥೨॥

ವಿದ್ಯಾರ್ಥಿಗಳು—ಜ್ಞಾನವನ್ನು ಕೊಡತಕ್ಕ ಈ ಉಪಾಧ್ಯಾಯರನ್ನು ದೇವರೆಂದೇ ಭಾವಿಸಬೇಕು—ದೇವರಲ್ಲಿ ಯಾವ ವಿಧವಾದ ಭಕ್ತಿಭಾವನೆಗಳನ್ನು ಇಟ್ಟು

ಕೊಂಡಿರುವಿರೋ ಹಾಗೆಯೇ ಇವರಲ್ಲಿಯೂ ಭಕ್ತಿಯನ್ನಿಟ್ಟುಕೊಂಡಿರಬೇಕು.— ಪೂರ್ವದಿಂದಲೂ ಎಷ್ಟೋ ವಿದ್ಯಾರ್ಥಿಗಳು ಗುರುಕುಲ ಅಂದರೆ ಗುರುಗಳ ಮನೆಯಲ್ಲಿಯೇ ವಾಸಮಾಡಿಕೊಂಡು ಇದ್ದು-ಅವರ ಆಜ್ಞಾನುಸಾರವಾಗಿ ನಡೆದು-ಎಷ್ಟೋ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಹೊಂದಿ ಪ್ರಸಿದ್ಧಿಯನ್ನು ಪಡೆದಿರುವರು.-ಆದರೆ-ಈಗಿನಕಾಲದಲ್ಲಿ-ವಿದ್ಯಾಭ್ಯಾಸಕ್ಕಾಗಿ ಬಹಳ ಅನುಕೂಲಗಳಿವೆ. ಒಬ್ಬ ವಿದ್ಯಾರ್ಥಿಯು ವರ್ಷ 1 ಕ್ಕೆ ಒಂದುತರಗತಿ ಮೇರೆ 10-8 ತರಗತಿಗಳಲ್ಲಿರಬೇಕಾಗುವದು. ಪ್ರತಿ ದರ್ಜೆಗೂ ಯೋಗ್ಯರಾದ ಉಪಾಧ್ಯಾಯರಿರುವರು. ಅವರುಗಳಿಂದ ತಿದ್ದಲ್ಪಟ್ಟು-ಮೊದಲಿನವರಿಗಿಂತಲೂ ಅತಿಶಯವಾದ ಜ್ಞಾನವನ್ನು ಹೊಂದುವಾಗ ಆ ಉಪಾಧ್ಯಾಯರುಗಳ ವಿಷಯದಲ್ಲಿ ನಡದುಕೊಳ್ಳಬೇಕಾದ ಕ್ರಮ ಹೇಗೆಂಬುವದನ್ನು ಚನ್ನಾಗಿ ತಿಳಿದುಕೊಳ್ಳಬೇಕು.

(1) ವಿದ್ಯಾರ್ಥಿಗಳು-ಉಪಾಧ್ಯಾಯರಲ್ಲಿ ಭಕ್ತಿಯಿಂದಲೂ ವಿಧೇಯತೆಯಿಂದಲೂ ಇರಬೇಕು.—

(2) ಉಪಾಧ್ಯಾಯರು ನಿಮ್ಮ ಮನೋಧರ್ಮಗಳನ್ನು ತಿಳಿದು ತಕ್ಕ ದಾರಿಯನು ತೋರಿಸುವರು. ಆದ್ದರಿಂದ ಅವರ ಅಪ್ಪಣೆಯಲ್ಲಿ ನಂಬಿಕೆಯನ್ನಿಟ್ಟುಕೊಂಡು ಅದರಂತೆ ಪಾಠಗಳನ್ನು ಓದಿಕೊಂಡು ಬಂದು ಒಪ್ಪಿಸಬೇಕು.—

(3) ಅವರ ಅಪ್ಪಣೆಗೆ ವ್ಯತಿರಿಕ್ತವಾಗಿ ಎಂದಿಗೂ ನಡೆಯಬಾರದು. ಹಾಗೆ ನಡೆಯುವದರಿಂದ ಬಾಲಕರೇ ದಡ್ಡರಾಗಲು ಅವಕಾಶವಾಗುವದು.—

(4) ಪ್ರಾತಃಕಾಲ ಮಧ್ಯಾಹ್ನಗಳಲ್ಲಿ ತರಗತಿಯು ಪ್ರಾರಂಭವಾಗುವಾಗ ಉಪಾಧ್ಯಾಯರು ಬಂದರೆ ಎಲ್ಲಾ ಬಾಲಕರೂ ಎದ್ದು ನಿಂತು ಅತ್ಯಂತ ವಿಧೇಯತೆಯಿಂದ ವಂದನೆಯನ್ನು ಮಾಡಬೇಕು. ಅವರು ತಮ್ಮ ಸ್ಥಳದಲ್ಲಿ ಕೂತುಕೊಂಡ ತರುವಾಯ ನಿಮ್ಮ ಸ್ಥಳಗಳಲ್ಲಿ ಕೂತುಕೊಳ್ಳುವದು.

(5) ಪಾಠವೇನಾದರೂ ತಿಳಿಯದಿದ್ದರೆ ಅತ್ಯಂತ ವಿನಯದಿಂದ ಅದನ್ನು ತಿದ್ದಿಕೊಡಬೇಕೆಂದು ಬೇಡಿಕೊಳ್ಳಬೇಕು.—

(6) ಅಕಸ್ಮಾತ್ ಒಬ್ಬ ಬಾಲಕನು ಗೊತ್ತಾದ ಕಾಲಕ್ಕೆ ಬಾರಿಬಂದರೆ ಅವನು ತನ್ನ ತಪ್ಪಿತಕ್ಕಾಗಿ ಕ್ಷಮೆ ಕೇಳಿಕೊಳ್ಳುವದು ಸರಿಯಾದ ಮಾರ್ಗ.—

(7) ಉಪಾಧ್ಯಾಯರು ಕೇಳುವ ಪ್ರಶ್ನೆಗೆ ಸರಿಯಾದ ಉತ್ತರಗಳನು (ತಿಳಿದಷ್ಟನ್ನು) ಸ್ಪಷ್ಟವಾಗಿಯೂ ನಿಧಾನವಾಗಿಯೂ ಹೇಳಬೇಕು. ಅತ್ಯಂತ ಆತುರದಿಂದಲೂ ಕೂಗಿಯೂ ಹೇಳಬಾರದು.—

(8) ಅವರು ಪಾಠಗಳನ್ನು ಬೋಧಿಸುವಾಗ ಅವರ ಅಪ್ಪಣೇ ಮೇರೆ-ಅಲ್ಲೆ ಗಮನವಿಟ್ಟು ಕೇಳಬೇಕು.—ತಿಳಿಯದ ವಿಷಯವನ್ನು ಗುರ್ತಿಸಿಕೊಂಡು ಅವರಿಗೆ ವಿರಾಮವಿರುವ ವೇಳೆಯಲ್ಲಿ ಮರ್ಯಾದೆಯಿಂದ ಕಂಡು ನಿನ್ನ ಸಂಶಯಗಳನ್ನು —ಹೇಳಿ ಸರಿಯಾದ ಉತ್ತರಗಳನ್ನು ತಿಳಿದುಕೊಳ್ಳಬಹುದು.—

(9) ಪಾಠಶಾಲೆಯನ್ನು ಬಿಡುವಾಗ ಆ ದಿವಸ ಅವರಿಂದ ಹೊಂದಿದ ಜ್ಞಾನಕ್ಕಾಗಿ ಕೃತಜ್ಞತೆಯನ್ನು ಸೂಚಿಸುವಂತೆ ವಂದನೆಗಳನ್ನು ಮಾಡಿ ಬರಬೇಕು.—

(10) ದಾರಿಗಳಲ್ಲಿ ಉಪಾಧ್ಯಾಯರನ್ನು ಕಂಡಾಗ ಬಾಲಕರು ಸ್ವಲ್ಪದೂರವಾಗಿ ನಿಂತು ವಂದನೆಮಾಡಿ ಮುಂದಕ್ಕೆ ಹೋಗಬೇಕು.—

(11) ಅವರೆದುರಿಗೆ ಕೇವಲ ಗರ್ವದಿಂದ ಕಾಲುಗಳನ್ನು ಒದೆದುಕೊಂಡು-ನೆಲವನ್ನು ಗಟ್ಟಿಸಿ ನಡೆಯಬಾರದು.—ನಿಮ್ಮ ನಡತೆಯು ಒಳ್ಳೇದಾಗಿರುವಂತೆ—ಅತ್ಯಂತ ವಿನಯದಿಂದ ಇರಬೇಕು.—

(12) ನಿಮ್ಮ ಉಪಾಧ್ಯಾಯರಲ್ಲಿ ವಿಶ್ವಾಸವನ್ನಿಟ್ಟುಕೊಂಡಿರಬೇಕು. ಯಾವ ಸ್ಥಳದಲ್ಲೆ ಆಗಲಿ ಯಾವ ಕಾಲದಲೆ ಆಗಲಿ-ಅವರ ಅಪ್ಪಣೆಗೆ ತಕ್ಕ ಮರ್ಯಾದೆ ಮಾಡಿ ಕೂಡಲೆ ನಡಿಸಬೇಕು.—

(13) ಉಪಾಧ್ಯಾಯರಿಗೆ ಎದುರುತ್ತರವನ್ನು ಎಂದಿಗೂ ಹೇಳಬಾರದು. ಅವರೆದುರಿದ್ದಾಗಿಗ-ಹಸನ್ಮುಖಿಗಳಾಗಿರಬೇಕು.

(14) ಒಬ್ಬ ರೋಗಿಗೆ ವೈದ್ಯನು ಹೇಗಿರುವನೊ-ಹಾಗೆ ವಿದ್ಯಾರ್ಥಿಗೆ ಉಪಾಧ್ಯಾಯರೂ ದೊಡ್ಡ ಸ್ನೇಹಿತರಂತಿರುವರು.—

(15) ಬಾಲಕರ ಕಷ್ಟ ಸುಖಗಳಿಗೆ ಉಪಾಧ್ಯಾಯರು ಭಾಗಿಗಳಾಗುವರು—ಅಂದರೆ ತಮ್ಮ ಶಿಷ್ಯನಿಗೆ ಯಾವದಾದರೂ ಸಂಕಟಬಂದರೆ ಪಶ್ಚಾತ್ತಾಪ ಪಡದೆ ಇರಲಾರರು—ಮತ್ತು ತಮ್ಮ ಕೈಲಾದ ಸಹಾಯವನ್ನೂ ಮಾಡುವರು. ಅಲ್ಲದೆ ತಕ್ಕ ಯೋಚನೆಗಳನ್ನು ಹೇಳುವರು-ಅದುದರಿಂದ ನಿಮ್ಮ ಕಷ್ಟ ಸುಖಗಳೇನಿದ್ದರೂ ಉಪಾಧ್ಯಾಯರಲ್ಲಿ ಅರಿಕೆಮಾಡಿಕೊಳ್ಳಿ. ನಿಮ್ಮ ಶ್ರೇಯೋಭಿವೃದ್ಧಿಗೆ ದಾರಿಯನ್ನು ತೋರಿಸುವರು.—

I ಕೇವಲ ಭಕ್ತಿಯಿಂದ ನಡೆದ ವಿದ್ಯಾರ್ಥಿಗಳಲ್ಲಿ:—ಏಕಲವ್ಯ.

II ಗುರುಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿ ನಡೆದವರಲ್ಲಿ ಭಟ್ಟಪಾದಾಚಾರ್ಯ.—

III ಗುರುಗಳ ಆಜ್ಞೆಯಂತೆ ನಡೆದವರಲ್ಲಿ:—ಹರಿಶ್ಚಂದ್ರ.

ಏಕಲವ್ಯ :—ಈತನು ಗುರುಗಳಲ್ಲಿ ತೋರಿಸಿದ ಭಕ್ತಿಯು ಅತಿಶಯವಾದುದು:-ನಿದರ್ಶನವಾಗಿ ಹೇಳುತ್ತೇನೆ.—ಭಾರತಕಾಲದಲ್ಲಿ ಏಕಲವ್ಯನೆಂಬ ಶೂದ್ರಜಾತಿಯವನಿದ್ದನು.—ಈತನಿಗೆ ಧನುರ್ವಿದ್ಯೆಗಳನ್ನು ಕಲಿಯುವ ಆಶೆಯುಂಟಾಯಿತು. ಆಗಿನ ಕಾಲದಲ್ಲಿ ದ್ರೋಣಾಚಾರ್ಯರೆಂಬ ಒಬ್ಬ ಶ್ರೇಷ್ಠರಾದ ಗುರುಗಳಿದ್ದರು.—ಅವರಲ್ಲಿ ಹೋಗಿ—ಮಹಾಸ್ವಾಮಿ‌ ಧನುರ್ವಿದ್ಯೆಯನ್ನು ಕಲಿಸುವದರಲ್ಲಿ ತಾವು ಈ ಲೋಕದಲ್ಲಿ ಅದ್ವಿತೀಯರು ಎಂದು ಕೇಳಿದೇನೆ. ದಯವಿಟ್ಟು ನನ್ನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಿ ಎಂದು ಬೇಡಿಕೊಂಡನು. ಆಗ ಅವರು-ಅನ್ಯಜಾತಿಯವನಿಗೆ ಪಾಠಹೇಳುವ ಪದ್ಧತಿಯು ನನ್ನಲ್ಲಿಲ್ಲ—ಆದ್ದರಿಂದ ನಿನಗೆ ನನ್ನಿಂದ ಉಪದೇಶ ದೊರೆಯಲಾರದೆಂದರು.—ಆದರೂ ಆಶಾರಹಿತನಾಗದೆ ಗುರುಗಳಾದ ದ್ರೋಣಾಚಾರ್ಯರಂತೆ ಒಂದು ಬೊಂಬೆಯನ್ನು ಮಾಡಿಟ್ಟುಕೊಂಡು. ಅದರಲ್ಲಿಯೆ ಭಕ್ತಿಯನ್ನಿಟ್ಟುಕೊಂಡು ಅದರ ಮುಂದೆ ತಾನೆ ಸ್ವತಃ ಅಭ್ಯಾಸಮಾಡಲು ಮೊದಲುಮಾಡಿದನು. ಆಗ ಅತಿಶಯವಾದ ಭಕ್ತಿಯಿಂದ ದ್ರೋಣಾಚಾರ್ಯರ ವಿದ್ಯೆಯಲ್ಲವೂ ಇವನಿಗೆ ಬಂದವು. ಇವರ ಶಿಷ್ಯರಲ್ಲೆಲ್ಲಾ ಇವನೆ ಬಹಳ ಗಟ್ಟಿಗನಾದನು. ಇದು ದ್ರೋಣಾಚಾರ್ಯರಿಗೆ ತಿಳಿಯಿತು. ಒಂದಾನೊಂದು ವೇಳೆ ಸಂಧಿಸಿದಾಗ, ಅಯ್ಯಾ ಈ ವಿಧವಾದ ವಿದ್ಯೆಗಳನ್ನು ಎಲ್ಲಿ ಕಲಿತೆ ಎಂದು ಕೇಳಲು ಮಹಾಸ್ವಾಮಿ,ದ್ರೋಣಾಚಾರ್ಯರೆಂಬ ಶ್ರೇಷ್ಠರಾದ ಗುರುಗಳಲ್ಲಿ ಎಂದು ಹೇಳಿದನು—ಆಗ ಅವರು ಆಶ್ಚರ್ಯಪಟ್ಟು—ಇವನ ಚರಿತ್ರೆಯನ್ನೆಲ್ಲಾ ವಿಸ್ತಾರವಾಗಿ ಕೇಳಿ ಮಹಾ ಸಂತೋಷಪಟ್ಟರು. ಒಂದು ಬೊಂಬೆಯಲ್ಲಿ ಈ ವಿಧವಾದ ಭಕ್ತಿಯಿಟ್ಟುಕೊಂಡು ವಿದ್ಯಾವಂತನಾದುದು ಆಶ್ಚರ್ಯ, ಇದಕ್ಕೆ ಭಕ್ತಿಯೇ ಮುಖ್ಯವಾದುದು ಎಂದು ತಿಳಿದು ಅಯ್ಯಾ-ಏಕಲವ್ಯನೇ ಗುರುಗಳಿಗಾಗಿ ಏನು ದಕ್ಷಿಣೆಯನ್ನು ಕೊಡುವೆ ಎಂದು ಕೇಳಿದರು? ಆಗ ಅವನು-ಹೇಳಿದುದೇನೆಂದರೆ—ನನ್ನಲ್ಲಿರುವ ವಸ್ತುಗಳಲ್ಲಿ ಗುರುಗಳು ಯಾವುದನ್ನು ಕೇಳುವರೋ ಅದನ್ನು ಕೊಡಲು ಸಿದ್ಧನಾಗಿದ್ದೇನೆ-ಎಂದು ಹೇಳಿದನು. ದ್ರೋಣಾಚಾರ್ಯರು, ಅಯ್ಯಾ ಶಿಷ್ಯನೇ ನಿನ್ನ ಬಲಗೈಯ್ಯ ಹೆಬ್ಬೆರಳನು ಕತ್ತರಿಸಿಕೊಡು ಎಂದು ಕೇಳಿದರು. ಆಗ ಮಹಾ ಸಂತೋಷದೊಡನೆ ಕೂಡಲೆ ತನ್ನ ಬೆರಳನ್ನು ಕತ್ತರಿಸಲು ಸಿದ್ಧನಾದನು. ಈ ರೀತಿ ಗುರುಭಕ್ತಿಯಿಡುವುದು ಮುಖ್ಯ.

V. Bhistappa.

ಗಣಿತ.

ಬೋಧನಾಕ್ರಮ:— ಕನ್ನಡ I ನೇ ತರಗತಿ.

ವಿಷಯಗಳು.	ಬೋಧನಾಕ್ರಮ:—(ಭಾಗಾಕಾರ.)
ಭಾಗಾಕಾರ ವೆಂಬುದರ ವಿವರಣೆ.—	(ಈ ರೀತಿ ಹೇಳುವುದು.) ಒಂದು ಸಂಖ್ಯೆಯಲ್ಲಿ—ಅದಕ್ಕೆ ಸರಿಯಾದ ಅಥವಾ ಅದಕ್ಕಿಂತ ಚಿಕ್ಕದಾದ ಮತ್ತೊಂದು ಸಂಖ್ಯೆಯನ್ನು ಎಷ್ಟು ಸಾರಿ ಕಳೆಯಬಹುದು; ಎಂಬುದಕ್ಕೆ ಭಾಗಾಕಾರವೆಂದು. ಈಗ ನಿದರ್ಶನವಾಗಿ ಬೋರ್ಡಿನಲ್ಲಿ ಬರೆದು ತೋರಿಸುವುದು- 8 ಎಂಬುವದು ಒಂದು ಸಂಖ್ಯೆ. ಅದಕ್ಕಿಂತ ಚಿಕ್ಕದಾದ 2 ಎಂಬುದನ್ನು 8 ರಲ್ಲಿ ಎಷ್ಟು ಸಾರಿ ಕಳೆಯಬಹುದು.
ನಿದರ್ಶನರೂಪ:—	ಬೋರ್ಡಿನಲ್ಲಿ ಬರೆದು ತೋರಿಸುವುದು:— 8 ಇದು ಒಂದು ಸಂಖ್ಯೆ. 2 I ನೇ ಸಾರಿ. — 6 2 II ನೇ ಸಾರಿ. — 4 2 III ನೇ ಸಾರಿ. — 2 2 IV ನೇ ಸಾರಿ. — ಈಗ 4 ಸಾರಿ ಕಳೆಯಬಹುದು ಎಂದು ಗೊತ್ತಾಗಬಹುದು.
ಸಂಕ್ಷೇಪರೂಪ:—	8 ರಲ್ಲಿ 2 ನ್ನು 4 ಸಾರಿ ಕಳೆಯಬಹುದು. ನಿದರ್ಶನಕ್ಕಾಗಿ ಬಾಲ ಫ್ರೇಮನ್ನು ಹಿಡಿದು ಎರಡೆರಡು ಗುಂಡುಗಳನ್ನು ತೆಗೆದು ತೋರಿಸುವುದು. ಕಳೆಯುವದರ ಸಂಕ್ಷೇಪರೂಪವೇ ಭಾಗಾಕಾರ ವೆಂಬುದನ್ನು ಹುಡುಗರಿಂದಲೇ ಹೇಳಿಸುವುದು. ಬಾಯಿ (Mental) ಲೆಖಗಳು.
ಮಾದರಿ ಲೆಖ್ಖಗಳು:-	10 ರಲ್ಲಿ 2 ಎಷ್ಟು ಸಾರಿ ಇದೆ? 9 ರಲ್ಲಿ 3 ಎಷ್ಟು ಸಾರಿ ಇದೆ?

ವಿಷಯಗಳು.	ಬೋಧನಾಕ್ರಮ: —(ಭಾಗಾಕಾರ)
	6 ರಲ್ಲಿ 2 ಎಷ್ಟು ಸಾರಿ ಇದೆ? 12 ರಲ್ಲಿ 4 ... ... ?
ಮಾದರಿ ಲೆಖ್ಖಗಳನ್ನು ಕೇಳುವುದು.—	16 ರಲ್ಲಿ 4 ನ್ನು ಎಷ್ಟು ಸಾರಿ ಕಳೆಯಬಹುದು? 20 ರಲ್ಲಿ 5 ನ್ನು .. ...
ಭಾಗಾಕಾರವೆಂದರೇನು ?	ಕೊಡಲ್ಪಟ್ಟ ಸಂಖ್ಯೆಗಳಲ್ಲಿ ಹೇಳಿದಷ್ಟು ಸಮಭಾಗಗಳನ್ನು ಮಾಡಿದರೆ ಒಂದು ಭಾಗವು ಎಷ್ಟು ಆಗುತ್ತದೆ ಎಂಬುದನ್ನು ತಿಳಿಸುವುದೇ.
ನಿದರ್ಶನ ಮಾಡಿ ತೋರಿಸುವುದು.—	ಬಾಲಪ್ರೇಮ'ನಲ್ಲಾಗಲಿ ಅಥವಾ ಕಿಂಡರ'ಗಾರ್ಟೆನ 3 ನೇ ಕರಣ ಘನದಲ್ಲಾಗಲೀ ಭಾಗಗಳನ್ನು ಮಾಡಿ ತಿಳಿಸುವುದು— 2 ಭಾಗ. 4 ಭಾಗ. ಪುನಃ 8 ನ್ನು 2 ಭಾಗ ಮಾಡು ಎಂದು ಪ್ರಶ್ನೆಮಾಡುವಿಕೆ. 6 ನ್ನು 3 ಭಾಗ. 4 ÷ 2 ಭಾಗ.
ಸಂಜ್ಞೆಗಳು.— ಭಾಜ್ಯ, ಭಾಜಕ.	ಒಂದು — ಅಡ್ಡ ಗೆರೆಯನ್ನೆಳೆದು ಮೇಲೊಂದು ಕೆಳಗೊಂದು ಸೊನ್ನೆಯನ್ನು ಬರೆದರೆ 8÷2 ಎಂಟನ್ನು 2 ರಿಂದ ಭಾಗಿಸು ಎಂದು ತಿಳಿಸುವುದು. ಭಾಜ್ಯ. ಭಾಜಕ. ಭಾಗಲಬ್ಧ—ಇವುಗಳನ್ನು ಒಂದುಸಾರಿ ಹೇಳುವುದು. (ಉಚ್ಚರಿಸುವಂತೆ ಮಾಡಿ). ನಂತರ, ಭಾಗಾಕಾರದಲ್ಲಿ ಕಳೆಸಿಕೊಳ್ಳುವ ಸಂಖ್ಯೆಗೆ—ಭಾಜ್ಯವೆಂದೂ. ಕಳೆಯುವ ಸಂಖ್ಯೆಗೆ ಭಾಜಕವೆಂದು ಹೇಳುವರು. ಬರುವ ಉತ್ತರವು-ಭಾಗಲಬ್ಧ.
ಬರೆಯುವ ಕ್ರಮ—	ಬೋರ್ಡಿನಲ್ಲಿ ಸುಣ್ಣದಿಂದ ಈ ಕೆಳಗೆ ಕಂಡಂತೆ—ಬೋರ್ಡಿನಲ್ಲಿ ಬರೆದು ತೋರಿಸುವುದು.
(ಹೇಳುವಾಗ)—	12÷4. ಹನ್ನೆರಡನ್ನು 4 ರಿಂದ ಭಾಗಿಸು. ಹನ್ನೆರಡು ಭಾಜ್ಯ÷4 ಭಾಜಕ. ಹೀಗೆ ಬರೆಯುವುದು. ಅಥವಾ. ಮೊದಲು ಭಾಜಕವನ್ನೂ ನಂತರ ಭಾಜ್ಯವನ್ನೂ ಅದರ ಭಾಗದಲ್ಲಿ ಲಬ್ಧವನ್ನೂ
ಮಾಡುವಾಗ ಬರೆಯುವಕ್ರಮ.—	ಭಾಜಕ) ಭಾಜ್ಯ (ಭಾಗಲಬ್ಧ. 4) 12 (3 ಉತ್ತರ. 12 ——

ವಿಷಯಗಳು.	ಬೋಧನಾಕ್ರಮ:—

4. ಉತ್ತರ

I. 6)24
24
———

II. 7
8)56
56
———

40 ಉ.
6)240
24
———
0

70 ಉ.
8)560
56
———
0

ಮಾಡುವಕ್ರಮ—

1412 = ಉತ್ತರ
4 | 5648
4000 = 4 × 1000
1600 = 4 × 400
40 = 4 × 10
8 = 4 × 2
5648 = 4 × 1412.

ಹನ್ನೆರಡರಲ್ಲಿ 4 ಎಷ್ಟುಸಾರಿ ಹೋಗುವುದೆಂಬ ಬಗ್ಗೆ ಕೂಡಿಸಿಕೊಂಡು ಅಂದರೆ 4 ರ ಮಗ್ಗಿಯಲ್ಲಿ 12 ಕ್ಕಿಂತ ಚಿಕ್ಕದಾಗಿ ದೊಡ್ಡ ಸಂಖ್ಯೆ ಬರುವವರಿಗೆ ಹೇಳಿಕೊಂಡು ಅದನ್ನು ಕಳೆಯುವುದು.

ಮಾದರಿಗಾಗಿ.

24 ÷ 6   42 ÷ 7
21 ÷ 7   36 ÷ 9
18 ÷ 3   96 ÷ 8
27 ÷ 9   99 ÷ 3
(5) 56 ÷ 8

ಮೊದಲು ಮೊದಲು 2 ಅಂಕೆಯ ಭಾಜ್ಯಗಳನ್ನು ಆಮೇಲೆ 3 ಅಂಕೆಯ ಭಾಜ್ಯಗಳನ್ನು ಭಾಗಿಸುವಂತೆ ಚೆನ್ನಾಗಿ ಅಭ್ಯಾಸ ಮಾಡಿಸಿ.

ಬೋರ್ಡಿನಮೇಲೆ ಈ ರೀತಿ ಬರೆದು ತೋರಿಸುವುದು — ಮತ್ತು ವಿವರಣೆಯಿಂದ ತಿಳಿಸುವುದು.—

5649 ÷ 4 ಇದನ್ನು ಮಾಡೋಣ.

ಈ ರೀತಿಯಲ್ಲಿ ಬರೆದುಕೊಂಡು—

ಸಾ. ಶ. ದ. ಏ.   ಸಾ. ಶ. ದ. ಏ.
4) 5 6 4 8 (1 4 1 2
4
———

ಭಾಗಾಕಾರವನ್ನು ಬಲಭಾಗದಿಂದ ಮಾಡುವುದು ಕಷ್ಟ- ದಾಹಂ, ಶತಂ ಸ್ಥಾನಗಳು ಹೆಚ್ಚಿದ ಹಾಗೆಲ್ಲ ಬೆಲೆಯನು ಸಮಮಾಡಿಕೊಳ್ಳುವುದು ಶ್ರಮವಾಗುವುದು — ಆದುದರಿಂದ ಎಡಗಡೆಯಿಂದ ಪ್ರಾರಂಭಿಸಬೇಕು. ಈಗ ಸಾವಿರಸ್ಥಾನದಲ್ಲಿ 5 ಇದೆ. ಇದರಲ್ಲಿ 4 ಒಂದು ಸಾರಿ ಹೋಗುವುದು — ವಜಾ ಜಾತಾ, 16 ನ್ನು ತೆಗೆದುಕೊಂಡರೆ—16 ನೂರುಗಳಾದವು. 4ರಿಂದ 4 ಸಾರಿ ಹೋಯಿತು. ಬಾಕಿ ಉಳಿಯಲಿಲ್ಲ. ದಾಹಂ ಸ್ಥಾನದಲ್ಲಿರುವ 4 ರಲ್ಲಿ 4 ಒಂದುಸಾರಿ ಹೋಗುವುದು. ಬಾಕಿ ಉಳಿಯಲಿಲ್ಲ. ಏಕಂ ಸ್ಥಾನದ 9 ರಲ್ಲಿ 4 ಎರಡುಸಾರಿ ಹೋಗುವುದಾಗಿದೆ. ಬಾಕಿ ಉಳಿಯಲಿಲ್ಲ. ಒಂದೊಂದುವೇಳೆ ಬಾಕಿ ಉಳಿಯುವುದೂ ಉಂಟು. ಅದು ಭಾಜಕವಾದ 4 ಕ್ಕಿಂತಲೂ ಕಡಿಮೆ ಯಾಗಿಯೇ ಇರಬೇಕು.

78535 ÷ 5. ಇದನ್ನು ಮಾಡಿದಮೇಲೆ ಮುಂದಿನದಿವಸ ಇದಕ್ಕಿಂತ ಹೆಚ್ಚಾದ ವಿಷಯಗಳನ್ನು ತಿಳಿಸುತ್ತೇವೆಂದು ಹೇಳಿ ಬಿಟ್ಟುಬಿಡುವುದು.

ಕ್ಷೇತ್ರಗಣಿತ.

(1) 7 ಗಜ ಅಗಲವುಳ ವರ್ತುಳಾಕಾರದ ಕಣಜದ ತಳಕ್ಕೆ $1\frac{1}{2}$ ಅಡಿ ಉದ್ದ 1 ಅಡಿ ಅಗಲವುಳ್ಳ ಕಲ್ಲುಗಳನ್ನು ಹಾಕಿ ದಮ್ಮಾಸ್ ಮಾಡಲು ಎಷ್ಟು ಕಲ್ಲುಗಳು ಬೇಕು?

ರೀತಿ:—ಕಣಜದ ಅಗಲವೇ ವರ್ತುಳದ ವ್ಯಾಸ.

∴ ವರ್ತುಳದ ಕ್ಷೇತ್ರ = ವ್ಯಾಸ $2\times\frac{11}{14}$

∴ $= \frac{7\times7\times11}{14}$ ಚ. ಗಜ.

ಕಲ್ಲುಗಳ ಚದರ = ಉ × ಅ.

∴ $= 1\frac{1}{2}\times1=\frac{3}{2}$ ಚ. ಅಡಿ.

ಬೇಕಾದ ಕಲ್ಲುಗಳು = $\frac{\text{ವರ್ತುಳದ ಚದರ}}{\text{ಕಲ್ಲಿನ ಚದರ}}$

∴ $= \frac{7\times11\times9}{2}\div\frac{3}{2}=231$

(2) ಕಂಸಾಕಾರವಾದ ಸೇತುವೆಯು ಕಮಾನಿನ ತಳದ ಅಗಲ 10 ಅಡಿ, ಎತ್ತರ 6 ಅಡಿ ಆದರೆ ವರ್ತುಳದ ತ್ರಿಜ್ಯವೆಷ್ಟು?

ರೀತಿ:—ಕಮಾನಿನ ತಳದಗಲವೇ—ಜಾ

ಡಿ—ಎತ್ತರವೇ—ಶರ

∴ ವರ್ತುಳದ ತ್ರಿಜ್ಯವು ಬರುವುದು ಹೇಗೆಂದರೆ:—

$$\frac{(\text{ಶರ}\times\text{ಶರ}\times4)+(\text{ಜಾ}\times\text{ಜಾ})}{\text{ಶರ}\times8}$$

∴ ತ್ರಿಜ್ಯ $= \frac{(6\times6\times4)+(10\times10)}{6\times8}$

∴ $= \frac{144+100}{48}=\frac{244}{48}$

ತ್ರಿಜ್ಯ = 5 ಅಡಿ, 1 ಅಂಗುಲ.

(3) 8 ಚದರಅಡಿ ಸ್ಥಳವನ್ನು 72 ಚದರಭಾಗಗಳಾಗಿ ವಿಂಗಡಿಸಿದರೆ ಪ್ರತಿಯೊಂದು ಭಾಗದ ಬಾಹುವಿನ ಉದ್ದವೆಷ್ಟು?

ರೀತಿ:—1 ಚದರ ಅಡಿಗಳಿಗೆ 144 ಚದರಂಗುಲಗಳು.

8 ... 144×8 ... ..

ಇದನ್ನು 72 ಚದರ ಭಾಗಗಳಾಗಿ ವಿಂಗಡಿಸಬೇಕು.

∴ 72 ಚ. ಭಾಗಗಳಿಗೆ 144×8 ಚದರಂಗುಲ.

$$1 \quad \ldots \quad \frac{144 \times 8}{7} = 16$$

ಪ್ರತಿಭಾಗದ ಚದರವು 16 ಚದರಂಗುಲ.

ಆದ್ದರಿಂದ 1 ಬಾಹು $\sqrt{\text{ಚದರ}}$

∴ ... $\sqrt{16} = 4$ ಅಂಗುಲ.

(A) 1 ಚದರಅಡಿ ಸ್ಥಳವನ್ನು 16 ಚದರ ಭಾಗಗಳಾಗಿ ಮಾಡಿ ಅದರೊಂದು ಬಾಹುವಿನ ಅಳತೆಯನ್ನು ಹೇಳು?

(4) 1 ಮಣೆಯು ಅದರ ಅಗಲದ 4 ರಷ್ಟು ಉದ್ದವಾಗಿದೆ. ಅದರ ಬೆಲೆ 1 ರೂ. 8 ಆ. 9 ಪೈ. ಆಗುತ್ತದೆ. ಚದರ ಅಡಿ 1 ಕ್ಕೆ 11 ಆಣೆ ಮೇರೆ ಆದರೆ ಮಣೆಯ ಉದ್ದ ಮತ್ತು ಅಗಲವೆಷ್ಟು?

ರೀತಿ:—11 ಆಣೆಗೆ 1 ಚದರ ಅಡಿ.

1 ರೂ. 8 ಆ. 9 ಪೈಗೆ $\frac{1 \times 99}{11 \times 4} = \frac{9}{4}$ ಚ. ಅಡಿ.

ಮಣೆಯ ಚದರ $\frac{9}{4}$ ಚ. ಅಡಿ ಅಥವಾ $\frac{9}{4} \times 144 = 9 \times 36$ ಚ. ಅಂಗುಲ

ಉಳ್ಳ ಅಗಲಗಳ ಪ್ರಮಾಣ $= 4 : 1$ ಆದ್ದರಿಂದ $9 \times 9 \times 4$ ರಲ್ಲಿ ಈ ಪ್ರಮಾಣವನ್ನು ತೆಗೆದರೆ ಆಯಿತು.

ಉದ್ದ 36 ಅಂಗುಲ. ಅಗಲ 9 ಅಂಗುಲ.

(5) ಒಂದು ಮುಚ್ಚಳವಿಲ್ಲದ ಪೆಟ್ಟಿಗೆಯ ಹೊರಗಿನ ಉದ್ದ 6 ಅಡಿ. ಅಗಲ $2\frac{1}{2}$ ಅಡಿ. ಎತ್ತರ $1\frac{3}{4}$ ಅಡಿ. ಹಲಗೆಗಳು $\frac{1}{2}$ ಅಂಗುಲ ದಪ್ಪವಾಗಿವೆ. ಪೆಟ್ಟಿಗೆಯ ಘನಫಲವೆಷ್ಟು?

ರೀತಿ:—1 ನೇದು, ಹೊರಗಿನ ಅಳತೆಯಲ್ಲಿ ಒಳಗಿನ ಅಳತೆಯನ್ನು ಕಳೆ—

2 ನೇದು, ಪ್ರತಿಹಲಗೆಗಳ ಘನಗಳನ್ನೂ ಕಂಡುಹಿಡಿದು ಕೂಡಿಸು.

ವಿವಿಧ ಲೆಖ್ಖಗಳು.

(1) $3\frac{1}{2}$ ಗಜ ಅಗಲದ ಒಂದು ವರ್ತುಳಾಕಾರವಾದ ಪಣತದ ತಳಕ್ಕೆ 2 ಅಡಿ ಉದ್ದ $1\frac{3}{4}$ ಅಡಿ ಅಗಲದ ಎಷ್ಟು ಕಲ್ಲುಗಳು ಬೇಕಾಗುವುವು?

(ಷರಾ) $\frac{3}{4}$ ಕಲ್ಲಿನಷ್ಟು ಸ್ಥಳ ಖಾಲಿ ಇರಲಿ!

(2) ಕಂಸಾಕಾರವಾದ ಸೇತುವೆಯು ತಳದಗಲ 12 ಗಜ. ಪರಮಾವಧಿ ಅಂತರ 3 ಗಜ. ಈ ವರ್ತುಳದ ವ್ಯಾಸವೆಷ್ಟಿರುವುದು?

(3) 18 ಚದರಗಜ ಸ್ಥಳವನ್ನು 2 ಚದರಭಾಗಗಳಾಗಿ ಭಾಗಿಸಲು ಅದರೊಂದು ಬಾಹುವೆಷ್ಟಿರುತ್ತೆ?

ಒಂದೊಂದು ಭಾಗದ ವಿಸ್ತಾರದಷ್ಟು ವಿಸ್ತಾರವಿದ್ದು 1 : 3 ಅಗಲ ಉದ್ದ ಉಳ್ಳ ಆಯತದ ಸುತ್ತಳತೆ ಎಷ್ಟು?

(4) 3 ನೇ ಬಾಹುವಿನ $1\frac{2}{5}$ ರಷ್ಟು 1 ಸಮಬಾಹುವಿನ ಅಳತೆಯಾಗಿದೆ. ಇಂತಹ 1 ಸಮದ್ವಿಬಾಹು ತ್ರಿಭುಜದ ಸುತ್ತಳತೆ 29 ಗಜವಾಗಿದ್ದರೆ ಇದರ ಕ್ಷೇತ್ರ ಫಲದಳತೆ ಎಷ್ಟು?

(ಟಿಪ್ಪಣಿ) ಉತ್ತರ 3 ದಶಮಾಂಶಗಳವರೆಗೆ ಇರಬೇಕು.

(5) ಶಂಕುವೆಂದರೇನು?

ಒಂದು ಶಂಕುವಿನ ಕ್ಷೇತ್ರಫಲವನ್ನೂ ಘನಫಲವನ್ನೂ ಕಂಡುಹಿಡಿಯುವುದು ಹೇಗೆ?

(6) ಸಿಲಿಂದರವೆಂದರೇನು?

ಒಂದು ಸಿಲಿಂದರದ ಬುಡದ (ಅಂಚಿನ) ಪರಿಧಿ 8 ಗಜ. ಎತ್ತರ 9 ಗಜ ಆದರೆ ಆದರ ಘನಫಲವೆಷ್ಟು?

B. Ananthachar.

II ಜಪಾನೀಯರ ವ್ಯಾಯಾಮವಿದ್ಯೆ.

:0:

ಜುಜುತ್ಸು ಬರೀ ಸಾಮುಗಳನ್ನೂ ಕುಸ್ತೀವರಸೆಗಳನ್ನೂ ಮಾತ್ರ ತಿಳಿಸುವಂಥಾ ವಿದ್ಯೆಯೆಂದು ಭಾವಿಸಕೂಡದು. ಇವುಗಳನ್ನಲ್ಲದೆ ಅದು ಇನ್ನೂ ಅನೇಕ ವಿಷಯುಗಳನ್ನು ಬೋಧಿಸುತ್ತದೆ. ತಥ್ಯಜೀವನವಿದ್ಯೆಯೆಂದು ಅದನ್ನು ಕರೆಯಬಹುದು. ಈ ಹೆಸರು ಅದಕ್ಕೆ ಚೆನ್ನಾಗಿ ಒಪ್ಪುತ್ತದೆ. ಶರೀರರಚನೆ, ಶರೀರಕಾರ್ಯ, ಆರೋಗ್ಯ, ಜನಚಿಕಿತ್ಸೆ—ಇವೇ ಮೊದಲಾದ ತಥ್ಯಜೀವನಕ್ಕೆ ಉಪಯುಕ್ತವಾದ ವಿಷಯುಗಳನ್ನೆಲ್ಲಾ ಆದು ಸೂಚಿಸುತ್ತದೆ. ಅಂಗಸಾಧನೆಗಳು ಕುಸ್ತಿಗಳು ಶತ್ರುಗಳ ಮೇಲೆ ಬಿದ್ದು ಅವರನ್ನು ನಿಗ್ರಹಿಸುವ ಉಪಾಯುಗಳಲ್ಲದೆ, ಶಾಂತಗುಣ, ಒಳ್ಳೆಯ ಆಹಾರ, ನಿರ್ಮಲವಾದ ನೀರು, ಶುಚಿಯಾದ ಗಾಳಿ, ಕ್ರಮವಾದ ನಿದ್ರೆ ಇವೇ ಮುಂತಾದ ಪೂರ್ಣಾರೋಗ್ಯಕ್ಕೂ ಬಲಕ್ಕೂ ಸಹನಶೀಲತೆಗೂ ಮಹಾ ಪ್ರಯೋಜನಕರವಾದ ವಿಷಯುಗಳನ್ನೆಲ್ಲಾ ಜುಜುತ್ಸು ವಿದ್ಯೆಯು ಒಳಕೊಂಡಿರುವುದು. ಈ ವಿಷಯುಗಳಲ್ಲಿ ಪ್ರತಿಯೊಂದೂ ಈಗ ಇಲ್ಲಿ ಸಂಕ್ಷೇಪವಾಗಿ ಸೂಚಿಸಲ್ಪಡುವುದು.

ಶಾಂತಗುಣ.

ಪೂರ್ಣಾರೋಗ್ಯವನ್ನು ಹೊಂದಲಿಕ್ಕೂ ಜುಜುತ್ಸು ಕೆಲಸಕ್ಕೂ ಮನುಷ್ಯರ ಕ್ಷೇಮಕ್ಕಾಗಿ ಮಾಡಬೇಕಾದ ಸಕಲ ಕಾರ್ಯಗಳ ನೆರವೇರಿಕೆಗೂ ಶಾಂತಗುಣವು ಅತ್ಯಾವಶ್ಯಕವೆಂದು ಜಪಾನೀಯರು ಯೋಚಿಸಿರುವರು. ಶಾಂತಸ್ವಭಾವವೂ ಸೌಜನ್ಯವೂ ವಿನಯವೂ ಸೌಹಾರ್ದ್ಯವೂ ಮರ್ಯಾದೆಯೂ ಮೂರ್ತಿಗೊಳಿಸಿ ಜಪಾನೀ ಶಿಶುವು ಹುಟ್ಟುವುದೋ ಎಂಬಂತೆ ತೋರುತ್ತದೆ. ಮಗುವು ಬೆಳೆಯುತ್ತಾ ಬಂದಹಾಗೆಲ್ಲಾ ಈ ಸುಗುಣಗಳೂ ಅಭಿವೃದ್ಧಿಹೊಂದುತ್ತಾ ಬರುತ್ತವೆ. ಈ ಪ್ರಪಂಚದ ಜನರಲ್ಲೆಲ್ಲಾ ಜಪಾನಿಯರು ಬಹು ದಯಾಳುಗಳೆಂದೂ ಮರ್ಯಾದೆಯುಳ್ಳವರೆಂದೂ ವಿನಯಶಾಂತಿಮುಂತಾದ ಸುಗುಣವುಳ್ಳವರೆಂದೂ ಅನೇಕ ಜನಾಂಗದವರು ಅಭಿಪ್ರಾಯಪಟ್ಟಿರುವರು. ಆದುದರಿಂದ ಸ್ವದೇಶೀಯರು ಜುಜುತ್ಸುವನ್ನು ಕಲಿಯಬೇಕೆಂಬ ಉದ್ದೇಶದಿಂದ ಗರಡಿಗೆ ಬಂದಾಗ ಅಲ್ಲಿಯ ಯಜಮಾನನು ಒಳ್ಳೆ ನಡತೆಯುಳ್ಳವರೆಂದು ಯೋಗ್ಯತಾಪತ್ರವನ್ನು ತರಬೇಕೆಂದು ಅವರನ್ನು ಕೇಳುವುದಿಲ್ಲ. ಆದರೆ ಅನ್ಯದೇಶೀಯರು ಯಾರಾದರೂ ಬಂದರೆ ಅವರು ತಮ್ಮ ನಡತೆಯ ವಿಷಯದಲ್ಲಿ ಸಿಫಾರಸನ್ನು ತರುವುದು ಆವಶ್ಯಕವಾಗಿರುವುದು. ಯಾವಾಗಲಾದರೂ ಯಾರಾದರೂ ಕೋಪ ಮುಂತಾದ ದುರ್ಗುಣಗಳನ್ನು ತೋರ್ಪಡಿಸಿದರೆ, ಅವರನ್ನು ಕೂಡಲೇ ಗರಡಿಯಿಂದ ಹೊರಡಿಸಿಬಿಡುವರು. ಯಾಕೆಂದರೆ ಜುಜುತ್ಸುವನ್ನು ದುಷ್ಟರಿಗೆ ಹೇಳಿಕೊಡುವುದರಿಂದ ಜನರಿಗೆ ಬಹಳ ಅಪಾಯಕ್ಕೆ ಕಾರಣವಾಗುವುದು. ಅದರಲ್ಲಿ ಮಹಾಘಾತವನ್ನುಂಟುಮಾಡಬಹುದಾದ ಪಟ್ಟುಗಳೂ ಪ್ರಾಣಾಪಹಾರಿಗ

ಳಾದ ವರಸೆಗಳೂ ಅನೇಕವಾಗಿರುವುವು. ಅವು ದುಷ್ಟರಿಗೆ ಗೊತ್ತಿದ್ದರೆ, ಜನರ ನೆಮ್ಮದಿಗೆ ಭಂಗವುಂಟಾಗದೇ ಇರಲಾರದು.

ಆಹಾರ.

ಆರೋಗ್ಯವಾದ ಹೊಟ್ಟೆಯು ಬಲಕ್ಕೆಲ್ಲಾ ಅಸ್ತಿವಾರಪ್ರಾಯವಾಗಿರುವುದೆಂದು ಜಪಾನೀಯರು ಭಾವಿಸಿರುವರು. ಜೀರ್ಣಶಕ್ತಿಯು ಯಾವನಿಗೆ ಚೆನ್ನಾಗಿರುವುದೋ ಅವನು ಬಲಿಷ್ಠನಾಗಿರಲು ಅರ್ಹನಾಗುವನು. ಅಗ್ನಿಮಾಂದ್ಯವುಳ್ಳವನು ಪ್ರಾಯಿಕವಾಗಿ ದುರ್ಬಲನಾಗಿಯೇ ಇರುವನು. ದೋಷಗಳನ್ನು ಪ್ರಕೋಪಿಸದ ಸಾತ್ವಿಕಾಹಾರವನ್ನೇ ಪುರಾತನಸಾಮುರಾಯಿಗಳು ಭೋಜನಮಾಡುತ್ತಿದ್ದರೆಂದು ತಿಳಿದುಬಂದಿದೆ. ಅವರು ಮದ್ಯಮಾಂಸವ್ಯಂಜನಗಳನ್ನು ಮುಟ್ಟುತ್ತಿರಲಿಲ್ಲ. ಅಪೂರ್ವವಾಗಿ ಅವರು ಅತಿ ಸ್ವಲ್ಪವಾಗಿ ಸೌಮ್ಯವಾದ ಸಾಕೆ ಎಂಬ ಅಕ್ಕಿಯಿಂದ ಮಾಡಲ್ಪಟ್ಟ ಸುರೆಯನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಅದರಲ್ಲಿ ಮದ್ಯಸಾರವು ಬಹಳ ಕಡಿಮೆಯಾಗಿತ್ತು. ಅದು ಮಾದಕವಾಗಿರಲಿಲ್ಲ. ಈ ಹಿರಿಯರ ಮಾರ್ಗವನ್ನೇ ಅನುಸರಿಸಿ ಈಗಿನ ಜಪಾನೀಯರೂ ಸಾತ್ವಿಕ ಆಹಾರವನ್ನೇ ತಿನ್ನುವರು.

ಜಪಾನ್‌ದೇಶದ ಆಹಾರಪದಾರ್ಥಗಳಲ್ಲಿ ಅಕ್ಕಿಯು ಮುಖ್ಯವಾದುದು. ಅದನ್ನು ನೀರಿನಲ್ಲಿ ಕುದಿಸಿಯಾಗಲೀ ಹಬೆಯಲ್ಲಿ ಕುಚ್ಚಿಯಾಗಲೀ ಅನ್ನವನ್ನು ಮಾಡಿ ತಿನ್ನುವರು. ಅಕ್ಕಿಯನ್ನು ಚೀಲದಲ್ಲಿ ಹಾಕಿ ಮರಳುವ ನೀರಿನಲ್ಲಿ ಅದ್ದಿ ಅನ್ನವನ್ನು ಮಾಡುವ ಪದ್ಧತಿಯೂ ಉಂಟು. ಅಕ್ಕಿಯಹಿಟ್ಟಿನಿಂದ ರೊಟ್ಟಿ ಹೋಳಿಗೆಗಳನ್ನೂ ಮಾಡುವರು. ವ್ಯಂಜನಗಳಿಲ್ಲದೆ ಬರೀ ಅನ್ನವನ್ನು ತಿನ್ನುವರು. ಅನ್ನವು ಬಹಳ ರುಚಿಯಾದುದು. ಮಿಕ್ಕ ಪಧಾರ್ಥಗಳಿಗಿಂತ ಆರೋಗ್ಯಕರವೆಂದೂ ಹೆಚ್ಚು ಬಲವನ್ನೂ ಚಟುವಟಿಕೆಯನ್ನೂ ಉಂಟುಮಾಡುವಂಥಾದ್ದೆಂದೂ ಹೇಳುವರು. ಸ್ವಲ್ಪವೂ ದುರ್ಬಲವನ್ನು ಕೊಡದೆ ಅದು ಬಹಳ ಸಹನಶೀಲತೆಯನ್ನುಂಟುಮಾಡುವುದೆಂದು ಹೇಳುವರು. ಅಕ್ಕಿಯನ್ನು ಬಿಟ್ಟರೆ, ತರಕಾರಿಗಳೂ ಹಣ್ಣುಗಳೂ ಜಪಾನೀಯರಿಗೆ ಎರಡನೆಯ ಮುಖ್ಯ ಆಹಾರಪದಾರ್ಥಗಳಾಗಿರುವುವು: ಹಾಲು ಮೊಸರು ಮಜ್ಜಿಗೆ ಬೆಣ್ಣೆ ತುಪ್ಪಗಳನ್ನು ಅವರು ಉಪಯೋಗಿಸುವುದಿಲ್ಲ. ಅನೇಕರು ಮೊಟ್ಟೆ ಮೀನುಗಳನ್ನು ತಿನ್ನುವರು. ಟೀಯನ್ನೂ ಕುಡಿಯುವರು. ಆದರೆ ಟೀ ಕಷಾಯಕ್ಕೆ ಹಾಲನ್ನೂ ಸಕ್ಕರೆಯನ್ನೂ ಬೆರೆಸುವುದಿಲ್ಲ. ಅದಕ್ಕೆ ಬೇರೆ ಪದಾರ್ಥಗಳನ್ನು ಸೇರಿಸಿದರೆ, ಆದರ ರುಚಿಯೂ ಸುಗಂಧವೂ ಕೆಟ್ಟುಹೋಗುವುವೆಂದು ಹೇಳುವರು.

(ಸಶೇಷ) S. V.

ಮತ.

ಪ್ರಶ್ನೆ— ಹಿಂದೂಮತವೆಂದರೇನು ?

ಉತ್ತರ—ಹಿಂದೂ ಎಂದು ಇಂಡಿಯಾದೇಶಕ್ಕೆ ಹೆಸರು. ಮತವೆಂದರೆ—ದೇವರ ವಿಷಯವಾದ ನಂಬಿಕೆ. ಹಿಂದೂದೇಶದ ಮತವು ಹಿಂದೂಮತವೆನಿಸುವುದು.

ಪ್ರ—ಹಿಂದೂಮತವು ಒಂದೆ ? ಅಥವಾ ಅನೇಕವೆ ?

ಉ— ಅದು ಒಂದಲ್ಲ ಅನೇಕವಿರುವುದು. ಹಿಂದೂದೇಶದಲ್ಲಿರುವ ಜನಗಳನ್ನು ನೋಡಲಾಗಿ ಅವರ ಹೊರಗಿನ ವೇಷಗಳಲ್ಲಿಯೂ, ದೇವರ ವಿಷಯವಾದ ಆಚರಣೆಗಳಲ್ಲಿಯೂ ಅನೇಕವಿಧವಾಗಿ ಕಾಣುವರು. ಇದರಿಂದ ಅವರನ್ನು ಅನೇಕ ವಿಧವಾದ ಗುಂಪುಗಳಾಗಿ ವಿಂಗಡಿಸಬಹುದು. ಹಿಂದೂದೇಶಕ್ಕೆ ಹೊರಗಣದೇಶದಿಂದ ಬಂದಿರುವ ಮಹಮ್ಮದೀಯರು, ಕ್ರೈಸ್ತರು ಇವರ ವಿಚಾರ ಹಾಗಿರಲಿ. ಈ ಹಿಂದೂದೇಶದಲ್ಲಿ ಸಹಜವಾಗಿರುವ ಜನಗಳಲ್ಲಿಯೇ ಶೈವರು, ವೈಷ್ಣವರು, ಜೈನರು, ವಲ್ಲಭರು ಮೊದಲಾಗಿ ಹಲವು ಪಂಗಡ ಗಳಿರುವವು.

ಪ್ರ—ಇಷ್ಟು ಭೇದಗಳಿಗೆ ಕಾರಣವೇನು ?

ಉ—ಮತಿಭೇದದಿಂದ ಮತಭೇದವುಂಟಾಯಿತು. ಒಬ್ಬೊಬ್ಬರು ಒಂದೊಂದು ವಿಧವಾಗಿ ನಂಬಿ, ಒಂದೊಂದು ವಿಧವಾಗಿ ಆಚರಿಸುತ್ತಾ ಬಂದುದರಿಂದ ಹಲವು ಗುಂಪುಗಳಾದವು. ಶಿವನೇ ದೇವರೆಂದು ಶೈವರು, ವಿಷ್ಣುವೇ ದೇವ ರೆಂದು ವೈಷ್ಣವರು ಜಿನನೇ ದೇವರೆಂದು ಜೈನರು ಈರೀತಿಯಾಗಿ ಬೇರೆಬೇರೆ ನಂಬುಗೆಗಳಿಂದ ಮತಭೇದವಾಯಿತು.

ಪ್ರ—ಪ್ರಪಂಚಕ್ಕೆಲ್ಲಾ ದೇವರು ಒಬ್ಬನೋ ? ಅನೇಕರೋ ?

ಉ—ದೇವರು ಒಬ್ಬನಲ್ಲದೆ ಅನೇಕರಲ್ಲ—ಸರ್ವಸ್ವತಂತ್ರನೂ, ಸರ್ವಶಕ್ತನೂ, ಸರ್ವ ಜ್ಞನೂ ಆದ ಒಬ್ಬನೇ ದೇವರು. ಹಾಗಲ್ಲದೆ ಅನೇಕ ದೇವರಾಗುವ ಪಕ್ಷ ದಲ್ಲಿ ಅವರಿಗೆ ತಾರತಮ್ಯಗಳುಂಟಾಗಿ ಅವರಲ್ಲಿ ಈ ಪ್ರಪಂಚವನ್ನು ಸೃಷ್ಟಿಸಿ ದವರು ಯಾರು ಎಂಬ ವ್ಯವಸ್ಥೆಯಿಲ್ಲವಾದೀತು.

ಪ್ರ— ಆದರೆ ಪ್ರಪಂಚಕ್ಕೆಲ್ಲಾ ದೇವರು ಒಬ್ಬನೇ ಇರುವಂತೆ ಮತವೂ ಒಂದೇ ಇರಬಹುದಲ್ಲ. ಅದೇಕೆ ಹಾಗಿಲ್ಲ?

ಉ—ನಿಜ. ಒಂದೇ ಮತವಿರುವುದು ಬಹಳ ಮೇಲು. ಆದರೆ ಹಾಗಿರಲು ಆಗು ವದಿಲ್ಲ. ಪ್ರಪಂಚದ ಬೇರೆಬೇರೆ ಭಾಗದಲ್ಲಿ ಬೇರೆಬೇರೆ ಜನಾಂಗವುಂಟಾಗಿ ತಿಳಿವಳಿಕೆ, ಆಚರಣೆ ಮೊದಲಾದವುಗಳಲ್ಲಿ ವ್ಯತ್ಯಾಸಗಳನ್ನು ಹೊಂದಿರುವದೇ

ಸಹಜವಾಗಿರುವದು. ಆದರೆ ಒಂದೇ ಧಾನ್ಯವನ್ನು ಕೆಲವರು ಅಕ್ಕಿ ಎಂದೂ, ಕೆಲವರು ಚಾವಲ್ ಎಂದೂ ಮತ್ತೆ ಕೆಲವರು ರೈಸ್ ಎಂದೂ ಬೇರೆಬೇರೆ ಹೆಸರಿನಿಂದ ಕರೆದರೂ ಎಲ್ಲರಿಗೂ ಆ ಧಾನ್ಯ ಒಂದೇವಿಧವಾಗಿರುವಂತೆ ಬೇರೆಬೇರೆ ಜನರು ಬೇರೆಬೇರೆ ಹೆಸರುಗಳಿಂದ ಕರೆದರೂ ಎಲ್ಲರಿಗೂ ದೇವರು ಒಂದೇವಿಧವಾಗಿ ರಕ್ಷಕನೂ ಶಿಕ್ಷಕನೂ ಆಗಿರುವನು.

ಪ್ರ—ಹಿಂದೂದೇಶದಲ್ಲಿ ಶೈವ ವೈಷ್ಣವಾದಿ ಮತಭೇಧಗಳೂ ಮೇಲಿನಂತೆಯೇನೋ?

ಉ—ಒಬ್ಬನೇ ದೇವರನ್ನು ಶಿವ, ಅಥವಾ ವಿಷ್ಣು ಅಥವಾ ಜಿನ ಎಂಬದಾಗಿ ಕರೆದು ಆಚರಿಸುವ ಪಕ್ಷದಲ್ಲಿ ಮೇಲಿನಂತೆಯೇ ಎನಬಹುದು. ಆದರೆ ಹಾಗಿಲ್ಲ. ಶೈವರು ಶಿವನೇ ದೇವರು ಉಳಿದವರ ಆಚರಣೆಯು ದುಷ್ಟವೆಂತಲೂ, ವೈಷ್ಣವರು ವಿಷ್ಣುವೇ ದೇವರು ತಮಗಲ್ಲದೆ ಉಳಿದವರಿಗೆ ಸದ್ಗತಿಯೇ ಇಲ್ಲವೆಂತಲೂ ಈರೀತಿಯಾಗಿ ಪರಸ್ಪರ ವಿರುದ್ಧವಾದ ವಿವಾದವನ್ನು ಮಾಡುವರು. ಇದು ಕೇವಲವಾಗಿ ತಪ್ಪೇ ಅಲ್ಲದೆ ಬೇರೆ ಅಲ್ಲ. ಇದರಿಂದ ಆಯಾ ಜನಾಂಗಕ್ಕೆ ಕೇವಲ ಕಲಹ ಮಾತ್ರ ಫಲವಲ್ಲದೆ ಇಹದಲ್ಲಿಯೂ ಪರದಲ್ಲಿಯೂ ಶ್ರೇಯಸ್ಸಿಗೆ ಈರೀತಿಯು ಸರಿಯಾದ ದಾರಿಯಲ್ಲವು.

ಪ್ರ—ಈಗಿನ ಸ್ಕೂಲುಗಳಲ್ಲಿ ಓದಲು ಹಲವು ಪಂಗಡದ ಬಾಲಕರು ಬಂದು ಸೇರುತ್ತಾರಲ್ಲವೆ. ಅವರಿಗೆ ಈಗಿನ ಸರಕಾರದ ನಿಯಮದಂತೆ ಮತಬೋಧನೆಯನ್ನು ಹೇಗೆ ನಡೆಸಬೇಕು?

ಉ—ಯದ್ಯಪಿ ಈ ವಿಚಾರವು ಬಹು ಕಷ್ಟವು. ಮತಬೋಧನೆ ಮಾಡುವ ಉಪಾಧ್ಯಾಯರು ತಮ್ಮ ಮತವನ್ನೇ ಹೇಳಿ ಹುಡುಗರ ಮನಸ್ಸನ್ನು ಕೆಡಿಸಿಬಿಟ್ಟರು ಎಂಬ ದೂರಿಗೆ ಒಳಗಾಗಬಹುದು. ಆದುದರಿಂದ ಪೂರ್ವಾಪರವಾಗಿ ವಿಚಾರ ಮಾಡಿ ನೋಡಿದಲ್ಲಿ ಶೈವಾದಿ ಮುಂತಾದ ಒಳಭೇದಗಳ ವಿಷಯವನ್ನೆತ್ತದೆ, ಸರ್ವಸಾಧಾರಣವಾದ ವಿಷಯಗಳನ್ನು ಬೋಧಿಸಬೇಕು.—

ಎಲೈ, ದೇವನೆ, ನೀನೆ ಜಗತ್ತಿಗೆ ಸೃಷ್ಟಿಕರ್ತನು, ರಕ್ಷಕನು, ಶಿಕ್ಷಕನು, ಅಜ್ಞಾನಿಗಳಾದ ನಾವು ಪಾಪಗಳನ್ನು ಆಚರಿಸದಂತೆ ನಮಗೆ ಒಳ್ಳೇ ಜ್ಞಾನವನ್ನುಂಟು ಮಾಡು. ಜಗದೊಡೆಯನೇ,

—ಈರೀತಿ ಬೋಧನೆಯು ಎಲ್ಲರಿಗೂ ಸಮ್ಮತವಾಗಿರುವುದು. ನಮ್ಮ ಪುರಾತನವಾದ ಉಪನಿಷತ್ತುಗಳಲ್ಲಿ ಕೂಡ ಹರಿ, ಶಿವ ಮುಂತಾದ ಒಬ್ಬರ ಹೆಸರನ್ನು ಎತ್ತದೆ ಜಗತ್ತಿನಲ್ಲಿರುವ ಜನಗಳಿಗೆಲ್ಲ ಸಾಧಾರಣವಾಗುವಂತೆ ಭಗವಂತನ ವಿಷಯಗಳು ಹೇಳಲ್ಪಟ್ಟಿರುವವು.

ನಮ್ಮ ಪುಸ್ತಕ ಭಾಂಡಾರವು.

ಈಗ ನಮ್ಮ ದೇಶದ ಅನೇಕ ಸ್ಕೂಲುಗಳಲ್ಲಿ ಮಕ್ಕಳ ವಿದ್ಯಾಭ್ಯಾಸವನ್ನು ಕಿಂಡರ್ ಗಾರ್ಟರ್ನ್ ಕ್ರಮದಲ್ಲಿ ನಡೆಸಲು ಪ್ರಯತ್ನಪಡುತ್ತಿರುವರಷ್ಟೆ. ಈ ಕ್ರಮದಲ್ಲಿ ನಡೆಯುವ ವಿದ್ಯಾಭ್ಯಾಸದಲ್ಲಿ ಕಥೆಗಳು ಬಹು ಮುಖ್ಯಭಾಗವನ್ನು ವಹಿಸಿರುವುವು. ನಮ್ಮ ದೇಶದ ಉಪಾಧ್ಯಾಯರಿಗೆ ಈ ವಿಷಯದಲ್ಲಿ ಸಹಾಯವಾಗುವಂತೆ ನಾರ್ಮಲ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮ॥ ರಾ॥ ಜೆ. ಕೃಷ್ಣಶಾಸ್ತ್ರಿಗಳು "ಕಿಂಡರ್ ಗಾರ್ಟರ್ನ್ ಕಥೆಗಳು" ಎಂಬ ಪುಸ್ತಕವನ್ನು ರಚಿಸಿ ಇದರ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿರುವರು. ಇದನ್ನು ನಾವು ಆದರದಿಂದ ಸ್ವೀಕರಿಸಿರುವೆವು. ಈ ಪುಸ್ತಕದಲ್ಲಿರುವ ಅನೇಕ ಕಥೆಗಳನ್ನು ಇವರು ಪ್ರಸಿದ್ಧವಾದ ಇಂಗ್ಲೀಷ್ ಪುಸ್ತಕಗಳಿಂದ ಸಂಗ್ರಹಿಸಿ ಸಣ್ಣ ಮಕ್ಕಳಿಗೆ ಅನುಕೂಲವಾದ ಸುಲಭವಾದ ಶೈಲಿಯಲ್ಲಿ ಬರೆದಿರುವರು. ನಮ್ಮ ಪುರಾಣೇತಿಹಾಸಗಳಿಂದಲೂ ಇವರು ಕೆಲವು ಕಥೆಗಳನ್ನು ತೆಗೆದುಕೊಂಡು ಮಕ್ಕಳಿಗೆ ಅನುಕೂಲವಾದ ರೀತಿಯಲ್ಲಿ ಬರೆದಿರುವರು. ಈಗ ಕಿಂಡರ್ ಗಾರ್ಟರ್ನ್ ಕ್ರಮದಲ್ಲಿ ನಡೆಯುತಿರುವ ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಕೃತಿವಿಮರ್ಶೆಯು ಬಹು ಮುಖ್ಯಭಾಗವಾಗಿರುವುದಷ್ಟೆ, ಮತ್ತು ಮಕ್ಕಳ ಪಾಠಶಾಲೆಗಳ ಎಲ್ಲ ಪಾಠಗಳನ್ನೂ ಈ ಪಾಠಕ್ಕೆ ಸಂಬಂಧಿಸಲು ಪ್ರಯತ್ನವು ನಡೆಯುತಿರುವುದಷ್ಟೆ. ಇವರು ಬರೆದಿರುವ ಕಥೆಗಳಲ್ಲಿ ಅನೇಕ ಪ್ರಕೃತಿಯ ವಸ್ತುಗಳಿಗೆ ಸಂಬಂಧಪಟ್ಟಿರುವುದರಿಂದ ಈ ಕಥೆಗಳನ್ನು ಪ್ರಕೃತಿವಿಮರ್ಶೆಯ ಪಾಠದೊಡನೆ ಸಂಬಂಧಿಸುವುದು ಬಹು ಸುಲಭವಾಗಿರುವುದು. ಒದೊಂದು ವಸ್ತುವಿನಮೇಲೆ ಅನೇಕ ಕಥೆಗಳಿರುವುವು. ಈ ಕಥೆಗಳು ಆ ವಸ್ತುವಿನ ವಿಷಯವನ್ನು ಮಕ್ಕಳಿಗೆ ಬಹು ಸುಲಭವಾದ ರೀತಿಯಲ್ಲಿ ತಿಳಿಸುವುವು. ಒಂದೊಂದು ವಸ್ತುವಿಗೆ ಸಂಬಂಧಪಟ್ಟ ಕಥೆಗಳ ಆದಿಯಲ್ಲಿ ಆ ವಸ್ತುವಿಷಯಕವಾದ ಒಂದು ಸಣ್ಣ ಪೀಠಿಕೆಯಿರುವುದು. ಇದು ಉಪಾಧ್ಯಾಯರಿಗೆ ಬಹು ಸಹಾಯಕಾರಿಯಾಗಿರುವುದು. ಒಂದು ಕಥೆಯನ್ನೇ ಪಾಠಶಾಲೆಯ ಕೆಲಸಕ್ಕೆಲ್ಲ ಆಧಾರವಾಗಿಟ್ಟುಕೊಂಡು ಉಳಿದ ಪಾಠಗಳನ್ನೂ, ಕೈಕೆಲಸಗಳನ್ನೂ ಅದಕ್ಕೆ ಸಂಬಂಧಿಸುವುದೂ ಉಂಟು. ಈ ವಿಧದಲ್ಲಿ ಪ್ರಯತ್ನಪಡುವ ಉಪಾಧ್ಯಾಯರಿಗೂ ಮ॥ ರಾ॥ ಕೃಷ್ಣಶಾಸ್ತ್ರಿಗಳ ಪುಸ್ತಕದಿಂದ ವಿಶೇಷ ಸಹಾಯವಾಗುವುದು. ಮಕ್ಕಳಿಗೆ ತಮ್ಮಂತಹ ಸಣ್ಣಮಕ್ಕಳಿಗೆ ಸಂಬಂಧಪಟ್ಟ ಕಥೆಗಳನ್ನು ಕೇಳುವುದರಲ್ಲಿ ಬಲು ಇಷ್ಟವಷ್ಟೆ. ಈ ವಿಧವಾದ ಕಥೆಗಳೂ ಈ ಪುಸ್ತಕದಲ್ಲಿ ಕೆಲವಿರುವುವು. ಒಟ್ಟಿನಲ್ಲಿ ಈ ಪುಸ್ತಕದಿಂದ ಪ್ರೈಮರಿ ಸ್ಕೂಲುಗಳ ಉಪಾಧ್ಯಾಯರಿಗೆ ವಿಶೇಷ ಸಹಾಯವಾಗುವುದೆಂದು ನಾವು ಧಾರಾಳವಾಗಿ ಹೇಳುವೆವು. ಈ ಪುಸ್ತಕಕ್ಕೆ ಸರ್ಕಾರದವರು ಸರಿಯಾದ ಪ್ರೋತ್ಸಾಹವನ್ನು ಕೊಡಬೇಕೆಂದು ನಾವು ಕೋರುತ್ತೇವೆ.

Foot note:—ಈ ಪುಸ್ತಕವು ಗ್ರಂಥಕರ್ತರಲ್ಲಿ ದೊರೆಯುವುದು. ಇದರ ಕ್ರಯ. ಪ್ರತಿ ಒಂದಕ್ಕೆ 10 ಆಣೆ.

ಶ್ರೀಕೃಷ್ಣಬ್ರಾಂಡ್ ಶಾಯಿ ಡಿಪೋ !

ಪ್ರೊಟ್ಟಿಂಗ್ಸ್ ೧ ದುಡ್ಡು] ಹೆಸರುಗೊಂಡ ಮಸಿ ! [೧ ಪುಡಿಗೆ ೩ ಪೈ

ಹಿಂದೂಸ್ಥಾನದಲ್ಲಿ ಎಲ್ಲಾ ಕಡೆಯಲ್ಲಿಯೂ ಪ್ರಸಿದ್ಧಿಗೊಂಡಿರುವ ಉತ್ಕೃಷ್ಟವಾದ ನಮ್ಮ ನೀಲಿ, ಕಪ್ಪು, ಕೆಂಪು, ಜಾಂಬಳಿ, ಹಸರು, ಶಾಯಿ ಪುಡಿಯ ಪೊಟ್ಣಗಳನ್ನು ೪ ಆಣೆಗೆ ಕರಿಸಿಕೊಳ್ಳುವರಿಗೆ ೧೦೦ ದೊಡ್ಡ ಸೈಜಿನ ಫ್ಯಾನ್ಸಿ ಪೋಸ್ಟ್‌ಕಾರ್ಡುಗಳನ್ನು, ೬ ಪ್ಯಾಕೆಟಿನ ಮೇಲೆ ತಾಂಬೂಲದ ಜೊತೆಗೆ ಹಾಕಿಕೊಳ್ಳುವ ತಾಂಬೂಲ ವಿಹಾರ ಡಬ್ಬಿ ೧. ಅಥವ H. B. ಪೆನಸಿಲ್ ಕರ್ಡ ೧. ೮ ಆಣೆ ಮೇಲೆ ೧೦೦ ಫ್ಯಾನ್ಸಿ ಕವರುಗಳು ಅಥವ ಗಂಧದ ಚದುರಂಗಿದ ಜೊತೆ, ೧೨ ಆಣೆಮೇಲೆ ಫೌಂಟನ್‌ಪೆನ್ನು (ಒಂದುಸಲ ಶಾಯಿ ತುಂಬಿದರೆ ೩೦,೦೦೦ ಶಬ್ದಗಳನ್ನು ಬರೆಯಬಹುದು.) ೧ ರೂಪಾಯಿಮೇಲೆ ಶ್ರೀಗಂಧದ ಗಿಳಿಯ ಆಕಾರದ ಬೀಸಣಿಗೆ ೧. ೨ ರೂಪಾಯಿಮೇಲೆ ಯಾವಾಗಲೂ ಜೇಬಿನಲ್ಲಿಯೇ ಇರಿಸಿಕೊಳ್ಳತಕ್ಕ ಛಾಪಾಖಾನೆ (ಬೇಕಾದಷ್ಟು ವಿಷಯಗಳನ್ನು ಛಾಪಿಸಿಕೊಳ್ಳಬಹುದು.) ೨ ರೂ. ೧೨ ಆಣೆ ಮೇಲೆ ಒಂದು ಆಫೀಸ್ ಟೈಂಪೀಸ್ ಗಡಿಯಾರ, ೩ ರೂ. ಮೇಲೆ ಸ್ವರಾಜ್ಯದಲ್ಲಿ ಮನೋವೇಧಕ ಪ್ರೆಸ್ಸಿನಲ್ಲಿ ಅಚ್ಚಾದ ೧೨೪ ನಂಬರವಾದ ಚಿತ್ರಪಟಗಳು, ೬ ರೂ. ಮೇಲೆ ಕರಿಸಿದರೆ ಸುಂದರವಾಗಿಯೂ ಮತ್ತು ಬಹಳ ದಿವಸಗಳು ಬಾಳಿಕೆ ಬರುವುದಾಗಿರುವ ಒಂದು ಡಾಸ್ಫ್ರೇಪ್ ಸಿಸ್ಟಂ ಲಿವರ್ ವಾಚನ್ನು ಈ ಮೇರಿಗೆ ಬಹುಮಾನವಾಗಿ ಕೊಡಲ್ಪಡುತ್ತ. ಟಪಾಲು ಖರ್ಚು ಬೇರೆ.

ಚೊಕ್ಕಬೆಳ್ಳಿಯ ಷರ್ಟಿನ ಗುಂಡಿಗಳು

ನಮ್ಮ ೧೨ ಆಣೆಯ ಶಾಯಿಗ್ರಾಹಕರಿಗೆ ಉತ್ತಮವಾದ ೬ ಗುಂಡಿಗಳು ಪುಕಟ!

ಹಿಂಗು ! ಹಿಂಗು !! ಹಿಂಗು !!!

ವಿಷ ರಹಿತವಾಗಿ ಶುದ್ಧ ನಿರ್ದೋಷಿಯಾಗಿ ಸುಗಂಧಪೂರ್ಣವಾದ್ದು. ಗ್ರಾಹಕರಿಗೆ ಅನುಕೂಲವಾಗುವಂತೆ ೬ ತೊಲೆಯ ಡಬ್ಬಿ ೧ಕ್ಕೆ ಕ್ರಯ ೮ ಆಣೆ ಇಟ್ಟಿರುವೆವು. ಬುಟ್ಟಿಗೆ ೧೮ ತೊಲೆಯ ಡಬ್ಬಿ ಕೊಳ್ಳುವರಿಗೆ ೧—೪—೦ ಮಾತ್ರ.

ಲಾವಣ್ಯ:—ತದ್ದು, ಇಸಬು, ಖಜ್ಜಿ, ಮೊದಲಾದ ಎಲ್ಲ ತರದ ಚರ್ಮರೋಗಗಳಿಗೆ ಅನುಭವಸಿದ್ಧ ಮುಲಾಮು ಡಬ್ಬಿಗೆ ರೂ. 0—5—0 !

ದೇಶೀಯ ವನಸ್ಪತಿಯ ಅದ್ಭುತ ಚಮತ್ಕಾರ ! } **ದಂತರಕ್ಷಕ !** { ಡಬ್ಬಿಗೆ ಆಣೆ ನಾಲ್ಕು ! ಅನುಭವ ನೋಡಿರಿ !!

ಹಲ್ಲುಗಳಿಗೆ ಹುಳು ಹಿಡಿಯುವುದು, ವಸಡುಗಳು ಬೀಗುವುದು, ವಸಡುಗಳಿಂದ ರಕ್ತ ಸೋರುವುದು, ಮೊದಲಾದ ಹಲ್ಲುಬೇನೆಗಳು ತೀವ್ರವಾಗಿ ಗುಣ !

ಪುಕಟ! ಪ್ರಸಿದ್ಧ ದೇಶಭಕ್ತರ ಫೋಟೋಗಳು !!! ಪುಕಟ !!

ಬಹುಮಾನ ಮೆಸ್ವಿನ್, ನವರೋಜಿ, ಗ್ಲಾಡ್‌ಸ್ಟನ್, ಪಾಲ, ಟಿಳಕ, ಬೆಸೆಂಟ, ಮೋತಿ, ಲಜಪತರಾಯ ಮೊದಲಾದವರ 'ಫೋಟೋ ಎನ್‌ಗ್ರೇವಿಂಗ್' ನೂತನಚಿತ್ರಗಳು ರೂ. ೪, ೨, ೧ ಬೆಲೆಯ ಶಾಯಿಯ ಗ್ರಾಹಕರಿಗೆ ೧೨೪, ೬೦, ೨೪ ರಂತೆ ಪುಕಟ !!

ಚಿತ್ರಕಾರರ ಉತ್ತಮ ಅಭಿಪ್ರಾಯವಿದೆ. ಹೆಚ್ಚಿನ ಮಾಹಿತಿ ವಗ್ಗೈರೆ ತಿಳಿಯಲಪೇಕ್ಷಿಸುವವರು ೧ ಆಣೆಯ ಸ್ಟ್ಯಾಂಪು ರವಾನಿಸಿದರೆ ಮಾದರಿ ಎಲ್ಲಾ ತರದ ಶಾಯಿಯೂ ದೊಡ್ಡ ಕ್ಯಾಟಲಾಗೂ ಪುಕಟ ರವಾನಿಸಲ್ಪಡುವುದು.

ಗಣಪತಿ ನಾಗಪ್ಪ—ತಾರೀಬಾಗಿಲ್ ಪೋ. ಹೊನ್ನಾವರ, ಜಿಲ್ಲಾ ಕಾನಡಾ.

ಒಳ್ಳೇಸಮಯ! ಅವಶ್ಯಕ ಓದಿನೋಡಿರಿ. ಬಿಟ್ಟರೆ ಸಿಕ್ಕಲಾರದು!

ಸ್ಕೂಲ್ ವಿದ್ಯಾರ್ಥಿಗಳಿಗೂ ಮತ್ತು ಇತರರಿಗೂ ಒಳ್ಳೇ ಸಮಯ.

ನಿಕಲ್ ಸಿಲ್ವರ್, ರಾಸ್‌ಕೋಫ್ ಸಿಸ್ಟಂ ಲಿವರ್ ವಾಚು ಬಹು ಮಜಬೂತಾಗಿ ದ್ದು, ಓಪನ್‌ಫೇಸ್, ಕೀಲೆಸ್ ಕಾಂಪನ್ಸೇಟೆಡ್ ಬ್ಯಾಲೆನ್ಸ್, ವಿವಾದಿಯಂ ನೈಜ ಘಡಿ ಯಾರಿಗೂ ನಮ್ಮಲ್ಲಿ ರೂ. ೩—೧೪—೦ ಗೆ ಸಿಕ್ಕುತ್ತದೆ.



ಆಗಸ್ಟು ತಿಂಗಳೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಪ್ರತಿಯೊಂದು ವಾಚಿನ ಸಂಗಡ ಮುಫತ್ತಿನಿಂದ ಘಡಿಯಾರದ ಪೆಟ್ಟಿಗೆ, ಸ್ಪ್ರಿಂಗು, ಕನ್ನಡಿ, ಸುಂದರವಾದ ನಿಕಲ್ ಸಿಲ್ವರ್ ಘಡಿಯಾರದ ಸರಪಣಿಯೂ ಇವುಗಳಲ್ಲದೆ, ಮುಂಗಡವಾಗಿ ಹಣವನ್ನು ಕಳುಹಿಸತಕ್ಕವರಿಗೆ ಇದರ ಕೆಳಗೆ ಕಂಡ ಪುಸ್ತಕಗಳಲ್ಲಿ ಯಾವುದಾದರೂ ಎರಡು ಪುಸ್ತಕಗಳನ್ನು ಕಳುಹಿಸುವೆವು.

ಆರೋಗ್ಯಶಾಸ್ತ್ರ. ನರಳಾರೋಗ್ಯ. ಹೊಸ ಪದ್ಯಸಾರ. ಛಂದೋಮಾಲಿಕೆ. ಶಬ್ದಾದರ್ಶ. ಚರಿತ್ರಸಂಗ್ರಹ (ಮಾಸಿಕಪತ್ರ). ಭೂಗೋಳ (ಟಿ. ಎಮ್. ಆರ್.). ಜಯಮಾನಿ. ಮ॥ ರಾ॥ ಬಿ. ವೆಂಕಟಾಚಾರ್ಯರಿಂದ ರಚಿಸಲ್ಪಟ್ಟ ಪುಸ್ತಕಗಳ ಪೈಕಿ ಯಾವುದಾದರೂ ಒಂದನ್ನು ಕಳುಹಿಸುವೆವು. ಪರಿಮಳ. ರಜನಿ. ಭ್ರಾಂತಿವಿಲಾಸ. ಲೋಕರಹಸ್ಯ. ವೈಜ್ಞಾನಿಕಪ್ರಹಸನ ರಮಾಬಾಯಿ ಅಹಲ್ಯಾಬಾಯಿ. ಕಪಾಲಕುಂಡಲ. ಅಪವಿದುಮಗ. ಸೊಸೆ ಸುಜಯ. ಪ್ರಿಯಭಾರ್ಯೆ. ಸೀತಾಸ್ವಯಂವರ. ಶ್ರೀ ಕೃಷ್ಣಬೋಧಾಮೃತ (೧೬ ಜನ ರಾಜಪುತ್ರರ ಕಥೆ ಸಚಿತ್ರಗಳೊಡನೆ). ಟಪ್ಪಾಲು ೯. ೧೮. ೯ರೆ. ಎರಡು ಘಡಿಯಾರವನ್ನು ಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ. ವ್ಯಾಪಾರಸ್ಥರಿಗೆ ಸೂಕ್ತ ಕಮೀಷನಿಂದ ದೊರೆಯುತ್ತದೆ. ಅರ್ಧಾಣೆ ಸ್ಟಾಂಪು ಹಚ್ಚಿ ವಿಷಯಗಳನ್ನು ತಿಳಿಯಬಹುದು.

ಎಂ. ಎಸ್. ಕೆ. ಮೂರ್ತಿರಾವ್.

ಕೋರ್ಟ್ ಹಾಲ್, ಮೈಸೂರು.

ಹೊಸದಾಗಿ ಸುಧಾರಿಸಲ್ಪಟ್ಟ ದಿವ್ಯ ಶಾಯಿ.

ಶಾಯಿ ಕೆಟ್ಟದ್ದಾದರೆ ಹಣವನ್ನು ಹಿಂದಿರಿಗಿ ಕೊಡುವೆವು.

3—10—0 ಕ್ಕೆ ಹೆಕ್ಟೊ "ಬಿ" ಸಿಸ್ಟಮ್ ಪಾಕೆಟ್ ಟೈಂಪೀಸು, ಹಾಗೂ 300 ದಿವ್ಯ ಶಾಯಿ ಪಟ್ಟಿಗಳು ಸಿಗುವವು ಟಪಾಲು ಖರ್ಚು ಮಾಫೀ.

6—10—0 ಕ್ಕೆ ಮಜಬೂತ ಸಿಸ್ಟಮ್ ರಾಸ್ಕೋಪ್ ವಾಚ ಹಾಗೂ 500 ದಿವ್ಯ ಶಾಯಿ ಪಟ್ಟಿಗಳು ಸರಪಳಿ ಹೋಕಾಯಂತ್ರ ಸ್ಪ್ರಿಂಗ, ಕನ್ನಡಿ, ಪೆಟ್ಟಿಗೆ ಸಹವಾಗಿ ಸಿಗುವವು. ಟಪಾಲು ಖರ್ಚು ಮಾಫೀ.

1—10—0 ಕ್ಕೆ ದಿವ್ಯ ಶಾಯಿ ಪಟ್ಟಿಗಳು 100, ಕಾರ್ಡುಗಳು 100, 1 ಸೂಕ್ಷ್ಮ ದರ್ಶಕ ಯಂತ್ರ, 1 ಹೋಕಾಯಂತ್ರ, 1 ಲೋಹಚುಂಬಕ, ಟಪಾಲು ಖರ್ಚು ಮಾಫೀ.

ರಘುನಾಥರಾವ ಮತ್ತು ಕಂಪನಿ ಹಿಪ್ಪರಗಿ, ಜಿ. ಬಿಜಾಪುರ.

Edited and published, by B. Subba Rao B.A. Manager,
Granthamala Office, Mysore.